ಪ್ರ ಸ್ತಾ ವ ನೆ

ಸಂಖ್ಯಾ ೪೯

ವಿ ಷ್ಣು ಪು ರಾ ಣ ಂ

(ಕನ್ನಡ ಅನುವಾದ ಸಹಿತ)

ಸಂ ಚಿಕೆ ೩

ಅನುವಾದಕ:

ಪಂಡಿತ, ಗಂಜಾಂ ತಿಮ್ಮಣ್ಣಯ್ಯ.

ಶ್ರೀ ವಿನಾಯಕ್ ಪ್ರಿಂಟಿಂಗ್ ವರ್ಕ್ಸ್,

ಮೈ ಸೂ ರು.

೧೯೪೮

ಪ್ರ ಸ್ತಾ ವ ನೆ

ಈ ವಿಷ್ಣುಪುರಾಣದಲ್ಲಿ ಶುದ್ಧ ಜ್ಞಾನ ಸ್ವರೂಪನಾದ ಪರಮಾತ್ಮನ ಸಂಕಲ್ಪ ರೂಪ ಕಾರ್ಯವಾದ ಸೃಷ್ಟಿ ಸ್ಥಿತಿ ಪ್ರಳಯಗಳನ್ನು ವಿವರಿಸುವುದರ ಮೂಲಕವಾಗಿ ಲೋಕಕ್ಕೆ ಆತ್ಮತತ್ವಸ್ವರೂಪವನ್ನು ಉಪದೇಶಮಾಡಿರುವುದು. ಈ ಪುರಾಣದ ಒಂದು ಎರಡನೆಯ ಭಾಗದಲ್ಲಿ ಕ್ರಮವಾಗಿ ಸೃಷ್ಟಿ ಸ್ಥಿತಿಗಳನ್ನೂ, ಮೂರನೆಯ ಭಾಗದಲ್ಲಿ 'ಬಹೂನಿಮೇವ್ಯತೀತಾನಿ ಜನ್ಮಾನಿತವಚಾರ್ಜುನ। ತಾನ್ಯಹಂವೇದ ಸರ್ವಾಣಿ ನತ್ವಂ ವೇತ್ಥಪರಂತಪ ॥' ಎಂಬ ಗೀತಾ ವಾಕ್ಯದಂತೆ ಸರ್ವಜ್ಞನಾದ ಕೃಷ್ಣರೂಪನಾದ ಪರಮಾತ್ಮನು ಧರ್ಮಸಂಸ್ಥಾಪನಾರ್ಥವಾಗಿ ಮಾಡಿದ ಭೂಭಾರ ನಾಶರೂಪವಾದ ಪ್ರಳಯ ಕಾರ್ಯವನ್ನು ವಿವರಿಸಿರುವುದು.

ಈ ಮೂರನೆಯ ಭಾಗದಲ್ಲಿರುವ ೫ ನೆಯ ಅಂಶದಲ್ಲಿ ಶ್ರೀ ಕೃಷ್ಣನು ಹಿಂದಿನ ಜನ್ಮದಲ್ಲಿ ರಾಕ್ಷಸರಾಗಿದ್ದು ಈಗ ಕ್ಷತ್ರಿಯರಾಗಿ ಹುಟ್ಟಿದ ದುಸ್ಟರನ್ನು ಶಿಕ್ಷಿಸಿದುದಲ್ಲದೆ ತಾನು ಹುಟ್ಟಿ ಪವಿತ್ರಮಾಡಿದ ಯದುವಂಶವನ್ನೇ ಉಪಸಂಹರಿಸಿದುದನ್ನು ಸಕಾರಣವಾಗಿ ವಿವರಿಸಿ ಕೊನೆಯಲ್ಲಿ ಭಕ್ತರಾದ ಜೀವರಿಗೆ ಪರಮಾತ್ಮ ಸಾಕ್ಷಾತ್ಕಾರ ರೂಪವಾದ ತತ್ವವನ್ನು ಉಪದೇಶಮಾಡಿರುವುದು. ಮತ್ತು ಕೃಷ್ಣಾವತಾರದ ಚರಿತ್ರೆಯನ್ನು ಬಾಲಲೀಲೆ ಮೊದಲಾಗಿ ಯಾದವವಂಶೋಪಸಂಹಾರಾಂತವಾಗಿ ಹೇಳಿರುವುದು. ಈ ಪುರಾಣವನ್ನನುಸರಿಸಿಯೇ ಭಾಗವತ ದಶದಮಸ್ಕಂಧದಲ್ಲಿ ಶ್ರೀಕೃಷ್ಣನ ಚರಿತ್ರೆಯು ಕಾವ್ಯಮಾರ್ಗವನ್ನನುಸರಿಸಿ ಮನೋಹರವಾದ ವರ್ಣನೆಗಳಿಂದ ಕೂಡಿ ವಿಸ್ತಾರವಾಗಿ ನಿರೂಪಿತವಾಗಿರುವುದು. ೬ ನೆಯ ಅಂಶದಲ್ಲಿ ಕಲಿಯುಗದಲ್ಲಿ ಮುಂದೆ ಬರುವ ರಾಜರ ವಿಷಯವೂ ಕಲಿಧರ್ಮನಿರೂಪಣೆಯೂ ನೈಮಿತ್ತಿಕ, ಪ್ರಾಕೃತಿಕ, ಆತ್ಯಂತಿಕವೆಂಬ ಮೂರು ಬಗೆಯ ಪ್ರಳಯ ಸ್ವರೂಪಗಳೂ, ಭಗವಂತನ ಸ್ವರೂಪವೂ, ಖಾಂಡಿಕ್ಯ, ಜನಕ ಸಂವಾದರೂಪವಾಗಿ ರಾಜಧರ್ಮವೂ, ಯೋಗಮಾರ್ಗೋಪದೇಶವೂ ಹೇಳಿರುವುದಲ್ಲದೆ ಕೊನೆಯಲ್ಲಿ ವಿಷ್ಣು ಪುರಾಣದ ಶ್ರವಣ ಪಾರಾಯಣಾದಿಗಳ ಫಲವೂ ಹೇಳಿರುವುದು.

ಇಂತಹ ಉತ್ತಮವಾದ ಮಹಾಪುರಾಣದ ಅಭಿಪ್ರಾಯವನ್ನು ಕನ್ನಡಿಗರು ತಿಳಿದು ಧರ್ಮಾಸಕ್ತರಾಗಿ ಸರ್ವ ಸಮಾನ ಭಾವದಿಂದ ವ್ಯವಹಾರದಲ್ಲಿ ಸುಖ ಸಂತೋಷಗಳನ್ನು ಅನುಭವಿಸುತ್ತ ನಿರಂತರವಾಗಿ ಶ್ರೇಯಸ್ಸಾಧನವಾದ ಕಾರ್ಯ ಗಳನ್ನು ಮಾಡುತ್ತಿರಲೆಂಬ ಅಭಿಪ್ರಾಯದಿಂದ ಪ್ರಜಾವತ್ಸಲರಾದ ನಮ್ಮನ್ನಾಳುವ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಬಿ.,ಜಿ.ಸಿ.ಎಸ್.ಐ. ಮಹಾಪ್ರಭುಗಳವರು ಕನ್ನಡ ಭಾಷಾನುವಾದದೊಡನೆ ಪ್ರಕಟಿಸಬೇಕೆಂದು ಅನುಜ್ಞೆ ಯನ್ನಿತ್ತು ಸಕಲ ಅನುಕೂಲಗಳನ್ನೂ ಕಲ್ಪಿಸಿದುದರಿಂದ ಆ ಮಹಾಪ್ರಭುಗಳವರಿಗೆ ಪರಮಾತ್ಮನು ಸಕಲ ಸನ್ಮಂಗಳಗಳನ್ನೂ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಮೈ ಸೂ ರು.
ಸರ್ವಧಾರಿ ಸಂವತ್ಸರದ ಕಾರ್ತೀಕ ಶುದ್ಧ
೩ ಗುರುವಾರ
ತಾ|| ೪—೧೧—೧೯೪೪.

ಅನುವಾದಕ :
ಪಂಡಿತ, ಗಂಜಾಂ ತಿಮ್ಮಣ್ಣಯ್ಯ.

ಶ್ರೀ ವಿಷ್ಣುಪುರಾಣದ ಪಂಚಮಾಂಶದ ವಿಷಯಾನುಕ್ರಮಣಿಕೆ

ಪುಟಗಳು

ಒಂದನೆಯ ಅಧ್ಯಾಯ. 1-22

ಶ್ರೀಕೃಷ್ಣಾವತಾರ ವಿಷಯವಾದ ಪ್ರಶ್ನೆ. ವಸುದೇವದೇವಕಿಯರ ವಿವಾಹೋತ್ಸವದಲ್ಲಿ ತನ್ನ ಮರಣಸೂಚಕವಾದ ಆಕಾಶವಾಣಿಯನ್ನು ಕೇಳಿದ ಕಂಸನು ದೇವಕಿಯನ್ನು ಕೊಲ್ಲಲು ಯತ್ನಿಸಿ ವಸುದೇವನ ಮಾತಿನಿಂದ ಸುಮ್ಮನಾಗುವುದು. ಇದೇ ಸಮಯದಲ್ಲಿ ಭೂದೇವಿಯು ತನಗುಂಟಾದ ಭಾರವನ್ನು ಬ್ರಹ್ಮನ ಸಭೆಯಲ್ಲಿ ಹೇಳಿಕೊಳ್ಳುವುದು. ಬ್ರಹ್ಮನು ದೇವತೆಗಳೊಡನೆ ಕ್ಷೀರ ಸಮುದ್ರಕ್ಕೆ ಹೋಗಿ ವಿಷ್ಣುವನ್ನು ಸ್ತೋತ್ರಮಾಡುವುದು. ಸರ್ವಾತ್ಮ ಸ್ವರೂಪವೂ, ಅದ್ವೈತತತ್ವಪ್ರತಿಪಾದಕವೂ ಆದ ವಿಷ್ಣುಸ್ತೋತ್ರ, ವಿಷ್ಣುವು ಕೃಷ್ಣಾವತಾರವನ್ನು ಮಾಡಿ ಕಾಲನೇಮಿಯಾದ ಕಂಸನನ್ನು ಕೊಲ್ಲುವೆನೆಂದು ಹೇಳಿ ಅನುಗ್ರಹ ಮಾಡುವುದು. ನಾರದನು ನಿನ್ನ ಮೃತ್ಯುವಿಗೆ ದೇವಕಿಯ ಎಂಟನೆಯ ಗರ್ಭವೇ ಕಾರಣವೆಂದು ಕಂಸನಿಗೆ ಹೇಳುವುದು. ಇದರಿಂದ ಕಂಸನು ವಸುದೇವ ದೇವಕಿಯರನ್ನು ಸೆರೆಯಲ್ಲಿಟ್ಟು ಅವರ ಮಕ್ಕಳನ್ನು ಕೊಲ್ಲುತ್ತಿರುವುದು. ದೇವಕಿಯ ಆರು ಮಕ್ಕಳು ಯೋಗನಿದ್ರಾರೂಪವಾದ ಮಾಯೆಯಿಂದ ದೇವಕಿಯ ಗರ್ಭವನ್ನು ಸೇರಿದ ಕಾಲನೇಮಿಯ ಮಕ್ಕಳು, ಹಿರಣ್ಯಕಶಿಪುವಿನ ಶಾಪದಿಂದ ಕಾಲನೇಮಿಯಾದ ಕಂಸನೇ ಅವರನ್ನು ಕೊಲ್ಲುವನು. ಯೋಗಮಾಯೆಯು ದೇವಕಿಯ ಏಳನೆಯ ಗರ್ಭವನ್ನಾಕರ್ಷಿಸಿ ರೋಹಿಣಿಯ ಗರ್ಭಕ್ಕೆ ಸೇರಿಸುವುದು. ಎಂಟನೆಯ ಗರ್ಭದಲ್ಲಿ ವಿಷ್ಣುವು ಅವತಾರ ಮಾಡುವುದು, ಯೋಗಮಾಯೆಯು ಯಶೋದೆಯ ಗರ್ಭದಲ್ಲಿ ಸೇರುವುದು. ಕೃಷ್ಣಾವತಾರ, ಯೋಗಮಾಯೆಯ ಮಹಿಮೆ, ಇವುಗಳನ್ನು ಹೇಳಿ ವಿಷ್ಣುವು ಯೋಗಮಾಯೆಯನ್ನು ಕಳುಹಿಸಿಕೊಡುವುದು.

ಎರಡನೆಯ ಅಧ್ಯಾಯ. 23–27

ವಿಷ್ಣುವನ್ನು ಗರ್ಭದಲ್ಲಿ ಧರಿಸಿದ ದೇವಕಿಯನ್ನು ದೇವತೆಗಳು ಹೊಗಳುವುದು.

ಮೂರನೆಯ ಅಧ್ಯಾಯ. 28–34

ಕೃಷ್ಣಾವತಾರಕಾಲದಲ್ಲಿ ಪ್ರಪಂಚದ ಸ್ಥಿತಿ, ಕೃಷ್ಣನ ದಿವ್ಯ ರೂಪವನ್ನು ನೋಡಿ ವಸುದೇವದೇವಕಿಯರು ಸ್ತೋತ್ರ ಮಾಡುವುದು, ಕೃಷ್ಣನು ಅವರಿಗೆ ಉತ್ತರವನ್ನು ಹೇಳುವುದು, ವಸುದೇವನು ಕೃಷ್ಣನನ್ನು ಯಶೋದೆಯ ಹಾಸಿಗೆಯಲ್ಲಿ ಮಲಗಿಸಿ ಯೋಗಮಾಯೆಯನ್ನು ತರುವುದು, ಕಂಸನು ಬಂದು ಯೋಗಮಾಯೆಯನ್ನು ಕಲ್ಲಿನ ಮೇಲೆ ಬಡಿದ ಕ್ಷಣವೇ ಅವಳು ಅಷ್ಟಭುಜಾದೇವಿಯಾಗಿ ದಿವ್ಯರೂಪದಿಂದ ಆಕಾಶಕ್ಕೆ ಹಾರಿ ನಿನ್ನನ್ನು ಕೊಲ್ಲುವುದಕ್ಕಾಗಿ ದೇವನು ಅವತಾರ ಮಾಡಿರುವನೆಂದು ಹೇಳಿ ಹೊರಟು ಹೋಗುವುದು.

ನಾಲ್ಕನೆಯ ಅಧ್ಯಾಯ. 35–38

ಕಂಸನಭಯ, ದೇವತೆಗಳಿಗೆ ಅಪಕಾರ ಮಾಡುವುದಕ್ಕಾಗಿ ಯಜ್ಞಗಳನ್ನು ನಾಶಮಾಡಬೇಕೆಂದೂ ಬಾಲಕರನ್ನೂ ಕೊಲ್ಲಬೇಕೆಂದೂ ರಾಕ್ಷಸರಾದ ತನ್ನ ಸೇವಕರಿಗೆ ಆಜ್ಞೆಮಾಡುವುದು, ವಸುದೇವ ದೇವಕಿಯರನ್ನು ಸೆರೆಯಿಂದ ಬಿಡಿಸುವುದು.

ಐದನೆಯ ಅಧ್ಯಾಯ. 39–44

ವಸುದೇವನು ಬಾಲಕನ ರಕ್ಷಣೆಗಾಗಿ ನಂದನಿಗೆ ಎಚ್ಚರಿಕೆಯನ್ನು ಹೇಳುವುದು, ಪೂತನೆಯ ಸಂಹಾರ, ನಂದನು ಕೃಷ್ಣನಿಗೆ ವಿಷ್ಣು ಸ್ತೋತ್ರದಿಂದ ರಕ್ಷೆಯನ್ನಿಡುವುದು.

ಆರನೆಯ ಅಧ್ಯಾಯ. 45–55

ಶಕಟಭಂಜನ, ಯಮಳಾರ್ಜುನ ಭಂಗ, ಬೃಂದಾವನ ಗಮನ, ಬಾಲ ಕೇಳಿ, ವರ್ಷಾಕಾಲ ವರ್ಣನೆ.

ಏಳನೆಯ ಅಧ್ಯಾಯ. 56–73

ಕಾಳಿಯ ನಿಗ್ರಹ, ಕಾಳಿಯನ ವಿಷ್ಣು ಸ್ತೋತ್ರ, ಯಮುನೆಯ ಶುದ್ಧಿ.

ಎಂಟನೆಯ ಅಧ್ಯಾಯ. 74–77

ತಾಳವನ ಪ್ರವೇಶ, ಧೇನುಕಾಸುರ ಸಂಹಾರ.

ಒಂಭತ್ತನೆಯ ಅಧ್ಯಾಯ. 78–86

ಪ್ರಲಂಬನ ವಧೆ.

ಹತ್ತನೆಯ ಅಧ್ಯಾಯ. 87–97

ಶರದ್ರುತುವರ್ಣನೆ, ದೇವೇಂದ್ರನ ಪೂಜೆಯನ್ನು ನಿಲ್ಲಿಸಿ ಗೋವರ್ಧನ ಪರ್ವತವನ್ನು ಪೂಜಿಸುವುದು.

ಹನ್ನೊಂದನೆಯ ಅಧ್ಯಾಯ. 98–103

ದೇವೇಂದ್ರನು ಕೋಪದಿಂದ ಮಳೆಯನ್ನು ಸುರಿಸುವುದು, ಕೃಷ್ಣನು ಗೋವರ್ಧನ ಪರ್ವತವನ್ನೆತ್ತಿ ಗೊಲ್ಲರನ್ನೂ ಗೋವುಗಳನ್ನೂ ರಕ್ಷಿಸುವುದು.

ಹನ್ನೆರಡನೆಯ ಅಧ್ಯಾಯ. 104–109

ದೇವೇಂದ್ರನು ಕೃಷ್ಣನಿಗೆ ಉಪೇಂದ್ರನೆಂಬ ಹೆಸರಿನಿಂದ ಪಟ್ಟಾಭಿಷೇಕ ಮಾಡಿ ವರವನ್ನು ಬೇಡುವುದು, ಕೃಷ್ಣನ ವರಪ್ರದಾನ.

ಹದಿಮೂರನೆಯ ಅಧ್ಯಾಯ. 110–122

ಗೊಲ್ಲರು ಕೃಷ್ಣನನ್ನು ಹೊಗಳುವುದು, ಗೋಪಿಯರೊಡನೆ ರಾಸಕ್ರೀಡೆಯ ವರ್ಣನೆ.

ಹದಿನಾಲ್ಕನೆಯ ಅಧ್ಯಾಯ. 123–126

ಅರಿಷ್ಟನೆಂಬ ಎತ್ತಿನ ಆಕಾರದ ರಾಕ್ಷಸನ ವಧೆ.

ಹದಿನೈದನೆಯ ಅಧ್ಯಾಯ. 127–132

ಕೃಷ್ಣಬಲರಾಮರು ವಿಷ್ಣುವಿನ ಅವತಾರವೆಂದು ಕಂಸನು ನಾರದನಿಂದ ತಿಳಿದು ಅವರನ್ನು ಕೊಲ್ಲುವ ಆಲೋಚನೆಯನ್ನು ಮಾಡುವುದು. ಕಂಸನು ಮಲ್ಲಯುದ್ಧಕ್ಕಾಗಿ ರಾಮಕೃಷ್ಣರನ್ನು ಕರೆದು ತರಲು ಅಕ್ರೂರನನ್ನು ಕಳುಹಿಸುವುದು, ಅಕ್ರೂರನ ಪ್ರಯಾಣ.

ಹದಿನಾರನೆಯ ಅಧ್ಯಾಯ. 133–138

ಕಂಸನ ದೂತನ ಪ್ರೇರಣೆಯಿಂದ ಕೇಶಿಯೆಂಬ ಕುದುರೆಯ ಆಕಾರದ ದಾನವನು ಬೃಂದಾವನಕ್ಕೆ ಬಂದು ಗೊಲ್ಲರನ್ನು ಭಯಪಡಿಸುವುದು, ಕೃಷ್ಣನು ಆ ದಾನವನನ್ನು ಕೊಲ್ಲುವುದು, ನಾರದನು ಕೃಷ್ಣನನ್ನು ಹೊಗಳಿ ಮುಂದಿನ ಕಾರ್ಯವನ್ನು ಸೂಚಿಸುವುದು.

ಹದಿನೇಳನೆಯ ಅಧ್ಯಾಯ. 139–147

ಅಕ್ರೂರನು ದಾರಿಯಲ್ಲಿ ಹೋಗುತ್ತ ಪರಮಾತ್ಮನ ಅವತಾರವಾದ ರಾಮಕೃಷ್ಣರನ್ನು ಧ್ಯಾನಿಸುತ್ತ ಹೋಗಿ ಗೋಕುಲದಲ್ಲಿ ಅವರ ದರ್ಶನವನ್ನು ಮಾಡಿ ಸ್ತೋತ್ರ ಮಾಡುವುದು.

ಹದಿನೆಂಟನೆಯ ಅಧ್ಯಾಯ. 148–160

ಅಕ್ರೂರನು ಕೃಷ್ಣಬಲರಾಮರಿಗೆ ತಾನು ಬಂದ ಕಾರಣವನ್ನು ಹೇಳಿ ಕಂಸನ ದುರಾಲೋಚನೆಯನ್ನು ಪ್ರಕಟಪಡಿಸುವುದು, ಮೂರು ದಿನದೊಳಗಾಗಿ ಕಂಸನನ್ನು ಕೊಲ್ಲುವೆನೆಂದು ಕೃಷ್ಣನ ಪ್ರತಿಜ್ಞೆ, ಕೃಷ್ಣಬಲರಾಮರು ಅಕ್ರೂರನೊಡನೆ ಮಥುರಾ ಪಟ್ಟಣಕ್ಕೆ ಪ್ರಯಾಣ ಮಾಡುವುದು. ಬೃಂದಾವನದ ಗೊಲ್ಲಿತಿಯರ ಕೃಷ್ಣನ ಸಂಬಂಧವಾದ ವಿರಹ ವ್ಯಥೆಯ ವರ್ಣನೆ, ದಾರಿಯಲ್ಲಿ ಅಕ್ರೂರನ ಮಾಧ್ಯಾಹ್ನಿಕಾನುಷ್ಠಾನ ಸಮಯದಲ್ಲಿ ಯಮುನೆಯ ನೀರಿನಲ್ಲಿ ಅವನ ಧ್ಯಾನ ಕ್ರಮ, ಅಕ್ರೂರನ ಪರಮಾತ್ಮಸ್ತುತಿ.

ಹತ್ತೊಂಬತ್ತನೆಯ ಅಧ್ಯಾಯ 161–167

ಅಕ್ರೂರನ ಮಾನಸ ಪೂಜೆ, ಕೃಷ್ಣನ ಮತ್ತು ಅಕ್ರೂರ ಇವರ ಸಂಭಾಷಣೆ, ರಾಮಕೃಷ್ಣರು ಮಥುರಾಪಟ್ಟಣದ ಬೀದಿಯಲ್ಲಿ ನಡೆದು ಬರುತ್ತ ಕಂಸನ ಅಗಸನನ್ನು ಕೊಲ್ಲುವುದು, ಹೂವಾಡಿಗ ನಿಗೆ ಅನುಗ್ರಹಿಸುವುದು.

ಇಪ್ಪತ್ತನೆಯ ಅಧ್ಯಾಯ. 168–189

ರಾಮಕೃಷ್ಣರು ಕುಬ್ಜೆಯು ತರುತ್ತಿದ್ದ ಗಂಧವನ್ನು ಅವಳಿಂದ ತೆಗೆದುಕೊಂಡು ತಮ್ಮ ಮೈಗೆ ಅಲಂಕರಿಸಿಕೊಳ್ಳುವುದು. ಕುಬ್ಜೆಯ ಪ್ರಾರ್ಥನೆ, ಕೃಷ್ಣನು ಆಯುಧ ಶಾಲೆಯಲ್ಲಿ ಪೂಜೆ ಗಾಗಿ ಇಟ್ಟಿದ್ದ ಧನಸ್ಸನ್ನು ಮುರಿಯುವುದು, ಕಾವಲು ಸೇನೆ ಯನ್ನು ಕೊಂದು ಮಲ್ಲರಂಗದ ಬಾಗಿಲಿನಲ್ಲಿ ಕುವಲಯಾ ಪೀಡವೆಂಬ ಆನೆಯನ್ನು ಕೊಲ್ಲುವುದು, ಪಟ್ಟಣಿಗರು ರಾಮ ಕೃಷ್ಣರನ್ನು ವರ್ಣಿಸುವುದು, ಕೃಷ್ಣಬಲರಾಮರು ಚಾಣೂರ ಮುಷ್ಟಿಕರೊಡನೆ ಯುದ್ಧಮಾಡಿ ಅವರನ್ನು ಕೊಲ್ಲುವುದು, ಕಂಸನ ಕೋಪ, ಅವನ ಸಂಹಾರ. ವಸುದೇವನು ಪರಮಾತ್ಮ ನನ್ನು ಸ್ತೋತ್ರ ಮಾಡುವುದು.

ಇಪ್ಪತ್ತೊಂದನೆಯ ಅಧ್ಯಾಯ. 190–197

ರಾಮಕೃಷ್ಣರು ತಾಯಿ ತಂದೆಗಳನ್ನು ಪೂಜಿಸುವುದರ ಮಹಿಮೆ ಯನ್ನು ವಿವರಿಸಿ ವಸುದೇವ ದೇವಕಿಯರನ್ನು ಪೂಜಿಸುವುದು, ಉಗ್ರಸೇನನ ಪಟ್ಟಾಭಿಷೇಕ, ದೇವೇಂದ್ರನ ಸುಧರ್ಮೆಯೆಂಬ ಸಭೆಯನ್ನು ತರಿಸುವುದು, ಸಾಂದೀಪನಲ್ಲಿ ರಾಮಕೃಷ್ಣರ ವಿದ್ಯಾ ಭ್ಯಾಸ, ಗುರುದಕ್ಷಿಣೆಗಾಗಿ ಮರಣ ಹೊಂದಿದ್ದ ಸಾಂದೀಪನ ಮಗನನ್ನು ಯಮನ ಪಟ್ಟಣದಿಂದ ತಂದುಕೊಡುವುದು.

ಇಪ್ಪತ್ತೆರಡನೆಯ ಅಧ್ಯಾಯ. 198–202

ಕಂಸನ ಮಾವನಾದ ಜರಾಸಂಧನು ಕೃಷ್ಣನನ್ನು ಕೊಲ್ಲುವುದ ಕ್ಕಾಗಿ ಮಥುರಾಪಟ್ಟಣವನ್ನು ಮುತ್ತಿದುದು, ಕೃಷ್ಣಬಲರಾಮರು ತಮ್ಮ ದಿವ್ಯಾಯುಧಗಳನ್ನು ಧರಿಸಿ ಅವನನ್ನು ಸೋಲಿಸುದುದು, ಜರಾಸಂಧನು ೧೮ ಬಾರಿ ಕೃಷ್ಣನಿಗೆ ಸೋತು ಹೋದುದು.

ಇಪ್ಪತ್ತನೂರನೆಯ ಅಧ್ಯಾಯ. 203–213

ಯಾದವರ ಪುರೋಹಿತನಾದ ಗಾರ್ಗ್ಯನು ಯಾದವರಿಗೆ ಭಯವನ್ನುಂಟುಮಾಡುವ ಕಾಲಯವನನೆಂಬ ಪುತ್ರನನ್ನು ಪಡೆದುದು, ಕಾಲಯವನನು ಯಾದವರ ಮೇಲೆ ಯುದ್ಧಕ್ಕೆ ಬಂದುದು, ಕೃಷ್ಣನು ದ್ವಾರಕಾಪಟ್ಟಣವನ್ನು ನಿರ್ಮಿಸಿದುದು, ಕಾಲಯವನನು ನಾರದರ ಮಾತಿನಿಂದ ಕೃಷ್ಣನನ್ನು ಓಡಿಸಿಕೊಂಡು ಹೋದುದು, ಕೃಷ್ಣನು ಮುಚುಕುಂದನ ಗುಹೆಯನ್ನು ಪ್ರವೇಶಿಸಿ ಅವನ ದೃಷ್ಟಿಯಿಂದ ಕಾಲಯವನನ್ನು ನಾಶಮಾಡಿಸಿದುದು, ಮುಚುಕುಂದನ ವೃತ್ತಾಂತ, ಮುಚುಕುಂದನು ಕೃಷ್ಣನನ್ನು ಸ್ತೋತ್ರ ಮಾಡಿದುದು.

ಇಪ್ಪತ್ತನಾಲ್ಕನೆಯ ಅಧ್ಯಾಯ. 214–218

ಮುಚುಕುಂದನು ನರನಾರಾಯಣಾಶ್ರಮಕ್ಕೆ ಹೋದಮೇಲೆ ಕೃಷ್ಣನು ಮಧುರಾಪಟ್ಟಣಕ್ಕೆ ಬಂದು ಕಾಲಯವನನ ಸೇನೆಯನ್ನು ಉಗ್ರಸೇನನಿಗೆ ಕೊಟ್ಟುದು, ಬಲರಾಮನು ನಂದಗೋಕುಲಕ್ಕೆ ಹೋಗಿ ಗೋಪ ಗೋಪಿಯರೊಡನೆ ವಿನೋದದಿಂದಿದ್ದುದು.

ಇಪ್ಪತ್ತೈದನೆಯ ಅಧ್ಯಾಯ 219–223

ಬಲರಾಮನ ಮದಿರಾಸೇವನೆ, ಯಮುನಾಕರ್ಷಣ, ಬಲರಾಮನಿಗೆ ಲಕ್ಷ್ಮೀದೇವಿಯು ಆಭರಣ ವಸ್ತ್ರಾದಿಗಳನ್ನು ಕೊಟ್ಟುದು, ರೇವತೀ ವಿವಾಹ.

ಇಪ್ಪತ್ತಾರನೆಯ ಅಧ್ಯಾಯ 224–226

ಕೃಷ್ಣನು ರುಕ್ಮಿಣಿಯನ್ನು ಪಹರಿಸಿದುದು, ರುಕ್ಮಿಯ ಸೋಲು, ಕೃಷ್ಣ ರುಕ್ಮಿಣಿಯರ ವಿವಾಹ, ಪ್ರದ್ಯುಮ್ನನ ಜನನ.

ಇಪ್ಪತ್ತೇಳನೆಯ ಅಧ್ಯಾಯ 227–233

ಶಂಬರನು ಬಾಲಕನಾದ ಪ್ರದ್ಯುಮ್ನನನ್ನು ಪಹರಿಸುವುದು, ಅವನು ಶಂಬರನ ಪತ್ನಿಯಾದ ಮಾಯಾವತಿಗೆ ಸಿಕ್ಕಿ ಅವನ ಮನೆಯಲ್ಲಿಯೇ ಬೆಳೆದು ಮಾಯಾವತಿಯಿಂದ ಸಮಸ್ತ ಮಾಯೆ

ಗಳನ್ನೂ ಕಲಿತು ಶಂಬರನನ್ನು ಕೊಲ್ಲುವುದು. ಮಾಯಾವತಿಯೊಡನೆ ಪ್ರದ್ಯುಮ್ನನು ದ್ವಾರಕಿಗೆ ಬರುವುದು. ನಾರದನು ಮಾಯಾವತಿಯ ಮತ್ತು ಪ್ರದ್ಯುಮ್ನನ ವೃತ್ತಾಂತವನ್ನು ರುಕ್ಮಿಣಿಗೆ ತಿಳಿಸುವುದು.

ಇಪ್ಪತ್ತೆಂಟನೆಯ ಅಧ್ಯಾಯ 234–239

ಪ್ರದ್ಯುಮ್ನನಿಗೆ ರುಕ್ಮಿಯ ಪುತ್ರಿಯೊಡನೆ ವಿವಾಹ, ಅನಿರುದ್ಧನ ಜನನ, ಅನಿರುದ್ಧನಿಗೂ ರುಕ್ಮಿಯ ಮೊಮ್ಮಗಳಿಗೂ ವಿವಾಹ. ಈ ವಿವಾಹವಾದ ಮೇಲೆ ರುಕ್ಮಿಯ ರಾಜಧಾನಿಯಲ್ಲಿ ಬಲರಾಮ ರುಕ್ಮಿಗಳು ಜೂಜಾಡುವುದು. ಈ ಜೂಜಿನಲ್ಲಿ ಮಾಡಿದ ಅನ್ಯಾಯದಿಂದ ಇಬ್ಬರಿಗೂ ಜಗಳವಾಗಿ ರುಕ್ಮಿಯೊಡನೆ ಕಳಿಂಗ ರಾಜನೇ ಮುಂತಾದವರನ್ನು ಬಲರಾಮನು ಕೊಲ್ಲುವುದು. ಬಳಿಕ ಕೃಷ್ಣಾದಿಗಳು ದ್ವಾರಕಿಗೆ ಬರುವುದು.

ಇಪ್ಪತ್ತೊಂಭತ್ತನೆಯ ಅಧ್ಯಾಯ 240–247

ದೇವೇಂದ್ರನು ದ್ವಾರಕಿಗೆ ಬಂದು ನರಕಾಸುರನ ವೃತ್ತಾಂತವನ್ನು ಕೃಷ್ಣನಿಗೆ ಹೇಳುವುದು, ಕೃಷ್ಣನು ನರಕಾಸುರನನ್ನು ಸಂಹರಿಸುವುದು, ಭೂದೇವಿಯ ಪ್ರಾರ್ಥನೆಯಿಂದ ನರಕನಿಗೆ ಸದ್ಗತಿಯನ್ನಿತ್ತು ಅವನ ಅಂತಃಪುರದಲ್ಲಿದ್ದ ೧೬೧೦೦ ಕನ್ಯೆಯರನ್ನೂ ರತ್ನಗಳನ್ನೂ ನಾಲ್ಕು ಕೊಂಬಿನ ೬ ಸಾವಿರ ಆನೆಗಳನ್ನೂ ೨೧ ಲಕ್ಷ ಕುದುರೆಗಳನ್ನೂ ದ್ವಾರಕಿಗೆ ಕಳುಹಿಸಿ ಅದಿತಿಯ ಕರ್ಣಾಭರಣಗಳನ್ನು ಕೊಡುವುದಕ್ಕಾಗಿ ಸತ್ಯಭಾಮೆಯೊಡನೆ ಗರುಡನನ್ನೇರಿ ಸ್ವರ್ಗ ಲೋಕಕ್ಕೆ ಪ್ರಯಾಣಮಾಡುವುದು.

ಮೂವತ್ತನೆಯ ಅಧ್ಯಾಯ 248–265

ಕೃಷ್ಣನು ದೇವಲೋಕದಲ್ಲಿ ಅದಿತಿಯ ಮನೆಗೆ ಹೋಗಿ ಆಕೆಯ ಕರ್ಣಾಭರಣಗಳನ್ನು ಕೊಡುವುದು. ಅದಿತಿಯ ಸ್ತೋತ್ರ. ಕೃಷ್ಣಸತ್ಯಭಾಮೆಯರಿಗೆ ಅದಿತಿಯವರ ಪ್ರದಾನ. ನಂದನವನ ದರ್ಶನ. ಪಾರಿಜಾತ ವೃಕ್ಷಕ್ಕಾಗಿ ಕೃಷ್ಣದೇವೇಂದ್ರರ ಯುದ್ಧ. ಸೋತ ದೇವೇಂದ್ರನನ್ನು ಸತ್ಯಭಾಮೆಯು ಹಾಸ್ಯಮಾಡುವುದು. ಸತ್ಯಭಾಮೆಯ ಔದಾರ್ಯವು ಶಚೀದೇವಿಯನ್ನು ಮೀರಿಸುವುದು. ದೇವೇಂದ್ರನ ಸ್ತೋತ್ರ.

ಮೂವತ್ತೊಂದನೆಯ ಅಧ್ಯಾಯ 266–270

ಪಾರಿಜಾತ ವೃಕ್ಷವನ್ನು ದ್ವಾರಕಿಗೆ ತರುವುದು ಮತ್ತು ಆ ವೃಕ್ಷದ ಮಹಿಮೆ. ೧೬, ೧೦೦ ಜನ ಕನ್ಯೆಯರೊಡನೆ ಅಷ್ಟೇ ರೂಪದಿಂದ ಕೃಷ್ಣನ ವಿವಾಹ.

ಮೂವತ್ತೆರಡನೆಯ ಅಧ್ಯಾಯ

ಕೃಷ್ಣನ ಅಷ್ಟಮಹಿಷಿಯರ ಸಂತತಿ, ಬಾಣನ ಮಗಳಾದ ಉಷೆಗೆ ಗೌರಿಯ ವರಪ್ರದಾನ, ಚಿತ್ರಲೇಖೆಯು ಅನಿರುದ್ಧನನ್ನು ತರುವುದಕ್ಕಾಗಿ ದ್ವಾರಕಿಗೆ ಪ್ರಯಾಣ ಮಾಡುವುದು,

ಮೂವತ್ತಮೂರನೆಯ ಅಧ್ಯಾಯ 278–289

ಬಾಣನಿಗೆ ಶಿವನ ವರ ಪ್ರದಾನ, ಬಾಣಾ-ಅನಿರುದ್ಧರ ಯುದ್ಧದಲ್ಲಿ ಬಾಣನು ಸರ್ಪಾಸ್ತ್ರದಿಂದ ಅನಿರುದ್ಧನನ್ನು ಬಂಧಿಸುವುದು, ಕೃಷ್ಣನು ಬಾಣನ ಪಟ್ಟಣಕ್ಕೆ ಬರುವುದು, ಬಾಣನ ಪಕ್ಷವಾದ ಶಿವನಿಗೂ ಕೃಷ್ಣನಿಗೂ ಯುದ್ಧವಾಗಿ ಜೃಂಭಕಾಸ್ತ್ರದಿಂದ ಶಿವನ ಕಡೆಯವರೆಲ್ಲರೂ ಸೋಲುವುದು. ಕೃಷ್ಣ ಬಾಣರ ಯುದ್ಧ, ಕೃಷ್ಣನು ಬಾಣನ ಸಾವಿರ ತೋಳುಗಳನ್ನು ಕತ್ತರಿಸುವುದು. ಶಿವನು ಕೃಷ್ಣಬಾಣರಿಗೆ ಹೇಳಿ ಶಾಂತಿಯನ್ನುಂಟುಮಾಡುವುದು. ಕೃಷ್ಣನು ಅನಿರುದ್ಧನನ್ನು ಸರ್ಪಾಸ್ತ್ರದಿಂದ ಬಿಡಿಸಿ ಉಷೆಯೊಡನೆ ದ್ವಾರಕಿಗೆ ಪ್ರಯಾಣ ಮಾಡುವುದು.

ಮೂವತ್ತನಾಲ್ಕನೆಯ ಅಧ್ಯಾಯ 290–299

ಪೌಂಡ್ರಕ ವಾಸುದೇವನೊಡನೆ ಕೃಷ್ಣನು ಯುದ್ಧ ಮಾಡುತ್ತ ಅವನನ್ನೂ ಅವನ ಸಹಾಯಕ್ಕೆ ಬಂದ ಕಾಶೀರಾಜನನ್ನೂ ಸಂಹರಿಸುವುದು. ಕಾಶೀರಾಜನ ಮಗನ ಅಭಿಚಾರಿಕ ಕೃತ್ಯ. ಕೃತ್ಯಾದೇವತೆಯು ದ್ವಾರಕಿಗೆ ಹೋಗಿ ಚಕ್ರಾಯುಧದ ಭಯದಿಂದ ಕಾಶಿಗೆ ಓಡಿಬಂದುದು. ಚಕ್ರವು ಕೃತ್ಯಾದೇವತೆಯೊಡನೆ ಕಾಶೀಪಟ್ಟಣವನ್ನೆಲ್ಲ ನಾಶಮಾಡಿದುದು.

ಮೂವತ್ತೈದನೆಯ ಅಧ್ಯಾಯ 300–307

ಜಾಂಬವತೀ ಪುತ್ರನಾದ ಸಾಂಬನು ದುರ್ಯೋಧನನ ಮಗಳನ್ನು ಬಲಾತ್ಕಾರವಾಗಿ ಮದುವೆಯಾದುದಕ್ಕೆ ಅವನನ್ನು ದುರ್ಯೋಧನಾದಿಗಳು ಸೆರೆಯಲ್ಲಿಡುವುದು. ಬಲರಾಮನು ಸಂಧಿಗಾಗಿ ಹೋಗಿ ಕೌರವರ ಮೇಲೆ ಕೋಪಿಸಿ ಹಸ್ತಿನಪಟ್ಟಣವನ್ನು ನೇಗಿಲಿನಿಂದ ಎಳೆದಾಗ ಕೌರವರು ಭಯಪಟ್ಟು ಪತ್ನೀಸಹಿತನಾದ ಸಾಂಬನನ್ನು ಬಲರಾಮನಿಗೊಪ್ಪಿಸುವುದು.

ಮೂವತ್ತಾರನೆಯ ಅಧ್ಯಾಯ 308–312

ದ್ವಿವಿದನೆಂಬ ಕಪಿಯ ರೂಪನಾದ ದಾನವನನ್ನು ಬಲರಾಮನು ಕೊಲ್ಲುವುದ.

ಮೂವತ್ತೇಳನೆಯ ಅಧ್ಯಾಯ 313–329

ಯಾದವರು ಪಿಂಡಾರಕವೆಂಬ ತೀರ್ಥದ ಸಮೀಪದಲ್ಲಿ ಕ್ರೀಡಿಸುತ್ತ ಸಾಂಬನಿಗೆ ಸ್ತ್ರೀವೇಷವನ್ನು ಹಾಕಿ ಋಷಿಗಳನ್ನು ಹಾಸ್ಯಮಾಡುವುದು, ಸಾಂಬನು ಹೆತ್ತ ಕಬ್ಬಿಣದ ಒನಕೆಯನ್ನು ಉಗ್ರಸೇನನು ಪುಡಿಮಾಡಿಸಿ ಸಮುದ್ರಕ್ಕೆ ಹಾಕಿಸುವುದು, ಅದು ಅಲ್ಲಿ ಜೊಂಡಾಗಿ ಬೆಳೆಯುವುದು, ದೇವತೆಗಳು ಕೃಷ್ಣನು ಸ್ವರ್ಗಕ್ಕೆ ಬರಬೇಕೆಂದು ಅಪೇಕ್ಷಿಸಿ ದೂತನನ್ನು ಕಳುಹಿಸುವುದು. ದ್ವಾರಕೆಯ ಅಪಶಕುನಗಳು, ಇವುಗಳ ಶಾಂತಿಗಾಗಿ ಪ್ರಭಾಸ ಕ್ಷೇತ್ರದಲ್ಲಿ ಯಾದವರೆಲ್ಲರೂ ಸೇರುವುದು. ಕೃಷ್ಣನು ಉದ್ಧವನಿಗೆ ಮುಂದಾಗುವುದನ್ನೆಲ್ಲ ಹೇಳುವುದು. ಪ್ರಭಾಸ ಕ್ಷೇತ್ರದಲ್ಲಿ ಯಾದವರು ಕಲಹಮಾಡುತ್ತ ನಾಶವಾಗುವುದು. ಕೃಷ್ಣನ ರಥಾದಿಗಳ ಅದರ್ಶನ, ಬಲರಾಮನ ಶರೀರತ್ಯಾಗ, ದಾರುತನಿಗೆ ಕೃಷ್ಣನ ಆಜ್ಞೆ, ಕೃಷ್ಣನ ಶರೀರ ತ್ಯಾಗ.

ಮುವತ್ತೆಂಟನೆಯ ಅಧ್ಯಾಯ 330–349

ಅರ್ಜುನನು ಪ್ರಭಾಸ ಕ್ಷೇತ್ರಕ್ಕೆ ಬಂದು ರಾಮಕೃಷ್ಣಾದಿಗಳಿಗೆ ಉತ್ತರ ಕ್ರಿಯೆಯನ್ನು ಮಾಡಿಸುವುದು, ದ್ವಾರಕೆಯಿಂದ ಕೃಷ್ಣನ ಪತ್ನಿಯರನ್ನೆಲ್ಲ ಕರೆದುಕೊಂಡು ಹೋಗುವುದು, ಕಳ್ಳರು ಅರ್ಜುನನನ್ನು ಗೆದ್ದು ಸ್ತ್ರೀಯರನ್ನು ಕರೆದುಕೊಂಡೆ ಹೋಗುವುದು, ಅರ್ಜುನನು ತನ್ನ ಪರಾಕ್ರಮವನ್ನು ಸ್ಮರಿಸಿಕೊಂಡು ದುಃಖಪಡುತ್ತ ವ್ಯಾಸರ ಆಶ್ರಮಕ್ಕೆ ಹೋಗಿ ತನ್ನ ದುಃಖವನ್ನು ಹೇಳಿಕೊಳ್ಳುವುದು, ವ್ಯಾಸರು ಧರ್ಮೋಪದೇಶ ಪೂರ್ವಕವಾಗಿ ಅರ್ಜುನನನ್ನು ಸಂತೈಸುವುದು, ಸ್ತ್ರಿಯರು ಕಳ್ಳರ ಕೈಗೆ ಸಿಕ್ಕಿದುದಕ್ಕೆ ಅಷ್ಟಾವಕ್ರನ ಶಾಪ ಕಾರಣವನ್ನು ಹೇಳುವುದು, ಪರಿಕ್ಷಿತನ ಪಟ್ಟಾಭಿಷೇಕ, ಪಾಂಡವರ ವನ ಪ್ರಯಾಣ.



ಶ್ರೀ ವಿಷ್ಣುಪುರಾಣದ ಷಷ್ಠಾಂಶದ

ವಿಷಯಾನುಕ್ರಮಣಿಕೆ

ಪುಟಗಳು

ಒಂದನೆಯ ಅಧ್ಯಾಯ 350–362

ಕಲಿಧರ್ಮ ನಿರೂಪಣೆ

ಎರಡನೆಯ ಅಧ್ಯಾಯ 363–371

ಕಲಿಯುಗದಲ್ಲಿ ಸ್ವಲ್ಪ ಪ್ರಯತ್ನದಿಂದ ಮಹಾಫಲ ಪ್ರಾಪ್ತಿಯಾಗುವುದೆಂದು ವ್ಯಾಸರು ಋಷಿಗಳಿಗೆ ಸಕಾರಣವಾಗಿ ಹೇಳುವುದು. ಈ ಯುಗದಲ್ಲಿ ಸ್ತ್ರೀಯರೂ ಶೂದ್ರರೂ ಸುಲಭವಾಗಿ ಧರ್ಮವನ್ನು ಗಳಿಸುವರು.

ಮೂರನೆಯ ಅಧ್ಯಾಯ 372–380

ಬ್ರಹ್ಮನ ಹಗಲಾದ ಸಾವಿರ ಚತುರ್ಯುಗಗಳ ಕೊನೆಯ ಕಲ್ಪಾಂತವೆಂಬ ನೈಮಿತ್ತಿಕ ಪ್ರಳಯ ವರ್ಣನೆ.

ನಾಲ್ಕನೆಯ ಅಧ್ಯಾಯ 381–391

ವಿಷ್ಣುವಿನ ಹಗಲಾದ ದ್ವಿಪರಾರ್ಧ ಮಾನುಷ ವರ್ಷದ ಬ್ರಹ್ಮನ ೧೦೦ ವರ್ಷದ ಆಯಸ್ಸಿನ ಕೊನೆಯಲ್ಲಾಗುವ ಪ್ರಾಕೃತ ಪ್ರಳಯ ವರ್ಣನೆ.

ಐದನೆಯ ಅಧ್ಯಾಯ 392–410

ತಾಪತ್ರಯ ಸ್ವರೂಪ ವಿವರಣೆ, ಗರ್ಭಪ್ರಸವಾದಿ ದುಃಖಗಳ ವಿವರಣೆ, ನರಕದುಃಖ ವಿವರಣೆ, ಜ್ಞಾನವೇ ದುಃಖ ನಿವೃತ್ತಿಗೆ ಉಪಾಯ, ಜ್ಞಾನವೇ ಪರಬ್ರಹ್ಮಪ್ರಾಪ್ತಿ ರೂಪವಾದ ಆತ್ಯಂತಿಕ ಪ್ರಳಯವೆಂಬುದರ ವಿವರಣೆ, ವಾಸುದೇವ ಸ್ವರೂಪವಾದ ಆತ್ಮತತ್ತ್ವೋಪದೇಶ.

ಆರನೆಯ ಅಧ್ಯಾಯ 411–422

ಪರಬ್ರಹ್ಮ ಪ್ರಾಪ್ತಿ ಸಾಧನವಾದ ಮಂತ್ರ ಜಪ ಯೋಗಾಭ್ಯಾಸ ಗಳ ವಿವರಣೆ, ಖಾಂಡಿಕ್ಯ ಕೇಶಿಧ್ವಜರ ಸಂವಾದ.

ಏಳನೆಯ ಅಧ್ಯಾಯ 423–447

ಕ್ಷತ್ರಿಯನಿಗೆ ರಾಜ್ಯಾಧಿಕಾರಾಪೇಕ್ಷೆಯಲ್ಲಿರುವ ಗುಣ ದೋಷಗಳ ವಿವರಣೆಯ ಮೂಲಕವಾಗಿ ಆತ್ಮತತ್ತ್ವೋಪದೇಶ, ಯೋಗ ಸ್ವರೂಪ, ಯೋಗಾಂಗಗಳು, ಯೋಗವಿಘ್ನಗಳು ಇವುಗಳ ವಿವರಣೆ, ಭಾವನಾತ್ರಯ ವಿವರಣೆ, ಧಾರಣ ಧ್ಯಾನ ಸಮಾಧಿ ಸಿದ್ಧಿಗಳು, ಖಾಂಡಿಕ್ಯ ಕೇಶಿಧ್ವಜರಿಗೆ ಮೋಕ್ಷ ಪ್ರಾಪ್ತಿ ವಿವರಣೆ.

ಎಂಟನೆಯ ಅಧ್ಯಾಯ 448–463

ವಿಷ್ಣುನಾಮಸ್ಮರಣೆಯ ಮಹಿಮೆ. ವಿಷ್ಣುಪುರಾಣದ ಮಹಿಮೆ, ಪರಾಶರರ ವಿಷ್ಣುಸ್ತೋತ್ರ.

ಶ್ರೀಃ

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಪ್ರಥಮೋಽಧ್ಯಾಯಃ

॥ ಮೈತ್ರೇಯಃ ॥

ನೃಪಾಣಾಂ ಕಥಿತಸ್ತ್ವೇಷೋ ಭವತಾ ವಂಶವಿಸ್ತರಃ ।
ವಂಶಾನುಚರಿತಂ ಚೈವ ಯಥಾವದನುವರ್ಣಿತಂ ॥ ೧ ॥

ಅಂಶಾವತಾರೋ ಬ್ರಹ್ಮರ್ಷೇ ಯೋಽಯಂ ಯದುಕುಲೋದ್ಭವಃ ।
ವಿಷ್ಣೋರಸ್ತಂ ವಿಸ್ತರೇಣಾಹಂ ಶ್ರೋತುಮಿಚ್ಛಾಮಿ ತತ್ವತಃ ॥ ೨ ॥

ಚಕಾರ ಯಾನಿ ಕರ್ಮಾಣಿ ಭಗವಾನ್ಪುರುಷೋತ್ತಮಃ ।
ಅಂಶಾಂಶೇನಾವತೀರ್ಯೋರ್ವ್ಯಾಂ ತಸ್ಯ ತಾನಿ ಮುನೇ ವದ ॥ ೩ ॥

ಒಂದನೆಯ ಅಧ್ಯಾಯವು

೧-೩. ಮೈತ್ರೇಯನು " ಗುರುಗಳಾದ ಪರಾಶರರೇ! ತಾವು ಸಮಸ್ತ ರಾಜರ ವಂಶ ವಿಸ್ತಾರವನ್ನು ಹೇಳಿದಿರಿ. ಅಲ್ಲಲ್ಲಿಯೇ ಪ್ರಸಿದ್ಧರಾದವರ ಚರಿತ್ರೆಯನ್ನೂ ಹೇಳಿದಿರಿ ಯದುವಂಶದಲ್ಲಿ ಹುಟ್ಟಿದ ಕೃಷ್ಣನು ವಿಷ್ಣುವಿನ ಅವತಾರವೆಂದು ಹೇಳಿದಿರಿ. ಅದನ್ನು ವಿಸ್ತಾರವಾಗಿ ನಾನು ಕೇಳಬೇಕೆಂದಿರುವೆನು. ಆ ಪುರುಷೋತ್ತಮನು ತನ್ನಂಶದಿಂದ ಭೂಮಿಯಲ್ಲಿ ಅವತಾರ ಮಾಡಿ ಯಾವ ಯಾವ ಕಾರ್ಯಗಳನ್ನು ಮಾಡಿದನೆಂಬುದನ್ನು ನನಗೆ ಹೇಳಬೇಕು " ಎಂದು ಕೇಳಿಕೊಂಡನು.

॥ ಶ್ರೀ ಪರಾಶರಃ ॥

ಮೈತ್ರೇಯ ಶ್ರೂಯತಾಮೇತದ್ಯತ್ಪೃಷ್ಟೋಽಹಮಿಹ ತ್ವಯಾ ।
ವಿಷ್ಣೋರಂಶಾಂಶಸಂಭೂತಿಚರಿತಂ ಜಗತೋ ಹಿತಂ ॥ ೪ ॥

ದೇವಕಸ್ಯ ಸುತಾಂ ಪೂರ್ವಂ ವಸುದೇವೋ ಮಹಾಮುನೇ ।
ಉಪಯೇಮೇ ಮಹಾಭಾಗಾಂ ದೇವಕೀಂ ದೇವತೋಪಮಾಂ ॥ ೫ ॥

ಕಂಸಸ್ಯೋದ್ವರ್ವರಥಂ ಚೋದಯಾಮಾಸ ಸಾರಥಿಃ ।
ವಸುದೇವಸ್ಯ ದೇವಕ್ಯಾ ಸಂಯೋಗೇ ಭೋಜನಂದನಃ ॥ ೬ ॥

ಅಥಾಂತರಿಕ್ಷೇ ವಾಗುಚ್ಚೈಃ ಕಂಸಮಾಭಾಷ್ಯ ಸಾದರಂ ।
ಮೇಘಗಂಭೀರನಿರ್ಘೋಷಂ ಸಮಾಭಾಷ್ಯೇದಮಬ್ರವೀತ್ ॥ ೭ ॥

ಯಾಮೇತಾಂ ವಹಸೇ ಮೂಢ ಸಹ ಭರ್ತ್ರಾ ರಥೇ ಸ್ಥಿತಾಂ ।
ಅಸ್ಯಾಸ್ತ್ವಾಷ್ಟಮೋ ಗರ್ಭಃ ಪ್ರಾಣಾನಪಹರಿಷ್ಯತಿ ॥ ೮ ॥

೪-೮. ಪರಾಶರರು ಹೇಳುವರು :— ಮೈತ್ರೇಯನೇ! ಪರಬ್ರಹ್ಮನ ಅಂಶವಾದ, ಕ್ಷೀರಸಾಗರಶಾಯಿಯಾದ ವಿಷ್ಣುವಿನ ಒಂದಂಶದಿಂದ ಅವತಾರ ಮಾಡಿದ, ಮನುಷ್ಯರೂಪನಾದ ಕೃಷ್ಣನ ಚರಿತ್ರೆಯನ್ನು ಹೇಳಬೇಕೆಂದು ಕೇಳಿದೆಯಷ್ಟೆ ಅದನ್ನು ಹೇಳುವೆನು ಕೇಳು. ಹಿಂದೆ ವಸುದೇವನು ದೇವಕನೆಂಬವನ ಮಗಳಾದ ದೇವಸ್ತ್ರೀಗೆ ಸಮಾನಳಾದ ದೇವಕಿಯೆಂಬವಳನ್ನು ವಿವಾಹಮಾಡಿಕೊಂಡನು. ದಂಪತಿಗಳ ವಿವಾಹೋತ್ಸವ ಸಂಬಂಧವಾದ ರಥವನ್ನು ಭೋಜನ ಮಗನಾದ ಕಂಸನು ಸಾರಥಿಯಾಗಿ ನಡೆಸುತ್ತಿದ್ದನು. ಆ ಸಮಯದಲ್ಲಿ ಅಂತರಿಕ್ಷದಲ್ಲಿ ಗುಡುಗಿನಂತೆ ಗಂಭೀರವಾದ ಒಂದು ಧ್ವನಿಯು ಕಂಸನನ್ನು ಕುರಿತು ಪ್ರೀತಿಯಿಂದ "ಎಲೈ ಮೂಢನಾದ ಕಂಸನೇ! ಗಂಡನೊಡನೆ ಕೂಡಿದ ಈ ದೇವಕಿಯನ್ನು ರಥದಲ್ಲಿ ಕೂಡಿಸಿಕೊಂಡು ಹೋಗುತ್ತಿರುವೆ. ಇವಳ ಎಂಟನೆಯ ಗರ್ಭದಲ್ಲಿ ಹುಟ್ಟುವ ಬಾಲಕನು ನಿನ್ನ ಪ್ರಾಣವನ್ನು ನಾಶಮಾಡುವನು" ಎಂದು ಹೇಳಿತು.

॥ ಪರಾಶರ ಉವಾಚ ॥

ಇತ್ಯಾಕರ್ಣ್ಯ ಸಮುತ್ಪಾಟ್ಯ ಖಡ್ಗಂ ಕಂಸೋ ಮಹಾಬಲಃ ।
ದೇವಕೀಂ ಹಂತುಮಾರಬ್ಧೋ ವಸುದೇವೋಽಬ್ರವೀದಿದಂ ॥ ೯ ॥

ನ ಹಂತವ್ಯಾ ಮಹಾಭಾಗ ದೇವಕೀಭವತಾನಘ ।
ಸಮರ್ಪಯಿಷ್ಯೇ ಸಕಲಾನ್ಗರ್ಭಾನಸ್ಯೋದರೋದ್ಭವಾನ್ ॥ ೧೦ ॥

॥ ಶ್ರೀ ಪರಾಶರಃ ॥

ತಥೇತ್ಯಾಹ ತತಃ ಕಂಸೋ ವಸುದೇವಂ ದ್ವಿಜೋತ್ತಮ ।
ನ ಘಾತಯಾಮಾಸ ಚ ತಾಂ ದೇವಕೀಂ ತಸ್ಯ ಗೌರವಾತ್ ॥ ೧೧ ॥

ಏತಸ್ಮಿನ್ನೇವ ಕಾಲೇ ತು ಭೂರಿಭಾರಾವಪೀಡಿತಾ ।
ಜಗಾಮ ಧರಣೀಮೇರೌ ಸಮಾಜಂ ತ್ರಿದಿವೌಕಸಾಂ ॥ ೧೨ ॥

ಸ ಬ್ರಹ್ಮಕಾನ್ಸುರಾನ್ಸರ್ವಾನ್ಪ್ರಣಿಪತ್ಯಾಥ ಮೇದಿನೀ ।
ಕಥಯಾಮಾಸ ತತ್ಸರ್ವಂ ಖೇದಾತ್ಕರುಣಭಾಷಿಣೀ ॥ ೧೩ ॥

೯-೧೦. ಈ ಮಾತನ್ನು ಕೇಳಿ ಮಹಾಬಲಶಾಲಿಯಾದ ಕಂಸನು ಕತ್ತಿಯನ್ನು ಹಿರಿದು ದೇವಕಿಯನ್ನು ಕೊಲ್ಲಲು ಯತ್ನಿಸಿದನು. ಆಗ ವಸುದೇವನು ಅವನನ್ನು ಕುರಿತು "ಸಾಪರಹಿತನಾದ ಮಹಾಬಲಶಾಲಿಯಾದ ಕಂಸನೇ! ದೇವಕಿಯನ್ನು ಕೊಲ್ಲಬೇಡ. ಇವಳ ಗರ್ಭದಲ್ಲಿ ಹುಟ್ಟುವ ಮಕ್ಕಳೆಲ್ಲರನ್ನೂ ನಿನಗೆ ಕೊಡುವೆನು" ಎಂದು ಹೇಳಿದನು.

೧೧-೧೩. ಕಂಸನು ಆ ಮಾತನ್ನು ಕೇಳಿ ಆ ವಸುದೇವನಲ್ಲಿದ್ದ ಗೌರವದಿಂದ ಹಾಗೆಯೇ ಆಗಲೆಂದು ಹೇಳಿ ದೇವಕಿಯನ್ನು ಕೊಲ್ಲಲಿಲ್ಲ. ಇದೇ ಕಾಲದಲ್ಲಿಯೇ ಭೂ ದೇವಿಯು ತನಗುಂಟಾಗಿದ್ದ ಭಾರದ ನೋವಿನಿಂದ ಮೇರುಪರ್ವತದಲ್ಲಿ ಸೇರಿದ್ದ ದೇವತೆಗಳ ಸಮಾಜಕ್ಕೆ ಹೋದಳು. ಅಲ್ಲಿ ಭೂದೇವಿಯು ಬ್ರಹ್ಮನೇ ಮೊದಲಾದ ದೇವತೆಗಳಿಗೆ ನಮಸ್ಕಾರಮಾಡಿ ತನಗುಂಟಾಗಿರುವ ಕಷ್ಟವನ್ನು ಬಹು ವೈನ್ಯವಿಂದ ಹೇಳಿದಳು. ಎಂತೆಂದರೆ :—

॥ ಭೂಮಿರುವಾಚ ॥

ಅಗ್ನಿಸ್ಸುವರ್ಣಸ್ಯ ಗುರುರ್ಗವಾಂ ಸೂರ್ಯಃ ಪರೋ ಗುರುಃ ।
ಮಮಾಪ್ಯಖಿಲಲೋಕಾನಾಂ ಗುರುರ್ನಾರಾಯಣೋ ಗುರುಃ ॥ ೧೪ ॥

ಪ್ರಜಾಪತಿಪತಿರ್ಬ್ರಹ್ಮಾ ಪೂರ್ವೇಷಾಮಪಿ ಪೂರ್ವಜಃ ।
ಕಲಾಕಾಷ್ಠಾ ನಿಮೇಷಾತ್ಮಾ ಕಾಲಶ್ಚಾವ್ಯಕ್ತಮೂರ್ತಿಮಾನ್ ॥ ೧೫ ॥

ತದಂಶಭೂತಸ್ಸರ್ವೇಷಾಂ ಸಮೂಹೋ ವಸ್ಸುರೋತ್ತಮಾಃ ॥ ೧೬ ॥

ಆದಿತ್ಯಾ ಮರುತಸ್ಸಾಧ್ಯಾ ರುದ್ರಾ ವಸ್ವಶ್ವಿವಹ್ನಯಃ ।
ಪಿತರೋ ಯೇ ಚ ಲೋಕಾನಾಂ ಸ್ರಷ್ಟಾರೋತ್ರ ಪುರೋಗಮಾಃ ॥ ೧೭ ॥

ಏತೇ ತಸ್ಯಾಪ್ರಮೇಯಸ್ಯ ವಿಷ್ಣೋ ರೂಪಂ ಮಹಾತ್ಮನಃ ॥ ೧೮ ॥

೧೪-೧೦. ಅಗ್ನಿಯಿಂದ ಸುವರ್ಣವು ಹುಟ್ಟಿತು. (ಬೆಂಕಿಯಲ್ಲಿ ಚಿನ್ನವನ್ನು ಹಾಕಿದರೆ ಅದರ ಕೊಳೆಯು ಹೋಗಿ ಶುದ್ಧವಾದ ಚಿನ್ನವು ಮಾತ್ರ ಉಳಿಯುವುದು.) ಸೂರ್ಯನಿಂದ ಕಿರಣಗಳೂ ಗೋವುಗಳೂ ಹುಟ್ಟಿದುವು. (ಸೂರ್ಯಕಿರಣದಿಂದ ಮಳೆಯಾಗಿ ಗೋವುಗಳಿಗೆ ಹುಲ್ಲು ದೊರಕುವುದು) ಅದರಂತೆ ನಾನು ಸಮಸ್ತ ಲೋಕವನ್ನೂ ಸೃಷ್ಟಿಸಿದ ನಾರಾಯಣನಿಂದ ಹುಟ್ಟಿದೆನು. ಆದುದರಿಂದ ನನಗೆ ಉಂಟಾಗಿರುವ ಭಾರವನ್ನು ಅವನೇ ಪರಿಹರಿಸಿ ನನ್ನನ್ನು ಕಾಪಾಡಬೇಕು. ಪರ ಬ್ರಹ್ಮನು ಸಮಸ್ತ ಪ್ರಜಾಪತಿಗಳಿಗೂ ಅಧಿಪತಿಯು. ಅವನು ಅನಾದಿಯಾದವನು. ಕಳಾಕಾಷ್ಠಾನಿಮೇಷ ಮುಂತಾದ ಕಾಲಸ್ವರೂಪನು. ಮತ್ತು ಅವ್ಯಕ್ತವೆಂಬ ಪ್ರಕೃತಿ ಸ್ವರೂಪನು. ದೇವಶ್ರೇಷ್ಠರೇ ನಿವೆಲ್ಲರೂ ಆ ಪರಬ್ರಹ್ಮನ ಅಂಶಸಂಭೂತರು. ದ್ವಾದಶಾದಿತ್ಯರೂ, ಸಪ್ತ ಮರುತ್ತುಗಳೂ, ಏಕಾದಶರುದ್ರರೂ, ಅಷ್ಟವಸುಗಳೂ, ಅಶ್ವಿನೀ ದೇವತೆಗಳೂ, ಶ್ರೌತಾಗ್ನಿಗಳೂ, ಪಿತೃದೇವತೆಗಳೂ, ಸಾಧ್ಯರೂ, ಬ್ರಹ್ಮನೇ ಮೊದಲಾದ ಸಮಸ್ತ ದೇವತೆಗಳೂ ಅಳತೆಗೆ ನಿಲುಕದ ಆ ವಿಷ್ಣುವಿನ ರೂಪವೇ

ಯಕ್ಷರಾಕ್ಷಸ ದೈತೇಯ ಪಿಶಾಚೋರಗದಾನವಾಃ ।
ಗಂಧರ್ವಾಪ್ಸರಸಶ್ಚೈವ ರೂಪಂ ವಿಷ್ಣೋರ್ಮಹಾತ್ಮನಃ ॥ ೧೯ ॥

ಗ್ರಹರ್ಕ್ಷ ತಾರಕಾ ಚಿತ್ರ ಗಗನಾಗ್ನಿ ಜಲಾನಿಲಾಃ ।
ಅಹಂ ಚ ವಿಷಯಾಶ್ಚೈವ ಸರ್ವಂ ವಿಷ್ಣುಮಯಂ ಜಗತ್ ॥ ೨೦ ॥

ತಥಾ ಚಾನೇಕರೂಪಸ್ಯ ಯಸ್ಯ ರೂಪಾಣ್ಯಪರ್ನಿಶಂ ।
ಬಾಧ್ಯ ಬಾಧಕತಾಂ ಯಾಂತಿ ಕಲ್ಲೋಲಾ ಇವ ಸಾಗರೇ ॥ ೨೧ ॥

ತತ್ಸಾಂಪ್ರತಮಮೀ ದೈತ್ಯಾಃ ಕಾಲನೇಮಿಪುರೋಗಮಾಃ ।
ಮರ್ತ್ಯಲೋಕಂ ಸಮಾಕ್ರಮ್ಯ ಬಾಧಂ ತೇಹರ್ನಿಶಂ ಪ್ರಜಾಃ ॥ ೨೨ ॥

ಕಾಲನೇಮಿರ್ಹತೋ ಯೋsಸೌ ವಿಷ್ಣುನಾ ಪ್ರಭವಿಷ್ಣುನಾ ।
ಉಗ್ರಸೇನಸುತಃ ಕಂಸಸ್ಸಂಭೂತಸ್ಸ ಮಹಾಸುರಃ ॥ ೨೩ ॥

ಅರಿಷ್ಟೋ ಧೇನುಕಃ ಕೇಶೀ ಪ್ರಲಂಬೋ ನರಕಸ್ತಥಾ ।
ಸುಂದೋಸುರಸ್ತಥಾತ್ಯುಗ್ರೋ ಬಾಣಶ್ಚಾಪಿ ಬಲೇಸ್ಸುತಃ ॥ ೨೪ ॥

ಆಗಿರುವರು. ಯಕ್ಷರು, ರಾಕ್ಷಸರು, ದೈತ್ಯರು, ಪಿಶಾಚರು, ಉರಗರು, ದಾನವರು, ಗಂಧರ್ವರು, ಅಪ್ಸರಸರು ಇವರೆಲ್ಲರೂ ವಿಷ್ಣುಸ್ವರೂಪರೇ ಆಗಿರುವರು. ಗ್ರಹಗಳೂ, ನಕ್ಷತ್ರಗಳೂ, ಅಶ್ವಿನ್ಯಾದಿ ತಾರೆಗಳೂ, ಆಕಾಶ, ವಾಯು, ಅಗ್ನಿ, ನೀರು, ನಾನು ಮುಂತಾದ ಸಮಸ್ತ ಶಬ್ದಾದಿ ವಿಷಯಗಳೂ ವಿಷ್ಣುಸ್ವರೂಪವಾದುವುಗಳಾಗಿ ಸಮಸ್ತ ಜಗತ್ತೂ ಸರ್ವವ್ಯಾಪಿಯಾದ ವಿಷ್ಣುವಿನಿಂದಲೇ ತುಂಬಿರುವುದು.

೨೧–೨೨. ಹೀಗಿದ್ದರೂ ಅನೇಕ ರೂಪನಾದ ಆ ವಿಷ್ಣುವಿನ ರೂಪಗಳು ಸಾಗರದಲ್ಲಿನ ಅಲೆಗಳಂತೆ ಒಂದನ್ನೊಂದು ಬಾಧಿಸುತ್ತಿರುವುವು. ಆದುದರಿಂದ ಈ ಕಾಲನೇಮಿಯೇ ಮುಂತಾದ ದೈತ್ಯರು ಭೂಲೋಕವನ್ನಾಕ್ರಮಿಸಿ ಯಾವಾಗಲೂ ಪ್ರಜೆಗಳಿಗೆ ತೊಂದರೆಯನ್ನು ಕೊಡುತ್ತಿರುವರು.

೨೩-೨೬. ಕಾಲನೇಮಿಯೆಂಬ ರಾಕ್ಷಸನನ್ನು ವಿಷ್ಣುವು ಕೊಂದುಹಾಕುತ್ತಲು ಅವನೇ ಈಗ ಉಗ್ರಸೇನನ ಮಗನಾದ ಕಂಸನಾಗಿ ಹುಟ್ಟಿರುವನು. ಅರಿಷ್ಟ, ಧೇನುಕ,

ತಥಾನ್ಯೇ ಚ ಮಹಾವೀರ್ಯಾ ನೃಪಾಣಾಂ ಭವನೇಷು ಯೇ ।
ಸಮುತ್ಪನ್ನಾ ದುರಾತ್ಮಾನಸ್ತಾನ್ನ ಸಂಖ್ಯಾತು ಮುತ್ಸಹೇ ॥ ೨೫ ॥

ಅಕ್ಷೌಹಿಣ್ಯೋಽತ್ರ ಬಹುಳಾ ದಿವ್ಯಮೂರ್ತಿಧರಾಸ್ಸುರಾಃ ।
ಮಹಾಬಲಾನಾಂ ದೈಪ್ತಾನಾಂ ದೈತ್ಯೇಂದ್ರಾಣಾಂ ಮಮೋಪರಿ ॥ ೨೬ ॥

ತದ್ಭೂರಿಭಾರಪೀಡಾರ್ತಾ ನ ಶಕ್ನೋಮ್ಯಮರೇಶ್ವರಾಃ ।
ಬಿಭರ್ತುಮಾತ್ಮಾನಮಹಮಿತಿ ವಿಜ್ಞಾಪಯಾಮಿ ವಃ ॥ ೨೭ ॥

ಕ್ರಿಯತಾಂ ತನ್ಮಹಾಭಾಗಾ ಮಮ ಭಾರಾವತಾರಣಂ ।
ಯಥಾ ರಸಾತಲಂ ನಾಹಂ ಗಚ್ಛೇಯಮತಿವಿಹ್ವಲಾ ॥ ೨೮ ॥

ಕೇಶಿ, ಪ್ರಲಂಬ, ನರಕ, ಸುಂದ, ಬಲಿಯಮಗನಾದ ಬಾಣ, ಇವರೇ ಮೊದಲಾದ ಅನೇಕ ರಾಕ್ಷಸರು ರಾಜರ ಮನೆಗಳಲ್ಲಿ ಮಹಾಪರಾಕ್ರಮಿಗಳಾಗಿ ಹುಟ್ಟಿರುವರು. ಆ ದುರಾತ್ಮರನ್ನು ಲೆಕ್ಕಮಾಡಿ ಹೇಳಲು ನನಗೆ ಸಾಧ್ಯವಾಗದು. ಸುಂದರರಾದ ದೇವತೆಗಳೇ ನನ್ನ ಮೇಲೆ ಮಹಾಬಲಶಾಲಿಗಳಾಗಿಮದಿಸಿದ ಅನೇಕ ಅಕ್ಷೌಹಿಣೀ ಸಂಖ್ಯೆಯ ದೈತ್ಯರು ಇರುವರು. (ಅಕ್ಷೌಹಿಣಿಯಲ್ಲಿ ೨೧೮೭೦ ಆನೆ, ಇಷ್ಟೇ ರಥ, ೬೫೬೧೦ ಕುದುರೆ, ೧೦೯೩೫೦ ಕಾಲಾಳುಗಳು ಇರಬೇಕು.)

೨೭–೨೮. ದೇವಶ್ರೇಷ್ಠರೇ! ಈ ಹೆಚ್ಚಾದ ಭಾರವನ್ನು ಹೊರಲು ನನಗೆ ಶಕ್ತಿ ಇಲ್ಲವೆಂದು ನಿಮ್ಮಲ್ಲಿ ವಿಜ್ಞಾಪಿಸಿಕೊಂಡಿರುವೆನು. ಈ ಭಾರದಿಂದ ನಾನು ಪಾತಾಳಕ್ಕೆ ಹೋಗದಂತೆ ನೀವೆಲ್ಲರೂ ಈ ಭಾರವನ್ನು ಕಡಿಮೆಯಾಗಿ ಮಾಡುವ ಕಾರ್ಯವನ್ನು ಮಾಡಬೇಕು.

ಇತ್ಯಾಕರ್ಣ್ಯ ಧರಾವಾಕ್ಯಮಶೇಷೈಸ್ತ್ರಿದಶೇಶ್ವರೈಃ ।
ಭುವೋ ಭಾರಾವತಾರಾರ್ಥಂ ಬ್ರಹ್ಮಾ ಪ್ರಾಹ ಪ್ರಚೋದಿತಃ ॥ ೨೯ ॥

॥ ಬ್ರಹ್ಮೋವಾಚ ॥

ಯಥಾಹ ವಸುಧಾ ಸರ್ವಂ ಸತ್ಯಮೇವ ದಿವೌಕಸಃ ।
ಅಹಂ ಭವೋ ಭವಂತಶ್ಚ ಸರ್ವೇ ನಾರಾಯಣಾತ್ಮಕಾಃ ॥ ೩೦ ॥

ವಿಭೂತಯಸ್ತು ಯಾಸ್ತಸ್ಯ ತಾಸಾಮೇವ ಪರಸ್ಪರಂ ।
ಆಧಿಕ್ಯೋನ್ಯೂನತಾ ಬಾಧ್ಯಬಾಧಕತ್ವೇನ ವರ್ತತೇ ॥ ೩೧ ॥

ತದಾಗಚ್ಛತಗಚ್ಛಾಮಃ ಕ್ಷೀರಾಬ್ಧೇಸ್ತಟಮುತ್ತಮಂ ।
ತತ್ರಾರಾಧ್ಯ ಹರಿಂ ತಸ್ಮೈ ಸರ್ವಂ ವಿಜ್ಞಾಪಯಾಮ ವೈ ॥ ೩೨ ॥

ಸರ್ವಾರ್ಥೈವ ಜಗತ್ಯರ್ಥೇ ಸ ಸರ್ವಾತ್ಮಾ ಜಗನ್ನಯಃ ।
ಸಶ್ಚಾಂಶೇನಾವತೀರ್ಯೋರ್ವ್ಯಾಂ ಧರ್ಮಸ್ಯ ಕುರುತೇ ಸ್ಥಿತಿಂ ॥ ೩೩ ॥

---

೨೯. ಭೂದೇವಿಯು ಹೇಳಿದ ಮಾತನ್ನು ಕೇಳಿ ಸಮಸ್ತ ದೇವತೆಗಳೂ ಭೂಭಾರವನ್ನು ಕಡಿಮೆಮಾಡಬೇಕೆಂದು ಬ್ರಹ್ಮನನ್ನು ಕೇಳಿಕೊಂಡಮೇಲೆ ಬ್ರಹ್ಮನು ಹೇಳುವನು.

೩೦-೩೪. " ದೇವತೆಗಳೇ! ಭೂದೇವಿಯು ಹೇಳಿದ ಮಾತು ಸತ್ಯವಾಗಿರುವುದು. ನಾನೂ, ನೀವೂ, ಈಶ್ವರನೂ ಕೂಡಿ ಎಲ್ಲರೂ ನಾರಾಯಣ ಸ್ವರೂಪರಾದವರು. ಆ ನಾರಾಯಣನ ವಿಭೂತಿಗಳಾದ ಸಕಲ ವಸ್ತುಗಳೂ ಪರಸ್ಪರ ಹೆಚ್ಚು ಕಡಿಮೆಗಳಾಗಿ ಒಂದಕ್ಕೊಂದು ಬಾಧ್ಯ ಬಾಧಕ ಭಾವದಿಂದಿರುವುವು. ಆದುದರಿಂದ ಎಲ್ಲರೂ ಬನ್ನಿರಿ. ಕ್ಷೀರಸಮುದ್ರದ ಸಮೀಪಕ್ಕೆ ಹೋಗಿ ಅಲ್ಲಿ ಹರಿಯನ್ನು ಪೂಜಿಸಿ ಅವನಿಗೆ ಎಲ್ಲವನ್ನೂ ವಿಜ್ಞಾಪನೆ ಮಾಡೋಣ. ಆ ಸರ್ವಾತ್ಮನೂ, ಜಗತ್ಸ್ವರೂಪನೂ ಆದ ನಾರಾಯಣನು ಲೋಕಕ್ಷೇಮಾರ್ಥವಾಗಿ ತನ್ನ ಸತ್ವಗುಣಾಂಶದಿಂದ ಭೂಮಿಯಲ್ಲಿ ಅವತಾರವೆತ್ತಿ

॥ ಶ್ರೀ ಪರಾಶರಃ ॥

ಇತ್ಯುಕ್ತ್ವಾ ಪ್ರಯಯೌ ತತ್ರ ಸಹ ದೇವೈಃ ಪಿತಾಮಹಃ ।
ಸಮಾಹಿತಮನಾಶ್ಚೈವಂ ತುಷ್ಟಾವ ಗರುಡಧ್ವಜಂ ॥ ೩೪ ॥

॥ ಬ್ರಹ್ಮೋವಾಚ ॥

ದ್ವೇ ವಿದ್ಯೇ ತ್ವಮನಾಮ್ನಾಯ ಪರಾ ಚೈವಾಪರಾ ತಥಾ ।
ತ ಏವ ಭವತೋ ರೂಪೇ ಮೂರ್ತಾಮೂರ್ತಾತ್ಮಿಕೇ ಪ್ರಭೋ ॥ ೩೫ ॥

ದ್ವೇ ಬ್ರಹ್ಮಣೇ ತ್ವಣೇಯೋತಿ ಸ್ಥೂಲಾತ್ಮನ್ ಸರ್ವಸರ್ವವಿತ್ ।
ಶಬ್ದಬ್ರಹ್ಮಪರಂ ಚೈವ ಬ್ರಹ್ಮ ಬ್ರಹ್ಮಮಯಸ್ಯ ಯತ್ ॥ ೩೬ ॥

ಧರ್ಮಸಂಸ್ಥಾಪನೆಯನ್ನು ಮಾಡುವನು.” ಹೀಗೆಂದು ಹೇಳಿ ಬ್ರಹ್ಮನು ದೇವತೆಗಳೊಡನೆ ಕ್ಷೀರಸಮುದ್ರದ ಬಳಿಗೆ ಹೋಗಿ ಏಕಾಗ್ರಚಿತ್ತದಿಂದ ಗರುಡಧ್ವಜನಾದ ವಿಷ್ಣುವನ್ನು ಸ್ತೋತ್ರಮಾಡಿದನು.

೩೫-೩೬. “ವೇದಕ್ಕೆ ಗೋಚರನಲ್ಲದ ಎಲೈ ದೇವನೇ ! ನೀನು ವೇದದಲ್ಲಿ ಹೇಳುವಂತೆ ಪರಾಪರಬ್ರಹ್ಮವಿದ್ಯಾಸ್ವರೂಪನಾಗಿರುವೆ. ಪರಾವಿದ್ಯೆಯೇ ನಿನ್ನ ಅಮೂರ್ತ ರೂಪವು. ಸರ್ವಜ್ಞನೂ ಸರ್ವಪ್ರಪಂಚರೂಪನೂ ಆದ ಪರಮಾತ್ಮನೇ ನಿನ್ನ ಅತ್ಯಂತ ಸೂಕ್ಷ್ಮವಾದ ಪರಬ್ರಹ್ಮ ಸ್ವರೂಪವು ಯಾರಿಗೂ ಗೋಚರವಾಗತಕ್ಕುದಲ್ಲ. ಅತ್ಯಂತ ಸ್ಥೂಲವಾದ ನಿನ್ನ ವಿರಾಡ್ರೂಪವು ಸರ್ವರಿಗೂ ಗೋಚರವಾಗಿರುವುದು. ನೀನು ಶಬ್ದಬ್ರಹ್ಮವಾದ ವೇದಸ್ವರೂಪನೂ ಪರಬ್ರಹ್ಮ ಸ್ವರೂಪನೂ ಆಗಿರುವೆ.

ಋಗ್ವೇದಸ್ತ್ವಂ ಯಜುರ್ವೇದಸ್ತ್ವಾಮವೇದಸ್ತ್ವಥರ್ವ ಚ ।
ಶಿಕ್ಷಾ ಕಲ್ಪೋ ನಿರುಕ್ತಂ ಚ ಛಂದೋ ಜ್ಯೋತಿಷಮೇವ ಚ ॥ ೩೭ ॥

ಇತಿಹಾಸಪುರಾಣೇ ಚ ತಥಾ ವ್ಯಾಕರಣಂ ಪ್ರಭೋ ।
ಮೀಮಾಂಸಾ ನ್ಯಾಯಕಂ ತದ್ವದ್ಧರ್ಮಶಾಸ್ತ್ರಾಣ್ಯಥೋಕ್ಷಜ ॥ ೩೮ ॥

ಆತ್ಮಾತ್ಮದೇಹಗುಣವದ್ವಿಚಾರಾಚಾರಿ ಯದ್ವಚಃ ।
ತದಪ್ಯಾದ್ಯಪತೇ ನಾನ್ಯದಧ್ಯಾತ್ಮಾತ್ಮಸ್ವರೂಪವತ್ ॥ ೩೯ ॥

ತ್ವಮವ್ಯಕ್ತಮನಿರ್ದೇಶ್ಯಮಚಿಂತ್ಯಾ ನಾಮವರ್ಣವತ್ ।
ಅಪಾಣಿಪಾದರೂಪಂ ಚ ಶುದ್ಧಂ ನಿತ್ಯಂ ಪರಾತ್ಪರಂ ॥ ೪೦ ॥

೩೭-೩೯. ಶಬ್ದಬ್ರಹ್ಮವಾದ ವೇದವು ಕರ್ಮವಿಷಯವೆಂದೂ ಪರಬ್ರಹ್ಮ ವಿಷಯವೆಂದೂ ಎರಡು ಬಗೆಯಾಗಿರುವುದು. ಕರ್ಮವಿಷಯವಾದ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವ ವೇದಗಳೂ, ಶಿಕ್ಷಾ, ಕಲ್ಪ, ನಿರುಕ್ತ, ಛಂದಸ್ಸು, ಜ್ಯೋತಿಷ, ವ್ಯಾಕರಣ, ಇತಿಹಾಸ, ಪುರಾಣ, ಮೀಮಾಂಸ, ನ್ಯಾಯ, ಧರ್ಮಶಾಸ್ತ್ರ ಇವೆಲ್ಲವೂ ನಿನ್ನ ಸ್ವರೂಪಗಳು. ಜೀವಾತ್ಮ, ಪರಮಾತ್ಮ, ಸ್ಥೂಲ, ಸೂಕ್ಷ್ಮದೇಹಗಳು, ತ್ರಿಗುಣಾತ್ಮಕವಾದ ಪ್ರಕೃತಿ, ಇವುಗಳ ವಿಚಾರ ಮಾಡುತ್ತಿರ ಲಾಗಿ ತ್ವಂಪದಕ್ಕೆ ಲಕ್ಷ್ಯವಾದ ಜೀವಸ್ವರೂಪವೂ ತತ್ಪದಕ್ಕೆ ಲಕ್ಷ್ಯವಾದ ಫಲರೂಪ ವಾದ ಆತ್ಮಸ್ವರೂಪವೂ ಯಾವ ವಾಕ್ಯಗಳಿಂದ ಬೋಧಿತವಾಗುವುದೋ ಆ ಉಪನಿಷತ್ತಿನ ಸ್ವರೂಪವೇ ನೀನು. ಬಹ್ಮಾದಿಗಳಿಗೂ ಸ್ವಾಮಿಯಾದ ದೇವನೇ ಶಬ್ದಬ್ರಹ್ಮವು. ಜೀವಾತ್ಮ ಪರಮಾತ್ಮ ಸ್ವರೂಪನಾದ ನಿನಗಿಂತ ಬೇರೆಯಾದುದಲ್ಲ.

೪೦-೪೧. ಪರಬ್ರಹ್ಮನಾದ ನೀನು ಕಣ್ಣುಮುಂತಾದ ಇಂದ್ರಿಯಗಳಿಗೆ ಗೋಚರನಲ್ಲ. ಮಾತುಗಳಿಂದ ನಿನ್ನ ಸ್ವರೂಪವನ್ನು ಹೇಳಲಾಗುವುದಿಲ್ಲ. ಮನಸ್ಸಿಗೂ ನೀನು ಗೋಚರನಲ್ಲ. ನಿನಗೆ ಹೆಸರು, ಬಣ್ಣ, ಕೈ ಕಾಲುಗಳು ಮುಂತಾದುವಿಲ್ಲ.

ಶೃಣೋಷ್ಯಕರ್ಣಃ ಪರಿಪಶ್ಯಸಿ ತ್ವಂ
ಅಚಕ್ಷುರೂಪೋ ಬಹುರೂಪರೂಪಃ ।
ಅಪಾದಪಸ್ತ್ವೋ ಜವನೋ ಗೃಹೀತಾ
ತ್ವಂ ವೇತ್ಸಿ ಸರ್ವಂ ನ ಚ ಸರ್ವವೇದ್ಯಃ ॥ ೪೧ ॥

ಅಣೋರಣೀಯಾಂಸಮಸತ್ಸ್ವರೂಪಂ
ತ್ವಾಂ ಪಶ್ಯತೋಽಜ್ಞಾನನಿವೃತ್ತಿರಗ್ರ್ಯಾ ।
ಧೀರಸ್ಯ ಧೀರಸ್ಯ ಬಿಭರ್ತಿ ನಾನ್ಯ
ದ್ವರೇಣ್ಯರೂಪಾತ್ಪರತಃ ಪರಾತ್ಮನ್ ॥ ೪೨ ॥

ತ್ವಂ ವಿಶ್ವನಾಭಿರ್ಭುವನಸ್ಯ ಗೋಪ್ತಾ
ಸರ್ವಾಣಿ ಭೂತಾನಿ ತವಾಂತರಾಣಿ ।

ನೀನು ಶುದ್ಧನೂ, ನಿತ್ಯನೂ, ಪ್ರಕೃತಿಗಿಂತ ಶ್ರೇಷ್ಠನೂ, ಆಗಿರುವೆ. ಕಿವಿಯಿಲ್ಲದೆ ಕೇಳುವೆ. ಕಣ್ಣಿಲ್ಲದೆ ನೋಡುವೆ. ಅನೇಕ ರೂಪಗಳನ್ನು ಧರಿಸಿರುವೆ ಕಾಲಿಲ್ಲದೆ ಓಡುವೆ ಕೈಯಿಲ್ಲದೆ ತೆಗೆದುಕೊಳ್ಳುವೆ. ಎಲ್ಲವನ್ನೂ ನೀನು ತಿಳಿಯುವೆ. ನಿನ್ನನ್ನು ಯಾರೂ ತಿಳಿಯಲಾರರು.

೪೨-೪೩ ಅತ್ಯಂತ ಸೂಕ್ಷ್ಮನಾಗಿ ನಿರುಪಾಧಿಕನಾಗಿರುವುದರಿಂದ ಅಸತ್ಪದಾರ್ಥದಂತಿರುವ ನಿನ್ನನ್ನು ಅಸತ್ತಾದ ಪ್ರಪಂಚಕ್ಕೆ ಆತ್ಮಸ್ವರೂಪನೆಂದು ತಿಳಿವ ಮನುಷ್ಯನಿಗೆ ಸಂಪೂರ್ಣವಾಗಿ ಅಜ್ಞಾನ ನಿವೃತ್ತಿಯಾಗುವುದು. ಜ್ಞಾನಿಯಾದ ಅವನ ಬುದ್ಧಿಯು ಪ್ರಕೃತಿಗಿಂತ ಶ್ರೇಷ್ಠವೂ ಪರಮಾನಂದ ಸ್ವರೂಪವೂ ಆದ ನಿನ್ನನ್ನು ಬಿಟ್ಟು ಬೇರೊಂದನ್ನು ಯೋಚಿಸುವುದಿಲ್ಲ ನೀನು ಪ್ರಪಂಚಕ್ಕೆ ಆಶ್ರಯನು. ಮತ್ತು ಅದನ್ನು ಕಾಪಾಡತಕ್ಕವನು. ಸಮಸ್ತ ಪ್ರಾಣಿಗಳೂ ನಿನ್ನಲ್ಲಿಯೇ ಇರುವುವು. ಕಳೆದುಹೋದುದೂ, ಮುಂಪೆ ಬರುವುದೂ ಎಲ್ಲವೂ ನಿನ್ನ ಸ್ವರೂಪವಾದುದೇ ಆಗಿರುವುದು. ನೀನು ಅತ್ಯಂತ ಸೂಕ್ಷ್ಮನು, ಪ್ರಕೃತಿಗಿಂತ ಶ್ರೇಷ್ಠನಾದ ಪುರುಷನು

ಯದ್ಭೂತಭವ್ಯಂ ಯದಣೋರಣೀಯಃ
ಪುಮಾಂಸ್ತಮೇಕಃ ಪ್ರಕೃತೇಃ ಪರಸ್ತಾತ್ ॥ ೪೩ ॥

ವಿಕೆಶ್ಚತುರ್ಧಾ ಭಗವಾನ್ಪ್ರಕಾಶೋ
ವಚೋ ವಿಭೂತಿಂ ಜಗತೋ ದದಾತಿ ।
ತ್ವಂ ವಿಶ್ವತಶ್ಚಕ್ಷುರನಂತಮೂರ್ತೇ
ತ್ರೇಧಾ ಪದಂ ತ್ವಂ ನಿದಧಾಸಿ ಧಾತಃ ॥ ೪೪ ॥

ಯಥಾಗ್ನಿರೇಕೋ ಬಹುಧಾ ಸಮಿಧ್ಯತೇ
ವಿಕಾರಭೇದೈರವಿಕಾರ ರೂಪಃ ।
ತಥಾ ಭವಾನ್ಸರ್ವಗತೈಕ ರೂಪೀ
ರೂಪಾಣ್ಯಶೇಷಾಣ್ಯನುಪುಷ್ಯತೀಶ ॥ ೪೫ ॥

ನೀನೊಬ್ಬನೇ ಆಗಿರುವೆ. (ನಿನಗೆ ಸ್ವಾಶ್ರಯವಾದ ಮಾಯಾವರಣವಿಲ್ಲದುದರಿಂದ ಬ್ರಹ್ಮಸ್ವರೂಪವನ್ನು ನೀನು ಯಾವಾಗಲೂ ಬಿಟ್ಟಿರುವುದಿಲ್ಲವೆಂದು ಭಾವವು.)

೪೪-೪೫. ಸೃಷ್ಟಿಕರ್ತನಾದ ಪರಬ್ರಹ್ಮನೇ! ಮಹಾಮಹಿಮನಾದ ಅಗ್ನಿಯು ಒಬ್ಬನೇ ಆದರೂ ನಾಲ್ಕು ಭಾಗವಾಗಿ ಪ್ರಕಾಶವನ್ನೂ ಮಹಿಮೆಯನ್ನೂ ಜಗತ್ತಿನಲ್ಲಿ ಪ್ರಕಟಪಡಿಸುತ್ತಿರುವನು. ಹಾಗೆಯೇ ನೀನೂ ಅನೇಕ ಕಣ್ಣುಗಳುಳ್ಳವನಾಗಿ ಅನೇಕ ಆಕಾರಗಳಿಂದಲೂ ತ್ರಿವಿಕ್ರಮಾವತಾರಮಾಡಿ ಭೂರ್ಭುವ ಸ್ವರ್ಲೋಕಗಳಲ್ಲಿ ಮೂರು ಪಾದಗಳನ್ನಿಟ್ಟು ಲೋಕಗಳನ್ನು ಕಾಪಾಡುತ್ತಿರುವೆ. (ಇಲ್ಲಿ ಗಾರ್ಹಪತ್ಯ, ಆಹವನೀಯ ದಕ್ಷಿಣಾಗ್ನಿ, ಔಪಾಸನಾಗ್ನಿ ಎಂದು ಅಗ್ನಿಯು ನಾಲ್ಕು ಭಾಗ ಅಥವಾ ವಿದ್ಯುತ್, ಮಥಿತಾಗ್ನಿ, ಸೂರ್ಯ, ಜಠರಾಗ್ನಿ ಎಂದು ನಾಲ್ಕು ವಿಧ। ಅಗ್ನಿಯು ವಿಕಾರವಿಲ್ಲದ ಒಂದೇ ರೂಪದಿಂದಿದ್ದರೂ ವಿಕಾರವುಳ್ಳ ಅನೇಕ ವಸ್ತುಗಳಲ್ಲಿ ಸೇರಿ ಅನೇಕ ಬಗೆಯಲ್ಲಿ ಉರಿಯುತ್ತಿರುವಂತೆ ನೀನು ಸರ್ವಗತನಾಗಿ ಏಕರೂಪದಲ್ಲಿದ್ದರೂ ಅನೇಕ ರೂಪಗಳನ್ನು ಪೋಷಿಸುತ್ತಿರುವೆ.

ಏಕಂ ತವಾಗ್ರ್ಯಂ ಪರಮಂ ಪದಂ ಯತ್
ಪಶ್ಯಂತಿ ತ್ವಾಂ ಸೂರಯೋ ಜ್ಞಾನದೃಶ್ಯಂ
ತ್ವತ್ತೋ ನಾನ್ಯತ್ಕಿಂಚಿದಸ್ತಿ ಸ್ವರೂಪಂ
ಯದ್ವಾ ಭೂತಂ ಯಚ್ಚ ಭವ್ಯಂ ಪರಾತ್ಮನ್ ॥ ೪೬ ॥

ವ್ಯಕ್ತಾವ್ಯಕ್ತಸ್ವರೂಪಸ್ತ್ವಂ ಸಮಷ್ಟಿವ್ಯಷ್ಟಿರೂಪವಾನ್ ।
ಸರ್ವಜ್ಞಸ್ಸರ್ವವಿತ್ಸರ್ವಶಕ್ತಿ ಜ್ಞಾನಬಲರ್ಧಿವಾನ್ ॥ ೪೭ ॥

ಅನ್ಯೂನಶ್ಚಾಪ್ಯವೃದ್ಧಿಶ್ಚ ಸ್ವಾಧೀನೋನಾದಿಮಾನ್ನಶೀ ।
ಕ್ಷಮತಂದ್ರೀಭಯ ಕ್ರೋಧಕಾಮಾದಿಭಿರಸಂಯುತಃ ॥ ೪೮ ॥

ನಿರವದ್ಯಃ ಪರಃ ಪ್ರಾಪ್ತೇರ್ನಿರಧಿಷ್ಣ್ಯೋಕ್ಷರಃ ಕ್ರಮಃ ।
ಸರ್ವೇಶ್ವರಃ ಪರಾಧಾರೋ ಧಾಮ್ನಾಂ ಧಾಮಾತ್ಮಕೋ ಕ್ಷಯಃ ॥ ೪೯ ॥

೪೬–೪೭. ವಿದ್ವಾಂಸರು ಜ್ಞಾನಕ್ಕೆ ಗೋಚರವಾದ ಶ್ರೇಷ್ಠವಾದ ನಿನ್ನ ಪರಮಪದವನ್ನು ನೋಡುವರು. ಪರಮಾತ್ಮನೇ! ಹಿಂದೆ ಕಳೆದುಹೋದ. ಮುಂದೆ ಬರುವ ಸಮಸ್ತ ರೂಪಗಳೂ ನಿನಗಿಂತ ಬೇರೆಯಾದುವುಗಳಲ್ಲ. ನೀನು ಅವ್ಯಕ್ತವೆಂಬ ಪ್ರಕೃತಿಸ್ವರೂಪನೂ, ವ್ಯಕ್ತವೆಂಬ ಮಹತ್ತತ್ತ್ವಾದಿರೂಪನೂ, ಸಮಷ್ಟಿಯಾದ ವಿರಾಟ್ ಸ್ವರೂಪನೂ ವ್ಯಷ್ಟಿಯಾದ ಚತುರ್ವಿದ ಜೀವಸ್ವರೂಪನೂ ಆಗಿರುವೆ. ಸಾಮಾನ್ಯ ರೂಪದಿಂದ ಸರ್ವಜ್ಞನಾಗಿಯೂ ವಿಶೇಷ ರೂಪದಿಂದ ಸರ್ವವನ್ನೂ ತಿಳಿಯತಕ್ಕವನಾಗಿಯೂ ಸಮಸ್ತ ಶಕ್ತಿಗಳಿಂದಲೂ ಜ್ಞಾನ, ಬಲಾಭಿವೃದ್ಧಿಗಳಿಂದಲೂ ಕೂಡಿದವನಾಗಿರುವೆ.

೪೮-೪೯. ನೀನು ಕಡಿಮೆಯಾಗತಕ್ಕವನೂ, ವೃದ್ಧಿಯಾಗತಕ್ಕವನೂ ಅಲ್ಲ. ಸ್ವತಂತ್ರನು ಅನಾದಿಯಾದವನು ಸಮಸ್ತ ಜಗತ್ತನ್ನೂ ನಿಯಮನ ಮಾಡತಕ್ಕವನು, ಶ್ರಮ, ಆಲಸ್ಯ, ಭಯ, ಕೋಪ, ಕಾಮ ಮುಂತಾದ ದೋಷಗಳು ನಿನ್ನಲ್ಲಿಲ್ಲ. ನೀನು ನಿರ್ಮಲನಾದವನು. ನಾಶರಹಿತನು, ಯಾವ ಪ್ರತಿಬಂಧಕವೂ ಇಲ್ಲದವನು, ಹೊಂದಲಸಾಧ್ಯನಾದವನು. ಯಾವ ಆಶ್ರಯವೂ ಇಲ್ಲದವನು, ಸರ್ವೇಶ್ವರನು, ಸಮಸ್ತಕ್ಕೂ ಆಶ್ರಯನು, ಸೂರ್ಯಾದಿ ಸಮಸ್ತ ತೇಜಸ್ಸಿಗೂ ಪ್ರಕಾಶವನ್ನು ಕೊಡತಕ್ಕವನು, ಅನಂತರೂಪನು.

ಸಕಲಾವರಣಾತೀತ ನಿರಾಲಂಬನ ಭಾವನ ।
ಮಹಾವಿಭೂತಿಸಂಸ್ಥಾನ ನಮಸ್ತೇ ಪುರುಷೋತ್ತಮ ॥ ೫೦ ॥

ನಾಕಾರಣಾತ್ಕಾರಣಾದ್ವಾ ಕಾರಣಾಕಾರಣಾನ್ನ ಚ ।
ಶರೀರಗ್ರಹಣಂ ವ್ಯಾಪಿನ್ ಧರ್ಮತ್ರಾಣಾಯ ಕೇವಲಂ ॥ ೫೧ ॥

॥ ಶ್ರೀ ಪರಾಶರಃ ॥

ಇತ್ಯೇವಂ ಸಂಸ್ತವಂ ಶ್ರುತ್ವಾ ಮನಸಾ ಭಗವಾನಜಃ ।
ಬ್ರಹ್ಮಾಣಮಾಹ ಪ್ರೀತೇನ ವಿಶ್ವರೂಪಂ ಪ್ರಕಾಶಯನ್ ॥ ೫೨ ॥

॥ ಶ್ರೀ ಭಗವಾನುವಾಚ ॥

ಭೋ ಭೋ ಬ್ರಹ್ಮಂ ಸ್ತ್ವಯಾ ಮತ್ತಸ್ಸಹ ದೇವೈರ್ಯದಿಷ್ಯತೇ ।
ತದುಚ್ಯತಾಮಶೇಷಂ ಚ ಸಿದ್ಧಮೇವಾವಧಾರ್ಯತಾಂ ॥ ೫೩ ॥

೫೦-೫೧. ಅನ್ನಮಯ ಪ್ರಾಣಮಯ ಮನೋಮಯ ವಿಜ್ಞಾನಮಯ ಆನಂದಮಯ ಕೋಶಗಳ ಸಂಬಂಧವಿಲ್ಲದವನೂ, ನಿರುಪಾಧಿಕನಾದುದರಿಂದ ಯಾವ ವಿಷಯವೂ ಇಲ್ಲದ ಮನಸ್ಸಿನ ಭಾವನೆಗೆ ವಿಷಯನಾದವನೂ, ಪ್ರಪಂಚ ಸನ್ನಿವೇಶ ರೂಪವಾದ ಮಹಾವಿಭೂತಿಯುಳ್ಳವನೂ ಆದ ಪುರುಷೋತ್ತಮನೇ ! ನಿನಗೆ ನಮಸ್ಕಾರವು, ಧರ್ಮ, ಅಧರ್ಮ, ಧರ್ಮಾಧರ್ಮ ರೂಪವಾದ ಸಂಸ್ಕಾರಗಳಿಂದ ದೇವತಿರ್ಯಕ್ ಮನುಷ್ಯಾದಿ ಶರೀರಗಳು ಉಂಟಾಗುವುವು. ಆದರೆ ನೀನು ಶರೀರ ಗ್ರಹಣೆಯನ್ನು ಮಾಡಿ ಅವತಾರಗಳನ್ನು ಮಾಡಿರುವುದಕ್ಕೆ ಲೋಕದಲ್ಲಿ ಧರ್ಮ ಸಂಸ್ಥಾಪನೆಯನ್ನು ಮಾಡುವುದೇ ಮುಖ್ಯಕಾರಣವಾಗಿರುವುದು.

೫೨. ಹೀಗೆಂದು ಬ್ರಹ್ಮನು ಮಾಡಿದ ಸ್ತೋತ್ರವನ್ನು ಕೇಳಿ ಭಗವಂತನು ಸಂತೋಷಪಟ್ಟು ತನ್ನ ವಿಶ್ವರೂಪವನ್ನು ಪ್ರಕಟಪಡಿಸುತ್ತ ಬ್ರಹ್ಮನನ್ನು ಕುರಿತು ಮಾತನಾಡಿದನು.

೫೩. ಶ್ರೀ ಭಗವಂತನು "ಎಲೈ ಬ್ರಹ್ಮನೇ ! ನೀನು ದೇವತೆಗಳೊಡನೆ ನನ್ನಿಂದ ಏನು ಕಾರ್ಯವಾಗಬೇಕೆಂದು ಅಪೇಕ್ಷಿಸುವೆಯೋ ಅವೆಲ್ಲವನ್ನೂ ಕೇಳು. ಮತ್ತು ಆ ಕಾರ್ಯಗಳೆಲ್ಲವೂ ನಿನಗೆ ಸಿದ್ಧಿಸಿತೆಂಬುದಾಗಿಯೇ ತಿಳಿ" ಎಂದನು.

॥ ಶ್ರೀ ಪರಾಶರಃ ॥

ತತೋ ಬ್ರಹ್ಮಾ ಹರೇರ್ದಿವ್ಯಂ ವಿಶ್ವರೂಪಮವೇಕ್ಷ್ಯ ತತ್ ।
ತುಷ್ಟಾವ ಭೂಯೋ ದೇವೇಷು ಸಾಧ್ವಸಾವನತಾತ್ಮಸು ॥ ೫೪ ॥

॥ ಬ್ರಹ್ಮೋವಾಚ ॥

ನಮೋ ನಮಸ್ತೇಽಸ್ತು ಸಹಸ್ರಕೃತ್ವ
ಸ್ಸಹಸ್ರಬಾಹೋ ಬಹುವಕ್ತ್ರಪಾದ ।
ನಮೋ ನಮಸ್ತೇ ಜಗತಃ ಪ್ರವೃತ್ತಿ
ವಿನಾಶಸಂಸ್ಥಾನಕರಾಪ್ರಮೇಯ ॥ ೫೫ ॥

ಸೂಕ್ಷ್ಮಾತಿಸೂಕ್ಷ್ಮಾತಿ ಬೃಹತ್ಪ್ರಮಾಣ
ಗರೀಯಸಾಮಪ್ಯತಿಗೌರವಾತ್ಮನ್ ।
ಪ್ರಧಾನಬುದ್ಧೀಂದ್ರಿಯವಪ್ರಧಾನ
ಮೂಲಾಪ್ಯರಾತ್ಮನ್ ಭಗವನ್ ಪ್ರಸೀದ ॥ ೫೬ ॥

---

೫೪. ಆ ಮೇಲೆ ಬ್ರಹ್ಮನು ಹರಿಯ ದಿವ್ಯವಾದ ವಿಶ್ವರೂಪವನ್ನು ನೋಡಿ ಭಯದಿಂದ ನಮಸ್ಕಾರ ಮಾಡಿದ ದೇವತೆಗಳೊಡನೆ ಪುನಃ ಸ್ತೋತ್ರಮಾಡಿದನು.

೫೫. ಬ್ರಹ್ಮನು ಹೇಳುವನು :— " ಸಾವಿರ ತೋಳುಗಳೂ ಅನೇಕ ಮುಖಗಳೂ ಅನೇಕ ಪಾದಗಳೂ ಉಳ್ಳ ದೇವನೇ ! ಜಗತ್ತನ್ನು ಸೃಷ್ಟಿಸಿ ಕಾಪಾಡಿ ನಾಶ ಮಾಡತಕ್ಕವನೇ, ಅಳತೆಗೆ ಸಿಕ್ಕದಿರತಕ್ಕವನೇ ನಿನಗೆ ಸಾವಿರ ನಮಸ್ಕಾರಗಳು.

೫೬. ಅತ್ಯಂತ ಸೂಕ್ಷ್ಮರೂಪನಾಗಿಯೂ ಅಗೋಚರನಾಗಿಯೂ ಜಗದ್ರೂಪವಾಗಿ ಅತ್ಯಂತ ದೊಡ್ಡವನಾಗಿಯೂ, ಅತ್ಯಂತ ಗೌರವಾಸ್ಪವಾದ ಆಕಾರವುಳ್ಳವನಾಗಿಯೂ, ಪ್ರಕೃತಿ, ಬುದ್ಧಿ, ಇಂದ್ರಿಯಗಳು, ಮಹತ್ತತ್ವ, ಅಹಂಕಾರ ಇವುಗಳಿಗೆ ನಿಯಾಮಕನೂ, ಕಾರಣಪುರುಷನೂ, ಮಹಾಮಹಿಮನೂ, ಆದ ನೀನು ಪ್ರಸನ್ನನಾಗು.

ಏಷಾ ಮಹೀ ದೇವಮಹೀ ಪ್ರಸೂತೈ
ರ್ಮಹಾಸುರೈಃ ಪೀಡಿತ ಶೈಲಬಂಧಾ ।
ಪರಾಯಣಂ ತ್ವಾಂ ಜಗತಾಮುಪೈತಿ
ಭಾರಾವತಾರಾರ್ಥಮಪಾರಸಾರ ॥ ೫೭ ॥

ಏತೇ ವಯಂ ವೃತ್ರರಿಪುಸ್ತಥಾಯಂ
ನಾಸತ್ಯದಸ್ರೌ ವರುಣಸ್ತಥೈವ ।
ಇಮೇ ಚ ರುದ್ರಾ ವಸವಸ್ಸೂರ್ಯಾ
ಸ್ಸಮೀರಣಾಗ್ನಿ ಪ್ರಮುಖಾಸ್ತಥಾನ್ಯೇ ॥ ೫೮ ॥

ಸುರಾಸ್ಸಮಸ್ತಾಸ್ಸುರನಾಥ ಕಾರ್ಯ
ಮೇಭಿರ್ಮಯಾ ಯಚ್ಚ ತದೀಶ ಸರ್ವಂ ।
ಆಜ್ಞಾಪಯಾಜ್ಞಾಂ ಪರಿಪಾಲಯಂತ
ಸ್ತವೈವ ತಿಷ್ಠಾಮ ಸದಾಸ್ತದೋಷಾಃ ॥ ೫೯ ॥

---

೫೭. ಓ ಸ್ವಾಮಿಯೇ! ಈ ಭೂದೇವಿಯು ಭೂಮಿಯಲ್ಲಿ ಹುಟ್ಟಿನ ಮಹಾಬಲಶಾಲಿಗಳಾದ ರಾಕ್ಷಸರ ಹಿಂಸೆಗೆ ಒಳಗಾಗಿ ಪರ್ವತಗಳ ಬುಡಗಳಲ್ಲಿ ಶೈಥಿಲ್ಯವನ್ನು ಹೊಂದಿರುವಳು. ತನಗುಂಟಾಗಿರುವ ಭಾರವನ್ನು ಕಳೆದುಕೊಳ್ಳುವುದಕ್ಕಾಗಿ ಜಗದ್ರಕ್ಷಕನೂ, ಮಹಾಬಲಶಾಲಿಯೂ ಆದ ನಿನ್ನನ್ನು ಶರಣುಹೊಂದಿರುವಳು.

೫೮. ಈ ನಾವುಗಳೂ ದೇವೇಂದ್ರನೂ ಅಶ್ವಿನೀ ದೇವತೆಗಳೂ, ವರುಣನೂ, ಏಕಾದಶರುದ್ರರೂ, ದ್ವಾದಶಾದಿತ್ಯರೂ, ಅಷ್ಟವಸುಗಳೂ, ಅಗ್ನಿ, ವಾಯುಗಳೂ ಮಿಕ್ಕ ಸಮಸ್ತ ದೇವತೆಗಳೂ ನಿನ್ನನ್ನು ಶರಣು ಹೊಂದಿರುವೆವು.

೫೯. ಈ ಸಂದರ್ಭದಲ್ಲಿ ನಾನೂ ಈ ದೇವತೆಗಳೂ ಏನು ಮಾಡಬೇಕೆಂಬುದನ್ನು ಆಪ್ಪಣೆ ಮಾಡು. ಯಾವಾಗಲೂ ತಪ್ಪುಮಾಡದೆ ನಿನ್ನ ಆಪ್ಪಣೆಯಂತೆ ನಡೆಯುವೆವು" ಎಂದು ಸ್ತೋತ್ರಮಾಡಿದನು.

॥ ಶ್ರೀ ಪರಾಶರಃ ॥

ಏವಂ ಸಂಸ್ತೂಯಮಾನಸ್ತು ಭಗವಾನ್ಪರಮೇಶ್ವರಃ ।
ಉಜ್ಜಹಾರಾತ್ಮನಃ ಕೇಶೌ ಸಿತಕೃಷ್ಣೌ ಮಹಾಮುನೇ ॥ ೬೦ ॥

ಉವಾಚ ಚ ಸುರಾನೇತೌ ಮತ್ಕೇಶೌ ವಸುಧಾತಲೇ ।
ಅವತೀರ್ಯ ಭುವೋ ಭಾರ ಕ್ಲೇಶಹಾನಿಂ ಕರಿಷ್ಯತಃ ॥ ೬೧ ॥

ಸುರಾಶ್ಚ ಸಕಲಾಸ್ತ್ವಂಶೈರವತೀರ್ಯ ಮಹೀತಲೇ ।
ಕುರ್ವಂತು ಯುದ್ಧಮುನ್ಮತ್ತೈಃ ಪೂರ್ವೋತ್ಪನ್ನೈರ್ಮಹಾಸುರೈಃ ॥ ೬೨ ॥

ತತಃ ಕ್ಷಯಮಶೇಷಾಸ್ತೇ ದೈತೇಯಾ ಧರಣೀತಲೇ ।
ಪ್ರಯಾಸ್ಯಂತಿನಸಂದೇಹೋಮದ್ದೃಕ್ಪಾತವಿಚೂರ್ಣಿತಾಃ ॥ ೬೩ ॥

ವಸುದೇವಸ್ಯ ಯಾ ಪತ್ನೀ ದೇವಕೀ ದೇವತೋಪಮಾ ।
ತತ್ರಾಯಮಷ್ಟಮೋ ಗರ್ಭೋ ಮತ್ಕೇಶೋ ಭವಿತಾ ಸುರಾಃ ॥ ೬೪ ॥

೬೦-೬೨. ಮೈತ್ರೇಯಮುನಿಯೇ ! ಹೀಗೆ ಬ್ರಹ್ಮನು ಸ್ತೋತ್ರಮಾಡಿದಮೇಲೆ ಮಹಾಮಹಿಮನಾದ ಪರಮೇಶ್ವರನು ತನ್ನ ಬಿಳದು ಮತ್ತು ಕರಿದಾದ ಎರಡು ಕೂದಲುಗಳನ್ನು ಕಿತ್ತು ದೇವತೆಗಳನ್ನು ಕುರಿತು ಈ ನನ್ನ ಕೂದಲುಗಳು ಭೂಮಿಯಲ್ಲಿ ಅವತಾರಮಾಡಿ ಭೂಮಿಗೆ ಉಂಟಾಗಿರುವ ಭಾರದ ದುಃಖವನ್ನು ನಿವಾರಣೆ ಮಾಡುವುವು, ದೇವತೆಗಳೆಲ್ಲರೂ ನಿಮ್ಮ ಅಂಶದಿಂದ ಭೂಮಿಯಲ್ಲಿ ಅವತಾರ ಮಾಡಿ ಹಿಂದೆಯೇ ಹುಟ್ಟಿ ಮದಿಸಿರುವ ರಾಕ್ಷಸರೊಡನೆ ಯುದ್ಧವನ್ನು ಮಾಡಿರಿ.

೬೩-೬೫. ಆ ಬಳಿಕ ಭೂಮಿಯಲ್ಲಿರುವ ಸಮಸ್ತ ದೈತ್ಯರೂ ನನ್ನ ದೃಷ್ಟಿ ಪಾತದಿಂದಲೇ ಪುಡಿಪುಡಿಯಾಗಿ ನಾಶವಾಗುವರು. ಇದರಲ್ಲಿ ಸಂದೇಹವಿಲ್ಲ. ದೇವತೆಗಳೇ ! ಈ ನನ್ನ ಒಂದು ಕೂದಲು ಭೂಮಿಯಲ್ಲಿ ದೇವಸ್ತ್ರೀಗೆ ಸಮಾನಳಾದ

ಅವತೀರ್ಯ ಚ ತತ್ರಾಯಂ ಕುವಿ ।ಂಸಂ ಘಾತಯಿತಾ ಭ
ಕಾಲನೇಮಿಂ ಸಮುದ್ಭೂತಮಿತ್ಯುಕ್ತ್ವಾಂತರ್ದಧೇ ಹರಿಃ ॥ ೩೫ ॥

ಅದೃಶ್ಯಾಯ ತತಸ್ತಸ್ಮೈ ಪ್ರಣಿಪತ್ಯ ಮಹಾಮುನೇ ।
ಮೇರುಪೃಷ್ಠಂ ಸುರಾ ಜಗ್ಮುರವತೇರುಶ್ಚ ಭೂತಲೇ ॥ ೩೬ ॥

ಕಂಸಾಯ ಚಾಪ್ಯನೋ ಗರ್ಭೋ ದೇವಕ್ಯಾ ಧರಿಣೀಧರಃ ।
ಭವಿಷ್ಯತೀತ್ಯಾಚಚಕ್ಷೇ ಭಗವಾನ್ನಾರದೋ ಮುನಿಃ ॥ ೩೭ ॥

ಕಂಸೋಪಿ ತದುಪಶ್ರುತ್ಯ ನಾರದಾತ್ಪಿತಸ್ತತಃ ।
ದೇವಕೀಂ ವಸುದೇವಂ ಚ ಗೃಹೇ ಗುಪ್ತಾವಧಾರಯತ್ ॥ ೩೮ ॥

ವಸುದೇವೇನ ಕಂಸಾಯ ತೇನೈವೋಕ್ತಂ ಯಥಾ ಪುರಾ ।
ತಥೈವ ವಸುದೇವೋಽಪಿ ಪುತ್ರಮರ್ಪಿತವಾನ್ ದ್ವಿಜ ॥ ೩೯ ॥

ವಸುದೇವನೆಂಬವನ ಪತ್ನಿಯಾದ ದೇವಕಿಯಲ್ಲಿ ಎಂಟನೆಯ ಗರ್ಭದಲ್ಲಿ ಅವತಾರ ಮಾಡುವುದು. ಆ ಅವತಾರದಲ್ಲಿ ಕಂಸನಾಗಿ ಭೂಮಿಯಲ್ಲಿ ಹುಟ್ಟಿವ ಕಾಲನೇಮಿ ಯನ್ನು ಕೊಲ್ಲುವುದು" ಎಂದು ಹೇಳಿ ಹರಿಯು ಅಂತರ್ಧಾನನಾದನು.

೩೫–೩೬. ಮೈತ್ರೇಯನೇ! ಅಮೇಲೆ ದೇವತೆಗಳು ಅದೃಶ್ಯನಾದ ವಿಷ್ಣು ವಿಗೆ ನಮಸ್ಕಾರವನ್ನು ಮಾಡಿ ಮೇರು ಪರ್ವತಕ್ಕೆ ಹೊರಟು ಹೋದರು. ಬಳಿಕ ಅವರು ಭೂಮಿಯಲ್ಲಿ ಅವತಾರ ಮಾಡಿದರು. ಮಹಾಮಹಿಮನಾದ ನಾರದ ಮುನಿಯು ದೇವಕೀದೇವಿಯ ಎಂಟನೆಯ ಗರ್ಭದಲ್ಲಿ ನಾರಾಯಣನು ಅವತಾರ ಮಾಡುವನೆಂದು ಕಂಸನಿಗೆ ಹೇಳಿದನು.

೩೮-೩೯. ಕಂಸನು ನಾರದರ ಮಾತಿನಿಂದ ಮುಂದಾಗುವುದನ್ನು ತಿಳಿದು ಕೋಪದಿಂದ ದೇವಕೀ ವಸುದೇವರನ್ನು ಗುಪ್ತವಾದ ಗೃಹದಲ್ಲಿ ಬಂಧನದಲ್ಲಿಟ್ಟನು. ವಸುದೇವನು ಕಂಸನಿಗೆ ತಾನು ಹಿಂದೆ ಹೇಳಿದಂತೆ ಹುಟ್ಟಿದ ಮಕ್ಕಳನ್ನು ಅವನಿಗೆ ಕೊಡುತ್ತಿದ್ದನು.

ಹಿರಣ್ಯಕಶಿಪೋಃ ಪುತ್ರಾಷ್ಪದ್ಗರ್ಭಾ ಇತಿ ವಿಶ್ರುತಾಃ ।
ವಿಷ್ಣುಪ್ರಯುಕ್ತಾ ತಾನ್ನಿದ್ರಾಕ್ರಮಾದ್ಗರ್ಭಾನಯೋಜಯತ್ ॥ ೭೦ ॥

ಯೋಗನಿದ್ರಾ ಮಹಾಮಾಯಾ ವೈಷ್ಣವೀ ಮೋಹಿತಂ ಯಯಾ ।
ಅವಿದ್ಯಯಾ ಜಗತ್ಸರ್ವಂ ತಾಮಾಹ ಭಗವಾನ್ಹರಿಃ ॥ ೭೧ ॥

॥ ಭಗವಾನುವಾಚ ॥

ನಿದ್ರೇ ಗಚ್ಛ ಮಮಾದೇಶಾತ್ಪಾತಾಳತಲಸಂಶ್ರಯಾನ್ ।
ಏಕೈಕತ್ವೇನ ಷಡ್ಗರ್ಭಾನ್ ದೇವಕೀಜಠರಂ ನಯ ॥ ೭೨ ॥

---

೭೦. ದೇವಕಿಯ ಆರು ಗರ್ಭಗಳಲ್ಲಿ ಹುಟ್ಟಿದ ಬಾಲಕರು ಹಿಂದಿನ ಜನ್ಮದಲ್ಲಿ ಕೀರ್ತಿಮಂತ, ಸುಷೇಣ ಮುಂತಾದ ಕಾಲನೇಮಿಯ ಆರು ಜನ ಮಕ್ಕಳು. ಇವರು ಹಿಂದೆ ಕಾಲನೇಮಿಯ ಸಹೋದರನಾದ ಹಿರಣ್ಯಕಶಿಪುವನ್ನು ಅಲಕ್ಷ್ಯಮಾಡಿ ಬ್ರಹ್ಮನನ್ನು ಪೂಜಿಸಿದುದರಿಂದ ಹಿರಿಣ್ಯಕಶಿಪುವು ಕೋಪದಿಂದ ನಿಮ್ಮ ತಂದೆಯೇ ನಿಮ್ಮನ್ನು ಕೊಲ್ಲುವನು ಎಂದು ಶಾಪವನ್ನು ಕೊಟ್ಟು ಅವರನ್ನು ಸಮುದ್ರದಲ್ಲಿ ಮಗಿಸಿದ್ದನು. ವಿಷ್ಣುವು ಪ್ರೇರಿಸಿದ ಯೋಗನಿದ್ರಾರೂಪವಾದ ಮಾಯೆಯು ಅವರನ್ನು ದೇವಕಿಯ ಗರ್ಭದಲ್ಲಿ ಸೇರಿಸಿದಳು.

೭೧. ಯೋಗನಿದ್ರೆಯೇ ವೈಷ್ಣವೀಯೆಂಬ ಮಹಾಮಾಯೆಯು. ಆ ಮಾಯೆಯು ತನ್ನ ಅವಿದ್ಯಾರೂಪವಾದ ಶಕ್ತಿಯಿಂದ ಸಮಸ್ತ ಜಗತ್ತನ್ನೂ ಮೋಹಗೊಳಿಸುವಳು. ಮಹಾಮಹಿಮನಾದ ಹರಿಯು ಆ ಯೋಗನಿದ್ರೆಯನ್ನು ಕುರಿತು ಹೀಗೆ ಹೇಳಿದನು ಏನೆಂದರೆ :—

೭೨-೭೫. " ಯೋಗನಿದ್ರೆಯೇ ! ನನ್ನಪ್ಪಣೆಯಿಂದ ನೀನು ಹೋಗಿ ಪಾತಾಳದಲ್ಲಿರುವ ಕಾಲನೇಮಿಯ ಆರು ಜನ ಮಕ್ಕಳನ್ನು ಒಬ್ಬೊಬ್ಬರಾಗಿ ದೇವಕಿಯ ಗರ್ಭಕ್ಕೆ ಸೇರಿಸು. ಅವರೆಲ್ಲರೂ ಕಂಸನಿಂದ ನಾಶವಾದಮೇಲೆ ಶೇಷನೆಂಬ ಹೆಸರಿನ

ಹತೇಷು ತೇಷು ಕಂಸೇನ ಶೇಷಾಖ್ಯೋಂಽಶಸ್ತತೋ ಮಮ ।
ಅಂಶಾಂಶೇನೋದರೇ ತಸ್ಯಾಸ್ಸಪ್ತಮಸ್ಸಂಭವಿಷ್ಯತಿ ॥ ೭೩ ॥

ಗೋಕುಲೇ ವಸುದೇವಸ್ಯ ಭಾರ್ಯಾನ್ಯಾ ರೋಹಿಣೀಸ್ಥಿತಾ ।
ತಸ್ಯಾಸ್ಸಂಭೂತಿಸಮಂ ದೇವಿ ನೇಯಸ್ತ್ವಯೋದರಂ ॥ ೭೪ ॥

ಸಪ್ತಮೋ ಭೋಜರಾಜಸ್ಯ ಭಯಾದ್ಯೋಧೋವತೋದಿತಃ ।
ದೇವಕ್ಯಾಃ ಪತಿತೋ ಗರ್ಭ ಇತಿ ಲೋಕೋ ವದಿಷ್ಯತಿ ॥ ೭೫ ॥

ಗರ್ಭಸಂಕರ್ಷಣಾತ್ಸೋಽಥ ಲೋಕೇ ಸಂಕರ್ಷಣೇತಿ ವೈ ।
ಸಂಜ್ಞಾಮವಾಪ್ಸ್ಯತೇ ವೀರಃ ಶ್ವೇತಾದ್ರಿಶಿಖರೋಪಮಃ ॥ ೭೬ ॥

ತತೋಽಹಂ ಸಂಭವಿಷ್ಯಾಮಿ ದೇವಕೀಜಠರೇ ಶುಭೇ ।
ಗರ್ಭಂ ತ್ವಯಾ ಯಶೋದಾಯಾಗಂತವ್ಯಮವಿಲಂಬಿತಂ ॥ ೭೭ ॥

ನನ್ನ ಅಂಶದ ಸೂಕ್ಷ್ಮಾಂಶವು ಆ ದೇವಕಿಯ ಹೊಟ್ಟೆಯಲ್ಲಿ ಏಳನೆಯ ಗರ್ಭವಾಗುವುದು. ಗೋಕುಲದಲ್ಲಿ ವಸುದೇವನ ಮತ್ತೊಬ್ಬ ಹೆಂಡತಿಯಾದ ರೋಹಿಣಿಯೆಂಬ ವಳಿರುವಳು. ಅವಳು ವಸುದೇವನಿಂದ ಹಿಂದೆಯೇ ಗರ್ಭವನ್ನು ಧರಿಸಿ ಗೋಕುಲಕ್ಕೆ ಹೋಗಿರುವಳು. ಏಳನೆಯ ತಿಂಗಳಲ್ಲಿ ಅವಳ ಗರ್ಭವನ್ನು ವಾಯುರೂಪದಿಂದ ತೆಗೆದು ದೇವಕಿಯಲ್ಲಿದ್ದ ಏಳನೇ ತಿಂಗಳ ಗರ್ಭವನ್ನು ಅವಳಿಗೆ ತಿಳಿಯದಂತೆ ಆಕರ್ಷಿಸಿ ರೋಹಿಣಿಯ ಗರ್ಭಕ್ಕೆ ಸೇರಿಸು. ಇದರಿಂದ ದೇವಕಿಯ ಏಳನೆಯ ಗರ್ಭವು ಭೋಜರಾಜನಾದ ಕಂಸನ ಭಯದಿಂದಲೂ, ಕಾರಾಗೃಹದಲ್ಲಿ ಸೆರೆಯಿಟ್ಟಿದರಿಂಲೂ, ಗರ್ಭಸ್ರಾವವಾಯಿತೆಂದು ಜನರು ಹೇಳಿಕೊಳ್ಳುವರು.

೭೬-೭೭. ನೀನು ಗರ್ಭವನ್ನಾಕರ್ಷಣೆ ಮಾಡಿದುದರಿಂದ ರೋಹಿಣಿಯ ಗರ್ಭದಲ್ಲಿ ಹುಟ್ಟಿದ ಶ್ವೇತಾದ್ರಿಶಿಖರಕ್ಕೆ ಸಮಾನನಾದ ಶೂರನಾದ ಬಾಲಕನು ಸಂಕರ್ಷಣನೆಂಬ ಹೆಸರನ್ನು ಹೊಂದುವನು. ಆ ಮೇಲೆ ನಾನು ಮಂಗಳಕರವಾದ ದೇವಕಿಯ ಹೊಟ್ಟೆಯಲ್ಲಿ ಹುಟ್ಟುವೆನು. ನೀನು ಸಾವಕಾಶಮಾಡದೆ ಯಶೋದೆಯ ಗರ್ಭದಲ್ಲಿ ಸೇರು.

ಪ್ರಾವೃಟ್ಕಾಲೇ ಚ ನಭಸಿ ಕೃಷ್ಣಾಷ್ಟಮ್ಯಾಮಹಂ ನಿಶಿ ।
ಉತ್ಪತ್ಸ್ಯಾಮಿ ನವಮ್ಯಾಂ ತು ಪ್ರಸೂತಿಂ ತ್ವಮವಾಪ್ಸ್ಯಸಿ ॥ ೭೮ ॥

ಯಶೋದಾಶಯನೇ ಮಾಂ ತು ದೇವಕ್ಯಾಸ್ತ್ವಾಮನಿಂದಿತೇ ।
ಮಚ್ಛಕ್ತಿಪ್ರೇರಿತಮತಿರ್ವಸುದೇವೋ ನಯಿಷ್ಯತಿ ॥ ೭೯ ॥

ಕಂಸಶ್ಚ ತ್ವಾಮುಪಾದಾಯ ದೇವಿ ಶೈಲಶಿಲಾತಲೇ ।
ಪ್ರಕ್ಷಿಪ್ಯತ್ಯಂತರಿಕ್ಷೇ ಚ ಸಂಸ್ಥಾನಂ ತ್ವಮವಾಪ್ಸ್ಯಸಿ ॥ ೮೦ ॥

ತತಸ್ತ್ವಾಂ ಶತದೃಕ್ಚಕ್ರಃ ಪ್ರಣಮ್ಯ ಮಮ ಗೌರವಾತ್ ।
ಪ್ರಣೇಷ್ಯತ್ಯಾಸತಶಿರಾ ಭಗಿನೀತ್ವೇ ಗ್ರಹಿಷ್ಯತಿ ॥ ೮೧ ॥

ತ್ವಂ ಚ ಶುಂಭನಿಶುಂಭಾದೀನ್ ಹತ್ವಾ ದೈತ್ಯಾನ್ಸಹಸ್ರಶಃ ।
ಸ್ಥಾನೈರನೇಕೈಃ ಪೃಥಿವೀಮಶೇಷಾಂ ಮಂಡಯಿಷ್ಯಸಿ ॥ ೮೨ ॥

೭೮-೭೯. ವರ್ಷಋತುವಿನ ಶ್ರಾವಣ ಬಹುಳ ಅಷ್ಟಮಿಯ ತಿಥಿಯಲ್ಲಿ ಅರ್ಧರಾತ್ರಿಯ ಸಮಯದಲ್ಲಿ ನಾನು ಹುಟ್ಟುವೆನು. ಅರ್ಧರಾತ್ರಿಯು ಕಳೆದಮೇಲೆ ನೀನು ನವಮಿಯ ತಿಥಿಯಲ್ಲಿ ಹುಟ್ಟುವೆ. ನನ್ನ ಶಕ್ತಿಯಿಂದ ಪ್ರೇರಿತವಾದ ಬುದ್ಧಿಯುಳ್ಳ ವಸುದೇವನು ಯಶೋದೆಯ ಹಾಸಿಗೆಗೆ ನನ್ನನ್ನೂ ದೇವಕಿಯ ಹಾಸಿಗೆಗೆ ನಿನ್ನನ್ನೂ ತಂದು ಇರಿಸುವನು

೮೦-೮೨. ಎಲೈ ದೇವಿಯೇ! ಕಂಸನು ನಿನ್ನನ್ನು ತೆಗೆದುಕೊಂಡು ಕಲ್ಲಿನ ಮೇಲೆ ಬಡಿಯುವನು. ನೀನು ಆಕಾಶದಲ್ಲಿ ನಿಲ್ಲುವೆ, ಆ ಬಳಿಕ ನಿನ್ನನ್ನು ನನ್ನ ಮೇಲಿನ ಗೌರವದಿಂದ ಸಹಸ್ರಕಣ್ಣುಗಳುಳ್ಳ ದೇವೇಂದ್ರನು ನಮಸ್ಕರಿಸಿ ಸಹೋದರಿಯೆಂಬದಾಗಿ ತಿಳಿದು ಗೌರವಿಸುವನು. ನೀನು ಶುಂಭ, ನಿಶುಂಭನೇ ಮೊದಲಾದ ದೈತ್ಯರನ್ನು ನಾಶಮಾಡಿ ವಿಂಧ್ಯ, ಜಾಲಂಧರ ಮುಂತಾದ ಅನೇಕ ಸ್ಥಳಗಳಲ್ಲಿ ನೆಲಸಿ ಸಮಸ್ತ ಭೂಮಂಡಲಕ್ಕೂ ಅಲಂಕಾರವನ್ನುಂಟುಮಾಡುವೆ.

ತ್ವಂ ಭೂತಿಸ್ಸನ್ನತಿಃ ಕ್ಷಾಂತಿಃ ಕಾಂತಿರ್ದ್ಯೌಃ ಪೃಥಿವೀ ಧೃತಿಃ ।
ಲಜ್ಜಾ ಪುಷ್ಟಿರುಷಾ ಯಾ ತು ಕಾಚಿದನ್ಯಾ ತ್ವಮೇವ ಸಾ ॥ ೬೩ ॥

ಯೇ ತ್ವಾಮಾರ್ಯೇತಿ ದುರ್ಗೇತಿ ವೇದಗರ್ಭಾಂಬಿಕೇತಿ ಚ ।
ಭದ್ರೇತಿ ಭದ್ರಕಾಳೀತಿ ಕ್ಷೇಮದಾ ಭಾಗ್ಯದೇತಿ ಚ ॥ ೬೪ ॥

ಪ್ರಾತಶ್ಚೈವಾಪರಾಹ್ಣೇ ಚ ಸ್ತೋಷ್ಯಂತ್ಯಾನವ್ರಮೂರ್ತಯಃ ।
ತೇಷಾಂ ಹಿ ಪ್ರಾರ್ಥಿತಂ ಸರ್ವಂ ಮತ್ಪ್ರಸಾದಾದ್ಭವಿಷ್ಯತಿ ॥ ೬೫ ॥

ಸುರಾಮಾಂಸೋಪಹಾರೈಶ್ಚ ಭಕ್ಷ್ಯಭೋಜ್ಯೈಶ್ಚ ಪೂಜಿತಾ ।
ನೃಣಾಮಶೇಷಕಾಮಾಂಸ್ತ್ವಂ ಪ್ರಸನ್ನಾ ಸಂಪ್ರದಾಸ್ಯಸಿ ॥ ೬೬ ॥

೬೩–೬೫. ನೀನು ಭೂತಿ, ಸನ್ನತಿ, ಕ್ಷಾಂತಿ, ಕಾಂತಿ, ದ್ಯೌ, ಪೃಥಿವಿ, ಧೃತಿ, ಲಜ್ಜಾ, ಪುಷ್ಟಿ, ಉಷಾ ಮುಂತಾದ ಸಮಸ್ತ ಸ್ತ್ರೀಸ್ವರೂಪಳಾದವಳು. ಯಾರು ನಿನ್ನನ್ನು ಆರ್ಯೆ, ದುರ್ಗಾ, ವೇದಗರ್ಭಾ, ಅಂಬಿಕೆ, ಭದ್ರಾ, ಭದ್ರಕಾಳಿ, ಕ್ಷೇಮದಾ, ಭಾಗ್ಯದೇವತೆ ಎಂಬದಾಗಿ ಪ್ರಾತಃಕಾಲದಲ್ಲಿಯೂ, ಸಂಧ್ಯಾಕಾಲದಲ್ಲಿಯೂ ಸ್ತೋತ್ರ ಮಾಡಿ ನಮಸ್ಕಾರ ಮಾಡುವರೋ ಅವರ ಇಷ್ಟಾರ್ಥಗಳು ನನ್ನ ಅನುಗ್ರಹದಿಂದ ಸಿದ್ಧಿಸುವುವು.

೬೬ ಲೋಕದಲ್ಲಿ ಜನರು ಅವರವರ ಆಚಾರದಂತೆ ಭಕ್ಷ್ಯಭೋಜ್ಯಾದಿಗಳಿಂದಲೂ ಮದ್ಯ ಮಾಂಸಾದಿಗಳಿಂದಲೂ ನಿನ್ನನ್ನು ಪೂಜಿಸಿದರೆ ನೀನು ಪ್ರಸನ್ನಳಾಗಿ ಅವರವರ ಇಷ್ಟಾರ್ಥಗಳನ್ನು ಕೊಡುತ್ತಿರುವೆ.

ತೇ ಸರ್ವೇ ಸರ್ವದಾ ಭದ್ರೇ ಮತ್ಪ್ರಸಾದಾದಸಂಶಯಂ ।
ಅಸಂದಿಗ್ಧಾ ಭವಿಷ್ಯಂತಿ ಗಚ್ಛ ದೇವಿ ಯಥೋದಿತಂ ॥ ೮೭ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ಪ್ರಥಮೋಽಧ್ಯಾಯಃ

---

೮೭. ನೀನು ಕೊಟ್ಟ ಸಮಸ್ತ ಇಷ್ಟಾರ್ಥಗಳೂ ನನ್ನ ಅನುಗ್ರಹದಿಂದ ಸಂದೇಹವಿಲ್ಲದೆ ಅವರಿಗೆ ಫಲವನ್ನು ಕೊಡುವುವು. ಮಂಗಳಕರಳಾದ ದೇವಿಯೇ ! ನಾನು ಹೇಳಿದಂತೆ ನಡೆಸು, ಹೋಗು" ಎಂದು ನಾರಾಯಣನು ಹೇಳಿದನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ
ಮೊದಲನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ದ್ವಿತಿಯೋಽಧ್ಯಾಯಃ

॥ ಶ್ರೀ ಪರಾಶರಃ ॥

ಯಥೋಕ್ತಂ ಸಾ ಜಗದ್ಧಾತ್ರಾ ದೇವದೇವೇನ ನೈ ತಥಾ ।
ಷಡ್ಗರ್ಭಗರ್ಭವಿನ್ಯಾಸಂ ಚಕ್ರೇ ಜಾನ್ಯಸ್ಯ ಕರ್ಷಣಂ ॥ ೧ ॥

ಸಪ್ತಮೇ ರೋಹಿಣೇಂ ಗರ್ಭೇ ಪ್ರಾಪ್ತೇಗರ್ಭಂ ತತೋ ಹರಿಃ ।
ಲೋಕತ್ರಯೋಪಕಾರಾಯ ದೇವಕ್ಯಾಃ ಪ್ರವಿವೇಶ ಹ ॥ ೨ ॥

ಯೋಗನಿದ್ರಾ ಯಶೋದಾಯಾಸ್ತಸ್ಮಿನ್ನೇವ ತಥಾ ದಿನೇ ।
ಸಂಭೂತಾ ಜಠರೇ ತದ್ವದ್ಯಥೋಕ್ತಂ ಪರಮೇಷ್ಠಿನಾ ॥ ೩ ॥

ಎರಡನೆಯ ಅಧ್ಯಾಯವು.

೧–೩. ಜಗತ್ತನ್ನು ಸೃಷ್ಟಿಸಿದ ಪರಬ್ರಹ್ಮನು ಹೇಳಿದಂತೆ ಆ ಯೋಗನಿದ್ರಾ ದೇವಿಯು ಆರು ಗರ್ಭಗಳನ್ನು ದೇವಕಿಯಲ್ಲಿ ಸೇರಿಸಿದಳು. ಏಳನೆಯ ಗರ್ಭವನ್ನು ಆಕರ್ಷಿಸಿ ರೋಹಿಣಿಯ ಗರ್ಭಕ್ಕೆ ಸೇರಿಸಿದ ಮೇಲೆ ಹರಿಯು ಮೂರು ಲೋಕಕ್ಕೂ ಉಪಕಾರವನ್ನು ಮಾಡುವುದಕ್ಕಾಗಿ ದೇವಕಿಯ ಗರ್ಭವನ್ನು ಪ್ರವೇಶಿಸಿದನು. ಅದೇ ದಿನದಲ್ಲಿ ಯೋಗನಿದ್ರೆಯೂ ಯಶೋದೆಯ ಗರ್ಭವನ್ನು ಪ್ರವೇಶಿಸಿದಳು.

ತತೋ ಗ್ರಹಗಣಸ್ಸಮ್ಯಕ್ಪ್ರಚಚಾರ ದಿವಿ ದ್ವಿಜ ।
ವಿಷ್ಣೋರಂಶೇ ಭುವಂ ಯಾತೇ ಋತವಶ್ಚಾಬಭುಶ್ಶುಭಾಃ ॥ ೪ ॥

ನ ಸೇಹೇ ದೇವಕೀಂ ದ್ರಷ್ಟುಂ ಕಶ್ಚಿದಪ್ಯತಿತೇಜಸಾ ।
ಪ್ರಾಜ್ವಲ್ಯಮಾನಾಂ ತಾಂ ದೃಷ್ಟ್ವಾ ಮನಾಂಸಿ ಕ್ಷೋಭಮಾಯಯುಃ ॥೫॥

ಅದೃಷ್ಟಾಃ ಪುರುಷೈಃ ಸ್ತ್ರೀಭಿರ್ದೇವಕೀಂ ದೇವತಾಗಣಾಃ ।
ಬಿಭ್ರಾಣಾಂ ವಪುಷಾ ವಿಷ್ಣುಂ ತುಷ್ಟುವುಸ್ತಾಮಹರ್ನಿಶಂ ॥ ೬ ॥

॥ ದೇವತಾ ಊಚುಃ ॥

ಪ್ರಕೃತಿಸ್ತ್ವಂ ಪರಾ ಸೂಕ್ಷ್ಮಾ ಬ್ರಹ್ಮಗರ್ಭಾ ಭವತ್ಪರಾ ।
ತತೋ ವಾಣೀ ಜಗದ್ಧಾತುರ್ವೇದಗರ್ಭಾಸಿ ಶೋಭನೇ ॥ ೭ ॥

೪–೬. ವಿಷ್ಣುವಿನ ಅಂಶವು ಭೂಮಿಗೆ ಬಂದ ಆ ಸಮಯದಲ್ಲಿ ಅಂತರಿಕ್ಷದಲ್ಲಿ ಗ್ರಹಗಳು ಪ್ರಕಾಶವಾಗಿ ಸಂಚರಿಸುತ್ತಿದ್ದುವು. ಋತುಧರ್ಮಗಳು ಮಂಗಳಕರವಾಗಿ ಪ್ರಕಾಶಿಸುತ್ತಿದ್ದುವು. ವಿಶೇಷವಾದ ತೇಜಸ್ಸಿನಿಂದ ಪ್ರಕಾಶಿಸುತ್ತಿರುವ ದೇವಕಿಯನ್ನು ನೋಡಲು ಯಾರಿಗೂ ಸಾಧ್ಯವಾಗಲಿಲ್ಲ. ನೋಡಿದವರ ಮನಸ್ಸು ಚಾಂಚಲ್ಯವನ್ನು ಹೊಂದುತ್ತಿದ್ದಿತು. ಅಲ್ಲಿದ್ದ ಸ್ತ್ರೀ ಪುರುಷರಿಗೆ ಕಾಣಿಸಿಕೊಳ್ಳದೆ ದೇವತೆಗಳು ವಿಷ್ಣುವನ್ನು ತನ್ನ ಗರ್ಭದಲ್ಲಿ ಧರಿಸಿರುವ ದೇವಕಿಯನ್ನು ಯಾವಾಗಲೂ ಹೊಗಳುತ್ತಿದ್ದರು. ಎಂತೆಂದರೆ :—

೭–೧೦. ಹಿಂದೆ ಪರಬ್ರಹ್ಮನ ಪ್ರತಿಬಿಂಬವನ್ನು ಧರಿಸಿ ಯಾವ ಸೂಕ್ಷ್ಮರೂಪವಾದ ಪರಾಪ್ರಕೃತಿಯಿದ್ದಿತೋ ಆ ಪ್ರಕೃತಿಯೇ ನೀನು. ಮಂಗಳಕರಳಾದ ದೇವಕಿಯೇ! ನೀನು ಜಗತ್ತನ್ನು ಸೃಷ್ಟಿಸಿದ ಬ್ರಹ್ಮನ ವೇದವಾಕ್ಯಗಳಿಂದ ಕೂಡಿದ ಮಾತಿನ ರೂಪವಾದ ಸರಸ್ವತಿಯೆಂಬ ಪತ್ನಿಯಾಗಿರುವೆ. (ಸರಸ್ವತಿಯೇ ನೀನೆಂದು ಅಭಿಪ್ರಾಯವು) ಸೃಷ್ಟಿಸಬೇಕಾದ ವಸ್ತುಗಳುಳ್ಳ ಪ್ರಪಂಚವನ್ನೇ ಗರ್ಭದಲ್ಲಿ

ಸೃಜ್ಯಸ್ವರೂಪಗರ್ಭಾಸಿ ಸೃಷ್ಟಿಭೂತಾ ಸನಾತನೇ ।
ಬೀಜಭೂತಾ ತು ಸರ್ವಸ್ಯ ಯಜ್ಞಗರ್ಭಾಭವಸ್ತ್ರಯೀ ॥ ೮ ॥

ಫಲಗರ್ಭಾ ತ್ವಮೇವೇಜ್ಯಾ ವಹ್ನಿಗರ್ಭಾ ತಥಾರಣಿಃ ।
ಅದಿತಿರ್ದೇವಗರ್ಭಾ ತ್ವಂ ದೈತ್ಯಗರ್ಭಾ ತಥಾದಿತಿಃ । ॥ ೯ ॥

ಜ್ಯೋತ್ಸ್ನಾ ವಾಸರಗರ್ಭಾ ತ್ವಂ ಜ್ಞಾನಗರ್ಭಾಸಿ ಸನ್ನತಿಃ ।
ನಯಗರ್ಭಾ ಪರಾನೀತಿರ್ಲಜ್ಜಾ ತ್ವಂ ಪ್ರಶ್ರಯೋದ್ಭವಾ ॥ ೧೦ ॥

ಕಾಮಗರ್ಭಾ ತಥೇಚ್ಛಾ ತ್ವಂ ತುಷ್ಟಿಸ್ಸಂತೋಷಗರ್ಭಿಣೀ ।
ಮೇಧಾ ಚ ಬೋಧಗರ್ಭಾಸಿ ಧೈರ್ಯಗರ್ಭೋದ್ಭವಾ ಧೃತಿಃ ॥ ೧೧ ॥

ಗ್ರಹರ್ಕ್ಷ ತಾರಕಾಗರ್ಭಾ ದ್ಯೌರಸ್ಯಖಿಲಹೈತುಕೀ ।
ಏತಾ ವಿಭೂತಯೋ ದೇವಿ ತಥಾನ್ಯಾ ಚ ಸಹಸ್ರಶಃ ॥ ೧೨ ॥

ಧರಿಸಿರುವೆ. ಅನಾದಿಯಾದ ನೀನು ಸಮಸ್ತ ಯಜ್ಞಗಳಿಗೂ ಕಾರಣಳಾದ ವೇದ ಸ್ವರೂಪಳಾಗಿರುವೆ. ನೀನು ಫಲಸಹಿತವಾದ ಯಾಗಸ್ವರೂಪಳು. ಅಗ್ನಿಯೇ ಗರ್ಭದಲ್ಲಿರುವ ಅರಣಿಯ ಸ್ವರೂಪಳು. ದೇವತೆಗಳೇಗರ್ಭದಲ್ಲಿರುವ ಅದಿತಿಸ್ವರೂಪಳು. ದೈತ್ಯರೇ ಗರ್ಭದಲ್ಲಿರುವ ದಿತಿಸ್ವರೂಪಳು. ತಿಥಿಯೇ ಗರ್ಭದಲ್ಲಿರುವ ಪ್ರಕಾಶ ಸ್ವರೂಪಳು. ಜ್ಞಾನವೇ ಗರ್ಭದಲ್ಲಿರುವ ಗುರೂಪಾಸನಾಸ್ವರೂಪಳು. ನ್ಯಾಯವೇ ಗರ್ಭದಲ್ಲಿರುವ ನೀತಿಶಾಸ್ತ್ರಸ್ವರೂಪಳು. ವಿಧೇಯತೆಯಿಂದ ಕೂಡಿದ ಲಜ್ಜಾ ಸ್ವರೂಪಳು

೧೧–೧೩. ನೀನು ಕಾಮದಿಂದ ಕೂಡಿದ ಇಚ್ಛಾಸ್ವರೂಪಳು, ಸಂತೋಷದಿಂದ ಕೂಡಿದ ತೃಪ್ತಿಸ್ವರೂಪಳು, ಜ್ಞಾನದಿಂದ ಕೂಡಿದ ಬುದ್ಧಿಸ್ವರೂಪಳು, ಗ್ರಹಗಳು, ನಕ್ಷತ್ರಗಳು, ತಾರೆಗಳು, ಇವುಗಳಿಂದ ಕೂಡಿದ ಆಕಾಶಸ್ವರೂಪಳಾಗಿರುವೆ. ಸಕಲ ಕಾರಣಳಾದ ಈ ವಿಭೂತಿಗಳಲ್ಲದೆ ಇನ್ನೂ ಅನೇಕ ಮಹಿಮೆಗಳು ನಿನ್ನಲ್ಲಿವೆ.

ತಥಾ ಸಂಖ್ಯಾ ಜಗದ್ಧಾತ್ರೀ ಸಾಂಪ್ರತಂ ಜಠರೇ ತವ ।
ಸಮುದ್ರಾದ್ರಿ ನದೀದ್ವೀಪವನಪಟ್ಟಣ ಭೂಷಣಾ ।
ಗ್ರಾಮಖರ್ವಟಖೇಟಾಢ್ಯಾ ಸಮಸ್ತಾ ಪೃಥಿವೀ ಶುಭೇ ॥ ೧೩ ॥

ಸಮಸ್ತವಹ್ನಯೋಂಭಾಂಸಿ ಸಕಲಾಶ್ಚ ಸಮೀರಣಾಃ ।
ಮಹೋರಗಾಸ್ತಥಾ ಯಕ್ಷಾ ರಾಕ್ಷಸಾಃ ಪ್ರೇತಗುಹ್ಯಕಾಃ । ॥ ೧೪ ॥

ಗ್ರಹರ್ಕ್ಷತಾರಕಾ ಚಿತ್ರವಿಮಾನಶತಸಂಕುಲಂ ।
ಅವಕಾಶಮಶೇಷಸ್ಯ ಯದ್ದದಾತಿ ನಭಸ್ಥಲಂ ॥ ೧೫ ॥

ಭೂಲೋಕಶ್ಚ ಭುವರ್ಲೋಕಸ್ತ್ವರ್ಲೋಕೋಽಥ ಮಹರ್ಜನಃ ।
ತಪಶ್ಚ ಬ್ರಹ್ಮಲೋಕಶ್ಚ ಬ್ರಹ್ಮಾಂಡಮಖಿಲಂ ಶುಭೇ ॥ ೧೬ ॥

ತದಂತರೇ ಸ್ಥಿತಾ ದೇವಾ ದೈತ್ಯಗಂಧರ್ವಚಾರಣಾಃ ।
ಮಹೋರಗಾಸ್ತಥಾ ಯಕ್ಷಾ ರಾಕ್ಷಸಾಃ ಪ್ರೇತಗುಹ್ಯಕಾಃ ॥ ೧೭ ॥

ಸಮುದ್ರ, ನದಿ, ಪರ್ವತ, ದ್ವೀಪ, ವನ, ಪಟ್ಟಣ, ಗ್ರಾಮ, ಖರ್ವಟ, ಖೇಟ ಮುಂತಾದುವುಗಳಿಂದ ಕೂಡಿದ ಸಮಸ್ತ ಭೂಮಂಡಲದಿಂದ ಕೂಡಿದ ಸಮಸ್ತ ಜಗತ್ತೂ ತಾಯಿಯಾದ ನಿನ್ನ ಗರ್ಭದಲ್ಲಿರುವುದು.

೧೪-೧೫. ಸಕಲ ಬಗೆಯ ಅಗ್ನಿಗಳೂ ನೀರೂ ವಾಯುವೂ ಉರಗರೂ ಯಕ್ಷರೂ ರಾಕ್ಷಸರೂ ಪ್ರೇತರೂ ಗುಹ್ಯಕರೂ ಗ್ರಹಗಳು, ನಕ್ಷತ್ರಗಳು, ತಾರೆಗಳೂ ಇವುಗಳಿಂದ ಕೂಡಿದ ವಿಚಿತ್ರವಾದ ವಿಮಾನಗಳೂ ಇವುಗಳಿಗೆ ಅವಕಾಶವನ್ನು ಕೊಡುವ ಆಕಾಶವೂ ಭೂಲೋಕ, ಭುವರ್ಲೋಕ, ಸ್ವರ್ಗಲೋಕ, ಮಹರ್ಲೋಕ, ಜನೋಲೋಕ, ತಪೋಲೋಕ, ಬ್ರಹ್ಮಲೋಕಗಳೂ, ಸಮಸ್ತ ಬ್ರಹ್ಮಾಂಡಗಳೂ ಅವುಗಳಲ್ಲಿರುವ ದೇವ, ದೈತ್ಯ, ಗಂಧರ್ವ, ಚಾರಣರೂ ಉರಗ, ಯಕ್ಷ ರಾಕ್ಷಸ,

ಮನುಷ್ಯಾಃ ಪಶವಶ್ಚಾನ್ಯೇ ಯೇ ಚ ಜೀವಾ ಯಶಸ್ವಿನಿ ।
ಶೈರಂತಸ್ಥೈರನಂತೋಽಸೌ ಸರ್ವಗಸ್ಸರ್ವಭಾವನಾಃ ॥ ೧೮ ॥

ರೂಪಕರ್ಮಸ್ವರೂಪಾಣಿ ನ ಪರಿಚ್ಛೇದಗೋಚರೇ ।
ಯಸ್ಯಾಖಿಲಪ್ರಮಾಣಾನಿ ಸ ವಿಷ್ಣುರ್ಗರ್ಭಗಸ್ತವ ॥ ೧೯ ॥

ತ್ವಂ ಸ್ವಾಹಾ ತ್ವಂ ಸ್ವಧಾ ವಿದ್ಯಾ ಸುಧಾ ತ್ವಂ ಜ್ಯೋತಿರಂಬರೇ ।
ತ್ವಂ ಸರ್ವಲೋಕರಕ್ಷಾರ್ಥಮವತೀರ್ಣಾ ಮಹೀತಲೇ ॥ ೨೦ ॥

ಪ್ರಸೀದ ದೇವಿ ಸರ್ವಸ್ಯ ಜಗತಶ್ಶಂಶುಭೇ ಕುರು ।
ಪ್ರೀತ್ಯಾ ತಂ ಧಾರಯೇಶಾನಂ ಧೃತಂ ಯೇನಾಖಿಲಂ ಜಗತ್ ॥ ೨೧ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ದ್ವಿತೀಯೋಽಧ್ಯಾಯಃ

ಪ್ರೇತ, ಗುಹ್ಯಕರೂ ಮನುಷ್ಯ ಪಶ್ವಾದಿ ಸಮಸ್ತ ಪ್ರಾಣಿಗಳೂ ಯಾವನಲ್ಲಿದೆಯೋ ಅಂತಹ ಸರ್ವವ್ಯಾಪಿಯೂ, ಅನಂತನೂ, ಯಾವ ಪ್ರಮಾಣದಿಂದಲೂ ಅವನ ರೂಪ ಕರ್ಮಗಳನ್ನು ತಿಳಿಯಲಸಾಧ್ಯನಾದ ವಿಷ್ಣುವು ನಿನ್ನ ಗರ್ಭದಲ್ಲಿರುವನು.

೨೦. ನೀನೇ ಸ್ವಾಹಾದೇವಿಯು, ಸ್ವಧಾದೇವಿಯು, ವಿದ್ಯಾಸ್ವರೂಪಳು, ಅಮೃತಸ್ವರೂಪಳು, ಪ್ರಕಾಶಸ್ವರೂಪಳು, ಆಕಾಶರೂಪಳು, ನೀನು ಸಮಸ್ತ ಲೋಕವನ್ನೂ ಕಾಪಾಡುವುದಕ್ಕಾಗಿ ಭೂಮಿಯಲ್ಲಿ ಅವತಾರ ಮಾಡಿರುವೆ.

೨೧. ಮಂಗಳಕರಳಾದ ದೇವಕೀದೇವಿಯೇ! ಸಮಸ್ತ ಜಗತ್ತನ್ನೂ ಧರಿಸಿದ ಪರಮೇಶ್ವರನನ್ನು ಗರ್ಭದಲ್ಲಿ ಧರಿಸಿರುವೆ. ನೀನು ಪ್ರಸನ್ನ ಚಿತ್ತಳಾಗಿ ಈ ಸಮಸ್ತ ಜಗತ್ತಿಗೂ ಮಂಗಳವನ್ನುಂಟುಮಾಡು ಎಂದು ಸ್ತೋತ್ರಮಾಡಿದರು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ
ಎರಡನೆಯ ಅಧ್ಯಾಯವು ಮುಗಿದುದು.

ಶ್ರೀಃ

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ತೃತೀಯೋಽಧ್ಯಾಯಃ

॥ ಶ್ರೀ ಪರಾಶರಃ ॥

ಏವಂ ಸಂಸ್ತೂಯಮಾನಾ ಸಾ ದೇವೈರ್ದೇವಮುಧಾರಯತ್ ।
ಗರ್ಭೇಣ ಪುಂಡರೀಕಾಕ್ಷಂ ಜಗತಸ್ತ್ರಾಣಕಾರಣಂ ॥ ೧ ॥

ತತೋಽಖಿಲಜಗತ್ಪದ್ಮಬೋಧಾಯಾಚ್ಯುತಭಾನುನಾ ।
ದೇವಕೀ ಪೂರ್ವಸಂಧ್ಯಾಯಾಮಾವಿರ್ಭೂತಂ ಮಹಾತ್ಮನಾ ॥ ೨ ॥

ತಜ್ಜನ್ಮದಿನಮತ್ಯರ್ಥಮಾಹ್ಲಾದ್ಯಮಲದಿಙ್ಮುಖಂ ।
ಬಭೂವಸರ್ವಲೋಕಸ್ಯ ಕೌಮುದೀ ಶಶಿನೋ ಯಥಾ ॥ ೩ ॥

ನೂರನೆಯ ಅಧ್ಯಾಯವು.

೧–೩. ಈ ರೀತಿಯಲ್ಲಿ ದೇವತೆಗಳು ಸ್ತೋತ್ರಮಾಡುತ್ತಿರಲು ಆ ದೇವಕೀ ದೇವಿಯು ತನ್ನ ಗರ್ಭದಲ್ಲಿ ಲೋಕರಕ್ಷಣೆಗೆ ಕಾರಣನಾದ ಕಮಲಾಕ್ಷನಾದ ವಿಷ್ಣುವನ್ನು ಧರಿಸಿದ್ದಳು. ಆಮೇಲೆ ದೇವಕೀದೇವಿಯೆಂಬ ಪೂರ್ವ ಸಂಧ್ಯೆಯಲ್ಲಿ ಸಮಸ್ತ ಜಗತ್ತೆಂಬ ಕಮಲವನ್ನು ಅರಳಿಸುವುದಕ್ಕಾಗಿ ಅಚ್ಯುತನೆಂಬ ಸೂರ್ಯನು ಉದಯನಾದನು. ಅವನು ಹುಟ್ಟಿದ ದಿನವು ನಿರ್ಮಲವಾದ ದಿಕ್ಕುಗಳುಳ್ಳದಾಗಿ ಸಮಸ್ತ ಜನರಿಗೂ (ಲೋಕಗಳಿಗೂ) ಚಂದ್ರನ ಬೆಳದಿಂಗಳಂತೆ ಅತ್ಯಂತ ಸಂತೋಷಕರವಾಗಿದ್ದಿತು. ದುಷ್ಟರ ಶಿಕ್ಷಕನಾದ ಜನಾರ್ದನನು ಅವತಾರ ಮಾಡುತ್ತಿರಲಾಗಿ ಸಜ್ಜನರು

ಸಂತಸ್ಪಂತೋಷಮಧಿಕಂ ಪ್ರಶಮಂ ಚಂಡಮಾರುತಾಃ ।
ಪ್ರಸಾದಂ ನಿಮ್ನಗಾ ಯಾತಾ ಜಾಯಮಾನೇ ಜನಾರ್ದನೇ ॥ ೪ ॥

ಸಿಂಧವೋ ನಿಜಶಬ್ದೇನ ವಾದ್ಯಂ ಚಕ್ರುರ್ಮನೋಹರಂ ।
ಜಗುರ್ಗಂಧರ್ವಪತಯೋ ನನೃತುಶ್ಚಾಪ್ಸರೋ ಗಣಾಃ ॥ ೫ ॥

ಸಸೃಜುಃ ಪುಷ್ಪವರ್ಷಾಣಿ ದೇವಾ ಭುವ್ಯಂತರಿಕ್ಷಗಾಃ ।
ಜಜ್ವಲುಶ್ಚಾಗ್ನಯಶ್ಶಾಂತಾ ಜಾಯಮಾನೇ ಜನಾರ್ದನೇ ॥ ೬ ॥

ಮಂದಂ ಜಗರ್ಜುರ್ಜಲದಾಃ ಪುಷ್ಪವೃಷ್ಟಿಮುಚೋ ದ್ವಿಜ ।
ಅರ್ಧರಾತ್ರೇಽಖಿಲಾಧಾರೇ ಜಾಯಮಾನೇ ಜನಾರ್ದನೇ ॥ ೭ ॥

ಫುಲ್ಲೇಂದೀವರಪತ್ರಾಭಂ ಚತುರ್ಬಾಹುಮುದೀಕ್ಷ್ಯ ತಂ ।
ಶ್ರೀವತ್ಸವಕ್ಷಸಂ ಜಾತಂ ತುಷ್ಟಾವಾನಕದುಂದುಭಿಃ ॥ ೮ ॥

ಅಧಿಕವಾದ ಸಂತೋಷವನ್ನೂ ಬಿರುಗಾಳಿಯು ಶಾಂತಿಯನ್ನೂ ನದಿಗಳು ಪರಿಶುದ್ಧವಾದ ತಿಳಿನೀರನ್ನೂ ಪಡೆದುವು. ನದಿಗಳೂ, ಸಮುದ್ರಗಳೂ ತಮ್ಮ ಧ್ವನಿಯಿಂದ ಮನೋಹರವಾದ ವಾದ್ಯಗಳನ್ನು ಮಾಡಿದುವು. ಗಂಧರ್ವರು ಗಾನಮಾಡಿದರು. ಅಪ್ಸರರು ನರ್ತನಮಾಡಿದರು. ದೇವತೆಗಳು ಭೂಮಿಯಲ್ಲಿಯೂ ಅಂತರಿಕ್ಷದಲ್ಲಿಯೂ ಇದ್ದು ಹೂಮಳೆಗರೆದರು. ಕೃಷ್ಣನು ಹುಟ್ಟಿದಾಗ ಅಗ್ನಿಗಳು ಶಾಂತವಾಗಿ ಪ್ರದಕ್ಷಿಣಾಕಾರವಾಗಿ ಉರಿಯುತ್ತಿದ್ದುವು. ಸಮಸ್ತಕ್ಕೂ ಆಶ್ರಯನಾದ ವಿಷ್ಣುವು ಹುಟ್ಟಿದಾಗ ಆ ಅರ್ಧರಾತ್ರಿಯ ಸಮಯದಲ್ಲಿ ಮೋಡಗಳು ಮಳೆಯನ್ನು ಸುರಿಸುತ್ತ ಮೆಲ್ಲಗೆ ಧ್ವನಿಮಾಡುತ್ತಿದ್ದವು.

೮–೯. ಅರಳಿದ ನೀಲಿಯಬಣ್ಣದ ಕಮಲದಳದಂತೆ ಕಾಂತಿಯುಳ್ಳ ನಾಲ್ಕು ತೋಳುಗಳುಳ್ಳ ಎದೆಯಲ್ಲಿ ಶ್ರೀವತ್ಸವೆಂಬ ಚಿಹ್ನೆಯುಳ್ಳ ಆ ಮಗುವನ್ನು ನೋಡಿ ವಸುದೇವನು ಸ್ತೋತ್ರಮಾಡಿದನು. ಬುದ್ಧಿವಂತನಾದ ವಸುದೇವನು ಪರಿಶುದ್ಧ

ಅಭಿಷ್ಟುಯ ಚ ತಂ ವಾಗ್ಭಿಃ ಪ್ರಸನ್ನಾಭಿರ್ಮಹಾಮತಿಃ ।
ವಿಜ್ಞಾಪಯಾಮಾಸ ತದಾ ಕಂಸಾದ್ಭೀತೋ ದ್ವಿಜೋತ್ತಮ ॥ ೯ ॥

॥ ವಸುದೇವಃ ॥

ಜಾತೋಽಸಿ ದೇವದೇವೇಶ ಶಂಖ ಚಕ್ರಗದಾಧರಂ ।
ದಿವ್ಯರೂಪಮಿದಂ ದೇವ ಪ್ರಸಾದೇನೋಪಸಂಹರ ॥ ೧೦ ॥

ಅದ್ಯೈವ ದೇವ ಕಂಸೋಽಯಂ ಕುರುತೇ ಮಮ ಘಾತನಂ ।
ಅವತೀರ್ಣ ಇತಿ ಜ್ಞಾತ್ವಾ ತ್ವಮಸ್ಮಿನ್ಮಮ ಮಂದಿರೇ ॥ ೧೧ ॥

॥ ದೇವಕೀ ॥

ಯೋಽನಂತರೂಪೋಽಖಿಲವಿಶ್ವರೂಪೋ
ಗರ್ಭೇಽಪಿ ಲೋಕಾನ್ಬಿಭರ್ತಿ ।
ಪ್ರಸೀದತಾಮೇಷ ಸ ದೇವದೇವೋ
ಯೋ ಮಾಯಯಾವಿಷ್ಕೃತ ಬಾಲರೂಪಃ ॥ ೧೨ ॥

ವಾದ ಸೌಮ್ಯವಾದ ಮಾತುಗಳಿಂದ ಆ ದೇವನನ್ನು ಸ್ತೋತ್ರಮಾಡಿ ಕಂಸನಿಗೆ ಹೆದರಿ ಪುನಃ ಆ ದೇವನಿಗೆ ವಿಜ್ಞಾಪನೆ ಮಾಡಿದನು.

೧೦-೧೧. ವಸುದೇವನು ' ದೇವದೇವನೇ ! ನನ್ನಲ್ಲಿ ಅನುಗ್ರಹವಿಟ್ಟು ನನ್ನ ಮನೆಯಲ್ಲಿ ಹುಟ್ಟಿದ ನೀನು ದಿವ್ಯವಾದ ಈ ಶಂಖ ಚಕ್ರ ಗದೆಗಳನ್ನು ಧರಿಸಿದ ರೂಪವನ್ನು ಉಪಸಂಹಾರಮಾಡು. ನೀನು ನನ್ನ ಮನೆಯಲ್ಲಿ ಅವತಾರ ಮಾಡಿರುವುದನ್ನು ತಿಳಿದು ಕಂಸನು ಈ ದಿನವೇ ನನ್ನನ್ನು ಕೊಲ್ಲುವನು " ಎಂದು ಹೇಳಿದನು.

೧೨-೧೩. ದೇವಕಿಯು ' ದೇವದೇವನೇ ! ಅನಂತರೂಪನೂ, ಸಮಸ್ತ ಜಗದ್ರೂಪನೂ ಆದ ನೀನು ನನ್ನ ಗರ್ಭದಲ್ಲಿ ಸಮಸ್ತ ಲೋಕಗಳನ್ನೂ ಧರಿಸಿರುವೆ. ಮಾಯೆಯಿಂದ ಬಾಲಕನ ರೂಪದಲ್ಲಿ ಪ್ರಕಟವಾಗಿರುವೆ. ನೀನು ಅನುಗ್ರಹವನ್ನು

ಉಪಸಂಹರ ಸರ್ವಾತ್ಮನ್ ರೂಪಮೇತಚ್ಚತುರ್ಭುಜಂ ।
ಜಾನಾತು ಮಾವತಾರಂ ತೇ ಕಂಸೋಽಯಂ ಪ್ರತಿಜನ್ಮಜಃ ॥ ೧೩ ॥

॥ ಶ್ರೀ ಭಗವಾನ್ ॥

ಸ್ತುತೋಽಹಂ ಯತ್ತ್ವಯಾ ಪೂರ್ವಂ ಪುತ್ರಾರ್ಥಿನ್ಯಾ ತದದ್ಯ ತೇ ।
ಸಫಲಂ ದೇವಿ ಸಂಜಾತಂ ಜಾತೋಽಹಂ ಯತ್ತವೋದರಾತ್ ॥ ೧೪ ॥

॥ ಶ್ರೀ ಪರಾಶರಃ ॥

ಇತ್ಯುಕ್ತ್ವಾ ಭಗವಾಂಸ್ತೂಷ್ಣೀಂ ಬಭೂವ ಮುನಿಸತ್ತಮ ।
ವಸುದೇವೋಽಪಿ ತಂ ರಾತ್ರಾವಾದಾಯ ಪ್ರಯಯೌ ಬಹಿಃ ॥ ೧೫ ॥

ಮೋಹಿತಾಶ್ಚಾಭವಂಸ್ತತ್ರ ರಕ್ಷಿಣೋ ಯೋಗನಿದ್ರಯಾ ।
ಮಧುರಾದ್ವಾರಶಾಲಾಶ್ಚ ವ್ರಜತ್ಯಾನಕದುಂದುಭೌ ॥ ೧೬ ॥

ಮಾಡು, ನಾಲ್ಕು ತೋಳುಗಳುಳ್ಳ ರೂಪವನ್ನು ಉಪಸಂಹಾರಮಾಡು. ರಾಕ್ಷಸನ ಪುತ್ರನಾದ ಕಂಸನು ನಿನ್ನ ಅವತಾರವನ್ನು ತಿಳಿಯದೆ ಇರಲಿ' ಎಂದಳು. (ದ್ರಮಿಡ ನೆಂಬ ದೈತ್ಯನು ಉಗ್ರಸೇನನ ರೂಪದಿಂದ ಅವನ ಪತ್ನಿಯಲ್ಲಿ ಕಂಸನನ್ನು ಹುಟ್ಟಿಸಿದ ನೆಂದು ಹರಿವಂಶದಲ್ಲಿ ಹೇಳಿರುವುದು)

೧೪. ಕೃಷ್ಣನು 'ದೇವಕೀ ದೇವಿಯೇ! ನೀನು ಪುತ್ರಾಪೇಕ್ಷೆಯುಳ್ಳವಳಾಗಿ ನನ್ನನ್ನು ಹಿಂದೆ ಸ್ತೋತ್ರ ಮಾಡಿದ್ದೆ. ಆ ಸ್ತೋತ್ರವು ಈ ದಿನ ನಿನಗೆ ಫಲವನ್ನು ಕೊಟ್ಟಿರುವುದು ಆದುದರಿಂದಲೇ ನಾನು ನಿನ್ನ ಹೊಟ್ಟೆಯಲ್ಲಿ ಹುಟ್ಟಿರುವೆನು' ಎಂದು ಹೇಳಿದನು.

೧೫-೧೯. ಮೈತ್ರೇಯನೇ! ಹೀಗೆಂದು ಹೇಳಿ ಭಗವಂತನು ಸುಮ್ಮನಾದ ಮೇಲೆ ವಸುದೇವನು ಆ ರಾತ್ರಿಯೇ ಆ ಮಗುವನ್ನೆತ್ತಿಕೊಂಡು ಹೊರಕ್ಕೆ ಹೊರಟನು. ಅವನು ಹೋಗುತ್ತಿರುವಾಗ ಸೆರೆಮನೆಯ ಕಾವಲುಗಾರರೂ, ಮಧುರಾಪಟ್ಟಣದ

ವರ್ಷತಾಂ ಜಲದಾನಾಂ ಚ ಶೋಯಮುತ್ಕೃಷ್ಣಂ ನಿಶಿ ।
ಸಂವೃತ್ಯಾನುಯಯೌ ಶೇಷಃ ಫಣೈರಾನಕದುಂದುಭಿಂ ॥ ೧೬ ॥

ಯಮುನಾಂ ಚಾತಿಗಂಭೀರಾಂ ನಾನಾವರ್ತಶತಾಕುಲಾಂ ।
ವಸುದೇವೋ ವಹನ್ನಿಷ್ಣುಂ ಜಾನುನಾತ್ರವಹಾಂ ಯಯೌ ॥ ೧೭ ॥

ಕಂಸಸ್ಯ ಕರದಾನಾಯ ತತ್ರೈವಾಭ್ಯಾಗತಾಂಸ್ತಟೇ ।
ನಂದಾದೀನ್ಗೋಪವೃದ್ಧಾಂಶ್ಚ ಯಮುನಾಯಾ ದದರ್ಶ ಸಃ ॥ ೧೮ ॥

ತಸ್ಮಿನ್ಕಾಲೇ ಯಶೋದಾಪಿ ಮೋಹಿತಾ ಯೋಗನಿದ್ರಯಾ ।
ತಾಮೇವ ಕನ್ಯಾಂ ಮೈತ್ರೇಯ ಪ್ರಸೂತಾ ಮೋಹಿತೇ ಜನೇ ॥ ೨೦ ॥

ವಸುದೇವೋಽಪಿ ವಿನ್ಯಸ್ಯ ಬಾಲಮಾದಾಯ ದಾರಿಕಾಂ ।
ಯಶೋದಾಶಯನಾತ್ಕೃಷ್ಣಮಾಜಗಾಮಾಮಿತದ್ಯುತಿಃ ॥ ೨೧ ॥

ದ್ವಾರಪಾಲಕರೂ ಯೋಗನಿದ್ರೆಯಿಂದ ಮೋಹಿತರಾಗಿದ್ದುದರಿಂದ ಅವನನ್ನು ನೋಡಲೇ ಇಲ್ಲ. ಆ ಅರ್ಧರಾತ್ರಿಯಲ್ಲಿ ಬಲವಾದ ಮಳೆಯು ಸುರಿಯುತ್ತಿದ್ದಿತು. ಆದಿಶೇಷನು ತನ್ನ ಹೆಡೆಯಿಂದ ವಸುದೇವನನ್ನು ಮರೆಮಾಡಿ ಅವನನ್ನನುಸರಿಸಿ ಹೋಗುತ್ತಿದ್ದನು. ವಸುದೇವನು ವಿಷ್ಣುವನ್ನೆತ್ತಿಕೊಂಡು ಅನೇಕ ಸುಳಿಗಳಿಂದ ಕೂಡಿದ ಆಳವಾದ ಯಮುನಾನದಿಯನ್ನು ಮಂಡಿಯುದ್ದದ ನೀರಿನಲ್ಲಿಯೇ ದಾಟಿ ಹೋದನು. ಕಂಸನಿಗೆ ಕಂದಾಯವನ್ನು (ಪೊಗದಿ) ಕೊಡುವುದಕ್ಕಾಗಿ ನಂದನೇ ಮೊದಲಾದ ಗೋಪವೃದ್ಧರು ಎದುರಿಗೆ ಬಂದುದನ್ನು ಯಮುನೆಯ ಆಚೆಯದಡದಲ್ಲಿ ವಸುದೇವನು ನೋಡಿದನು. ಅವರು ಮಾತ್ರ ಇವನನ್ನು ನೋಡಲಿಲ್ಲ.

೨೦–೨೧. ಆದೇ ಕಾಲದಲ್ಲಿ ಯಶೋದೆಯು ಯೋಗನಿದ್ರೆಯಿಂದ ಮೋಹಿತಳಾಗಿ ಜನರೆಲ್ಲರೂ ಮೋಹಿತರಾಗಿರಲು ಆ ಯೋಗಮಾಯೆಯನ್ನೇ ಕನ್ಯಾರೂಪದಿಂದ ಪ್ರಸವಿಸಿದ್ದಳು. ಮಹಾಬುದ್ಧಿಶಾಲಿಯಾದ ವಸುದೇವನು ಯಶೋದೆಯ ಹಾಸಿಗೆಯಲ್ಲಿ ಕೃಷ್ಣನನ್ನು ಮಲಗಿಸಿ ಕನ್ಯೆಯನ್ನೆತ್ತಿಕೊಂಡು ಬೇಗ ಬಂದುಬಿಟ್ಟನು.

ದೆದೃಶೇ ಚ ಪ್ರಬುದ್ಧಾ ಸಾ ಯಶೋದಾ ಜಾತಮಾತ್ಮಜಂ ।
ನೀಲೋತ್ಪಲದಳಶ್ಯಾಮಂ ತತೋಽತ್ಯರ್ಥಂ ಮುದಂ ಯಯೌ ॥ ೨೨ ॥

ಆದಾಯ ವಸುದೇವೋಽಪಿ ದಾರಿಕಾಂ ನಿಜಮಂದಿರೇ ।
ದೇವಕೀಶಯನೇ ನ್ಯಸ್ಯ ಯಥಾಪೂರ್ವಮತಿಷ್ಠತ ॥ ೨೩ ॥

ತತೋ ಬಾಲಧ್ವನಿಂ ಶ್ರುತ್ವಾ ರಕ್ಷಣಸ್ಸಹಸೋತ್ಥಿತಾಃ ।
ಕಂಸಾಯಾವೇದಯಾಮಾಸುರ್ದೇವಕೀಪ್ರಸವಂ ದ್ವಿಜ ॥ ೨೪ ॥

ಕಂಸಸ್ತೂರ್ಣಮುಪೇತ್ಯೈನಾಂ ತತೋ ಜಗ್ರಾಹ ಬಾಲಿಕಾಂ ।
ಮುಂಚ ಮುಂಚೇತಿ ದೇವಕ್ಯಾಸನ್ನಕಂಕ್ಯಾ ನಿವಾರಿತಃ ॥ ೨೫ ॥

ಚಿಕ್ಷೇಪ ಚ ಶಿಲಾಪೃಷ್ಠೇ ಸಾಕ್ಷಿಸ್ತಾ ವಿಯತಿ ಸ್ಥಿತಾ ।
ಅವಾಪರೂಪಂ ಸುಮಹತ್ಸಾಯುಧಾಷ್ಟಮಹಾಭುಜಂ ॥ ೨೬ ॥

೨೨–೨೩. ಯಶೋದೆಯು ಎಚ್ಚರವಾಗಿ ತನಗೆ ನೀಲಿಯು ಕಮಲದಂತೆ ಮೈ ಬಣ್ಣವುಳ್ಳ ಪುತ್ರನು ಜನಿಸಿದುದನ್ನು ಕಂಡು ಸಂತೋಷಪಟ್ಟಳು. ವಸುದೇವನು ಕನ್ಯೆಯನ್ನೆತ್ತಿಕೊಂಡು ಹೋಗಿ ತನ್ನ ಮನೆಯಲ್ಲಿ ದೇವಕೀದೇವಿಯ ಹಾಸಿಗೆಯಲ್ಲಿಟ್ಟು ಹಿಂದಿನಂತೆ ಕಾಲಿನಲ್ಲಿ ಸಂಕೋಲೆಯೊಡನೆ ಸುಮ್ಮನಿದ್ದನು.

೨೪–೨೬. ಆಮೇಲೆ ಮಗುವು ಅಳುವ ಶಬ್ದವನ್ನು ಕೇಳಿ ಕಾವಲುಗಾರರು ಆ ಕ್ಷಣದಲ್ಲಿಯೇ ಎದ್ದು ದೇವಕಿಯು ಪ್ರಸುವಿಸಿದುದನ್ನು ಕಂಡು ಕಂಸನಿಗೆ ಹೇಳಿದರು. ಕಂಸನು ಬೇಗ ಬಂದು ದೇವಕಿಯು ಅಳುತ್ತ ಬೇಡವೆಂದು ತಡೆಯುತ್ತಿದ್ದರೂ ಆ ಕನ್ಯೆಯನ್ನು ಎತ್ತಿಕೊಂಡನು. ಕಂಸನು ಆ ಕನ್ಯೆಯನ್ನು ಕಲ್ಲಿನಮೇಲೆ ಎಸೆದನು. ಆ ಕ್ಷಣವೇ ಆ ಕನ್ಯೆಯು ಆಕಾಶಕ್ಕೆ ಹಾರಿ ಎಂಟು ಕೈಗಳಲ್ಲಿಯೂ ಆಯುಧಗಳನ್ನು ಧರಿಸಿದ ದಿವ್ಯರೂಪದಿಂದ ಗಟ್ಟಿಯಾಗಿ ನಗುತ್ತಾ

ಪ್ರಜಹಾಸ ತಥೈವೋಚ್ಚೈಃ ಕಂಸಂ ಸಾ ರುಷಿತಾಬ್ರವೀತ್ ।
ಕಿಂ ಮಯಾ ಕ್ಷಿಪ್ತಯಾ ಕಂಸ ಜಾತೋ ಯಸ್ತ್ವಾಂ ವಧಿಷ್ಯತಿ ॥ ೨೭ ॥

ಸರ್ವಸ್ವಭೂತೋ ದೇವಾನಾಮಾಸೀನ್ಮೃತ್ಯುಃ ಪುರಾ ಸ ತೇ ।
ತದೇತತ್ಸಂಪ್ರಧಾರ್ಯಾಶು ಕ್ರಿಯತಾಂ ಹಿತಮಾತ್ಮನಃ ॥ ೨೮ ॥

ಇತ್ಯುಕ್ತ್ವಾ ಪ್ರಯಯೌ ದೇವೀ ದಿವ್ಯಸ್ರಗ್ಗಂಧಭೂಷಿತಾ ।
ಪಶ್ಯತೋ ಭೋಜರಾಜಸ್ಯ ಸ್ತುತಾ ಸಿದ್ಧೈರ್ವಿಹಾಯಸಾ ॥ ೨೯ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ತೃತೀಯೋಽಧ್ಯಾಯಃ

ಕೋಪದಿಂದ ಕಂಸನನ್ನು ಕುರಿತು "ಎಲೈ ಕಂಸನೇ! ನನ್ನನ್ನು ಎಸೆದುದರಿಂದ ನಿನಗೇನು ಪ್ರಯೋಜನ? ಹಿಂದಿನ ಜನ್ಮದಲ್ಲಿ ಕಾಲನೇಮಿಯಾಗಿದ್ದಾಗ ನಿನ್ನನ್ನು ಯಾವನು ಕೊಂದನೋ ಆ ದೇವಶ್ರೇಷ್ಠನು ಈಗಲೂ ನಿನ್ನನ್ನು ಕೊಲ್ಲುವುದಕ್ಕಾಗಿ ಹುಟ್ಟಿರುವನು. ಇದನ್ನು ನಿಶ್ಚಯವೆಂದು ತಿಳಿದು ಶೀಘ್ರವಾಗಿ ನಿನಗೆ ಹಿತವಾದುದನ್ನು ಮಾಡು"

೨೯. ಹೀಗೆಂದು ಹೇಳಿ ದಿವ್ಯವಾದ ಗಂಧಮಾಲ್ಯಗಳನ್ನು ಧರಿಸಿದ ದೇವಿಯು ಭೋಜರಾಜನಾದ ಕಂಸನು ನೋಡುತ್ತಿರಲು ಸಿದ್ಧರು ಸ್ತೋತ್ರಮಾಡುತ್ತಿರಲು ಆಕಾಶ ಮಾರ್ಗದಿಂದ ಹೊರಟುಹೋದಳು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ
ಮೂರನೆಯ ಅಧ್ಯಾಯವು ಮುಗಿದುದು.

ಶ್ರೀಃ

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಚತುರ್ಥೋಽಧ್ಯಾಯಃ

॥ ಶ್ರೀ ಪರಾಶರಃ ॥

ಕಂಸಸ್ತತೋದ್ವಿಗ್ನಮನಾಃ ಪ್ರಾಹ ಸರ್ವಾನ್ ಮಹಾಸುರಾನ್ ।
ಪ್ರಲಂಬಕೇಶಿಪ್ರಮುಖಾನ್ ಆಹೂಯಾಸುರಪುಂಗವಾನ್ ॥ ೧ ॥

॥ ಕಂಸಃ ॥

ಹೇ ಪ್ರಲಂಬ ಮಹಾಬಾಹೋ ಕೇಶಿನ್ ಧೇನುಕಪೂತನೇ ।
ಅರಿಷ್ಟಾದ್ಯಾಸ್ತಥೈವಾನ್ಯೇ ಶ್ರೂಯತಾಂ ವಚನಂ ಮಮ ॥ ೨ ॥

ಮಾಂ ಹಂತುಮನುರೈರ್ಯತ್ನಃ ಕೃತಃ ಕಿಲ ದುರಾತ್ಮಭಿಃ ।
ಮದ್ವೀರ್ಯತಾಪಿತಾನ್ ವೀರೋ ನ ತ್ವೇತಾನ್ಗಣಯಾಮ್ಯಹಂ ॥ ೩ ॥

ನಾಲ್ಕನೆಯ ಅಧ್ಯಾಯವು

೧-೫. ಕಂಸನು ವಿಶೇಷವಾದ ಚಿತ್ತಚಾಂಚಲ್ಯವುಳ್ಳವನಾಗಿ ಪ್ರಲಂಬಕೇಶಿ ಮುಂತಾದ ಅಸುರಶ್ರೇಷ್ಠರನ್ನು ಕರೆಸಿ ಅವರನ್ನು ಕುರಿತು ಮಾತನಾಡಿದನು "ಎಲೈ ಶೂರನಾದ ಪ್ರಲಂಬನೇ! ಕೇಶಿ, ಧೇನುಕ, ಪೂತನಿ, ಅರಿಷ್ಟ, ಮುಂತಾದವರೇ ನೀವೆಲ್ಲರೂ ಕೇಳಿರಿ. ನನ್ನನ್ನು ಕೊಲ್ಲಲು ದುಷ್ಟರಾದ ದೇವತೆಗಳು ಪ್ರಯತ್ನ ಮಾಡಿರುವರು. ತಮ್ಮ ನನ್ನ ಪರಾಕ್ರಮದಿಂದ ಸಂತಾಪಪಡುತ್ತಿರುವ ಅವರನ್ನು ಶೂರನಾದ ನಾನು ಲೆಕ್ಕಿಸುವುದಿಲ್ಲ. ಅಲ್ಪವಾದ ಪರಾಕ್ರಮವುಳ್ಳ ಇಂದ್ರಸೇನು ಮಾಡಬಲ್ಲನು.

ಕಮಿಂದ್ರೇಣಾಲ್ಪ ವೀರ್ಯೇಣ ಕಂ ಹರೇಣೈಕಚಾರಿಣಾ ।
ಹರಿಣಾ ವಾಪಿ ಕಂ ಸಾಧ್ಯಂ ಛಿದ್ರೇಷ್ವಸುರಘಾತಿನಾ ॥ ೪ ॥

ಕಮಾದಿತ್ಯೈಃ ಕಂ ವಸುಭಿರಲ್ಪವೀರ್ಯೈಃ ಕಮಗ್ನಿಭಿಃ ।
ಕಂ ವಾನ್ಯೈರಮರೈಸ್ಸರ್ವೈಃ ಮದ್ಬಾಹುಬಲನಿರ್ಜಿತೈಃ ॥ ೫ ॥

ಕಂ ನ ದೃಷ್ಟ್ವೋsಮರಪತಿರ್ಮಯಾ ಸಂಯುಗಮೇತ್ಯ ಸಃ ।
ಪ್ಲಷ್ಟೋ ನೈವ ವಹನ್ಬಾಣಾನಪಗಚ್ಛನ್ನ ವಕ್ಷಸಾ ॥ ೬ ॥

ಮದ್ಬಾಷ್ಪೇವಾರಿತಾ ವೃಷ್ಟಿರ್ಯದಾ ಶಕ್ರೇಣ ಕಂ ತದಾ ।
ಮದ್ಬಾಣಭಿನ್ನೈರ್ಜಲದೈರಾಪೋಮುಕ್ತಾ ಯಥೇಪ್ಸಿತಾಃ ॥ ೭ ॥

ಕಮುರ್ವ್ಯಾಮವನೀಪಾಲಾಃ ಮದ್ಬಾಹುಬಲಭೀರವಃ ।
ನ ಸರ್ವೇ ಸನ್ನತಿಂ ಯಾತಾಃ ಜರಾಸಂಧ ಮೃತೇ ಗುರುಂ ॥ ೮ ॥

ತಪಸ್ವಿಯಾದ ಶಿವನೇನು ಮಾಡುವನು, ಅಜಾಗರೂಕರಾಗಿದ್ದ ಸಮಯದಲ್ಲಿ ರಾಕ್ಷಸರನ್ನು ನಾಶಮಾಡುವ ಹರಿಯು ಏನು ಮಾಡಬಲ್ಲನು ? ದ್ವಾದಶಾದಿತ್ಯರು, ಅಷ್ಟವಸುಗಳು, ತ್ರೇತಾಗ್ನಿಗಳು ಮಿಕ್ಕ ಸಮಸ್ತ ದೇವತೆಗಳು ಇವರೆಲ್ಲರೂ ಅಲ್ಪಪರಾಕ್ರಮವುಳ್ಳವರು. ಇವರೆಲ್ಲರನ್ನೂ ನಾನು ಮೊದಲೇ ಜಯಿಸಿರುವೆನು.

೬-೮. ದೇವೇಂದ್ರನು ನನ್ನೊಡನೆ ಯುದ್ಧಕ್ಕೆ ಬಂದು ಎದುರಾಗಿ ನಿಲ್ಲದೆ ಓಡುತ್ತಿರಲು ನನ್ನ ಬಾಣಗಳು ಅವನ ಹಿಂದೆ ಹೋಗಿ ಚುಚ್ಚಿದುದನ್ನು ನೀವು ನೋಡಲಿಲ್ಲವೆ ? ದೇವೇಂದ್ರನು ನನ್ನ ರಾಜ್ಯದಲ್ಲಿ ಮಳೆಯನ್ನು ಸುರಿಸದೆ ಹೋಗಲು ನಾನು ಬಾಣಗಳಿಂದ ಮೇಘವನ್ನು ಭೇದಿಸಿದ ಮೇಲೆ ವಿಶೇಷವಾಗಿ ಮಳೆ ಸುರಿಯಿತು. ಭೂಮಿಯೆಲ್ಲಿರುವ ರಾಜರಲ್ಲಿ ನನ್ನ ಮಾವನಾದ ಜರಾಸಂಧನನ್ನು ಬಿಟ್ಟು ಮಿಕ್ಕ ರಾಜರೆಲ್ಲರೂ ನನ್ನ ಬಾಹುಬಲಕ್ಕೆ ಹೆದರಿ ನನಗೆ ವಿಧೇಯರಾಗಿರುವುದಿಲ್ಲವೇ ?

ಅಮರೇಷು ಮಮಾವಜ್ಞಾ ಜಾಯತೇ ದೈತ್ಯಪುಂಗವಾಃ।
ಹಾಸ್ಯಂ ಮೇ ಜಾಯತೇ ವೀರಾಸ್ತೇಷು ಯತ್ನಪರೇಷ್ವಪಿ ॥ ೯ ॥

ತಥಾಪಿ ಖಲು ದುಷ್ಪಾನಾಂ ತೇಷಾಮಸ್ಯಧಿಕಂ ಮಯಾ।
ಅಪಕಾರಾಯ ದೈತ್ಯೇಂದ್ರಾ ಯತನೀಯಂ ದುರಾತ್ಮನಾಂ ॥ ೧೦ ॥

ತದ್ಯೇ ಯಶಸ್ವಿನಃ ಕೇಚಿತ್ಪೃಥಿವ್ಯಾಂ ಯೇ ಚ ಯಜ್ವನಃ।
ಕಾರ್ಯೋ ದೇವಾಪಕಾರಾಯ ತೇಷಾಂ ಸರ್ವಾತ್ಮನಾ ವಧಃ ॥ ೧೧ ॥

ಉತ್ಪನ್ನಶ್ಚಾಪಿ ಮೇ ಮೃತ್ಯುಃ ಭೂತಪೂರ್ವಸ್ಸ ವೈ ಕಿಲ।
ಇತ್ಯೇತದ್ದಾರಿಕಾ ಸ್ಮಾಹ ದೇವಕೀಗರ್ಭಸಂಭವಾ ॥ ೧೨ ॥

ತಸ್ಮಾದ್ಬಾಲೇಷು ಚ ಪರೋ ಯತ್ನಃ ಕಾರ್ಯೋ ಮಹೀತಲೇ।
ಯತೋಽದ್ರಿಕ್ತಂ ಬಲಂ ಬಾಲೇ ಸ ಹಂತವ್ಯಃ ಪ್ರಯತ್ನತಃ ॥ ೧೩ ॥

೯-೧೦. ದೈತ್ಯಶ್ರೇಷ್ಠರೇ! ದೇವತೆಗಳ ವಿಷಯದಲ್ಲಿ ನನಗೆ ಅಲಕ್ಷ್ಯವುಂಟಾಗಿರುತ್ತದೆ. ಹಾಗಾದರೂ ಅವರು ಪ್ರಯತ್ನ ಮಾಡುತ್ತಿರುವರೆಂದರೆ ನನಗೆ ನಗು ಬರುತ್ತದೆ. ಆದರೂ ಆ ದುಷ್ಪರಾದ ದೇವತೆಗಳಿಗೆ ಅಪಕಾರಮಾಡುವುದಕ್ಕಾಗಿ ನಾವು ಪ್ರಯತ್ನ ಮಾಡಬೇಕು.

೧೧-೧೩. ಅದಕ್ಕಾಗಿ ಭೂಮಿಯಲ್ಲಿ ಹೆಸರಾದ ಯೆಜ್ಞಮಾಡತಕ್ಕವರಿದ್ದರೆ ದೇವತೆಗಳಿಗೆ ಅಪಕಾರ ಮಾಡುವುದಕ್ಕಾಗಿ ಅವರನ್ನು ಖಂಡಿತವಾಗಿ ಕೊಲ್ಲಬೇಕು. (ಇದರಿಂದ ಹವಿಸ್ಸಿಲ್ಲದೆ ದೇವತೆಗಳು ನಾಶವಾಗುವರೆಂದು ಭಾವವು) ನನ್ನನ್ನು ಕೊಲ್ಲುವ ಬಾಲಕನು ಹುಟ್ಟಿರುವನೆಂದು ದೇವಕಿಯಲ್ಲಿ ಹುಟ್ಟಿದ ಕನ್ಯೆಯು ಹೇಳಿದಳು. ಆದುದರಿಂದ ಭೂಮಂಡಲದಲ್ಲಿ ವಿಶೇಷವಾದ ಬಲವುಳ್ಳ ಬಾಲಕರು ಕಂಡು ಬಂದರೆ ಪ್ರಯತ್ನ ಪೂರ್ವಕವಾಗಿ ಅವರನ್ನು ಕೊಲ್ಲಬೇಕು.

ಇತ್ಯಾಜ್ಞಾಪ್ಯಾಸುರಾನ್ಕಂಸಃ ಪ್ರವಿವೇಶಾಶು ಗೃಹಂ ತತಃ ।
ಮುಮೋಚ ವಸುದೇವಂ ಚ ದೇವಕೀಂ ಚ ನಿರೋಧತಃ ॥ ೧೪ ॥

॥ ಕಂಸಃ ॥

ಯುವಯೋಃ ಕ್ಷೌತಿತಾ ಗರ್ಭಾ ವೃಥೈವೈತೇಮ ಯಾಧುನಾ ।
ಕೋಽನ್ಯ ಏವ ನಾಶಾಯ ಮಮ ಗರ್ಭಸ್ಯಮುದ್ಯತಃ ॥ ೧೫ ॥

ತದಲಂ ಪರಿತಾಪೇನ ನೂನಂ ತದ್ಭಾವಿನೋ ಹಿ ತೇ ।
ಅರ್ಭಕಾ ಯುವಯೋರ್ದೋಷಾಚ್ಚಾಯುಷೋ ಯದ್ವಿಯೋಜಿತಾಃ॥೧೬॥

॥ ಶ್ರೀ ಪರಾಶರಃ ॥

ಇತ್ಯಾಶ್ವಾಸ್ಯ ವಿಮುಕ್ತ್ವಾ ಚ ಕಂಸಸ್ತೌ ಪರಿಶಂಕಿತಃ ।
ಅಂತರ್ಗೃಹಂ ದ್ವಿಜಶ್ರೇಷ್ಠ ಪ್ರವಿವೇಶ ತತಃ ಸ್ವಕಂ ॥ ೧೭ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ಚತುರ್ಥೋಽಧ್ಯಾಯಃ

೧೪-೧೭. ಹೀಗೆಂದು ಕಂಸನು ಅಸುರರಿಗೆ ಅಪ್ಪಣೆ ಮಾಡಿ ತನ್ನ ಮನೆಯನ್ನು ಪ್ರವೇಶಿಸಿದನು. ಮತ್ತು ವಸುದೇವ ದೇವಕಿಯರನ್ನು ಸೆರೆಯಿಂದ ಬಿಟ್ಟುಬಿಟ್ಟನು. ಮತ್ತು ಅವರನ್ನು ಕುರಿತು "ನಿಮ್ಮ ಮಕ್ಕಳನ್ನು ನಾನು ವ್ಯರ್ಥವಾಗಿ ಕೊಂದೆನು. ನನ್ನ ನಾಶಕ್ಕಾಗಿ ಯಾವನೋ ಎಲ್ಲಿಯೋ ಹುಟ್ಟಿರುವನು. ದುಃಖದಿಂದ ಸಂತಾಪ ಪಡುವುದು ಪ್ರಯೋಜನವಿಲ್ಲ. ನಿಮ್ಮ ಮಕ್ಕಳು ಆ ರೀತಿಯಲ್ಲಿ ಮರಣಹೊಂದ ಬೇಕಾದ ಕರ್ಮಫಲವಿದ್ದಿತು." ಆಯುಸ್ಸಿಲ್ಲದುದರಿಂದ ನಾಶವಾದರು. ಎಂದು ಹೇಳಿದನು.

೧೭. ಮೈತ್ರೇಯನೇ! ಕಂಸನು ಹೀಗೆಂದು ಹೇಳಿ ಆ ದೇವಕೀ ವಸುದೇವರನ್ನು ಸಮಾಧಾನಪಡಿಸಿ ಕಳುಹಿಸಿಕೊಟ್ಟು ತಾನು ತನ್ನ ಜೀವನ ವಿಷಯದಲ್ಲಿ ಸಂದೇಹ ವುಳ್ಳವನಾಗಿ ಮನೆಯೊಳಕ್ಕೆ ಹೋದನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ
ನಾಲ್ಕನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಪಂಚಮೋಽಧ್ಯಾಯಃ

॥ ಶ್ರೀ ಪರಾಶರಃ ॥

ವಿಮುಕ್ತೋ ವಸುದೇವೋಽಪಿ ನಂದಸ್ಯ ಶಕಟಂ ಗತಃ ।
ಪ್ರಹೃಷ್ಟಂ ದೃಷ್ಟವಾನ್ನಂದಂ ಪುತ್ರೋ ಜಾತೋ ಪುಮೇತಿ ವೈ ॥ ೧ ॥

ವಸುದೇವೋಽಪಿ ತಂ ಪ್ರಾಹ ದಿಷ್ಟ್ಯಾ ದಿಷ್ಟ್ಯೇತಿ ಸಾದರಂ ।
ವಾರ್ಧಕೇಽಪಿ ಸಮುತ್ಪನ್ನಸ್ತನಯೋಽಯಂ ತವಾಧುನಾ ॥ ೨ ॥

ದತ್ತೋ ಹಿ ವಾರ್ಷಿಕೈಸ್ಸರ್ವೈ ಭವದ್ಭಿರ್ನೃಪತೇಃ ಕರಃ ।
ಯದರ್ಥಮಾಗತಾಸ್ತಸ್ಮಾತ್ ನಾತ್ರ ಸ್ಥೇಯಂ ಮಹಾಧನೈಃ ॥ ೩ ॥

ಐದನೆಯ ಅಧ್ಯಾಯವು

೧-೩. ಕಂಸನ ಸೆರೆಯಿಂದ ಬಿಡುಗಡೆಯಾದ ವಸುದೇವನು ಬಾಲಕನಾದ ಕೃಷ್ಣನನ್ನು ಕೊಲ್ಲುವುದಕ್ಕಾಗಿ ಕಂಸನು ದೈತ್ಯರನ್ನು ಕಳುಹಿಸಿರುವನೆಂಬುದನ್ನು ತಿಳಿದಿದ್ದುದರಿಂದ ಆ ಬಾಲಕನ ರಕ್ಷಣೆಗಾಗಿ ನಂದನಿಗೆ ಎಚ್ಚರಿಕೆಯನ್ನು ಕೊಟ್ಟು ಗೋಕುಲಕ್ಕೆ ಕಳುಹಿಸುವುದಕ್ಕಾಗಿ, ತನಗೆ ಮಗನು ಹುಟ್ಟಿದನೆಂದು ಸಂತೋಷಪಡುತ್ತ ಗಾಡಿಯನ್ನು ಬಿಟ್ಟುಕೊಂಡು ನಿಂತಿದ್ದ ನಂದನ ಬಂಡಿಯ ಹತ್ತಿರಕ್ಕೆ ಹೋದನು. ಅಲ್ಲಿ ವಸುದೇವನು ನಂದನನ್ನು ಕುರಿತು ಪ್ರೀತಿಯಿಂದ "ಅಯ್ಯಾ! ನಂದನೇ! ನೀನೇ ಪುಣ್ಯವಂತನು. ಈ ಮುಪ್ಪಿನಲ್ಲಿ ನಿನಗೊಬ್ಬ ಮಗನು ಹುಟ್ಟಿದನು.

ಯದರ್ಥಮಾಗತಾಃ ಕಾರ್ಯಂ ತನ್ನಿಷ್ಪನ್ನಂ ಕಿಮಾಸ್ಯತೇ ।
ಭವದ್ಭಿರ್ಗಮ್ಯತಾಂ ನಂದ ತಚ್ಛೀಘ್ರಂ ನಿಜಗೋಕುಲಂ ॥ ೪ ॥

ಮಮಾಪಿ ಬಾಲಕಸ್ತತ್ರ ರೋಹಿಣೀಪ್ರಭವೋ ಹಿ ಯಃ ।
ಸ ರಕ್ಷಣೀಯೋ ಭವತಾ ಯಥಾಯಂ ತನಯೋನಿಜಃ ॥ ೫ ॥

ಇತ್ಯುಕ್ತಾಃ ಪ್ರಯಯುರ್ಗೋಪಾಃ ನಂದಗೋಪಪುರೋಗಮಾಃ ।
ಶಕಟಾರೋಪಿತೈರ್ಭಾಂಡೈಃ ಕರಂ ದತ್ತ್ವಾ ಮಹಾಬಲಾಃ ॥ ೬ ॥

ವಸತಾಂ ಗೋಕುಲೇ ತೇಷಾಂ ಪೂತನಾ ಬಾಲಘಾತಿನೀ ।
ಸುಪ್ತಂ ಕೃಷ್ಣಮುಪಾದಾಯ ರಾತ್ರೌ ತಸ್ಮೈ ಸ್ತನಂ ದದೌ ॥ ೭ ॥

ಯಸ್ಮೈ ಯಸ್ಮೈ ಸ್ತನಂ ರಾತ್ರೌ ಪೂತನಾ ಸಂಪ್ರಯಚ್ಛತಿ ।
ತಸ್ಯ ತಸ್ಯ ಕ್ಷಣೇನಾಂಗಂ ಬಾಲಕಸ್ಯೋಪಹನ್ಯತೇ ॥ ೮ ॥

ರಾಜನಿಗೆ ಕೊಡಬೇಕಾದ ವರ್ಷಗಟ್ಟಲೆಯ ಪೊಗದಿಯನ್ನು ಕೊಡುವುದಕ್ಕಾಗಿ ನೀನು ಬಂದಿದ್ದೆ. ಅದನ್ನು ಸಲ್ಲಿಸಿಯಾಯಿತು. ಧನವಂತನಾದ ನೀನು ಇಲ್ಲಿರ ಬಾರದು. ನೀನು ಬಂದ ಕೆಲಸವಾದಮೇಲೆ ಇಲ್ಲಿ ಯಾವ ಕಾರಣದಿಂದ ನಿಲ್ಲುವೆ? ಬೇಗ ನಿಮ್ಮ ಗೋಕುಲಕ್ಕೆ ಹೋಗು. ನನ್ನ ಪತ್ನಿಯಾದ ರೋಹಿಣಿಯ ಮಗನಾದ ಬಾಲಕನೂ ಅಲ್ಲಿರುವನು. ನಿನ್ನ ಮಗನಂತೆ ಅವನನ್ನೂ ನೀನು ರಕ್ಷಿಸಬೇಕು." ಎಂದು ಹೇಳಿದನು.

೬-೧೦. ಈ ಮಾತನ್ನು ಕೇಳಿದ ನಂದಗೊಪನೇ ಮೊದಲಾದ ಗೊಲ್ಲರು ಗಾಡಿಯಮೇಲೆ ತನುಗೆ ಬೇಕಾದ ಭಾಂಡವೇ ಮುಂತಾದ ಪದಾರ್ಥಗಳನ್ನು ತುಂಬಿ ಕೊಂಡು ಗೋಕುಲಕ್ಕೆ ಪ್ರಯಾಣಮಾಡಿದರು. ಅವರೆಲ್ಲರೂ ಗೋಕುಲದಲ್ಲಿರುತ್ತಿರು ವಾಗ ಒಂದು ದಿನ ರಾತ್ರಿಯಲ್ಲಿ ಮಕ್ಕಳನ್ನು ಕೊಲ್ಲುವ ಪೂತನೆಯೆಂಬ ರಾಕ್ಷಸಿಯು ಬೇರೆ ವೇಷದಿಂದ ಗುಟ್ಟಾಗಿ ಹೋಗಿ ಕೃಷ್ಣನನ್ನೆತ್ತಿಕೊಂಡು ಅವನಿಗೆ ವಿಷಪೂರಿತವಾದ

ಕೃಷ್ಣಸ್ತು ತತ್ಸ್ತನಂ ಗಾಢಂ ಕರಾಭ್ಯಾಮತಿಪೀಡಿತಂ ।
ಗೃಹೀತ್ವಾ ಪ್ರಾಣಸಹಿತಂ ಪಪೌ ಕ್ರೋಧಸಮನ್ವಿತಃ ॥ ೯ ॥

ಸಾತಿಮುಕ್ತಮಹಾರಾವಾ ನಿಷ್ಪೀನ್ನಸ್ಯಾಯುಬಂಧನಾ ।
ಪಪಾತ ಪೂತನಾ ಭೂಮೌ ಮ್ರಿಯಮಾಣಾತಿಭೀಷಣಾ ॥ ೧೦ ॥

ತನ್ನಾದಶ್ರುತಿಸಂತ್ರಸ್ತಾಃ ಪ್ರಬುದ್ಧಾಸ್ತೇ ವ್ರಜೌಕಸಃ ।
ದದೃಶುಃ ಪೂತನೋತ್ಸಂಗೇ ಕೃಷ್ಣಂ ತಾಂ ಚ ನಿಪಾತಿತಾಂ ॥ ೧೧ ॥

ಆದಾಯ ಕೃಷ್ಣಂ ಸಂತ್ರಸ್ತಾ ಯಶೋದಾಪಿ ದ್ವಿಜೋತ್ತಮ ।
ಗೋಪುಚ್ಛಭ್ರಾಮಣೇನಾಥ ಬಾಲದೋಷಮಪಾಕರೋತ್ ॥ ೧೨ ॥

ಗೋಕರೀಷಮುಪಾದಾಯ ನಂದಗೋಪೋಪಿ ಮಸ್ತಕೇ ।
ಕೃಷ್ಣಸ್ಯ ಪ್ರದದೌರಕ್ಷಾಂ ಕುರ್ವಂಶ್ಚೈತದುದೀರಯನ್ ॥ ೧೩ ॥

ತನ್ನ ಸ್ತನವನ್ನು ಕೊಟ್ಟಳು. ಪೂತನಿಯು ಯಾವ ಯಾವ ಮಕ್ಕಳಿಗೆ ರಾತ್ರಿಯ ಹೊತ್ತು ಸ್ತನವನ್ನು ಕೊಡುವಳೋ ಆ ಮಕ್ಕಳು ಆ ಕ್ಷಣದಲ್ಲಿಯೇ ಮರಣ ಹೊಂದುತ್ತಿದ್ದರು. ಕೃಷ್ಣನಾದರೋ ಆವಳ ಸ್ತನವನ್ನು ಗಟ್ಟಿಯಾಗಿ ಕೈಯಿಂದ ಅಮುಕಿ ಕೋಪದಿಂದ ಆವಳ ಪ್ರಾಣವಾಯುವಿನೊಡನೆ ಆ ಸ್ತನ್ಯವನ್ನು ಪಾನಮಾಡಿದನು. ಆವಳು ಗಟ್ಟಿಯಾಗಿ ಕೂಗಿಕೊಳ್ಳುತ್ತ ಶರೀರದ ಮೂಳೆಯ ಕಟ್ಟುಗಳೆಲ್ಲ ಸಡಿಲವಾಗಿ ಸತ್ತು ಭಯಂಕರಾಕಾರದಿಂದ ಭೂಮಿಯಮೇಲೆ ಬಿದ್ದಳು.

೧೧-೧೩. ಆ ದೊಡ್ಡ ಕೂಗನ್ನು ಕೇಳಿ ಭಯಪಟ್ಟು ನಿದ್ರೆಯಿಂದ ಎಚ್ಚರಗೊಂಡ ವ್ರಜದ ಜನರು ಪೂತನಿಯ ತೊಡೆಯಮೇಲೆ ಇರುವ ಕೃಷ್ಣನನ್ನೂ ಸತ್ತು ಬಿದ್ದಿದ್ದ ಆವಳನ್ನೂ ನೋಡಿದರು. ಯಶೋದೆಯು ಭಯದಿಂದ ಕೃಷ್ಣನನ್ನೆತ್ತಿ ಕೊಂಡು ಹಸುವಿನ ಬಾಲದಿಂದ ನೇವಳಿಸಿ ಬಾಲಗ್ರಹರೂಪವಾದ ದೋಷವನ್ನು ನಾಶಮಾಡಿದಳು. ನಂದಗೋಪನು ಹಸುವಿನ ಸಗಣಿಯನ್ನು ತೆಗೆದುಕೊಂಡು ಕೃಷ್ಣನ ತಲೆಗೆ ರಕ್ಷೆಯನ್ನಿಡುತ್ತ ಮುಂದೆ ಹೇಳುವಂತೆ ಹೇಳುತ್ತಿದ್ದನು.

॥ ನಂದಗೋಪಃ ॥

ರಕ್ಷತು ತ್ವಾಮಶೇಷಾಣಾಂ ಭೂತಾನಾಂ ಪ್ರಭವೋ ಹರಿಃ ।
ಯಸ್ಯ ನಾಭಿಸಮುದ್ಭೂತಪಂಕಜಾತಭವಂ ಜಗತ್ ॥ ೧೪ ॥

ಯೇನ ದಂಷ್ಟ್ರಾಗ್ರವಿಧೃತಾ ಧಾರಯತ್ಯವನಿರ್ಜಗತ್ ।
ವರಾಹರೂಪಧೃಗ್ದೇವಸ್ಸ ತ್ವಾಂ ರಕ್ಷತು ಕೇಶವಃ ॥ ೧೫ ॥

ನಖಾಂಕುರವಿನಿರ್ಭಿನ್ನ ವೈರಿವಕ್ಷಸ್ಥಲೋ ವಿಭುಃ ।
ನೃಸಿಂಹರೂಪೀ ಸವ[illegible] ತ್ವಾಂ ಜನಾರ್ದನಃ ॥ ೧೬ ॥

ವಾಮನೋ ರಕ್ಷತು ಸದಾ ಭವಂತಂ ಯಃ ಕ್ಷಣಾದಭೂತ್ ।
ತ್ರಿವಿಕ್ರಮಕ್ರಮಾಕ್ರಾಂತ ತ್ರೈಲೋಕ್ಯಃ ಸ್ಫುರದಾಯುಧಃ ॥ ೧೭ ॥

ಶಿರಸ್ತೇ ಪಾತು ಗೋವಿಂದಃ ಕಂಠಂ ರಕ್ಷತು ಕೇಶವಃ ।
ಗುಹ್ಯಂ ಸ ಜಠರಂ ವಿಷ್ಣುರ್ಜಂಘೇ ಪಾದೌ ಜನಾರ್ದನಃ ॥ ೧೮ ॥

೧೪-೧೮. “ಸಮಸ್ತ ಭೂತಗಳನ್ನೂ ಸೃಷ್ಟಿಸಿದ ಹರಿಯು ನಿನ್ನನ್ನು ರಕ್ಷಿಸಲಿ ಆ ಹರಿಯ ಹೊಕ್ಕುಳಲ್ಲಿ ಹುಟ್ಟಿದ ಕಮಲದಲ್ಲಿ ಈ ಬ್ರಹ್ಮಾಂಡವು ಹುಟ್ಟಿತು. ಆ ಹರಿಯು ವರಾಹರೂಪವನ್ನು ಧರಿಸಿ ತನ್ನ ಕೋರೆ ಹಲ್ಲಿನಿಂದ ಭೂಮಿಯನ್ನೆತ್ತಿ ತಂದನು. ಭೂಮಿಯಮೇಲೆ ಈ ಸಮಸ್ತ ಜಗತ್ತೂ ಇರುವುದು. ಇಂತಹ ವರಾಹ ರೂಪವನ್ನು ಧರಿಸಿದ ವಿಷ್ಣುವು ನಿನ್ನನ್ನು ಕಾಪಾಡಲಿ. ನೃಸಿಂಹಾವತಾರವನ್ನು ಮಾಡಿ ತನ್ನ ಉಗುರಿನ ತುದಿಯಿಂದ ರಾಕ್ಷಸನ ಎದೆಯನ್ನು ಸೀಳಿದ ನೃಸಿಂಹನು ನಿನ್ನನ್ನು ಎಲ್ಲೆಡೆಯಲ್ಲೆಯೂ ರಕ್ಷಿಸಲಿ. ಒಂದು ಕ್ಷಣದೊಳಗಾಗಿ ತ್ರಿವಿಕ್ರಮಾವತಾರವನ್ನು ಮಾಡಿ ಮೂರು ಲೋಕವನ್ನೂ ಆಕ್ರಮಿಸಿದ ವಾಮನನು ನಿನ್ನನ್ನು ರಕ್ಷಿಸಲಿ. ಗೋವಿಂದನು ನಿನ್ನ ತಲೆಯನ್ನೂ, ಕೇಶವನು ಕುತ್ತಿಗೆಯನ್ನೂ

ಮುಖಂ ಬಾಹೂ ಸ್ತಬಾಪೂ ಚ ಮನಸ್ಸರ್ವೇಂದ್ರಿಯಾಣಿ ಚ ।
ರಕ್ಷತ್ವವ್ಯಾಹತೈಶ್ವರ್ಯಸ್ತವ ನಾರಾಯಣೋಽವ್ಯಯಃ ॥ ೧೯ ॥

ಶಾರ್ಙ್ಗಚಕ್ರಗದಾಸಾಣೇಶ್ಯಂಖನಾದಪತಾಃ ಕ್ಷಯಂ ।
ಗಚ್ಛಂತು ಪ್ರೇತಕೂಷ್ಮಾಂಡ ರಾಕ್ಷಸಾ ಯೇ ತವಾಹಿತಾಃ ॥ ೨೦ ॥

ತ್ವಾಂ ಪಾತು ದಿಕ್ಷು ವೈಕುಂಠೋ ವಿದಿಕ್ಷು ಮಧುಸೂದನಃ ।
ಹೃಷೀಕೇಶೋಂಬರೇ ಭೂಮೌ ರಕ್ಷತು ತ್ವಾಂ ಮಹೀಧರಃ ॥ ೨೧ ॥

॥ ಶ್ರೀ ಪರಾಶರಃ ॥

ಏವಂ ಕೃತಸ್ವಸ್ತ್ಯಯನೋ ನಂದಗೋಪೇನ ಬಾಲಕಃ ।
ಶಾಯಿತಶ್ಶಕಟಸ್ಯಾಧೋ ಬಾಲಪರ್ಯಂಕಿಕಾತಲೇ ॥ ೨೨ ॥

ವಿಷ್ಣುವು ಗುಹ್ಯವನ್ನೂ, ಹೊಟ್ಟೆಯನ್ನೂ ಜನಾರ್ದನನು, ಮೊಳಕಾಲು ಮತ್ತು ಹೆಜ್ಜೆಗಳನ್ನೂ ನಾರಾಯಣನು, ಮುಖ, ತೋಳು, ಕೈ, ಮನಸ್ಸು, ಇಂದ್ರಿಯಗಳು ಇವುಗಳನ್ನೂ ರಕ್ಷಿಸಲಿ.

೨೦-೨೧. ಶಾರ್ಙ್ಗ ಚಕ್ರ ಗದೆಗಳನ್ನು ಧರಿಸಿದ ದೇವನ ಶಂಖಧ್ವನಿಯಿಂದ ನಿನ್ನ ಶತ್ರುಗಳಾದ ಪ್ರೇತ, ಕೂಷ್ಮಾಂಡ, ರಾಕ್ಷಸ ಮುಂತಾದ ಗ್ರಹಗಳು ನಾಶ ಹೊಂದಲಿ. ವೈಕುಂಠನು ದಿಕ್ಕುಗಳಲ್ಲಿಯೂ, ಮಧುಸೂದನನು ವಿದಿಕ್ಕುಗಳಲ್ಲಿಯೂ, ಹೃಷೀಕೇಶನು ಆಕಾಶದಲ್ಲಿಯೂ, ಮಹೀಧರನು ಭೂಮಿಯಲ್ಲಿಯೂ, ನಿನ್ನನ್ನು ರಕ್ಷಿಸಲಿ" ಎಂದು ಹೇಳಿದನು.

೨೨-೨೩. ನಂದಗೋಪನು ಈ ರೀತಿಯಲ್ಲಿ ಶಾಂತಿಕರ್ಮವನ್ನು ಮಾಡಿ ಮಗುವಾದ ಕೃಷ್ಣನನ್ನು ಗಾಡಿಯ ತಳಗೆ ಮೆಳ್ಳ ಹಾಸಿಗೆಯಲ್ಲಿ ಮಲಗಿಸಿದನು.

ತೇ ಚ ಗೋಪಾ ಮಹದ್ದೃಷ್ಟ್ವಾ ಪೂತನಾಯಾಃ ಕಳೇಬರಂ ।
ಮೃತಾಯಾಃ ಪರಮಂ ತ್ರಾಸಂ ವಿಸ್ಮಯಂ ಚ ತದಾ ಯಯುಃ ॥ ೨೩ ॥

ಇತಿ ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ ಪಂಚಮೋಽಧ್ಯಾಯಃ

ಅಲ್ಲಿದ್ದ ಗೊಲ್ಲರು ಪ್ರಾಣವಿಲ್ಲದ ಪೂತನಿಯ ಶರೀರವನ್ನು ನೋಡಿ ಅತ್ಯಂತ ಭಯವನ್ನೂ ಆಶ್ಚರ್ಯವನ್ನೂ ಹೊಂದಿದರು.

ಎಂಬಲ್ಲಿಗೆ ಶ್ರೀ ವಿಷ್ಣು ಪುರಾಣದ ಪಂಚಮಾಂಶದಲ್ಲಿ
ಐದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಷಷ್ಠೋಧ್ಯಾಯಃ

॥ ಶ್ರೀ ಪರಾಶರಃ ॥

ಕದಾಚಿಚ್ಛಕಟಸ್ಯಾಧಶ್ಶಯಾನೋ ಮಧುಸೂದನಃ ।
ಚಿಕ್ಷೇಪ ಚರಣಾವೂರ್ಧ್ವಂ ಸ್ತನ್ಯಾರ್ಥೀ ಪ್ರರುರೋದ ಹ ॥ ೧ ॥

ತಸ್ಯ ಪಾದಪ್ರಹಾರೇಣ ಶಕಟಂ ಪರಿವರ್ತಿತಂ ।
ವಿಧ್ವಸ್ತಕುಂಭಭಾಂಡಂ ಚಕ್ರಿಪರೀತಂ ಹಪಾತ ವೈ ॥ ೨ ॥

ತತೋ ಹಾಹಾಕೃತಸ್ಸರ್ವೋ ಗೋಪಗೋಪೀಜನೋ ದ್ವಿಜ ।
ಆಜಗಾಮಾಥ ದದೃಶೇ ಬಾಲಮುತ್ತಾನಶಾಯಿನಂ ॥ ೩ ॥

ಆರನೆಯ ಅಧ್ಯಾಯವು.

೧–೫. ಒಂದಾನೊಂದು ದಿನ ಬಂಡಿಯ ಕೆಳಗೆ ಮಲಗಿದ್ದ ಕೃಷ್ಣನು ಸ್ತನ್ಯ ಪಾನ ಮಾಡಬೇಕೆಂದು ಅಳುತ್ತ ತನ್ನ ಕಾಲುಗಳಿಂದ ಮೇಲ್ಗಡೆಗೆ ಒದೆದನು ಅವನ ಕಾಲಿನ ಏಟಿನಿಂದ ಗಾಡಿಯು ತಿರುಗಿ ಅದರಲ್ಲಿದ್ದ ಗಡಿಗೆ, ಮಡಕೆ, ಮುಂತಾದುವು ಒಡೆದು ಬಿದ್ದುವು. ಆಗ ಎಲ್ಲ ಗೊಲ್ಲರೂ, ಗೋಪಿಯರೂ ಹಾಹಾಕಾರ ಮಾಡುತ್ತ ಬಂದು ಮೇಲ್ಮೊಗನಾಗಿ ಮಲಗಿದ್ದ ಕೃಷ್ಣನನ್ನು ಕಂಡರು. ಗೋಪರು ಈ ಗಾಡಿಯನ್ನು ಯಾರು ತಿರುಗಿಸಿದರು ? ಎಂದು ಕೇಳುತ್ತಲು ಅಲ್ಲಿದ್ದ ಹುಡುಗರು ಮಗು

ಗೋಪಾಃ ಕೇನೇತಿ ಕೇನೇದಂ ಶಕಟಂ ಪರಿವರ್ತಿತಂ ।
ತತ್ರೈವ ಬಾಲಕಾಃ ಪ್ರೋಚುರ್ಬಾಲೇನಾನೇನ ಪಾತಿತಂ ॥ ೪ ॥

ರುದತಾ ದೃಷ್ಟಮಸ್ಮಾಭಿಃ ಪಾದವಿಕ್ಷೇಪ ಪಾತಿತಂ ।
ಶಕಟಂ ಪರಿವೃತ್ತಂ ವೈ ನೈತದನ್ಯಸ್ಯ ಚೇಷ್ಟಿತಂ ॥ ೫ ॥

ತತಃ ಪುನರತೀವಾಸನ್ ಗೋಪಾ ವಿಸ್ಮಿತಚೇತಸಃ ।
ನಂದಗೋಪೋಽಪಿ ಜಗ್ರಾಹ ಬಾಲಮತ್ಯಂತವಿಸ್ಮಿತಃ ॥ ೬ ॥

ಯಶೋದಾ ಶಕಟಾರೂಢಭಗ್ನ ಭಾಂಡಕಪಾಲಿಕಾ ।
ಶಕಟಂ ಚಾರ್ಚಯಾಮಾಸ ದಧಿಪುಷ್ಪಫಲಾಕ್ಷತೈಃ ॥ ೭ ॥

ಗರ್ಗಶ್ಚ ಗೋಕುಲೇ ತತ್ರ ವಸುದೇವಪ್ರಚೋದಿತಃ ।
ಪ್ರಚ್ಛನ್ನ ಏವ ಗೋಪಾನಾಂ ಸಂಸ್ಕಾರಾನಕರೋತ್ತಯೋಃ ॥ ೮ ॥

ಜ್ಯೇಷ್ಠಂ ಚ ರಾಮಮಿತ್ಯಾಹ ಕೃಷ್ಣಂ ಚೈವ ತಥಾ ಪರಂ ।
ಗರ್ಗೋ ಮತಿಮತಾಂ ಶ್ರೇಷ್ಠೋ ನಾಮ ಕುರ್ವನ್ಮಹಾಮತಿಃ ॥ ೯ ॥

ವಾದ ಈ ಕೃಷ್ಣನೇ ಬಂಡಿಯನ್ನು ಕೆಡವಿದನೆಂದೂ ಅಳುತ್ತ ಕಾಲಿನಿಂದ ಒದೆದು ಕೆಡವಿದುದನ್ನು ನಾವು ನೋಡಿದೆನೆಂದೂ ಬಂಡಿಯನ್ನು ಯಾರೂ ತಿರುಗಿಸಲಿಲ್ಲವೆಂದು ಹೇಳಿದರು.

೬-೭. ಬಳಿಕ ಗೋಪರು ಮತ್ತೆ ವಿಶೇಷವಾಗಿ ಆಶ್ಚರ್ಯಪಟ್ಟರು. ನಂದ ಗೋಪನೂ ಅತ್ಯಂತಾಶ್ಚರ್ಯದಿಂದ ಮಗುವನ್ನು ಎತ್ತಿಕೊಂಡನು. ಯಶೋದೆಯು ಗಾಡಿಯ ಮೇಲಿದ್ದ ಒಡೆದ ಭಾಂಡದ ಚೂರುಗಳನ್ನೂ, ಗಾಡಿಯನ್ನೂ ಮೊಸರು, ಹಣ್ಣು, ಹೂ ಮೆತ್ತು ಮಂತ್ರಾಕ್ಷತೆಗಳಿಂದ ಪೂಜಿಸಿದಳು

೮-೯. ವಸುದೇವನ ಮಾತಿನಂತೆ ಯದುವಂಶಕ್ಕೆ ಪುರೋಹಿತನಾದ ಬುದ್ಧಿವಂತನಾದ ಗರ್ಗನು ಗೋಕುಲಕ್ಕೆ ಹೋಗಿ ಗೊಲ್ಲರಿಗೆ ತಿಳಿಯದಂತೆ ಇಬ್ಬರು ಬಾಲಕರಿಗೂ ಜಾತಕರ್ಮಾದಿ ಸಂಸ್ಕಾರಗಳನ್ನು ಮಾಡಿಸಿದನು. ಹಿರಿಯವನಿಗೆ ರಾಮನೆಂದೂ ಎರಡನೆಯವನಿಗೆ ಕೃಷ್ಣನೆಂದೂ ನಾಮಕರಣ ಮಾಡಿದನು.

ಸ್ವಲ್ಪೇನೈವ ತು ಕಾಲೇನ ರಂಗಿಣೌ ತೌ ತದಾ ವ್ರಜೇ ।
ಘೃಷ್ಟಜಾನುಕರೌ ವಿಪ್ರ ಬಭೂವತುರುಭಾವಪಿ ॥ ೧೦ ॥

ಕರೀಷಭಸ್ಮದಿಗ್ಧಾಂಗೌ ಭ್ರಮಮಾಣಾವಿತಸ್ತತಃ ।
ನ ನಿವಾರಯಿತುಂ ಶೇಹೇ ಯಶೋದಾ ತೌ ನ ರೋಹಿಣೀ ॥ ೧೧ ॥

ಗೋವಾಟಮಧ್ಯೇ ಕ್ರೀಡಂತೌ ವತ್ಸವಾಟಂ ಗತೌ ಪುನಃ ।
ತದಹರ್ಜಾತಗೋವತ್ಸಪುಚ್ಛಾಕರ್ಷಣತತ್ಪರೌ ॥ ೧೨ ॥

ಯದಾ ಯಶೋದಾ ತೌ ಬಾಲಾವೇಕಸ್ಥಾನಚರಾವುಭೌ ।
ಶಶಾಕ ನೋ ವಾರಯಿತುಂ ಕ್ರೀಡಂತಾವತಿಚಂಚಲೌ ॥ ೧೩ ॥

ದಾಮ್ನಾ ಮಧ್ಯೇ ತತೋ ಬದ್ಧ್ವಾ ಬಬಂಧ ತಮುಲೂಖಲೇ ।
ಕೃಷ್ಣಮಕ್ಲಿಷ್ಟಕರ್ಮಾಣಮಾಹಚೇದವಮರ್ಷಿತಾ ॥ ೧೪ ॥

ಯದಿ ಶಕ್ನೋಷಿ ಗಚ್ಛ ತ್ವಮತಿಚಂಚಲಚೇಷ್ಟಿತ ।
ಇತ್ಯುಕ್ತ್ವಾಥ ನಿಜಂ ಕರ್ಮ ಸಾ ಚಕಾರ ಕುಟುಂಬಿನೀ ॥ ೧೫ ॥

೧೦-೧೫. ಸ್ವಲ್ಪ ದಿನಸದ ಮೇಲೆ ಆ ಬಾಲಕರು ಕೈಗಳನ್ನೂ ಮಂಡಿಗಳನ್ನೂ ಊರಿ ಸಂಚರಿಸುತ್ತಾ ಆಟವಾಡುತ್ತಿದ್ದರು. ಬೆರಣಿಯ ಬೂದಿಯನ್ನು ಮೈಗೆಲ್ಲಾ ಬಳಿದುಕೊಂಡು ತಿರುಗುತ್ತಿರುವ ಬಾಲಕರನ್ನು ಯಶೋದಾ ರೋಹಿಣಿಯರು ಹಾಗೆ ಮಾಡದಂತೆ ತಡೆಯಲು ಶಕ್ತರಾಗಲಿಲ್ಲ. ಗೋವಿನ ಹಟ್ಟಿಯಲ್ಲಿ ಆಟವಾಡುತ್ತ ಕರುಗಳ ಹಟ್ಟಿಗೆ ಹೋಗಿ ಆ ದಿನವೇ ಹುಟ್ಟಿದ ಎಳೆಯ ಕರುಗಳ ಬಾಲವನ್ನು ಹಿಡಿದು ಎಳೆಯುತ್ತಿದ್ದರು. ಒಂದೇ ಕಡೆಯಲ್ಲಿ ಆಟವಾಡುತ್ತಿರುವ ಅತ್ಯಂತ ಚಪಲರಾದ ಆ ಬಾಲಕರ ಚೇಷ್ಟೆಯನ್ನು ತಡೆಯಲಾರದೆ ಯಶೋದೆಯು ಹಗ ದಿಂದ ಕೃಷ್ಣನ ಸೊಂಟಕ್ಕೆ ಕಟ್ಟಿ ಆ ಹಗ್ಗವನ್ನು ಒರಳಿಗೆ ಕಟ್ಟಿ ಕೋಪದಿಂದ "ಚೇಷ್ಟೆಯ ಹುಡುಗನೇ ಶಕ್ತಿಯಿದ್ದರೆ ಈಗ ಹೋಗು" ಎಂದು ಹೇಳಿ ತನ್ನ ಮನೆಯ ಕೆಲಸಕ್ಕೆ ಹೋದಳು.

ವ್ಯಗ್ರಾಯಾಮುಖ ತಸ್ಯಾಂ ಸ ಕರ್ಷಮಾಣ ಉಲೂಖಲಂ ।
ಯಮಳಾರ್ಜುನಮಧ್ಯೇನ ಜಗಾಮ ಕಮಲೇಕ್ಷಣಃ ॥ ೧೬ ॥

ಕರ್ಷತಾ ವೃಕ್ಷಯೋರ್ಮಧ್ಯೇ ತಿರ್ಯಗ್ಗತಮುಲೂಖಲಂ ।
ಭಗ್ನಾವುತ್ಪಾಟಿತಸ್ಕಂಧಶಾಖಾಗ್ರೌ ತೇನ ತೌ ಯಮಳಾರ್ಜುನೌ ॥ ೧೭ ॥

ತತಃ ಕಟಿಕಟಾಶಬ್ದಸಮಾಕರ್ಣನತತ್ಪರಃ ।
ಆಜಗಾಮ ವ್ರಜಜನೋ ದದರ್ಶ ಚ ಮಹಾದ್ರುಮೌ ॥ ೧೮ ॥

ನವೋದ್ಗಾಲ್ಪದಂತಾಂಶುಸಿತಹಾಸಂ ಚ ಬಾಲಕಂ ।
ತಯೋರ್ಮಧ್ಯಗತಂ ದಾಮ್ನಾ ಬದ್ಧಂ ಗಾಢಂ ತಥೋದರೇ ॥ ೧೯ ॥

ತತಶ್ಚ ದಾಮೋದರತಾಂ ಸ ಯಯೌ ದಾಮಬಂಧನಾತ್ ॥ ೨೦ ॥

೧೬-೨೦. ಯಶೋದೆಯು ತನ್ನ ಮನೆಯ ಕೆಲಸದಲ್ಲಾ ಸಕ್ತಳಾಗಿದ್ದಾಗ ಕೃಷ್ಣನು ಒರಳನ್ನು ಎಳೆದುಕೊಂಡು ಜೋಡಿಯಾಗಿ ಹುಟ್ಟಿದ್ದ ಎರಡು ಮತ್ತಿಯ ಮರಗಳ ನಡುವೆ ಹೋದನು. ಎಳೆದುಕೊಂಡು ಹೋಗುತ್ತಿದ್ದ ಒರಳು ಅಡ್ಡವಾಗಿ ಮತ್ತಿಯ ಮರಗಳ ನಡುವೆ ಸಿಕ್ಕಿಕೊಂಡಿದ್ದರಿಂದ ಎಳೆಯುವ ವೇಗದಿಂದ ಆ ಎರಡು ಎತ್ತರವಾದ ಮತ್ತಿಯ ಮರಗಳೂ ಮುರಿದು ಬಿದ್ದುವು. ಮರಗಳು ಮುರಿದುಬಿದ್ದ ಶಬ್ದವನ್ನು ಕೇಳಿ ವ್ರಜದ ಜನರೆಲ್ಲರೂ ಬಂದು ಮುರಿದುಬಿದ್ದಿರುವ ಆ ಮರಗಳನ್ನು ನೋಡಿದರು. ಮತ್ತು ಅವುಗಳ ನಡುವೆ ಅಗತಾನೆ ಮೊಳಕೆಯಾಗಿರುವ ಹಲ್ಲುಗಳ ಬಿಳಿಯ ಕಾಂತಿಯಿಂದ ಕೂಡಿ ನಗುತ್ತಿರುವ ಸೊಂಟಕ್ಕೆ ಹಗ್ಗವನ್ನು ಕಟ್ಟಿಕೊಂಡಿರುವ ಕೃಷ್ಣನನ್ನೂ ನೋಡಿದರು. ಆಗ ಕೃಷ್ಣನಿಗೆ ಹೊಟ್ಟೆಗೆ ಹಗ್ಗವನ್ನು ಕಟ್ಟಿಕೊಂಡಿದ್ದು ದರಿಂದ ದಾಮೋದರನೆಂದು ಹೆಸರು ಬಂದಿತು.

ಮುಂಶ್ಯಯಾಮಾಸುರುದ್ವಿಗ್ನಾ ಮಹೋತ್ಪಾತಾತಿಭೀರವಃ ॥ ೨೧ ॥

ಸ್ಥಾನೇನೇಹ ನ ನಃ ಕಾರ್ಯಂ ವ್ರಜಾಮೋನ್ಯನ್ಮಹಾವನಂ ।
ಉತ್ಪಾತಾ ಬಹವೋಹ್ಯತ್ರ ದೃಶ್ಯಂತೇ ನಾಶಹೇತವಃ ॥ ೨೨ ॥

ಪೂತನಾಯಾಃ ವಿನಾಶಶ್ಚ ಶಕಟಸ್ಯ ವಿಪರ್ಯಯಃ ।
ವಿನಾ ವಾತಾದಿ ದೋಷೇಣ ದ್ರುಮಯೋಃ ಪತನಃ ತಥಾ ॥ ೨೩ ॥

ಬೃಂದಾವನಮಿತಸ್ಸ್ಥಾನಾತ್ತಸ್ಮಾದ್ಗಚ್ಛಾಮ ಮಾಚಿರಂ ।
ಯಾವದ್ಭೌಮಮಹೋತ್ಪಾತದೋಷೋ ನಾಭಿಭವೇದ್ವ್ರಜಂ ॥ ೨೪ ॥

ಇತಿ ಕೃತ್ವಾ ಮತಿಂ ಸರ್ವೇ ಗಮನೇ ತೇ ವ್ರಜೌಕಸಃ ।
ಊಚುಃ ಸ್ವಂ ಸ್ವಂ ಕುಲಂ ಶೀಘ್ರಂ ಗಮ್ಯತಾಂ ಮಾ ವಿಲಂಬಧ್ವ ॥ ೨೫ ॥

೨೧–೨೫. ॥ ಮೇಲೆ ನಂದಗೋಪನೇ ಮೊದಲಾದ ಗೋಪವೃದ್ಧರು ಕೂಡಿ ತಮಗೆ ಉಂಟಾದ ಅಪಶಕುನಗಳನ್ನು ಕಂಡು ಭಯದಿಂದ ಮುಂತ್ಯಾಲೋಚನೆ ಮಾಡಿದರು. ಎಂತೆಂದರೆ:— "ಈ ಪ್ರದೇಶದಲ್ಲಿ ನಾಶಕಾರಣವಾದ ಅನೇಕ ಅಪಶಕುನಗಳಾಗುತ್ತಿವೆ. ಆದುದರಿಂದ ಈ ಪ್ರದೇಶವು ನಮ್ಮ ವಾಸಕ್ಕೆ ಯೋಗ್ಯವಲ್ಲ ಮತ್ತೊಂದು ದೊಡ್ಡ ವನಕ್ಕೆ ಹೋಗೋಣ. ಇಲ್ಲಿ ಪೂತನೆಯೆಂಬ ರಾಕ್ಷಸಿಯು ಸತ್ತಳು. ಬಂಡಿಯು ಮುರಿದು ಬಿದ್ದಿತು. ಗಾಳಿ ಮುಂತಾದ ದೋಷಗಳಿಲ್ಲದೆ ಎರಡು ಮತ್ತಿಯ ಮರಗಳು ಬಿದ್ದುವು. ಈ ವ್ರಜದಲ್ಲಿ ಭೂಮಿಯ ಸಂಬಂಧವಾದ ಉತ್ಪಾತಗಳಾಗುವುದಕ್ಕಿಂತ ಮುಂಚಿತವಾಗಿಯೇ ಇಲ್ಲಿಂದ ಬೃಂದಾವನವೆಂಬ ಸ್ಥಳಕ್ಕೆ ಹೋಗೋಣ. ಸಾವಕಾಶ ಮಾಡಬಾರದು" ಎಂದು ನಿಶ್ಚಯಿಸಿ ಎಲ್ಲರೂ ತಂತಮ್ಮ ಕುಟುಂಬಗಳಿಗೆ "ಸಾವಕಾಶಮಾಡದೆ ಬೇಗ" ಹೊರಡಿ ಎಂದು ಅಪ್ಪಣೆಮಾಡಿದರು.

ನಂದಃ ಕ್ಷಣೇನ ಪ್ರಯಯುಶ್ಶಕಟೈರ್ಗೋಧನೈಸ್ತಥಾ ।
ಯೂಥಶೋ ವತ್ಸಪಾಲಾಶ್ಚ ಕಾಲಯಂತೋ ವ್ರಜೌಕಸಃ ॥ ೨೬ ॥

ದ್ರವ್ಯಾವಯವನಿರ್ಮುಕ್ತಂ ಕ್ಷಣಮಾತ್ರೇಣ ತತ್ತದಾ ।
ಕಾಕಭಾಸ ಸಮಾಕೀರ್ಣಂ ವ್ರಜಸ್ಥಾನಮಭೂದ್ದ್ವಿಜ ॥ ೨೭ ॥

ಬೃಂದಾವನಂ ಭಗವತಾ ಕೃಷ್ಣೇನಾಕ್ಲಿಷ್ಟಕರ್ಮಣಾ ।
ಶುಭೇನ ಮನಸಾ ಧ್ಯಾತಂ ಗವಾಂ ವೃದ್ಧಿಮಭೀಪ್ಸತಾ ॥ ೨೮ ॥

ತತಸ್ತೇಷ್ವತಿರೂಕ್ಷೇಷು ಘರ್ಮಕಾಲೇ ದ್ವಿಜೋತ್ತಮ ।
ಪ್ರಾವೃಟ್ಕಾಲ ಇವೋದ್ಭೂತಂ ನವಶಷ್ಪಂ ಸಮಂತತಃ ॥ ೨೯ ॥

ಸ ಸಮಾವಾಸಿತಸ್ತತ್ರ ವ್ರಜೋ ಬೃಂದಾವನೇ ತತಃ ।
ಶಕಟಾವಾಟಪರ್ಯಂತಶ್ಚಂದ್ರಾರ್ಧಾಕಾರಸಂಸ್ಥಿತಿಃ ॥ ೩೦ ॥

೨೬-೩೦. ಬಳಿಕ ಗೊಲ್ಲರೆಲ್ಲರೂ ಗುಂಪು ಗುಂಪಾಗಿ ತಮ್ಮ ಬಂಡಿಗಳು, ಗೋವುಗಳು, ಕರುಗಳು ಇವುಗಳೊಡನೆ ಆ ಕ್ಷಣದಲ್ಲಿಯೇ ಹೊರಟರು. ಆ ಹೊತ್ತಿನಲ್ಲಿಯೇ ಅವರು ಬಿಟ್ಟು ಹೋದ ಮಿಕ್ಕ ಅನ್ನ ಮೊಸರು ಮುಂತಾದ ಪದಾರ್ಥಗಳಿಗೆ ಕಾಗೆ ಮುಂತಾದ ಹಕ್ಕಿಗಳು ಮುತ್ತಿಕೊಂಡುವು. ಗೋವುಗಳ ವೃದ್ಧಿಯನ್ನು ಅಪೇಕ್ಷಿಸುವ ಕೃಷ್ಣನು ಬೃಂದಾವನವೇ ವಾಸಕ್ಕೆ ಯೋಗ್ಯವೆಂದು ಒಳ್ಳೆಯ ಮನಸ್ಸಿನಿಂದ ಯೋಚಿಸಿದನು. ಆ ವನದಲ್ಲಿ ಕ್ರೂರವಾದ ಬೇಸಗೆಯಲ್ಲಿಯೂ ಮಳೆಗಾಲದಂತೆ ಹೊಸದಾಗಿ ಚಿಗುರಿದ ಹುಲ್ಲುಗಳು ಎಲ್ಲೆಡೆಯಲ್ಲಿಯೂ ಇದ್ದುವು. ಆ ಬೃಂದಾವನದಲ್ಲಿ ಗೊಲ್ಲರ ಗುಂಪುಗಳೆಲ್ಲವೂ ಅರ್ಧಚಂದ್ರಾಕಾರವಾಗಿ ಬಂಡಿಗಳನ್ನು ನಿಲ್ಲಿಸುವ ಸ್ಥಳದವರೆಗೆ ವಾಸಸ್ಥಾನವನ್ನು ಮಾಡಿಕೊಂಡು ವಾಸವಾಗಿದ್ದರು.

ವತ್ಸಪಾಲೌ ಚ ಸಂವೃತ್ತೌ ರಾಮದಾಮೋದರೌ ತತಃ ।
ಏಕಸ್ಥಾನಸ್ಥಿತೌ ಗೋಷ್ಠೇ ಚೇರತುರ್ಬಾಲಲೀಲಯಾ ॥ ೩೧ ॥

ಬರ್ಹಿಪತ್ರಕೃತಾಪೀಡೌ ವನ್ಯಪುಷ್ಪಾವತಂಸಕೌ ।
ಗೋಪವೇಣುಕೃತಾತೋದ್ಯಪತ್ರವಾದ್ಯಕೃತಸ್ವನೌ ॥ ೩೨ ॥

ಕಾಕಪಕ್ಷಧರೌ ಬಾಲೌ ಕುಮಾರಾವಿವ ಪಾವಕೇ ।
ಹಸಂತೌ ಚ ರಮಂತೌ ಚ ಚೇರತುಃ ಸ್ಮ ಮಹಾವನಂ ॥ ೩೩ ॥

ಕ್ವಚಿದ್ಧಸಂತಾವನ್ಯೋನ್ಯಂ ಕ್ರೀಡಮಾನೌ ತಥಾ ಪರೈಃ ।
ಗೋಪಪುತ್ರೈಃ ಸಮಂ ವತ್ಸಾಂಶ್ಚಾರಯಂತೌ ವಿಚೇರತುಃ ॥ ೩೪ ॥

ಕಾಲೇನ ಗಚ್ಛತಾ ತೌ ತು ಸಪ್ತವರ್ಷೌ ಮಹಾವ್ರಜೇ ।
ಸರ್ವಸ್ಯ ಜಗತಃ ಪಾಲೌ ವತ್ಸಪಾಲೌ ಬಭೂವತುಃ ॥ ೩೫ ॥

೩೧–೩೫. ಆ ಗೊಲ್ಲರ ಹಟ್ಟಿಯಲ್ಲಿ ರಾಮಕೃಷ್ಣರಿಬ್ಬರೂ ಒಂದೇ ಕಡೆ ಆಟವಾಡುತ್ತಾ ಕರುಗಳನ್ನು ಮೇಯಿಸುತ್ತ ಸಂಚರಿಸುತ್ತಿದ್ದರು. ಅವರಿಬ್ಬರೂ ನವಿಲುಗರಿಯನ್ನೂ ಕಾಡಿನ ಹೂಗಳನ್ನೂ ತಲೆಗೂ ಕಿವಿಗೂ ಅಲಂಕಾರಮಾಡಿಕೊಂಡು ಕೊಳಲನ್ನೂ ಮುರದ ಎಲೆಗಳಿಂದ ಮಾಡಿದ ವಾದ್ಯಗಳನ್ನೂ ಊದುತ್ತ ತಲೆಯಲ್ಲಿ ಜುಟ್ಟನ್ನಿಟ್ಟುಕೊಂಡು ಕುಮಾರಸ್ವಾಮಿಯಂತೆ ನಗುತ್ತಾ ಆಟವಾಡುತ್ತಾ, ಆ ವನದಲ್ಲಿ ಸಂಚರಿಸುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಒಬ್ಬರನ್ನೊಬ್ಬರು ತಮ್ಮ ಮೇಲೆ ಕೂಡಿಸಿಕೊಂಡು ಆಟವಾಡುತ್ತಾ ಇತರ ಗೊಲ್ಲರ ಹುಡುಗರೊಡನೆ ಕರುಗಳನ್ನು ಮೇಯಿಸುತ್ತ ತಿರುಗುತ್ತಿದ್ದರು. ಹೀಗೆ ಕಾಲವು ಕಳೆಯುತ್ತಿರಲು ಸರ್ವಜಗದ್ರಕ್ಷಕರಾದ ರಾಮಕೃಷ್ಣರು ಕರುವನ್ನು ಕಾಪಾಡುತ್ತ ಆ ದೊಡ್ಡ ಗೊಲ್ಲರ ಗುಂಪಿನಲ್ಲಿ ಏಳು ವರ್ಷಗಳನ್ನು ಕಳೆದರು.

ಸ್ಪಾವೃಟ್ಕಾಲಸ್ತತೋಽತೀವಮೇಘೌಘಸ್ಥಗಿತಾಂಬರಃ ।
ಬಭೂವ ವಾರಿಧಾರಾಭಿರೈಕ್ಯಂ ಕುರ್ವನ್ ದಿಶಾಮಿವ ॥ ೩೬ ॥

ಪ್ರರೂಢನವಶಷ್ಪಾಢ್ಯಾ ಶಕ್ರಗೋಪಾಚಿತಾ ಮಹೀ ।
ತಥಾ ಮಾರಕತೀವಾಸೀತ್ಪದ್ಮರಾಗವಿಭೂಷಿತಾ ॥ ೩೭ ॥

ಊಹುರುನ್ಮಾರ್ಗವಾಹೀನಿ ನಿಮ್ನಗಾಂಧಾಂಸಿ ಸರ್ವತಃ ।
ಮನಾಂಸಿ ದುರ್ವಿನೀತಾನಾಂ ಪ್ರಾಪ್ಯ ಲಕ್ಷ್ಮೀಂ ನವಾಮಿವ ॥ ೩೮ ॥

ನ ರೇಜೇಂತರಿತಶ್ಚಂದ್ರೋ ನಿರ್ಮಲೋ ಮಲಿನೈರ್ಘನೈಃ ।
ಸದ್ವಾದಿವಾದೋ ಮೂರ್ಖಾಣಾಂ ಪ್ರಗಲ್ಭಾಭಿರಿವೋಕ್ತಿಭಿಃ ॥ ೩೯ ॥

ನಿರ್ಗುಣೇನಾಪಿ ಚಾಪೇನ ಶಕ್ರಸ್ಯ ಗಗನೇ ಪದಂ ।
ಅವಾಪ್ಯತಾವಿವೇಕಸ್ಯ ನೃಪಸ್ಯೇವ ಪರಿಗ್ರಹೇ ॥ ೪೦ ॥

ಮೇಘಪೃಷ್ಠೇ ಬಲಾಕಾನಾಂ ರರಾಜ ವಿಮಲಾ ತತಿಃ ।
ದುರ್ವೃತ್ತೇ ವೃತ್ತಚೇಷ್ಟೇವ ಕುಲೀನಸ್ಯಾತಿಶೋಭನಾ ॥ ೪೧ ॥

೩೬-೩೯. ಹೀಗಿರುತ್ತಿರಲು ಒಂದಾನೊಂದು ವರ್ಷಋತುವಿನಲ್ಲಿ ಮೇಘಗಳು ಆಕಾಶವನ್ನು ಮುಚ್ಚಿ ಮಳೆಯನ್ನು ಸುರಿಸುತ್ತಾ ದಿಕ್ಕುಗಳನ್ನೆಲ್ಲ ಒಂದಾಗಿ ಮಾಡುವಂತೆ ಕಾಣುತ್ತಿದ್ದಿತು. ಹೊಸದಾಗಿ ಹುಟ್ಟಿದ ಸಸ್ಯಗಳಿಂದ ಕೂಡಿದ ಭೂಮಿಯಮೇಲೆ ಇಂದ್ರಗೋಪವೆಂಬ ಕೆಂಪಾದ ಹುಳುಗಳು ಮಳೆಯಿಂದ ಬಿದ್ದು ಪಚ್ಚೆ ಮತ್ತು ಪದ್ಮರಾಗ ರತ್ನಗಳಿಂದ ಅಲಂಕಾರ ಮಾಡಿದಂತೆ ಕಾಣುತ್ತಿದ್ದಿತು. ಹೊಸದಾಗಿ ಸಂಪತ್ತು ಬಂದ ದುಷ್ಟರ ಮನಸ್ಸಿನಂತೆ ಎಲ್ಲ ನದಿಗಳಲ್ಲಿಯೂ ನೀರು ತುಂಬಿ ಮೇರೆ ಮೀರಿ ಹರಿಯುತ್ತಿದ್ದಿತು. ನಿರ್ಮಲವಾದ ಚಂದ್ರನು ಮಲಿನವಾದ ಮೇಘಗಳಿಂದ ಮರೆಯಾಗಿ ಮೂರ್ಖರ ವಿಶೇಷವಾದ (ವೇದ ವಿರುದ್ಧವಾದ) ಮಾತುಗಳಿಂದ ಸದ್ವಾದ (ವೇದವಾದ) ಮಾಡುವವರ ಮಾತುಗಳಂತೆ ಪ್ರಕಾಶಿಸಲಿಲ್ಲ.

೪೦-೪೧. ಅವಿವೇಕಿಯಾದ ರಾಜನ ಪರಿವಾರದಲ್ಲಿ ಗುಣಹೀನನಾದ ಪುರುಷನು ಅಧಿಕಾರವನ್ನು ಪಡೆಯುವಂತೆ ಹಗ್ಗವಿಲ್ಲದ (ಗುಣಹೀನವಾದ) ಕಾಮನ

ಸ ಬಬಂಧಾಂಬರೇ ಸ್ಥೈರ್ಯಂ ವಿದ್ಯುದತ್ಯಂತಚಂಚಲಾ ।
ಮೈತ್ರೀವ ಪ್ರವರೇ ಪುಂಸಿ ದುರ್ಜನೇನ ಸ್ವಯೋಜಿತಾ ॥ ೪೨ ॥

ಮಾರ್ಗಾ ಬಭೂವುರಸ್ಪಷ್ಟಾಸ್ತೃಣಕಸ್ಪಚಯಾ ವೃಥಾಃ ।
ಅರ್ಥಾಂತರಮನುಪ್ರಾಪ್ತಾಃ ಪ್ರಜಡಾನಾಮಿವೋಕ್ತಯಃ ॥ ೪೩ ॥

ಉನ್ಮತ್ತಶಿಖಿಸಾರಂಗೇ ತಸ್ಮಿನ್ ಕಾಲೇ ಮಹಾವನೇ ।
ಕೃಷ್ಣರಾಮೌ ಮುದಾ ಯುಕ್ತೌ ಗೋಪಾಶ್ಚಿಕ್ರೀಡತುಃ ಸಹ ॥ ೪೪ ॥

ಕ್ವಚಿದ್ಗೋಬಿಸ್ವಮಂ ರಮ್ಯಂ ಗೇಯತಾನಗತಾವುಭೌ ।
ಚೇರತುಃ ಕ್ವಚಿದತ್ಯರ್ಥಂ ಶೀತವ್ಲಕ್ಷತಲಾಶ್ರಿತೌ ॥ ೪೫ ॥

ಬೆಲ್ಲು ಆಕಾಶದಲ್ಲಿ ಸ್ಥಾನವನ್ನು ಪಡೆದಿದ್ದಿತು ದುಷ್ಟನಲ್ಲಿ ನೆಲೆಸಿರುವ ಪಕ್ಷಪಾತ ನಿಷ್ಕಪಟವಾದ ನಡತೆಯಂತೆ ಮೇಘದಮೇಲೆ ನಿರ್ಮಲವಾದ ಹಂಸಪಕ್ಷಿಗಳ ಗುಂಪು ಪ್ರಕಾಶಿಸುತ್ತಿದ್ದಿತು. ಶ್ರೇಷ್ಠನಾದ ಮನುಷ್ಯನಲ್ಲಿ ದುಷ್ಟನು ಮಾಡಿದ ಸ್ನೇಹದಂತೆ ವಿಸ್ತಾರವಾಗಿ ಆಕಾಶದಲ್ಲಿ ಅತ್ಯಂತ ಚಂಚಲವಾದ ಮಿಂಚು ಸ್ಥಿರವಾಗಿ ನಿಲ್ಲಲಿಲ್ಲ. ಮೂಢರು ಆಡುವ ಅಸ್ಪಷ್ಟವಾದ ಮಾತುಗಳು ಬೇರೊಂದು ಅರ್ಥವನ್ನು ಕೊಡುತ್ತ ಸಂದೇಹಾಸ್ಪದವಾಗಿರುವಂತೆ ಹುಲ್ಲು ಗರಿಕೆಗಳಿಂದ ಆವರಿಸಿದ ಭೂಮಿಯಲ್ಲಿ ದಾರಿಗಳು ಸ್ಪಷ್ಟವಾಗಿ ತಿಳಿಯದೆ ಸಂದೇಹಾಸ್ಪದವಾದುವು. ಇಂತಹ ಮಳೆಗಾಲದಲ್ಲಿ ಮದಿಸಿದ ನವಿಲುಗಳೂ ಚಾತಕಪಕ್ಷಿಗಳೂ ಉಳ್ಳ ಆ ವಿಸ್ತಾರವಾದ ವನದಲ್ಲಿ ರಾಮಕೃಷ್ಣರು ಸಂತೋಷದಿಂದ ಗೋಪಾಲಕರೊಡನೆ ಸದಾ ಸಂಚರಿಸುತ್ತಿದ್ದರು.

೪೫–೪೯ ಆ ರಾಮಕೃಷ್ಣರು ಒಂದು ಸಮಯದಲ್ಲಿ ಹಸುಗಳೊಡನೆ ಮನೋಹರವಾದ ಗಾನವನ್ನು ತಾಳಕ್ಕನುಸಾರವಾಗಿ ಮಾಡುತ್ತ ಸಂಚರಿಸುತ್ತಿದ್ದರು. ಒಂದು ಸಮಯದಲ್ಲಿ ತಣ್ಣಗಿರುವ ಮರದ ನೆರಳಿನಲ್ಲಿ ಕುಳಿತಿರುತ್ತಿದ್ದರು. ಒಂದು

ಕ್ವಚಿತ್ಕದಂಬಪ್ರಕ್ಷಿಪ್ತೈ ಮಯೂರಸ್ಯಗ್ಧಿರಾಜಿತೌ ।
ವಿಲಿಸ್ತೌ ಕ್ವಚಿದಾಸಾತಾಂ ವಿವಿಧೈರ್ಗಿರಿಧಾತುಭಿಃ ॥ ೪೩ ॥

ಪರ್ಣಶಯ್ಯಾಸು ಸಂಸುಪ್ತೌ ಕ್ವಚಿನ್ನಿದ್ರಾಂತರೈಷಿಣೌ ।
ಕ್ವಚಿದ್ಗರ್ಜತಿ ಜೀಮೂತೇ ಹಾಹಾಕಾರರವಾಕುಲೌ ॥ ೪೪ ॥

ಗಾಯತಾಮನ್ಯ ಗೋಪಾನಾಂ ಪ್ರಶಂಸಾಪರಮೌ ಕ್ವಚಿತ್ ।
ಮಯೂರಕೇಕಾನುಗತೌ ಗೋಪವೇಣುಪ್ರವಾದಕೌ ॥ ೪೫ ॥

ಇತಿ ನಾನಾವಿಧೈರ್ಭಾವೈರುತ್ತಮಪ್ರೀತಿಸಂಯುತೌ ।
ಕ್ರೀಡಂತೌ ತೌ ವನೇ ತಸ್ಮಿನ್ ಚೇರತುಸ್ತುಷ್ಟಮಾನಸೌ ॥ ೪೬ ॥

ವಿಶಾಲೇ ಚ ಸಮಂ ಗೋಭಿರ್ಗೋಪಬೃಂದಸಮನ್ವಿತೌ ।
ವಿಹೃತ್ಯಾಥ ಯಥಾ ಯೋಗಂ ವ್ರಜಮೇತ್ಯ ಮಹಾಬಲೌ ॥ ೫೦ ॥

ಕಾಲದಲ್ಲಿ ಕದಂಬ ವೃಕ್ಷದ ಹೂಗಳ ಮಾಲೆಯಿಂದಲೂ, ನವಿಲುಗರಿಯ ಮಾಲೆಗಳಿಂದಲೂ, ಅಲಂಕಾರಮಾಡಿಕೊಂಡು ಬಗೆಬಗೆಯ ಬೆಟ್ಟದಲ್ಲಿರುವ ಬಣ್ಣದ ಕಲ್ಲುಗಳ ಬಣ್ಣವನ್ನು ಮೈಗೆ ಬಳಿದುಕೊಂಡು ಕುಳಿತಿರುತ್ತಿದ್ದರು. ಕೆಲವು ಕಡೆಗಳಲ್ಲಿ ಎಲೆಯ ಹಾಸಿಗೆಗಳನ್ನು ಮಾಡಿಕೊಂಡು ಅದರಲ್ಲಿ ಮಲಗಿ ನಿದ್ರೆಮಾಡುತ್ತಿದ್ದರು. ಮೋಡಗಳಲ್ಲಿ ಗುಡುಗುತ್ತಿದ್ದರೆ ಹಾಹಾಕಾರ ಧ್ವನಿಮಾಡುತ್ತಿದ್ದರು. ಇತರ ಗೊಲ್ಲರ ಹುಡುಗರು ಗಾನಮಾಡುತ್ತಿದ್ದರೆ ಅವರನ್ನು ಹೊಗಳುತ್ತ ನವಿಲಿನ ಕೂಗನ್ನು ಅನುಕರಿಸುತ್ತ ಗೊಲ್ಲರ ಕೊಳಲನ್ನು ಊದುತ್ತ ಬಗೆ ಬಗೆಯಾದ ಭಾವಗಳಿಂದ ಪರಸ್ಪರವಾಗಿ ಪ್ರೀತಿಸುತ್ತ ಆ ವನದಲ್ಲಿ ಸಂತೋಷವಾದ ಮನಸ್ಸಿನಿಂದ ಆಟವಾಡುತ್ತಿದ್ದರು.

೫೦-೫೧. ಮಹಾಬಲಶಾಲಿಗಳಾದ ರಾಮಕೃಷ್ಣರು ರಾತ್ರಿಯ ಕಾಲದಲ್ಲಿಯೂ ಕೂಡ ಗೋವುಗಳೊಡನೆಯೂ, ಗೋಪಾಲಕರೊಡನೆಯೂ, ಆಟವಾಡುತ್ತ ತಮಗೆ

ಗೋಪೈಸ್ಸಮಾನೈಸ್ಸಹಿತೌ ಕ್ರೀಡಂತಾವಮರಾವಿವ ।
ವಿವಂ ತಾವೂಷತುಸ್ತತ್ರ ರಾಮಕೃಷ್ಣೌ ಮಹಾದ್ಯುತೀ ॥ ೫೧ ॥

ಇತಿ ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ ಷಷ್ಠೋಽಧ್ಯಾಯಃ

ಸಮಾಫವಾದ ವಯಸ್ಸುಳ್ಳ ಗೋಪಾಲಕರೊಡನೆ ಕೂಡಿ ದೇವತೆಗಳಂತೆ ಆಟವಾಡುತ್ತ ಮಹಾಕಾಂತಿಯಿಂದ ಕೂಡಿದವರಾಗಿ ಆ ಬೃಂದಾವನದಲ್ಲಿ ವಾಸವಾಗಿದ್ದರು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ
ಆರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಸಪ್ತಮೋಽಧ್ಯಾಯಃ

॥ ಶ್ರೀ ಪರಾಶರಃ ॥

ಏಕದಾ ತು ವಿನಾ ರಾಮಂ ಕೃಷ್ಣೋ ಬೃಂದಾವನಂ ಯಯೌ ।
ವಿಚಚಾರ ವೃತೋ ಗೋಪೈಃ ವನ್ಯಪುಷ್ಪಸ್ರಗುಜ್ವಲಃ ॥ ೧ ॥

ಸ ಜಗಾಮಾಥ ಕಾಳಿಂದೀಂ ಲೋಲಕಲ್ಲೋಲಶಾಲಿನೀಂ ।
ತೀರಸಂಲಗ್ನಫೇನೌಘೈಃ ಹಸಂತೀಮಿವ ಸರ್ವತಃ ॥ ೨ ॥

ತಸ್ಯಾಶ್ಚಾತಿ ಮಹಾಭೀಮಂ ವಿಷಾಗ್ನಿಶ್ರಿತವಾರಿಣಂ ।
ಹ್ರದಂ ಕಾಳೀಯನಾಗಸ್ಯ ದದರ್ಶಾತಿವಿಭೀಷಣಂ ॥ ೩ ॥

ಏಳನೆಯ ಅಧ್ಯಾಯವು.

೧-೩. ಒಂದಾನೊಂದು ದಿನ ರಾಮನನ್ನು ಬಿಟ್ಟು ಕೃಷ್ಣನೊಬ್ಬನೇ ಬೃಂದಾವನಕ್ಕೆ ಹೋಗಿ ಗೊಲ್ಲರ ಹುಡುಗರೊಡನೆ ಕಾಡಿನ ಹೂಮಾಲೆಯನ್ನು ಹಾಕಿಕೊಂಡು ಪ್ರಕಾಶಿಸುತ್ತ ಆಲೆಗಳಿಂದ ಕೂಡಿದ, ದಡದಲ್ಲಿರುವ ನೊರೆಗಳಿಂದ ನಗುತ್ತಿರುವುದೋ ಎಂಬಂತಿದ್ದ ಯಮುನಾನದಿಯ ಸಮೀಪಕ್ಕೆ ಹೋದನು. ಅಲ್ಲಿ ವಿಷಾಗ್ನಿಯಿಂದ ಕೂಡಿದ ನೀರುಳ್ಳ ಕಾಳಿಯನೆಂಬ ನಾಗನು ವಾಸವಾಗಿರುವ, ಭಯಂಕರವಾದ ಯಮುನಾನದಿಯ ಮಡುವನ್ನು ಕಂಡನು.

ವಿಷಾಗ್ನಿನಾ ಪ್ರಸರತಾ ದಗ್ಧತೀರವನುಹೀರುಹಂ ।
ವಾತಾಹತಾಂಬುವಿಕ್ಷೇಪಸ್ಪರ್ಶದಗ್ಧವಿಹಂಗಮಂ ॥ ೪ ॥

ತಮತೀವ ಮಹಾರೌದ್ರಂ ಮೃತ್ಯುವಕ್ತ್ರಮಿವಾಪರಂ ।
ವಿಲೋಕ್ಯ ಚಿಂತಯಾಮಾಸ ಭಗವಾನ್ಮಧುಸೂದನಃ ॥ ೫ ॥

ಅಸ್ಮಿನ್ವಸತಿ ದುಷ್ಪ್ರಾತ್ಮಾ ಕಾಳೀಯೋಽಸೌ ವಿಷಾಯುಧಃ ।
ಯೋ ಮಯಾ ನಿರ್ಜಿತಸ್ತ್ಯಕ್ತ್ವಾ ದುಷ್ಟೋ ಗಚ್ಛೇತ್ಸಮುದ್ರಧಿಂ ॥ ೬ ॥

ತೇನೇಯಂ ದೂಷಿತಾಸ್ಮರ್ವಾ ಯಮುನಾ ಸಾಗರಂಗಮಾ ।
ನ ನರೈರ್ಗೋಭಿರನ್ಯೈರ್ವಾಪಿ ತೃಷಾರ್ತೈರುಪಭುಜ್ಯತೇ ॥ ೭ ॥

ತದಸ್ಯ ನಾಗರಾಜಸ್ಯ ಕರ್ತವ್ಯೋ ನಿಗ್ರಹೋ ಮಯಾ ।
ನಿಸ್ತ್ರಾಸಾಸ್ತು ಸುಖಂ ಯೇನ ಚರೇಯುರ್ವ್ರಜವಾಸಿನಃ ॥ ೮ ॥

೪-೫. ವಿಷಾಗ್ನಿಯು ಹರಡಿ ನದಿಯ ದಡದ ಮರಗಳೆಲ್ಲ ಸುಟ್ಟುಹೊಗಿದ್ದುವು. ಗಾಳಿಯಿಂದ ನೀರು ಹಾರಿ ಅದರ ಹನಿಗಳು ತಗುಲಿದುದರಿಂದ ಹಕ್ಕಿಗಳೆಲ್ಲ ಸುಟ್ಟು ಹೋಗಿದ್ದುವು. ಆ ಮಡುವು ಭಯಂಕರವಾದ ಮೃತ್ಯುದೇವತೆಯ ಬಾಯಿಯಂತೆ ಇದ್ದುದನ್ನು ನೋಡಿ ಮಹಾಮಹಿಮನಾದ ಕೃಷ್ಣನು ತನ್ನ ಮನದಲ್ಲಿ ಆಲೋಚಿಸಿದನು. ಎಂತೆಂದರೆ :—

೬-೧೦. "ಈ ಮಡುವಿನಲ್ಲಿ ವಿಷವೇ ಆಯುಧವನ್ನಾಗಿ ಉಳ್ಳ ದುಷ್ಟನಾದ ಕಾಳಿಯನೆಂಬ ನಾಗನು ವಾಸವಾಗಿರುವನು. ನಾನು ಇವನನ್ನು ಜಯಿಸಿದರೆ ಇವನು ಈ ಸ್ಥಳವನ್ನು ಬಿಟ್ಟು ಸಮುದ್ರಕ್ಕೆ ಹೋಗುವನು. ಇವನಿಂದ ಯಮುನಾನದಿಯ ನೀರೆಲ್ಲ ವಿಷವಾಗಿ ಕೆಟ್ಟುಹೋಗಿರುವುದು. ಇದರಿಂದ ಬಾಯಾರಿದ ನರುಜರೂ ಗೋವುಗಳೂ ಇದನ್ನು ಕುಡಿಯುವುದಿಲ್ಲ. ಈ ನಾಗರಾಜನನ್ನು ನಾನು ನಿಗ್ರಹಿಸಿದರೆ

ವಿನಾಶಾರ್ಥಂ ತು ಲೋಕೇಽಸ್ಮಿನ್ನವತಾರಃ ಕೃತೋ ಮಯಾ ।
ಯದೇಷಾಮುತ್ಪಥಸ್ಥಾನಾಂ ಕಾರ್ಯಾ ಶಾಂತಿರ್ದುರಾತ್ಮನಾಂ ॥ ೯ ॥

ತದೇತಂ ನಾತಿದೂರಸ್ಥಂ ಕದಂಬಮುರುಶಾಖಿನಂ ।
ಅಧಿರುಹ್ಯ ಪತಿಷ್ಯಾಮಿ ಹ್ರದೇಽಸ್ಮಿನ್ನ ನಿಲಾಶಿನಃ ॥ ೧೦ ॥

॥ ಶ್ರೀ ಪರಾಶರಃ ॥

ಇತ್ಯಂ ವಿಚಿಂತ್ಯ ಬಧ್ವಾ ಚ ಗಾಢಂ ಪರಿಕರಂ ತತಃ ।
ನಿಪಪಾತ ಹ್ರದೇ ತತ್ರ ನಾಗರಾಜಸ್ಯ ವೇಗತಃ ॥ ೧೧ ॥

ತೇನಾತಿಪತತಾ ತತ್ರ ಕ್ಷೋಭಿತಸ್ಸ ಮಹಾಹ್ರದಃ ।
ಅತ್ಯರ್ಥಂ ದೂರಜಾತಾಂಸ್ತು ಸಮಸಿಂ ಚನ್ನಹೀರುಹಾನ್ ॥ ೧೨ ॥

ತೇ ಹಿ ದುಸ್ಸಹವಿಷಜ್ವಾಲಾ ತಪ್ತಾಂಬು ಪವನೋಕ್ಷಿತಾಃ ।
ಜಜ್ವಲುಃ ಪಾದಪಾಸ್ಸದ್ಯೋ ಜ್ವಾಲಾವ್ಯಾಪ್ತದಿಗಂತರಾಃ ॥ ೧೩ ॥

ವ್ರಜದ ಜನರೆಲ್ಲರೂ ಭಯವಿಲ್ಲದೆ ಸುಖವಾಗಿ ಸಂಚರಿಸುವರು. ದುರ್ಮಾರ್ಗದಲ್ಲಿ ನಡೆಯುತ್ತಿರುವ ದುಷ್ಟರನ್ನು ಶಿಕ್ಷಿಸುವುದಕ್ಕಾಗಿಯೇ ಈ ಲೋಕದಲ್ಲಿ ನಾನು ಅವತಾರ ಮಾಡಿರುವೆನು. ಆದುದರಿಂದ ಈ ಸಮೀಪದಲ್ಲಿರುವ ಎತ್ತರವಾದ ಕದಂಬ ವೃಕ್ಷವನ್ನು ಹತ್ತಿ ಈ ಕಾಳಿಯ ನಾಗನ ಮಡುವಿಗೆ ಧುಮುಕುವೆನು." ಎಂದು ಆಲೋಚಿಸಿದನು.

೧೧–೧೪. ಕೃಷ್ಣನು ಈ ರೀತಿಯಲ್ಲಿ ಆಲೋಚಿಸಿ ವಸ್ತ್ರದಿಂದ ಗಟ್ಟಿಯಾಗಿ ನಡುಕಟ್ಟನ್ನು ಕಟ್ಟಿಕೊಂಡು ವೇಗವಾಗಿ ಆ ನಾಗರಾಜನ ಮಡುವಿಗೆ ಧುಮುಕಿದನು. ಆವನು ಧುಮುಕಿದ ವೇಗಕ್ಕೆ ಆ ಮಡುವಿನ ನೀರು ದೂರದಲ್ಲಿರುವ ಮರಗಳ ಮೇಲಕ್ಕೂ ಹಾರಿತು. ಆ ವಿಷಜ್ವಾಲೆಯಿಂದ ಕೂಡಿದ ನೀರು ಆ ಮರಗಳನ್ನು

ಆಸ್ಫೋಟಯಾಮಾಸ ತದಾ ಕೃಷ್ಣೋ ನಾಗಹ್ರದೇ ಭುಜಂ ।
ತಚ್ಛಬ್ದಶ್ರವಣಾಚ್ಚಾಶು ನಾಗರಾಜೋಭ್ಯುಪಾಗಮತ್ ॥ ೧೪ ॥

ಆತಾಮ್ರನಯನಃ ಕೋಪಾದ್ವಿಷಜ್ವಾಲಾಕುಲೈರ್ಮುಖೈಃ ।
ವೃತೋ ಮಹಾವಿಷೈಶ್ಚಾನ್ಯೈರುರಗೈರನಿಲಾಶನೈಃ ॥ ೧೫ ॥

ನಾಗಪತ್ನ್ಯಶ್ಚ ಶತಶೋ ದಾರಿಹಾರೋಪಶೋಭಿತಾಃ ।
ಪ್ರಕಂಪಿತತನುಕ್ಷೇಪಚಲತ್ಕುಂಡಲಕಾಂತಯಃ ॥ ೧೬ ॥

ತತಃ ಪ್ರವೇಷ್ಟಿತಸ್ತೈಸ್ತೈಸ್ತು ಕೃಷ್ಣೋ ಭೋಗಬಂಧನೈಃ ।
ದದಂಶುಸ್ತೇಪಿತಂ ಕೃಷ್ಣಂ ವಿಷಜ್ವಾಲಾಕುಲೈರ್ಮುಖೈಃ ॥ ೧೭ ॥

ತಂ ತತ್ರ ಪತಿತಂ ದೃಷ್ಟ್ವಾ ಸರ್ಪಭೋಗೈರ್ನಿಪೀಡಿತಂ ।
ಗೋಪಾ ವ್ರಜಮುಪಾಗಮ್ಯ ಚುಕ್ರುಶುಶ್ಚೋಕಕಾತರಾಃ ॥ ೧೮ ॥

ಸುಟ್ಟುದರಿಂದ ಉಂಟಾದ ಉರಿಯು ದಿಗಂತಗಳನ್ನು ವ್ಯಾಪಿಸಿತು. ಆ ಮಡುವಿನಲ್ಲಿ ಕೃಷ್ಣನು ತನ್ನ ಭುಜವನ್ನು ತಟ್ಟಿಕೊಂಡು ಶಬ್ದಮಾಡಿದನು. ಆ ಶಬ್ದವನ್ನು ಕೇಳಿ ನಾಗರಾಜನು ವೇಗವಾಗಿ ಅವನ ಸಮೀಪಕ್ಕೆ ಬಂದನು.

೧೫-೧೭. ಕಾಳಿಯ ನಾಗನು ಕೋಪದಿಂದ ಕೆಂಪಾದ ಕಣ್ಣುಗಳುಳ್ಳವನಾಗಿ ವಿಷಜ್ವಾಲೆಯಿಂದ ಕೂಡಿದ ಬಾಯುಳ್ಳ ಇತರ ಸರ್ಪಗಳಿಂದಲೂ ಮನೋಹರವಾದ ಹಾರಗಳಿಂದಲೂ ಚಲಿಸುತ್ತಿರುವ ಕರ್ಣಾಭರಣಗಳಿಂದಲೂ ಕೂಡಿದ ನೂರಾರು ನಾಗಪತ್ನಿಯರಿಂದಲೂ ಕೂಡಿದವನಾಗಿ ಬಂದು ಎಲ್ಲ ನಾಗರೂ ತಮ್ಮ ಹೆಡೆಗಳಿಂದ ಕೃಷ್ಣನನ್ನು ಸುತ್ತಿಕೊಂಡು ಕಟ್ಟಿಹಾಕಿ ವಿಷಜ್ವಾಲೆಯಿಂದ ತುಂಬಿದ ಬಾಯಿಗಳಿಂದ ಅವನನ್ನು ಕಚ್ಚಿದರು.

೧೮–೧೯. ಕೃಷ್ಣನು ಮಡುವಿಗೆ ಬಿದ್ದು ಸರ್ಪಗಳ ಹೆಡೆಗಳಿಂದ ಹಿಂಸಿಸಲ್ಪಡುತ್ತಿದ್ದುದನ್ನು ನೋಡಿ ಗೋಪರು ವ್ರಜಕ್ಕೆ ಬಂದು ಅತ್ಯಂತ ದುಃಖದಿಂದ ಅಳುತ್ತಿದ್ದರು

॥ ಗೋಪಾಃ ॥

ಏಷ ನೋಽಹಂ ಗತಃ ಕೃಷ್ಣೋ ಮಗ್ನೋ ವೈ ಕಾಳಿಯಹ್ರದೇ ।
ಭಕ್ಷ್ಯತೇ ನಾಗರಾಜೇನ ತಮಾಗಚ್ಛತ ಪಶ್ಯತ ॥ ೧೯ ॥

ತಚ್ಛ್ರುತ್ವಾ ತತ್ರ ತೇ ಗೋಪಾ ವಜ್ರಪಾತೋಪಮಂ ವಚಃ ।
ಗೋಪ್ಯಶ್ಚ ತ್ವರಿತಾ ಜಗ್ಮುಃ ಯಶೋದಾ ಪ್ರಮುಖಾ ಹ್ರದಂ ॥ ೨೦ ॥

ಹಾ ಹಾ ಕ್ವಾಸಾವಿತಿ ಜನೋ ಗೋಪೀನಾಮಪಿ ವಿಹ್ವಲಃ ।
ಯಶೋದಯಾ ಸಮಂ ಭ್ರಾಂತೋ ದ್ರುತಪ್ರಸ್ಖಲಿತಂ ಯಯೌ ॥ ೨೧ ॥

ನಂದಗೋಪಶ್ಚ ಗೋಪಾಶ್ಚ ರಾಮಶ್ಚಾದ್ಭುತವಿಕ್ರಮಃ ।
ತ್ವರಿತಂ ಯಮುನಾಂ ಜಗ್ಮುಃ ಕೃಷ್ಣದರ್ಶನಲಾಲಸಾಃ ॥ ೨೨ ॥

ದದೃಶುಶ್ಚಾಪಿ ತೇ ತತ್ರ ಸರ್ಪರಾಜವಶಂಗತಂ ।
ನಿಷ್ಪ್ರಯತ್ನೀಕೃತಂ ಕೃಷ್ಣಂ ಸರ್ಪಭೋಗವಿವೇಷ್ಟಿತಂ ॥ ೨೩ ॥

ಮತ್ತು ಕೃಷ್ಣನು ಮೂರ್ಛಿತನಾಗಿ ಕಾಳಿಯ ಮಡುವಿನಲ್ಲಿ ಮುಳುಗಿದನು. ನಾಗ ರಾಜನು ಅವನನ್ನು ತಿನ್ನುತ್ತಿರುವನು, ನೀವು ಬಂದು ನೋಡಬೇಕು" ಎಂದು ಹೇಳಿದರು.

೨೦–೨೨. ಗೊಲ್ಲರು ಸಿಡಿಲು ಬಡಿದಂತಿದ್ದ ಆ ಮಾತನ್ನು ಕೇಳಿ ಯಶೋದೆಯೇ ಮುಂತಾದ ಗೋಪಿಯರೊಡನೆ ಬೇಗನೆ ಆ ಮಡುವಿಗೆ ಹೋದರು. ಹಾ ! ಹಾ ! ಕೃಷ್ಣನೆಲ್ಲಿ ? ಎಂದು ಹೇಳುತ್ತ ಗೋಪೀಜನರು ಯಶೋದೆಯೊಡನೆ ಭ್ರಾಂತರಾಗಿ ಓಡುತ್ತ ಬೀಳುತ್ತ ಏಳುತ್ತ ಹೋದರು. ನಂದಗೋಪನೊಡನೆ ಗೋಪಾಲಕರೂ ಮಹಾಪರಾಕ್ರಮಿಯಾದ ರಾಮನೂ ಕೃಷ್ಣನನ್ನು ನೋಡುವ ಆಸಕ್ತಿಯಿಂದ ವೇಗವಾಗಿ ಯಮುನಾನದಿಗೆ ಹೋದರು.

೨೩–೨೫. ಅವರು ಅಲ್ಲಿ ಸರ್ಪರಾಜನ ಅಧೀನವಾಗಿ ಹಾವುಗಳ ಹಿಡಿಗಳಿಗೆ ಸಿಕ್ಕಿಕೊಂಡು ಚಲಿಸದಿರುವ ಕೃಷ್ಣನನ್ನು ನೋಡಿದರು. ನಂದಗೋಪನೂ

ನಂದಗೋಪೋಽಪಿ ನಿಶ್ಚೇಷ್ಟೋ ನ್ಯಸ್ಯ ಪುತ್ರಮುಖೇ ದೃಶಂ ।
ಯಶೋದಾ ಚ ಮಹಾಭಾಗಾ ಬಭೂವ ಮುನಿಸತ್ತಮ ॥ ೨೪ ॥

ಗೋಪ್ಯಸ್ತ್ವನ್ಯಾ ರುದಂತ್ಯಶ್ಚ ದದೃಶುಶ್ಚೇಷ್ಟಕಾತರಾಃ ।
ಪ್ರೋಚುಶ್ಚ ಕೇಶವಂ ಪ್ರೀತ್ಯಾ ಭಯಕಾತರ್ಯಗದ್ಗದಂ ॥ ೨೫ ॥

॥ ಗೋಪ್ಯಃ ॥

ಸರ್ವಾ ಯಶೋದಯಾ ಸಾರ್ಧಂ ವಿಶಾಮೋಽತ್ರ ಮಹಾಹ್ರದಂ ।
ಸರ್ಪರಾಜಸ್ಯ ನೋ ಗಂತುಮಸ್ಮಾಭಿರ್ಯುಜ್ಯತೇ ವ್ರಜಂ ॥ ೨೬ ॥

ದಿವಸಃ ಕೋ ವಿನಾ ಸೂರ್ಯಂ ವಿನಾ ಚಂದ್ರೇಣ ಕಾ ನಿಶಾ ।
ವಿನಾ ವೃಷೇಣ ಕಾ ಗಾವೋ ವಿನಾ ಕೃಷ್ಣೇನ ಕೋ ವ್ರಜಃ ॥ ೨೭ ॥

ವಿನಾಕೃಷ್ಣಾ ನ ಯಾಸ್ಯಾಮಃ ಕೃಷ್ಣೇನಾನೇನ ಗೋಕುಲಂ ।
ಅರಮ್ಯಂ ನಾತಿಸೇವ್ಯಂ ಚ ವಾರಿಹೀನಂ ಯಥಾ ಸರಃ ॥ ೨೮ ॥

ಯತ್ರ ನೇಂದೀವರಶ್ಯಾಮಕಾಯಕಾಂತಿರಯಂ ಹರಿಃ ।
ತೇನಾಪಿ ಮಾತುರ್ವಾಸೇನ ರತಿರಸ್ತೀತಿ ವಿಸ್ಮಯಃ ॥ ೨೯ ॥

ಯಶೋದೆಯೂ ಕೃಷ್ಣನ ಮುಖವನ್ನೇ ಚಲಿಸದ ದೃಷ್ಟಿಯಿಂದ ನೋಡುತ್ತಿದ್ದರು. ಮಿಕ್ಕ ಗೋಪಿಯರು ಅಳುತ್ತ ಭಯದಿಂದ ಕೃಷ್ಣನನ್ನು ಕುರಿತು ಪ್ರೀತಿಯಿಂದುಂಟಾದ ಗದ್ಗದ ಧ್ವನಿಯಿಂದ ಮಾತನಾಡಿದರು.

೨೬ ೩೨. ನಾವೆಲ್ಲರೂ ಯಶೋದೆಯೊಡನೆ ಈ ಸರ್ಪರಾಜನಾದ ಕಾಳಿಯನ ಮಡುವನ್ನು ಪ್ರವೇಶಿಸೋಣ. ನಾವು ವ್ರಜಕ್ಕೆ ಹೋಗಬಾರದು. ಸೂರ್ಯನಿಲ್ಲದ ಹಗಲೂ, ಚಂದ್ರನಿಲ್ಲದ ರಾತ್ರಿಯೂ, ಗೂಳಿಯಿಲ್ಲದ ಗೋವುಗಳ ಗುಂಪೂ ಕೃಷ್ಣನಿಲ್ಲದ ವ್ರಜವೂ ಶೋಭಿಸುವುದಿಲ್ಲ. ಈ ಕೃಷ್ಣನನ್ನು ಬಿಟ್ಟು ನಾವು ಗೋಕುಲಕ್ಕೆ ಹೋಗು

ಉತ್ಫುಲ್ಲಪಂಕಜದಳಸ್ಪರ್ಧಿಕಾಂತಿವಿಲೋಚನಂ ।
ಅಪಶ್ಯಂತೋ ಪರಿಂ ದೀನಾಃ ಕಥಂ ಗೋಪ್ಯೋ ಭವಿಷ್ಯಥ ॥ ೩೦ ॥

ಅತ್ಯಂತಮಧುರಾಲಾಪ ಹೃತಾಶೇಷಮನೋರಥಂ ।
ನಹೀನ ಪುಂಡರೀಕಾಕ್ಷಂ ಯಾಸ್ಯಾಮೋ ನಂದಗೋಕುಲಂ ॥ ೩೧ ॥

ಭೋಗೇನಾವೇಷ್ಟಿತಸ್ಯಾಪಿ ಸರ್ಪರಾಜಸ್ಯ ಪಶ್ಯತಃ ।
ಸ್ಮಿತಶೋಭಿಮುಖಂ ಗೋಪ್ಯಃ ಕೃಷ್ಣಸ್ಯಾಸ್ಮದ್ವಿಲೋಕನೇ ॥ ೩೨ ॥

॥ ಶ್ರೀ ಪರಾಶರಃ ॥

ಇತಿ ಗೋಪೀವಚಃ ಶ್ರುತ್ವಾ ರೌಹಿಣೇಯೋ ಮಹಾಬಲಃ ।
ಗೋಪಾಂಶ್ಚ ತ್ರಾಸವಿಧುರಾನ್ವಿಲೋಕ್ಯ ಸ್ಮಿತವೀಕ್ಷಣಾನ್ ॥ ೩೩ ॥

ನಂದಂ ಚ ದೀನಮತ್ಯರ್ಥಂ ನ್ಯಸ್ತದೃಷ್ಟಿಂ ಸುತಾನನೇ ।
ಮೂರ್ಧ್ನಾಕುಲಾಂ ಯಶೋದಾಂ ಚ ಕೃಷ್ಣಮಾಹಾತ್ಮ್ಯ ಸಂಜ್ಞಯಾ ॥೩೪॥

ವುದಿಲ್ಲ. ಈಗ ಅದು ನೀರಿಲ್ಲದೆ ಸರೋವರದಂತೆ ಚೆಂದಗಾಣಿಸುವುದಿಲ್ಲ. ಮತ್ತು ವಾಸಾರ್ಹವಾಗಿಲ್ಲ. ಇಂದೀವರದಂದೆ ನೀಲಿಯಬಣ್ಣದ ಶರೀರಕಾಂತಿಯುಳ್ಳ ಕೃಷ್ಣನಿಲ್ಲದೆ ನಮಗೆ ತಾಯಿಯ ಮನೆಯಲ್ಲಿಯೂ ಪ್ರೀತಿಯಿಲ್ಲ. ಅರಳಿದ ಕಮಲದಳದಂತೆ ಕಣ್ಣುಗಳುಳ್ಳ ಕೃಷ್ಣನನ್ನು ನೋಡದೆ ಭಾಗ್ಯಹೀನೆಯರಾದ ನಾವು ಹೇಗೆ ವ್ರಜದಲ್ಲಿ ವಾಸವಾಗಿರುವುದು? ವಿಶೇಷವಾದ ಇಂಪಾದ ಮಾತಿನಿಂದ ನಮ್ಮ ಇಷ್ಟಾರ್ಥಗಳನ್ನೆಲ್ಲ ಅಪಹರಿಸಿದ ಕಮಲಾಕ್ಷನಾದ ಕೃಷ್ಣನನ್ನು ಬಿಟ್ಟು ನಂದ ಗೋಕುಲಕ್ಕೆ ಹೋಗುವುದಿಲ್ಲ. ಗೋಪಿಯರೇ ನಾವು ನೋಡುತ್ತಿರಲಾಗಿ ನಾಗರಾಜನ ಹೆಡೆಗೆ ಸಿಕ್ಕಿದ್ದರೂ ನಗುವಿನಿಂದ ಸುಂದರವಾದ ಕೃಷ್ಣನ ಮುಖವನ್ನು ನೋಡಿರಿ" ಎಂದು ಹೇಳಿದನು.

೩೩-೩೪. ಹೀಗೆಂದು ಹೇಳಿದ ಗೋಪಿಯರ ಮಾತನ್ನು ಕೇಳಿ ಮಹಾಬಲಶಾಲಿಯಾದ ಬಲರಾಮನು ಭಯವಿಲ್ಲದೆ ಮರಣಕ್ಕೆ ಸಿದ್ಧರಾದ ಗೋಪರನ್ನೂ ಅತ್ಯಂತ ದೀನನಾಗಿ ಮಗನ ಮುಖವನ್ನೇ ನೋಡುತ್ತಿರುವ ನಂದನನ್ನೂ ಮೂರ್ಛೆ ಹೊಂದಿದ ಯಶೋದೆಯನ್ನೂ ನೋಡಿ ತನ್ನ ಸಂಕೇತದಿಂದ ಕೃಷ್ಣನನ್ನು ಕುರಿತು ಮಾತನಾಡಿದನು.

ಕಮಿದಂ ದೇವದೇವೇಶ ಭಾವೋಽಯಂ ಮಾನುಷಸ್ತ್ವಯಾ ।
ವ್ಯಜ್ಯತೇಽತ್ಯಂತಮಾತ್ಮಾನಂ ಕಮನಂತಂ ನ ವೇತ್ಸಿ ಯತ್ ॥ ೩೫ ॥

ತ್ವಮೇವ ಜಗತೋ ನಾಭಿರರಾಕಾಮಿವ ಸಂಶ್ರಯಃ ।
ಕರ್ತಾಪಹರ್ತಾ ಪಾತಾ ಚ ತ್ರೈಲೋಕ್ಯಂ ತ್ವಂ ತ್ರಯೀಮಯಃ ॥ ೩೬ ॥

ಸೇಂದ್ರೈ ರುದ್ರಾಗ್ನಿವಸುಭಿರಾದಿತ್ಯೈರ್ಮರುದಶ್ವಿಭಿ ।
ಚಿಂತ್ಯಸೇ ತ್ವಮಚಿಂತ್ಯಾತ್ಮನ್ ಸಮಸ್ತೈಶ್ಚೈವ ಯೋಗಿಭಿಃ ॥ ೩೭ ॥

ಜಗತ್ಕಾರ್ಯಂ ಜಗನ್ನಾಥ ಭಾರಾವತರಣೇಚ್ಛಯಾ ।
ಅವತೀರ್ಣೋಽಸಿ ಮರ್ತ್ಯೇಷು ತವಾಂಶಶ್ಚಾಹಮನುಗ್ರಹಾತ್ ॥ ೩೮ ॥

೩೫-೩೮. ದೇವ ದೇವನಾದ ಕೃಷ್ಣನೇ ! ಇದೇನು ವಿಶೇಷವಾಗಿ ಮನುಷ್ಯ ಭಾವವನ್ನು ತೋರಿಸುತ್ತಿರುವೆ. ನೀನು ನಾಶರಹಿತನಾದ ಪರಬ್ರಹ್ಮನೆಂಬುದನ್ನರಿಯೆಯಾ? ಚಕ್ರದ ಕಾಲುಗಳಿಗೆ ಚಕ್ರದ ಮಧ್ಯ ಪ್ರದೇಶವಾದ ಗುಂಬವು ಹೇಗೆ ಆಶ್ರಯವೋ ಹಾಗೆ ನೀನು ಸಮಸ್ತ ಲೋಕಕ್ಕೂ ಆಶ್ರಯನು. ವೇದಸ್ವರೂಪನಾದ ನೀನು ಮೂರು ಲೋಕವನ್ನೂ ಸೃಷ್ಟಿಸಿ ಕಾಪಾಡಿ ಕೊನೆಗೆ ನಾಶಮಾಡುವೆ ದೇವೇಂದ್ರನೊಡನೆ ಕೂಡಿದ ಏಕಾದಶರುದ್ರರು, ತ್ರೇತಾಗ್ನಿಗಳು, ಅಷ್ಟವಸುಗಳು, ದ್ವಾದಶಾದಿತ್ಯರು, ಸಪ್ತಮರುತ್ತುಗಳು, ಅಶ್ವಿನೀದೇವತೆಗಳು, ಸಮಸ್ತ ಯೋಗಿಗಳೂ ಇವರೆಲ್ಲರೂ ಮನಸ್ಸಿಗೆ ಸಿಲುಕದ ನಿನ್ನನ್ನು ಧ್ಯಾನಮಾಡುತ್ತಿರುವರು. ಭೂಭಾರವನ್ನು ಕಡಿಮೆಮಾಡುವುದಕ್ಕಾಗಿ ಭೂಮಿಯಲ್ಲಿ ಅವತಾರ ಮಾಡಿರುವೆ. ನಾನೂ ನಿನ್ನಂಶದಿಂದ ನಿನ್ನ ಅಣ್ಣನಾಗಿರುವೆನು.

ಮನುಷ್ಯಲೀಲಾಂ ಭಗವನ್ ಭಜತಾ ಭವತಾಸುರಾಃ ।
ವಿಡಂಬಯಂತಸ್ತ್ವಲ್ಲೀಲಾಂ ಸರ್ವ ಏವ ಸಹಾಸತೇ ॥ ೫೯ ॥

ಅವತಾರ್ಯ ಭವಾನ್ಪೂರ್ವಂ ಗೋಕುಲೇಷು ಸುರಾಂಗನಾಃ ।
ಕ್ರೀಡಾರ್ಥಮಾತ್ಮನಃ ಪಶ್ಚಾದವತೀರ್ಣೋಽಸಿ ಶಾಶ್ವತಃ ॥ ೬೦ ॥

ಅಶ್ರ್ವಾವತೀರ್ಣಯೋಃ ಕೃಷ್ಣ ಗೋಪಾ ಏವ ಹಿ ಬಾಂಧವಾಃ ।
ಗೋಪ್ಯಶ್ಚ ಸೀದತಃ ಕಸ್ಮಾದೇತಾನ್ ಬಂಧೂನುಪೇಕ್ಷಸೇ ॥ ೬೧ ॥

ದರ್ಶಿತೋ ಮಾನುಷೋ ಭಾವಃ ದರ್ಶಿತಂ ಬಾಲಚಾಪಲಂ ।
ತದಯಂ ದಮ್ಯತಾಂ ಕೃಷ್ಣ ದುಷ್ಟಾತ್ಮಾ ದರ್ಪನಾಯುಧಃ ॥ ೬೨ ॥

॥ ಶ್ರೀ ಪರಾಶರಃ ॥

ಇತಿ ಸಂಸ್ಮಾರಿತಃ ಕೃಷ್ಣಸ್ತ್ಯಕ್ತಭಿನ್ನೋಷ್ಮಸಂಪುಟೈಃ ।
ಆಸ್ಫೋಟ್ಯ ಮೋಚಯಾಮಾಸ ಸ್ವದೇಹಂ ಭೋಗಿಬಂಧನಾತ್ ॥ ೬೩ ॥

೫೯-೬೨. ಮಹಾಮಹಿಮನಾದ ಕೃಷ್ಣನೇ! ನೀನು ಮನುಷ್ಯರಂತೆ ನಟಿಸುತ್ತಿದ್ದರೆ ನಿನ್ನ ನಟನೆಯನ್ನನುಸರಿಸಿದ ಸಮಸ್ತ ದೇವತೆಗಳೂ ಗೋಪವೇಷದಿಂದ ಇಲ್ಲಿರುವರು. ನೀನು ದೇವಸ್ತ್ರೀಯರು ಮೊದಲು ನಿನ್ನ ಕ್ರೀಡೆಗಾಗಿ ಗೋಕುಲದಲ್ಲಿ ಅವತಾರ ಮಾಡುವಂತೆ ಮಾಡಿ ಆಮೇಲೆ ನೀನು ಅವತಾರ ಮಾಡಿರುವೆ. ಎಲೈ ಕೃಷ್ಣನೇ ಇಲ್ಲಿ ಅವತಾರ ಮಾಡಿರುವ ನಮಗೆ ಗೋಪಗೋಪಿಯರೇ ಬಂಧು ಜನರು. ದುಃಖಪಡುತ್ತಿರುವ ಈ ನಂಟರನ್ನು ಏಕೆ ಉದಾಸೀನಮಾಡುತ್ತಿರುವೆ? ಮನುಷ್ಯ ಭಾವವನ್ನು ತೋರಿಸಿದುದಾಯಿತು. ಬಾಲಕರ ಚಪಲತೆಯನ್ನೂ ತೋರಿಸಿದುದಾಯಿತು. ಈ ದುಷ್ಟನಾದ ಕಾಳಿಯನಾಗನನ್ನು ನಿಗ್ರಹಿಸು.

೬೩-೬೫. ಹೀಗೆಂದು ಜ್ಞಾಪಿಸಿದಮೇಲೆ ಶ್ರೀಕೃಷ್ಣನು ನಗುತ್ತ ಭುಜವನ್ನು ತಟ್ಟಿಕೊಂಡು ತನ್ನ ಶರೀರವನ್ನು ಸರ್ಪಗಳ ಹಿಡಿಯಿಂದ ಬಿಡಿಸಿಕೊಂಡನು. ಒಳಕ

ಅನಮ್ಯ ಚಾಪಿ ಹಸ್ತಾಭ್ಯಾಮುಭಾಭ್ಯಾಂ ಮಧ್ಯಮುಂ ಶಿರಃ ।
ಆರುಹ್ಯ ಭುಗ್ನಶಿರಸಃ ಪ್ರಣಿನರ್ತೋರುವಿಕ್ರಮಃ ॥ ೪೪ ॥

ಪ್ರಾಣಾಃ ಫಣೇ ಭವಂಶ್ಚಾಸ್ಯ ಕೃಷ್ಣಸ್ಯಾಂಘ್ರಿನಿಪೀಡನೈಃ ।
ಯತೋನ್ನತಿಂ ಚ ಕುರುತೇ ನನಾಮಾಸ್ಯ ತತಃ ಶಿರಃ ॥ ೪೫ ॥

ಮೂರ್ಧಾಮುಪಾಯಯೌ ಭ್ರಾಂತ್ಯಾ ನಾಗಃ ಕೃಷ್ಣಸ್ಯ ರೇಚಕೈಃ ।
ದಂಡಪಾತನಿಪಾತೇನ ವವಾಮ ರುಧಿರಂ ಬಹು ॥ ೪೬ ॥

ತಂ ವಿಭುಗ್ನಶಿರೋ ಗ್ರೀವಮಾಸ್ಯೇಭ್ಯಸ್ಸ್ರುತಶೋಣಿತಂ ।
ವಿಲೋಕ್ಯ ಕರುಣಂ ಜಗ್ಮುಸ್ತತ್ಪತ್ನ್ಯೋ ಮಧುಸೂದನಂ ॥ ೪೭ ॥

॥ ನಾಗಪತ್ನ್ಯಃ ॥

ಜ್ಞಾತೋಽಸಿ ದೇವ ದೇವೇಶ ಸರ್ವಜ್ಞಸ್ತ್ವಮನುತ್ತಮಃ ।
ಪರಂ ಜ್ಯೋತಿರಚಿಂತ್ಯಂ ಯತ್ತದಂಶಃ ಪರಮೇಶ್ವರಃ ॥ ೪೮ ॥

ಎರಡು ಕೈಗಳಿಂದಲೂ ಕಾಳಿಯನ ಮಧ್ಯದ ಹೆಡೆಯನ್ನು ಬಗ್ಗಿಸಿ ಅದರ ಮೇಲಕ್ಕೆ ಹತ್ತಿ ಬಲವಾಗಿ ನರ್ತನ ಮಾಡಿದನು. ಕೃಷ್ಣನ ಕಾಲಿನ ತುಳಿತದಿಂದ ನಾಗನ ಪ್ರಾಣವು ಹೆಡೆಯ ಸಮೀಪಕ್ಕೆ ಬಂದಿತು. ನಾಗನು ಎಲ್ಲಿ ತಲೆಯನ್ನೆತ್ತಿದರೂ ಕೃಷ್ಣನು ಆ ತಲೆಯನ್ನು ತುಳಿದು ಬಗ್ಗಿಸುತ್ತಿದ್ದನು.

೪೬-೫೦. ಕೃಷ್ಣನ ಭ್ರಾಂತಿ ದಂಡಪಾತ ಮುಂತಾದ ನರ್ತನಗಳಿಂದ ನಾಗನು ಮೂರ್ಛೆಯನ್ನು ಹೊಂದಿದನು. ಮೂಗು ಬಾಯಿಗಳಿಂದ ರಕ್ತವನ್ನು ವಿಶೇಷವಾಗಿ ವಮನಮಾಡಿದನು. ತಲೆಯೂ ಕತ್ತೂ ಕುಸಿದು ಬಾಯಿಯಿಂದ ರಕ್ತವನ್ನು ಸುರಿಸುತ್ತಿದ್ದ ನಾಗನನ್ನು ಅವನ ಪತ್ನಿಯರು ಕಂಡು ದೈನ್ಯದಿಂದ ಕೃಷ್ಣನ ಸಮೀಪಕ್ಕೆ ಹೋಗಿ "ದೇವದೇವನೇ! ನೀನು ಸರ್ವಜ್ಞನೂ ಸರ್ವಶ್ರೇಷ್ಠನೂ ಪರಂಜ್ಯೋತಿ ಸ್ವರೂಪನೂ ಅಚಿಂತ್ಯನೂ ಆದ ಪರಮೇಶ್ವರ ಸ್ವರೂಪನೆಂಬುದನ್ನು ನಾವು ತಿಳಿದಿವು.

ನ ಸಮರ್ಥಾಸ್ಸುರಾಸ್ತೋತುಂ ಯಮನನ್ಯಭವಂ ವಿಭುಂ ।
ಸ್ವರೂಪವರ್ಣನಂ ತಸ್ಯ ಕಥಂ ಯೋಷಿತ್ಕರಿಷ್ಯತಿ ॥ ೪೯ ॥

ಯಸ್ಯಾಖಿಲಮಹೀವ್ಯೋಮ ಜಲಾಗ್ನಿ ಪವನಾತ್ಮಕಂ ।
ಬ್ರಹ್ಮಾಂಡಮಲ್ಪಕಾಲಾಂಶಸ್ತೋಷ್ಯಾಮಸ್ತಂ ಕಥಂ ವಯಂ ॥ ೫೦ ॥

ಯಮತೋ ನ ವಿದುರ್ನಿತ್ಯಂ ಯತ್ಸ್ವರೂಪಂ ಹಿ ಯೋಗಿನಃ ।
ಪರಮಾರ್ಥಮಣೋರಲ್ಪಂ ಸ್ಥೂಲಾತ್ಸ್ಥೂಲಂ ನ ತಾಃ ಸ್ಮತಂ ॥ ೫೧ ॥

ನ ಯಸ್ಯ ಜನ್ಮನೇ ಧಾತಾ ಯಸ್ಯ ಚಾಂತಾಯಾ ನಾಂತಕಃ ।
ಸ್ಥಿತಿಕರ್ತಾ ನ ಚಾನ್ಯೋಽಸ್ತಿ ಯಸ್ಯ ತಸ್ಮೈ ನಮಸ್ಸದಾ ॥ ೫೨ ॥

ಕೋಪಸ್ಸ್ವಲ್ಪೋಽಪಿ ತೇ ನಾಸ್ತಿ ಸ್ಥಿತಿಪಾಲನಮೇವ ತೇ ।
ಕಾರಣಂ ಕಾಳಿಯಸ್ಯಾಸ್ಯ ದಮನೇ ಶ್ರೂಯತಾಂ ವಚಃ ॥ ೫೩ ॥

ಸ್ತ್ರಿಯೋಽನುಕಂಪ್ಯಾಸ್ತಾಧೂನಾಂ ಮೂಢಾದೀನಾಶ್ಚ ಜಂತವಃ ।
ಯತಸ್ತತೋಽಸ್ಯ ದೀನಸ್ಯ ಕ್ಷಮ್ಯತಾಂ ಕ್ಷಮತಾಂ ವರ ॥ ೫೪ ॥

ಸರ್ವ ವ್ಯಾಪಿಯಾದ ನಿನ್ನನ್ನು ಸ್ತೋತ್ರಮಾಡಲು ದೇವತೆಗಳಿಗೂ ಶಕ್ತಿಯಿಲ್ಲ. ಅಂತಹ ನಿನ್ನ ಸ್ವರೂಪವರ್ಣನೆಯನ್ನು ಸ್ತ್ರೀಯರಾದ ನಾವು ಹೇಗೆ ಮಾಡುವೆವು? ಈ ಸಮಸ್ತವಾದ ಭೂಮಿ, ನೀರು, ಅಗ್ನಿ, ವಾಯು ಆಕಾಶಗಳ ಸ್ವರೂಪವಾದ ಬ್ರಹ್ಮಾಂಡವು ನಿನ್ನ ಅತ್ಯಲ್ಪವಾದ ಅಂಶವಾಗಿರುವಲ್ಲಿ ನಾವು ನಿನ್ನನ್ನು ಹೇಗೆ ಸ್ತೋತ್ರಮಾಡೋಣ?

೫೧-೫೦. ಯೋಗಿಗಳು ನಿತ್ಯವೂ ಇಂದ್ರಿಯ ನಿಗ್ರಹವನ್ನು ಅಭ್ಯಾಸ ಮಾಡುತ್ತ ಅತ್ಯಂತ ಸೂಕ್ಷ್ಮನೂ ಅತ್ಯಂತ ಸ್ಥೂಲನೂ ಆದ ಪರಮಾರ್ಥ ಸ್ವರೂಪ ನಾದ ನಿನ್ನನ್ನು ತಿಳಿಯಲಿಲ್ಲ. ಅಂತಹ ನಿನಗೆ ನಮಸ್ಕಾರ ಮಾಡುವೆವು. ಬ್ರಹ್ಮನು ನಿನಗೆ ಸೃಷ್ಟಿಕರ್ತನಲ್ಲ. ಯಮನು ನಿನ್ನನ್ನು ನಾಶಮಾಡಲಾರನು. ಮತ್ತೊಬ್ಬ ವಿಷ್ಣುವಿಲ್ಲದುದರಿಂದ ನಿನ್ನನ್ನು ಪಾಲಿಸುವವನು ಮತ್ತೊಬ್ಬನಿಲ್ಲ. ಅಂತಹ ನಿನಗೆ ಯಾವಾಗಲೂ ನಮಸ್ಕಾರ ಮಾಡುವೆವು. ಸಮಸ್ತ ಲೋಕವನ್ನೂ ರಕ್ಷಿಸುವ ನಿನಗೆ ಸ್ವಲ್ಪವಾದರೂ ಕೋಪವಿಲ್ಲ. ಹೀಗಿರುವಲ್ಲಿ ಈ ಕಾಳಿಯನನ್ನು ನಿಗ್ರಹಿಸುವುದಕ್ಕೆ

ಸಮಸ್ತ ಜಗದಾಧಾರೋ ಭವಾನಲ್ಪ ಬಲಃ ಫಣೀ ।
ತ್ವತ್ಪಾದಪೀಡಿತೋ ಜಹ್ಯಾನ್ಮುಹೂರ್ತಾರ್ಧೇನ ಜೀವಿತಂ ॥ ೫೫ ॥

ಕ್ವಪನ್ನಗೋಽಲ್ಪವೀರ್ಯೋಽಯಂ ಕ್ವಭವಾನ್ಭುವನಾಶ್ರಯಃ ।
ಪ್ರೀತಿದ್ವೇಷೌ ಸಮೋತ್ಕೃಷ್ಟೇಗೋಚರೌ ಭವತೋಽವ್ಯಯಃ ॥ ೫೬ ॥

ತತಃ ಕುರು ಜಗತ್ಸ್ವಾಮಿನ್ ಪ್ರಸಾದ ಮವಸೀದತಃ ।
ಪ್ರಾಣಾಂಸ್ತ್ಯ ಜತಿ ನಾಗೋಽಯಂ ಭರ್ತೃಭಿಕ್ಷಾ ಪ್ರದೀಯತಾಂ ॥ ೫೭ ॥

ಭುವನೇಶ ಜಗನ್ನಾಥ ಮಹಾಪುರುಷ ಪೂರ್ವಜ ।
ಪ್ರಾಣಾಂಸ್ತ್ಯ ಜತಿ ನಾಗೋಽಯಂ ಭರ್ತೃಭಿಕ್ಷಾಂ ಪ್ರಯಚ್ಛನಃ ॥ ೫೮ ॥

ವೇದಾಂತವೇದ್ಯ ದೇವೇಶ ದುಷ್ಪದೈತ್ಯನಿಬರ್ಹಣ ।
ಪ್ರಾಣಾಂಸ್ತ್ಯ ಜತಿ ನಾಗೋಽಯಂ ಭರ್ತೃಭಿಕ್ಷಾ ಪ್ರದೀಯತಾಂ ॥ ೫೯ ॥

ಕಾರಣವೇನು? ನಮ್ಮ ಮಾತನ್ನು ಕೇಳು. ಸಜ್ಜನರು ಸ್ತ್ರೀಯರನ್ನು ಕರುಣೆಯಿಂದ ನೋಡಬೇಕು. ಜಂತುಗಳು ಅಜ್ಞಾನಾಧೀನವಾದುವುಗಳು. ಆದುದರಿಂದ ಈ ದೀನನಾದ ನಾಗನನ್ನು ಕ್ಷಮಾವಂತರಲ್ಲಿ ಶ್ರೇಷ್ಠನಾದ ನೀನು ಕ್ಷಮಿಸು. ನೀನು ಸಮಸ್ತ ಜಗತ್ತಿಗೂ ಆಶ್ರಯನಾದವನು. ಈ ನಾಗನು ದುರ್ಬಲನಾದವನು. ನಿನ್ನ ಕಾಲಿನ ತುಳಿತದಿಂದ ಅರ್ಧಗಳಿಗೆಯಲ್ಲಿ ಪ್ರಾಣವನ್ನು ಬಿಡುವನು. ಅಲ್ಪವಾದ ಶಕ್ತಿಯುಳ್ಳ ನಾಗನೆಲ್ಲಿ, ಸಮಸ್ತ ಲೋಕಗಳಿಗೂ ಆಶ್ರಯನಾದ ನೀನೆಲ್ಲಿ? ಸಮಾನರಲ್ಲಿ ಪ್ರೀತಿಯನ್ನೂ ಹೆಚ್ಚು ಬಲವುಳ್ಳವರಲ್ಲಿ ದ್ವೇಷವನ್ನೂ ಮಾಡುವುದು ಲೋಕ ಸ್ವಭಾವವಾದುದು. ಆದುದರಿಂದ ಲೋಕಸ್ವಾಮಿಯಾದ ದೇವನೇ ದೀನನಾದ ಈ ನಾಗನಿಗೆ ಅನುಗ್ರಹವನ್ನು ಮಾಡು. ಇವನು ಪ್ರಾಣ ಬಿಡುತ್ತಿರುವನು. ನನಗೆ ಪತಿಭಿಕ್ಷೆಯನ್ನು ಕೊಡು. ಜಗತ್ತಿಗೆ ಒಡೆಯನೇ! ಮಹಾಪುರುಷನೇ! ಪತಿಭಿಕ್ಷೆಯನ್ನು ಕೊಡು. ವೇದಾಂತ ವಾಕ್ಯಗಳಿಂದ ತಿಳಿಯಲು ಸಾಧ್ಯನಾದವನೇ ದುಷ್ಟ

॥ ಶ್ರೀ ನಾಶರಃ ॥

ಇತ್ಯುಕ್ತೇ ತಾಭಿರಾಶ್ವಾಸ್ಯ ಕ್ಲಾಂತದೇಹೋಽಪಿ ಪನ್ನಗಃ ।
ಪ್ರಸೀದ ದೇವ ದೇವೇತಿ ಪ್ರಾಹ ವಾಕ್ಯಂ ಶನೈಃ ಶನೈಃ ॥ ೬೦ ॥

॥ ಕಾಳೀಯಃ ॥

ತವಾಪ್ಯಗುಣಮೈಶ್ವರ್ಯಂ ನಾಥ ಸ್ವಾಭಾವಿಕಂ ಪರಂ ।
ನಿರಸ್ತಾತಿಶಯಂ ಯಸ್ಮ ತಸ್ಯ ಸ್ತೋಷ್ಯಾಮಿ ಕಿನ್ನ್ವಹಂ ॥ ೬೧ ॥

ತ್ವಂ ಪರಸ್ತ್ವಂ ಪರಸ್ಯಾದ್ಯಃ ಪರಂ ತ್ವತ್ತಃ ಪರಾತ್ಮಕೆ ।
ಸರ್ವಸ್ಮಾತ್ಪರಮೋ ಯಸ್ತ್ವಂ ತಸ್ಯ ಸ್ತೋಷ್ಯಾಮಿ ಕಿನ್ನ್ವಹಂ ॥ ೬೨ ॥

ಯಸ್ಮಾದ್ಬ್ರಹ್ಮಾ ಚ ರುದ್ರಶ್ಚ ಚಂದ್ರೇಂದ್ರಮರುದಶ್ವಿನಃ ।
ವಸವಶ್ಚ ಮಹಾದಿತ್ಯಸ್ತಸ್ಯ ಸ್ತೋಷ್ಯಾಮಿ ಕಿನ್ನ್ವಹಂ ॥ ೬೩ ॥

ದೈತ್ಯರನ್ನು ನಾಶಮಾಡತಕ್ಕ ದೇವನೇ ಈ ನಾಗನು ಪ್ರಾಣ ಬಿಡುತ್ತಿರುವನು. ನಮಗೆ ಪತಿಭಿಕ್ಷೆಯನ್ನು ಕೊಡು." ಹೀಗೆಂದು ಹೇಳಿ ಆ ಸ್ತ್ರೀಯರು ನಾಗರಾಜನನ್ನು ಸಮಾಧಾನಪಡಿಸುತ್ತಲು ಅವನು ಶರೀರದಲ್ಲಿ ಆಯಾಸವುಳ್ಳವನಾದರೂ ದೇವ ದೇವನೇ ಪ್ರಸನ್ನನಾಗು ಎಂದು ಮೆಲ್ಲಮೆಲ್ಲನೆ ಮಾತನಾಡಲು ಪ್ರಾರಂಭಿಸಿದನು.

೬೧–೬೫. ಕಾಳಿಯನು "ಓ ಸ್ವಾಮಿಯೇ! ನಿನಗೆ ಅಪ್ಪೈಶ್ವರ್ಯವು ಸ್ವಾಭಾವಿಕವಾದುದು. ಅವುಗಳಲ್ಲಿ ಅತ್ಯಲ್ಪವಾದುದನ್ನೂ ಸ್ತೋತ್ರಮಾಡಲು ನನಗೆ ಶಕ್ತಿಯಿಲ್ಲ. ನೀನು ಸರ್ವೋತ್ಕೃಷ್ಟನು, ಹಿರಣ್ಯಗರ್ಭನನ್ನೂ ಸೃಷ್ಟಿಸಿದವನು. ಅವ್ಯಕ್ತವಾದ ಪ್ರಕೃತಿಯು ನಿನ್ನಿಂದಲೇ ಹುಟ್ಟುವುದು. ಆ ಪ್ರಕೃತಿಯನ್ನು ಪ್ರೇರಿಸುವ ಈಶ್ವರ ಸ್ವರೂಪನೇ ನೀನು. ಇಂದ್ರಿಯಾದಿಗಳಿಗಿಂತ ಅತ್ಯಂತ ಶ್ರೇಷ್ಠನು. ಇಂತಹ ನಿನ್ನನ್ನು ನಾನೇನೆಂದು ಸ್ತೋತ್ರಮಾಡಲಿ. ಸೃಷ್ಟಿಕರ್ತನಾದ ಬ್ರಹ್ಮನೂ ಏಕಾದಶ ರುದ್ರರೂ ಚಂದ್ರ ಇಂದ್ರ ವಾಯು ಅಶ್ವಿನೀದೇವತೆಗಳು ಅಷ್ಟವಸುಗಳು

ವಿಕಾವಯವಸೂಕ್ಷ್ಮಾಂಶೋಯಸ್ಯೈತದಖಿಲಂ ಜಗತ್ ।
ಕಲ್ಪನಾವಯವಸ್ಯಾಂಶಸ್ತಸ್ಯ ಸ್ತೋಷ್ಯಾಮಿ ಕಿನ್ನ್ವಹಂ ॥ ೬೪ ॥

ಸದಸದ್ರೂಪಿಣೋ ಯಸ್ಯ ಬ್ರಹ್ಮಾದ್ಯಾಸ್ತ್ರಿದಶೇಶ್ವರಾಃ ।
ಪರಮಾರ್ಥಂ ನ ಜಾನಂತಿ ತಸ್ಯ ಸ್ತೋಷ್ಯಾಮಿ ಕಿನ್ನ್ವಹಂ ॥ ೬೫ ॥

ಬ್ರಹ್ಮಾದ್ಯೈರರ್ಚ್ಯತೇ ಯಸ್ತು ಗಂಧಪುಷ್ಪಾನುಲೇಪನೈಃ ।
ನಂದನಾದಿಸಮುದ್ಭೂತೈಸ್ತೋಽರ್ಚ್ಯತೇ ವಾ ಕಥಂ ಮಯಾ ॥ ೬೬ ॥

ಯಸ್ಯಾವತಾರ ರೂಪಾಣಿ ದೇವರಾಜಸ್ಸದಾರ್ಚತಿ ।
ನ ವೇತ್ತಿ ಪರಮಂ ರೂಪಂ ಸೋರ್ಚ್ಯತೇವಾಕಥಂಮಯಾ ॥ ೬೭ ॥

ವಿಷಯೇಭ್ಯಸ್ಸಮಾಹೃತ್ಯ ಸರ್ವಾಕ್ಷಾಣಿ ಚ ಯೋಗಿನಃ ।
ಯಮರ್ಚಯಂತಿ ಧಾನ್ಯೇನಾ ಸೋರ್ಚ್ಯತೇವಾ ಕಥಂ ಮಯಾ ॥ ೬೮ ॥

ದ್ವಾದಶಾದಿತ್ಯರು ಮಹತ್ತತ್ವವೇ ಮೊದಲಾದ ಸಮಸ್ತ ತತ್ವಗಳೂ ನಿನ್ನಿಂದಲೇ ಹುಟ್ಟಿರುವುದು. ಇಂತಹ ನಿನ್ನನ್ನು ನಾನೇನೆಂದು ಸ್ತೋತ್ರಮಾಡಲಿ. ನಿನ್ನ ಒಂದು ಅವಯವದ ಸೂಕ್ಷ್ಮವಾದ ಅಂಶವು ಕಲ್ಪನಾರೂಪವಾಗಿ ಈ ಸಮಸ್ತ ಜಗತ್ತಾಗಿರುವುದು. ಇಂತಹ ನಿನ್ನನ್ನೇನೆಂದು ಹೊಗಳಲಿ ಕಾರ್ಯ ಕಾರಣ ರೂಪನಾದ ನಿನ್ನನ್ನು ಬ್ರಹ್ಮಾದಿ ದೇವತೆಗಳು ಪರಮಾರ್ಥ ಸ್ವರೂಪದಿಂದ ತಿಳಿಯ ಲಾರರು. ಅಂತಹ ನಿನ್ನನ್ನು ನಾನು ಹೇಗೆ ಸ್ತೋತ್ರಮಾಡಲಿ.

೬೬–೬೯. ನಂದನ ವನವೇ ಮುಂತಾದುವುಗಳಲ್ಲಿ ಹುಟ್ಟಿದ ಗಂಧ ಪುಷ್ಪಾದಿ ಗಳಿಂದ ಬ್ರಹ್ಮಾದಿ ದೇವತೆಗಳು ನಿನ್ನನ್ನು ಪೂಜಿಸುವರು, ಅಂತಹ ನಿನ್ನನ್ನು ನಾನು ಹೇಗೆ ಪೂಜಿಸುವೆನು? ಯಾವ ನಿನ್ನ ಅವತಾರ ರೂಪಗಳನ್ನು ದೇವರಾಜನಾದ ದೇವೇಂದ್ರನು ಸದಾ ಪೂಜಿಸುತ್ತಿರುವನು. ಆದರೂ ನಿನ್ನ ಶ್ರೇಷ್ಠಸ್ವರೂಪವನ್ನು ಅವನು ತಿಳಿಯನು. ಇಂತಹ ನಿನ್ನನ್ನು ನಾನು ಹೇಗೆ ಪೂಜಿಸುವೆನು? ಯೋಗಿ ಗಳು ತಮ್ಮ ಸಮಸ್ತ ಇಂದ್ರಿಯಗಳನ್ನೂ ಅದರದರ ವಿಷಯಗಳಿಂದ ಹಿಂದಿರುಗಿಸಿ

ಕೃತಿಸಂಕಲ್ಪ್ಯ ಯದ್ರೂಪಂ ಧ್ಯಾನೇನಾರ್ಚಂತಿ ಯೋಗಿನಃ ।
ಭಾವಪುಷ್ಪಾದಿನಾ ನಾಥ ಸೋಽರ್ಚ್ಯತೇ ವಾ ಕಥಂ ಮಯಾ ॥ ೬೯ ॥

ಸೋಽಹಂ ತೇ ದೇವ ದೇವೇಶ ನಾರ್ಚನಾದೌ ಸ್ತುತೌ ನ ಚ ।
ಸಾಮರ್ಥ್ಯವಾಸ್ಯೃಪಾಮಾತ್ರಮನೋವೃತ್ತಿಃ ಪ್ರಸೀದ ಮೇ ॥ ೭೦ ॥

ಸರ್ಪಜಾತಿರಿಯಂ ಕ್ರೂರಾ ಯಸ್ಯಾಂ ಜಾತೋಽಸ್ಮಿ ಕೇಶವ ।
ತತ್ಸ್ವಭಾವೋಽಯಮತ್ರಾಸ್ತಿ ನಾಪರಾಧೋ ಮಮಾಚ್ಯುತ ॥ ೭೧ ॥

ಸೃಜ್ಯತೇ ಭವತಾ ಸರ್ವಂ ತಥಾ ಸಂಹ್ರಿಯತೇ ಜಗತ್ ।
ಜಾತಿರೂಪಸ್ವಭಾವಾಶ್ಚ ಸೃಜ್ಯಂತೇ ಸೃಜತಾ ತ್ವಯಾ ॥ ೭೨ ॥

ಯಥಾಹಂ ಭವತಾ ಸೃಷ್ಟೋ ಜಾತ್ಯಾ ರೂಪೇಣ ಚೇಶ್ವರ ।
ಸ್ವಭಾವೇನ ಚ ಸಾಧುತ್ವಂ ತಥೈದಂ ಚೇಷ್ಟಿತಂ ಮಯಾ ॥ ೭೩ ॥

ಧ್ಯಾನರೂಪವಾದ ಪೂಜೆಯಿಂದ ನಿನ್ನನ್ನು ಪೂಜಿಸುವರು, ಇಂತಹ ನಿನ್ನನ್ನು ಹೇಗೆ ಪೂಜಿಸಲಿ? ಓ ಸ್ವಾಮಿಯೇ! ಯೋಗಿಗಳು ತಮ್ಮ ಮನಸ್ಸಿನಲ್ಲಿ ಒಂದು ರೂಪವನ್ನು ಕಲ್ಪಿಸಿಕೊಂಡು ಧ್ಯಾನಮಾಡುತ್ತ ಭಕ್ತಿರೂಪವಾದ ಪುಷ್ಪವೇ ಮೊದಲಾದುವುಗಳಿಂದ ಪೂಜಿಸುವರು, ಅಂತಹ ನಿನ್ನನ್ನು ನಾನು ಹೇಗೆ ಪೂಜಿಸಲಿ?

೭೦-೭೪. ದೇವದೇವನೇ ನಾನು ನಿನ್ನನ್ನು ಪೂಜಿಮಾಡುವುದಕ್ಕೂ ಸ್ತೋತ್ರಾದಿಗಳನ್ನು ಮಾಡುವುದಕ್ಕೂ ಶಕ್ತನಲ್ಲ. ನನ್ನಲ್ಲಿ ದಯೆಯೊಂದನ್ನು ಇಟ್ಟು ಪ್ರಸನ್ನನಾಗು, ಓ ಸ್ವಾಮಿಯೇ ಸರ್ಪಜಾತಿಯೇ ಕ್ರೂರವಾದುದು. ಈ ಜಾತಿಯಲ್ಲಿ ನಾನು ಹುಟ್ಟಿರುವೆನು, ಈ ಶರೀರದಲ್ಲಿ ಆ ಜಾತಿಯ ಸ್ವಭಾವವಿರುವುದು, ಇದು ನನ್ನ ತಪ್ಪಲ್ಲ, ನೀನು ಸಮಸ್ತ ಜಗತ್ತನ್ನೂ ಸೃಷ್ಟಿಸುವೆ. ಹಾಗೆಯೇ ಸಂಹಾರವನ್ನೂ ಮಾಡುವೆ. ಜಗತ್ತನ್ನು ಸೃಷ್ಟಿಸುವ ನೀನೇ ಜಾತಿ ಸ್ವರೂಪವನ್ನೂ ಸ್ವಭಾವಗಳನ್ನೂ ಸೃಷ್ಟಿಸುವೆ, ಜಾತಿಯಿಂದಲೂ ರೂಪದಿಂದಲೂ ನೀನು ಹೇಗೆ ನನ್ನನ್ನು ಸೃಷ್ಟಿಸಿದೆಯೋ ಅದಕ್ಕನುಸಾರವಾಗಿ ನಾನು ಕಾರ್ಯವನ್ನು ಮಾಡಿರುವೆನು.

ಯದ್ಯನ್ಯಥಾ ಪ್ರವರ್ತೇಯಂ ದೇವ ದೇವ ತತೋ ಮಯಿ ।
ನ್ಯಾಯ್ಯೋ ದಂಡನಿಪಾತೋ ವೈ ತವೈವ ವಚನಂ ಯಥಾ　　॥ ೭೪ ॥

ತಥಾಪ್ಯಜ್ಞೇ ಜಗತ್ಸ್ವಾಮಿನ್ ದಂಡಂ ಪಾತಿತವಾನ್ಮಯಿ ।
ಸ ಶ್ಲಾಘ್ಯೋಽಯಂ ವರೋ ದಂಡಸ್ತ್ವತ್ತೋ ಮೇ ನಾನ್ಯತೋ ವರಃ ॥೭೫॥

ಹತವೀರ್ಯೋ ಹತವಿಷೋ ದಮಿತೋಽಹಂ ತ್ವಯಾಚ್ಯುತ ।
ಜೀವಿತಂ ದೀಯತಾಮೇಕಮಾಜ್ಞಾಪಯ ಕರೋಮಿ ಕಂ　　॥ ೭೬ ॥

॥ ಶ್ರೀ ಭಗವಾನುವಾಚ ॥

ನಾತ್ರ ಸ್ಥೇಯಂ ತ್ವಯಾ ಸರ್ಪ ಕದಾಚಿದ್ಯಮುನಾಜಲೇ ।
ಸಪುತ್ರಪರಿವಾರಸ್ತ್ವಂ ಸಮುದ್ರಸಲಿಲಂ ವ್ರಜ　　॥ ೭೭ ॥

---

೬. ಸ್ವಾಮಿಯೇ! ನಾನು ಬೇರೆ ವಿಧವಾಗಿ ನಡೆದರೆ ನಿನ್ನ 'ಪರಿತ್ರಾಣಾಯ ಸಾಧೂನಾಂ' ಎಂಬ ಮಾತಿನಂತೆ ನನಗೆ ದಂಡನೆಯನ್ನು ಮಾಡಬೇಕು. ಆದರೂ ಲೋಕಸ್ವಾಮಿಯಾದ ನೀನು ಅಜ್ಞಾನಿಯಾದ ನನಗೆ ದಂಡನೆಯನ್ನು ಮಾಡಿರುವೆ.

೭೫-೭೬. ಇತರ ದೇವತೆಗಳಿಂದ ನನಗೆ ವರವು ಪ್ರಾಪ್ತವಾದರೂ ಅದು ಶ್ಲಾಘ್ಯವಾದುದಲ್ಲ. ನಿನ್ನಿಂದ ದಂಡನೆಯು ಪ್ರಾಪ್ತವಾದರೂ ಅದು ವರರೂಪವಾದುದಾಗಿರುವುದು, ನೀನು ನನ್ನ ಬಲವನ್ನೂ ವಿಷವನ್ನೂ ನಾಶಮಾಡಿದುದರಿಂದ ದುಷ್ಟ ಸ್ವಭಾವವು ಹೋಗಿ ಶಾಂತನಾಗಿರುವೆನು, ಜೀವದಾನವನ್ನು ಮಾಡು. ನಾನು ಮುಂದೆ ಮಾಡಬೇಕಾದ ಕೆಲಸವನ್ನು ಅಪ್ಪಣೆ ಮಾಡು" ಎಂದು ಹೇಳಿದನು.

೭೭-೭೯. ಕೃಷ್ಣನು 'ಎಲೈ ಸರ್ಪರಾಜನೇ! ಈ ಯಮುನಾಜಲದಲ್ಲಿ ನೀನು ಇರಬೇಡ, ನಿನ್ನ ಪರಿವಾರದೊಡನೆ ಸಮುದ್ರಕ್ಕೆ ಹೋಗಿ ವಾಸವಾಗಿರು. ನಿನ್ನ ತಲೆಯ ಮೇಲೆ ನನ್ನ ಕಾಲಿನ ಗುರುತನ್ನು ನೋಡಿ ಹಾವುಗಳ ಶತ್ರುವಾದ ಗರುಡನು

ಮತ್ಪದಾನಿ ಚ ಪೇ ಸರ್ಪ ದೃಷ್ಟ್ವಾ ಮೂರ್ಧನಿ ಸಾಗರೇ ।
ಗರುಡಃ ಪನ್ನಗರಿಪುಸ್ತ್ವಯಿ ನ ಪ್ರಹರಿಷ್ಯತಿ ॥ ೭೫ ॥

॥ ಶ್ರೀ ಪರಾಶರಃ ॥

ಇತ್ಯುಕ್ತ್ವಾ ಸರ್ಪರಾಜಂ ತಂ ಮುಮೋಚ ಭಗವಾನ್ ಹರಿಃ ।
ಪ್ರಣಮ್ಯ ಸೋಪಿ ಕೃಷ್ಣಾಯ ಜಗಾಮ ಪಯಸಾಂ ನಿಧಿಂ ॥ ೭೯ ॥

ಪಶ್ಯತಾಂ ಸರ್ವಭೂತಾನಾಂ ಸಭೃತ್ಯಸುತಬಾಂಧವಃ ।
ಸಮುಸ್ತ ಭಾರ್ಯಾಸಹಿತಃ ಪರಿತ್ಯಜ್ಯ ಸ್ವಕಂ ಹ್ರದಂ ॥ ೮೦ ॥

ಗತೇ ಸರ್ಪೇ ಪರಿತ್ಯಜ್ಯ ಮೃತಂ ಪುನರಿವಾಗತಂ ।
ಗೋಪಾ ಮೂರ್ಧನಿ ಹಾರ್ದೇನ ಸಿಷಿಚುರ್ನೇತ್ರಜೈರ್ಜಲೈಃ ॥ ೮೧ ॥

ಕೃಷ್ಣಮಕ್ಲಿಷ್ಟಕರ್ಮಾಣಮನ್ಯೇ ವಿಸ್ಮಿತಚೇತಸಃ ।
ತುಷ್ಟುವುರ್ಮುದಿತಾ ಗೋಪಾ ದೃಷ್ಟ್ವಾ ಶಿವಜಲಾಂ ನದೀಂ ॥ ೮೨ ॥

ನಿನ್ನನ್ನು ಹೊಡೆಯುವುದಿಲ್ಲ' ಎಂದು ಹೇಳಿ ಮಹಾಮಹಿಮನಾದ ಕೃಷ್ಣನು ಆ ಸರ್ಪರಾಜನನ್ನು ಬಿಟ್ಟುಬಿಟ್ಟನು. ಆ ನಾಗನು ಕೃಷ್ಣನಿಗೆ ನಮಸ್ಕಾರವನ್ನು ಮಾಡಿ ಸಮುದ್ರಕ್ಕೆ ಹೊರಟುಹೋದನು.

೮೦-೮೨. ಎಲ್ಲರೂ ನೋಡುತ್ತಿದ್ದಂತೆ ನಾಗರಾಜನು ಪುತ್ರ ಪತ್ನೀ ಬಂಧು ಭೃತ್ಯರೊಡನೆ ತನ್ನ ಮಡುವನ್ನು ಬಿಟ್ಟು ಸಮುದ್ರಕ್ಕೆ ಹೊರಟುಹೋದಮೇಲೆ ಗೋಪರು ಸತ್ತುಹೋಗಿದ್ದ ಕೃಷ್ಣನು ಮತ್ತೆ ಬಂದನೆಂದು ಸಂತೋಷದಿಂದ ಅವನನ್ನು ತಬ್ಬಿಕೊಂಡು ಆನಂದಬಾಷ್ಪದಿಂದ ಅವನ ತಲೆಯನ್ನು ನೆನಸಿದರು, ಮತ್ತೆ ಕೆಲವು ಗೊಲ್ಲರು ಆಶ್ಚರ್ಯಪಡುತ್ತ ನದಿಯನೀರು ಶುದ್ಧವಾದುದನ್ನು ಕಂಡು ಸಂತೋಷದಿಂದ ಕೃಷ್ಣನನ್ನು ಹೊಗಳಿದರು.

ಗೀಯಮಾನಸ್ಸ ಗೋಪೀಭಿಶ್ಚರಿತೈಸ್ಸಾಧುಚೇಷ್ಟಿತೈಃ ।
ಸಂಸ್ತೂಯಮಾನೋ ಗೋಪೈಶ್ಚ ಕೃಷ್ಣೋ ವ್ರಜಮುಪಾಗಮತ್ ॥ ೮೩ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ಸಪ್ತಮೋಽಧ್ಯಾಯಃ

---

೮೩. ಕೃಷ್ಣನು ಮಾಡಿದ ಒಳ್ಳೆಯ ಕೆಲಸಕ್ಕೆ ಗೋಪರೂ ಗೋಪಿಯರೂ ಅವನನ್ನು ಹೊಗಳುತ್ತಿರಲು ಅವನು ಅವರೊಡನೆ ವ್ರಜಕ್ಕೆ ಬಂದು ಸೇರಿದನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ
ಏಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಅಷ್ಟಮೋಽಧ್ಯಾಯಃ

॥ ಶ್ರೀ ಪರಾಶರಃ ॥

ಗಾಃ ಪಾಲಯಂತೌ ಚ ಪುನಸ್ಸಹಿತೌ ಬಲಕೇಶವೌ ।
ಭ್ರಮಮಾಣೌ ವನೇ ತಸ್ಮಿನ್ ರಮ್ಯಂ ತಾಳವನಂ ಗತೌ ॥ ೦ ॥

ತತ್ತು ತಾಳವನಂ ದಿವ್ಯಂ ಧೇನುಕೋ ನಾಮ ದಾನವಃ ।
ಮೃಗಮಾಂಸಕೃತಾಹಾರಸ್ಸದಾಧ್ಯಾಸ್ತೇ ಖರಾಕೃತಿಃ ॥ ೨ ॥

ತತ್ತು ತಾಳವನಂ ಪಕ್ವಫಲಸಂಪನ್ನಮನ್ವಿತಂ ।
ದೃಷ್ಟ್ವಾ ಸ್ಪೃಹಾನ್ವಿತಾ ಗೋಪಾಃ ಫಲಾದಾನೇಽಬ್ರುವನ್ನೃಜಃ ॥ ೩ ॥

ಎಂಟನೆಯ ಅಧ್ಯಾಯವು

೧-೩. ಪುನಃ ರಾಮಕೃಷ್ಣರು ಗೋವುಗಳನ್ನು ಮೇಯಿಸುತ್ತ ಆ ವನದಲ್ಲಿ ತಿರುಗುತ್ತ ಮನೋಹರವಾದ ತಾಳವನಕ್ಕೆ ಪ್ರವೇಶಿಸಿದರು. ಆ ದಿವ್ಯವಾದ ತಾಳವನದಲ್ಲಿ ಕತ್ತೆಯ ಆಕಾರದ ಧೇನುಕನೆಂಬ ರಾಕ್ಷಸನು ವಾಸಮಾಡುತ್ತ ಮೃಗಗಳ ಮಾಂಸವನ್ನು ಆಹಾರಮಾಡಿಕೊಂಡಿದ್ದನು. ಆ ತಾಳೆಯ ವನವು ಪಕ್ವವಾದ ಹಣ್ಣುಗಳಿಂದ ತುಂಬಿರುವುದನ್ನು ಕಂಡು ಗೋಪರು ಅದರಲ್ಲಿ ಆಸೆಯುಳ್ಳವರಾಗಿ ರಾಮಕೃಷ್ಣರನ್ನು ಕುರಿತು ಹೇಳಿದರು.

॥ ಗೋಪಾಃ ॥

ಮ ಹೇ ಕೃಷ್ಣ ಸದಾ ಧೇನುಕೇನೈಷ ರಕ್ಷ್ಯತೇ ।
ಭೂಪ್ರದೇಶೋ ಯತಸ್ತಸ್ಮಾತ್ಪಕ್ವಾನೀಮಾನಿ ಸಂತಿ ವೈ ॥ ೪ ॥

ಫಲಾನಿ ಪಕ್ಕ ತಾಳಾನಾಂ ಗಂಧಾಮೋದಿತದಿಂಶಿ ವೈ ।
ವಯಮೇತಾನ್ಯಭೀಪ್ಸಾಮಃ ಪಾತ್ಯಂತಾಂ ಯದಿ ರೋಚತೇ ॥ ೫ ॥

॥ ಶ್ರೀ ಪರಾಶರಃ ॥

ಇತಿ ಗೋಪಕುಮಾರಾಣಾಂ ಶ್ರುತ್ವಾ ಸಂಕರ್ಷಣೋ ವಚಃ ।
ವಿತತ್ಕರ್ತವ್ಯಮಿತ್ಯುಕ್ತ್ವಾ ಪಾತಯಾಮಾಸ ತಾನಿ ವೈ ॥
ಕೃಷ್ಣಶ್ಚ ಪಾತಯಾಮಾಸ ಭುವಿ ತಾನಿ ಫಲಾನಿ ವೈ ॥ ೬ ॥

ಫಲಾನಾಂ ಪತತಾಂ ಶಬ್ದಮಾಕರ್ಣ್ಯ ಸುದುರಾಸದಃ ।
ಆಜಗಾಮ ಸ ದುಷ್ಟಾತ್ಮಾ ಕೋಪಾದ್ಧೇತೇಯಗರ್ದಭಃ ॥ ೭ ॥

ಪದ್ಭ್ಯಾಮುಭಾಭ್ಯಾಂ ಸ ತದಾ ಪಶ್ಚಿಮಾಭ್ಯಾಂ ಬಲಂ ಬಲೀ ।
ಜಘಾನೋರಸಿ ತಾಭ್ಯಾಂ ಚ ಸ ಚ ತೇನಾಭ್ಯಗೃಹ್ಯತ ॥ ೮ ॥

೪-೫. " ರಾಮಕೃಷ್ಣರೇ ! ಈ ಭೂಪ್ರದೇಶವನ್ನು ಯಾವಾಗಲೂ ಧೇನುಕನೆಂಬ ರಾಕ್ಷಸನು ಕಾಪಾಡುತ್ತಿರುವನು. ಆದುದರಿಂದ ಈ ತಾಳೆಯಮರಗಳಲ್ಲಿ ಮಾಗಿದ ಹಣ್ಣುಗಳಿವೆ, ಆದರೆ ವಾಸನೆಯು ದಿಕ್ಕುಗಳಿಗೆಲ್ಲಾ ಹರಡುತ್ತಿವೆ, ನಾವು ಆ ಹಣ್ಣುಗಳನ್ನು ತಿನ್ನಬೇಕೆಂದು ಬಯಸುತ್ತೇವೆ, ನಿಮಗೆ ಇಷ್ಟವಿದ್ದರೆ ಆ ಹಣ್ಣುಗಳನ್ನು ಕೆಡವಿ" ಎಂದು ಹೇಳಿದರು.

೬–೧೦. ಗೋಪಬಾಲಕರ ಈ ಮಾತುಗಳನ್ನು ಕೇಳಿ ಕೃಷ್ಣನೂ ಬಲರಾಮನೂ ಆ ಹಣ್ಣುಗಳನ್ನು ಕೆಡವಿದರು, ಹಣ್ಣುಗಳು ಬಿದ್ದ ಶಬ್ದವನ್ನು ಕೇಳಿ ಮಹಾಪರಾಕ್ರಮಿಯಾದ ಕತ್ತೆಯ ಆಕಾರದ ರಾಕ್ಷಸನು ಕೋಪದಿಂದ ಬಂದು ತನ್ನ

ಗೃಹೀತ್ವಾ ಭ್ರಾಮಯಾಮಾಸ ಸೋಽಂಬರೇ ಗತಜೀವಿತಂ ।
ತಸ್ಮಿನ್ನೇವ ಸ ಚಿಕ್ಷೇಪ ವೇಗೇನ ತೃಣರಾಜನಿ ॥ ೯ ॥

ತತಃ ಫಲಾನ್ಯನೇಕಾನಿ ತಾಳಾಗ್ರಾನ್ನಿಪತನ್ ಭುವಃ ।
ಪೃಥಿವ್ಯಾಂ ಪಾತಯಾಮಾಸ ಮಹಾವಾತೋ ಘನಾನಿವ ॥ ೧೦ ॥

ಅನ್ಯಾನಥ ಸಜಾತೀಯಾನಾಗತಾನ್ ದೈತ್ಯಗರ್ದಭಾನ್ ।
ಕೃಷ್ಣಶ್ಚಿಕ್ಷೇಪ ತಾಳಾಗ್ರೇ ಬಲಭದ್ರಶ್ಚ ಲೀಲಯಾ ॥ ೧೧ ॥

ಕ್ಷಣೇನಾಲಂಕೃತಾ ಪೃಥ್ವೀ ಪಕ್ವೈಸ್ತಾಳಫಲೈಸ್ತದಾ ।
ದೈತ್ಯಗರ್ದಭದೇಹೈಶ್ಚ ಮೈತ್ರೇಯ ಶುಶುಭೇಽಧಿಕಂ ॥ ೧೨ ॥

ಹಿಂದಿನಕಾಲುಗಳಿಂದ ಬಲರಾಮನ ಎದೆಗೆ ಒದೆದನು, ಬಲರಾಮನು ಆ ಕಾಲುಗಳನ್ನು ಹಿಡಿದುಕೊಂಡು ಆ ರಾಕ್ಷಸನನ್ನು ಆಕಾಶದಲ್ಲಿ ಸುತ್ತಿಸಿದನು, ಇದರಿಂದ ಅವನ ಪ್ರಾಣವು ಹೋಗುತ್ತಲು ಅವನನ್ನು ತಾಳೆಯಮರದ ಮೇಲಕ್ಕೆ ಎಸೆದುಬಿಟ್ಟನು. ತಾಳೆಯಮರದಿಂದ ಅನೇಕ ಹಣ್ಣುಗಳೊಡನೆ ಆ ಕತ್ತೆಯು ಭೂಮಿಗೆ ಬಿದ್ದುಬಿಟ್ಟಿತು.

೧೧-೧೩. ಮಿಕ್ಕ ಅದೇ ಜಾತಿಯ ಕತ್ತೆಗಳು ಬರುತ್ತಲು ಕೃಷ್ಣಬಲರಾಮರ ಲೀಲೆಯಿಂದ ಅವುಗಳನ್ನು ತಾಳೆಯ ಮರಗಳ ಮೇಲಕ್ಕೆ ಎಸೆದರು. ಒಂದು ಕ್ಷಣ ದೊಳಗಾಗಿ ಆ ಭೂಮಿಯು ತಾಳೆಯ ಹಣ್ಣುಗಳಿಂದಲೂ ಕತ್ತೆಯರೂಪದ ರಾಕ್ಷಸರ ಶರೀರಗಳಿಂದಲೂ ತುಂಬಿ ಪ್ರಕಾಶಿಸುತ್ತಿದ್ದಿತು. ಅಲ್ಲಿಂದ ಮುಂದಕ್ಕೆ ಹಸುಗಳು ಹಿಂದೆ

ತತ್ರ ಗಾವೋ ನಿರಾಬಾಧಾಸ್ತಸ್ಮಿಂಸ್ತಾಳವನೇ ದ್ವಿಜ ।
ನವ ತೃಪ್ತಂ ಸುಖಂ ಚೇರುರ್ಯನ್ನ ಭುಕ್ತಮಭೂತ್ಪುರಾ ॥ ೧೩ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ಅಷ್ಟಮೋಽಧ್ಯಾಯಃ

ಮೇಯುತ್ತ ಇದ್ದ ॥ ತಾಳವನದಲ್ಲಿದ್ದ ಚಿಗುರಾದ ಹುಲ್ಲುಗಳನ್ನು ಯಾವ ಬಾಧೆಯೂ ಇಲ್ಲದೆ ಮೇಯುತ್ತಿದ್ದುವು.

ಎಂಬಲ್ಲಿಗೆ ಶ್ರೀವಿಷ್ಣುಪುರಾಣದ ಪಂಚಮಾಂಶದಲ್ಲಿ
ಎಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ನವಮೋಽಧ್ಯಾಯಃ

॥ ಶ್ರೀ ಪರಾಶರಃ ॥

ತಸ್ಮಿನ್ ರಾಸಭದೈತೇಯೇ ಸಾನುಗೇ ವಿನಿಪಾತಿತೇ ।
ಸೌಮ್ಯಂ ತದ್ಗೋಪಗೋಪೀನಾಂ ರಮ್ಯಂ ತಾಳವನಂ ಬಭೌ ॥ ೧ ॥

ತತಸ್ತೌ ಜಾತಹರ್ಷೌ ತು ವಸುದೇವಸುತಾವುಭೌ ।
ಹತ್ವಾ ಧೇನುಕದೈತೇಯಂ ಭಾಂಡೀರಂ ವಟಮಾಗತೌ ॥ ೨ ॥

ಪ್ಲವೇಳಮಾನೌ ಪ್ರಗಾಯಂತೌ ವಿಚಿನ್ವಂತೌ ಚ ಪಾದಪಾನ್ ।
ಚಾರಯಂತೌ ಚ ಗಾ ದೂರೇ ವ್ಯಾಹರಂತೌ ಚ ನಾಮಭಿಃ ॥ ೩ ॥

ಒಂಭತ್ತನೆಯ ಅಧ್ಯಾಯವು.

೧-೩. ಆ ಕತ್ತೆಯ ರೂಪನಾದ ಧೇನುಕಾಸುರನು ತನ್ನ ಅನುಚರರೊಡನೆ ನಾಶವಾಗುತ್ತಲು ಆ ತಾಳವನವು ಗೋಪಗೋಪಿಯರಿಗೆ ಸೌಮ್ಯವಾಗಿ ಪ್ರಕಾಶಿಸುತ್ತಿದ್ದಿತು. ವಸುದೇವನ ಪುತ್ರರಾದ ರಾಮಕೃಷ್ಣರು ಸಂತೋಷದಿಂದ ಕೂಡಿದವರಾಗಿ ಧೇನುಕಾಸುರನನ್ನು ಕೊಂದಮೇಲೆ ಭಾಂಡೀರವೆಂಬ ಆಲದಮರದ ಸಮೀಪಕ್ಕೆ ಬಂದರು. ಅನರಿಬ್ಬರೂ ಸಿಂಹನಾದವನ್ನು ಮಾಡುತ್ತಲೂ ಗಾನಮಾಡುತ್ತಲೂ ಆಟಕ್ಕಾಗಿ ಮರವನ್ನು ಹತ್ತಿ ಒಬ್ಬನನ್ನೊಬ್ಬನು ಹುಡುಕುತ್ತಲೂ ಹಸುಗಳನ್ನು ಮೇಯಿಸುತ್ತ ದೂರದಿಂದ ಅವುಗಳ ಹೆಸರನ್ನು ಹಿಡಿದು ಕೂಗುತ್ತಲೂ ಇದ್ದರು.

ನಿಯೋಗಪಾಶಸ್ಕಂಧೌ ತೌ ವನಮಾಲಾವಿಭೂಷಿತೌ ।
ಶುಶುಭಾತೇ ಮಹಾತ್ಮಾನೌ ಬಾಲಶೃಂಗಾವಿವರ್ಷಭೌ ॥ ೪ ॥

ಸುವರ್ಣಾಂಜನಚೂರ್ಣಾಭ್ಯಾಂ ತೌ ತದಾ ದೂಷಿತಾಂಬರೌ ।
ಮಹೇಂದ್ರಾಯುಧಸಂಯುಕ್ತೌ ಶ್ವೇತಕೃಷ್ಣಾವಿವಾಂಬುದೌ ॥ ೫ ॥

ಚೇರತುರ್ಲೋಕಸಿದ್ಧಾಭಿಃ ಕ್ರೀಡಾಭಿರಿತರೇತರಂ ।
ಸಮಸ್ತಲೋಕನಾಥಾನಾಂ ನಾಥಭೂತೌ ಭುವಂ ಗತೌ ॥ ೬ ॥

ಮನುಷ್ಯಧರ್ಮಾಭಿರತೌ ಮಾನಯಂತೌ ಮನುಷ್ಯತಾಂ ।
ತಜ್ಜಾತಿಗುಣಯುಕ್ತಾಭಿಃ ಕ್ರೀಡಾಭಿಶ್ಚೇರತುರ್ವನಂ ॥ ೭ ॥

ತತಸ್ತ್ವಾಂದೋಳಿಕಾಭಿಶ್ಚ ನಿಯುದ್ಧೈಶ್ಚ ಮಹಾಬಲೌ ।
ವ್ಯಾಯಾಮಂ ಚಕ್ರತುಸ್ತತ್ರ ಕ್ಷೇಪಣೇಯೈಸ್ತಥಾಶ್ಮಭಿಃ ॥ ೮ ॥

೪–೮. ಅವರಿಬ್ಬರೂ ಹಸುವಿನ ಹಾಲನ್ನು ಕರೆಯುವಾಗ ಅದರ ಕಾಲಿಗೆ ಕಟ್ಟುವ ಹಗ್ಗಗಳನ್ನು ಹೆಗಲಮೇಲೆ ಹಾಕಿಕೊಂಡು ತುಳಸೀಮಾಲೆಯನ್ನು ಹಾಕಿಕೊಂಡು ಸಣ್ಣ ಕೊಂಬುಗಳುಳ್ಳ ಹೋರಿಗಳಂತೆ ಪ್ರಕಾಶಿಸುತ್ತಿದ್ದರು. ಬಗೆಬಗೆಯ ಒಳ್ಳೆಯ ಬಣ್ಣಗಳಿಂದ ಬಣ್ಣಹಾಕಿದ ವಸ್ತ್ರಗಳನ್ನು ಧರಿಸಿದ ಅವರು ಕಾಮನಬಿಲ್ಲಿನಿಂದ ಕೂಡಿದ ಬಿಳುಪು ಕಪ್ಪು ಮೋಡಗಳಂತೆ ಶೋಭಿಸುತ್ತಿದ್ದರು. ಸಮಸ್ತ ಲೋಕಪಾಲಕರಿಗೂ ಒಡೆಯರಾದ ಅವರು ಭೂಮಿಯಲ್ಲಿ ಅವತಾರ ಮಾಡಿ ಜನರ ರೂಢಿಯಲ್ಲಿರುವ ಆಟವನ್ನಾಡುತ್ತ ಸಂಚರಿಸುತ್ತಿದ್ದರು. ಮನುಷ್ಯರ ಧರ್ಮದಲ್ಲಾಸಕ್ತರಾಗಿ ಮನುಷ್ಯತ್ವಕ್ಕೆ ಗೌರವವನ್ನು ಕೊಡುತ್ತ ಆ ಜಾತಿ ಮತ್ತು ಗುಣಗಳಿಂದ ಕೂಡಿದ ಆಟಗಳನ್ನಾಡುತ್ತ ವನದಲ್ಲಿ ಸಂಚರಿಸುತ್ತಿದ್ದರು. ಗೋಪರ ಕೈಗಳ ಉಯ್ಯಾಲೆಯಿಂದಲೂ ಜಟ್ಟಿಯ ಕಾಳಗಗಳಿಂದಲೂ ಕಲ್ಲುಗಳನ್ನು ಎಸೆಯುವುದರಿಂದಲೂ ಸಾಧನೆಗಳನ್ನು ಮಾಡುತ್ತಿದ್ದರು.

ತಲ್ಲಪ್ಪುರಸುರಸ್ತತ್ರ ಹ್ಯುಭಯೋ ರಮುಮಾಣಯೋಃ ।
ಅಜಗಾಮು ಪ್ರಲಂಬಾಖ್ಯೋ ಗೋಪವೇಷತಿರೋಹಿತಃ ॥ ೯ ॥

ಸೋವಗಾಹತ ನಿಶ್ಶಂಕಸ್ತೇಷಾಂ ಮಧ್ಯ ಮಮಾನುಷಃ ।
ಮಾನುಷಂ ವಪುರಾಸ್ಥಾಯ ಪ್ರಲಂಬೋ ದಾನವೋತ್ತಮಃ ॥ ೧೦ ॥

ತಯೋಶ್ಛಿದ್ರಾಂತರಪ್ರೇಪ್ಸುರವಿಷಹ್ಯಮಮನ್ಯತ ।
ಕೃಷ್ಣಂ ತತೋ ರೌಹಿಣೇಯಂ ಹಂತುಂ ಚಕ್ರೇ ಮನೋರಥಂ ॥ ೧೧ ॥

ಹರಿಣಾ ಕ್ರೀಡನಂ ನಾಮು ಬಾಲಕ್ರೀಡನಕಂ ತತಃ ।
ಪ್ರಕುರ್ವಂತೋ ಹಿ ತೇ ಸರ್ವೇ ದ್ವೌ ದ್ವೌ ಯುಗಪದುತ್ಥಿತೌ ॥ ೧೨ ॥

ಶ್ರೀದಾಮ್ನಾ ಸಹ ಗೋವಿಂದಃ ಪ್ರಲಂಬೇನ ತಥಾ ಬಲಃ ।
ಗೋಪಾಲ್ಯೈರಪರೈಶ್ಚಾನ್ಯೇ ಗೋಪಾಲಾಃಪು ಪ್ಲುವುಸ್ಥತಃ ॥ ೧೩ ॥

೯-೧೦. ಹೀಗೆ ಆಟವಾಡುತ್ತಿರುವ ಅವರಿಬ್ಬರನ್ನೂ ಹಿಡಿದುಕೊಳ್ಳಬೇಕೆಂದು ಪ್ರಲಂಬನೆಂಬ ಅಸುರನು ಗೊಲ್ಲನ ವೇಷದಿಂದ ಅಲ್ಲಿಗೆ ಬಂದನು. ಅವನು ಸಂದೇಹ ವಿಲ್ಲದೆ ಮನುಷ್ಯವೇಷದಿಂದ ಅವರ ಗುಂಪನ್ನು ಸೇರಿದನು.

೧೧-೧೫. ಆ ಪ್ರಲಂಬನು ಸಮಯವನ್ನು ನಿರೀಕ್ಷಿಸುತ್ತ ಸ್ನೇಹಿತನಂತೆ ಕಾಣಿಸಿಕೊಂಡು ರಾಮಕೃಷ್ಣರನ್ನು ಕೊಲ್ಲಬೇಕೆಂದು ಮನಸ್ಸುಮಾಡಿದನು. ಅವರೆಲ್ಲರೂ ಸೇರಿ ಹರಿಣಕ್ರೀಡೆಯೆಂಬ ನೆಗೆದುಕೊಂಡು ಓಡುವ ಆಟವನ್ನು ಆಡುತ್ತ ಇಬ್ಬರಿಬ್ಬರು ಜತೆಯಾಗಿ ಆಟಕ್ಕೆ ನಿಂತುಕೊಂಡರು. ಶ್ರೀದಾಮನೊಡನೆ ಕೃಷ್ಣನೂ ಪ್ರಲಂಬನೊಡನೆ ಬಲರಾಮನೂ ಮಿಕ್ಕ ಗೋಪಾಲಕರು ಇಬ್ಬರಿಬ್ಬರೂ ಜತೆಯಾಗಿ ನೆಗೆದುಕೊಂಡು ಹೋದರು. ಶ್ರೀದಾಮನನ್ನು ಕೃಷ್ಣನೂ ಪ್ರಲಂಬನನ್ನು ಬಲರಾಮನೂ

ಶ್ರೀದಾಮಾನಂ ತತಃ ಕೃಷ್ಣಃ ಪ್ರಲಂಬಂ ರೋಹಿಣೀಸುತಃ ।
ಜಘಾನಾನ್ಯೈಸ್ತಪಕ್ಷೀಯೈಃ ಗೋಪೈರನ್ಯೇ ಪರಾಜಿತಾಃ ॥ ೧೪ ॥

ತೇ ವಾಹಯಂತಸ್ತ್ವನ್ಯೋನ್ಯಂ ಭಾಂಡೀರಂ ವಟಮೇತ್ಯ ವೈ ।
ಪುನರ್ನಿವವೃತುಸ್ಸರ್ವೇ ಯೇ ಯೇ ತತ್ರ ಪರಾಜಿತಾಃ ॥ ೧೫ ॥

ಸಂಕರ್ಷಣಂ ತು ಸ್ಕಂಧೇನ ಶೀಘ್ರಮುತ್ಕ್ಷಿಪ್ಯ ದಾನವಃ ।
ನಭಸ್ಥಲಂ ಜಗಾಮಾಶು ಸ ಚಂದ್ರ ಇವ ವಾರಿದಃ ॥ ೧೬ ॥

ಅಸಹನ್ ರೌ ಹಿಣೇಯಸ್ಯ ಸಭಾರಂ ದಾನವೋತ್ತಮಃ ।
ವವೃಧೇ ಹುಮಹಾಕಾಯಃ ಪ್ರಾವೃಷೀವ ಬಲಾಹಕಃ ॥ ೧೭ ॥

ಸಂಕರ್ಷಣಸ್ತು ತಂ ದೃಷ್ಟ್ವಾ ದಗ್ಧಶೈಲೋಪಮಾಕೃತಿಂ ।
ಸ್ರಗ್ವಾಮಲಂಬಾಭರಣಂ ಮಕುಟಾಟೋಪಮಸ್ತಕಂ ।
ರೌದ್ರಂ ಶಕಟವಕ್ರಾಕ್ಷಂ ಪಾದನ್ಯಾಸಚಲತ್ಕ್ಷಿತಿಂ ॥ ೧೮ ॥

ಅಭೀತಮನಸಾ ತೇನ ರಕ್ಷಸಾ ರೋಹಿಣೀಸುತಃ ।
ಹ್ರೀಯಮಾಣಸ್ತತಃ ಕೃಷ್ಣಮಿದಂ ವಚನಮಬ್ರವೀತ್ ॥ ೧೯ ॥

ಗೆದ್ದರು. ಕೃಷ್ಣನ ಪಕ್ಷದಲ್ಲಿದ್ದ ಮತ್ತೆ ಕೆಲವರು ಮಿಕ್ಕವರನ್ನು ಸೋಲಿಸಿದರು. ಸೋತವರು ಗೆದ್ದವರನ್ನು ಹೆಗಲಮೇಲೆರಿಸಿಕೊಂಡು ಭಾಂಡೀರವಟದವರೆಗೆ ಹೋಗಿ ಮತ್ತೆ ಹಿಂದಿರುಗಿದರು.

೧೬–೧೯. ಬಲರಾಮನನ್ನು ಪ್ರಲಂಬನು ತನ್ನ ಹೆಗಲೇರಿಸಿಕೊಂಡ. ಮೇಘವು ಚಂದ್ರನನ್ನೇರಿಸಿಕೊಂಡು ಹೋಗುವಂತೆ ಅಂತರಿಕ್ಷದಲ್ಲಿ ಹೊರಟನು. ಹೋಗುವಾಗ ಆ ದಾನವನು ಬಲರಾಮನು ಭಾರವನ್ನು ತಡೆಯಲಾರದೆ ಮುಕ್ಕಾಗಲದ ಮೇಘದಂತೆ ದೊಡ್ಡ ಆಕಾರವಾಗಿ ಬೆಳೆದನು. ಬಲರಾಮನು ಸುಟ್ಟಹೋದ ಬೆಟ್ಟದಂತಿದ್ದ, ಹಗ್ಗದಂತೆ ಕಟ್ಟಿದ ಹೂವಿನ ಸರವೇ ಆಭರಣವಾಗಿ ಉಳ್ಳ, ಕಿರೀಟವನ್ನಿಟ್ಟ

ಕೃಷ್ಣ ಕೃಷ್ಣ ಹ್ರಿಯಾಮ್ಯೇಷ ಪರ್ವತೋದಗ್ರಮೂರ್ತಿನಾ ।
ಕೇನಾಪಿ ಪಶ್ಯ ದೈತ್ಯೇನ ಗೋಪಾಲಚ್ಛದ್ಮರೂಪಿಣಾ ॥ ೨೦ ॥

ಯದತ್ರ ಸಾಂಪ್ರತಂ ಕಾರ್ಯಂ ಮಯಾ ಮಧುನಿಸೂದನ ।
ತತ್ಕ್ಷ್ಯತಾಂ ಪ್ರಯಾತ್ಯೇಷ ದುರಾತ್ಮಾತಿತ್ವರಾನ್ವಿತಃ ॥ ೨೧ ॥

॥ ಶ್ರೀ ಪರಾಶರಃ ॥

ತಮಾಹ ರಾಮಂ ಗೋವಿಂದಃ ಸ್ಮಿತಭಿನ್ನೋಷ್ಠಸಂಪುಟಃ ।
ಮಹಾತ್ಮಾ ರೌಹಿಣೇಯಸ್ಯ ಬಲವೀರ್ಯಪ್ರಮಾಣವಿತ್ ॥ ೨೨ ॥

॥ ಶ್ರೀ ಕೃಷ್ಣಃ ॥

ಕಿಮಯಂ ಮಾನುಷೋ ಭಾವೋ ವ್ಯಕ್ತಮೇವಾವಲಂಬ್ಯತೇ ।
ಸರ್ವಾತ್ಮನ್ ಸರ್ವಗುಹ್ಯಾನಾಂ ಗುಹ್ಯ ಗುಹ್ಯಾತ್ಮನಾ ತ್ವಯಾ ॥ ೨೩ ॥

ತಲೆಯುಳ್ಳ ಬಂಡಿಯ ಚಕ್ರದಂತೆ ಕಣ್ಣುಗಳುಳ್ಳ ಭಯಂಕರವಾದ ಆಕಾರವುಳ್ಳ ಹೆಜ್ಜೆಯನ್ನಿಡುವುದರಿಂದ ಭೂಮಿಯು ಚಲಿಸುವಂತೆ ಮಾಡುತ್ತಿರುವ ರಾಕ್ಷಸನೆನ್ನು ಕಂಡು ಮನಸ್ಸಿನಲ್ಲಿ ಭಯಪಡದೆ ಅವನ ಹೆಗಲಮೇಲೆ ಕುಳಿತುಕೊಂಡು ಹೋಗುತ್ತ ಕೃಷ್ಣನನ್ನು ಕುರಿತು 'ಎಲೈ ಕೃಷ್ಣನೆ ! ಬೆಟ್ಟದಂತೆ ದೊಡ್ಡ ಆಕಾರದ ಯಾವನೋ ಒಬ್ಬ ಗೊಲ್ಲನ ಆಕಾರದ ದೈತ್ಯನು ನನ್ನನ್ನು ಎತ್ತಿಕೊಂಡು ಹೋಗುತ್ತಿದ್ದಾನೆ, ಈ ದುರಾತ್ಮನು ವೇಗವಾಗಿ ಹೋಗುತ್ತಿರುವುದರಿಂದ ನಾನು ಈಗ ಏನು ಮಾಡಬೇಕೆಂಬುದನ್ನು ಹೇಳು' ಎಂದು ಹೇಳಿದನು.

೨೨–೨೪. ಆಗ ಕೃಷ್ಣನು ನಗುತ್ತ ಬಲರಾಮನ ಬಲಪರಾಕ್ರಮಗಳ ಅಳತೆಯನ್ನು ತಿಳಿದಿದ್ದುದರಿಂದ ಅವನನ್ನು ಕುರಿತು 'ಸಮಸ್ತ ಸೂಕ್ಷ್ಮಪದಾರ್ಥಗಳಿಗೂ ಕಾರಣಸ್ವರೂಪನೂ ಸರ್ವಸ್ವರೂಪನೂ ಪ್ರಳಯಕಾಲದಲ್ಲಿ ಸೂಕ್ಷ್ಮರೂಪದಿಂದಿರತಕ್ಕವನೂ ಆದ ನೀನು ಈ ಮನುಷ್ಯ ಸ್ವಭಾವವನ್ನೇಕೆ ಅವಲಂಬಿಸಿರುವೆ.' ಸಮಸ್ತ

ಸ್ಮರಾಶೇಷಜಗದ್ಬೀಜ ಕಾರಣಂ ಕಾರಣಾಗ್ರಜ ।
ಆತ್ಮಾನ ಮೇಕಂ ತದ್ವಚ್ಚ ಜಗತ್ಯೇಕಾರ್ಣವೇ ಚ ಯತ್ ॥ ೨೪ ॥

ಕಂ ನ ವೇತ್ಸಿ ಯಥಾ ಹಂ ಚ ತ್ವಂ ಚೈಕಂ ಕಾರಣಂ ಭುವಃ ।
ಭಾರಾವತಾರಣಾರ್ಥಾಯ ಮರ್ತ್ಯಲೋಕೆ ಮುಪಾಗತೌ ॥ ೨೫ ॥

ನ ಭಶ್ಮಿರಸ್ತೇಂಬು ವಹಶ್ಚಕೇಶಾಃ
ಪಾದೌಕ್ಷಿತಿರ್ವಕ್ತ್ರ ಮನಂತ ವಹ್ನಿಃ ।
ಸೋಮೋಮನಸ್ತೇಶ್ವಸಿಕಂ ಸಮೀರಣೋ
ದಿಶಶ್ಚತಸ್ರೋವೃಯ ಬಾಹವಸ್ತೇ ॥ ೨೬ ॥

ಸಹಸ್ರವಕ್ತ್ರೋ ಭಗವಾನ್ಮಹಾತ್ಮಾ
ಸಹಸ್ರ ಹಸ್ತಾಂಘ್ರಿ ಶರೀರಭೇದಃ ।
ಸಹಸ್ರ ಪದ್ಮೋದ್ಭವ ಯೋಽಧಿರಾಜ್ಯ
ಸ್ಸಹಸ್ರ ಶಸ್ತ್ರಾಂ ಮುನಯೋಗೃಣಂತಿ ॥ ೨೭ ॥

ಜಗತ್ತಿಗೂ ಕಾರಣಸ್ವರೂಪವಾದ ನಿನ್ನ ಸ್ವರೂಪವನ್ನೂ ಸಮಸ್ತ ಜಗತ್ತೂ ನಾಶವಾದಾಗ ಒಬ್ಬನೇ ಉಳಿದಿರುವ ನಿನ್ನ ಸ್ಥಿತಿಯನ್ನೂ ಜ್ಞಾಪಿಸಿಕೊ.

೨೫-೨೬. ನಾನೂ ನೀನೂ ಈ ಭೂಮಿಯ ಭಾರವನ್ನು ನಾಶಮಾಡುವುದಕ್ಕಾಗಿ ಭೂಲೋಕದಲ್ಲಿ ಅವತಾರ ಮಾಡಿರುವುದನ್ನು ನೀನರಿಯೆಯಾ? ಆಕಾಶವೇ ನಿನ್ನ ತಲೆಯು. ಮೇಘಗಳೇ ನಿನ್ನ ಕೂದಲುಗಳು. ಭೂಮಿಯೇ ನಿನ್ನ ಪಾದಗಳು. ಅಗ್ನಿಯೇ ನಿನ್ನ ಮುಖವು. ಚಂದ್ರನೇ ಮನಸ್ಸು. ವಾಯುವೇ ನಿನ್ನ ಉಸಿರು. ನಾಲ್ಕು ದಿಕ್ಕುಗಳೂ ನಿನ್ನ ತೋಳುಗಳು. ನೀನು ನಾಶರಹಿತನಾದ ಅನಂತನು.

೨೭-೨೯. ಮಹಾಮಹಿಮನಾದ ನೀನು ಅನೇಕ ಮುಖ ಕೈಕಾಲುಗಳುಳ್ಳವನು. ನಾವಿರಾರು ಬ್ರಹ್ಮರಿಗೆ ಉತ್ಪತ್ತಿಸ್ಥಾನನು. ಋಷಿಗಳು ನಿನ್ನನ್ನು ಅನೇಕ ಬಗೆಯಲ್ಲಿ ಧ್ಯಾನಿಸುವರು. ನಿನ್ನ ದಿವ್ಯರೂಪವನ್ನು ಯಾರೂ ತಿಳಿಯರು.

ದಿವ್ಯಂ ಹಿ ರೂಪಂ ತವ ವೇತ್ತಿ ನಾನ್ಯೋ
ದೇವೈರಶೇಷೈರವತಾರ ರೂಪಂ ।
ತದರ್ಚ್ಯತೇ ವೇತ್ಸಿ ನ ಕಿಂ ಯದಂತೇ
ತ್ವಯ್ಯೇವ ವಿಶ್ವಂ ಲಯಮಭ್ಯುಪೈತಿ ॥ ೨೮ ॥

ತ್ವಯಾ ಧೃತೇಯಂ ಧರಣೀ ಬಿಭರ್ತಿ
ಚರಾಚರಂ ವಿಶ್ವಮನಂತ ಮೂರ್ತೇ ।
ಕೃತಾದಿ ಭೇದೈರಜ ಕಾಲರೂಪೋ ।
ನಿಮೇಷ ಪೂರ್ವೋ ಜಗದೇತದತ್ಸಿ ॥ ೨೯ ॥

ಅತ್ತಂ ಯಥಾ ಬಾಡಬ ವಹ್ನಿ ನಾಂಬು
ಹಿಮಸ್ಯರೂಪಂ ಪರಿಗೃಹ್ಯ ಕಾಸ್ತಂ ।
ಹಿಮಾಚಲೇ ಭಾನುಮತೋಂಶುಸಂಗಾ
ಜ್ಜಲತ್ವಮಭ್ಯೇತಿ ಪುನಸ್ತದೇವ ॥ ೩೦ ॥

ಸಮಸ್ತ ದೇವತೆಗಳೂ ನಿನ್ನ ಅವತಾರ ರೂಪಗಳನ್ನು ಪೂಜಿಸುವರು. ಈ ಪ್ರಪಂಚವು ಕೊನೆಗೆ ನಿನ್ನ ಲ್ಲಿಯೇ ಲಯಹೊಂದುವುದು. ಇದನ್ನು ನೀನು ತಿಳಿದಿಲ್ಲವೇ ? ಅನೇಕ ರೂಪನೇ ನೀನು ಧರಿಸಿದ ಈ ಭೂಮಿಯು ಚರಾಚರ ಪ್ರಾಣಿಗಳಿಂದ ಕೂಡಿದ ಪ್ರಪಂಚವನ್ನೇ ಧರಿಸಿರುವುದು, ಉತ್ಪತ್ತಿಶೂನ್ಯನಾದ ನೀನು ನಿಮೇಷವೇ ಮೊದಲಾಗಿ ಕೃತಾದಿ ಯುಗಗಳೆಂಬ ಕಾಲರೂಪನಾಗಿ ಪ್ರಳಯದಲ್ಲಿ ಈ ಪ್ರಪಂಚವನ್ನು ನುಂಗಿ ಬಿಡುವೆ.

೩೦–೩೨. ಸಮುದ್ರದಲ್ಲಿರುವ ಗಾಳಿಯೊಡನೆ ಕೂಡಿದ ಸೂರ್ಯಕಿರಣರೂಪವಾದ ಬಡಬಾಗ್ನಿಯು ಕುಡಿದ ನೀರು ಫೇನೀಭವಿಸಿ ಹಿಮರೂಪವಾಗಿ ಗಾಳಿಯಿಂದ ನಾಡೀರೂಪವಾದ ಸೂರ್ಯಕಿರಣಗಳಿಂದ ಚಂದ್ರನ ಮೂಲಕವಾಗಿ ಹಿಮವಂತ ಋತುವಿನಲ್ಲಿ ಹಿಮವತ್ಪರ್ವತಕ್ಕೆ ಹೋಗಿದ್ದು ಬೇಸಗೆಯಲ್ಲಿ ಸೂರ್ಯನ ಕಿರಣದ ಸಂಬಂಧದಿಂದ ಪುನಃ ನೀರಾಗುವುದು. ಇದೇ ರೀತಿಯಲ್ಲಿ ಲಯಕಾಲದಲ್ಲಿ ನೀನು

ಏವಂ ತ್ವಯೈವ ಸಂಹರಣೇತ್ಥಮೇತ
ಜ್ಜಗತ್ಸಮಸ್ತಂ ತ್ವದಧೀನಮೇಕಂ ಪುನಃ ।
ತಸ್ಯೈವ ಸರ್ಗಾಯ ಸಮುದ್ಯತಸ್ಯ
ಜಗತ್ತ್ವಮಭ್ಯೇತ್ಯನು ಕಲ್ಪಮೀಶ ॥ ೩೮ ॥

ಭವಾನಹಂಚ ವಿಶ್ವಾತ್ಮನ್ ಏಕ ಏವ ಹಿ ಕಾರಣಂ ।
ಜಗತೋಽಸ್ಯ ಜಗತ್ಯರ್ಥೇ ಭೇದೇನಾವಾಂ ವ್ಯವಸ್ಥಿತೌ ॥ ೩೯ ॥

ತತ್ಸ್ವಯಂಶಾಮಮೇಯಾತ್ಮಂಸ್ತ್ವಯಾತ್ಮಾಜಹಿದಾನವಂ ।
ಮಾನುಷ್ಯಮೇವಾವಲಂಬ್ಯ ಬಂಧೂನಾಂ ಕ್ರಿಯತಾಂ ಹಿತಂ ॥ ೪೦ ॥

॥ ಶ್ರೀ ಪರಾಶರಃ ॥

ಇತಿ ಸಂಸ್ಮಾರಿತೋವಿಪ್ರ ಕೃಷ್ಣೇನ ಸುಮಹಾತ್ಮನಾ ।
ವಿಜಘ್ನೇ ಪೀಡಯಾಮಾಸ ಪ್ರಲಂಬಂ ಬಲವಾನ್ ಬಲಃ ॥ ೪೧ ॥

ನುಂಗಿದ ಜಗತ್ತುಗಳೆಲ್ಲವೂ ನಿನ್ನಲ್ಲಿಯೇ ಇದ್ದು ನೀನೇ ಸೃಷ್ಟಿಮಾಡಬೇಕೆಂದು ಅಪೇಕ್ಷಿಸಿದಾಗ ಜಗತ್ತಿನ ರೂಪವಾಗುವುದು. ಇದು ಪ್ರತಿಯೊಂದು ಕಲ್ಪದಲ್ಲಿಯೂ ನಡೆಯುತ್ತಿರುವುದು. ಪ್ರಪಂಚ ಸ್ವರೂಪನೇ ! ನೀನೂ ನಾನೂ ಇಬ್ಬರೂ ಈ ಜಗತ್ತಿಗೆ ಕಾರಣಸ್ವರೂಪರು. ಈ ಜಗತ್ತಿನಲ್ಲಿ ಧರ್ಮಸಂಸ್ಥಾಪನಾರ್ಥವಾಗಿ ಈ ಎರಡು ರೂಪಗಳಾಗಿರುವೆವು.

೩೩-೩೪. ಅಳತೆಗೆ ಸಿಕ್ಕದ ಆತ್ಮಸ್ವರೂಪನಾದ ರಾಮನೇ ನಿನ್ನ ಸ್ವರೂಪವನ್ನು ಜ್ಞಾಪಿಸಿಕೊಂಡು ಬಂಧುಗಳ ಹಿತಕ್ಕಾಗಿ ಮನುಷ್ಯರೂಪದಿಂದಲೇ ರಾಕ್ಷಸನನ್ನು ಸಂಹರಿಸು. ಹೀಗೆಂದು ಕೃಷ್ಣನು ಬಲರಾಮನಿಗೆ ಸ್ವಸ್ವರೂಪವನ್ನು ಜ್ಞಾಪಕ ಕೊಡುತ್ತಲು ಶೂರನಾದ ಬಲರಾಮನು ನಗುತ್ತ ಪ್ರಲಂಬನನ್ನು ವಿಶೇಷವಾಗಿ ಪೀಡಿಸಿದನು.

ಮುಷ್ಟಿನಾ ಸೋಽಪನನ್ಯೋಧ್ನಿ ಕೋಪಸಂರಕ್ತಲೋಚನಃ ।
ತೇನಚಾಸ್ಯ ಪ್ರಹಾರೇಣ ಬಹಿರ್ಯಾತೇ ವಿಲೋಚನೇ ॥ ೩೫ ॥

ಸನಿಷ್ಕಾಸಿತ ಮಸ್ತಿಷ್ಕೋ ಮುಖಾಚ್ಛೋಣಿತ ಮುದ್ವಮನ್ ।
ನಿಪಪಾತ ಮಹೀಪೃಷ್ಠೇ ದೈತ್ಯವರ್ಯೋ ಮಮಾರಜಿ ॥ ೩೬ ॥

ಪ್ರಲಂಬಂ ನಿಹತಂ ದೃಷ್ಟ್ವಾ ಬಲೇನಾದ್ಭುತ ಕರ್ಮಣಾ ।
ಪ್ರಹೃಷ್ಟಾಸ್ತುಷ್ಟುವು ರ್ಗೋಪಾಸ್ಸಾಧುಸಾಧ್ವಿತಿಚಾಬ್ರುವನ್ ॥ ೩೭ ॥

ಸಂಸ್ತೂಯ ಮಾನೋಗೋಪೈಸ್ತು ರಾಮೋದೈತ್ಯೇ ನಿಪಾತಿತೇ ।
ಪ್ರಲಂಬೇ ಸಹಕೃಷ್ಣೇನ ಪುನರ್ಗೋಕುಲ ಮಾಯಯೌ ॥ ೩೮ ॥

ಇತಿ ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ ನವಮೋಽಧ್ಯಾಯಃ

೩೫–೩೬. ಬಲರಾಮನು ಕೋಪದಿಂದ ಕಣ್ಣುಗಳನ್ನು ಕೆಂಪಗೆ ಮಾಡಿ ಕೊಂಡು ಮುಷ್ಟಿಯಿಂದ ಆ ರಾಕ್ಷಸನ ನೆತ್ತಿಯಮೇಲೆ ಹೊಡೆದನು. ಆ ಏಟಿನಿಂದ ಅವನ ಕಣ್ಣುಗಳು ಹೊರಕ್ಕೆ ಬಂದುವು, ತಲೆಯ ಮೆದುಳು ಹೊರಹೊರಟು ಬಾಯಿ ಯಿಂದ ರಕ್ತವನ್ನು ಕಾರುತ್ತ ಆ ರಾಕ್ಷಸನು ಭೂಮಿಯಮೇಲೆ ಬಿದ್ದು ಸತ್ತು ಹೋದನು.

೩೭–೩೮. ಮಹಾಪರಾಕ್ರಮಿಯಾದ ಬಲರಾಮನು ಪ್ರಲಂಬನನ್ನು ಕೊಂದು ದನ್ನು ನೋಡಿ ಗೊಲ್ಲರು ಸಂತೋಷದಿಂದ ಅವನನ್ನು ಹೊಗಳಿ ಒಳ್ಳೆಯ ಕೆಲಸವನ್ನು ಮಾಡಿದೆಯೆಂದು ಹೇಳಿದರು, ಪ್ರಲಂಬನೆಂಬ ದೈತ್ಯನನ್ನು ಕೊಂದಮೇಲೆ ಗೊಲ್ಲ ರೆಲ್ಲರೂ ಅವನನ್ನು ಹೊಗಳುತ್ತಿರಲು ಬಲರಾಮನು ಕೃಷ್ಣನೊಡನೆ ಗೋಕುಲಕ್ಕೆ ಒಂದು ಸೇರಿದನು.

ಎಂಬಲ್ಲಿಗೆ ಶ್ರೀ ವಿಷ್ಣು ಪುರಾಣದ ಪಂಚಮಾಂಶದಲ್ಲಿ

ಒಂಭತ್ತನೆಯ ಅಧ್ಯಾಯವು

ಮುಗಿದುದು,

ಶ್ರೀಃ

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ದಶಮೋಽಧ್ಯಾಯಃ

॥ ಶ್ರೀ ಪರಾಶರಃ ॥

ತಯೋರ್ವಿಹರತೋರೇವಂ ರಾಮಕೇಶವಯೋರ್ವ್ರಜೇ ।
ಪ್ರಾವೃಡ್ಋತುರತೀತಾ ವಿಕಸತ್ಸರೋಜಾ ಜಾಭವಚ್ಛರತ್ ॥ ೧ ॥

ಅವಾಪುಸ್ತಾಪಮುತ್ಕರ್ಷಂ ಶಫರ್ಯಃ ಪಲ್ವಲೋದಕೇ
ಪುತ್ರಕ್ಷೇತ್ರಾದಿಸಕ್ತೇನ ಮಮತ್ವೇನ ಯಥಾ ಗೃಹೀ ॥ ೨ ॥

ಮುಮುಚೂರಾ ಮೌನಮಾತಸ್ಥುಃ ಪರಿತ್ಯಕ್ತೆಮುದಾ ವನೇ ।
ಅಸಾರತಾಂ ಪರಿಜ್ಞಾಯ ಸಂಸಾರಸ್ಯೇವ ಯೋಗಿನಃ ॥ ೩ ॥

ಹತ್ತನೆಯ ಅಧ್ಯಾಯವು

೧–೩. ರಾಮಕೃಷ್ಣರು ಗೋಕುಲದಲ್ಲಿ ಈ ಬಗೆಯಲ್ಲಿ ವಿಹಾರ ಮಾಡುತ್ತಿರಲು ಮಳೆಗಾಲವು ಕಳೆಯಿತು, ಕಮಲಗಳು ಅರಳಿದುವು. ಶರದ್ಋತುವು ಪ್ರಾಪ್ತವಾಯಿತು. ಆ ಶರದ್ಋತುವಿನಲ್ಲಿ ಸಣ್ಣಕೆರೆಯ ನೀರಿನಲ್ಲಿದ್ದ ಸಣ್ಣ ಮೀನುಗಳು ಮಕ್ಕಳು ಭೂಮಿ ಮುಂತಾದುವುಗಳಲ್ಲಿ ಆಸಕ್ತನಾದ ಗೃಹಸ್ಥನು ನನ್ನದು ಎಂಬ ಅಭಿಮಾನದಿಂದ ಸಂತಾಪಪಡುವಂತೆ ವಿಶೇಷವಾದ ಸಂತಾಪವನ್ನು ಹೊಂದಿದುವು. ನವಿಲುಗಳು ಸಂಸಾರವು ಅಸಾರವಾದುದೆಂದು ತಿಳಿದು ಯೋಗಿಗಳು ಮೌನವಾಗಿರುವಂತೆ ಮದವನ್ನು ಬಿಟ್ಟು ವನದಲ್ಲಿ ಮೌನವಾಗಿದ್ದುವು.

ಉತ್ಸೃಜ್ಯ ಜಲಸರ್ವಸ್ವಂ ವಿಮಲಾಸ್ಸಿತಮೂರ್ತಯಃ ।
ತತ್ಯಜುಶ್ಚಾಂಬರಂ ಮೇಘಾ ಗೃಹಂ ವಿಜ್ಞಾನಿನೋ ಯಥಾ ॥ ೪ ॥

ಶರತ್ಸೂರ್ಯಾಂಶುತಪ್ತಾನಿ ಯಯುಶ್ಶೋಷಂ ಸರಾಂಸಿ ಚ ।
ಬಹ್ವಾಲಂಬಮಮತ್ವೇನ ಹೃದಯಾನೀವ ದೇಹಿನಾಂ ॥ ೫ ॥

ಕುಮುದ್ವೈಶ್ಯರದಂಭಾಂಸಿ ಯೋಗ್ಯತಾಲಕ್ಷಣಂ ಯಯುಃ ।
ಅವಜೋಧ್ಯೈರ್ಮನಾಂಸೀವ ಸಮತ್ವಮಮಲಾತ್ಮನಾಂ ॥ ೬ ॥

ತಾರಕಾ ವಿಮಲೇ ವ್ಯೋಮ್ನಿ ರರಾಜಾಖಂಡಮಂಡಲಃ ।
ಚಂದ್ರಶ್ಚರಮದೇಹಾತ್ಮಾ ಯೋಗೀ ಸಾಧುಕುಲೇ ಯಥಾ ॥ ೭ ॥

೪-೭. ಮೇಘಗಳು ತನ್ನಲ್ಲಿದ್ದ ಸಮಸ್ತ ನೀರನ್ನೂ ಸುರಿಸಿಬಿಟ್ಟುದರಿಂದ ಕಪ್ಪು ಬಣ್ಣವಿಲ್ಲದೆ ಬಿಳಿಗಾಗಿ ಆತ್ಮಜ್ಞಾನಿಗಳು ತಮ್ಮಲ್ಲಿಲ್ಲದ ಜಡಸ್ವಭಾವವನ್ನು ಬಿಟ್ಟು ರಾಗಾದಿ ದೋಷಗಳಿಲ್ಲದೆ ನಿರ್ಮಲವಾದ ಶುದ್ಧಸ್ವರೂಪರಾಗಿ (ಅಂಬರ) ವಸ್ತ್ರಗಳನ್ನು ತ್ಯಾಗಮಾಡಿರುವಂತೆ (ಅಂಬರ) ಆಕಾಶವನ್ನು ಬಿಟ್ಟುಹೋದುವು. ಶರತ್ಕಾಲದ ಸೂರ್ಯಕಿರಣಗಳಿಂದ ಕಾಯ್ದ ಸರೋವರಗಳು ಅನೇಕ ವಸ್ತುಗಳಲ್ಲಿ ನನ್ನ ದೆಂಬ ಅಭಿಮಾನವನ್ನಿಟ್ಟಿದ್ದ ಜನರ ಮನಸ್ಸಿನಂತೆ ಕ್ಷೀಣಿಸುತ್ತಿದ್ದುವು. ಶರತ್ಕಾಲದ ನೀರು ಸ್ವಚ್ಛವಾಗಿ ವೈರಾಗ್ಯವುಳ್ಳವರ ಮನಸ್ಸು ತತ್ವಜ್ಞಾನದಿಂದ ಸಮಾನತ್ವವನ್ನು ಪಡೆದಿರುವಂತೆ ಬಿಳಿಯ ಕಮಲಗಳಿಗೆ ಸಮಾನವಾಗಿ ಅನುರೂಪವಾದ ಸಂಬಂಧವನ್ನು ಪಡೆದಿದ್ದಿತು. ನಕ್ಷತ್ರಗಳಿಂದ ಕೂಡಿ ಶುದ್ಧವಾಗಿರುವ ಅಂತರಿಕ್ಷದಲ್ಲಿ ಸಂಪೂರ್ಣ ಚಂದ್ರನು ವಿದ್ಯೆ ಮತ್ತು ಆಚಾರಾದಿಗಳಿಂದ ನಿರ್ಮಲವಾದ ಸಜ್ಜನರ ವಂಶದಲ್ಲಿ ಸಂಪೂರ್ಣವಾಗಿ ಬ್ರಹ್ಮಾತ್ಮಜ್ಞಾನವುಳ್ಳ ಕೊನೆಯ ದೇಹವುಳ್ಳ ಯೋಗಿಯಂತೆ ಪ್ರಕಾಶಿಸುತ್ತಿದ್ದನು.

ಶನಕೈಶ್ಶನಕೈಸ್ತೀರಂ ತತ್ಯಜುಶ್ಚ ಜಲಾಶಯಾಃ ।
ಮಮತ್ವಂ ಕ್ಷೇತ್ರಪುತ್ರಾದಿರೂಢಮುಚ್ಚೈರ್ಯಥಾ ಬುಧಾಃ ॥ ೮ ॥

ಪೂರ್ವಂ ತ್ಯಕ್ತ್ವಾಸ್ಸರೋಂಭೋಭಿರ್ಹಂಸಾ ಯೋಗಂ ಪುನರ್ಯಯುಃ ।
ಕ್ಲೇಶೈಃ ಕುಯೋಗಿನೋ ಶೇಷೈರಂತರಾಯಹತಾ ಇವ ॥ ೯ ॥

ನಿಭೃತೋಽಭವದತ್ಯರ್ಥಂ ಸಮುದ್ರಸ್ತಿಮಿತೋದಕಃ ।
ಕ್ರಮಾವಾಪ್ತಮಹಾಯೋಗೋ ನಿಶ್ಚಲಾತ್ಮಾ ಯಥಾ ಯತಿಃ ॥ ೧೦ ॥

ಸರ್ವತ್ರಾತಿಪ್ರಸನ್ನಾನಿ ಸಲಿಲಾನಿ ತಥಾಽಭವನ್ ।
ಜ್ಞಾತೇ ಸರ್ವಗತೇ ವಿಷ್ಣೌ ಮನಾಂಸೀ ವಸುಮೇಧಸಾಂ ॥ ೧೧ ॥

ಬಭೂವ ನಿರ್ಮಲಂ ವ್ಯೋಮ ಶರದಾಧ್ವಸ್ತತೋಯದಂ ।
ಯೋಗಾಗ್ನಿದಗ್ಧಕ್ಲೇಶೌಘಂ ಯೋಗಿನಾಮಿವ ಮಾನಸಂ ॥ ೧೨ ॥

೮-೯. ಭೂಮಿ ಮತ್ತು ಪುತ್ರಾದಿಗಳಲ್ಲಿ ಬಲವಾಗಿ ನೆಲಸಿರುವ ಅಭಿಮಾನವನ್ನು ವಿದ್ವಾಂಸನು ಹೇಗೆ ಮೆಲ್ಲಮೆಲ್ಲನೆ ಬಿಡುವನೋ ಹಾಗೆ ಜಲಾಶಯಗಳು ಮೆಲ್ಲಮೆಲ್ಲನೆ ದಡವನ್ನು ಬಿಡುತ್ತಿದ್ದುವು. ವಿಘ್ನಗಳು ಪ್ರಾಪ್ತವಾದುದರಿಂದ ಯೋಗ ಭ್ರಷ್ಟರು ಅಜ್ಞಾನವೇ ಮುಂತಾದ ಕ್ಲೇಶಗಳೊಡನೆ ಕೂಡುವಂತೆ ನೀರು ತುಂಬಿದುದರಿಂದ ಸರೋವರವನ್ನು ಬಿಟ್ಟುಹೋಗಿದ್ದ ಹಂಸಗಳು ಮತ್ತೆ ಸರೋವರಕ್ಕೆ ಬಂದು ಸೇರಿದುವು.

೧೦-೧೨. ಯಮನಿಯಮಾದಿ ಕ್ರಮದಿಂದ ಯೋಗಸಿದ್ಧಿಯನ್ನು ಪಡೆದ ನಿಶ್ಚಲಬುದ್ಧಿಯುಳ್ಳ ಯತಿಯಂತೆ ನಿಶ್ಚಲವಾದ ನೀರುಳ್ಳ ಸಮುದ್ರವು ನಿರ್ವಿಕಾರವಾಗಿ ಶಾಂತವಾಗಿದ್ದಿತು. ವಿಷ್ಣುವು ಸರ್ವಗತನೆಂದು ತಿಳಿದಮೇಲೆ ಬುದ್ಧಿವಂತರ ಮನಸ್ಸು ಶುದ್ಧವಾಗಿರುವಂತೆ ಎಲ್ಲೆಡೆಯಲ್ಲಿಯೂ ನೀರು ಅತ್ಯಂತ ಶುದ್ಧವಾಗಿದ್ದಿತು, ಯೋಗಾಗ್ನಿಯಿಂದ ಸುಟ್ಟುಹೋದ ಕ್ಲೇಶಗಳ ಸಮೂಹವುಳ್ಳ ಯೋಗಿಗಳ ಮನಸ್ಸಿನಂತೆ ಶರತ್ಕಾಲದಲ್ಲಿ ಎಲ್ಲೆಡೆಯಲ್ಲಿಯೂ ಮೇಘಗಳು ಕಾಣದೆ ಆಕಾಶವು ನಿರ್ಮಲವಾಗಿದ್ದಿತು.

ಸೂರ್ಯಾಂಶುಜನಿತಂ ತಾಪಂ ನಿನ್ಯೇ ತಾರಾಪತಿಶ್ಶಮಂ ।
ಅಹಂ ಮಾನೋದ್ಭವಂ ದುಃಖಂ ವಿವೇಕಸ್ಸುಮಹಾನಿವ ॥ ೧೩ ॥

ನಭಸೋಬ್ದಂ ಭುವಃ ಪಂಕಂ ಕಾಲುಷ್ಯಂ ಚಾಂಭಸಶ್ಶರತ್ ।
ಇಂದ್ರಿಯಾಣೀಂದ್ರಿಯಾರ್ಥೇಭ್ಯಃ ಪ್ರತ್ಯಾಹಾರ ಇವಾಹರತ್ ॥ ೧೪ ॥

ಪ್ರಾಣಾಯಾಮಾ ಇವಾಂಭೋಭಿಸ್ಸರಸಾಂ ಕೃತಪೂರ್ವಕೈಃ ।
ಅಭ್ಯಸ್ಯ ತೇಽನುದಿವಸಂ ರೇಚಕಾಕುಂಭಕಾದಿಭಿಃ ॥ ೧೫ ॥

ವಿಮಲಾಂಬರನಕ್ಷತ್ರೇ ಕಾಲೇ ಚಾಭ್ಯಾಗತೇ ವ್ರಜೇ ।
ದದಶೇಂದ್ರಮಹಾರಂಭಾಯೋದ್ಯತಾಂಸ್ತಾನ್ ವ್ರಜೌಕಸಃ ॥ ೧೬ ॥

೧೩-೧೫. ಅಹಂಕಾರದಿಂದುಂಟಾದ ದುಃಖವನ್ನು ಶ್ರೇಷ್ಠವಾದ ವಿವೇಕವು ಶಾಂತಮಾಡುವಂತೆ ಸೂರ್ಯನ ಕಿರಣಗಳಿಂದುಂಟಾದ ತಾಪವನ್ನು ಚಂದ್ರನು ಶಾಂತ ಮಾಡುತ್ತಿದ್ದನು. ಕಿವಿಯೇ ಮುಂತಾದ ಇಂದ್ರಿಯಗಳು ಶಬ್ದಾದಿ ವಿಷಯಗಳನ್ನು ಬಿಡುವ ಪ್ರಯತ್ನದಲ್ಲಿ ತನ್ನ ಶಕ್ತಿಯನ್ನು ಅವುಗಳಿಂದ ಎಳೆದುಕೊಳ್ಳುವಂತೆ ಶರತ್ಕಾಲವು ಆಕಾಶದಿಂದ ಮೇಘವನ್ನೂ ಭೂಮಿಯಿಂದ ಕೆಸರನ್ನೂ ನೀರಿನಿಂದ ಕಶ್ಮಲವನ್ನೂ ಎಳೆದುಕೊಂಡಿತು. ಪ್ರಾಣಾಯಾಮ ಮಾಡುವರು ಪ್ರತಿದಿನವೂ ಪೂರಕ, ಕುಂಭಕ, ರೇಚಕ ಎಂಬ ಹೆಸರಿನಿಂದ ವಾಯುವನ್ನು ಒಂದು ನಾಡಿಯಿಂದ ಶರೀರದೊಳಕ್ಕೆ ಸೇರಿಸುವುದು, ಶರೀರದೊಳಗೆ ಒಂದೆಡೆ ನಿಲ್ಲಿಸುವುದು, ಮತ್ತೆ ಆ ವಾಯುವನ್ನು ಮತ್ತೊಂದು ನಾಡಿಯಿಂದ ಹೊರಗೆ ಬಿಡುವುದು, ಈ ಕೆಲಸಗಳನ್ನು ಮಾಡುವಂತೆ ಸರೋವರಗಳು ನೀರನ್ನು ತುಂಬಿಕೊಳ್ಳುವುದು, ಕೆಲವು ದಿನ ತನ್ನಲ್ಲಿಟ್ಟುಕೊಂಡಿರುವುದು, ಆ ಮೇಲೆ ಕಾಲುವೆಯ ಮಾರ್ಗದಿಂದ ಗದ್ದೆಗಳಿಗೆ ಬಿಡುವುದು ಈ ಕೆಲಸಗಳನ್ನು ಪ್ರತಿದಿನವೂ ಮಾಡುತ್ತಿದ್ದುವು, ಇವರಿಂದ ಸರೋವರಗಳು ಯೋಗಾಭ್ಯಾಸ ಮಾಡುತ್ತಿರುವುವೋ ಎಂಬಂತಿದ್ದುವು.

೧೬-೧೭. ಆಕಾಶವೂ ನಕ್ಷತ್ರಗಳೂ ನಿರ್ಮಲವಾಗಿ ಕಾಣುತ್ತಿರುವ ಆ ಶರತ್ಕಾಲವು ಬಂದಾಗ ಗೋಕುಲದಲ್ಲಿ ಗೊಲ್ಲರು ದೇವೇಂದ್ರನ ಪೂಜಾರೂಪವಾದ ಉತ್ಸ

ಕೃಷ್ಣಸ್ತಾನುತ್ಸುಕಾನ್ ದೃಷ್ಟ್ವಾ ಗೋಪಾನುತ್ಸವಲಾಲಸಾನ್ ।
ಕೌತೂಹಲಾದಿದಂ ವಾಕ್ಯಂ ಪ್ರಾಹ ವೃದ್ಧಾನ್ಮಹಾಮತಿಃ ॥ ೧೬ ॥

ಕೋಽಯಂ ಶಕ್ರೇಮಹೋ ನಾಮ ಯೇನ ವೋ ಹರ್ಷ ಆಗತಃ ।
ಪ್ರಾಹ ತಂ ನಂದಗೋಪಶ್ಚ ಪೃಚ್ಛಂತಮತಿಸಾದರಂ ॥ ೧೭ ॥

॥ ನಂದಗೋಪಃ ॥

ಮೇಘಾನಾಂ ಪಯಸಾಂ ಚೇಶೋ ದೇವರಾಜಶ್ಶತಕ್ರತುಃ ।
ತೇನ ಸಂಚೋದಿತಾ ಮೇಘಾ ವರ್ಷತ್ಯಂಬುಮಯಂ ರಸಂ ॥ ೧೯ ॥

ತದ್ವೃಷ್ಟಿಜನಿತಂ ಸಸ್ಯಂ ವಯಮನ್ಯೇ ಚ ದೇಹಿನಃ ।
ವರ್ತಯಾಮೋಪಯುಂಜಾನಾಸ್ತರ್ಪಯಾಮಶ್ಚ ದೇವತಾಃ ॥ ೨೦ ॥

ಕ್ಷೀರೇವತ್ಯ ಇಮಾ ಗಾವೋ ವತ್ಸವತ್ಯಶ್ಚ ನಿರ್ವೃತಾಃ ।
ತೇನ ಸಂವರ್ಧಿತೈಸ್ಸಸ್ಯೈಸ್ತುಷ್ಟಾಃ ಪುಷ್ಟಾ ಭವಂತಿ ವೈ ॥ ೨೧ ॥

ವವನ್ನು ಮಾಡುವುದಕ್ಕೆ ಪ್ರಯತ್ನಪಡುತ್ತಿದ್ದರು. ಆ ಉತ್ಸವವನ್ನು ಮಾಡುವುದರಲ್ಲಿ ಆಸಕ್ತರಾದ ಅವರನ್ನು ಕೃಷ್ಣನು ನೋಡಿ ಕುತೂಹಲದಿಂದ ಆ ಗೋಪವೃದ್ಧರನ್ನು ಕುರಿತು ಮಾತನಾಡಿದನು.

೧೮–೨೨. ಕೃಷ್ಣನು "ನೀವು ಸಂತೋಷದಿಂದ ಮಾಡಬೇಕೆಂದಿರುವ ದೇವೇಂದ್ರನ ಹಬ್ಬವಾವುದು?" ಎಂದು ಕೇಳಲು ನಂದಗೋಪನು ಪ್ರೀತಿಯಿಂದ ಅವನನ್ನು ಕುರಿತು 'ದೇವರಾಜನಾದ ದೇವೇಂದ್ರನು ಮೇಘಗಳಿಗೂ ನೀರಿಗೂ ಒಡೆಯನು. ಅವನಪ್ಪಣೆಯಿಂದ ಮೋಡಗಳು ನೀರನ್ನು ಸುರಿಸುವುವು, ಆ ಮಳೆಯಿಂದ ಪುಷ್ಟಿಪ ಸಸ್ಯಗಳನ್ನು ನಾವೂ ಮಿಕ್ಕ ಪ್ರಾಣಿಗಳೂ ಉಪಯೋಗಿಸಿಕೊಂಡು ಜೀವಿಸುವೆವು. ಮತ್ತು ಅವುಗಳಿಂದಲೇ ದೇವತೆಗಳನ್ನೂ ತೃಪ್ತಿಪಡಿಸುವೆವು. ಆ ದೇವೇಂದ್ರನು ಬೆಳೆಸಿದ ಸಸ್ಯಗಳಿಂದ ಈ ಗೋವುಗಳು ತೃಪ್ತಿಹೊಂದಿ ಚೆನ್ನಾಗಿ ಜೀವಿಸಿದು ಕರುಗಳನ್ನು

ನಾಸಸ್ಯಾ ನಾತೃಣಾ ಭೂಮಿರ್ನ ಬುಭುಕ್ಷಾರ್ದಿತೋ ಜನಃ ।
ದೃಶ್ಯತೇ ಯತ್ರ ದೃಶ್ಯಂತೇ ವೃಷ್ಟಿಮಂತೋ ಬಲಾಹಕಾಃ ॥ ೨೨ ॥

ಭೌಮಮೇತತ್ಪಯೋದುಗ್ಧಂ ಗೋಭಿಸ್ತುರ್ಯಸ್ಯ ವಾರಿದೈಃ ।
ಪರ್ಜನ್ಯಸ್ಸರ್ವಲೋಕಸ್ಯೋದ್ಭವಾಯ ಚ ವರ್ಷತಿ ॥ ೨೩ ॥

ತಸ್ಮಾತ್ತ್ವಾ ವೃಷ್ಣಿ ರಾಜಾನಸ್ಸರ್ವೇ ಶಕ್ರಂ ಮುದಾಯುತಾಃ ।
ಮಖೈಸ್ತುರೇಶಮರ್ಚಂತಿ ವಯಮನ್ಯೇ ಚ ಮಾನವಾಃ ॥ ೨೪ ॥

॥ ಶ್ರೀ ಪರಾಶರಃ ॥

ನಂದಗೋಪಸ್ಯ ವಚನಂ ಶ್ರುತ್ವೈತತ್ಕಂ ಶಕ್ರಪೂಜನೇ ।
ರೋಷಾಯ ತ್ರಿದಶೇಂದ್ರಸ್ಯ ಪ್ರಾಹ ದಾನೋದರಸ್ತದಾ ॥ ೨೫ ॥

ನ ವಯಂ ಕೃಷಿಕರ್ತಾರೋ ವಾಣಿಜ್ಯಾಜೀವಿನೋ ನ ಚ ।
ಗಾವೋಽಸ್ಮದ್ದೈವತಂ ತಾತ ವಯಂ ವನಚರಾ ಯತಃ ॥ ೨೬ ॥

ಹಾಕಿ ಹಾಲುಳ್ಳವುಗಳಾಗಿ ಸಂತೋಷದಿಂದಿರುವುವು. ಮಳೆಯನ್ನು ಸುರಿಸುವ ಮೇಘಗಳು ಎಲ್ಲಿ ಕಾಣುವುವೋ ಆ ಭೂಮಿಯಲ್ಲಿ ಸಸ್ಯಗಳೂ ಹುಲ್ಲೂ ತುಂಬಿರುವುವು. ಅಲ್ಲಿರುವ ಜನರಿಗೆ ಹಸಿವಿನ ಬಾಧೆಯಿಲ್ಲ.

೨೩-೨೪. ದೇವೇಂದ್ರನು ಸೂರ್ಯಕಿರಣಗಳಿಂದ ಭೂಮಿಯ ನೀರನ್ನು ಹೀರಿ ಮೇಘಗಳಿಂದ ಮಳೆಯಾಗಿ ಸುರಿಸುವ ಕೆಲಸಗಳನ್ನು ಸಮಸ್ತ ಜಗತ್ತಿನ ಉತ್ಪತ್ತಿಗಾಗಿ ಮಾಡುತ್ತಿರುವನು. ಆದುದರಿಂದ ವರ್ಷಾಕಾಲವು ಕಳೆದಮೇಲೆ ಸಮಸ್ತ ರಾಜರುಗಳೂ ನಾವೂ ಸಂತೋಷದಿಂದ ಯಜ್ಞಾದಿಗಳನ್ನು ಮಾಡಿ ದೇವೇಂದ್ರನನ್ನು ಪೂಜಿಸುವೆವು" ಎಂದು ಹೇಳಿದನು.

೨೫-೨೬. ನಂದಗೋಪನು ದೇವೇಂದ್ರನ ಪೂಜೆಯ ವಿಷಯದಲ್ಲಿ ಹೇಳಿದ ಈ ಮಾತನ್ನು ಕೇಳಿ ಕೃಷ್ಣನು ದೇವೇಂದ್ರನಿಗೆ ಕೋಪವನ್ನುಂಟುಮಾಡುವುದಕ್ಕಾಗಿ ನಂದಗೋಪನನ್ನು "ಕುರಿತು ತಂದೆಯೇ! ನಾವು ಕೃಷಿಯನ್ನು ಮಾಡತಕ್ಕವರಲ್ಲ. ಕಾಡಿನಲ್ಲಿ ಸಂಚರಿಸುವವರು ಗೋವುಗಳೇ ನಮ್ಮ ದೇವರು, ಆನ್ವೀಕ್ಷಕಿ, (ತರ್ಕಶಾಸ್ತ್ರ)

ಆನ್ವೀಕ್ಷಕೀ ತ್ರಯೀವಾರ್ತಾ ದಂಡನೀತಿಸ್ತಥಾಪರಾ ।
ವಿದ್ಯಾಶ್ಚತಸ್ರಃಯಂ ಚೈತದ್ವಾರ್ತಾಮಾತ್ರಂ ಶೃಣುಷ್ವ ಮೇ ॥ ೨೭ ॥

ಕೃಷಿರ್ವಣಿಜ್ಯಾ ತದ್ವಚ್ಚ ತೃತೀಯಂ ಪಶುಪಾಲನಂ ।
ವಿದ್ಯಾ ಹ್ಯೇಕಾ ಮಹಾಭಾಗ ವಾರ್ತಾವೃತ್ತಿತ್ರಯಾಶ್ರಯಾ ॥ ೨೮ ॥

ಕರ್ಷಕಾಣಾಂ ಕೃಷಿರ್ವೃತ್ತಿಃ ಪಣ್ಯಂ ವಿಪಣಿಜೀವಿನಾಂ ।
ಅಸ್ಮಾಕಂ ಗೌಃ ಪರಾ ವೃತ್ತಿರ್ವಾರ್ತಾ ಭೇದೈರಿಯಂ ತ್ರಿಭಿಃ ॥ ೨೯ ॥

ವಿದ್ಯಯಾ ಯೋ ಯಯಾ ಯುಕ್ತಸ್ತಸ್ಯ ಸಾ ದೈವತಂ ಮಹತ್ ।
ಸೈವ ಪೂಜ್ಯಾರ್ಚನೀಯಾ ಚ ಸೈವ ತಸ್ಯೋಪಕಾರಿಕಾ ॥ ೩೦ ॥

ಯೋ ಯಸ್ಯ ಫಲಮುಶ್ನನ್ತೈ ಪೂಜಯತ್ಯಪರಂ ನರಃ ।
ಇಹ ಚ ಪ್ರೇತ್ಯ ಚೈವಾಸೌ ನ ತದಾಪ್ನೋತಿ ಶೋಭನಂ ॥ ೩೧ ॥

ತ್ರಯೀ, (ವೇದ) ವಾರ್ತಾ, ದಂಡನೀತಿ (ಅರ್ಥಶಾಸ್ತ್ರ) ಎಂಬ ನಾಲ್ಕು ವಿದ್ಯೆಗಳಲ್ಲಿ ನಮಗೆ ವಾರ್ತಾ ಎಂಬ ವಿದ್ಯೆಯೇ ಮುಖ್ಯವಾದುದು. ವ್ಯವಸಾಯ ವ್ಯಾಪಾರ, ಪಶು ಪಾಲನೆ ಈ ಮೂರೂ ವಾರ್ತಾವಿದ್ಯೆಯಲ್ಲಿ ಸೇರಿದುವು. ಒಕ್ಕಲಿಗರಿಗೆ ವ್ಯವಸಾಯವೇ ಜೀವನವು. ವರ್ತಕರಿಗೆ ವ್ಯಾಪಾರವೇ ಜೀವನವು ನಮಗೆ ಪಶುಪಾಲನೆಯೇ ಮುಖ್ಯ ಜೀವನವು, ಯಾವನಿಗೆ ಯಾವ ವಿದ್ಯೆಯೋ ಅವನಿಗೆ ಅದೇ ದೇವರು, ಆ ದೇವ ರನ್ನೇ ಅವನು ಪೂಜಿಸಬೇಕು. ಆ ದೇವತೆಯೇ ಅವನಿಗೆ ಉಪಕಾರ ನೂಡುವುದು. ಒಬ್ಬನು ಒಂದು ದೇವತೆಯಿಂದ ಪ್ರಯೋಜನವನ್ನು ಹೊಂದಿ ಮತ್ತೊಂದು ದೇವತೆ ಯನ್ನು ಪೂಜಿಸಿದರೆ ಅವನು ಇಹಪರಗಳಲ್ಲಿ ಶುಭಫಲವನ್ನು ಪಡೆಯುವುದಿಲ್ಲ.

ಕೃಷ್ಯಾಂ ತಾ ಪ್ರಥಿತಾ ಸೀಮಾ ಸೀಮಾಂತಂ ಚ ಪುನರ್ವನಂ ।
ವನಾಂತಾಗಿರಯಸ್ಸರ್ವೇ ತೇ ಚಾಸ್ಮಾಕಂ ಹರಾ ಗತಿಃ ॥ ೩೨ ॥

ನ ದ್ವಾರಬಂಧಾವರಣಾ ನ ಗೃಹಾ ಕ್ಷೇತ್ರಿಣಸ್ತಥಾ ।
ಸುಖಿನಸ್ತ್ವಖಿಲೇ ಲೋಕೇ ಯಥಾ ವೈ ಚಕ್ರಚಾರಿಣಃ ॥ ೩೩ ॥

ಕ್ರೀಯಂತೇ ಗಿರಯಶ್ಚೈವ ವನೇಽಸ್ಮಿನ್ ಕಾಮರೂಪಿಣಃ ।
ತತ್ತದ್ರೂಪಂ ಸಮಾಸ್ಥಾಯ ರಮಂತೇ ಸ್ವೇಷು ಸಾನುಷು ॥ ೩೪ ॥

ಯದಾ ಚೈತೇಽಪರಾಧ್ಯಂತೇ ತೇಷಾಂ ಯೇ ಕಾನನೌಕಸಃ ।
ತದಾ ಸಿಂಹಾದಿರೂಪೈಸ್ತಾನ್ ಘಾತಯಂತಿ ಮಹೀಧರಾಃ ॥ ೩೫ ॥

೩೨-೩೩. ವ್ಯವಸಾಯ ಮಾಡುವ ಹೊಲಗದ್ದೆಗಳಿಂದಾಚೆಗೆ ಎಲ್ಲರೂ ಸಂಚಾರ ಮಾಡುವ ಎಲ್ಲೆಕಟ್ಟಿನ ಭೂಮಿಯಿರುವುದು, ಆ ಎಲ್ಲೆಯಿಂದಾಚೆಗೆ ನಾವು ವಾಸ ಮಾಡುವ ವನಪ್ರದೇಶವಿರುವುದು, ವನಪ್ರದೇಶದಿಂದಾಚೆಗೆ ಬೆಟ್ಟಗಳಿರುವುವು, ಆ ಬೆಟ್ಟಗಳೇ ನಮಗೆ ವಿಹಾರಸ್ಥಾನವಾಗಿಯೂ ವಾಸಸ್ಥಾನವಾಗಿಯೂ ಇರುವುದು, ಈ ಲೋಕದಲ್ಲಿ ಬಾಗಿಲು ಆವರಣ ಮುಂತಾದುವುಗಳಿಂದ ಕೂಡಿದ ಮನೆಯಲ್ಲಿರುವ ವರ್ತಕರೂ ಮನೆ ಮತ್ತು ಹೊಲ ಗದ್ದೆಗಳಲ್ಲಿರುವ ಒಕ್ಕಲಿಗರೂ ಬಂಡಿಗಳನ್ನು ಕಟ್ಟಿ ಕೊಂಡು ಕಾಡಿನಲ್ಲಿ ಗೋವುಗಳೊಡನೆ ಸಂಚರಿಸುತ್ತಿರುವ ನಮ್ಮಷ್ಟು ಸುಖಿಗಳಿಲ್ಲ.

೩೪-೩೫. ಈ ಕಾಡಿನಲ್ಲಿ ಬೆಟ್ಟಗಳು ತಮಗೆ ಬೇಕಾದ ರೂಪವನ್ನು ಪಡೆದು ತಮ್ಮ ತಪ್ಪಲುಗಳಲ್ಲಿ ವಿಹರಿಸುತ್ತಿರುವರೆಂದು ಕೇಳಿರುವೆವು, ಕಾಡಿನಲ್ಲಿ ವಾಸಮಾಡು ವವರು ಆ ಬೆಟ್ಟದರೂಪದ ದೇವತೆಗಳ ವಿಷಯದಲ್ಲಿ ತಪ್ಪು ಹೊಡಿದರೆ ಆಗ ಆ ಬೆಟ್ಟ ಗಳ ಅಭಿಮಾನಿದೇವತೆಗಳು ಸಿಂಹಾದಿಗಳ ರೂಪದಿಂದ ಅವರನ್ನು ನಾಶಮಾಡುವರು. ಆದುದರಿಂದ ನಮಗೆ ಗಿರಿಗಳೂ ಗೋವುಗಳೂ ದೇವತೆಗಳಾದ ಕಾರಣ ಗಿರಿಯನ್ನೂ ಗೋವುಗಳನ್ನೂ ಪೂಜಿಸೋಣ. ದೇವೇಂದ್ರನಿಂದ ನಮಗೇನೂ ಪ್ರಯೋಜನವಿಲ್ಲ.

ಗಿರಿಯಜ್ಞಸ್ತ್ವಯಂ ತಸ್ಮಾದ್ಗೋಯಜ್ಞಶ್ಚ ಪ್ರವರ್ತ್ಯತಾಂ ।
ಕಿಮಸ್ಮಾಕಂ ಮಹೇಂದ್ರೇಣ ಗಾವಶ್ಶೈಲಾಶ್ಚ ದೇವತಾಃ ॥ ೩೬ ॥

ಮಂತ್ರೈಯಜ್ಞಪರಾ ವಿಪ್ರಾಃ ಸೀರಯಜ್ಞಾಶ್ಚ ಕರ್ಷಕಾಃ ।
ಗಿರಿಗೋಯಜ್ಞಶೀಲಾಶ್ಚ ವಯಮದ್ರಿವನಾಶ್ರಯಾಃ ॥ ೩೭ ॥

ತಸ್ಮಾದ್ಗೋವರ್ಧನಶ್ಶೈಲೋ ಭವದ್ಭಿರ್ವಿವಿಧಾರ್ಹಣೈಃ ।
ಅರ್ಚ್ಯತಾಂ ಪೂಜ್ಯತಾಂ ಮೇಧ್ಯಾನ್ ಪಶೂನ್ ಹತ್ವಾ ವಿಧಾನತಃ ॥ ೩೮ ॥

ಸರ್ವಘೋಷಸ್ಯ ಸಂದೋಹೋ ಗೃಹ್ಯತಾಂ ಮಾ ವಿಚಾರ್ಯತಾಂ ।
ಭೋಜ್ಯಂತಾಂ ತೇನ ವೈ ವಿಪ್ರಾಸ್ತಥಾ ಯೇ ಚಾಭಿವಾಂಛಕಾಃ ॥ ೩೯ ॥

ಬ್ರಾಹ್ಮಣರು ಪ್ರತ್ಯಕ್ಷವಾಗಿ ದೇವತೆಗಳನ್ನು ನೋಡುವುದಿಲ್ಲ, ಮಂತ್ರದಲ್ಲಿ ಹೇಳಿರುವ ದೇವತೆಗಳನ್ನು ಪೂಜಿಸುವರು. ಅವರಿಗೆ ಮಂತ್ರಗಳೇ ಪ್ರತ್ಯಕ್ಷ ದೇವತೆಗಳು ಒಕ್ಕಲಿಗರಿಗೆ ನೇಗಿಲೇ ಪ್ರತ್ಯಕ್ಷ ದೈವವು, ಅವರು ಅದನ್ನೇ ಪೂಜಿಸುವರು. ಬೆಟ್ಟಗಳನ್ನೂ ಕಾಡನ್ನೂ ಆಶ್ರಯಿಸಿದ ನಾವು ನಮಗೆ ಪ್ರತ್ಯಕ್ಷ ದೇವತೆಗಳಾದ ಬೆಟ್ಟಗಳನ್ನೂ ಗೋವುಗಳನ್ನೂ ಪೂಜಿಸಬೇಕು.

೩೫-೪೧. ಆದುದರಿಂದ ನೀವೆಲ್ಲರೂ ಗೋವರ್ಧನ ಪರ್ವತನನ್ನು ಯೋಗ್ಯವಾದ ಪೂಜಾಸಾಮಗ್ರಿಗಳಿಂದ ವಿಧಿಗನುಸಾರವಾಗಿ ಪರಿಶುದ್ಧವಾದ ಪಶುವನ್ನು ಕೊಂದು ಪೂಜಿಸಿರಿ, ಗೊಲ್ಲರೆಲ್ಲರೂ ಹಸುಗಳ ಹಾಲನ್ನೆಲ್ಲವನ್ನೂ ಕರೆದು ಅದರಿಂದ ಬ್ರಾಹ್ಮಣರನ್ನೂ ತಮಗೆ ಬೇಕಾದ ಜನರನ್ನೂ ತೃಪ್ತಿಪಡಿಸಿ ಗೋವರ್ಧನಗಿರಿಯ ಪೂಜೆಯನ್ನು ಮಾಡಿ ಹೋಮಮಾಡಿದಮೇಲೆ ಬ್ರಾಹ್ಮಣರ ಭೋಜನವನ್ನು ಮಾಡಿಸಿ ತರದ್ರುತುವಿನ ಹೂಗಳಿಂದ ಗೋವುಗಳನ್ನು ಅಲಂಕರಿಸಿ ಪರ್ವತವನ್ನು ಪ್ರದಕ್ಷಿಣೆ ಮಾಡಿಸಿರಿ. ಎಲೈ ಗೋಪರೇ! ಇವೇ ನನ್ನ ಅಭಿಪ್ರಾಯವು. ನೀವೆಲ್ಲರೂ

ತಶ್ಚಾರ್ಚಿತೇ ಕೃತೇ ಪೂಜಾಮೇ ಭೋಜಿತೇಷು ದ್ವಿಜಾತಿಷು ।
ಶರತ್ಪುಷ್ಪಕೃತಾಪೀಡಾಃ ಪರಿಗಚ್ಛಂತು ಗೋಗಣಾಃ ॥ ೪೦ ॥

ಏತನ್ಮಮ ಮತಂ ಗೋಪಾಃ ಸಂಪ್ರೀತ್ಯಾ ಕ್ರಿಯತೇ ಯದಿ ।
ತತಃ ಕೃತಾ ಭವೇತ್ಪ್ರೀತಿರ್ಗವಾಮದ್ರೇಸ್ತಥಾ ಮಮ ॥ ೪೧ ॥

॥ ಶ್ರೀ ಪರಾಶರಃ ॥

ಇತಿ ತಸ್ಯ ವಚಶ್ಶ್ರುತ್ವಾ ನಂದಾದ್ಯಾಸ್ತೇ ವ್ರಜೌಕಸಃ ।

ಪ್ರೀತ್ಯುತ್ಫುಲ್ಲಮುಖಾ ಗೋಪಾಃ ಸಾಧು ಸಾಧ್ವಿತ್ಯಥಾಬ್ರುವನ್ ॥ ೪೨ ॥

ಶೋಭನಂ ತೇ ಮತಂ ವತ್ಸ ಯದೇತದ್ಭವತೋದಿತಂ ।
ತತ್ಕರಿಷ್ಯಾಮಹೇ ಸರ್ವಂ ಗಿರಿಯಜ್ಞಃ ಪ್ರವರ್ತ್ಯತಾಂ ॥ ೪೩ ॥

ತಥಾ ಚ ಕೃತವಂತಸ್ತೇ ಗಿರಿಯಜ್ಞಂ ವ್ರಜೌಕಸಃ ।
ದಧಿಸಾಯಸಮಾಂಸಾದ್ಯೈರ್ದದುಶ್ಶೈಲಬಲಿಂ ತತಃ ॥ ೪೪ ॥

ಪ್ರೀತಿಯಿಂದ ಇದನ್ನು ನಡೆಸಿದರೆ ನನಗೂ ಪರ್ವತಕ್ಕೂ ಗೋವುಗಳಿಗೂ ಸಂತೋಷವನ್ನುಂಟುಮಾಡಿದಂತೆ ಆಗುವುದು" ಎಂದನು.

೪೨-೪೪. ಕೃಷ್ಣನ ಈ ಮಾತನ್ನು ಕೇಳಿ ನಂದನೇ ಮುಂತಾದ ಗೊಲ್ಲರು ಸಂತೋಷದಿಂದ ವಿಕಸಿತವಾದ ಮುಖವುಳ್ಳವರಾಗಿ 'ಕೃಷ್ಣನೇ ನೀನು ಹೇಳಿದುದು ಯುಕ್ತವಾದುದು, ಮತ್ತು ಮಂಗಳಕರವಾದುದು, ಗಿರಿಯಜ್ಞವನ್ನೇ ಮಾಡಿಸು ನೀನು ಹೇಳಿದಂತೆ ಎಲ್ಲವನ್ನೂ ಮಾಡುವೆವು, ಎಂದು ಹೇಳಿ ಅವನು ಹೇಳಿದಂತೆ ಗಿರಿಯಜ್ಞವನ್ನು ಮಾಡಿ ಮೊಸರು, ಪಾಯಸ, ಮಾಂಸಾದಿಗಳಿಂದ ಬೆಟ್ಟಕ್ಕೆ ಬಲಿಯನ್ನರ್ಪಿಸಿದರು. ಮತ್ತು ಸಾವಿರಾರು ಬ್ರಾಹ್ಮಣರ ಭೋಜನವನ್ನು ಮಾಡಿಸಿದರು. ಗೋವುಗಳಿಗೆ ಪೂಜೆಯನ್ನು ಮಾಡಿ ಬೆಟ್ಟವನ್ನು ಪ್ರದಕ್ಷಿಣೆ ಮಾಡಿಸಿದರು, ಗೂಳಿಗಳು ಮೇಘಗಳಂತೆ ಘರ್ಜನೆಯನ್ನು ಮಾಡುತ್ತಿದ್ದುವು, ಕೃಷ್ಣನು ಶೈಲಾಭಿ

ದ್ವಿಜಾಂಶ್ಚ ಭೋಜಯಾಮಾಸುಶ್ಕತಶೋಽಥ ಸಹಸ್ರಶಃ ॥ ೪೫ ॥

ಗಾವಶ್ಶ್ಚಲಂ ತತಶ್ಚಕ್ರುರರ್ಚಿತಾಸ್ತಾಃ ಪ್ರದಕ್ಷಿಣಂ ।
ವೃಷಧಾಶ್ಚಾತಿನರ್ದಂತಸ್ಸತೋಯಾ ಜಲದಾ ಇವ ॥ ೪೬ ॥

ಗಿರಿಮೂರ್ಧ್ನಿ ಕೃಷ್ಣೋಽಪಿ ಶೈಲೋಹಮಿತಿಮೂರ್ತಿಮಾನ್ ।
ಬುಭುಜೇಽನ್ನಂ ಬಹುತರಂ ಗೋಪವರ್ಯಾಹೃತಂ ದ್ವಿಜ ॥ ೪೭ ॥

ಸ್ವೇನೈವ ಕೃಷ್ಣೋ ರೂಪೇಣ ಗೋಪೈಸ್ಸಹ ಗಿರೇಶ್ಶಿರಃ ।
ಅಧಿರುಹ್ಯಾರ್ಚಯಾಮಾಸ ದ್ವಿತೀಯಾಮಾತ್ಮನಸ್ತನುಂ । ॥ ೪೮

ಅಂತರ್ಧಾನಂ ಗತೇ ತಸ್ಮಿನ್ ಗೋಪಾ ಲಬ್ಧ್ವಾ ತತೋ ವರಾನ್ ।
ಕೃತ್ವಾ ಗಿರಿಮಖಂ ಗೋಷ್ಠಂ ನಿಜಮಧ್ಯಾಯಯುಃ ಪುನಃ ॥ ೪೯ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ದಶಮೋಽಧ್ಯಾಯಃ

ಮಾನಿ ದೇವತಾರೂಪದಿಂದ ಬಿಟ್ಟದ ಶಿಖರದಲ್ಲಿ ಕುಳಿತು ತಾನೇ ಪರ್ವತಮೂರ್ತಿ ಯೆಂದು ಗೋಪರು ತಂದ ಬಗೆಬಗೆಯ ಅನ್ನವನ್ನೆಲ್ಲ ಭೋಜನಮಾಡಿದನು. ಗೊಲ್ಲರ ಭಕ್ತಿಯನ್ನು ಹೆಚ್ಚಿಸುವುದಕ್ಕಾಗಿ ಗಿರಿಶಿಖರದಿಂದಿಳಿದು ತಾನೂ ಅವರೊಡನೆ ಸೇರಿ ತನ್ನ ಎರಡನೆಯ ಶರೀರವಾದ ಪರ್ವತವನ್ನು ಪೂಜಿಸಿದನು.

೪೯. ಗೊಲ್ಲರು ಗಿರಿಯಜ್ಞವನ್ನು ಮಾಡಿ ಆ ಅಭಿಮಾನಿ ದೇವತೆಯಿಂದ ವರವನ್ನು ಪಡೆದಮೇಲೆ ಆ ಅಭಿಮಾನಿ ದೇವತೆಯು ಅಂತರ್ಧಾನವಾಗುತ್ತಲು ತಮ್ಮ ಹಟ್ಟಿಗೆ ಪುನಃ ಬಂದು ಸೇರಿದರು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ
ಹತ್ತನೆಯ ಅಧ್ಯಾಯವು ಮುಗಿದುದು.

ಶ್ರೀಃ

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಏಕಾದಶೋಽಧ್ಯಾಯಃ

॥ ಶ್ರೀ ಪರಾಶರಃ ॥

ಮಖೇ ಪ್ರತಿಹತೇ ಶಕ್ರೋ ಮೈತ್ರೇಯಾತಿರುಷಾನ್ವಿತಃ ।
ಸಂವರ್ತಕಂ ನಾಮ ಗಣಂ ತೋಯದಾನಾಮಥಾಬ್ರವೀತ್ ॥ ೧ ॥

ಭೋ ಭೋ ಮೇಘಾ ನಿಶಮ್ಯೈತದ್ವಚನಂ ಗದತೋ ಮಮ ।
ಆಜ್ಞಾನಂತರಮೇವಾಶು ಕ್ರಿಯತಾಮವಿಚಾರಿತಂ ॥ ೨ ॥

ನಂದಗೋಪಸ್ಸದುರ್ಬುದ್ಧಿಃ ಗೋಪೈರನ್ಯೈಸ್ಸಹಾಯವಾನ್ ।
ಕೃಷ್ಣಾಶ್ರಯಬಲಾದ್ಧಾತೋ ಮಮಖಭಂಗಮಚೀಕರತ್ ॥ ೩ ॥

ಹನ್ನೊಂದನೆಯ ಅಧ್ಯಾಯವು

೧–೫. ಮೈತ್ರೇಯನೇ! ದೇವೇಂದ್ರನಿಗಾಗಿ ಮಾಡಬೇಕಾದ ಯಜ್ಞಕ್ಕೆ ತಡೆಯುಂಟಾಗುತ್ತಲು ಇಂದ್ರನು ಕೋಪದಿಂದ ಸಂವರ್ತಕ (ನಾಶಕ) ವೆಂಬ ಮೇಘಗಳ ಗುಂಪನ್ನು ಕುರಿತು ' ಎಲೈ ಮೇಘಗಳೇ! ನಾನು ಹೇಳುವ ಮಾತನ್ನು ಕೇಳಿ ನನ್ನ ಆಜ್ಞೆಯಾದ ಕ್ಷಣವೇ ಯಾವ ವಿಚಾರವನ್ನೂ ಮಾಡದೆ ನನ್ನಪ್ಪಣೆಯನ್ನು ನಡೆಸಿ. ದುಷ್ಟನಾದ ನಂದಗೋಪನು ಇತರ ಗೊಲ್ಲರ ಸಹಾಯವುಳ್ಳವನಾಗಿ ಕೃಷ್ಣನ ಆಶ್ರಯವೆಂಬ ಬಲದಿಂದ ಉಬ್ಬಿ ನನ್ನ ಪೂಜೆಗೆ ತಡೆಯನ್ನು ಮಾಡಿದನು. ಅವರ ಜೀವನಕ್ಕೆ ಗೋವುಗಳೇ ಮುಖ್ಯ ಕಾರಣವು. ನನ್ನ ಆಜ್ಞೆಯಿಂದ ನೀವು ಮಳೆಯನ್ನು ಸುರಿಸಿ

ಅಜೀವೋ ಯಾಃ ಪರಸ್ತೇಷಾಂ ಗಾವಸ್ತಸ್ಯ ಚ ಕಾರಣಂ ।
ತಾ ಗಾವೋ ವೃಷ್ಟಿಪಾತೇನ ಪೀಡ್ಯಂತಾಂ ವಚನಾನ್ಮಮ ॥ ೪ ॥

ಅಹಮಪ್ಯದ್ರಿಶೃಂಗಾಭಂ ತುಂಗಮಾರುಹ್ಯ ವಾರಣಂ ।
ಸಹಾಯಂ ನಃ ಕರಿಷ್ಯಾಮಿ ವಾಯ್ವಂಬೂತ್ಸರ್ಗಯೋಜಿತಂ ॥ ೫ ॥

॥ ಶ್ರೀ ಪರಾಶರಃ ॥

ಇತ್ಯಾಜ್ಞಪ್ತಾಸ್ತತಸ್ತೇನ ಮುಮುಚುಸ್ತೇ ಬಲಾಹಕಾಃ ।
ವಾತವರ್ಷಂ ಮಹಾಭೀಮಮಭಾವಾಯ ಗವಾಂ ದ್ವಿಜ ॥ ೬ ॥

ತತಃ ಕ್ಷಣೇನ ಪೃಥಿವೀ ಕಕುಭೋಂಬರಮೇವ ಚ ।
ಏಕಂ ಧಾರಾಮಹಾಸಾರಪೂರಣೇನಾಭವನ್ಮಯೇ ॥ ೭ ॥

ವಿದ್ಯುಲ್ಲತಾಕಶಾಘಾತಶ್ರಸ್ತೈರಿವಘನೈರ್ಘನಂ ।
ನಾದಪೂರಿತದಿಕ್ಚಕ್ರೈರ್ಧಾರಾಸಾರಮಪಾತ್ಯತ ॥ ೮ ॥

ಅಂಧಕಾರೀಕೃತೇ ಲೋಕೇ ವರ್ಷದ್ಭಿರನಿಶಂ ಘನೈಃ ।
ಅಧಶ್ಚೋರ್ಧ್ವಂ ಚ ತಿರ್ಯಕ್ಚ ಜಗದಾಪ್ಯಮಿವಾಭವತ್ ॥ ೯ ॥

ಗೋವುಗಳನ್ನು ಹಿಂಸಿಸಿರಿ. ನಾನು ಬೆಟ್ಟದ ಶಿಖರದಂತಿರುವ ಈ ಆನೆಯನ್ನೇರಿ ನಿಮಗೆ ಗಾಳಿ ಮತ್ತು ಮಳೆಗಳ ಸಂಬಂಧಕ್ಕೆ ಸಹಾಯವನ್ನು ಮಾಡುವೆನು" ಎಂದು ಹೇಳಿದನು.

೬–೧೦. ಈ ರೀತಿಯಾದ ಇಂದ್ರನ ಆಜ್ಞೆಯನ್ನು ಕೇಳಿ ■ ಮೇಘಗಳು ಗೋವುಗಳ ನಾಶಕ್ಕಾಗಿ ಗಾಳಿಯೊಡನೆ ಭಯಂಕರವಾದ ಮಳೆಯನ್ನು ಸುರಿಸಿದುವು. ಮೈತ್ರೇಯನೇ! ಆ ಕ್ಷಣದಲ್ಲಿಯೇ ಭೂಮಿ, ದಿಕ್ಕು, ಆಕಾಶ, ಇವುಗಳೆಲ್ಲವೂ ಒಂದಾಗಿ ಸಂತತವಾದ ಮಳೆಯ ಹನಿಯಿಂದ ತುಂಬಿಹೋಯಿತು. ಬಳಿಮಿಂಚಿಂಬ ಕೊರಡೆಯ ಏಟಿನಿಂದ ಹೆದರಿದಂತೆ ಮೇಘಗಳು ದಿಗಂತಗಳಲ್ಲಿ ಧ್ವನಿಯನ್ನು ತುಂಬಿ ಮಳೆಯನ್ನು ಸುರಿಸಿದುವು. ಯಾವಾಗಲೂ ಸುರಿಯುತ್ತಿರುವ ಮಳೆಯು ಮೇಘ

ಗಾವಸ್ತು ತೇನ ಪತತಾ ವರ್ಷವಾತೇನ ವೇಗಿನಾ ।
ಧೂತಾಃ ಪ್ರಾಣಾನ್ ಜಹುಃ ಸನ್ನತ್ರಿಕಸಕ್ಥಿಶಿರೋಧರಾಃ ॥ ೧೦ ॥

ಕ್ರೋಡೇನ ವತ್ಸಾನಾಕ್ರಮ್ಯ ತಸ್ಥುರನ್ಯಾ ಮಹಾಮುನೇ ।
ಗಾವೋ ವಿವತ್ಸಾಶ್ಚ ಕೃತಾ ವಾರಿಪೂರೇಣ ಚಾಪರಾಃ ॥ ೧೧ ॥

ವತ್ಸಾಶ್ಚ ದೀನವದನಾ ವಾತಕಂಪಿತಕಂಧರಾಃ ।
ತ್ರಾಹಿ ತ್ರಾಹೀತ್ಯಲ್ಪಶಬ್ದಾಃ ಕೃಷ್ಣಮೂಚುರಿವಾತುರಾಃ ॥ ೧೨ ॥

ತತಸ್ತದ್ಗೋಕುಲಂ ಸರ್ವಂ ಗೋಗೋಪೀಗೋಪಸಂಕುಲಂ ।
ಅತೀವಾರ್ತಂ ಹರಿರ್ದೃಷ್ಟ್ವಾ ಮೈಶ್ರೇಯಾಚಿಂತಯತ್ತದಾ ॥ ೧೩ ॥

ಏತತ್ಕೃತಂ ಮಹೇಂದ್ರೇಣ ಮಖಭಂಗವಿರೋಧಿನಾ ।
ತದೇತದಖಿಲಂ ಗೋಷ್ಠಂ ತ್ರಾತವ್ಯಮಧುನಾ ಮಯಾ ॥ ೧೪ ॥

ದಿಂದ ಲೋಕವೆಲ್ಲ ಕತ್ತಲೆ ಗವಿಯಲು ಪ್ರಪಂಚದ ಕೆಳಗೂ ಮೇಲೂ ಮಧ್ಯದಲ್ಲಿಯೂ ನೀರೇ ತುಂಬಿಕೊಂಡಿದ್ದಿತು. ವೇಗವಾಗಿ ಬೀಳುತ್ತಿರುವ ಮಳೆ ಗಾಳಿಗಳಿಂದ ಹಸುಗಳು ನಡುಗುತ್ತ ಸೊಂಟ, ತೊಡೆ, ಕುತ್ತಿಗೆಗಳನ್ನು ಒಂದೆಡೆಗೆ ಸೇರಿಸಿಕೊಂಡು ಮೂರ್ಛೆಹೊಂದಿದುವು. ಮತ್ತೆ ಕೆಲವು ಹಸುಗಳು ತಮ್ಮ ಹೊಟ್ಟೆಯಿಂದ ಕರುಗಳನ್ನು ಮರೆಮಾಡಿಕೊಂಡು ನಿಂತುವು. ಮತ್ತೆ ಕೆಲವು ಹಸುಗಳ ಕರುಗಳು ನೀರಿನ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋದುವು. ಕರುಗಳು ಗಾಳಿಯಿಂದ ಕುತ್ತಿಗೆಯನ್ನು ನಡುಗಿಸುತ್ತ ಅತ್ಯಂತ ದೈನ್ಯದಿಂದ ಕೂಗುತ್ತಿದ್ದರೆ ಕಾವಾಡೆಂದು ಸಣ್ಣ ಧ್ವನಿಯಿಂದ ಕೃಷ್ಣನಿಗೆ ಹೇಳುತ್ತಿದ್ದುವೋ ಎಂಬಂತೆ ಕಾಣುತ್ತಿದ್ದಿತು.

೧೩-೧೬. ಆ ಮೇಲೆ ಕೃಷ್ಣನು ಗೋವುಗಳ ಮತ್ತು ಗೋಪ ಗೋಪಿಯರ ಸಮೂಹದಿಂದ ಕೂಡಿದ ಗೋಕುಲವೇ ದುಃಖಪಡುತ್ತಿರುವುದನ್ನು ಕಂಡು ತನ್ನ ಮನಸ್ಸಿನಲ್ಲಿ "ಇದು ತನ್ನ ಪೂಜೆಗೆ ಅಡ್ಡಿಮಾಡಿರುವುದರಿಂದ ದೇವೇಂದ್ರನು

ಇಮಮುದ್ರಿಮಹಂ ಧೈರ್ಯಾದುತ್ಪಾಟ್ಯೋರುಶಿಲಾಘನಂ ।
ಧಾರಯಿಷ್ಯಾಮಿ ಗೋಷ್ಠಸ್ಯ ಪೃಥುಚ್ಛತ್ರಮಿವೋಪರಿ ॥ ೫೧ ॥

॥ ಶ್ರೀ ಪರಾಶರಃ ॥

ಇತಿ ಕೃತ್ವಾ ಮತಿಂ ಕೃಷ್ಣೋ ಗೋವರ್ಧನಮಹೀಧರಂ ।
ಉತ್ಪಾಟ್ಯೈಕಕರೇಣೈವ ಧಾರಯಾಮಾಸಲೀಲಯಾ ॥ ೧೬ ॥

ಗೋಪಾಂಶ್ಚಾಹ ಹಸನ್ ಕೌರಿಸ್ಸಮುತ್ಪಾಟಿತಭೂಧರಃ ।
ವಿಶಧ್ವಮತ್ರತ್ವರಿತಾಃ ಕೃತಂ ವರ್ಷನಿವಾರಣಂ ॥ ೧೭ ॥

ಸುನಿವಾತೇಷು ದೇಶೇಷು ಯದಾ ಜೋಷಮಿಹಾಸ್ಯತಾಂ ।
ಪ್ರವಿಶ್ಯತಾಂ ನ ಭೇತವ್ಯಂ ಗಿರಿಪಾತಾಚ್ಚ ನಿರ್ಭಯೈಃ ॥ ೧೮ ॥

ಇತ್ಯುಕ್ತಾಸ್ತೇನ ತೇ ಗೋಪಾಃ ವಿವಿಶುರ್ಗೋಧನೈಸ್ಸಹ ।
ಶಕಟಾರೋಪಿತೈರ್ಭಾಂಡೈ ರ್ಗೋಪ್ಯಶ್ಚಾಸಾರಪೀಡಿತಾಃ ॥ ೧೯ ॥

ಮಾಡಿರುವ ಕೆಲಸವು. ಈಗ ನಾನು ಈ ಗೋಕುಲವನ್ನು ರಕ್ಷಿಸಬೇಕು. ಕಲ್ಲು ಗಳಿಂದ ಕೂಡಿದ ಈ ಪರ್ವತವನ್ನು ಕಿತ್ತು ಈ ಗೋಕುಲಕ್ಕೆ ದೊಡ್ಡದಾದ ಛತ್ರಿ ಯಂತೆ ಹಿಡಿಯುವೆನು " ಎಂದು ಯೋಚಿಸಿ ಗೋವರ್ಧನ ಪರ್ವತವನ್ನು ಕಿತ್ತು ಆಟವಾಡಿದಂತೆ ಅತ್ಯಂತ ಸುಭವಾಗಿ ಒಂದೇ ಕೈಯಲ್ಲಿ ಎತ್ತಿ ಹಿಡಿದನು.

೧೭–೨೦. ಬಳಿಕ ಕೃಷ್ಣನು ನಗುತ್ತ ಗೊಲ್ಲರನ್ನು ಕುರಿತು " ಮಳೆಯನ್ನು ನಾನು ತಡೆದಿರುವೆನು. ನೀವೆಲ್ಲರೂ ಈ ಬೆಟ್ಟದ ಕೆಳಗೆ ಬೇಗ ಬಂದು ಸೇರಿ. ಗಾಳಿ ಯಿಲ್ಲದ ಪ್ರದೇಶದಲ್ಲಿ ಸುಖವಾಗಿ ಕುಳಿತುಕೊಳ್ಳಿರಿ. ಬೆಟ್ಟವು ಬೀಳುವುದೆಂದು ಭಯಪಡಬೇಡಿರಿ. ಧೈರ್ಯದಿಂದ ಬನ್ನಿ " ಎಂದು ಹೇಳುತ್ತಲು ಮಳೆಯ ಬಾಧೆ ಯಿಂದ ಕೂಡಿದ ಗೊಲ್ಲರು ಗೋವುಗಳೊಡನೆಯೂ, ಗೋಪಿಯರೊಡನೆಯೂ

ಕೃಷ್ಣೋಽಪಿ ತಂ ದಧಾರೈವ ಶೈಲಮತ್ಯಂತನಿಶ್ಚಲಂ।
ವ್ರಜೈಕವಾಸಿಭಿರ್ಹರ್ಷವಿಸ್ಮಿತಾಪ್ಯೈರ್ನಿರೀಕ್ಷಿತಃ ॥ ೨೦ ॥

ಗೋಪಗೋಪೀಜನೈರ್ಹೃಷ್ಟೈಃ ಪ್ರೀತಿವಿಸ್ತಾರಿತೇಕ್ಷಣೈಃ।
ಸಂಸ್ತೂಯಮಾನಚರಿತಃ ಕೃಷ್ಣಶ್ಶೈಲಮಧಾರಯತ್ ॥ ೨೧ ॥

ಸಪ್ತರಾತ್ರಂ ಮಹಾಮೇಘಾ ವವರ್ಷುರ್ನಂದಗೋಕುಲೇ।
ಇಂದ್ರೇಣ ಚೋದಿತಾ ವಿಪ್ರ ಗೋಪಾನಾಂ ನಾಶಕಾರಿಣಾ ॥ ೨೨ ॥

ತತೋ ಧೃತೇ ಮಹಾಶೈಲೇ ಪರಿತ್ರಾತೇ ಚ ಗೋಕುಲೇ।
ಮಿಥ್ಯಾಪ್ರತಿಜ್ಞೋ ಬಲಭಿದ್ವಾರಯಾಮಾಸ ತಾನ್ ಘನಾನ್ ॥ ೨೩ ॥

ವ್ಯಭ್ರೇ ನಭಸಿ ದೇವೇಂದ್ರೇ ವಿತಥಾತ್ಮವಚಸ್ಕಥ।
ನಿಷ್ಕ್ರಮ್ಯ ಗೋಕುಲಂ ಹೃಷ್ಟಂ ಸ್ವಸ್ಥಾನಂ ಪುನರಾಗಮತ್ ॥ ೨೪ ॥

ಬಂಡಿಯ ಮೇಲೆ ಭಾಂಡವೇ ಮೊದಲಾದ ಸಾಮಾನುಗಳನ್ನು ತುಂಬಿಕೊಂಡು ಬಂದು ಸೇರಿದರು. ಕೃಷ್ಣನು ಅಲ್ಲಾಡದಂತೆ ಬೆಟ್ಟವನ್ನೆತ್ತಿ ಹಿಡಿದಿರುವುದನ್ನು ಗೊಲ್ಲರೆಲ್ಲರೂ ಸಂತೋಷದಿಂದಲೂ ಆಶ್ಚರ್ಯದಿಂದಲೂ ನೋಡುತ್ತಿದ್ದರು.

೨೧-೨೪. ಗೋಪಗೋಪಿಯರು ಪ್ರೀತಿಯಿಂದಲೂ ಸಂತೋಷದಿಂದಲೂ ಕೃಷ್ಣನ ಕೆಲಸವನ್ನು ಹೊಗಳುತ್ತಿರಲು ಅವನು ಬೆಟ್ಟವನ್ನೆತ್ತಿ ಹಿಡಿದಿದ್ದನು. ಏಳು ದಿನಗಳವರೆಗೆ ಮಹಾಮೇಘಗಳು ಇಂದ್ರನಪ್ಪಣೆಯಿಂದ ಗೊಲ್ಲರ ನಾಶಕ್ಕಾಗಿ ನಂದಗೋಕುಲದಲ್ಲಿ ಮಳೆಯನ್ನು ಸುರಿಸಿದುವು. ಕೃಷ್ಣನು ಬೆಟ್ಟವನ್ನೆತ್ತಿ ಗೋಕುಲವನ್ನು ಕಾಪಾಡಿದ್ದನ್ನು ಕಂಡು ಇಂದ್ರನು ನನ್ನ ಪ್ರತಿಜ್ಞೆಯು ಸುಳ್ಳಾದುದಾಗುತ್ತಲು ಮೇಘಗಳನ್ನು ಕಳುಹಿಸಿಬಿಟ್ಟನು. ಆಕಾಶದಲ್ಲಿ ಮೋಡವಿಲ್ಲದೆ ಹೋಗುತ್ತಲು ಗೋಕುಲದವರು ಸಂತೋಷದಿಂದ ತಮ್ಮ ಸ್ಥಳವನ್ನು ಸೇರಿದರು.

ಮುಮೋಚ ಕೃಷ್ಣೋಽಪಿ ತದಾ ಗೋವರ್ಧನಮಹಾಚಲಂ ।
ಸ್ವಸ್ಥಾನೇ ವಿಸ್ಮಿತಮುಚ್ಚೈರ್ದೃಷ್ಟ್ವಸ್ತ್ವೇನಂ ವ್ರಜೌಕಸೈಃ ॥ ೨೫ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ಏಕಾದಶೋಽಧ್ಯಾಯಃ

೨೫. ಬಳಿಕ ಕೃಷ್ಣನು ಗೋವರ್ಧನ ಪರ್ವತವನ್ನು ಅದರ ಸ್ಥಳದಲ್ಲಿ ಇರಿಸಿ ಬಿಟ್ಟನು. ಆಗ ಗೋಕುಲದ ಜನರು ಅವನನ್ನು ಆಶ್ಚರ್ಯದಿಂದ ನೋಡುತ್ತಿದ್ದರು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ
ಹನ್ನೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ದ್ವಾದಶೋಽಧ್ಯಾಯ

॥ ಶ್ರೀ ಪರಾಶರಃ ॥

ಧೃತೇ ಗೋವರ್ಧನೇ ಶೈಲೇ ಪರಿತ್ರಾತೇ ಚ ಗೋಕುಲೇ ।
ರೋಚಯಾಮಾಸ ಕೃಷ್ಣಸ್ಯ ದರ್ಶನಂ ಪಾಕಶಾಸನಃ ॥ ೧ ॥

ಸೋಽಧಿರುಹ್ಯ ಮಹಾನಾಗಮೈರಾವತಮಿವ್ರಜಿತ್ ।
ಗೋವರ್ಧನ ಗಿರೌ ಕೃಷ್ಣಂ ದದರ್ಶ ತ್ರಿದಶೇಶ್ವರಃ ॥ ೨ ॥

ಚಾರಯಂತಂ ಮಹಾವೀರ್ಯಂ ಗಾಸ್ತು ಗೋಪವಪುರ್ಧರಂ ।
ಕೃತ್ಸ್ನಸ್ಯ ಜಗತೋ ಗೋಪಂ ವೃತಂ ಗೋಪಕುಮಾರಕೈಃ ॥ ೩ ॥

ಹನ್ನೆರಡನೆಯ ಅಧ್ಯಾಯವು.

೧–೨. ಕೃಷ್ಣನು ಗೋವರ್ಧನ ಪರ್ವತವನ್ನೆತ್ತಿಹಿಡಿದು ಗೋಕುಲವನ್ನು ರಕ್ಷಣೆಮಾಡುತ್ತಲು ದೇವೇಂದ್ರನು ಕೃಷ್ಣನ ದರ್ಶನವನ್ನು ಮಾಡಬೇಕೆಂದು ಬಯಸಿ ಐರಾವತವೆಂಬ ಆನೆಯಿಂದಿಳಿದು ಆ ಗೋವರ್ಧನ ಪರ್ವತದಲ್ಲಿಯೇ ಅವನನ್ನು ನೋಡಿದನು.

೩–೫. ಸಮಸ್ತ ಜಗತ್ತನ್ನೂ ರಕ್ಷಿಸುವ ಪರಮಾತ್ಮನು ಗೊಲ್ಲಬಾಲಕರೊಡನೆ ಗೊಲ್ಲನ ವೇಷದಿಂದ ಹಸುಗಳನ್ನು ಮೇಯಿಸುತ್ತಿದ್ದನು. ಮೈತ್ರೇಯನೇ ! ಗರುಡನು ಕಣ್ಣಿಗೆ ಕಾಣಿಸಿಕೊಳ್ಳದೆ ಆ ಕೃಷ್ಣನ ತಲೆಯಮೇಲೆ ತನ್ನ ರೆಕ್ಕೆಯಿಂದ ನೆರಳನ್ನುಂಟು

ಗರುಡಂ ಚ ದದರ್ಶೋಚ್ಚೈರಂತರ್ಧಾನಗತಂ ದ್ವಿಜ ।
ಕೃತಚ್ಛಾಯಂ ಹರೇರ್ಮೂರ್ಧ್ನಿ ಪಕ್ಷಾಭ್ಯಾಂ ಪಕ್ಷಿಪುಂಗವಂ ॥ ೪ ॥

ಅವರುಹ್ಯ ಸ ನಾಗೇಂದ್ರಾದೇಕಾಂತೇ ಮಧುಸೂದನಂ ।
ಶಕ್ರಸ್ಸಸ್ಮಿತಮಾಹೇದಂ ಪ್ರೀತಿವಿಸ್ತಾರಿತೇಕ್ಷಣಂ ॥ ೫ ॥

॥ ಇಂದ್ರಃ ॥

ಕೃಷ್ಣ ಕೃಷ್ಣ ಶೃಣುಷ್ವೇದಂ ಯದರ್ಥಮಹಮಾಗತಃ ।
ತ್ವತ್ಸಮೀಪಂ ಮಹಾಬಾಹೋ ನೈತಚ್ಚಿಂತ್ಯಂ ತ್ವಯಾನ್ಯಥಾ ॥ ೬ ॥

ಭಾರಾವತರಣಾರ್ಥಾಯ ಪೃಥಿವ್ಯಾಃ ಪೃಥಿವೀತಲೇ ।
ಅವತೀರ್ಣೋಽಖಿಲಾಧಾರ ತ್ವಮೇವ ಪರಮೇಶ್ವರ ॥ ೭ ॥

ಮಖಭಂಗವಿರೋಧೇನ ಮಯಾ ಗೋಕುಲನಾಶಕಾಃ ।
ಸಮಾದಿಷ್ಟಾ ಮಹಾಮೇಘಾಃ ಕೃಷ್ಣೈತದ್ ಖಲನಂ ಕೃತಂ ॥ ೮ ॥

ಮಾಡುತ್ತಿರುವುದನ್ನು ಇಂದ್ರನು ನೋಡಿದನು, ಅವನು ಆ ಕ್ಷಣದಲ್ಲಿಯೇ ಆನೆಯ ಮೇಲಿನಿಂದಿಳಿದು ತಾನೊಬ್ಬನೇ ಕೃಷ್ಣನ ಸಮೀಪಕ್ಕೆ ಬಂದು ಯಾರಿಗೂ ತಿಳಿಯದಂತೆ ಕೃಷ್ಣನನ್ನು ಕುರಿತು ಪ್ರೀತಿಯಿಂದ ನಗುತ್ತ ಮಾತನಾಡಿದನು.

೬-೧೦. ಇಂದ್ರನು 'ಎಲೈ ಕೃಷ್ಣನೇ ! ಮಹಾಶೂರನಾದ ನಿನ್ನ ಸಮೀಪಕ್ಕೆ ನಾನು ಯಾವ ಪ್ರಯೋಜನಕ್ಕಾಗಿ ಬಂದಿರುವೆನೆಂಬುದನು ಹೇಳುವೆನು ಕೇಳು. ನನ್ನ ಮಾತನ್ನು ನೀನು ಬೇರೆ ವಿಧವಾಗಿ ಗ್ರಹಿಸಬೇಡ. ಭೂಭಾರವನ್ನು ನಾಶಮಾಡುವುದಕ್ಕಾಗಿ ಅವತಾರ ಮಾಡಿದ ಸಮಸ್ತ ಲೋಕಾಶ್ರಯನಾದ ಪರಮೇಶ್ವರನೇ ನೀನು. ನನ್ನ ಪೂಜೆಗೆ ಅಡ್ಡಿಮಾಡಿದುದರಿಂದ ಉಂಟಾದ ಕೋಪದಿಂದ ಗೋಕುಲವನ್ನು ನಾಶಮಾಡುವುದಕ್ಕಾಗಿ ಮೇಘಗಳಿಗೆ ಅಪ್ಪಣೆ ಮಾಡಿದೆನು. ಆ ಮೇಘಗಳು ಈ ಯುದ್ಧವನ್ನು ಮಾಡಿದುವು, ನೀನು ಪರ್ವತವನ್ನೆತ್ತಿ ಗೋಕುಲವನ್ನು ಕಾಪಾಡಿದೆ

ತ್ರಾತಾಸ್ತಾಶ್ಚ ತ್ವಯಾ ಗಾವಸ್ಸಮುತ್ಪಾಟ್ಯ ಮಹೀಧರಂ ।
ತೇನಾಹಂ ತೋಷಿತೋ ವೀರ ಕರ್ಮಣಾತ್ಯದ್ಭುತೇನ ತೇ ॥ ೯ ॥

ಸಾಧಿತಂ ಕೃಷ್ಣ ದೇವಾನಾಮಹಂ ಮನ್ಯೇ ಪ್ರಯೋಜನಂ ।
ತ್ವಯಾಯಮದ್ರಿಪ್ರವರಃ ಕರೇಣೈಕೇನ ಯದ್ಧೃತಃ ॥ ೧೦ ॥

ಗೋಭಿಶ್ಚ ಚೋದಿತಃ ಕೃಷ್ಣ ತ್ವತ್ಸಕಾಶಮಿಹಾಗತಃ ।
ತ್ವಯಾ ತ್ರಾತಾಭಿರತ್ಯರ್ಥಂ ಯುಷ್ಮತ್ಸತ್ಕಾರಕಾರಣಾತ್ ॥ ೧೧ ॥

ಸ ತ್ವಾಂ ಕೃಷ್ಣಾಭಿಷೇಕ್ಷ್ಯಾಮಿ ಗವಾಂ ವಾಕ್ಯಪ್ರಚೋದಿತಃ ।
ಉಪೇಂದ್ರತ್ವೇ ಗವಾಮಿಂದ್ರೋ ಗೋವಿಂದಸ್ತ್ವಂ ಭವಿಷ್ಯಸಿ ॥ ೧೨ ॥

ಎಲೈ ಶೂರನೇ ! ನೀನು ಮಾಡಿದ ಆಶ್ಚರ್ಯಕರವಾದ ಕೆಲಸದಿಂದ ನಾನು ಸಂತೋಷ ಪಟ್ಟಿನು. ನೀನು ಒಂದೇ ಕೈಯಲ್ಲಿ ಈ ಗೋವರ್ಧನಪರ್ವತವನ್ನೆತ್ತಿ ಹಿಡಿದುದರಿಂದ ದೇವತೆಗಳ ಪ್ರಯೋಜನವು ಸಿದ್ಧಿಸಿತೆಂದು ನಾನು ತಿಳಿದುಕೊಂಡೆನು.

೧೧-೧೨. ನೀನು ರಕ್ಷಣೆಮಾಡಿದ ಕಾಮಧೇನುವಿನ ವಂಶದ ಗೋವುಗಳ ಪ್ರೇರಣೆಯಿಂದ ನಿನಗೆ ಸತ್ಕಾರಮಾಡುವುದಕ್ಕಾಗಿ ನಾನು ನಿನ್ನ ಸಮೀಪಕ್ಕೆ ಬಂದಿರುವೆನು. ಆ ಗೋವುಗಳ ಮಾತಿನಂತೆ ನಿನ್ನನ್ನು ಸತ್ಯಲೋಕದ ಮೇಲಿರುವ ಗೋಲೋಕದ ಒಡೆಯನಾಗಿ ಉಪೇಂದ್ರನೆಂಬ ಹೆಸರಿನಿಂದ ಪಟ್ಟಾಭಿಷೇಕ ಮಾಡುವೆನು. ಗೋವುಗಳಿಗೆ ಇಂದ್ರನಾದುದರಿಂದ ಗೋವಿಂದನೆಂದೂ ನಿನಗೆ ಹೆಸರಾಗುವುದು.' ಎಂದು ಹೇಳಿದನು.

॥ ಶ್ರೀ ಪರಾಶರಃ ॥

ಅಥೋಪವಾಹ್ಯಾದಾದಾಯ ಘಂಟಾಮೈರಾವತಾದ್ಗಜಾತ್ ।
ಅಭಿಷೇಕಂ ತಯಾ ಚಕ್ರೇ ಪವಿತ್ರಜಲಪೂರ್ಣಯಾ ॥ ೧೩ ॥

ಕ್ರಿಯಮಾಣೇಽಭಿಷೇಕೇ ತು ಗಾವಃ ಕೃಷ್ಣಸ್ಯ ತತ್ಕ್ಷಣಾತ್ ।
ಪ್ರಸ್ನವೋದ್ಭೂತದುಗ್ಧಾರ್ದ್ರಾಂ ಸದ್ಯಶ್ಚಕ್ರುರ್ವಸುಂಧರಾಂ ॥ ೧೪ ॥

ಅಭಿಷಿಚ್ಯ ಗವಾಂ ವಾಕ್ಯಾದುಪೇಂದ್ರಂ ವೈ ಜನಾರ್ದನಂ ।
ಪ್ರೀತ್ಯಾ ಸಪ್ರಶ್ರಯಂ ವಾಕ್ಯಂ ಪುನರಾಹ ಶಚೀಪತಿಃ ॥ ೧೫ ॥

ಗವಾಮೇತತ್ಕೃತಂ ವಾಕ್ಯಂ ತಥಾನ್ಯದಪಿ ಮೇ ಶೃಣು ।
ಯದ್ಬ್ರವೀಮಿ ಮಹಾಭಾಗ ಭಾರಾವತರಣೇಚ್ಛಯಾ ॥ ೧೬ ॥

ಮಮಾಂಶಃ ಪುರುಷವ್ಯಾಘ್ರ ಪೃಥಿವ್ಯಾಂ ಪೃಥಿವೀಧರ ।
ಅವತೀರ್ಣೋರ್ಽಜುನೋ ನಾಮ ಸಂರಕ್ಷ್ಯೋ ಭವತಾ ಸದಾ ॥ ೧೭ ॥

೧೩-೧೫. ಆಮೇಲೆ ದೇವೇಂದ್ರನು ರಾಜನ ವಾಹನವಾದ ಐರಾವತವೆಂಬ ಆನೆಯಿಂದ ಘಂಟೆಯನ್ನು ತೆಗೆದುಕೊಂಡು ಪವಿತ್ರವಾದ ನೀರನ್ನು ಅವರಲ್ಲಿ ತುಂಬಿ ಕೃಷ್ಣನಿಗೆ ಪಟ್ಟಾಭಿಷೇಕವನ್ನು ಮಾಡಿದನು. ಕೃಷ್ಣನಿಗೆ ಪಟ್ಟಾಭಿಷೇಕ ಮಾಡುತ್ತಿರುವ ಆ ಕ್ಷಣದಲ್ಲಿ ಗೋವುಗಳು ತಮ್ಮ ಕೆಚ್ಚಲಿನಿಂದ ಹಾಲನ್ನು ಸುರಿಸಿ ಭೂಮಿಯನ್ನು ನೆನಸಿದುವು. ಗೋವುಗಳ ಮಾತಿನಂತೆ ಕೃಷ್ಣನಿಗೆ ದೇವೇಂದ್ರನು ಉಪೇಂದ್ರನ ಪಟ್ಟಾಭಿಷೇಕವನ್ನು ಮಾಡಿ ಪ್ರೀತಿಯಿಂದಲೂ ವಿನಯದಿಂದಲೂ ಕೃಷ್ಣನನ್ನು ಕುರಿತು ಮಾತನಾಡಿದನು.

೧೬-೧೭. ಮಹಾಮಹಿಮನಾದ ಕೃಷ್ಣನೇ ! ಗೋವುಗಳ ಇಷ್ಟದಂತೆ ನಿನಗೆ ಪಟ್ಟಾಭಿಷೇಕವನ್ನು ಮಾಡಿದೆನು. ನಾನು ಹೇಳುವ ಮತ್ತೊಂದು ಮಾತನ್ನು ಕೇಳು ‘ನನ್ನ ಅಂಶದಿಂದ ಅರ್ಜುನನೆಂಬ ಹೆಸರಿನವನೊಬ್ಬನು ಭೂಮಿಯಲ್ಲಿ ಅವತಾರ

ಭಾರಾವತರಣೇ ಸಾಹ್ಯಂ ಸ ತೇ ವೀರಃ ಕರಿಷ್ಯತಿ ।
ಸಂರಕ್ಷಣೀಯೋ ಭವತಾ ಯಥಾತ್ಮಾ ಮಧುಸೂದನ ॥ ೧೮ ॥

॥ ಶ್ರೀ ಭಗವಾನುವಾಚ ॥

ಜಾನಾಮಿ ಭಾರತೇ ವಂಶೇ ಜಾತಂ ಪಾರ್ಥಂ ತವಾಂಶತಃ ।
ತಮಹಂ ಪಾಲಯಿಷ್ಯಾಮಿ ಯಾವತ್ ಸ್ಥಾಸ್ಯಾಮಿ ಭೂತಲೇ ॥ ೧೯ ॥

ಯಾವನ್ಮಹೀತಲೇ ತಕ್ರ್ಯ ಸ್ಥಾಸ್ಯಾಮ್ಯಹಮರಿಂದಮ ।
ನ ತಾವದರ್ಜುನಂ ಕಶ್ಚಿದ್ದೇವೇಂದ್ರ ಯುಧಿ ಜೇಷ್ಯತಿ ॥ ೨೦ ॥

ಕಂಸೋ ನಾಮಮಹಾಬಾಹುರ್ದೈತ್ಯೋಽರಿಷ್ಟಸ್ತಥಾಸುರಃ ।
ಕೇಶೀ ಕುವಲಯಾಪೀಡೋ ನರಕಾದ್ಯಾಸ್ತಥಾ ಪರೇ ॥ ೨೧ ॥

ಹತೇಷು ತೇಷು ದೇವೇಂದ್ರ ಭವಿಷ್ಯತಿ ಮಹಾಹವಃ ।
ತತ್ರ ವಿದ್ಧಿ ಸಹಸ್ರಾಕ್ಷ ಭಾರಾವತರಣಂ ಕೃತಂ ॥ ೨೨ ॥

ಮಾಡಿರುವನು. ಅವನನ್ನು ನೀನು ಯಾವಾಗಲೂ ರಕ್ಷಿಸಬೇಕು. ಭೂಭಾರವನ್ನು ನಾಶಮಾಡುವ ವಿಷಯದಲ್ಲಿ ಅವನು ನಿನಗೆ ಸಹಾಯಕನಾಗಿರುವನು ಅವನನ್ನು ನನ್ನಂತೆ ರಕ್ಷಿಸಬೇಕು ' ಎಂದನು.

೧೯-೨೦. ಕೃಷ್ಣನು " ದೇವೇಂದ್ರನೇ ! ಭರತನ ವಂಶದಲ್ಲಿ ನಿನ್ನಂಶದಿಂದ ಅರ್ಜುನನು ಕುಂತಿಯ ಮಗನಾಗಿ ಹುಟ್ಟಿರುವುದನ್ನು ತಿಳಿದಿರುವೆನು. ನಾನು ಭೂಮಿಯಲ್ಲಿರುವವರೆಗೂ ಅವನನ್ನು ಕಾಪಾಡುವೆನು. ನಾನುಭೂಮಿಯ ಮೇಲಿರುವವರೆಗೆ ಅರ್ಜುನನನ್ನು ಯಾವನೂ ಯುದ್ಧದಲ್ಲಿ ಜಯಿಸಲಾರನು.

೨೧-೨೩. ಕಂಸನೆಂಬ ದೈತ್ಯನೂ ಅರಿಷ್ಟನೆಂಬುವನೂ ಕೇಶಿ ಕುವಲಯಾಪೀಡ ನರಕ ಮುಂತಾದವರು ನಾಶವಾದಮೇಲೆ ಒಂದು ದೊಡ್ಡ ಯುದ್ಧವಾಗುವುದು. ಆ ಯುದ್ಧದಲ್ಲಿ ಭೂಮಿಯ ಭಾರವನ್ನು ಕಡಮೆಮಾಡಿತೆಂದು ತಿಳಿ. ನೀನು ಹೋಗು

ಸ ತ್ವಂ ಗಚ್ಛ ನ ಸಂತಾಪಂ ಪುತ್ರಾರ್ಥೇ ಕರ್ತುಮರ್ಹಸಿ।
ನಾರ್ಜುನಸ್ಯ ರಿಪುಃ ಕಶ್ಚಿನ್ಮಮಾಗ್ರೇ ಪ್ರಭವಿಷ್ಯತಿ ॥ ೨೩

ಅರ್ಜುನಾರ್ಥೇ ತ್ವಹಂ ಸರ್ವಾನ್ಯುಧಿಷ್ಠಿರಪುರೋಗಮಾನ್ ।
ನಿವೃತ್ತೇ ಭಾರತೇ ಯುದ್ಧೇ ಕುಂತ್ಯೈ ದಾಸ್ಯಾಮ್ಯವಿಕ್ಷತಾನ್ ॥ ೨೪ ॥

॥ ಶ್ರೀ ಪರಾಶರಃ ॥

ಇತ್ಯುಕ್ತಸ್ತಂ ಪರಿಷ್ವಜ್ಯ ದೇವರಾಜೋ ಜನಾರ್ದನಂ ।
ಆರುಹ್ಯೈರಾವತಂ ನಾಗಂ ಪುನರೇವ ದಿವಂ ಯಯೌ ॥ ೨೫ ॥

ಕೃಷ್ಣೋ ಽಪಿ ಸಹಿತೋ ಗೋಭಿರ್ಗೋಪಾಲೈಶ್ಚ ಪುನರ್ವ್ರಜಂ ।
ಆಜಗಾಮಾಥ ಗೋಪಿನಾಂ ದೃಷ್ಟಿಪೂತೇನ ವರ್ತ್ಮನಾ ॥ ೨೬ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ದ್ವಾದಶೋಽಧ್ಯಾಯಃ

ಮಗನಿಗಾಗಿ ಸಂತಾಪಪಡಬೇಡ. ನನ್ನಿದುರಿಗೆ ಅರ್ಜುನನಿಗೆ ಯಾವನೂ ಶತ್ರು ವಿರುವುದಿಲ್ಲ.

೨೪–೨೫. ಅರ್ಜುನನಿಗೋಸ್ಕರವಾಗಿ ನಾನು ಭಾರತ ಯುದ್ಧವಾದಮೇಲೆ ಯುಧಿಷ್ಠಿರನೇ ಮೊದಲಾದವರಿಗೆ ಅಯುಧಗಳ ಏಟು ಇಲ್ಲದಂತೆ ರಕ್ಷಿಸಿ. ಅವರನ್ನು ಕುಂತಿಗೆ ಒಪ್ಪಿಸುವೆನು.” ಎಂದು ಹೇಳುತ್ತಲು ದೇವೇಂದ್ರನು ಕೃಷ್ಣನನ್ನು ಆಲಿಂಗಿಸಿ ಪುನಃ ಐರಾವತವೆಂಬ ಆನೆಯನ್ನೇರಿ ಸ್ವರ್ಗಕ್ಕೆ ಹೊರಟುಹೋದನು.

೨೬. ಕೃಷ್ಣನು ಗೋವುಗಳೊಡನೆಯೂ ಗೋಪಾಲಕರೊಡನೆಯೂ ಕೂಡಿ ಪುನಃ ಗೋಕುಲಕ್ಕೆ ಬರುತ್ತಿದ್ದನು. ಹಾಗೆ ಬರುತ್ತಿದ್ದ ಕೃಷ್ಣನನ್ನು ಗೋಪಿಯರು ಉತ್ಸಾಹದಿಂದ ನೋಡುತ್ತಿದ್ದರು.

ಎಂಬಲ್ಲಿಗೆ ಶ್ರೀವಿಷ್ಣುಪುರಾಣದ ಪಂಚಮಾಂಶದಲ್ಲಿ
ಹನ್ನೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ತ್ರಯೋದಶೋಽಧ್ಯಾಯಃ

॥ ಶ್ರೀ ಪರಾಶರಃ ॥

ಗತೇ ಶಕ್ರೇ ತು ಗೋಪಾಲಾಃ ಕೃಷ್ಣಮುಚ್ಲಿಷ್ಟಕಾರಿಣಂ ।
ಊಚುಃ ಪ್ರೀತ್ಯಾ ಧೃತಂ ದೃಷ್ಟ್ವಾ ತೇನ ಗೋವರ್ಧನಾಚಲಂ ॥ ೧ ॥

ವಯಮುಸ್ಮಾನ್ಮಹಾಭಾಗ ಭಗವನ್ಮಹತೋ ಭಯಾತ್ ।
ಗಾವಶ್ಚ ಭವತಾ ತ್ರಾತಾ ಗಿರಿಧಾರಣಕರ್ಮಣಾ ॥ ೨ ॥

ಬಾಲಕ್ರೀಡೇಯಮತುಲಾ ಗೋಪಾಲತ್ವಂ ಜುಗುಪ್ಸಿತಂ ।
ದಿವ್ಯಂ ಚ ಭವತಃ ಕರ್ಮ ಕಿಮೇತತ್ತಾತ ಕಥ್ಯತಾಂ ॥ ೩ ॥

ಹದಿಮೂರನೆಯ ಅಧ್ಯಾಯವು

೧-೩. ದೇವೇಂದ್ರನು ಹೊರಟುಹೋದ ಮೇಲೆ ಗೊಲ್ಲರೆಲ್ಲರೂ ಗೋವರ್ಧನ ಪರ್ವತವನ್ನೆತ್ತಿ ತಮಗೆಲ್ಲರಿಗೂ ಸುಖವನ್ನುಂಟುಮಾಡಿದ ಕೃಷ್ಣನನ್ನು ಕುರಿತು ಪ್ರೀತಿಯಿಂದ ' ಮಹಾಮಹಿಮನಾದ ಭಗವಂತನೇ ಬೆಟ್ಟವನ್ನು ಧರಿಸಿ ನಮ್ಮನ್ನೂ ಗೋವುಗಳನ್ನೂ ಮಹಾ ಭಯದಿಂದ ಬಿಡಿಸಿ ಕಾಪಾಡಿದೆ. ನಿನ್ನ ಬಾಲಕ್ರೀಡೆಯು ಅಸಮಾನವಾದುದು. ನೀನು ಮಾಡುವ ಕೆಲಸಗಳು ದೇವತೆಗಳಿಂದ ಸಾಧ್ಯವಾದುದು. ಹೀಗಿರುವಲ್ಲಿ ನೀನು ಗೊಲ್ಲನಾಗಿರುವುದು ನಿನ್ನ ಗೌರವಕ್ಕೆ ಕುಂದಕವನ್ನುಂಟು ಮಾಡಿರುವುದು. ಇದರ ಗುಟ್ಟನ್ನು ನಮಗೆ ಹೇಳು.

ಕಾಳೀಯೋ ದಮಿತಸ್ತೋಯೇ ಧೇನುಕೋ ವಿನಿಪಾತಿತಃ ।
ಧೃತೋ ಗೋವರ್ಧನಶ್ಚಾಯಂ ಶಂಕಿತಾನಿ ಮನಾಂಸಿ ನಃ ॥ ೪ ॥

ಸತ್ಯಂ ಸತ್ಯಂ ಹರೇಃ ಪಾದೌ ಶಪಾವೋಽಮಿತವಿಕ್ರಮ ।
ಯಥಾವದ್ವೀರ್ಯಮಾಲೋಕ್ಯ ನ ತ್ವಾಂ ಮನ್ಯಾಮಹೇ ನರಂ ॥ ೫ ॥

ಪ್ರೀತಿಸ್ಸಸ್ತ್ರೀಕುಮಾರಸ್ಯ ವ್ರಜಸ್ಯ ತ್ವಯಿ ಕೇಶವ ।
ಕರ್ಮ ಚೇದಮಶಕ್ಯಂ ಯತ್ ಸಮುಸ್ತ್ರೈಸ್ತ್ರಿದಶೈರಪಿ ॥ ೬ ॥

ಬಾಲತ್ವಂ ಚಾತಿವೀರ್ಯತ್ವಂ ಜನ್ಮ ಚಾಸ್ಮಾಸ್ವಶೋಭನಂ ।
ಚಿಂತ್ಯಮಾನಮಮೇಯಾತ್ಮನ್ ಶಂಕಾಂ ಕೃಷ್ಣ ಪ್ರಯಚ್ಛತಿ ॥ ೭ ॥

ದೇವೋ ವಾ ದಾನವೋ ವಾ ತ್ವಂ ಯಕ್ಷೋ ಗಂಧರ್ವ ಏವ ವಾ ।
ಕಿಮಸ್ಮಾಕಂ ವಿಚಾರೇಣ ಬಾಂಧವೋಽಸಿ ನಮೋಽಸ್ತು ತೇ ॥ ೮ ॥

೪-೮. ಯಮುನೆಯ ಮಡುವಿನಲ್ಲಿ ಕಾಳಿಯನನ್ನು ನಿಗ್ರಹಿಸಿದೆ ಧೇನುಕನನ್ನು ನಾಶ ಮಾಡಿದೆ. ಗೋವರ್ಧನ, ಪರ್ವತವನ್ನೆತ್ತಿ ಹಿಡಿದೆ. ನಮ್ಮ ಮನಸ್ಸಿನಲ್ಲಿ ಸಂದೇಹವಿರುವುದು. ನಿಜವಾಗಿ ಹರಿಯಪಾದ ಸಾಕ್ಷಿಯಾಗಿಯೂ ಮಹಾ ಬಲಶಾಲಿಯಾದ ನಿನ್ನ ಪರಾಕ್ರಮವನ್ನು ನೋಡಿ ನೀನು ಮನುಷ್ಯನಲ್ಲವೆಂದು ನಾವು ತಿಳಿದಿರುವೆವು. ಈ ಗೋಕುಲದಲ್ಲಿರುವ ಸಮಸ್ತ ಸ್ತ್ರೀಯರೂ ಮಕ್ಕಳೂ ನಿನ್ನಲ್ಲಿ ಪ್ರೀತಿಯನ್ನು ತೋರಿಸುವರು. ನೀನು ಮಾಡಿದ ಕೆಲಸಗಳೂ ಸಮಸ್ತ ದೇವತೆಗಳಿಗೂ ಅಸಾಧ್ಯವಾದುವು. ಬಾಲಕನಾಗಿ ಮಹಾ ಪರಾಕ್ರಮಿಯಾಗಿ ನಮ್ಮ ಗುಂಪಿನಲ್ಲಿ ನೀನು ಹುಟ್ಟಿರುವುದು ಗೌರವವಾದುದಲ್ಲ. ಅಳತೆಗೆ ಸಿಕ್ಕದ ನಿನ್ನ ಮಹಿಮೆಯನ್ನು ಯೋಚಿಸಿದರೆ ನೀನು ದೇವನೋ ದಾನವನೋ ಯಕ್ಷನೋ ಗಂಧರ್ವನೋ ಆಗಿರಬೇಕೆಂಬ ಸಂದೇಹವುಂಟಾಗಿರುವುದು. ಇವುಗಳನ್ನೆಲ್ಲ ವಿಚಾರಮಾಡುವುದರಿಂದೇನು ಪ್ರಯೋಜನ ? ನೀನು ನಮ್ಮ ಬಂಧುವಾಗಿರುವೆ ನಿನಗೆ ನಮಸ್ಕಾರ ' ಎಂದು ಕೇಳಿದರು.

॥ ಶ್ರೀ ಪರಾಶರಃ ॥

ಕ್ಷಣಂ ಭೂತ್ವಾ ತ್ವಸೌ ತೂಷ್ಣೀಂ ಕಂಚಿತ್ಪ್ರಣಯಕೋಪವಾನ್ ।
ಇತ್ಯೇವ ಮುಕ್ತಸ್ತೈರ್ಗೋಪೈಃ ಕೃಷ್ಣೋಽಪ್ಯಾಹ ಮಹಾಮತೇ ॥ ೯ ॥

॥ ಶ್ರೀ ಭಗವಾನುವಾಚ ॥

ಮತ್ಸಂಬಂಧೇನ ವೋ ಗೋಪಾಃ ಯದಿ ಲಜ್ಜಾ ನ ಜಾಯತೇ ।
ಶ್ಲಾಘ್ಯೋ ವಾಹಂ ತತಃ ಕಂ ವೋ ವಿಚಾರೇಣ ಪ್ರಯೋಜನಂ ॥ ೧೦ ॥

ಯದಿ ವೋಽಸ್ತಿ ಮಯಿ ಪ್ರೀತಿಃ ಶ್ಲಾಘ್ಯೋಽಹಂ ಭವತಾಂ ಯದಿ ।
ತದಾತ್ಮಬಂಧುಸದೃಶೀ ಬುದ್ಧಿರ್ವಃ ಕ್ರಿಯತಾಂ ಮಯಿ ॥ ೧೧ ॥

ನಾಹಂ ದೇವೋ ನ ಗಂಧರ್ವೋ ನ ಯಕ್ಷೋ ನ ಚ ದಾನವಃ ।
ಅಹಂ ವೋ ಬಾಂಧವೋ ಜಾತೋ ನೈತಚ್ಚಿಂತ್ಯಮಿತೋಽನ್ಯಥಾ ॥ ೧೨ ॥

॥ ಶ್ರೀ ಪರಾಶರಃ ॥

ಇತಿ ಶ್ರುತ್ವಾ ಹರೇರ್ವಾಕ್ಯಂ ಬದ್ಧವೈರಾಸ್ತತೋ ವನಂ ।
ಯಯುರ್ಗೋಪಾ ಮಹಾಭಾಗ ತಸ್ಮಿನ್ ಪ್ರಣಯ ಕೋಪಿನಿ ॥ ೧೩ ॥

೯-೧೨. ಹೀಗೆಂದು ಹೇಳಿದ ಗೊಲ್ಲರ ಮಾತನ್ನು ಕೇಳಿ ಕೃಷ್ಣನು ಒಂದು ಕ್ಷಣ ಸುಮ್ಮನಿದ್ದು ಸ್ವಲ್ಪ ಪ್ರಯಣಯ ಕೋಪದಿಂದ ಕೂಡಿ ' ಗೊಲ್ಲರೇ ನನ್ನ ಸಂಬಂಧದಿಂದ ನಿಮಗೆ ನಾಚಿಕೆಯುಂಟಾಗದಿದ್ದರೆ ಅಥವಾ ನಾನು ಶ್ಲಾಘ್ಯನಾದರೆ ಇದನ್ನು ತಿಳಿವುದರಿಂದ ದಿಮಗೇನು ಪ್ರಯೋಜನ ? ನಿಮಗೆ ನನ್ನ ವಿಷಯದಲ್ಲಿ ಪ್ರೀತಿಯಿದ್ದರೆ ನಿಮ್ಮ ಶ್ಲಾಘೆನೆಗೆ ನಾನು ಪಾತ್ರನಾದರೆ ನನ್ನಲ್ಲಿ ನಿಮ್ಮ ಬಂಧುವಿಗೆ ಸಮಾನವಾದ ಬುದ್ಧಿಯನ್ನಿಡಿ ನಾನು ದೇವನೂ ಅಲ್ಲ. ಗಂಧರ್ವನೂ ಅಲ್ಲ. ಯಕ್ಷನೂ ಅಲ್ಲ ದಾನವನೂ ಅಲ್ಲ. ನಾನು ನಿಮ್ಮ ಬಂಧುವಾಗಿ ಹುಟ್ಟಿರುವೆನು. ಇಲ್ಲಿಂದ ಮುಂದೆ ನನ್ನನ್ನು ಬೇರೆ ವಿಧವಾಗಿ ತಿಳಿಯಬೇಡಿ ' ಎಂದು ಹೇಳಿದನು.

೧೩. ಹೀಗೆಂದು ಹೇಳಿದ ಕೃಷ್ಣನ ಮಾತನ್ನು ಕೇಳಿ ಅವನು ಕೋಪವಾಗಿರುವುದನ್ನು ಕಂಡು ಮಾತನಾಡದೆ ಗೊಲ್ಲರೆಲ್ಲರೂ ವನಕ್ಕೆ ಹೊರಟುಹೋದರು.

ಕೃಷ್ಣಸ್ತು ವಿಮಲಂ ವ್ಯೋಮ ಶರಚ್ಚಂದ್ರಸ್ಯ ಚಂದ್ರಿಕಾಂ ।
ತದಾ ಕುಮುದಿನೀಂ ಫುಲ್ಲಾಮಾಮೋದಿತದಿಗಂತರಾಂ ॥ ೧೪ ॥

ವನರಾಜಿಂ ತಥಾ ಕೂಜದ್ಭೃಂಗಮಾಲಾಮನೋಹರಾಂ ।
ವಿಲೋಕ್ಯ ಸಹ ಗೋಪೀಭಿರ್ಮನಶ್ಚಕ್ರೇ ರತಿಂ ಪ್ರತಿ ॥ ೧೫ ॥

ವಿನಾ ರಾಮೇಣ ಮಧುರಮತೀವ ವನಿತಾಪ್ರಿಯಂ ।
ಜಗೌ ಕಲಪದಂ ತೌರಿಸ್ತಾರಮಂದ್ರಕೃತಕ್ರಮಂ ॥ ೧೬ ॥

ರಮ್ಯಂ ಗೀತಧ್ವನಿಂ ಶ್ರುತ್ವಾ ಸಂತ್ಯಜ್ಯಾವಸಥಾಂ ಸ್ತದಾ ।
ಆಜಗ್ಮುಸ್ತ್ವರಿತಾ ಗೋಪ್ಯೋ ಯತ್ರಾಸ್ತೇ ಮಧುಸೂದನಃ ॥ ೧೭ ॥

ಶನೈಃ ಶನೈರ್ಜಗೌ ಗೋಪೀ ಕಾಚಿತ್ತಸ್ಯ ಲಯಾನುಗಂ ।
ದತ್ತಾವಧಾನಾ ಕಾಚಿಚ್ಚ ತಮೇವ ಮನಸಾ ಸ್ಮರತ್ ॥ ೧೮ ॥

೧೪-೧೬. ಕೃಷ್ಣನಾದರೋ ನಿರ್ಮಲವಾದ ಆಕಾಶವನ್ನೂ ಶರತ್ಕಾಲದ ಚಂದ್ರನ ಬೆಳದಿಂಗಳನ್ನೂ ಅರಳಿದ ಬಿಳಿಯ ಕಮಲವನ್ನೂ ಸುಗಂಧದಿಂದ ಕೂಡಿದ ದಿಕ್ಕುಗಳನ್ನೂ ವನಪಂಙ್ತಿಯನ್ನೂ ಧ್ವನಿಮಾಡುತ್ತಿರುವ ದುಂಬಿಗಳ ಸಾಲಿನ ಸೊಗಸನ್ನೂ ನೋಡಿ ಗೋಪಿಯರೊಡನೆ ಕ್ರೀಡಿಸಬೇಕೆಂದು ಮನಸ್ಸು ಮಾಡಿದನು. ಬಲರಾಮನಿಲ್ಲದೆ ಕಾನೊಬ್ಬನೇ ಸ್ತ್ರೀಯರಿಗೆ ಪ್ರೀತಿ ಪಾತ್ರವಾದ ಅವ್ಯಕ್ತ ಮಧುರವಾದ ರಾಗವನ್ನು ತಾರಮಂದ್ರಕ್ರಮದಲ್ಲಿ ಗಾನಮಾಡಿದನು.

೧೭-೧೮. ಮನೋಹರವಾದ ಆ ಸಂಗೀತದ ಧ್ವನಿಯನ್ನು ಕೇಳಿ ಗೋಪಿಯರು ಮನೆಯನ್ನು ಬಿಟ್ಟು ಕೃಷ್ಣನಿದ್ದೆಡೆಗೆ ವೇಗವಾಗಿ ಬಂದರು ಒಬ್ಬ ಗೋಪಿಯು ಮೆಲ್ಲಮೆಲ್ಲನೆ ಅವನ ತಾಳಕ್ಕನುಸಾರವಾಗಿ ಗಾನ ಮಾಡಿದಳು. ಮತ್ತೊಬ್ಬಳು ಅವನಲ್ಲಿಯೇ ಗಮನವಿಟ್ಟು ಅವನನ್ನೇ ಮನಸ್ಸಿನಲ್ಲಿ ಧ್ಯಾನಿಸುತ್ತಿದ್ದಳು. ಮತ್ತೊಬ್ಬಳು ಕೃಷ್ಣ ಕೃಷ್ಣ ಎಂದು ಹೇಳುತ್ತ ನಾಚಿಕೆಯನ್ನು ತೊಂದಿದಳು. ಇನ್ನೊಬ್ಬಳು

ಕಾಚಿತ್ಕೃಷ್ಣೇತಿ ಕೃಷ್ಣೇತಿ ಪ್ರೋಕ್ತ್ವಾ ಲಚ್ಚಾಮುಪಾಯಯೌ ।
ಯಯೌ ಚ ಕಾಚಿತ್ಪ್ರೇಮಾಂಧಾ ತತ್ಪಾರ್ಶ್ವಮವಿಲಂಬಿತಂ ॥ ೧೯ ॥

ಕಾಚಿಚ್ಚಾವಸಥಸ್ಯಾಂತೇ ಸ್ಥಿತ್ವಾ ದೃಷ್ಟ್ವಾ ಬಹಿರ್ಗುರುಂ ।
ತನ್ಮಯತ್ವೇನ ಗೋವಿಂದಂ ದಧ್ಯೌ ನಿಮೀಲಿತಲೋಚನಾ ॥ ೨೦ ॥

ತಚ್ಚಿತ್ತವಿಮಲಾಹ್ಲಾದಕ್ಷೀಣಪುಣ್ಯಚಯಾ ತಥಾ ।
ತದಪ್ರಾಪ್ತಿಮಹಾದುಃಖವಿಲೀನಾಶೇಷಪಾತಕಾ ॥ ೨೧ ॥

ಚಿಂತಯಂತೀ ಜಗತ್ಸ್ವಾಮಿಂ ಪರಬ್ರಹ್ಮಸ್ವರೂಪಿಣಂ ।
ನಿರುಚ್ಛ್ವಾಸತಯಾ ಮುಕ್ತಿಂ ಗತಾನ್ಯಾ ಗೋಪಕನ್ಯಕಾ ॥ ೨೨ ॥

ಅತ್ಯಂತ ಪ್ರೀತಿಯಿಂದ ತಡಮಾಡದೆ ಅವನ ಹತ್ತಿರಕ್ಕೆ ಹೋದಳು. ಬೇರೊಬ್ಬಳು ಮನೆಯೊಳಗೇ ನಿಂತುಕೊಂಡು ತಂದೆಯೋ ಮಾವನೋ ಹೊರಗಿದ್ದುದನ್ನು ಕಂಡು ಕಣ್ಣು ಮುಚ್ಚಿಕೊಂಡು ಮನಸ್ಸನ್ನು ಕೃಷ್ಣ ರೂಪವಾಗಿಯೇ ಮಾಡಿಕೊಂಡು ಧ್ಯಾನಮಾಡುತ್ತಿದ್ದಳು.

೧೯-೨೨. ಮತ್ತೊಬ್ಬ ಗೋಪಕನ್ಯೆಯು ಆ ಕೃಷ್ಣನಲ್ಲಿಯೇ ಮನಸ್ಸನ್ನು ನೆಲೆಗೊಳಿಸಿ ಸಂತೋಷಾನುಭವದಿಂದ ಪುಣ್ಯ ಫಲವನ್ನೂ ಅವನು ಪ್ರಾಪ್ತಿಯಾಗಲಿಲ್ಲವೆಂಬ ದುಃಖಾನುಭವದಿಂದ ಸಮಸ್ತ ಪಾಪಗಳನ್ನೂ ಕಳೆದುಕೊಂಡು ಜಗತ್ತಿಗೆ ಕಾರಣನಾದ ಪರಬ್ರಹ್ಮಸ್ವರೂಪದಿಂದ ಅವನನ್ನು ಧ್ಯಾನಮಾಡುತ್ತ ಮನೋಲಯದಿಂದ ಪ್ರಾಣಾದಿಗಳ ಸಂಚಾರವಿಲ್ಲದೆ ಉಚ್ಛ್ವಾಸ ನಿಶ್ವಾಸಗಳ ನಿರೋಧ ರೂಪವಾದ ಯೋಗದಿಂದ ಮುಕ್ತಿಯನ್ನು ಪಡೆದಳು.

ಗೋಪೀಪರಿವೃತೋ ರಾತ್ರಿಂ ಶರಚ್ಚಂದ್ರಮನೋರಮಾಂ ।
ಮಾನಯಾಮಾಸಗೋವಿಂದೋ ರಾಸಾರಂಭರಸೋತ್ಸುಕಃ ॥ ೨೩ ॥

ಗೋಪ್ಯಶ್ಚ ಬೃಂದಶಃ ಕೃಷ್ಣಚೇಷ್ಟಾಸ್ತಾಯತ್ತಮೂರ್ತಯಃ ।
ಅನ್ಯದೇಶಂ ಗತೇ ಕೃಷ್ಣೇ ಚೇರುರ್ಬೃಂದಾವನಾಂತರಂ ॥ ೨೪ ॥

ಕೃಷ್ಣೇ ನಿಬದ್ಧಹೃದಯಾ ಇದಮೂಚುಃ ಪರಸ್ಪರಂ ॥ ೨೫ ॥

ಕೃಷ್ಣೋಹಮೇಷ ಲಲಿತಂ ವ್ರಜಾಮ್ಯಾಲೋಕ್ಯತಾಂ ಗತಿಃ ।
ಅನ್ಯಾ ಬ್ರವೀತಿ ಕೃಷ್ಣಸ್ಯ ಮಮ ಗೀತಿರ್ನಿಶಮ್ಯತಾಂ ॥ ೨೬ ॥

ದುಷ್ಟ ಕಾಳೀಯ ತಿಷ್ಠಾತ್ರ ಕೃಷ್ಣೋಹಮಿತಿ ಚಾಪರಾ ।
ಬಾಹುಮಾಸ್ಫೋಟ್ಯ ಕೃಷ್ಣಸ್ಯ ಲೀಲಯಾ ಸರ್ಪಮಾದದೇ ॥ ೨೭ ॥

ಅನ್ಯಾ ಬ್ರವೀತಿ ಭೋ ಗೋಪಾಃ ನಿಶ್ಯಂಕೈಸ್ತಿಷ್ಠತೀಯತಾಮಿತಿ ।
ಅಲಂ ವೃಷ್ಟಿಭಯೇನಾತ್ರ ಧೃತೋ ಗೋವರ್ಧನೋ ಮಯಾ ॥ ೨೮ ॥

೨೩-೨೫. ಶರದ್ಋತುವಿನ ಪೂರ್ಣ ಚಂದ್ರನಿಂದ ಮನೋಹರವಾದ ಆ ರಾತ್ರಿಯಲ್ಲಿ ಕೃಷ್ಣನು ಗೋಪಿಯರೊಡನೆ ರಾಸಕ್ರೀಡೆಯಲ್ಲಾಸಕ್ತನಾದನು. ಗೋಪಿಯರು ಗುಂಪಾಗಿ ಕೃಷ್ಣನು ಮಾಡಿದ ಕೆಲಸಗಳಂತೆ ಅನುಕರಣ ಮಾಡುತ್ತ ಕೃಷ್ಣನು ಬೇರೆ ಪ್ರದೇಶದಲ್ಲಿದ್ದಾಗ ತಾವು ಬೃಂದಾವನದೊಳಗೆ ಸಂಚರಿಸುತ್ತ ಕೃಷ್ಣನಲ್ಲಿಯೇ ಮನಸ್ಸುಳ್ಳವರಾಗಿ ತಮ್ಮ ತಮ್ಮಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಎಂತೆಂದರೆ

೨೬-೩೦. ನಾನು ಕೃಷ್ಣನು, ನಾನು ನಡೆವುದನ್ನು ನೋಡಿರಿ ಎಂದು ಒಬ್ಬಳೂ ಕೃಷ್ಣನು ಹೇಳುವ ಗಾನವನ್ನೇ ನಾನೂ ಹೇಳುವೆನು ಕೇಳಿ ಎಂದು ಮತ್ತೊಬ್ಬಳೂ ಹೇಳಿದರು. ಇನ್ನೊಬ್ಬಳು ಎಲೈ ದುಷ್ಟನಾದ ಕಾಳಿಯನೇ ಇಲ್ಲಿಯೇ ನಿಲ್ಲು ನಾನು ಕೃಷ್ಣನು ಎಂದು ಹೇಳಿ ಭುಜವನ್ನು ತಟ್ಟಿ ಶಬ್ದಮಾಡಿ ಅವನು ಮಾಡಿದಂತೆ ಒಂದು

ಧೇನುಕೋಯಂ ಮಯಾಕ್ಷಿಪ್ತೋ ವಿಚರಂ ಶು ಯಥೇಚ್ಛಯಾ ।
ಗಾವೋ ಬ್ರವೀತಿ ಚೈವಾನ್ಯಾ ಕೃಷ್ಣಲೀಲಾನುಸಾರಿಣೀ ॥ ೨೯ ॥

ಏವಂ ನಾನಾಪ್ರಕಾರಾಸು ಕೃಷ್ಣಚೇಷ್ಟಾಸು ತಾಸ್ತದಾ ।
ಗೋಪ್ಯೋ ವ್ಯಗ್ರಾಸ್ಸಮಂ ಚೇರೂ ರಮ್ಯಂ ಬೃಂದಾವನಾಂತರಂ ॥ ೩೦ ॥

ವಿಲೋಕ್ಯೈಕಾ ಭುವಂ ಪ್ರಾಹ ಗೋಪೀಗೋಪವರಾಂಗನಾ ।
ಪುಲಕಾಂಚಿತಸರ್ವಾಂಗೀ ವಿಕಾಸಿನಯನೋತ್ಪಲಾ ॥ ೩೧ ॥

ಧ್ವಜವಜ್ರಾಂಕುಶಾಬ್ಜಾಂಕರೇಖಾವಂತ್ಯಾಳಿ ಪಶ್ಯತ ।
ಪದಾನ್ಯೇತಾನಿ ಕೃಷ್ಣಸ್ಯ ಲೀಲಾಲಲಿತಗಾಮಿನಃ ॥ ೩೨ ॥

ಕಾಪಿ ತೇನ ಸಮಾಯಾತಾ ಕೃತಪುಣ್ಯಾ ಮದಾಲಸಾ ।
ಪದಾನಿ ತಸ್ಯಾಶ್ಚೈತಾನಿ ಘನಾನ್ಯಲ್ಪತನೂನಿ ಚ ।
ಪುಷ್ಪಾಪಚಯಮತ್ರೋಚ್ಚೈಶ್ಚಕ್ರೇ ದಾಮೋದರೋ ಧ್ರುವಂ ॥ ೩೩ ॥

ಸರ್ಪವನ್ನು ಹಿಡಿದುಕೊಂಡಳು ಬೇರೊಬ್ಬಳು ಎಲೈ ಗೊಲ್ಲರಿ ಮಳೆಗೆ ಹೆದರಬೇಡಿ ಧೈರ್ಯದಿಂದಿರಿ ನಾನು ಗೋವರ್ಧನಪರ್ವತವನ್ನೆತ್ತಿ ಹಿಡಿದಿರುವೆನು ಎಂದಳು. ಇನ್ನೊಬ್ಬಳು ನಾನು ಧೇನುಕನನ್ನು ನಾಶಮಾಡಿದೆನು. ಗೋವುಗಳು ಇಷ್ಟು ಬಂದೆಡೆಯಲ್ಲಿ ಸಂಚಾರಮಾಡಲಿ ಎಂದಳು. ಹೀಗೆ ಗೋಪಿಯರು ಬಗೆಬಗೆಯ ಕೃಷ್ಣನ ಚೇಷ್ಟೆಯನ್ನನುಕರಿಸುತ್ತ ಅತ್ಯಂತಾಸಕ್ತಿಯಿಂದ ಬೃಂದಾವನದಲ್ಲಿ ಸಂಚರಿಸುತ್ತಿದ್ದರು.

೩೧–೩೩. ಒಬ್ಬ ಗೋಪಾಂಗನೆಯು ಭೂಮಿಯನ್ನು ನೋಡಿ ಮೈಯೆಲ್ಲ ರೋಮಾಂಚವಾಗಲು ಅರಳಿದ ಕಣ್ಣುಗಳುಳ್ಳವಳಾಗಿ ಸಖಿಯರಿ ನೋಡಿ ಧ್ವಜ, ವಜ್ರ, ಅಂಕುಶ, ಕಮಲರೇಖೆಗಳಿಂದ ಕೂಡಿದ ಈ ಹೆಜ್ಜೆಯ ಗುರುತುಗಳು ಮನೋಹರವಾಗಿ ನಡೆಯುವ ಶ್ರೀಕೃಷ್ಣನ ಹೆಜ್ಜೆಯ ಗುರುತುಗಳಾಗಿವೆ. ಯಾವಳೋ ಪುಣ್ಯಾತ್ಮಳು ಅವನೊಡನೆ ಮಂದಗಮನದಿಂದ ಹೋಗಿರುವಳು ಅವಳ ಹೆಜ್ಜೆಯ ಗುರುತುಗಳು ಹತ್ತಿರವಾಗಿವೆ ದೊಡ್ಡವಾಗಿ ಕಾಣುವುದಿಲ್ಲ.

ಯೇನಾಗ್ರಾಕ್ರಾಂತಮಾತ್ರಾಣಿ ಪದಾನ್ಯತ್ರ ಮಹಾತನ್ಮಃ ॥ ೩೪ ॥

ಅತ್ರೋಪವಿಶ್ಯ ಸಾ ತೇನ ಕಾಚಿತ್ಪುಷ್ಪೈರಲಂಕೃತಾ ।
ಅನ್ಯಜನ್ಮನಿ ಸರ್ವಾತ್ಮಾ ವಿಷ್ಣುರಭ್ಯರ್ಚಿತಸ್ತಯಾ ॥ ೩೫ ॥

ಪುಷ್ಪಬಂಧನಸಂಮಾನಕೃತಮಾನಾಮುಪಾಸ್ಯತಾಂ ।
ನಂದಗೋಪಸುತೋ ಯಾತೋ ಮಾರ್ಗೇಣಾನೇನ ಪಶ್ಯತ ॥ ೩೬ ॥

ಅನುಯಾತೈನಮುತ್ತಾನಾ ನಿತಂಬಭರಮಂಥರಾ ।
ಯಾ ಗಂತವ್ಯೇ ದ್ರುತಂ ಯಾತಿ ನಿಮ್ನಪಾದಾಗ್ರಸಂಸ್ಥಿತಿಃ ॥ ೩೭ ॥

೩೪-೩೫. ಮಹಾತ್ಮನಾದ ಕೃಷ್ಣನು ಇಲ್ಲಿ ಎತ್ತರದಲ್ಲಿದ್ದ ಹೂಗಳನ್ನು ಕೊಯ್ದಿರುವನು. ಆದುದರಿಂದಲೇ ಈ ಸ್ಥಳದಲ್ಲಿ ಅವನ ಹೆಜ್ಜೆಯು ತುದಿಯು ಗುರುತು ಮಾತ್ರವಿರುವುದು. ಇಲ್ಲಿ ಕೃಷ್ಣನು ಕುಳಿತು ಯಾವಳೋ ಒಬ್ಬಳಿಗೆ ಹೂವನ್ನು ಮುಡಿಸಿ ಅಲಂಕರಿಸಿರುವನು. ಅವಳು ಹಿಂದಿನ ಜನ್ಮದಲ್ಲಿ ಸರ್ವಾತ್ಮನಾದ ವಿಷ್ಣುವನ್ನು ಪೂಜಿಸಿರುವಳು.

೩೬–೩೭. ಹೂಗಳನ್ನು ಕಟ್ಟುವುದರಲ್ಲಿ ಬಂದ ಗೌರವದಿಂದ ಗರ್ವಪಡುತ್ತಿರುವ ವಳನ್ನು ಬಿಟ್ಟು ನಂದ ಗೋಪನ ಮಗನಾದ ಕೃಷ್ಣನು ಈ ದಾರಿಯಲ್ಲಿ ಹೋಗಿರುವನು ನೋಡಿರಿ. ಈ ಸ್ಥಳದಲ್ಲಿ ಮತ್ತೊಬ್ಬಳು ನಿತಂಬ ಭಾರದಿಂದ ನಿದಾನವಾಗಿ ನಡೆಯುತ್ತ ಕೃಷ್ಣನು ವೇಗವಾಗಿ ನಡೆಯುವಾಗ ತಾನೂ ವೇಗವಾಗಿ ನಡೆಯುತ್ತ ತನ್ನ ಕಾಲಿನ ತುದಿಯನ್ನು ಹೆಚ್ಚಾಗಿ ಊರಿ ಈ ನೆಲದಲ್ಲಿ ಸ್ವಲ್ಪ ಹಳ್ಳವಾದ ಹೆಜ್ಜೆಯ ಗುರುತನ್ನು ಮಾಡಿರುವಳು.

ಹಸ್ತನ್ಯಸ್ತಾಗ್ರಹಸ್ತೇಯಂ ತೇನ ಯಾತಿ ತಥಾ ಸಖೀ ।
ಅನಾಯತ್ತಪದನ್ಯಾಸಾ ಲಕ್ಷ್ಯತೇ ಪದಪದ್ಧತಿಃ ॥ ೩೮ ॥

ಹಸ್ತಸಂಸ್ಪರ್ಶಮಾತ್ರೇಣ ಧೂರ್ತೇನೈಷಾ ವಿಮಾನಿತಾ ।
ನೈರಾಶ್ಯಾನ್ಮಂದಗಾಮಿನ್ಯಾ ನಿವೃತ್ತಂ ಲಕ್ಷ್ಯತೇ ಪದಂ ॥ ೩೯ ॥

ನೂನಮುಕ್ತಾ ತ್ವರಾಮೀತಿ ಪುನರೇಷ್ಯಾಮಿ ತೇಂತಿಕಂ ।
ತೇನ ಕೈಷ್ಣೇನ ಯೇನೈಷಾ ತ್ವರಿತಾ ಪದಪದ್ಧತಿಃ ॥ ೪೦ ॥

ಪ್ರವಿಷ್ಟೋ ಗಹನಂ ಕೃಷ್ಣಃ ಪದಮತ್ರ ನ ಲಕ್ಷ್ಯತೇ ।
ನಿವರ್ತಧ್ವಂ ಶಶಾಂಕಸ್ಯ ನೈತದ್ವೀಥಿಗೋಚರೇ ॥ ೪೧ ॥

ನಿವೃತ್ತಾಸ್ತಾಸ್ತದಾ ಗೋಪ್ಯೋ ನಿರಾಶಾಃ ಕೃಷ್ಣದರ್ಶನೇ ।
ಯಮುನಾತೀರಮಾಸಾದ್ಯ ಜಗುಸ್ತಚ್ಚರಿತಂ ತಥಾ ॥ ೪೨ ॥

೩೮-೩೯. ಎಲೈ ಸಖಿಯೇ ಆ ಕೃಷ್ಣನು ಮತ್ತೊಬ್ಬಳ ಕೈಯನ್ನು ಹಿಡಿದು ಕೊಂಡು ನಡೆಯುತ್ತಿರುವನು. ಆದುದರಿಂದಲೇ ಅವಳ ನಡಿಗೆಯು ಅವಳ ಅಧೀನ ದಲ್ಲಿಲ್ಲದಂತೆ ಹೆಜ್ಜೆಯ ಗುರುತು ಕಾಣುತ್ತಿರುವುದು. ಧೂರ್ತನಾದ ಕೃಷ್ಣನು ಮತ್ತೊಬ್ಬಳ ಕೈಯನ್ನು ಹಿಡಿದು ಸಮಾಧಾನ ವಾಕ್ಯಗಳನ್ನು ಮಾತ್ರ ಹೇಳಿದುದ ರಿಂದ ಅವಳು ಅಪಮಾನವನ್ನು ಹೊಂದಿದವಳಾಗಿ ಅವನ ವಿಷಯದಲ್ಲಿ ನಿರಾಶೆಯಿಂದ ಮೆಲ್ಲಗೆ ಹಿಂದಿರುಗಿದಂತೆ ಅವಳ ಹೆಜ್ಜೆಯ ಗುರುತು ಕಾಣುವುದು.

೪೦. ನೀನಿಲ್ಲಿಯೇ ಇರು. ನಾನು ಬೇಗ ಹೋಗಿ ಪುನಃ ನಿನ್ನ ಸಮೀಪಕ್ಕೆ ಬರುವೆನು ಎಂದು ಒಬ್ಬ ಗೋಪಿಗೆ ಹೇಳಿ ಕೃಷ್ಣನು ಹೋಗಿರುವನು. ಆದುದರಿಂದಲೇ ಅವನ ಕಾಲಿನ ಹೆಜ್ಜೆಯ ಗುರುತು ಬೇಗ ನಡೆದಂತೆ ಕಾಣುವುದು.

೪೧-೪೨. ಇಲ್ಲಿ ಕೃಷ್ಣನು ವನವನ್ನು ಪ್ರವೇಶಿಸಿದನು. ಆದುದರಿಂದಲೇ ಬೆಳದಿಂಗಳಲ್ಲಿ ಅವನ ಹೆಜ್ಜೆಯ ಗುರುತು ಕಾಣುವುದಿಲ್ಲ. ನಾವು ಹಿಂದಿರುಗೋಣ ಎಂದು ಹೇಳಿ ಗೋಪಿಯರು ಕೃಷ್ಣನ ದರ್ಶನದಲ್ಲಿ ನಿರಾಶೆಯುಳ್ಳವರಾಗಿ ರಾಸಕ್ರೀಡಾ ಸ್ಥಳದಿಂದ ಯಮುನಾ ತೀರಕ್ಕೆ ಹೋಗಿ ಅವನ ಚರಿತ್ರೆಯನ್ನು ಗಾನಮಾಡುತ್ತಿದ್ದರು

ತತೋ ಽದೃಶುರಾಯಾಂತಂ ವಿಕಾಸಿ ಮುಖಪಂಕಜಂ ।
ಗೋಪ್ಯಸ್ತ್ರೈಲೋಕ್ಯಗೋಪ್ತಾರಂ ಕೃಷ್ಣಮಕ್ಲಿಷ್ಟಚೇಷ್ಟಿತಂ ॥ ೪೩ ॥

ಕಾಚಿದಾಲೋಕ್ಯ ಗೋವಿಂದಮಾಯಾಂತಮತಿಹರ್ಷಿತಾ ।
ಕೃಷ್ಣ ಕೃಷ್ಣೇತಿ ಕೃಷ್ಣೇತಿ ಪ್ರಾಹ ನಾನ್ಯದುದೀರಯತ್ ॥ ೪೪ ॥

ಕಾಚಿದ್ಭೃಂಗುರಂ ಕೃತ್ವಾ ಲಲಾಟಫಲಕೇ ಹರಿಂ ।
ವಿಲೋಕ್ಯ ನೇತ್ರಭೃಂಗಾಭ್ಯಾಂ ಪಪೌ ತನ್ಮುಖಪಂಕಜಂ ॥ ೪೫ ॥

ಕಾಚಿದಾಲೋಕ್ಯ ಗೋವಿಂದಂ ನಿಮೀಲಿತವಿಲೋಚನಾ ।
ತಸ್ಯೈವ ರೂಪಂ ಧ್ಯಾಯಂತೀ ಯೋಗಾರೂಢೇವ ಸಾಬಭೌ ॥ ೪೬ ॥

ತತಃ ಕಾಂಚಿತ್ಪ್ರಯಾಲಾಪೈಃ ಕಾಂಚಿದ್ಭ್ರೂಭಂಗವೀಕ್ಷಿತೈಃ ।
ನಿನ್ಯೇನುನಯಮನ್ಯಾಂ ಚ ಕರಸ್ಪರ್ಶೇನ ಮಾಧವಃ ॥ ೪೭ ॥

೪೩-೪೬. ಆ ಮೇಲೆ ಪ್ರೀತಿಯಿಂದ ಗಾನಮಾಡುತ್ತಿದ್ದ ಸ್ತ್ರೀಯರ ಗಾನವನ್ನು ಕೇಳಿ ಅರಳಿದ ಮುಖಕಮಲವುಳ್ಳ ಮೂರು ಲೋಕವನ್ನೂ ರಕ್ಷಿಸುವ ಮಹಾ ಮಹಿಮನಾದ ಕೃಷ್ಣನು ಬರುತ್ತಿರುವುದನ್ನು ಆ ಸ್ತ್ರೀಯರು ನೋಡಿದರು. ಒಬ್ಬಳು ಬರುತ್ತಿರುವ ಆ ಗೋವಿಂದನನ್ನು ನೋಡಿ ಅತ್ಯಂತ ಸಂತೋಷದಿಂದ ಕೃಷ್ಣ! ಕೃಷ್ಣ! ಕೃಷ್ಣ! ಎಂದು ಹೇಳುತ್ತ ಮತ್ತೊಂದು ಮಾತನ್ನೂ ಆಡದಿದ್ದಳು ಮತ್ತೊಬ್ಬಳು ಹುಬ್ಬುಗಂಟುಹಾಕಿಕೊಂಡು ಹಣೆಯನ್ನು ಸಂಕೋಚಮಾಡಿಕೊಂಡು ದುಂಬಿಯಂತೆ ಕಾಂತಿಯುಕ್ತವಾದ ಕಣ್ಣುಗಳಿಂದ ಅವನ ಮುಖಕಮಲವನ್ನು ಪಾನಮಾಡುತ್ತಿದ್ದಳು. ಇನ್ನೊಬ್ಬಳು ಗೋವಿಂದನನ್ನು ನೋಡಿ ಬಿಟ್ಟ ಕಣ್ಣುಗಳಿಂದ ಅವನ ರೂಪವನ್ನು ತನ್ನೊಳಗೆ ಸೇರಿಸಿಕೊಂಡು ಕಣ್ಣು ಬಿಚ್ಚಿದ್ದರೆ ಹೊರಟುಹೋಗುವನೆಂದು ಕಣ್ಣುಗಳನ್ನು ಮುಚ್ಚಿಕೊಂಡು ಅವನ ರೂಪವನ್ನೇ ಧ್ಯಾನಮಾಡುತ್ತ ಯೋಗಾರೂಢಳಾದವಳಂತೆ ಪ್ರಕಾಶಿಸುತ್ತಿದ್ದಳು.

೪೭-೪೯. ಬಳಿಕ ಲಕ್ಷ್ಮೀಪತಿಯಾದ ಕೃಷ್ಣನು ಒಬ್ಬಳನ್ನು ಪ್ರೀತಿಯಿಂದ ಮಾತನಾಡಿಸುವುದರಿಂದಲೂ ಒಬ್ಬಳನ್ನು ಹುಬ್ಬಿನ ಸನ್ನೆಯಿಂದ ನೋಡುವುದ

ತಾಭಿಃ ಪ್ರಸನ್ನ ಚಿತ್ತಾಭಿಃ ಗೋಪೀಭಿಸ್ಸಹ ಸಾದರಂ ।
ರರಾಸ ರಾಸಗೋಷ್ಠೀಭಿರುದಾರಚರಿತೋ ಹರಿಃ ॥ ೪೮ ॥

ರಾಸಮಂಡಲ ಬಂಧೋಪಿ ಕೃಷ್ಣಪಾರ್ಶ್ವಮನುಜ್ಝಿತಾ ।
ಗೋಪೀಜನೇನ ನೈವಾಭೂತ್ ಏಕಸ್ಥಾನಸ್ಥಿರಾತ್ಮನಾ ॥ ೪೯ ॥

ಹಸ್ತೇನ ಗೃಹ್ಯ ಚೈಕೈಕಾಂ ಗೋಪಿನಾಂ ರಾಸಮಂಡಲೇ ।
ಚಕಾರ ತತ್ಕರಸ್ಪರ್ಶನಿಮೀಲಿತದೃಶಂ ಹರಿಃ ॥ ೫೦ ॥

ತತಃ ಪ್ರವವೃತೇ ರಾಸಶ್ಚಲದ್ವಲಯನಿಸ್ವನಃ ।
ಅನುಯಾತಶರತ್ಕಾವ್ಯಗೇಯಗೀತಿರನುಕ್ರಮಾತ್ ॥ ೫೧ ॥

ಕೃಷ್ಣಶ್ಚರಚ್ಚಂದ್ರಮಸಂ ಕೌಮುದೀಂ ಕುಮುದಾಕರಂ ।
ಜಗೌ ಗೋಪೀಜನಸ್ತ್ವೇಕಂ ಕೃಷ್ಣನಾಮ ಪುನಃ ಪುನಃ ॥ ೫೨ ॥

ರಿಂದಲೂ ಒಬ್ಬಳನ್ನು ಕೈಯಿಂದ ಮುಟ್ಟುವುದರಿಂದಲೂ ಸಮಾಧಾನಪಡಿಸುತ್ತ ಸಂತೋಷಚಿತ್ತರಾದ ಗೋಪಿಯರೊಡನೆ ಪ್ರೀತಿಯಿಂದ ಕೂಡಿ ರಾಸಗೋಷ್ಠಿಯಲ್ಲಿ ಕ್ರೀಡಿಸುತ್ತಿದ್ದನು.

೪೯–೫೨. ಗೋಪಿಯರು ಕೃಷ್ಣನ ಪಾರ್ಶ್ವವನ್ನು ಬಿಡದಿದ್ದುದರಿಂದ ರಾಸ ಮಂಡಲದಲ್ಲಿ ಒಂದೆಡೆ ಸ್ಥಿರವಾಗಿ ನಿಲ್ಲುತ್ತಿರಲಿಲ್ಲ. ಆದುದರಿಂದ ಕೃಷ್ಣನು ತನ್ನ ಕೈಯಿಂದ ಪ್ರತಿಯೊಬ್ಬ ಗೋಪಿಯ ಕೈಯನ್ನು ಹಿಡಿದು ರಾಸಮಂಡಲವನ್ನು ರಚಿಸಿದನು. ಆ ಗೋಪಿಯರು ಕೃಷ್ಣನ ಕರಸ್ಪರ್ಶದಿಂದುಂಟಾದ ಸುಖದಿಂದ ಕಣ್ಣು ಗಳನ್ನು ಮುಚ್ಚುತ್ತಿದ್ದರು. ಆಮೇಲೆ ಗುಂಡಾದ ಆಕಾರದಿಂದ ನರ್ತನಮಾಡುತ್ತ ಶರದ್ಋತುವಿನ ವರ್ಣನಾರೂಪವಾದ ಗಾನವನ್ನು ಹಾಡುತ್ತ ರಾಸಕ್ರೀಡೆಯು ಆರಂಭ ವಾಯಿತು. ಕೃಷ್ಣನು ಶರದ್ಋತುವಿನ ಚಂದ್ರನನ್ನೂ ಬೆಳದಿಂಗಳನ್ನೂ ನೈದಿಲೆಗಳಿಗೆ ಆಶ್ರಯವಾದ ಸರೋವರಗಳನ್ನೂ ವರ್ಣಿಸುತ್ತ ಗಾನಮಾಡುತ್ತಿದ್ದನು. ಗೋಪಿಯರು ಕೃಷ್ಣನ ನಾಮವನ್ನು ಆ ವೃತ್ತಿ ಮಾಡುತ್ತಿದ್ದರು.

ಪರಿವೃತ್ತಿಶ್ರಮೇ ಕಾಚಿಚ್ಚಲದ್ವಲಯಲಾಪಿನೀಂ ।
ದದೌ ಬಾಹುಲತಾಂ ಸ್ಕಂದೇ ಗೋಪೀ ಮಧುನಿಷೂತಿನಃ ॥ ೫೩ ॥

ಕಾಚಿತ್ಪ್ರವಿಲಸದ್ಬಾಹುಂ ಪರಿರಭ್ಯ ಚುಚುಂಬ ತಂ ।
ಗೋಪೀಗೀತಸ್ತುತಿವ್ಯಾಜಾನ್ನಿಪುಣಾ ಮಧುಸೂದನಂ ॥ ೫೪ ॥

ಗೋಪೀಕಪೋಲಸಂಶ್ಲೇಷಮಭಿಗಮ್ಯ ಹರೇರ್ಭುಜೌ ।
ಪುಲಕೋದ್ಗಮಸಸ್ಯಾಯ ಸ್ವೇದಾಂಬುಘನತಾಂ ಗತೌ ॥ ೫೫ ॥

ರಾಸಗೇಯಂ ಜಗೌ ಕೃಷ್ಣೋ ಯಾವತ್ತಾರತರ ಧ್ವನಿಃ ।
ಸಾಧು ಕೃಷ್ಣೇತಿ ಕೃಷ್ಣೇತಿ ತಾವತ್ತಾಃ ದ್ವಿಗುಣಂ ಜಗುಃ ॥ ೫೬ ॥

ಗತೇನುಗಮನಂ ಚಕ್ರುರ್ವಲನೇ ಸಂಮುಖಿಂ ಯಯುಃ ।
ಪ್ರತಿಲೋಮಾನುಲೋಮಾಭ್ಯಾಂ ಭೇಜುಗೋರ್ಕಾಂಗನಾ ಹರಿಂ ॥ ೫೭ ॥

೫೩-೫೪. ಗುಂಡಾಗಿ ನರ್ತನ ಮಾಡುತ್ತಿರುವ ಆಯಾಸದಿಂದ ಒಬ್ಬ ಗೋಪಿಯು ಧ್ವನಿಮಾಡುತ್ತಿರುವ ಬಳೆಗಳಿಂದ ಕೂಡಿದ ತನ್ನ ತೋಳನ್ನು ಕೃಷ್ಣನ ಹೆಗಲಮೇಲೆ ಹಾಕಿದಳು. ಮತ್ತೊಬ್ಬಳು ಅವನನ್ನು ತನ್ನ ತೋಳುಗಳಿಂದ ತಬ್ಬಿಕೊಂಡು ಗಾನವನ್ನು ಹೊಗಳುವ ನೆವದಿಂದ ಅವನನ್ನು ಚುಂಬಿಸಿದಳು.

೫೫-೫೬. ಗೋಪಿಯ ಕೆನ್ನೆಯ ಸ್ಪರ್ಶದಿಂದ ಕೃಷ್ಣನ ಭುಜಗಳು ಬೆವರಿ ಗೋಪಿಯ ಕೆನ್ನೆಯಲ್ಲುಂಟಾದ ರೋಮಾಂಚವೆಂಬ ಸಸ್ಯಗಳಿಗೆ ಮೇಘಸ್ವರೂಪವಾದುವು. ಕೃಷ್ಣನು ತಾರಧ್ವನಿಯಿಂದ ರಾಸಗಾನವನ್ನು ಮಾಡುತ್ತಿದ್ದರೆ ಗೋಪಿಯರು ಕೃಷ್ಣನೇ! ಬಹಳ ಸೊಗಸಾಗಿದೆ. ಸೊಗಸಾಗಿದೆ ಎಂದು ಹೇಳುತ್ತ ಎರಡರಷ್ಟು ಧ್ವನಿಮಾಡಿ ಗಾನಮಾಡುತ್ತಿದ್ದರು.

೫೭-೫೮. ರಾಸಕ್ರೀಡೆಯಲ್ಲಿ ಕೃಷ್ಣನು ಹೋಗುತ್ತಿದ್ದರೆ ಗೋಪಿಯರು ಅವನನ್ನು ಅನುಸರಿಸಿ ಅನುಲೋಮಗತಿಯಿಂದಲೂ ಹಿಂದಿರುಗಿದರೆ ಅವನಿಗೆ ಅಭಿಮುಖವಾಗಿ ಪ್ರತಿಲೋಮಗತಿಯಿಂದಲೂ ನರ್ತನ ಮಾಡುತ್ತಿದ್ದರು. ಹೀಗೆ ಗೋಪಿಯರೊ

ಸ ತಥಾ ಸಹ ಗೋಪೀಭೀ ರರಾಸ ಮಧುಸೂದನಃ ।
ಯಥಾಬ್ದಕೋಟಿಪ್ರತಿಮಃ ಕ್ಷಣಸ್ತೇನ ವಿನಾಽಭವತ್ ॥ ೫೫ ॥

ತಾ ವಾರ್ಯಮಾಣಾಃ ಪತಿಭಿಃ ಪಿತೃಭಿರ್ಭ್ರಾತೃಭಿಸ್ತಥಾ ।
ಕೃಷ್ಣಂ ಗೋಪಾಂಗನಾ ರಾತ್ರೌ ರಮಯಂತಿ ರತಿಪ್ರಿಯಾಃ ॥ ೫೬ ॥

ಸೋಽಪಿ ಕೈಶೋರಕವಯೋ ಮಾನಯನ್ಮಧುಸೂದನಃ ।
ರೇಮೇ ತಾಭಿರಮೇಯಾತ್ಮಾ ಕ್ಷಪಾಸು ಕ್ಷಪಿತಾಹಿತಃ ॥ ೫೭ ॥

ತದ್ಭರ್ತೃಷು ತಥಾ ತಾಸು ಸರ್ವಭೂತೇಷು ಚೇಶ್ವರಃ ।
ಆತ್ಮಸ್ವರೂಪರೂಪೋಽಸೌ ವ್ಯಾಪೀ ವಾಯುರಿವ ಸ್ಥಿತಃ ॥ ೫೮ ॥

ಯಥಾ ಸಮಸ್ತಭೂತೇಷು ನಭೋಗ್ನಿಃ ಪೃಥಿವೀ ಜಲಂ ।
ವಾಯುಶ್ಚಾತ್ಮಾ ತಥೈವಾಸೌ ವ್ಯಾಪ್ಯ ಸರ್ವಮವಸ್ಥಿತಃ ॥ ೫೯ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ತ್ರಯೋದಶೋಽಧ್ಯಾಯಃ

ಡನೆ ಕೃಷ್ಣನು ನರ್ತನಮಾಡುತ್ತಿದ್ದರೆ ಕೃಷ್ಣನಿಲ್ಲದ ಒಂದು ಕ್ಷಣವು ಆ ಸ್ತ್ರೀಯರಿಗೆ ಕೋಟಿ ವರ್ಷಕ್ಕೆ ಸಮಾನವಾಗುತ್ತಿದ್ದಿತು.

೫೫–೫೯. ಕೃಷ್ಣನೊಡನೆ ರಾಸಕ್ರೀಡೆಯು ಬೇಡವೆಂದು ಆ ಗೋಪಿಯರ ಗಂಡಂದಿರು ತಂದೆ ತಾಯಿಗಳು ಸಹೋದರರೂ ತಡೆದರೂ ಅವರು ಅವನಲ್ಲಿ ಪ್ರೀತಿಯುಳ್ಳವರಾಗಿ ರಾತ್ರಿಯ ಕಾಲದಲ್ಲಿ ರಾಸಕ್ರೀಡೆಗೆ ಹೋಗುತ್ತಿದ್ದರು. ಅವನೂ ತನ್ನ ಕೌಮಾರಾವಸ್ಥೆಯನ್ನು ರಾತ್ರಿಯಲ್ಲಿ ಅವರೊಡನೆ ವಿಹರಿಸುತ್ತ ಗೌರವಿಸುತ್ತಿದ್ದನು ಸರ್ವೇಶ್ವರನಾದ ಕೃಷ್ಣನು ಆ ಗೋಪಿಯರಲ್ಲಿಯೂ ಅವರ ಗಂಡಂದಿರಲ್ಲಿಯೂ ಸಮಸ್ತ ಪ್ರಾಣಿಗಳಲ್ಲಿಯೂ ಸರ್ವ ವ್ಯಾಪಿಯಾದ ವಾಯುವಿನಂತೆ ಆತ್ಮ ಸ್ವರೂಪದಿಂದಿರತಕ್ಕವನಾದುದರಿಂದ ಸಮಸ್ತ ಭೂತಗಳಲ್ಲಿಯೂ ಇರುವ ಆಕಾಶಾದಿ ಪಂಚಭೂತಗಳಿಗೆ ದೋಷಸಂಬಂಧವಿಲ್ಲದಂತೆ ಅವನಿಗೆ ಯಾವ ದೋಷ ಸಂಬಂಧವೂ ಇರುವುದಿಲ್ಲ.

ಎಂಬಲ್ಲಿಗೆ ಶ್ರೀ ವಿಷ್ಣು ಪುರಾಣದ ಪಂಚಮಾಂಶದಲ್ಲಿ
ಹದಿಮೂರನೆಯ ಅಧ್ಯಾಯವು
ಮುಗಿದುದು

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಚತುರ್ದಶೋಽಧ್ಯಾಯ

॥ ಶ್ರೀ ಪರಾಶರಃ ॥

ಪ್ರದೋಷಾಗ್ರೇ ಕದಾಚಿತ್ತು ರಾಸಾಸಕ್ತೇ ಜನಾರ್ದನೇ ।
ತ್ರಾಸಯಂತ್ಸಮದೋ ಗೋಷ್ಠಮರಿಷ್ಟಸ್ಸಮುಪಾಗಮತ್ ॥ ೧ ॥

ಸತೋಯತೋಯದಚ್ಛಾಯಸ್ತೀಕ್ಷ್ಣಶೃಂಗೋರ್ಧಲೋಚನಃ ।
ಖುರಾಗ್ರಪಾತೈರತ್ಯರ್ಥಂ ಧಾರಯನ್ ಧರಣೀತಲಂ ॥ ೨ ॥

ಲೇಲಿಹಾನಸ್ಸನಿಷ್ಪೇಷಂ ಜಿಹ್ವಯೋಷ್ಠೌ ಪುನಃ ಪುನಃ ।
ಸಂರಂಭಾವಿದ್ಧಲಾಂಗೂಲಃ ಕಠಿನಸ್ಕಂಧಬಂಧನಃ ॥ ೩ ॥

ಹದಿನಾಲ್ಕನೆಯ ಅಧ್ಯಾಯವು

೧–೫ ಒಂದಾನೊಂದು ದಿನ ಸಂಧ್ಯಾಕಾಲವಾದ ಮೇಲೆ ಕೃಷ್ಣನು ರಾಸಕ್ರೀಡೆಯಲ್ಲಾಸಕ್ತನಾಗಿರಲು ಅರಿಷ್ಟನೆಂಬ ಎತ್ತಿನ ಆಕಾರದ ರಾಕ್ಷಸನು ಗೋಕುಲವನ್ನು ಹೆದರಿಸುತ್ತ ಅತ್ಯಂತ ಗರ್ವದಿಂದ ಬಂದನು. ಅವನು ಮೇಘದಂತೆ ಮೈ ಬಣ್ಣವೂ ಹರಿತವಾದ ಕೊಂಬುಗಳೂ ಸೂರ್ಯನಂತಿರುವ ಕಣ್ಣುಗಳೂ ಉಳ್ಳವನಾಗಿ ಗೊರಸನ್ನು ಭೂಮಿಯಮೇಲೆ ಊರುವುದರಿಂದ ನೆಲವನ್ನು ಸೀಳುತ್ತ ನಾಲಗೆಯಿಂದ ತನ್ನ ತುಟಿಯನ್ನು ಪುನಃ ಪುನಃ ನೆಕ್ಕುತ್ತ ಸಂಭ್ರಮದಿಂದ ಬಾಲವನ್ನು ಬಡಿಯುತ್ತ ಕಠಿನವಾದ ಕುತ್ತಿಗೆಯೂ ಎತ್ತರವಾದ ಭುಜವೂ ಉಳ್ಳ ದೊಡ್ಡ ಶರೀರವುಳ್ಳವನಾಗಿ ಸಗಣಿ ಗಂಜ

ಉದಗ್ರಕಕುದಾಭೋಗಃ ಹ್ರಮಾಣಾದ್ದುರತಿಕ್ರಮಃ ।
ವಿಣ್ಮೂತ್ರಲಿಪ್ತಪೃಷ್ಠಾಂಗೋ ಗವಾಮುದ್ವೇಗಕಾರಕಃ ॥ ೪ ॥

ಪ್ರಲಂಬಕಂಠೋತಿಮುಖಃ ತರುಘಾತಾಂಕಿತಾನನಃ ।
ಪಾತಯನ್ಸಗವಾಂ ಗರ್ಭಾನ್ ದೈತ್ಯೋ ವೃಷಭರೂಪಧೃತ್ ॥ ೫ ॥

ಸೂದಯಂಸ್ತಾಪಸಾನುಗ್ರೋ ವನಾನ್ಯಟತಿ ಯಸ್ಸದಾ ॥ ೬ ॥

ತತಸ್ತಮತಿಘೋರಾಕ್ಷಮವೇಕ್ಷ್ಯಾತಿ ಭಯಾತುರಃ ।
ಗೋಪಾಗೋಪಸ್ತ್ರಿಯಶ್ಚೈವ ಕೃಷ್ಣಕೃಷ್ಣೇತಿ ಚುಕ್ರುಶುಃ ॥ ೭ ॥

ಸಿಂಹನಾದಂ ತತಶ್ಚಕ್ರೇ ತಲಶಬ್ದಂ ಚ ಕೇಶವಃ ।
ತಚ್ಛಬ್ದಶ್ರವಣಾಚ್ಚಾಸೌ ದಾಮೋದರಮುಪಾಯಯೌ ॥ ೮ ॥

ಅಗ್ರನ್ಯಸ್ತವಿಷಾಣಾಗ್ರಃ ಕೃಷ್ಣಕುಕ್ಷಿಕೃತೇಕ್ಷಣಃ ।
ಅಭ್ಯಧಾವತ ದುಷ್ಟಾತ್ಮಾ ಕೃಷ್ಣಂ ವೃಷಭದಾನವಃ ॥ ೯ ॥

ಲಗಳಿಂದ ಬಲದ ಪೃಷ್ಠಭಾಗಗಳಿಂದ ಗೋವುಗಳಿಗೆ ಅಸಹ್ಯನನ್ನುಂಟುಮಾಡುತ್ತ ಉದ್ಧವಾದ ಶಕ್ತಿಗೆಯೂ ದಪ್ಪವಾದ ಮುಖವೂ ಉಳ್ಳವನಾಗಿ ಮರಗಳಿಗೆ ಮೈಯನ್ನು ತಿಕ್ಕಿದುದರಿಂದ ಗಾಯದ ಗುರುತುಳ್ಳವನಾಗಿ ತನ್ನ ಕೂಗಿನಿಂದ ಗೋವುಗಳ ಗರ್ಭ ಪಾತವಾಗುವಂತೆ ಮಾಡುತ್ತ ಬಂದನು.

೬-೧೦. ಆ ರಾಕ್ಷಸನು ಅತಿಕ್ರೂರನಾಗಿ ತಪಸ್ವಿಗಳನ್ನೆಲ್ಲ ನಾಶಮಾಡುತ್ತ ಕಾಡಿನಲ್ಲಿ ತಿರುಗುತ್ತಿದ್ದನು. ಭಯಂಕರಾಕಾರದ ಆ ರಾಕ್ಷಸನನ್ನು ನೋಡಿ ಗೋಪಿಯರು ಭಯಪಟ್ಟು ‘ಕೃಷ್ಣಾ! ಕೃಷ್ಣಾ!’ ಎಂದು ಕೂಗಿಕೊಂಡರು. ಕೃಷ್ಣನು ಸಿಂಹನಾದವನ್ನು ಮಾಡುತ್ತ ಕೈಚಪ್ಪಾಳೆಯನ್ನು ಹೊಡೆದನು. ಈ ಧ್ವನಿಯನ್ನು ಕೇಳಿ ಅವನು ಕೃಷ್ಣನ ಸಮೀಪಕ್ಕೆ ಬಂದನು. ಆ ಎತ್ತಿನ ಆಕಾರದ ದಾನವನು ಕೊಂಬುಗಳ ತುದಿಯನ್ನು ಮುಂದಕ್ಕೆ ಚಾಚಿ ಕೃಷ್ಣನ ಹೊಕ್ಕುಳನ್ನು ನೋಡುತ್ತ

ಆಯೊಂತಂ ದೈತ್ಯವೃಷಭಂ ದೃಷ್ಟ್ವಾ ಕೃಷ್ಣೋ ಮಹಾಬಲಃ ।
ನ ಚಚಾಲ ತದಾ ಸ್ಥಾನಾದವಜ್ಞಾಸ್ಥಿತಲೀಲಯಾ ॥ ೧೦ ॥

ಆಸನ್ನಂ ಚೈವ ಜಗ್ರಾಹ ಗ್ರಾಹವನ್ಮಧುಸೂದನಃ ।
ಜಘಾನ ಜಾನುನಾ ಕುಕ್ಷೌ ವಿಷಾಣಗ್ರಹಣಾಚಲಂ ॥ ೧೧ ॥

ತಸ್ಯ ದರ್ಪಬಲಂ ಭಂಕ್ತ್ವಾ ಗೃಹೀತಸ್ಯ ವಿಷಾಣಯೋಃ ।
ಅಪೀಡಯದರಿಷ್ಟಸ್ಯ ಕಂಠಂ ಸ್ಲಿನ್ನಮಿವಾಂಬರಂ ॥ ೧೨ ॥

ಉತ್ಪಾಟ್ಯೈಕ ಶೃಂಗಮೇಕಂ ತು ತೇನೈವಾತಾಡಯತ್ತತಃ ।
ಮಮಾರ ಸ ಮಹಾದೈತ್ಯೋ ಮುಖಾಚ್ಛೋಣಿತಮುದ್ವಮನ್ ॥ ೧೩ ॥

ಓಡಿ ಬಂದನು. ಹಾಗೆ ಬರುತ್ತಿರುವವನನ್ನು ಕಂಡು ಬಲಶಾಲಿಯಾದ ಕೃಷ್ಣನು ಅಲಕ್ಷ್ಯದಿಂದ ಆ ಸ್ಥಳವನ್ನು ಬಿಟ್ಟು ಕದಲಲಿಲ್ಲ.

೧೧–೧೩. ಸಮೀಪಕ್ಕೆ ಬಂದ ಅವನ ಕೊಂಬುಗಳನ್ನ ಕೃಷ್ಣನು ಹಿಡಿದು ಚಲಿಸದಂತೆ ಮಾಡಿ ತನ್ನ ಮಂಡಿಯಿಂದ ಅವನ ಹೊಟ್ಟೆಗೆ ಹೊಡೆದನು. ಹೀಗೆ ಅವನ ದರ್ಪವನ್ನೂ ಬಲವನ್ನೂ ಮುರಿದು ಕೊಂಬುಗಳನ್ನು ಹಿಡಿದುಕೊಂಡು ಒದ್ದೆಯ ಬಟ್ಟೆಯನ್ನು ಹಿಂಡುವಂತೆ ಆ ಅರಿಷ್ಟನ ಕುತ್ತಿಗೆಯನ್ನು ಹಿಂಡಿದನು, ಬಳಿಕ ಒಂದು ಕೊಂಬನ್ನು ಮುರಿದು ಅದರಿಂದಲೇ ಅವನನ್ನು ಹೊಡೆದನು. ಆ ಕ್ಷಣದ ಲ್ಲಿಯೇ ಆ ದೈತ್ಯನು ಬಾಯಿಯಿಂದ ರಕ್ತವನ್ನು ಕಾರುತ್ತ ಸತ್ತುಹೋದನು.

ತುಷ್ಟುವುರ್ನಿಹತೇ ತಸ್ಮಿನ್ ದೈತ್ಯೇ ಗೋಪಾ ಜನಾರ್ದನಂ ।
ಜಂಭೇ ಹತೇ ಸಹಸ್ರಾಕ್ಷಂ ಪುರಾ ದೇವಗಣಾ ಯಥಾ ॥ ೧೪ ॥

ಇತಿ ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ ಚತುರ್ದಶೋಽಧ್ಯಾಯಃ

---

೧೪. ಕೃಷ್ಣನು ಆ ದೈತ್ಯನನ್ನು ಕೊಂದಮೇಲೆ ಗೋಪರು ಅವನನ್ನು ಹಿಂದೆ ಜಂಭಾಸುರನನ್ನು ಕೊಂದಾಗ ದೇವತೆಗಳು ದೇವೆಂದ್ರನನ್ನು ಹೊಗಳಿದಂತೆ ಹೊಗಳಿದರು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ

ಹದಿನಾಲ್ಕನೆಯ ಅಧ್ಯಾಯವು ಮುಗಿದುದು,

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಪಂಚದಶೋಽಧ್ಯಾಯಃ

॥ ಶ್ರೀ ಪರಾಶರಃ ॥

ಕೇಶಿದ್ಯತಿ ಹತೇಽರಿಷ್ಟೇ ಧೇನುಕೇ ವಿನಿಪಾತಿತೇ ।
ಪ್ರಲಂಭೇ ನಿಧನಂ ನೀತೇ ಧೃತೇ ಗೋವರ್ಧನಾಚಲೇ ॥ ೧ ॥

ದಮಿತೇ ಕಾಳಿಯೇ ನಾಗೇ ಭಗ್ನೇ ತುಂಗದ್ರುಮದ್ವಯೇ ।
ಹತಾಯಾಂ ಪೂತನಾಯಾಂ ಚ ಶಕಟೇ ಪರಿವರ್ತಿತೇ ॥ ೨ ॥

ಕಂಸಾಯ ನಾರದಃ ಸ್ಪಾಹ ಯಥಾವೃತ್ತಮನುಕ್ರಮಾತ್ ।
ಯಶೋದಾ ದೇವಕೀಗರ್ಭಪರಿವರ್ತಾದ್ಯಶೇಷತಃ ॥ ೩ ॥

ಹದಿನೈದನೆಯ ಅಧ್ಯಾಯವು

೧-೩. ಎತ್ತಿನ ಆಕಾರದ ಅರಿಷ್ಟನೂ ಧೇನುಕನೂ ಪ್ರಲಂಬನೂ ನಾಶವಾದ ಮೇಲೆ ಗೋವರ್ಧನಪರ್ವತವನ್ನೆತ್ತಿದುದು, ಕಾಳಿಯನಾಗನನ್ನು ನಿಗ್ರಹಿಸಿದುದು, ಯಮಳಾರ್ಜುನವನ್ನು ಮುರಿದುದು. ಪೂತನಾ ಶಕಟರ ನಾಶ ಇವುಗಳೆಲ್ಲವನ್ನೂ ಕ್ರಮವಾಗಿ ನಾರದನು ಕಂಸನಿಗೆ ಹೇಳಿದುದಲ್ಲದೆ ಯಶೋದಾದೇವಕಿಯರ ಗರ್ಭದಲ್ಲಿ ಹುಟ್ಟಿದ ಮಕ್ಕಳ ಸ್ಥಾನಪಲ್ಲಟವೇ ಮುಂತಾದ ಎಲ್ಲ ವಿಷಯಗಳನ್ನೂ ವಿಸ್ತಾರವಾಗಿ ಹೇಳಿದನು.

ಶ್ರುತ್ವಾ ತತ್ಸಕಲಂ ಕಂಸೋ ನಾರದಾದ್ದೇವದರ್ಶನಾತ್ ।
ವಸುದೇವಂ ಪ್ರತಿ ತದಾ ಕೋಪಂ ಚಕ್ರೇ ಸ ದುರ್ಮತಿಃ ॥ ೪ ॥

ಸೋಽತಿಕೋಪಾದುಪಾಲಭ್ಯ ಸರ್ವಯಾದವಸಂಸದಿ ।
ಜಗರ್ಹ ಯಾದವಾಂಶ್ಚೈವ ಕಾರ್ಯಂ ಚೈತದಚಿಂತಯತ್ ॥ ೫ ॥

ಯಾವನ್ನ ಬಲಮಾರೂಢೌ ರಾಮಕೃಷ್ಣೌ ಸುಬಾಲಕೌ ।
ತಾವದೇವ ಮಯಾ ವಧ್ಯಾವಸಾ ಧ್ಯೌ ರೂಢಯೌವನೌ ॥ ೬ ॥

ಚಾಣೂರೋಽತ್ರ ಮಹಾವೀರ್ಯೋ ಮುಷ್ಟಿಕಶ್ಚ ಮಹಾಬಲಃ ।
ಏತಾಭ್ಯಾಂ ಮಲ್ಲಯುದ್ಧೇನ ಮಾರಯಿಷ್ಯಾಮಿ ದುರ್ಮತೀ ॥ ೭ ॥

ಧನುರ್ಮಹಮಹಾಯೋಗವ್ಯಾಜೇನಾನೀಯತೌ ವ್ರಜಾತ್ ।
ತಥಾ ತಥಾ ಯತಿಷ್ಯಾಮಿ ಯಾಸ್ಯೇತೇ ಸಂಕ್ಷಯಂ ಯಥಾ ॥ ೮ ॥

೪-೫, ದುಷ್ಟನಾದ ಕಂಸನು ದೇವತೆಗಳ ಸಂಬಂಧವಾದ ಸಕಲ ಜ್ಞಾನಗಳುಳ್ಳ ನಾರದನಿಂದ ಇವುಗಳೆಲ್ಲವನ್ನೂ ಕೇಳಿ ವಸುದೇವನ ಮೇಲೆ ವಿಶೇಷನಾಗಿ ಕೋಪವನ್ನು ಮಾಡಿದನು. ಮತ್ತು ಯಾದವರ ಸಭೆಯಲ್ಲಿ ಅವನನ್ನು ನಿಂದಿಸಿ ಯಾದವರನ್ನೂ ನಿಂದಿಸಿ ಮುಂದಿನ ಕಾರ್ಯವೇನೆಂದು ಯೋಚಿಸಿದನು. ಎಂತೆಂದರೆ:

೬-೧೧. ರಾಮಕೃಷ್ಣರು ಇನ್ನೂ ಬಾಲಕರಾಗಿರುವರು, ಅವರು ಬಲಿಷ್ಠರಾಗುವುದಕ್ಕಿಂತ ಮುಂಚಿತವಾಗಿಯೇ ಅವರನ್ನು ನಾನು ಕೊಲ್ಲಬೇಕು. ಪ್ರಾಯದವರಾದರೆ ಅವರನ್ನು ಕೊಲ್ಲುವುದು, ಅಸಾಧ್ಯವಾಗುವುದು ಚಾಣೂರ ಮುಷ್ಟಿಕರೆಂಬ ಮಹಾಬಲಶಾಲಿಗಳಾದ ಜಟ್ಟಿಗಳಿರುವರು ಇವರಿಂದ ಮಲ್ಲಯುದ್ಧವನ್ನು ಮಾಡಿಸಿ ದುಷ್ಟರಾದ ಅವರನ್ನು ಕೊಲ್ಲಿಸುವೆನು. ಬಿಲ್ಲಿನ ಹಬ್ಬವೆಂಬ ಒಂದು ದೊಡ್ಡ ಹಬ್ಬದ ನೆವದಿಂದ ಅವರಿಬ್ಬರನ್ನೂ ಗೋಕುಲದಿಂದ ಕರೆಸಿ ಅವರನ್ನು ನಾಶಗೊಳಿಸುವ ಪ್ರಯತ್ನವನ್ನು ಮಾಡುವೆನು. ಅವರಿಬ್ಬರನ್ನೂ ಗೋಕುಲದಿಂದ ಕರೆದುಕೊಂಡು ಬರಲು

ಶ್ವಫಲ್ಕತನಯಂ ಶೂರಮಕ್ರೂರಂ ಯದುಪುಂಗವಂ ।
ತಯೋರಾನಯನಾರ್ಥಾಯ ಪ್ರೇಷಯಿಷ್ಯಾಮಿ ಗೋಕುಲಂ ॥ ೯ ॥

ಬೃಂದಾವನಚರಂ ಘೋರಮಾದೇಕ್ಷ್ಯಾಮಿ ಚ ಕೇಶಿನಂ ।
ತತ್ಕೃತಾಸಾವತಿಬಲಸ್ತಾವುಭೌ ಘಾತಯಿಷ್ಯತಿ ॥ ೧೦ ॥

ಗಜಃ ಕುವಲಯಾಪೀಡೋ ಮತ್ಸಕಾಶಮಿಹಾಗತೌ ।
ಘಾತಯಿಷ್ಯತಿ ವಾ ಗೋಪೌ ವಸುದೇವಸುತಾವುಭೌ ॥ ೧೧ ॥

॥ ಶ್ರೀ ಪರಾಶರಃ ॥

ಇತ್ಯಾಲೋಚ್ಯ ಸದುಷ್ಟಾತ್ಮಾ ಕಂಸೋ ರಾಮಜನಾರ್ದನೌ ।
ಹಂತುಂ ಕೃತಮತಿರ್ವೀರಾವಕ್ರೂರಂ ವಾಕ್ಯಮಬ್ರವೀತ್ ॥ ೧೨ ॥

॥ ಕಂಸಃ ॥

ಭೋ ಭೋ ದಾನಪತೇ ವಾಕ್ಯಂ ಕ್ರಿಯತಾಂ ಪ್ರೀತಯೇ ಮಮ ।
ಇತಃ ಸ್ಯಂದನಮಾರುಹ್ಯ ಗಮ್ಯತಾನಂದಗೋಕುಲಂ ॥ ೧೩ ॥

ಶ್ವಫಲ್ಕನ ಮಗನಾದ ಅಕ್ರೂರನೆಂಬ ಶೂರನಾದ ಯದುಶ್ರೇಷ್ಠನನ್ನು ಕಳುಹಿಸುವೆನು. ಬೃಂದಾವನದಲ್ಲಿ ಭಯಂಕರನಾದ ಕೇಶಿಯೆಂಬ ರಾಕ್ಷಸನು ಸಂಚರಿಸುತ್ತಿರುವನು ಅವನಿಗೆ ಅಪ್ಪಣೆ ಮಾಡಿದರೆ ಮಹಾಬಲಶಾಲಿಯಾದ ಅವನು ಅವರಿಬ್ಬರನ್ನೂ ಅಲ್ಲಿಯೇ ಕೊಲ್ಲುವನು, ಅವರಿಬ್ಬರೂ ನನ್ನ ಸಮೀಪಕ್ಕೆ ಬಂದರೆ ಕುವಲಯಾಪೀಡನೆಂಬ ಆನೆಯು ವಸುದೇವನ ಮಕ್ಕಳಾದ ಅವರನ್ನು ಕೊಲ್ಲುವುದು.

೧೩–೧೬. ದುಷ್ಟನಾದ ಕಂಸನು ಹೀಗೆಂದು ಆಲೋಚಿಸಿ ರಾಮಕೃಷ್ಣರನ್ನು ಕೊಲ್ಲಬೇಕೆಂದು ಮನಸ್ಸಿನಲ್ಲಿ ನಿಶ್ಚಯಿಸಿ ಅಕ್ರೂರನನ್ನು ಕುರಿತು ಓ ದಾನಪತಿಯಾದ ಅಕ್ರೂರನೇ! ನನ್ನ ಸಂತೋಷಕ್ಕಾಗಿ ನಾನು ಹೇಳಿದ ಕೆಲಸವನ್ನು ಮಾಡು ನೀನು

ವಸುದೇವಸುತೌ ತತ್ರ ವಿಷ್ಣೋರಂಶಸಮುದ್ಭವೌ ।
ನಾಶಾಯ ಕಿಲ ಸಂಭೂತೌ ಮಮ ದುಷ್ಟೌ ಪ್ರವರ್ಧತಃ ॥ ೧೪ ॥

ಧನುರ್ಮಹೋ ಮಮಾಪ್ಯತ್ರ ಚತುರ್ದಶ್ಯಾಂ ಭವಿಷ್ಯತಿ ।
ಆನೇಯೌ ಭವತಾ ಗತ್ವಾ ಮಲ್ಲಯುದ್ಧಾಯ ತತ್ರ ತೌ ॥ ೧೫ ॥

ಚಾಣೂರಮುಷ್ಟಿಕೌ ಮಲ್ಲೌ ನಿಯುದ್ಧಕುಶಲೌ ಮಮ ।
ತಾಭ್ಯಾಂ ಸಹಾನಯೋಯರ್ುದ್ಧಂ ಸರ್ವಲೋಕೋಽತ್ರ ಪಶ್ಯತು ॥ ೧೬ ॥

ಗಜಃ ಕುವಲಯಾಪೀಡೋ ಮಹಾಮಾತ್ರಪ್ರಚೋದಿತಃ ।
ಸ ವಾ ಹನಿಷ್ಯತೇ ಪಾಪೌ ವಸುದೇವಾತ್ಮಜೌ ಶಿಶೂ ॥ ೧೭ ॥

ತೌ ಹತ್ವಾ ವಸುದೇವಂ ಚ ನಂದಗೋಪಂ ಚ ದುರ್ಮತಿಂ ।
ಹನಿಷ್ಯೇ ಪಿತರಂ ಚೈನಮುಗ್ರಸೇನಂ ಸುದುರ್ಮತಿಂ ॥ ೧೮ ॥

ರಥವನ್ನೇರಿ ಇಲ್ಲಿಂದ ಹೊರಟು ನಂದಗೋಕುಲಕ್ಕೆ ಹೋಗು, ಅಲ್ಲಿ ವಿಷ್ಣುವಿನ ಅಂಶದಿಂದ ರಾಮಕೃಷ್ಣರೆಂಬಿಬ್ಬರು ವಸುದೇವನ ಮಕ್ಕಳಾಗಿ ನನ್ನನ್ನು ಕೊಲ್ಲುವುದಕ್ಕಾಗಿ ಹುಟ್ಟಿ ದುಷ್ಟರಾಗಿ ಬೆಳೆಯುತ್ತಿರುವರಂತೆ. ಇಲ್ಲಿ ಚತುರ್ದಶಿಯ ದಿನ ಬಿಲ್ಲಿನ ಹಬ್ಬವಾಗುವುದು, ನೀನು ಅಲ್ಲಿಗೆ ಹೋಗಿ ಜಟ್ಟಿಯ ಕಾಳಗಕ್ಕಾಗಿ ಅವರಿಬ್ಬರನ್ನೂ ಕರೆದು ಕೊಂಡು ಬರಬೇಕು. ಚಾಣೂರ, ಮುಷ್ಟಿಕರೆಂಬ ಜಟ್ಟಿಗಳು ಕುಸ್ತಿಯನ್ನು ಮಾಡುವುದರಲ್ಲಿ ಕುಶಲರು, ಅವರಿಬ್ಬರೊಡನೆ ಇವರಿಬ್ಬರೂ ಮಾಡುವ ಕುಸ್ತಿಯನ್ನು ಎಲ್ಲ ಜನರೂ ನೋಡಲಿ.

೧೨-೨೨. ಮಾವಟಿಗನು ನಡೆಸುವ ಕುವಲಯಾಪೀಡನೆಂಬ ಆನೆಯಾದರೂ ಬಾಲಕರಾದ ಈ ಇಬ್ಬರು ದುಷ್ಟರನ್ನೂ ಕೊಲ್ಲುವುದು. ಅವರಿಬ್ಬರನ್ನೂ ಕೊಂದಮೇಲೆ ವಸುದೇವನನ್ನೂ ನಂದಗೋಪನನ್ನೂ ನನ್ನ ತಂದೆಯಾದ ಉಗ್ರಸೇನನನ್ನೂ ಕೊಲ್ಲುವೆನು. ಆಮೇಲೆ ನನ್ನನ್ನು ಕೊಲ್ಲಬೇಕೆಂದಿರುವ ಎಲ್ಲ ಗೊಲ್ಲರ ಗೋವುಗಳನ್ನೂ ಧನ

ತತಸ್ಸಮಸ್ತಗೋಪಾನಾಂ ಗೋಧನಾನ್ಯಖಿಲಾನ್ಯಹಂ ।
ವಿತ್ತಂ ಚಾಪಹರಿಷ್ಯಾಮಿ ದುಷ್ಟಾನಾಂ ಮದ್ವಧೈಷಿಣಾಂ ॥ ೮೯ ॥

ತ್ವಾಮ್ಯತೇ ಯಾದವಾಶ್ಚೈತೇ ದ್ವಿಷೋ ದಾನಪತೇ ಮಮ ।
ಏತೇಷಾಂ ಚ ವಧಾಯಾಹಂ ಯತಿಷ್ಯೇನುಕ್ರಮಾತ್ತತಃ ॥ ೯೦ ॥

ತದಾ ನಿಷ್ಕಂಟಕಂ ಸರ್ವಂ ರಾಜ್ಯಮೇತದಯಾದವಂ ।
ಪ್ರಕಾಧಿಷ್ಯೇ ತ್ವಯೂ ತಸ್ಮಾನ್ನತ್ಪ್ರೀತ್ಯೈ ವೀರ ಗಮ್ಯತಾಂ ॥ ೯೧ ॥

ಯಥಾ ಚ ಮಾಹಿಷಂ ಸರ್ಪಿರ್ದಧಿಕ್ಷೀರಂ ತಥಾ ಬಹು ।
ಗೋಪಾಸ್ಸಮಾನಯಂತ್ವಾಶು ತಥಾ ವಾಚ್ಯಾಸ್ತ್ವಯಾ ಚ ತೇ ॥ ೯೨ ॥

॥ ಶ್ರೀ ಪರಾಶರಃ ॥

ಇತ್ಯಾಜ್ಞಪ್ತಸ್ತಥಾಕ್ರೂರೋ ಮಹಾಭಾಗವತೋ ದ್ವಿಜ ।
ಪ್ರತಿಮಾನಭವತ್ಕೃಷ್ಣಂ ಶ್ವೋ ದ್ರಕ್ಷ್ಯಾಮೀತಿ ಸಹರಃ ॥ ೯೩ ॥

ವನ್ನೂ ಕಿತ್ತುಕೊಳ್ಳುವೆನು. ದಾನಪತಿಯೇ ನಿನ್ನನ್ನು ಬಿಟ್ಟು ಮಿಕ್ಕ ಯಾದವರೆಲ್ಲರೂ ನನ್ನ ಶತ್ರುಗಳು. ಕ್ರಮವಾಗಿ ಅವರನ್ನೂ ಕೊಲ್ಲುವುದಕ್ಕೆ ಪ್ರಯತ್ನವಾಡುವೆನು, ಆಗ ಈ ರಾಜ್ಯದಲ್ಲೆಲ್ಲ ಯಾದವರಿಲ್ಲದುದರಿಂದ ಶತ್ರುಗಳಿಲ್ಲದ ರಾಜ್ಯವನ್ನು ನಿನ್ನೊಡನೆ ಆಳುವೆನು ನನ್ನ ಹಿತಕ್ಕಾಗಿ ಶೂರನಾದ ನೀನು ಹೋಗಬೇಕು. ಗೊಲ್ಲರು ವಿಶೇಷವಾಗಿ ಎಮ್ಮೆಯ ಹಾಲು, ಮೊಸರು, ತುಪ್ಪ ಇವುಗಳನ್ನು ತರಬೇಕೆಂದು ನೀನು ಅವರಿಗೆ ಹೇಳಬೇಕು.

೨೩-೨೪. ಹೀಗೆಂದು ಕಂಸನು ಅಕ್ರೂರನಿಗೆ ಅಪ್ಪಣೆ ಮಾಡುತ್ತಲು ಮಹಾ ಭಾಗವದ್ಭಕ್ತನಾದ ಅಕ್ರೂರನು ನಾಳೆಯೇ ಕೃಷ್ಣನನ್ನು ನೋಡುವೆನೆಂದು ಸಂತೋಷ

ತಥೇತ್ಯುಕ್ತ್ವಾ ಚ ರಾಜಾನಂ ರಥಮಾರುಹ್ಯ ಶೋಭನಂ ।
ನಿಶ್ಚಕ್ರಾಮ ತತಃ ಪುರ್ಯಾ ಮಧುರಾಯಾ ಮಧುಪ್ರಿಯಃ ॥ ೨೪ ॥

ಇತಿ ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ ಪಂಚದಶೋಽಧ್ಯಾಯಃ

ದಿಂದ ಆ ಕ್ಷಣದಲ್ಲಿಯೇ ರಾಜನಾದ ಕಂಸನಿಗೆ ಹಾಗೆಯೇ ಆಗಲೆಂದು ಹೇಳಿ ಮಂಗಳ ಕರವಾದ ರಥವನ್ನೇರಿ ಮಧುರಾಪಟ್ಟಣದಿಂದ ಹೊರಟನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶವಲ್ಲಿ

ಹದಿನೈದನೆಯ ಅಧ್ಯಾಯವು ಮುಗಿದುದು

ಶ್ರೀಃ

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಷೋಡಶೋಽಧ್ಯಾಯಃ

॥ ಶ್ರೀ ಪರಾಶರಃ ॥

ಕೇಶೀ ಚಾಪಿ ಬಲೋದಗ್ರಃ ಕಂಸದೂತಪ್ರಚೋದಿತಃ ।
ಕೃಷ್ಣಸ್ಯ ನಿಧನಾಕಾಂಕ್ಷೀ ಬೃಂದಾವನಮುಪಾಗಮತ್ ॥ ೧ ॥

ಸಖುರೇಷ್ಟಶಭೂಪೃಷ್ಠಸ್ಫಟಾಕ್ಷೇಪಧುತಾಂಬುದಃ ।
ದ್ರುತವಿಕ್ರಾಂತ ಚಂದ್ರಾರ್ಕ ಮಾರ್ಗೋ ಗೋಪಾನುಪಾದ್ರವತ್ ॥ ೨ ॥

ತಸ್ಯ ಹೇಷಿತಶಬ್ದೇನ ಗೋಪಾಲಾ ದೈತ್ಯವಾಜಿನಃ ।
ಗೋಪ್ಯಶ್ಚ ಭಯಸಂವಿಗ್ನಾಃ ಗೋವಿಂದಂ ಶರಣಂ ಯಯುಃ ॥ ೩ ॥

ಹದಿನಾರನೆಯ ಅಧ್ಯಾಯವು

೧–೩ ಕಂಸನ ದೂತನ ಪ್ರೇರಣೆಯಿಂದ ಕೇಶಿಯೆಂಬ ದೈತ್ಯನು ಕೃಷ್ಣನನ್ನು ಕೊಲ್ಲಬೇಕೆಂದು ಬೃಂದಾವನಕ್ಕೆ ಬಂದನು. ಕುದುರೆಯ ಆಕಾರದ ಆ ದೈತ್ಯನು ಗೊರಸುಗಳಿಂದ ಭೂಮಿಯನ್ನು ಹಳ್ಳಮಾಡುತ್ತ ಕತ್ತಿನ ಕೂದಲುಗಳಿಂದ ಮೋಡವನ್ನು ತಳ್ಳುತ್ತ ತನ್ನ ವೇಗದಿಂದ ಸೂರ್ಯ ಚಂದ್ರರ ಮಾರ್ಗವನ್ನಾಕ್ರಮಿಸುತ್ತ ಗೊಲ್ಲರಿಗೆ ತೊಂದರೆಯನ್ನುಂಟುಮಾಡಿದನು. ರಾಕ್ಷಸನಾದ ಆ ಕುದುರೆಯ ಶಬ್ದದಿಂದ ಗೊಲ್ಲರೂ ಗೋಪಿಯರೂ ಭಯಪಡುತ್ತ ಗೋವಿಂದನನ್ನು ಮರೆಹೊಕ್ಕರು.

ತ್ರಾಹಿ ತ್ರಾಹೀತಿ ಗೋವಿಂದಃ ಶ್ರುತ್ವಾ ತೇಷಾಂ ತತೋ ವಚಃ ।
ಸತೋಯಜಲದಧ್ವಾನ ಗಂಭೀರಮಿದಮುಕ್ತವಾನ್ ॥ ೪ ॥

ಅಲಂ ತ್ರಾಸೇನ ಗೋಪಾಲಾಃ ಕೇಶಿನಃ ಕಿಂ ಭಯಾತುರೈಃ ।
ಭವದ್ಭಿರ್ಗೋಪಜಾತೀಯೈಃ ವೀರವೀರ್ಯಂ ವಿಲೋಪ್ಯತೇ ॥ ೫ ॥

ಕಿಮನೇನಾಲ್ಪಸಾರೇಣ ಹೇಷಿತಾಟೋಪಕಾರಿಣಾ ।
ದೈತೇಯ ಬಲವಾಹ್ಯೇನ ವಲ್ಗಾ ದುಷ್ಟವಾಜಿನಾ ॥ ೬ ॥

ಏಹ್ಯೇಹಿ ದುಷ್ಟಕೃಷ್ಣೋಽಹಂ ಪೂಷ್ಣಸ್ತ್ವಿವಿನಾಕಧೃತ್ ।
ಪಾತಯಿಷ್ಯಾಮಿ ದಶನಾನ್ ವದನಾದಖಿಲಾಂಸ್ತವ ॥ ೭ ॥

ಇತ್ಯುಕ್ತ್ವಾಸ್ಫೋಟ್ಯ ಗೋವಿಂದಃ ಕೇಶಿನಸ್ಸಂಮುಖಂ ಯಯೌ ।
ವಿವೃತಾಸ್ಯಶ್ಚ ಸೋಽಭ್ಯೇನಂ ದೈತೇಯಾಶ್ಚ ಉಪಾದ್ರವತ್ ॥ ೮ ॥

೪-೮. ಗೋವಿಂದನೇ ಕಾಪಾಡು, ಕಾಪಾಡು, ಎಂದು ಹೇಳುತ್ತಿರುವ ಅವರ ಮಾತನ್ನು ಕೇಳಿ ಕೃಷ್ಣನು ಮೇಘದಂತೆ ಗಂಭೀರ ಧ್ವನಿಯಿಂದ ಎಲೈ ಗೊಲ್ಲರೇ ಕೇಶಿ ಎಂಬ ರಾಕ್ಷಸನಿಗೆ ಭಯಪಡಬೇಡಿರಿ. ಗೊಲ್ಲಕ ಜಾತಿಗೆ ಸೇರಿದ ನಿಮ್ಮಿಂದ ಶೂರರ ಶೌರ್ಯವು ನಾಶವಾಗುವುದು. ಬಲಹೀನವಾದ ಈ ದುಷ್ಟಕುದುರೆಯು ಕುಣಿಯುತ್ತ ಕೆನೆಯುತ್ತಿದ್ದರೆ ನೀವೇಕೆ ಭಯಪಡುತ್ತೀರಿ, ಅದು ನಿಮ್ಮನ್ನೇನು ಮಾಡುವುದು ಎಂದು ಹೇಳಿ ಎಲೈ ದುಷ್ಟನೇ ಬಾ, ಬಾ, ನಾನು ಕೃಷ್ಣನು ಈಶ್ವರನು ಪೂಷನೆಂಬ ಸೂರ್ಯನ ಹಲ್ಲುಗಳನ್ನು ಉದುರಿಸಿದಂತೆ ನಿನ್ನ ಹಲ್ಲುಗಳನ್ನೆಲ್ಲ ಉದುರಿಸುವೆನು. ಎಂದು ಗೋವಿಂದನು ಭುಜವನ್ನು ತಟ್ಟಿ ಶಬ್ದಮಾಡುತ್ತ ಕೇಶಿಯ ಎದುರಿಗೆ ಹೋದನು. ಕುದುರೆಯ ರೂಪನಾದ ಕೇಶಿಯು ಬಾಯನ್ನು ಬಿಟ್ಟು ಕೃಷ್ಣನನ್ನು ಕಚ್ಚುವುದಕ್ಕೆ ಹೋದನು.

ಬಾಹುಮಾಭೋಗಿನಂ ಕೃತ್ವಾ ಮುಖೇ ತಸ್ಯ ಜನಾರ್ದನಃ ।
ಪ್ರವೇಶಯಾಮಾಸ ತದಾ ಕೇಶಿನೋ ದುಷ್ಟವಾಜಿನಃ ॥ ೯ ॥

ಕೇಶಿನೋ ವದನಂ ತೇನ ವಿಶತಾ ಕೃಷ್ಣಬಾಹುನಾ ।
ಶಾತಿತಾ ದಶನಾಃ ಹೇತುಸ್ಸಿತಾಭ್ರಾವಯವಾ ಇವ ॥ ೧೦ ॥

ಕೃಷ್ಣಸ್ಯ ವವೃಧೇ ಬಾಹುಃ ಕೇಶಿದೇಹಗತೋ ದ್ವಿಜ ।
ವಿನಾಶಾಯ ಯಥಾ ವ್ಯಾಧಿರಾಸಂಭೂತೇರುಪೇಕ್ಷಿತಃ ॥ ೧೧ ॥

ವಿಸಾಟತೋಷ್ಠೋ ಬಹುಳಂ ಸಫೇನಂ ರುಧಿರಂ ವಮನ್ ।
ಸೋಕ್ಷಿಣೀ ವಿವೃತೇ ಚಕ್ರೇ ವಿಶಿಷ್ಟೇ ಮುಕ್ತಬಂಧನೇ ॥ ೧೨ ॥

ಜಘಾನ ಧರಣೀಂ ಪಾದೈಃ ಶಕೃನ್ಮೂತ್ರಂ ಸಮುತ್ಸೃಜನ್ ।
ಸ್ವೇದಾರ್ದ್ರಗಾತ್ರಕ್ಷ್ಯಾಂಶಶ್ಚ ನಿರ್ಯನ್ನಸ್ಸೋಽಭವತ್ತದಾ ॥ ೧೩ ॥

ವ್ಯಾದಿತಾಸ್ಯ ಮಹಾರಂಧ್ರಸ್ಸೋಽಸುರಃ ಕೃಷ್ಣಬಾಹುನಾ ।
ನಿಪಪಾತ ದ್ವಿಧಾಭೂತೋ ವೈದ್ಯುತೇನ ಯಥಾ ದ್ರುಮಃ ॥ ೧೪ ॥

೯–೧೪. ಕೃಷ್ಣನು ತನ್ನ ಉದ್ದವಾದ ತೋಳನ್ನು ಆ ಕುದುರೆಯ ಬಾಯಿಯೊಳಕ್ಕೆ ಹಾಕಿ ಅದರ ಹಲ್ಲುಗಳನ್ನು ಉದುರಿಸಿದನು. ಬಳಿಕ ಅವನ ತೋಳು ಹೆಚ್ಚುವವರೆಗೂ ಉದಾಸೀನ ಮಾಡಿದ ರೋಗವು ನಾಶಕ್ಕೆ ಕಾರಣವಾಗುವಂತೆ ಉದ್ದವಾಗಿ ಬೆಳೆಯಿತು. ಇದರಿಂದ ಕುದುರೆಯ ತುಟಿಯು ಒಡೆದು ನೊರೆಯಿಂದ ಕೂಡಿದ ರಕ್ತವನ್ನು ಕಾರುತ್ತ ಕಣ್ಣುಗಳನ್ನು ಬಿಟ್ಟು ಕೀಲುಗಳೆಲ್ಲ ಸಡಿಲವಾಗಲು ಕಾಲುಗಳನ್ನು ನೆಲದ ಮೇಲೆ ಬಡಿಯುತ್ತ ಮಲಮೂತ್ರಗಳನ್ನು ವಿಸರ್ಜಿಸುತ್ತ ಮೈಯೆಲ್ಲ ಬೆವರಿ ಕುದುರೆಯು ಸತ್ತುಬಿದ್ದಿತು. ಕೃಷ್ಣನ ತೋಳಿನಿಂದ ಬಾಯಿಬಿಟ್ಟ ಕುದುರೆಯ ಶರೀರವು ಎರಡು ಭಾಗವಾಗಿ ಬಿದ್ದುದನ್ನು ನೋಡಿದರೆ ಸಿಡಿಲಿನಿಂದ ದೊಡ್ಡಮರವು ಎರಡು ಸೀಳಾಗಿ ಬಿದ್ದಂತೆ ಕಾಣುತ್ತಿದ್ದಿತು.

ದ್ವಿಪಾದೇ ಪೃಷ್ಠಪುಚ್ಛಾರ್ಧೇ ಶ್ರವಣೈಕಾಕ್ಷಿನಾಸಿಕೇ ।
ಕೇಶಿನಸ್ತೇ ದ್ವಿಧಾಭೂತೇ ಶಕಲೇ ದ್ವೇ ವಿರೇಜತುಃ ॥ ೧೫ ॥

ಹತ್ವಾ ತು ಕೇಶಿನಂ ಕೃಷ್ಣೋ ಗೋಪಾಲೈರ್ಮುದಿತೈರ್ವೃತಃ ।
ಅನಾಯಸ್ತತನುಸ್ಸ್ವಸ್ಥೋ ಹಸಂಸ್ತತ್ರೈವ ತಸ್ಥಿವಾನ್ ॥ ೧೬

ತತೋ ಗೋಪ್ಯಶ್ಚ ಗೋಪಾಶ್ಚ ಹತೇ ಕೇಶಿನಿ ವಿಸ್ಮಿತಾಃ ।
ತುಷ್ಟುವುಃ ಪುಂಡರೀಕಾಕ್ಷಮನುರಾಗಮನೋರಮಂ ॥ ೧೭ ॥

ಅಥಾಹಾಂತರ್ಹಿತೋ ವಿಪ್ರ ನಾರದೋ ಜಲದೇ ಸ್ಥಿತಃ ।
ಕೇಶಿನಂ ನಿಹತಂ ದೃಷ್ಟ್ವಾ ಹರ್ಷನಿರ್ಭರಮಾನಸಃ ॥ ೧೮ ॥

ಸಾಧು ಸಾಧು ಜಗನ್ನಾಥ ಲೀಲಯೈವ ಯದಚ್ಯುತ ।
ನಿಹತೋಽಯಂ ತ್ವಯಾ ಕೇಶೀ ಕ್ಲೇಶದಸ್ತ್ರಿದಿವೌಕಸಾಂ ॥ ೧೯

ಯುದ್ಧೋತ್ಸುಕೋಽಹಮತ್ಯರ್ಥಂ ನರವಾಜಿಮಹಾಹವಂ ।
ಅಭೂತಪೂರ್ವಮನ್ಯತ್ರ ದ್ರಷ್ಟುಂ ಸ್ವರ್ಗಾದಿಹಾಗತಃ ॥ ೨೦ ॥

೧೫–೧೮. ಎರಡುಕಾಲುಗಳು, ಒಂದು ಕಣ್ಣು, ಒಂದು ಕಿವಿ, ಒಂದು ಮೂಗು, ಬಾಲದ ಮತ್ತು ಪೃಷ್ಠದಸೀಳಿದ ಅರ್ಧ ಭಾಗದಿಂದ ಕೂಡಿ ಎರಡು ಪಾಲಾದ ಕೇಶಿಯ ಶರೀರವು ಒಂದು ಬಗೆಯಲ್ಲಿ ಶೋಭಿಸುತ್ತಿದ್ದಿತು. ಕೃಷ್ಣನು ಕೇಶಿಯನ್ನು ಕೊಂದು ಸಂತೋಷದಿಂದ ಸುತ್ತಿಕೊಂಡಿರುವ ಗೊಲ್ಲರೊಡನೆ ನಗುತ್ತ ಶರೀರದಲ್ಲಿ ಸ್ವಲ್ಪವೂ ಆಯಾಸವಿಲ್ಲದವನಾಗಿ ಅಲ್ಲಿಯೇ ಇದ್ದನು. ಗೋಪ ಗೋಪಿಯರು ಕೇಶಿಯು ಸತ್ತುದನ್ನು ನೋಡಿ ಆಶ್ಚರ್ಯಪಡುತ್ತ ಪ್ರೀತಿಯಿಂದ ಕೃಷ್ಣನನ್ನು ಮನೋಹರವಾಗಿ ಹೊಗಳಿದರು. ಮೈತ್ರೇಯನೇ! ಆ ಮೇಲೆ ನಾರದನು ಯಾರಿಗೂ ಕಾಣಿಸಿಕೊಳ್ಳದೆ ಮೇಘದ ಮೇಲಿದ್ದುಕೊಂಡು ಕೇಶಿಯು ಸತ್ತುದನ್ನು ಕಂಡು ಅತ್ಯಂತ ಸಂತೋಷದಿಂದ ಕೃಷ್ಣನನ್ನು ಕುರಿತು ಹೇಳಿದನು.

೧೯–೨೪. ಲೋಕಕ್ಕೆ ಸ್ವಾಮಿಯಾದ ಕೃಷ್ಣನೆ! ಒಳ್ಳೆಯ ಕೆಲಸವನ್ನು ಮಾಡಿದೆ ದೇವತೆಗಳಿಗೆ ತೊಂದರೆಯನ್ನುಂಟುಮಾಡುತ್ತಿದ್ದ ಕೇಶಿಯನ್ನು ಆಟವಾಡುವಂತೆ ಸಂಹರಿಸಿದೆ. ಯುದ್ಧವನ್ನು ನೋಡುವುದರಲ್ಲಿ ನನಗೆ ಬಹಳ ಆಸೆಯು

ಕರ್ಮಾಣ್ಯತ್ರಾವತಾರೇ ತೇ ಕೃತಾನಿ ಮಧುಸೂದನ ।
ಯಾನಿ ತೈರ್ವಿಸ್ಮಿತಂ ಚೇತಸ್ತೋಷಮೇತೇನ ಮೇ ಗತಂ ॥ ೨೦ ॥

ತುರಂಗಸ್ಯಾಸ್ಯ ಕೇಶ್ಯೋಽಪಿ ಕೃಷ್ಣ ದೇವಾಶ್ಚ ಬಿಭ್ಯತಿ ।
ಧುತಕೇಸರಜಾಲಸ್ಯ ಹೇಷತೋಽಭ್ರಾವಲೋಕಿನಃ ॥ ೨೨ ॥

ಯಸ್ಮಾತ್ತ್ವಯೈಷ ದುಷ್ಟಾತ್ಮಾ ಹತಃ ಕೇಶೀ ಜನಾರ್ದನ ।
ತಸ್ಮಾತ್ಕೇಶವನಾಮ್ನಾ ತ್ವಂ ಲೋಕೇ ಖ್ಯಾತೋ ಭವಿಷ್ಯಸಿ ॥ ೨೩ ॥

ಸ್ವಸ್ತ್ಯಸ್ತು ತೇ ಗಮಿಷ್ಯಾಮಿ ಕಂಸಯುದ್ಧೇಽಧುನಾ ಪುನಃ ।
ಪರಶ್ವೋಽಹಂ ಸಮೇಷ್ಯಾಮಿ ತ್ವಯಾ ಕೇಶಿನಿಸೂದನ ॥ ೨೪ ॥

ಉಗ್ರಸೇನಸುತೇ ಕಂಸೇ ಸಾನುಗೇ ವಿನಿಪಾತಿತೇ ।
ಭಾರಾವತಾರಕರ್ತಾ ತ್ವಂ ಪೃಥಿವ್ಯಾಃ ಪೃಥಿವೀಧರ ॥ ೨೫ ॥

ತತ್ರಾನೇಕಪ್ರಕಾರಾಣಿ ಯುದ್ಧಾನಿ ಪೃಥಿವೀಕ್ಷಿತಾಂ ।
ದ್ರಷ್ಟವ್ಯಾನಿ ಮಯಾ ಯುಷ್ಮತ್ಪ್ರಣೀತಾನಿ ಜನಾರ್ದನ ॥ ೨೬ ॥

ಹಿಂದೆ ಎಂದೂ ಕಾಣದ ಮನುಷ್ಯ ಮತ್ತು ಕುದುರೆಯ ಯುದ್ಧವನ್ನು ನೋಡುವುದಕ್ಕಾಗಿಯೇ ಸ್ವರ್ಗದಿಂದ ಇಲ್ಲಿಗೆ ಬಂದೆನು. ಈ ಅವತಾರದಲ್ಲಿ ನೀನು ಮಾಡಿದ ಕೆಲಸಗಳಿಂದ ನನ್ನ ಮನಸ್ಸು ಅತ್ಯಂತಾಶ್ಚರ್ಯವನ್ನು ಹೊಂದಿ ಸಂತೋಷವನ್ನು ಹೊಂದಿತು. ಕೃಷ್ಣನೇ ಕೂದಲುಗಳನ್ನು ಕೊಡಹಿ ಆಕಾಶವನ್ನು ನೋಡುತ್ತ ಈ ಕುದುರೆಯು ಕೆನೆಯುತ್ತಿದ್ದರೆ ಇಂದ್ರಾದಿದೇವತೆಗಳೆಲ್ಲರೂ ಭಯಪಡುತ್ತಿದ್ದರು. ದುಷ್ಟನಾದ ಈ ಕೇಶಿಯನ್ನು ಕೊಂದುದರಿಂದ ನಿನಗೆ ಕೇಶವನೆಂದು ಲೋಕದಲ್ಲಿ ಪ್ರಸಿದ್ಧವಾದ ಹೆಸರಾಗಲಿ ನಿನಗೆ ಮಂಗಳವಾಗಲಿ ನಾನು ಹೋಗುತ್ತೇನೆ. ನಾಳೆದ್ದು ನೀನು ಕಂಸನೊಡನೆ ಯುದ್ಧಮಾಡುವಾಗ ಪುನಃ ನಾನು ನಿನ್ನನ್ನು ನೋಡುತ್ತೇನೆ.

೨೫-೨೬. ಉಗ್ರಸೇನನ ಮಗನಾದ ಕಂಸನನ್ನು ಅವನ ಪರಿವಾರದೊಡನೆ ಕೊಂದಮೇಲೆ ನೀನು ಭೂಮಿಯ ಭಾರವನ್ನು ಇಳಿಸಿದಂತಾಗುವುದು. ಅಲ್ಲಿ ನೀನು ಮಾಡುವ ಬಗೆ ಬಗೆಯ ಯುದ್ಧವನ್ನೂ ರಾಜರುಗಳಿಗೆ ಆಗುವ ಯುದ್ಧವನ್ನೂ ನಾನು

ಸೋಽಹಂ ಯಾಸ್ಯಾಮಿ ಗೋವಿಂದ ದೇವಕಾರ್ಯಂ ಮಹತ್ಕೃತಂ ।
ತ್ವಯೈವ ವಿದಿತಂ ಸರ್ವಂ ಸ್ವಸ್ತಿ ತೇಽಸ್ತುವ್ರಜಾಮ್ಯಹಂ ॥ ೨೭ ॥

ನಾರದೇ ತು ಗತೇ ಕೃಷ್ಣಸ್ಸಹಗೋಪೈಸ್ಸಭಾಜಿತಃ ।
ವಿವೇಶ ಗೋಕುಲಂ ಗೋಪೀನೇತ್ರ ಪಾನೈಕಭಾಜನಂ ॥ ೨೮ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ಷೋಡಶೋಽಧ್ಯಾಯಃ

ನೋಡಬೇಕು. ಗೋವಿಂದನೇ ನಾನು ಹೋಗುತ್ತೇನೆ. ದೊಡ್ಡದಾದ ದೇವತೆಗಳ ಕಾರ್ಯವನ್ನು ನೀನು ಮಾಡಿರುವೆ. ನಿನಗೆ ಎಲ್ಲವೂ ತಿಳಿದಿರುವುದು. ನಿನಗೆ ಮಂಗಳವಾಗಲಿ ನಾನು ಹೋಗುವೆನು ಎಂದು ಹೊರಟುಹೋದನು.

೨೮. ನಾರದನು ಹೊರಟು ಹೋದಮೇಲೆ ಕೃಷ್ಣನು ಗೊಲ್ಲರಿಂದ ಹೊಗಳಿಸಿಕೊಳ್ಳುತ್ತ ಗೋಪಿಯರು ನೋಡುತ್ತಿರಲು ಗೋಕುಲವನ್ನು ಪ್ರವೇಶಿಸಿದನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ

ಹದಿನಾರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಸಪ್ತದಶೋಽಧ್ಯಾಯಃ

॥ ಶ್ರೀ ಪರಾಶರಃ ॥

ಅಕ್ರೂರೋಽಪಿ ವಿನಿಷ್ಕ್ರಮ್ಯ ಸ್ಯಂದನೇನಾಶುಗಾಮಿನಾ ।
ಕೃಷ್ಣಸಂದರ್ಶನಾಕಾಂಕ್ಷೀ ಪ್ರಯಯೌ ನಂದಗೋಕುಲಂ ॥ ೧ ॥

ಚಿಂತಯಾಮಾಸ ಚಾಕ್ರೂರೋ ನಾಸ್ತಿ ಧನ್ಯತರೋ ಮಯಾ ।
ಯೋಽಹಮಂಶಾವತೀರ್ಣಸ್ಯ ಮುಖಂ ದ್ರಕ್ಷ್ಯಾಮಿ ಚಕ್ರಿಣಃ ॥ ೨ ॥

ಅದ್ಯ ಮೇ ಸಫಲಂ ಜನ್ಮ ಸುಪ್ರಭಾತಾ ಚ ಮೇ ನಿಶಾ ।
ಯದುನ್ಮಿದ್ರಾಬ್ಜಪತ್ರಾಕ್ಷಂ ವಿಷ್ಣೋರ್ದ್ರಕ್ಷ್ಯಾಮ್ಯಹಂ ಮುಖಂ ॥ ೩ ॥

ಹದಿನೇಳನೆಯ ಅಧ್ಯಾಯವು

೧-೫. ಅಕ್ರೂರನು ವೇಗವಾಗಿ ಹೋಗುವ ರಥದಲ್ಲಿ ಕುಳಿತು ಮಥುರೆಯಿಂದ ಹೊರಟು ಕೃಷ್ಣನ ದರ್ಶನವನ್ನು ಮಾಡಬೇಕೆಂದಪೇಕ್ಷಿಸಿ ನಂದಗೋಕುಲಕ್ಕೆ ಹೋದನು. ಅವನು ದಾರಿಯಲ್ಲಿ ಹೋಗುವಾಗ ನನಗಿಂತ ಕೃತಾರ್ಥನಾದವನು ಯಾರೂ ಇಲ್ಲ ನಾನು ವಿಷ್ಣುವಿನ ಅಂಶಾವತಾರ ಮಾಡಿದ ಕೃಷ್ಣನನ್ನು ನೋಡುವೆನು. ಈದಿನ ನನ್ನ ಜನ್ಮವು ಸಾರ್ಥಕವಾಯಿತು. ಅರಳಿದ ಕಮಲದಳದಂತೆ ಕಣ್ಣುಗಳುಳ್ಳ ವಿಷ್ಣುವಿನ ಮುಖವನ್ನು ನೋಡುವುದರಿಂದ ನಾನು ಪ್ರಾತಃಕಾಲದಲ್ಲಿ ಎದ್ದ ಹೊತ್ತು ಒಳ್ಳೆಯದಾಗಿರುವುದು. ಮನಸ್ಸಿನಲ್ಲಿ ಸಂಕಲ್ಪಮಾಡಿ ಪುಂಡರೀಕಾಕ್ಷ

ಸಾಪಂ ಹರತಿ ಯತ್ಪುಂಸಾಂ ಸ್ಮೃತಂ ಸಂಕಲ್ಪ ನಾಮುಯಂ ।
ತತ್ಪುಂಡರೀಕನಯನಂ ವಿಷ್ಣೋರ್ದ್ರಕ್ಷ್ಯಾಮ್ಯಹಂ ಮುಖಂ ॥ ೪ ॥

ವಿನಿರ್ಜಗ್ಮುರ್ಯತೋ ವೇದಾ ವೇದಾಂಗಾನ್ಯಖಿಲಾನಿ ಚ ।
ದ್ರಕ್ಷ್ಯಾಮಿ ತತ್ಪರಂ ಧಾಮಾಧಾಮ್ನಾಂ ಭಗವತೋ ಮುಖಂ ॥ ೫ ॥

ಯಜ್ಞೇಷು ಯಜ್ಞಪುರುಷಃ ಪುರುಷೈಃ ಪುರುಷೋತ್ತಮಃ ।
ಇಜ್ಯತೇ ಯೋಽಖಿಲಾದಾರಸ್ತಂ ದ್ರಕ್ಷ್ಯಾಮಿ ಜಗತ್ಪತಿಂ ॥ ೬ ॥

ಇಷ್ವಾ ಯಮಿಂದ್ರೋ ಯಜ್ಞಾನಾಂ ಶತೇನಾಮರರಾಜಕಾಂ ।
ಅವಾಪ ತಪನಂತಾದಿಮಹಂ ದ್ರಕ್ಷ್ಯಾಮಿ ಕೇಶವಂ ॥ ೭ ॥

ನ ಬ್ರಹ್ಮಾ ನೇಂದ್ರರುದ್ರಾಶ್ವಿವಸ್ವಾದಿತ್ಯಮರುದ್ಗಣಾಃ ।
ಯಸ್ಯ ಸ್ವರೂಪಂ ಜಾನಂತಿ ಪ್ರತ್ಯಕ್ಷಂ ಯಾತಿ ಮೇ ಹರಿಃ ॥ ೮ ॥

ನನ್ನು ಸ್ಮರಿಸಿದ ಮನುಷ್ಯನ ಪಾಪಗಳೆಲ್ಲ ನಾಶವಾಗುವುವು. ಅಂತಹ ವಿಷ್ಣುವಿನ ಮುಖವನ್ನು ನಾನು ನೋಡುವೆನು. ಯಾವ ಭಗವಂತನ ಮುಖದಿಂದ ವೇದಗಳೂ ವೇದಾಂಗಗಳೂ ಹೊರಟವೋ ಅಂತಹ ಪ್ರಕಾಶಸ್ವರೂಪನಾದ ಪರಬ್ರಹ್ಮನ ಮುಖವನ್ನು ನಾನು ನೋಡುವೆನು.

೬-೮. ಯಜ್ಞಪುರುಷನೂ ಪುರುಷೋತ್ತಮನೂ ಸಕಲ ಪ್ರಪಂಚಕ್ಕೂ ಆಶ್ರಯನೂ ಆದ ಆ ದೇವನನ್ನು ಯಜ್ಞಗಳಲ್ಲಿ ಋಷಿಗಳು ಪೂಜಿಸುವರು. ದೇವೇಂದ್ರನು ನೂರು ಯಜ್ಞಗಳಲ್ಲಿ ಆ ದೇವನನ್ನು ಪೂಜಿಸಿ ತನ್ನ ಇಂದ್ರಪದವಿಯನ್ನು ಪಡೆದನು. ಆ ಆದ್ಯಂತಗಳಿಲ್ಲದ ಕೇಶವನನ್ನು ನಾನು ನೋಡುವೆನು. ಯಾವ ದೇವನ ಸ್ವರೂಪವನ್ನು ಬ್ರಹ್ಮನೂ, ರುದ್ರನೂ ಇಂದ್ರನೂ ಅಶ್ವಿನೀದೇವತೆಗಳೂ ವಸುಗಳೂ ಆದಿತ್ಯರೂ ದೇವತೆಗಳೂ ತಿಳಿಯರೋ ಅಂತಹ ಹರಿಯು ನನಗೆ ಪ್ರತ್ಯಕ್ಷನಾಗುವನು.

ಸರ್ವಾತ್ಮಾ ಸರ್ವವಿತ್ಸರ್ವಸರ್ವಭೂತೇಷ್ವವಸ್ಥಿತಃ ।
ಯೋಽಚ್ಯುತಿಂತ್ಯೋಽವ್ಯಯೋ ವ್ಯಾಪೀ ಸ ವಕ್ಷ್ಯತಿ ಮಯಾ ಸಹ ॥ ೯ ॥

ಮತ್ಸ್ಯಕೂರ್ಮವರಾಹಾಶ್ಚ ಸಿಂಹರೂಪಾದಿಭಿಸ್ತ್ರಿತಂ ।
ಚಕಾರ ಜಗತೋ ಯೋಽಸ್ಯೋಽದ್ಯ ಮಾಮಾಲಪಿಷ್ಯತಿ ॥ ೧೦ ॥

ಸಾಂಪ್ರತಂ ಚ ಜಗತ್ಸ್ವಾಮೀಕಾರ್ಯಮಾತ್ಮಹೃದಿ ಸ್ಥಿತಂ ।
ಕರ್ತುಂ ಮನುಷ್ಯತಾಂ ಪ್ರಾಪ್ತಃ ಸ್ವೇಚ್ಛಾದೇಹಧೃದವ್ಯಯಃ ॥ ೧೧ ॥

ಯೋಽನಂತಃ ಪೃಥಿವೀಂ ಧತ್ತೇ ಶೇಖರಸ್ಥಿತಿ ಸಂಸ್ಥಿತಾಂ ।
ಸೋಽವತೀರ್ಣೋ ಜಗತ್ಯರ್ಥೇ ಮಾಮಕ್ರೂರೇತಿ ವಕ್ಷ್ಯತಿ ॥ ೧೨ ॥

೯-೧೦. ಸರ್ವಾತ್ಮನೂ, ಸರ್ವಜ್ಞನೂ, ಸಕಲ ಪ್ರಪಂಚ ರೂಪನೂ ಸಮಸ್ತ ಪ್ರಾಣಿಗಳಲ್ಲಿಯೂ ಆತ್ಮರೂಪದಿಂದಿರತಕ್ಕವನೂ ಮನಸ್ಸಿಗೆ ಸಿಲುಕದವನೂ ನಾಶರಹಿತನೂ ಸರ್ವವ್ಯಾಪಿಯೂ ಆದ ಅವನು ನನ್ನೊಡನೆ ಮಾತನಾಡುವನು. ಯಾವನು ಮತ್ಸ್ಯ, ಕೂರ್ಮ ವರಾಹ ಹಯಗ್ರೀವ ನೃಸಿಂಹ ಮುಂತಾದ ರೂಪಗಳಿಂದ ಲೋಕವನ್ನು ರಕ್ಷಿಸಿದನೋ ಅಂತಹ ಉತ್ಪತ್ತಿ ಶೂನ್ಯನಾದ ದೇವನು ಈದಿನ ನನ್ನನ್ನು ಮಾತನಾಡಿಸುವನು.

೧೧-೧೨. ಈಗ ಲೋಕ ಸ್ವಾಮಿಯೂ ತನ್ನಿಚ್ಛೆಯಿಂದ ಶರೀರವನ್ನು ಧರಿಸುವವನೂ, ನಾಶರಹಿತನೂ, ಆದ ಆ ಪರಬ್ರಹ್ಮನು ತನ್ನ ಮನಸ್ಸಿನಲ್ಲಿರುವ ಕಾರ್ಯವನ್ನು ಮಾಡುವುದಕ್ಕಾಗಿ ಮನುಷ್ಯಾವತಾರ ಮಾಡಿರುವನು. ಯಾವ ಅನಂತನು ತನ್ನ ತಲೆಯ ಮೇಲೆ ಭೂಮಿಯನ್ನು ಧರಿಸಿರುವನೋ ಅವನು ಲೋಕ ರಕ್ಷಣಾರ್ಥವಾಗಿ ಬಲರಾಮನಾಗಿ ಭೂಮಿಯಲ್ಲಿ ಅವತಾರ ಮಾಡಿರುವನು. ಅವನು ನನ್ನನ್ನು ಅಕ್ರೂರನೆ ಎಂದು ಮಾತನಾಡಿಸುವನು.

ಪಿತೃಸ್ನೇಹಸುಹೃದ್ಭ್ರಾತೃ ಮಾತೃಬಂಧುಮಯೀಮಿಮಾಂ ।
ಯನ್ಮಾಯಾಂ ನಾಲಮುತ್ಸರ್ತುಂ ಜಗತ್ತಸ್ಮೈ ನಮೋ ನಮಃ ॥ ೧೩ ॥

ತರಚ್ಛವಿದ್ಯಾಂ ವಿತಶಾಂ ಹೃದಿ ಯಸ್ಮಿನ್ನಿವೇಶಿತೇ ।
ಯೋಗಮಾಯಾಮಮೇಯಾಯ ತಸ್ಮೈ ವಿದ್ಯಾತ್ಮನೇ ನಮಃ ॥ ೧೪ ॥

ಯಜ್ವಭಿರ್ಯಜ್ಞಪುರುಷೋ ವಾಸುದೇವಶ್ಚ ಸಾತ್ವತೈಃ ।
ವೇದಾಂತವೇದಿಭಿರ್ವಿಷ್ಣುಃ ಪ್ರೋಚ್ಯತೇ ಯೋ ನತೋಽಸ್ಮಿ ತಂ ॥ ೧೫ ॥

ಯಥಾ ಯತ್ರ ಜಗದ್ಧಾಮ್ನಿ ಧಾತಯೇ್ಯತತ್ಪ್ರತಿಷ್ಠಿತಂ ।
ಸದಸತ್ತೇನ ಸತ್ಯೇನ ಮಯ್ಯಸೌ ಯಾ ತು ಸೌಮ್ಯತಾಂ ॥ ೧೬ ॥

೧೩–೧೬. ತಂದೆ, ಮಗ, ಸ್ನೇಹಿತ, ಸಹೋದರ, ತಾಯಿ, ಬಂಧುಗಳು ಎಂಬ ಅಭಿಮಾನ ರೂಪವಾದ ಮಾಯೆಯು ಯಾರಿಂದ ಉಂಟಾಗಿರುವುದೋ ಅದನ್ನು ಮೀರಲು ಈ ಜಗತ್ತಿನಲ್ಲಿ ಯಾರಿಗೂ ಶಕ್ತಿಯಿಲ್ಲ. ಮಾಯಾಧೀನನಾಗದ ಸ್ವತಂತ್ರನಾದ ಆ ದೇವನಿಗೆ ನಮಸ್ಕಾರ ಮಾಡುವೆನು. ಪುರುಷನು ಹೃದಯ ಕಮಲದಲ್ಲಿ ಯಾವನನ್ನು ಧ್ಯಾನಮಾಡುತ್ತಿದ್ದರೆ ಆತ್ಮಸ್ವರೂಪವನ್ನು ಮುಚ್ಚಿರುವ ಅಹಂಕಾರ ಮಮಕಾರ ರೂಪನಾದ ಅವಿದ್ಯಾತ್ಮಕವಾದ ಶಾಂಭವೀ ಮಾಯೆಯನ್ನು ದಾಟಿ ಹೋಗುವನೋ ಅಂತಹ ಜ್ಞಾನಸ್ವರೂಪನಿಗೆ ನಮಸ್ಕಾರ ಮಾಡುವೆನು. ಯಜ್ಞ ಮಾಡುವವರು ಯಜ್ಞಪುರುಷನೆಂದೂ ಉಪಾಸನೆ ಮಾಡುವವರು ವಾಸುದೇವನೆಂದೂ ಜ್ಞಾನನಿಷ್ಠರಾದ ವೇದಾಂತಿಗಳು ವಿಷ್ಣುವೆಂದೂ ಯಾವನನ್ನು ಹೇಳುವರೋ ಅವನಿಗೆ ನಮಸ್ಕಾರ ಮಾಡುವೆನು. ಜಗತ್ತಿಗೆ ಆಶ್ರಯನೂ ಸೃಷ್ಟಿಕರ್ತನೂ ಆದ ಆ ಪರಮಾತ್ಮನಲ್ಲಿ ಕಾರ್ಯ ಕಾರಣ ರೂಪವಾದ ಪುಣ್ಯ ಪಾಪ ಕಾರ್ಯಗಳನ್ನು ಮಾಡುತ್ತಿರುವ ಈ ಜಗತ್ತು ಇರುವುದು. ಹೀಗೆ ಸರ್ವಸಾಕ್ಷಿ ಸ್ವರೂಪನಾದ ದೇವನು ನನ್ನಲ್ಲಿ ಪ್ರಸನ್ನನಾಗಲಿ. ಯಾವನನ್ನು ಮನಸ್ಸಿನಲ್ಲಿ ಸ್ಮರಿಸಿದ ಮಾತ್ರಕ್ಕೆ ಮನುಷ್ಯನು

ಸ್ಮೃತೇ ಸಕಲ ಕಲ್ಯಾಣಭಾಜನಂ ಯತ್ರ ಜಾಯತೇ ।
ಪುರುಸ್ತಮುಜಂ ನಿತ್ಯಂ ವ್ರಜಾಮಿ ಶರಣಂ ಹರಿಂ ॥ ೧೬ ॥

॥ ಶ್ರೀ ಪರಾಕರಃ ॥

ಇತ್ಥಂ ಸಂಚಿಂತಯನ್ವಿಷ್ಣುಂ ಭಕ್ತಿನಮ್ರಾತ್ಮಮಾನಸಃ ।
ಅಕ್ರೂರೋ ಗೋಕುಲಂ ಪ್ರಾಪ್ತಃ ಕಂಚಿತ್ಸೂರ್ಯೇ ವಿರಾಜತಿ ॥ ೧೮ ॥

ಸ ದದರ್ಶ ತದಾ ಕೃಷ್ಣಮಾದಾವಾದೋಹನೇ ಗವಾಂ ।
ವತ್ಸಮಧ್ಯಗತಂ ಫುಲ್ಲನೀಲೋತ್ಪಲದಳಚ್ಛವಿಂ ॥ ೧೯ ॥

ಪ್ರಫುಲ್ಲಪದ್ಮಪತ್ರಾಕ್ಷಂ ಶ್ರೀವತ್ಸಾಂಕಿತವಕ್ಷಸಂ ।
ಪ್ರಲಂಬಬಾಹುಮಾಯಾಮತುಂಗೋರಸ್ಥಲಮುನ್ನಸಂ ॥ ೨೦ ॥

ಸವಿಲಾಸಸ್ಮಿತಾಧಾರಂ ಬಿಭ್ರಾಣಂ ಮುಖಪಂಕಜಂ ।
ತುಂಗರಕ್ತನಖಂ ಪದ್ಭ್ಯಾಂ ಧರಣ್ಯಾಂ ಸುಪ್ರತಿಷ್ಠಿತಂ ॥ ೨೧ ॥

ಸಕಲ ಮಂಗಳಗಳಿಗೂ ಆಶ್ರಯನಾಗುವನೋ ಅಂತಹ ಜನನ ಶೂನ್ಯನೂ ಪರಮ ಪುರುಷನೂ ಆದ ಹರಿಯನ್ನು ನಾನು ಶರಣು ಹೊಂದುವೆನು.

೧೮-೧೯. ಹೀಗೆಂದು ಅಕ್ರೂರನು ವಿಷ್ಣುವನ್ನು ಭಕ್ತಿಯಿಂದ ಧ್ಯಾನಿಸುತ್ತ ಸಂಧ್ಯಾಕಾಲದಲ್ಲಿ ಸೂರ್ಯನು ಇನ್ನೂ ಸ್ವಲ್ಪ ಕಾಣುತ್ತಿದ್ದಾಗ ಗೋಕುಲಕ್ಕೆ ಸೇರಿದನು. ಅವನು ಅಲ್ಲಿ ಮೊದಲು ಹಸುಗಳ ಹಾಲನ್ನು ಕರೆದಮೇಲೆ ಕರುಗಳ ನಡುವೆ ಇರುವ ನೀಲಿ ಬಣ್ಣದ ಕಮಲ ಕಾಂತಿಯಂತೆ ಶರೀರ ಕ್ರಾಂತಿಯುಳ್ಳ ಕೃಷ್ಣನನ್ನು ನೋಡಿದನು

೨೦-೨೧. ಆ ಕೃಷ್ಣನು ಅರಳಿದ ಕಮಲದಳದಂತೆ ಕಣ್ಣುಗಳುಳ್ಳವನಾಗಿ ಎಡೆಯಲ್ಲಿ ಶ್ರೀ-ವತ್ಸವೆಂಬ ಮಚ್ಚೆಯುಳ್ಳವನಾಗಿ ಉದ್ದವಾದ ತೋಳುಗಳೂ ವಿಸ್ತಾರವಾಗಿ ಉಬ್ಬಿದ ಎದೆಯೂ ಉಳ್ಳವನಾಗಿ ನಗುತ್ತಿರುವ ಮುಖಕಮಲದಿಂದ ಕೂಡಿ ಕೆಂಪಾದ ಉಗುರುಗಳುಳ್ಳ ಎತ್ತರವಾದ ಕೆಜ್ಜೆಗಳನ್ನು ನೆಲದ ಮೇಲೆ ಊರಿ ನಿಂತಿದ್ದನು.

ಬಿಭ್ರಾಣಂ ನಾಸಸೀ ಪೀತೇ ವಸ್ತ್ರೇ ಪುಷ್ಪವಿಭೂಷಿತಂ ।
ಸೇಂದುನೀಲಾಚಲಾಭಂ ತಂ ಸಿತಾಂಭೋಜಾವತಂಸಕಂ ॥ ೨೨ ॥

ಹಂಸಕುಂದೇಂದುಧವಳಂ ನೀಲಾಂಬರಧರಂ ದ್ವಿಜ ।
ತಸ್ಯಾನು ಬಲಭದ್ರಂ ಚ ದದರ್ಶ ಯದುನಂದನಂ ॥ ೨೩ ॥

ಪ್ರಾಂಶುನಮುತ್ತುಂಗ ಬಾಹ್ವಂಸಂ ವಿಕಾಸಿ ಮುಖಪಂಕಜಂ ।
ಮೇಘನಾಲಾಪರಿವೃತಂ ಕೈಲಾಸಾದ್ರಿಮಿವಾಪರಂ ॥ ೨೪ ॥

ತೌ ದೃಷ್ಟ್ವಾ ವಿಕಸದ್ವಕ್ತ್ರಸರೋಜಸ್ಸ ಮಹಾಮತಿಃ ।
ಪುಲಕಾಂಚಿತಸರ್ವಾಂಗಸ್ತದಾಕ್ರೂರೋಽಭವನ್ಮುನೇ ॥ ೨೫ ॥

೨೨-೨೪. ಅವನು ಹಳದಿಯ ಬಣ್ಣದ ವಸ್ತ್ರಗಳನ್ನು ಧರಿಸಿ ಕಾಡಿನ ಹೂಗಳನ್ನಲಂಕರಿಸಿಕೊಂಡು ಬಿಳಿಯ ಕಮಲವನ್ನು ತಲೆಯಲ್ಲಿ ಧರಿಸಿ ಚಂದ್ರನೊಡನೆ ಕೂಡಿದ ನೀಲಪರ್ವತದಂತೆ ಪ್ರಕಾಶಿಸುತ್ತಿದ್ದನು. ಅವನ ಜತೆಯಲ್ಲಿ ಬಲರಾಮನು ಹಂಸ, ಮಲ್ಲಿಯಹೂ, ಚಂದ್ರ, ಇವರಂತೆ ಬಿಳಿಯ ಬಣ್ಣದ ಶರೀರವುಳ್ಳವನಾಗಿ ನೀಲಿಯ ಬಣ್ಣದ ವಸ್ತ್ರವನ್ನು ಧರಿಸಿ ಇರುವುದನ್ನು ಎತ್ತರವಾಗಿರುವ ಶರೀರವೂ ತೋಳುಗಳೂ ಬುಜಗಳೂ ನಗುತ್ತಿರುವ ಮುಖಕಮಲವೂ ಉಳ್ಳ ಬಲರಾಮನು ಮೇಘಗಳ ಸಾಲಿನಿಂದ ಸುತ್ತಿಕೊಂಡಿರುವ ಕೈಲಾಸಪರ್ವತದಂತೆ ಇದ್ದುದನ್ನು ನೋಡಿದನು.

೨೫. ಮೈತ್ರೇಯನೇ! ಮಹಾಬುದ್ಧಿಶಾಲಿಯಾದ ಅಕ್ರೂರನು ಅವರಿಬ್ಬರನ್ನೂ ನೋಡಿ ಅರಳಿದ ಮುಖಕಮಲವುಳ್ಳವನಾಗಿ ತನ್ನ ಅವಯವಗಳೆಲ್ಲಾ ರೋಮಾಂಚವನ್ನು ಹೊಂದಿದನು.

ತದೇತತ್ಪರಮಂ ಧಾಮ ತದೇತತ್ಪರಮಂ ಪದಂ ।
ಭಗವದ್ವಾಸುದೇವೊಂಶೋ ದ್ವಿಧಾ ಯೋಯಂ ವ್ಯವಸ್ಥಿತಃ ॥ ೨೬ ॥

ಸಾಫಲ್ಯಮುಕ್ಷ್ಣೋರ್ಯುಗಮೇತದತ್ರ
ದೃಷ್ಟೇ ಜಗದ್ಧಾತರಿ ಯೋ ತಮುಚ್ಚೈಃ ।
ಅಸ್ಮಂಗಮೇತದ್ಭಗವತ್ಪ್ರಸಾದಾತ್
ತದಂಗಸಂಗೇ ಫಲವನ್ಮಮ ಸ್ಯಾತ್ ॥ ೨೭ ॥

ಅಸ್ಯೇಷ ಪೃಷ್ಠೇ ಮಮ ಹಸ್ತಪದ್ಮಂ
ಕರಿಷ್ಯತಿ ಶ್ರೀಮದನಂತಮೂರ್ತಿಃ ।
ಯಸ್ಯಾಂಗುಳಿಸ್ಪರ್ಶಹತಾಖಿಲಾಘೈ
ರವಾಪ್ಯತೇ ಸಿದ್ಧಿರಪಾಸ್ತದೋಷಾ ॥ ೨೮ ॥

---

೨೬. ಭಗವಂತನಾದ ವಾಸುದೇವನ ಅಂಶವು ಎರಡು ಭಾಗವಾಗಿ ಇಲ್ಲಿರುವುದು. ಇದೇ ಮಹಾ ತೇಜಸ್ಸು ಇದೇ ಪರಮಪದವು.

೨೭. ಜಗತ್ತನ್ನು ಸೃಷ್ಟಿಸಿದ ಪರಮಾತ್ಮನನ್ನು ಇಲ್ಲಿ ನೋಡಿದಮೇಲೆ ನನ್ನ ಎರಡು ಕಣ್ಣುಗಳು ಸಾರ್ಥಕವಾದುವು. ಭಗವಂತನ ಅನುಗ್ರಹದಿಂದ ಅವನ ಅಂಗ ಸಂಗವು ನನಗೆ ಉಂಟಾದರೆ ನನ್ನ ಅಂಗಗಳು ಸಾರ್ಥಕಗಳಾಗುವುವು.

೨೮. ಅನಂತರೂಪನಾದ ಈ ಕೃಷ್ಣನು ನನ್ನ ಕೈಗಳನ್ನು ಮುಟ್ಟಿದರೆ ಅವನ ಬೆರಳುಗಳ ಸ್ಪರ್ಶದಿಂದ ನನ್ನ ಸಮಸ್ತ ಪಾಪದೋಷಗಳೂ ನಾಶವಾಗಿ ನನಗೆ ಪರಿಶುದ್ಧಿರೂಪವಾದ ಸಿದ್ಧಿಯುಂಟಾಗುವುದು.

ಯೇನಾಗ್ನಿ ವಿದ್ಯುದ್ರವಿರಶ್ಮಿಮಾಲಾ
ಕರಾಳಮತ್ಯುಗ್ರಮಪಾಸ್ಯ ಚಕ್ರಂ ।
ಚಕ್ರಂ ಘ್ನತಾ ದೈತ್ಯಪತೇರ್ಹೃತಾನಿ
ದೈತ್ಯಾಂಗನಾನಾಂ ನಯನಾಂಜನಾನಿ ॥ ೨೯ ॥

ಯತ್ಪ್ರಾಂಬು ವಿನ್ಯಸ್ಯ ಬಲಿರ್ಮನೋಜ್ಞಾ
ನವಾಪಭೋಗಾನ್ಸುಧಾತಲಸ್ಥಃ ।
ತಥಾಮರತ್ವಂ ತ್ರಿದಶಾಧಿಪತ್ಯಂ
ಮನ್ವಂತರಂ ಪೂರ್ಣಮವೇತ ಶತ್ರುಃ ॥ ೩೦ ॥

ಅಸ್ಯೇಹ ಮಾಂ ಕಂಸಪರಿಗ್ರಹೇಣ
ದೋಷಾಸ್ಪದೀಭೂತಮದೋಷದುಷ್ಟಂ ।
ಕರ್ತಾವಮಾನೋಪಹತಂ ಧಿಗಸ್ತು
ತಜ್ಜನ್ಮ ಯತ್ಸಾಧು ಬಹಿಷ್ಕೃತಸ್ಯ ॥ ೩೧ ॥

---

೨೯. ಯಾವ ಪರಮಾತ್ಮನಾದ ವಿಷ್ಣುವು ಅಗ್ನಿ, ಮಿಂಚು, ಸೂರ್ಯ, ಇವರುಗಳ ಕ್ರೂರವಾದ ತೇಜಸ್ಸಿನ ಸಮೂಹಗಳಿಂದ ಕೂಡಿದ ಅತ್ಯಂತ ಭಯಂಕರವಾದ ಚಕ್ರಾಯುಧವನ್ನು ಪ್ರಯೋಗಿಸಿ ಕಾಲನೇಮಿಯೇ ಮುಂತಾದ ರಾಕ್ಷಸರ ಗುಂಪನ್ನು ಕೊಲ್ಲುತ್ತಿರಲು ಆ ರಾಕ್ಷಸ ಸ್ತ್ರೀಯರ ಕಣ್ಣಿನ ಕಾಡಿಗೆಗಳು ಕಣ್ಣೀರಿನಿಂದ ತೊಳೆದು ಹೋದುವು.

೩೦. ಯಾವ ಪರಮಾತ್ಮನ ಕೈಯಲ್ಲಿ ಬಲಿಚಕ್ರವರ್ತಿಯು ನೀರನ್ನು ಕೊಟ್ಟು ಭೂಮಿಯ ತಳದಲ್ಲಿ ಮನೋಹರವಾದ ಸುಖಗಳನ್ನು ಅನುಭವಿಸಿದನು ಮತ್ತು ಅವನಿಗೆ ಒಂದು ಮನ್ವಂತರವು ಪೂರ್ತಿಯಾಗುವವರೆಗೆ ದೇವೇಶ್ವರನೂ ಶತ್ರುಗಳಿಲ್ಲದ ದೇವರಾಜ್ಯಾಧಿಪತ್ಯವೂ ಉಂಟಾಯಿತು.

೩೧. ಈ ಕೃಷ್ಣನು ದೋಷಿಯಲ್ಲದ ನನ್ನನ್ನು ಕಂಸನ ಅಧಿಕಾರಿಗಳ ವರ್ಗದಲ್ಲಿ ಸೇರಿದುದರಿಂದ ದೋಷಿಯೆಂದು ಅಪಮಾನವನ್ನು ಮಾಡುವನೋ ಏನೋ ಸಜ್ಜನರ ಗುಂಪಿನಿಂದ ಹೊರಗಾದವನ ಹುಟ್ಟು ವ್ಯರ್ಥವಾದುದು. ಅವನನ್ನು ನಿಂದಿಸಬೇಕು.

ಜ್ಞಾನಾತ್ಮಕಸ್ಯಾಮಲ ಸತ್ವರಾಶೇ
ರಹೇತ ದೋಷಸ್ಯ ಸದಾ ಸ್ಫುಟಸ್ಯ
ಕಿಂ ವಾ ಜಗತ್ಯತ್ರ ಸಮಸ್ತಪುಂಸಾ
ಮಜ್ಞಾತಮಸ್ಯಾಸ್ತಿ ಹೃದಿ ಸ್ಥಿತಸ್ಯ ॥ ೩೨ ॥

ತಸ್ಮಾದಹಂ ಭಕ್ತಿವಿನಮ್ರ ಚೇತಾ
ವ್ರಜಾಮಿ ಸರ್ವೇಶ್ವರಮೀಶ್ವರಾಣಾಂ ।
ಅಂಶಾವತಾರಂ ಪುರುಷೋತ್ತಮಸ್ಯ
ಹ್ಯನಾದಿಮಧ್ಯಾಂತಮಜಸ್ಯ ವಿಷ್ಣೋಃ ॥ ೩೩ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ಸಪ್ತದಶೋಽಧ್ಯಾಯಃ

---

೩೨. ಜ್ಞಾನಸ್ವರೂಪನೂ ನಿರ್ಮಲವಾದ ಸತ್ವಗುಣ ಪೂರ್ಣನೂ ರಾಗಾದಿ ದೋಷಗಳಿಲ್ಲದೆ ಯಾವಾಗಲೂ ಸರ್ವಜ್ಞಸ್ವರೂಪನಾಗಿರುವ ಸಮಸ್ತರ ಹೃದಯದಲ್ಲಿಯೂ ಇರುವ ಪರಮಾತ್ಮನಿಗೆ ಈ ಜಗತ್ತಿನಲ್ಲಿ ತಿಳಯದಿರುವುದಾವುದಿರುವುದು ?

೩೩. ಆದುದರಿಂದ ನಾನು ಭಕ್ತಿಯಿಂದಲೂ ವಿನಯದಿಂದಲೂ ಕೂಡಿದ ಮನಸ್ಸುಳ್ಳವನಾಗಿ ಸರ್ವೇಶ್ವರನೂ ಆದಿಮಧ್ಯಾಂತರಹಿತನೂ ಪುರುಷೋತ್ತಮನ ಅಂಶಾವತಾರನೂ ಆದ ಶ್ರೀಕೃಷ್ಣನ ಸಮೀಪಕ್ಕೆ ಹೋಗುವೆನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ
ಹದಿನೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಅಷ್ಟಾದಶೋಽಧ್ಯಾಯಃ

॥ ಶ್ರೀ ಪರಾಶರಃ ॥

ಚಿಂತಯನ್ನಿತಿ ಗೋವಿಂದಮುಪಗಮ್ಯ ಸ ಯಾದವಃ ।
ಅಕ್ರೂರೋಽಸ್ಮೀತಿ ಚರಣೌ ನನಾಮ ಶಿರಸಾ ಹರೇಃ ॥ ೧ ॥

ಸೋಽಪ್ಯೇನಂ ಧ್ವಜವಜ್ರಾಬ್ಜಕೃತಚಿಹ್ನೇನ ಪಾಣಿನಾ ।
ಸಂಸ್ಪೃಶ್ಯಾಕೃಷ್ಯ ಚ ಪ್ರೀತ್ಯಾ ಸುಗಾಢಂ ಪರಿಷಸ್ವಜೇ ॥ ೨ ॥

ಕೃತಸಂವಂದನೌ ತೇನ ಯಥಾವದ್ಬಲಕೇಶವೌ ।
ತತಃ ಪ್ರವಿಷ್ಟೌ ಸಂಹೃಷ್ಟೌ ತಮಾದಾಯಾತ್ಮಮಂದಿರಂ ॥ ೩ ॥

ಸಹ ತಾಭ್ಯಾಂ ತದಾಕ್ರೂರಃ ಕೃತಸಂವಂದನಾದಿಕಃ ।
ಭುಕ್ತ್ವಭೋಜ್ಯೋ ಯಥಾನ್ಯಾಯ್ಯಂ ಅಚಷ್ಟಕ್ಷೇ ತತಸ್ತಯೋಃ ॥ ೪ ॥

ಹದಿನೆಂಟನೆಯ ಅಧ್ಯಾಯವು

೧-೬. ಆ ಯದುವಂಶದ ಅಕ್ರೂರನು ಈ ರೀತಿಯಲ್ಲಿ ಯೋಚಿಸುತ್ತ ಗೋವಿಂದನ ಸಮೀಪಕ್ಕೆ ಹೋಗಿ ನಾನು ಅಕ್ರೂರನು ಎಂದು ಹೇಳಿ ಅವನ ಪಾದದ ಮೇಲೆ ತನ್ನ ತಲೆಯನ್ನಿಟ್ಟು ನಮಸ್ಕಾರ ಮಾಡಿದನು. ಕೃಷ್ಣನು ಅವನನ್ನು ಧ್ವಜ, ವಜ್ರ, ಕಮಲಗಳ ಗುರುತುಗಳುಳ್ಳ ತನ್ನ ಕೈಯಿಂದ ಮುಟ್ಟಿ ಪ್ರೀತಿಯಿಂದ ಗಟ್ಟಿಯಾಗಿ ಆಲಿಂಗಿಸಿಕೊಂಡನು. ಅಕ್ರೂರನು ವಿಧಿಗನುಸಾರವಾಗಿ ಬಲಕೇಶವರಿಗೆ ನಮಸ್ಕಾರಮಾಡಿದಮೇಲೆ ಅವರು ಅವನನ್ನು ಕರೆದುಕೊಂಡು ತಮ್ಮ ಮನೆಗೆ ಹೋದರು.

ಯಥಾ ನಿರ್ಭರ್ತ್ಸಿತಸ್ತೇನ ಕಂಸೇನಾನಕದುಂದುಭಿಃ ।
ಯಥಾ ಚ ದೇವಕೀ ದೇವೀ ದಾನವೇನ ದುರಾತ್ಮನಾ ॥ ೫ ॥

ಉಗ್ರಸೇನೇ ಯಥಾ ಕಂಸಸ್ಯ ದುರಾತ್ಮಾ ಚ ವರ್ತತೇ ।
ಯಂ ಚೈವಾರ್ಥಂ ಸಮುದ್ದಿಶ್ಯ ಕಂಸೇನ ತು ವಿಸರ್ಜಿತಃ ॥ ೬ ॥

ತತ್ಸರ್ವಂ ವಿಸ್ತರಾಚ್ಛ್ರುತ್ವಾ ಭಗವಾನ್ ದೇವಕೀಸುತಃ ।
ಉವಾಚಾಖಿಲಮಪ್ಯೇತತ್ ಜ್ಞಾತಂ ದಾನಪತೇ ಮಯಾ ॥ ೭ ॥

ಕರಿಷ್ಯೇತನ್ಮಹಾಭಾಗ ಯದತ್ರೌಪಯಿಕಂ ಮತಂ ।
ವಿಚಿಂತ್ಯಂ ನಾನ್ಯಥೈತತ್ತೇ ವಿದ್ಧಿ ಕಂಸಂ ಹತಂ ಮಯಾ ॥ ೮ ॥

ಅಹಂ ರಾಮಶ್ಚ ಮಧುರಾಂ ಶ್ವೋಯಾಸ್ಯಾವಸ್ತ್ವಯಾ ।
ಗೋಪವೃದ್ಧಾಶ್ಚ ಯಾಸ್ಯಂತಿ ಹ್ಯಾದಾಯೋಪಾಯನಂ ಬಹು ॥ ೯ ॥

ಅಕ್ರೂರನು ಅವರೊಡನೆ ಸಂಭಾಷಣೆಯನ್ನು ಮಾಡಿ ಮರ್ಯಾದೆಯಿಂದ ಊಟ ಮಾಡಿದಮೇಲೆ ಅವರನ್ನು ಕುರಿತು ದುಷ್ಟನಾದ ಕಂಸನು ವಸುದೇವ ದೇವಕಿಯರನ್ನೂ ಉಗ್ರಸೇನನನ್ನೂ ದೂಷಿಸಿ ಅವರ ವಿಷಯದಲ್ಲಿ ಹೇಗೆ ನಡೆಯುತ್ತಿರುವನೆಂಬುದನ್ನೂ ತನ್ನನ್ನು ಯಾವ ಉದ್ದೇಶದಿಂದ ಇಲ್ಲಿಗೆ ಕಳುಹಿಸಿರುವನೆಂಬುದನ್ನೂ ವಿಸ್ತಾರವಾಗಿ ಹೇಳಿದನು.

೭-೧೦ ಕೃಷ್ಣನು ಅದೆಲ್ಲವನ್ನೂ ವಿಸ್ತಾರವಾಗಿ ಕೇಳಿ 'ದಾನಪತಿಯೇ! ನಾನು ಎಲ್ಲವನ್ನೂ ತಿಳಿದಿರುವೆನು. ಅದಕ್ಕೆ ಏನು ಮಾಡಬೇಕೋ ಅದನ್ನು ಮಾಡುವೆನು. ನೀನು ಬೇರೆ ವಿಧವಾಗಿ ಚಿಂತಿಸಬೇಡ. ಕಂಸನು ನನ್ನಿಂದ ಮರಣಹೊಂದಿದನೆಂದು ತಿಳಿ. ನಾನೂ ಬಲರಾಮನೂ ನಿನ್ನೊಡನೆ ನಾಳೆಯದಿನ ಮಧುರೆಗೆ ಬರುವೆವು. ಗೊಲ್ಲರಲ್ಲಿ ಮುದುಕರಾದವರು ವಿಶೇಷವಾದ ಕಾಣಿಕೆಗಳನ್ನು ತೆಗೆದುಕೊಂಡು ಹೋಗುವರು ಶೂರನಾದ ಅಕ್ರೂರನೇ! ಈ ರಾತ್ರಿಯನ್ನು ಕಳೆಯುವ ಯೋಚನೆಯನ್ನೂ ಮಾಡ

ನಿಶೇಯಂ ನೀಯತಾಂ ವೀರ ನ ಚಿಂತಾಂ ಕರ್ತುಮರ್ಹಸಿ ।
ತ್ರಿರಾತ್ರಾಭ್ಯಂತರೇ ಕಂಸಂ ನಿಹನಿಷ್ಯಾಮಿ ಸಾನುಗಂ ॥ ೧೦ ॥

॥ ಶ್ರೀ ಪರಾಶರಃ ॥

ಸಮಾದಿಶ್ಯ ತತೋ ಗೋಪಾನಕ್ರೂರೋಽಪಿ ಚ ಕೇಶವಂ ।
ಸುಷ್ವಾಪ ಬಲಭದ್ರಶ್ಚ ನಂದಗೋಪಗೃಹೇ ತತಃ ॥ ೧೧ ॥

ತತಃ ಪ್ರಭಾತೇ ವಿಮಲೇ ಕೃಷ್ಣರಾಮೌ ಮಹಾದ್ಯುತೀ ।
ಅಕ್ರೂರೇಣ ಸಮಂ ಗಂತುಮುದ್ಯತೌ ಮಧುರಾಪುರೀಂ ॥ ೧೨ ॥

ದೃಷ್ಟ್ವಾ ಗೋಪೀಜನಸ್ತಾಸ್ತಾಸ್ತಲ್ಪತಥ್ವಲಯ ಬಾಹುಕೀಃ ।
ನಿಶಶ್ವಾಸಾತಿದುಃಖಾರ್ತಃ ಪ್ರಾಹ ಚೇದಂ ಪರಸ್ಪರಂ ॥ ೧೩ ॥

ಮಧುರಾಂ ಪ್ರಾಪ್ಯ ಗೋವಿಂದಃ ಕಥಂ ಗೋಕುಲಮೇಷ್ಯತಿ ।
ನಗರಸ್ತ್ರೀಕಲಾಲಾಪ ಮಧು ಶ್ರೋತ್ರೇಣ ಪಾಸ್ಯತಿ ॥ ೧೪ ॥

ಬೇಡ. ಇನ್ನು ಮೂರು ರಾತ್ರಿಯೊಳಗಾಗಿ ಕಂಸನನ್ನು ಅವನ ಪರಿವಾರದೊಡನೆ ನಾಶಮಾಡುವೆನು ' ಎಂದು ಹೇಳಿದನು.

೧೧-೧೨. ಕೃಷ್ಣನು ಗೊಲ್ಲರಿಗೆ ರಾಜನ ಆಪ್ಪಣೆಯನ್ನು ಹೇಳಿ ಅಕ್ರೂರ ಬಲರಾಮರೊಡನೆ ನಂದಗೋಪನ ಮನೆಯಲ್ಲಿ ಮಲಗಿಕೊಂಡನು. ಪ್ರಾತಃಕಾಲದಲ್ಲಿ ಎದ್ದು ಮಹಾ ಪರಾಕ್ರಮಿಗಳಾದ ಕೃಷ್ಣಬಲರಾಮರು ಅಕ್ರೂರನೊಡನೆ ಮಧುರಾ ಪಟ್ಟಣಕ್ಕೆ ಹೊರಡಲು ಸಿದ್ಧರಾದರು.

೧೩-೧೬. ಕೃಷ್ಣನು ಮಧುರಾಪಟ್ಟಣಕ್ಕೆ ಹೊರಟುದನ್ನು ಕಂಡು ಗೋಪಿಯರು ಕಣ್ಣಿನಲ್ಲಿ ನೀರನ್ನು ಸುರಿಸುತ್ತ ಸಡಿಲವಾಗಿ ಜಾರಿಬೀಳುತ್ತಿರುವ ಬಳೆಗಳುಳ್ಳ

ವಿಲಾಸವಾಕ್ಯ ಪಾನೇಷು ನಾಗರೀಣಾಂ ಕೃತಾಸ್ಪದಂ ।
ಚಿತ್ತಮಸ್ಯ ಕಥಂ ಭೂಯೋ ಗ್ರಾಮ್ಯಗೋಪೀಷು ಯಾಸ್ಯತಿ ॥ ೧೫ ॥

ಸಾರಂ ಸಮಸ್ತಗೋಷ್ಠಸ್ಯ ವಿಧಿನಾ ಹರತಾ ಹರಿಂ ।
ಪ್ರಹೃತಂ ಗೋಪಯೋಷಿತ್ಸು ನಿರ್ಘೃಣೇನ ದುರಾತ್ಮನಾ ॥ ೧೬ ॥

ಭಾವಗರ್ಭಸ್ಮಿತಂ ವಾಕ್ಯಂ ವಿಲಾಸಲಲಿತಾ ಗತಿಃ ।
ನಾಗರೀಣಾಮತೀವೈತತ್ಕಟಾಕ್ಷೇಕ್ಷಿತಮೇವ ಚ ॥ ೧೭ ॥

ಗ್ರಾಮ್ಯೋ ಹರಿರಯಂ ತಾಸಾಂ ವಿಲಾಸನಿಗಳೈರ್ಯುತಃ ।
ಭವತೀನಾಂ ಪುನಃ ಪಾರ್ಶ್ವಂ ಕಯಾ ಯುಕ್ತ್ಯಾ ಸಮೇಷ್ಯತಿ ॥ ೧೮ ॥

ತೋಳುಗಳುಳ್ಳವರಾಗಿ ದುಃಖದಿಂದ ನಿಟ್ಟುಸುರನ್ನು ಬಿಟ್ಟು ತಮ್ಮ ತಮ್ಮಲ್ಲಿಯೇ ಮಾತನಾಡಿ ಕೊಂಡರು.

ಎಂತೆಂದರೆ :— ಗೋವಿಂದನು ಮಧುರೆಗೆ ಹೋಗಿ ನಗರದ ಸ್ತ್ರೀಯರು ಅವ್ಯಕ್ತ ಮಧುರವಾದ ಧ್ವನಿಯಿಂದ ಆಡುವ ಮಾತೆಂಬ ಮಧುವನ್ನು ಕಿವಿಗಳಿಂದ ಪಾನಮಾಡಿದಮೇಲೆ ಹೇಗೆ ಗೋಕುಲಕ್ಕೆ ಬಂದಾನು ? ನಗರದ ಸ್ತ್ರೀಯರ ಅಭಿನಯಾದಿ ವಿಲಾಸಗಳಿಂದ ಕೂಡಿದ ಮಾತುಗಳನ್ನು ಕೇಳಿದಮೇಲೆ ಅವನ ಮನಸ್ಸು ಹಳ್ಳಿಯ ಗೋಪಿಯರ ಕಡೆಗೆ ಹೇಗೆ ತಿರುಗುವುದು ? ದಯಾಶೂನ್ಯನೂ ದುಷ್ಟನೂ ಆದ ವಿಧಿಯು ಗೋಕುಲದ ಸಾರವಾದ ಹರಿಯನ್ನು ಕರೆದುಕೊಂಡು ಹೋಗುತ್ತ ಗೋಪಸ್ತ್ರೀಯರಿಗೆ ದುಃಖವನ್ನುಂಟುಮಾಡಿದನು.

೧೬–೨೦. ಮನೋಭಾವದಿಂದ ಕೂಡಿ ನಗುತ್ತ ಮಾತನಾಡುವ ವಿಚಿತ್ರವಾಗಿ ಅಲಂಕಾರ ಮಾಡಿಕೊಂಡು ನಡೆಯುವ ಓರೆಗಣ್ಣಿನ ನೋಟದಿಂದ ನೋಡುವ ನಗರದ ಸ್ತ್ರೀಯರ ವಿಲಾಸವೆಂಬ ಸಂಕೋಲೆಗೆ ಸಿಕ್ಕಿದ ಹಳ್ಳಿಯ ಈ ಕೃಷ್ಣನು ಯಾವ ಯುಕ್ತಿಯಿಂದ ನಿಮ್ಮ ಸಮೀಪಕ್ಕೆ ಪುನಃ ಬರುವನು ?

ಏಷೈಷ ರಥಮಾರುಹ್ಯ ಮಧುರಾಂ ಯಾತಿ ಕೇಶವಃ ।
ಕ್ರೂರೇಣಾಕ್ರೂರಕೇಣಾತ್ರ ನಿರ್ಘೃಣೇನ ಪ್ರತಾರಿತಃ ॥ ೮೯ ॥

ಕಿಂ ನ ವೇತ್ತಿ ನೃಶಂಸೋಽಯಮನುರಾಗಪರಂ ಜನಂ ।
ಯೇನೈವಮುಕ್ಷ್ಣೋರಾಹ್ಲಾದಂ ನಯತ್ಯನ್ಯತ್ರ ನೋ ಹರಿಂ ॥ ೯೦ ॥

ಏಷ ರಾಮೇಣ ಸಹಿತಃ ಪ್ರಯಾತ್ಯತ್ಯಂತ ನಿರ್ಘೃಣಃ ।
ರಥಮಾರುಹ್ಯ ಗೋವಿಂದಃ ತ್ವರ್ಯತಾಮಸ್ಯ ವಾರಣೇ ॥ ೯೧ ॥

ಗುರೂಣಾಮಗ್ರತೋ ವಕ್ತುಂ ಕಿಂ ಬ್ರವೀಥ ನ ನಃ ಕ್ಷಮಂ ।
ಗುರವಃ ಕಿಂ ಕರಿಷ್ಯಂತಿ ದಗ್ಧಾನಾಂ ವಿರಹಾಗ್ನಿನಾ ॥ ೯೨ ॥

ನಂದಗೋಪಮುಖಾ ಗೋಪಾ ಗಂತುಮೇತೇ ಸಮುದ್ಯತಾಃ ।
ನೋದ್ಯಮಂ ಕುರುತೇ ಕಶ್ಚಿದ್ಗೋವಿಂದವಿನಿವರ್ತನೇ ॥ ೯೩ ॥

ಇಗೋ, ಇಗೋ ಕೇಶವನು ರಥವನ್ನೇರಿ ಮಥುರೆಗೆ ಹೋಗುವನು. ದಯಾಶೂನ್ಯನಾದ ಕ್ರೂರಿಯಾದ ಅಕ್ರೂರನು ಅವನನ್ನು ಮೋಸಗೊಳಿಸಿರುವನು. ಕ್ರೂರಿಯಾದ ಅವನು ಈ ಜನರು ಪ್ರೀತಿಯುಳ್ಳವರೆಂದು ತಿಳಿಯುವುದಿಲ್ಲ. ಅದುದರಿಂದಲೇ ನಮ್ಮ ಕಣ್ಣುಗಳಿಗೆ ಸಂತೋಷವನ್ನುಂಟುಮಾಡುವ ಹರಿಯನ್ನು ಬೇರೊಂದೆಡೆಗೆ ಕರೆದು ಕೊಂಡು ಹೋಗುತ್ತಿರುವನು.

೨೧-೨೨. ಗೋವಿಂದನು ಬಲರಾಮನೊಡನೆ ರಥದಲ್ಲಿ ಕುಳಿತು ನಮ್ಮಲ್ಲಿ ದಯೆಯಿಲ್ಲದೆ ಹೋಗುತ್ತಿರುವನು. ಅವನನ್ನು ಹೋಗದಂತೆ ತಡೆಯುವ ಪ್ರಯತ್ನ ಮಾಡಿರಿ ಎಂದು ದೊಡ್ಡವರಲ್ಲಿ ಹೇಳುವುದು ನಮ್ಮಿಂದಾಗದೆಂದು ಹೇಳುವಿರಾ ? ವಿರಹಾಗ್ನಿಯಿಂದ ಬೆಂದವರನ್ನು ಗುರುಗಳು ಏನು ಮಾಡುವರು ?

೨೩-೨೬. ಈ ನಂದಗೋಪನೇ ಮುಂತಾದ ಗೊಲ್ಲರೂ ಹೊರಡಲು ಸಿದ್ಧರಾದರು. ಕೃಷ್ಣನನ್ನು ಹಿಂದಿರುಗಿಸುವುದಕ್ಕೆ ಯಾವನೂ ಪ್ರಯತ್ನಪಡುವುದಿಲ್ಲ. ಮಥುರೆಯಲ್ಲಿರುವ ಸ್ತ್ರೀಯರಿಗೆ ಈದಿನವೇ ಶುಭದಿನವು. ಅವರ ಕಣ್ಣುಗಳೆಂಬ

ಸುಪ್ರಭಾತಾದ್ಯ ರಜನೀ ಮಧುರಾವಾಸಯೋಷಿತಾಂ ।
ಪಾಸ್ಯಂತ್ಯಚ್ಯುತವಕ್ತ್ರಾಬ್ಜಂ ಯಾಸಾಂ ನೇತ್ರಾಳಿಪಂಕ್ತಯಃ ॥ ೨೪ ॥

ಧನ್ಯಾಸ್ತೇ ಪಥಿ ಯೇ ಕೃಷ್ಣಂ ಇತೋ ಯಾಂತ್ಯನಿವಾರಿತಾಃ ।
ಉದ್ವಹಿಷ್ಯಂತಿ ಪಶ್ಯಂತಸ್ತ್ವದೇಹಂ ಪುಲಕಾಂಚಿತಂ ॥ ೨೫ ॥

ಮಧುರಾನಗರೀಪೌರನಯನಾನಾಂ ಮಹೋತ್ಸವಃ ।
ಗೋವಿಂದಾವಯವೈರ್ದೃಷ್ಟೈರತೀವಾದ್ಯ ಭವಿಷ್ಯತಿ ॥ ೨೬ ॥

ಕೋ ನು ಸ್ವಪ್ನಸ್ಯಭಾಗ್ಯಾಭಿರ್ದೃಷ್ಟಸ್ತಾಭಿರಧೋಕ್ಷಜಂ ।
ವಿಸ್ತಾರಿಕಾಂತಿನಯನಾ ಯಾ ದ್ರಕ್ಷ್ಯಂತ್ಯನಿವಾರಿತಾಃ ॥ ೨೭ ॥

ಅಹೋ ಗೋಪೀಜನಸ್ಯಾಸ್ಯ ದರ್ಶಯಿತ್ವಾ ಮಹಾ ನಿಧಿಂ ।
ಉತ್ಕೃತ್ತಾನ್ಯದ್ಯ ನೇತ್ರಾಣಿ ವಿಧಿನಾಽಕರುಣಾತ್ಮನಾ ॥ ೨೮ ॥

ಅನುರಾಗೇಣ ಶೈಥಿಲ್ಯಮುಸ್ಮಾಸು ವ್ರಜತಾ ಹರೇಃ ।
ಶೈಥಿಲ್ಯಮುಪಯಾಂಚ್ಯಾಶು ಕರೇಷು ವಲಯಾನ್ಯಪಿ ॥ ೨೯ ॥

ದುಂಬಿಗಳ ಸಾಲುಗಳು ಕೃಷ್ಣನ ಮುಖಕಮಲವನ್ನು ಪಾನಮಾಡುವುವು. ಇಲ್ಲಿಂದ ಯಾರೂ ತಡೆಯದೆ ದಾರಿಯಲ್ಲಿ ಹೋಗುತ್ತಿರುವ ಕೃಷ್ಣನನ್ನು ಅನುಸರಿಸಿ ಹೋಗುತ್ತಿರುವವರೇ ಪುಣ್ಯವಂತರು. ಕೃಷ್ಣನನ್ನು ನೋಡುತ್ತ ರೋಮಾಂಚಿತವಾದ ಶರೀರವನ್ನು ಧರಿಸಿರುವರು. ಗೋವಿಂದನ ಅವಯವಗಳನ್ನು ನೋಡುವ ಮಧುರೆಯಲ್ಲಿರುವ ಪಟ್ಟಣಿಗರ ಕಣ್ಣುಗಳಿಗೆ ಈ ದಿನ ದೊಡ್ಡ ಹಬ್ಬವಾಗಿರುವುದು.

೨೩-೩೨. ಮಧುರೆಯ ಸ್ತ್ರೀಯರು ವಿಸ್ತಾರವಾದ ತಮ್ಮ ಕಣ್ಣುಗಳ ಕಾಂತಿಯುಳ್ಳವರಾಗಿ ಕೃಷ್ಣನನ್ನು ನೋಡುವರು. ಅವರು ಎಂತಹ ಭಾಗ್ಯವತಿಯರು? ಅಯ್ಯೋ ದಯೆಯಿಲ್ಲದ ವಿಧಿಯು ಈ ಗೋಪಿಯರಿಗೆ ಮಹಾನಿಧಿಯನ್ನು ತೋರಿಸಿ ಈ ದಿನ ಅವರ ಕಣ್ಣುಗಳನ್ನು ಕಿತ್ತಿರುವುದು. ತಮ್ಮ ವಿಷಯದಲ್ಲಿ ಹರಿಯ ಅನು

ಅಕ್ರೂರಃ ಕ್ರೂರಹೃದಯಶ್ಚೀಘ್ರಂ ಪ್ರೇರಯತೀ ಹಯಾನ್ ।
ಏವಮಾರ್ತಾಸು ಯೋಷಿತ್ಸು ಕೃಪಾ ಕಸ್ಯ ನ ಜಾಯತೀ ॥ ೩೦ ॥

ಏಷ ಕೃಷ್ಣ ರಥಸ್ಯೋಚ್ಚೈಶ್ಚಕ್ರರೇಣುರ್ನಿರೀಕ್ಷ್ಯತಾಂ ।
ದೂರೀಭೂತೋ ಹರಿರ್ಯೇನ ಸೋಽಪಿ ರೇಣುರ್ನ ಲಕ್ಷ್ಯತೀ ॥ ೩೧ ॥

॥ ಶ್ರೀ ಪರಾಶರಃ ॥

ಇತ್ಯೇವಮತಿಹಾರ್ದೇನ ಗೋಪೀಜನನಿರೀಕ್ಷಿತಃ ।
ತತ್ಯಾಜ ವ್ರಜ ಭೂಭಾಗಂ ಸಹ ರಾಮೇಣ ಕೇಶವಃ ॥ ೩೨ ॥

ಗಚ್ಛಂತೋ ಜವನಾಶ್ವೇನ ರಥೇನ ಯಮುನಾತಟಂ ।
ಪ್ರಾಪ್ತಮುಧ್ಯಾಹ್ನ ಸಮಯೇ ರಾಮಾಕ್ರೂರಜನಾರ್ದನಾಃ ॥ ೩೩ ॥

ಅಥಾಹ ಕೃಷ್ಣಮಕ್ರೂರೋ ಭವದ್ಭ್ಯಾಂ ತಾವದಾಸ್ಯತಾಂ ।
ಯಾವತ್ಕರೋಮಿ ಕಾಳಿಂದ್ಯಾ ಅಹ್ನಿಕಾರ್ಹಣಮುಂಭಸಿ ॥ ೩೪ ॥

ರಾಗವು ಕಡಿಮೆಯಾಗಲು ಏಮ್ಮ ಕೈ ಬಳೆಗಳೂ ಸಡಿಲವಾಗಿ ಅವನನ್ನೇ ಅನುಸರಿಸಿ ಹೋಗುತ್ತಿರುವುವು. ಕ್ರೂರಿಯಾದ ಅಕ್ರೂರನು ಕುದುರೆಗಳನ್ನು ಓಡಿಸುತ್ತಿರುವನು. ಈ ರೀತಿಯಲ್ಲಿ ದುಃಖಿತರಾದ ಸ್ತ್ರೀಯರ ವಿಷಯದಲ್ಲಿ ಯಾವನಿಗೆ ತಾನೆ ದಯೆಯುಂಟಾಗುವುದಿಲ್ಲ? ಕೃಷ್ಣನು ಹೋಗುತ್ತಿರುವ ರಥದ ಚಕ್ರದಿಂದ ಎತ್ತರವಾಗಿ ಎದ್ದ ಧೂಳನ್ನು ನೋಡಿರಿ, ಕೃಷ್ಣನು ದೂರವಾದನು. ಈಗ ಆ ದೂಳಿಯೂ ಕಾಣುವುದಿಲ್ಲ ಹೀಗೆಂದು ಗೋಪಿಯರು ಪ್ರೀತಿಯಿಂದ ನೋಡುತ್ತಿರಲು ರಾಮಕೃಷ್ಣರು ಗೋಕುಲದ ಭೂ ಭಾಗವನ್ನು ದಾಟಿ ಹೋದರು.

೩೩-೩೫. ವೇಗವಾದ ಕುದುರೆಗಳನ್ನು ಕಟ್ಟಿದ ರಥದಲ್ಲಿ ಕುಳಿತು ಹೋಗುತ್ತಿರುವ ರಾಮಕೃಷ್ಣಾಕ್ರೂರರು ಯಮುನಾ ನದಿಯ ಸಮೀಪಕ್ಕೆ ಹೋಗುವುದರಲ್ಲಿ ಮಧ್ಯಾಹ್ನವಾಯಿತು. ಆಗ ಅಕ್ರೂರನು ಕೃಷ್ಣನನ್ನು ಕುರಿತು ನೀವಿಬ್ಬರೂ ಇಲ್ಲಿಯೇ

॥ ಶ್ರೀ ಪರಾಶರಃ ॥

ತಥೇತ್ಯುಕ್ತ್ವಸ್ತತಸ್ಸ್ನಾತಸ್ಸ್ವಾಂತಸ್ಯ ಮಹಾಮತಿಃ ।
ದಧ್ಯೌ ಬ್ರಹ್ಮ ಪರಂ ವಿಪ್ರ ಪ್ರವಿಷ್ಟೋ ಯಮುನಾಜಲೇ ॥ ೩೫ ॥

ಫಣಾಸಹಸ್ರಮಾಲಾಢ್ಯಂ ಬಲಭದ್ರಂ ದದರ್ಶ ಸಃ ।
ಕುಂದಮೃಣಾಲಾಂಗಮುನ್ನಿದ್ರ ಪದ್ಮಪತ್ರಾಯತೇಕ್ಷಣಂ ॥ ೩೬ ॥

ವೃತಂ ವಾಸುಕಿರಂಧಾ ದೈರ್ಮಹದ್ಭಿಃ ಪವನಾಶಿಭಿಃ ।
ಸಂಸ್ತೂಯಮಾನಮುದ್ಗಂಧಿವನಮಾಲಾವಿಭೂಷಿತಂ ॥ ೩೭ ॥

ದಧಾನಮಸಿತೇ ವಸ್ತ್ರೇ ಚಾರುರೂಪಾವತಂಸಕೆಂ ।
ಚಾರುಕುಂಡಲಿನಂ ಭಾಂತಮಂತರ್ಜಲತಲೇ ಸ್ಥಿತಂ ॥ ೩೮ ॥

---

೩೫. ನಾನು ಯಮುನಾ ನದಿಯ ನೀರಿನಲ್ಲಿ ಮಾಧ್ಯಾಹ್ನಿಕವನ್ನು ಮಾಡಿಕೊಂಡು ಬರುವೆನು. ಎಂದು ಹೇಳಿ ಅವರಪ್ಪಣೆಯನ್ನು ತೆಗೆದುಕೊಂಡು ಹೋಗಿ ನದಿಯಲ್ಲಿ ಸ್ನಾನವನ್ನು ಮಾಡಿ ಆಚಮನವನ್ನು ಮಾಡಿದಮೇಲೆ ಯಮುನೆಯ ನೀರಿನಲ್ಲಿ ನಿಂತು ಪರಬ್ರಹ್ಮನನ್ನು ಧ್ಯಾನಮಾಡಿದನು.

೩೬-೩೯. ಧ್ಯಾನಕ್ರಮವೆಂತೆಂದರೆ:—ಬಲರಾಮನನ್ನು ಸಾವಿರ ಹೆಡೆಗಳುಳ್ಳವನಾಗಿ ಮಲ್ಲೆಯ ಹೂವಿನಂತೆ ಮೈಬಣ್ಣವುಳ್ಳವನಾಗಿ ಅರಳಿದ ಕಮಲದಳದಂತೆ ಕಣ್ಣುಗಳುಳ್ಳವನನ್ನಾಗಿ ವಾಸುಕಿರಂಭ ಮುಂತಾದ ಮಹಾನಾಗಗಳು ಸ್ತೋತ್ರಮಾಡುತ್ತಿರಲು ವಿಶೇಷವಾದ ಸುವಾಸನೆಯಿಂದ ಕೂಡಿದ ತುಲಸೀ ಸರದ ಅಲಂಕಾರವನ್ನು ಮಾಡಿಕೊಂಡು ನೀಲಿಯ ಬಣ್ಣದ ವಸ್ತ್ರಗಳನ್ನು ಧರಿಸಿ ಕರ್ಣಾಭರಣಗಳುಳ್ಳವನಾಗಿ ಸುಂದರವಾದ ರೂಪಿನಿಂದ ನೀರಿನೊಳಗೆ ಇರುವಂತೆ ಕಂಡನು.

ತಸ್ಯೋತ್ಸಂಗೇ ಘನಶ್ಯಾಮಮಾತಾಮ್ರಾಯತಲೋಚನಂ ।
ಚತುರ್ಬಾಹುಮುದಾರಾಂಗಂ ಚಕ್ರಾದ್ಯಾಯುಧಭೂಷಿತಂ ॥ ೬೯ ॥

ಪಿತೇ ವಸಾನಂ ವಸನೇ ಚಿತ್ರಮಾಲ್ಯೋಪಶೋಭಿತಂ ।
ಶಕ್ರಚಾಪತಟಿನ್ಮಾಲಾವಿಚಿತ್ರಮಿವ ತೋಯದಂ ॥ ೭೦ ॥

ಶ್ರೀವತ್ಸವಕ್ಷಸಂ ಚಾರುಸ್ಫುರನ್ಮಕರಕುಂಡಲಂ ।
ದದರ್ಶ ಕೃಷ್ಣಮುತ್ಫುಲ್ಲಂ ಪುಂಡರೀಕಾಯತೇಕ್ಷಣಂ ॥ ೭೧ ॥

ಸನಂದನಾದ್ಯೈರ್ಮುನಿಭಿಸ್ಸಿದ್ಧಯೋಗೈರಕಲ್ಮಷೈಃ ।
ಸಂಚಿಂತ್ಯಮಾನಂ ತತ್ರಸ್ಥೈರ್ನಾಸಾಗ್ರನ್ಯಸ್ತಲೋಚನೈಃ ॥ ೭೨ ॥

ಬಲಕೃಷ್ಣೌ ತಥಾಕ್ರೂರಃ ಪ್ರತ್ಯಭಿಜ್ಞಾಯ ವಿಸ್ಮಿತಃ ।
ಅಚಿಂತಯದ್ರಥಾಚ್ಚೀಘ್ರಂ ಕಥಮತ್ರಾಗತಾವಿತಿ ॥ ೭೩ ॥

೬೯-೭೧. ಅವನ ತೊಡೆಯಮೇಲೆ ಮೇಘದಂತೆ ಕಪ್ಪಾದ ಮೈ ಬಣ್ಣವೂ, ಕೆಂಪಾದ ವಿಸ್ತಾರವಾದ ಕಣ್ಣುಗಳೂ, ನಾಲ್ಕು ತೋಳುಗಳೂ, ಚಕ್ರಾದಿ ಆಯುಧಗಳ ಅಲಂಕಾರವೂ, ಪೀತಾಂಬರಗಳೂ, ಬಗೆಬಗೆಯ ಬಣ್ಣದ ಹೂಗಳ ಮಾಲೆಯೂ, ಉಳ್ಳವನಾಗಿ ಕಾಮನಬಿಲ್ಲು ಮಿಂಚುಗಳು ಇವುಗಳಿಂದ ವಿಚಿತ್ರವಾಗಿ ಕಾಣುತ್ತಿರುವ ಮೇಘದಂತೆ ಕಾಣುವ ಎದೆಯಲ್ಲಿ ಶ್ರೀ ವತ್ಸವೆಂಬ ಗುರುತೂ ಕಿವಿಯಲ್ಲಿ ಮಕರ ಕುಂಡಲವೂ, ಕಮಲದ ಶಿರೋಭೂಷಣವೂ ಉಳ್ಳ ಸುಂದರನಾದ ಕೃಷ್ಣನನ್ನು ನೋಡಿದನು.

೭೨. ಪರಿಶುದ್ಧರೂ ಯೋಗಸಿದ್ಧರೂ ಮೊಗಿನ ತುದಿಯಲ್ಲಿಯೇ ದೃಷ್ಟಿ ಯುಳ್ಳವರೂ ಆದ ಸನಂದನಾದಿ ಮುನಿಗಳು ಆ ದೇವನನ್ನು ಧ್ಯಾನಿಸುತ್ತಿದ್ದರು.

೭೩-೭೬. ಅಕ್ರೂರನು ನೀರಿನೊಳಗೆ ಕಾಣುವ ಆ ರೂಪವನ್ನು ನೋಡಿ ಆ ಬಲರಾಮಕೃಷ್ಣರೇ ಇವರೆಂದು ತಿಳಿದು ಆಶ್ಚರ್ಯಪಟ್ಟು ಇಷ್ಟು ಬೇಗ ರಥದಿಂದ ಇಲ್ಲಿಗೆ ಇವರು ಹೇಗೆ ಬಂದರು ? ಎಂದು ಚಿಂತಿಸಿದನು. ಮಾತನಾಡಬೇಕೆಂದಿದ್ದ ಅವನ ಮಾತನ್ನು ಕೃಷ್ಣನು ಸ್ತಂಭಿಸಿದನು. ಆ ಮೇಲೆ ಅಕ್ರೂರನು ನೀರಿನಿಂದ

ವಿವಕ್ಷೋಃ ಸ್ತಂಭಯಾಮಾಸ ವಾಚಂ ತಸ್ಯ ಜನಾರ್ದನಃ ।
ತತೋ ನಿಷ್ಕ್ರಮ್ಯ ಸಲಿಲಾದ್ರಥಮಧ್ಯಾಗತಃ ಪುನಃ ॥ ೪೪ ॥

ದದರ್ಶ ತತ್ರ ಚೈವೋಭೌ ರಥಸ್ಯೋಪರಿನಿಷ್ಠಿತೌ ।
ರಾಮಕೃಷ್ಣೌ ಯಥಾಪೂರ್ವಂ ಮನುಷ್ಯವಪುಷಾನ್ವಿತೌ ॥ ೪೫ ॥

ನಿಮಗ್ನಶ್ಚ ಪುನಸ್ತ್ತೋಯೇ ದದರ್ಶ ಚ ತಥೈವ ತೌ ।
ಸಂಸ್ತೂಯಮಾನೌ ಗಂಧರ್ವೈರ್ಮುನಿಸಿದ್ಧಮಹೋರಗೈಃ ॥ ೪೬ ॥

ತತೋ ವಿಜ್ಞಾತಸದ್ಭಾವಸ್ತು ದಾನಪತಿಸ್ತದಾ ।
ತುಷ್ಟಾವ ಸರ್ವವಿಜ್ಞಾನಮಯಮಚ್ಯುತಮೀಶ್ವರಂ ॥ ೪೭ ॥

॥ ಅಕ್ರೂರಃ ॥

ಸನ್ಮಾತ್ರರೂಪಿಣೇಽಚಿಂತ್ಯಮಹಿಮ್ನೇ ಪರಮಾತ್ಮನೇ ।
ವ್ಯಾಪಿನೇ ನೈಕರೂಪೈಕಸ್ವರೂಪಾಯ ನಮೋ ನಮಃ ॥ ೪೮ ॥

ಹೊರಕ್ಕೆ ಬಂದು ರಥದ ಸಮೀಪಕ್ಕೆ ಬಂದನು. ಅಲ್ಲಿ ರಾಮಕೃಷ್ಣರಿಬ್ಬರೂ ರಥದಲ್ಲಿ ಕುಳಿತಿರುವುದನ್ನು ನೋಡಿದನು. ಅವರಿಬ್ಬರೂ ಹಿಂದಿನಂತೆ ಮನುಷ್ಯಾಕೃತಿಯಲ್ಲಿದ್ದರು. ಅವನು ಪುನಃ ನೀರಿನಲ್ಲಿ ಮುಳುಗಿ ಹಿಂದಿನಂತೆಯೇ ಅವರಿಬ್ಬರನ್ನೂ ಕಂಡನು. ಅವರನ್ನು ಗಂಧರ್ವರೂ, ಅಪ್ಸರಸುಗಳೂ, ಮುನಿಗಳೂ, ಸಿದ್ಧರೂ, ಉರಗರೂ ಸ್ತೋತ್ರಮಾಡುತ್ತಿದ್ದರು.

೪೭. ಆ ಮೇಲೆ ದಾನಪತಿಯಾದ ಅಕ್ರೂರನು ಪರಮಾರ್ಥ ಜ್ಞಾನವುಳ್ಳವನಾಗಿ ಜ್ಞಾನಸ್ವರೂಪನೂ ಈಶ್ವರನೂ ಆದ ಕೃಷ್ಣನನ್ನು ಸ್ತೋತ್ರಮಾಡಿದನು.

೪೮. ಸದ್ರೂಪನೂ ಊಹಿಸಲಸಾಧ್ಯವಾದ ಮಹಿಮೆಯುಳ್ಳವನೂ ಶ್ರೇಷ್ಠವಾದ ಆತ್ಮಸ್ವರೂಪನೂ ಸರ್ವವ್ಯಾಪಿಯೂ ಕಾರ್ಯರೂಪವಾಗಿ ಅನೇಕರೂಪನೂ ಕಾರಣರೂಪದಿಂದ ಏಕಸ್ವರೂಪನೂ ಆದ ನಿನಗೆ ನಮಸ್ಕಾರವು.

ಸರ್ವರೂಪಾಯ ತೇ ಽಚಿಂತ್ಯಹವಿರ್ಭೂತಾಯ ತೇ ನಮಃ ।
ನಮೋ ವಿಜ್ಞಾತಪಾರಾಯ ಪರಾಯ ಪ್ರಕೃತೇಃ ಪ್ರಭೋ ॥ ೪೯ ॥

ಭೂತಾತ್ಮಾ ಚೇಂದ್ರಿಯಾತ್ಮಾ ಚ ಪ್ರಧಾನಾತ್ಮಾ ತಥಾ ಭವಾನ್ ।
ಆತ್ಮಾ ಚ ಪರಮಾತ್ಮಾ ಚ ತ್ವಮೇಕಃ ಪಂಚಧಾ ಸ್ಥಿತಃ ॥ ೫೦ ॥

ಪ್ರಸೀದ ಸರ್ವಸರ್ವಾತ್ಮನ್ ಕ್ಷರಾಕ್ಷರೆ ಮಯೇಶ್ವರ ।
ಬ್ರಹ್ಮವಿಷ್ಣುಶಿವಾಖ್ಯಾಭಿಃ ಕಲ್ಪನಾಭಿರುದೀರಿತಃ ॥ ೫೧ ॥

ಅನಾಖ್ಯೇಯ ಸ್ವರೂಪಾತ್ಮನ್ ಅನಾಖ್ಯೇಯ ಪ್ರಯೋಜನ ।
ಅನಾಖ್ಯೇಯಾಭಿಧಾನಂ ತ್ವಾಂ ನತೋ ಽಸ್ಮಿ ಪರಮೇಶ್ವರ ॥ ೫೨ ॥

---

೪೯. ಸರ್ವಪ್ರಪಂಚರೂಪನೂ, ಹವಿಸ್ಸಿನರೂಪನೂ ಆಗಿ ಊಹಿಸಲಸಾಧ್ಯನಾದ ನಿನಗೆ ನಮಸ್ಕಾರವು. ಪ್ರಕೃತಿಗಿಂತ ಶ್ರೇಷ್ಠನೂ, ತಿಳಿಯಲಾಗದ ಅಂತ್ಯವುಳ್ಳವನೂ, ಸರ್ವಸ್ವಾಮಿಯೂ, ಆದ ನಿನಗೆ ನಮಸ್ಕಾರವು.

೫೦. ನೀನೊಬ್ಬನೇ ಯಾವ ಉಪಾಧಿಯೂ ಇಲ್ಲದೆ ಪರಮಾತ್ಮನಾಗಿಯೂ ಉಪಾಧಿಗಳೊಡನೆ ಜೀವಾತ್ಮ, ಪ್ರಧಾನಾತ್ಮ, ಇಂದ್ರಿಯಾತ್ಮ, ಭೂತಾತ್ಮನೆನಿಸಿಕೊಂಡು ಐದು ಬಗೆಯಾಗಿರುವೆ.

೫೧. ನೀನು ಸಮಸ್ತ ಭೂತಸ್ವರೂಪನಾಗಿ ಕ್ಷರನೆನಿಸಿಕೊಂಡವನೂ ಸರ್ವಾತ್ಮನಾಗಿ ಅಕ್ಷರನೆನಿಸಿದವನೂ ಸರ್ವನಿಯಾಮಕನಾಗಿ ಈಶ್ವರನೆನಿಸಿದವನೂ ಗುಣರೂಪವಾದ ಉಪಾಧಿಗಳಿಂದ ಬ್ರಹ್ಮ, ವಿಷ್ಣು, ಶಿವನೆಂಬ ಕಲ್ಪನೆಯುಳ್ಳವನೂ ಆಗಿರುವೆ.

೫೨. ವಿವರಿಸಲಾಗದ ತತ್ವವೇ ನಿನ್ನ ಸ್ವರೂಪವು. ನಿನ್ನ ಸೃಷ್ಟ್ಯಾದಿಕಾರ್ಯಗಳಿಗೆ ಪ್ರಯೋಜನವನ್ನು ಹೇಳಲು ಸಾಧ್ಯವಿಲ್ಲ. ಅನಂತನಾಮಗಳಿರುವುದರಿಂದ ನಿನ್ನ ಹೆಸರನ್ನು ಹೇಳಲು ಸಾಧ್ಯವಿಲ್ಲ. ಇಂತಹ ಪರಮೇಶ್ವರನಾದ ನಿನಗೆ ನಮಸ್ಕಾರ ಮಾಡುವೆನು.

ನ ಯತ್ರನಾಥ ವಿದ್ಯಂತೆ ನಾಮಜಾತ್ಯಾದಿಕಲ್ಪನಾಃ ।
ತದ್ಬ್ರಹ್ಮ ಪರಮಂ ನಿತ್ಯಮವಿಕಾರಿ ಭವಾನಜ ॥ ೫೩ ॥

ನ ಕಲ್ಪನಾಮೃತೇಽರ್ಥಸ್ಯ ಸರ್ವಸ್ಯಾಧಿಗಮೋ ಯತಃ ।
ತತಃ ಕೃಷ್ಣಾಚ್ಯುತಾನಂತ ವಿಷ್ಣುಸಂಜ್ಞಾಭಿರೀಡ್ಯತೇ ॥ ೫೪ ॥

ಸರ್ವಾರ್ಥಾಸ್ತ್ವಮಜ ವಿಕಲ್ಪನಾಭಿರೇಭಿ
ರ್ದೇವಾದ್ಯೈರ್ಧ್ರಿಯತಿ ಹಿ ಯೈರನಂತವಿಶ್ವಂ ।
ವಿಶ್ವಾತ್ಮಾ ತ್ವಮಿತಿವಿಕಾರಹೀನಮೇತ
ತ್ಸರ್ವಸ್ಮಿನ್ನಹಿ ಭವತೋಽಸ್ತಿ ಕಿಂಚಿದನ್ಯತ್ ॥ ೫೫ ॥

ತಂ ಬ್ರಹ್ಮಾ ಪಶುಪತಿರರ್ಯಮಾ ವಿಧಾತಾ
ಧಾತಾ ತ್ವಂ ತ್ರಿದಶಪತಿಸ್ತ್ವಮೀರಣೋಗ್ನಿಃ ।
ತೋಯೇಶೋ ಧನಪತಿರಂತಕಸ್ತ್ವಮೇಕೋ
ಭಿನ್ನಾರ್ಥೈರ್ಜಗದಭಿಪಾಸಿ ಶಕ್ತಿಭೇದೈಃ ॥ ೫೬ ॥

---

೫೩. ಓ ಸ್ವಾಮಿಯೇ ! ನಿನ್ನಲ್ಲಿ ನಾಮಜಾತಿ ಮುಂತಾದ ಕಲ್ಪನೆಗಳಿಲ್ಲ. ನಿತ್ಯನೂ, ಉತ್ಪತ್ತಿರಹಿತನೂ, ವಿಕಾರವಿಲ್ಲದವನೂ, ಆದ ಪರಬ್ರಹ್ಮನೇ ನೀನು.

೫೪. ಒಂದು ಕಲ್ಪನೆಯಿಲ್ಲದೆ ಯಾವ ವಸ್ತುವನ್ನೂ ಗ್ರಹಿಸಲಾಗುವುದಿಲ್ಲ. ಆದುದರಿಂದ ನಿನ್ನನ್ನು ಕೃಷ್ಣ, ಅಚ್ಯುತ, ಅನಂತ, ವಿಷ್ಣು ಎಂಬ ಹೆಸರುಗಳಿಂದ ಸ್ತೋತ್ರಮಾಡುವೆವು.

೫೫. ಪರಬ್ರಹ್ಮನೇ ! ನೀನು ಸಮಸ್ತವಸ್ತು ಸ್ವರೂಪನು. ದೇವಾದಿಗಳ ಕಲ್ಪನೆಯಿಂದ ಪ್ರಪಂಚಸ್ವರೂಪನಾಗಿರುವೆ ಆತ್ಮಸ್ವರೂಪದಿಂದ ನೀನು ವಿಕಾರವಿಲ್ಲದವನಾಗಿರುವೆ. ನಿನ್ನನ್ನು ಬಿಟ್ಟು ಮತೆತ್ತಿಂದು ಪದಾರ್ಥವಾವುದೂ ಇಲ್ಲ.

೫೬. ನೀನೇ ಬ್ರಹ್ಮನು, ಶಿವನು, ಸೂರ್ಯನು, ಸೃಷ್ಟಿಕರ್ತನು, ವೇದ ರೂಪನು, ದೇವೇಂದ್ರನು, ವಾಯು, ಅಗ್ನಿ ವರುಣ, ಕುಬೇರ, ಯಮ, ಎಂಬ ಬೇರೆ ಬೇರೆ ನಾಮರೂಪ ಶಕ್ತಿಗಳಿಂದ ಲೋಕವನ್ನು ಪಾಲಿಸುತ್ತಿರುವೆ.

ವಿಶ್ವಂ ಭವಾನ್ ಸೃಜತಿ ಸೂರ್ಯಗಭಸ್ತಿರೂಪೀ ॥
ವಿಶ್ವೇಶ ತೇ ಗುಣಮಯೋಯಮತಃ ಪ್ರಪಂಚಃ ।
ರೂಪಂ ಪರಂ ಸದಿತಿವಾಚಕಮಕ್ಷರಂ ಯತ್
ಜ್ಞಾನಾತ್ಮನೇ ಸದಸತೇ ಪ್ರಣತೋಽಸ್ಮಿ ತಸ್ಮೈ ॥ ೫೭ ॥

ಓಂ ನಮೋ ವಾಸುದೇವಾಯ ನಮಸ್ಸಂಕರ್ಷಣಾಯ ಚ ।
ಪ್ರದ್ಯುಮ್ನಾಯ ನಮಸ್ತುಭ್ಯಮನಿರುದ್ಧಾಯ ತೇ ನಮಃ ॥ ೫೮ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ಅಷ್ಟಾದಶೋಽಧ್ಯಾಯಃ

---

೫೭. ನೀನು ಸೂರ್ಯಕಿರಣರೂಪದಿಂದ ಪ್ರಪಂಚವನ್ನು ಸೃಷ್ಟಿಸುವೆ. ಈ ಪ್ರಪಂಚವು ನಿನ್ನ ತ್ರಿಗುಣಸ್ವರೂಪನಾದುದು ಸತ್ ಎಂಬ ಶಬ್ದಕ್ಕೆ ಅರ್ಥವಾದ ಜ್ಞಾನಸ್ವರೂಪನೂ ಕಾರ್ಯ ಕಾರಣರೂಪನೂ ಆದ ನಿನಗೆ ನಮಸ್ಕಾರಮಾಡುವೆನು,

೫೮. ವಾಸುದೇವನೂ, ಸಂಕರ್ಷಣನೂ, ಪ್ರದ್ಯುಮ್ನನೂ, ಅನಿರುದ್ಧನೂ. ಎಂಬ ಚತುರ್ವ್ಯೂಹಮೂರ್ತಿರೂಪನಾದ ನಿನಗೆ ನಮಸ್ಕಾರವು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ
ಹದಿನೆಂಟನೆಯ ಅಧ್ಯಾಯವು ಮುಗಿದುದು.

ಶ್ರೀಃ

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಏಕೋನವಿಂಶೋಽಧ್ಯಾಯಃ

॥ ಶ್ರೀ ಪರಾಶರಃ ॥

ಏವಮುಂತರ್ಜಲೇ ವಿಷ್ಣುಮಭಿಷ್ಟುಯ ಸ ಯಾದವಃ ।
ಅರ್ಚಯಾಮಾಸ ಸರ್ವೇಶಂ ಧೂಪಪುಷ್ಪೈರ್ಮನೋಮಯೈಃ ॥ ೧ ॥

ಪರಿತ್ಯಕ್ತಾನ್ಯವಿಷಯೋ ಮನಸ್ತತ್ರ ನಿವೇಶ್ಯ ಸಃ ।
ಬ್ರಹ್ಮಭೂತೇ ಚಿರಂ ಸ್ಥಿತ್ವಾ ವಿರರಾಮಸಮಾಧಿತಃ ॥ ೨ ॥

ಕೃತಕೃತ್ಯಮಿವಾತ್ಮಾನಂ ಮನ್ಯಮಾನೋ ಮಹಾಮತಿಃ ।
ಅಜಗಾಮ ರಥಂ ಭೂಯೋ ನಿರ್ಗಮ್ಯ ಯಮುನಾಂಭಸಃ ॥ ೩ ॥

ಹತ್ತೊಂಭತ್ತನೆಯ ಅಧ್ಯಾಯವು

೧-೪. ಹೀಗೆ ಯದುವಂಶದ ಅಕ್ರೂರನು ನೀರಿನಲ್ಲಿ ಮುಳುಗಿ ವಿಷ್ಣುವನ್ನು ಸ್ತೋತ್ರಮಾಡಿ ಮನೋಮಯವಾದ ಧೂಪ ಪುಷ್ಪಾದಿಗಳಿಂದ ಸರ್ವೇಶ್ವರನಾದ ಅವನನ್ನು ಪೂಜಿಸಿದನು. ಅವನು ಇತರ ವಿಷಯಗಳನ್ನು ಮನಸ್ಸಿನಲ್ಲಿ ಯೋಚಿಸದೆ ಪರಬ್ರಹ್ಮಸ್ವರೂಪದಲ್ಲಿ ಬಹಳಕಾಲ ಮನಸ್ಸನ್ನು ನಿಲ್ಲಿಸಿ ಸಮಾಧಿಯನ್ನು ಮುಗಿಸಿದನು. ಮಹಾ ಬುದ್ಧಿಶಾಲಿಯಾದ ಅವನು ತನ್ನನ್ನು ಕೃತಾರ್ಥನೆಂದು ತಿಳಿದುಕೊಂಡು ಯಮುನಾ ನದಿಯ ನೀರಿನಿಂದ ಎದ್ದು ಹೊರಟು ಪುನಃ ರಥದ ಹತ್ತಿರಕ್ಕೆ

ದದರ್ಶ ರಾಮಕೃಷ್ಣೌ ಚ ಯಥಾಪೂರ್ವಮವಸ್ಥಿತೌ ।
ವಿಸ್ಮಿತಾಕ್ಷಸ್ತದಾಕ್ರೂರಃ ತಂ ಚ ಕೃಷ್ಣೋಽಭ್ಯಭಾಷತ ॥ ೪ ॥

॥ ಶ್ರೀ ಕೃಷ್ಣಃ ॥

ನೂನಂ ತೇ ದೃಷ್ಟಮಾಶ್ಚರ್ಯಮಕ್ರೂರ ಯಮುನಾಜಲೇ ।
ವಿಸ್ಮಯೋತ್ಫುಲ್ಲನಯನೋ ಭವಾನ್ ಸಂಲಕ್ಷ್ಯತೇ ಯತಃ ॥ ೫ ॥

॥ ಅಕ್ರೂರಃ ॥

ಅಂತರ್ಜಲೇ ಯದಾಶ್ಚರ್ಯಂ ದೃಷ್ಟಂ ತತ್ರಮಯಾಚ್ಯುತ ।
ತದತ್ರಾಪಿ ಹಿ ಪಶ್ಯಾಮಿ ಮೂರ್ತಿಮತ್ಪುರತಃ ಸ್ಥಿತಂ ॥ ೬ ॥

ಜಗದೇತನ್ಮಹಾಶ್ಚರ್ಯರೂಪಂ ಯಸ್ಯ ಮಹಾತ್ಮನಃ ।
ತೇನಾಶ್ಚರ್ಯವರೇಣಾಹಂ ಭವತಾ ಕೃಷ್ಣ ಸಂಗತಃ ॥ ೭ ॥

ತತ್ಕಿಮೇತೇನ ಮಧುರಾಂ ಯಾಸ್ಯಾವೋ ಮಧುಸೂದನ ।
ಬಿಭೇಮಿ ಕಂಸಾದ್ದಿಗ್ಜನ್ಮ ಪರಪಿಂಡೋಪಜೀವಿನಾಂ ॥ ೮ ॥

ಬಂದನು. ಅಲ್ಲಿ ರಾಮಕೃಷ್ಣರು ಹಿಂದಿನಂತೆ ಇದ್ದರು. ಅಕ್ರೂರನು ಆಶ್ಚರ್ಯ ಪಡುತ್ತಿರಲು ಕೃಷ್ಣನು ಅವನನ್ನು ಕುರಿತು ಹೇಳಿದನು.

೫. " ಎಲೈ ಅಕ್ರೂರನೇ ! ಯಮುನೆಯ ನೀರಿನಲ್ಲಿ ಮುಳುಗಿದ್ದಾಗ ನೀನು ಏನೋ ಆಶ್ಚರ್ಯವನ್ನು ಕಂಡಿರುವೆ. ನಿನ್ನ ವಿಕಾಸವಾದ ಕಣ್ಣುಗಳನ್ನು ನೋಡಿದರೆ ಆಶ್ಚರ್ಯವನ್ನು ಅನುಭವಿಸಿದಂತೆ ಕಾಣುವುದು, " ಎಂದನು.

೬-೧೧. ಅಕ್ರೂರನು " ಎಲೈ ಕೃಷ್ಣನೇ ! ನೀರಿನೊಳಗೆ ನಾನು ಯಾವ ಆಶ್ಚರ್ಯವನ್ನು ಕಂಡೆನೋ ಅದೇ ಆಶ್ಚರ್ಯವು ಮೂರ್ತಿರೂಪದಿಂದ ನನ್ನೆದುರಿಗೆ ಇರುವುದೆಂದು ನೋಡುತ್ತಿರುವೆನು, ಆಶ್ಚರ್ಯರೂಪವಾದ ಈ ಜಗತ್ತು ಯಾವ

ಇತ್ಯುಕ್ತ್ವಾ ಚೋದಯಾಮಾಸ ಸ ಹಯಾನ್ ವಾತರಂಹಸಃ ।
ಸಂಪ್ರಾಪ್ತಶ್ಚಾಪಿ ಸಾಯಾಹ್ನೇ ಸೋಽಕ್ರೂರೋ ಮಧುರಾಂ ಪುರೀಂ ॥ ೯ ॥

ವಿಲೋಕ್ಯ ಮಧುರಾಂ ಕೃಷ್ಣಂ ರಾಮಂ ಚಾಹ ಸ ಯಾದವಃ ।
ಪದ್ಭ್ಯಾಂ ಯಾತಂ ಮಹಾವೀರ್ಯೌ ರಥೇನೈಕೋವಿಶಾಮ್ಯಹಂ ॥ ೧೦ ॥

ಗಂತವ್ಯಂ ವಸುದೇವಸ್ಯ ನೋ ಭವದ್ಭ್ಯಾಂ ತಥಾ ಗೃಹಂ ।
ಯುವಯೋರ್ಹಿ ಕೃತೇ ವೃದ್ಧಸ್ಯ ಕಂಸೇನ ನಿರಸ್ಯತೇ ॥ ೧೧ ॥

॥ ಶ್ರೀ ಪರಾಶರಃ ॥

ಇತ್ಯುಕ್ತ್ವಾ ಪ್ರವಿವೇಶಾಥಸೋಽಕ್ರೂರೋ ಮಧುರಾಂ ಪುರೀಂ ।
ಪ್ರವಿಷ್ಟೌ ರಾಮಕೃಷ್ಣೌ ಚ ರಾಜಮಾರ್ಗಮುಪಾಗತೌ ॥ ೧೨ ॥

ಸ್ತ್ರೀಭಿರ್ನರೈಶ್ಚ ಸಾನಂದಂ ಲೋಚನೈರಭಿವೀಕ್ಷಿತೌ ।
ಜಗೃತುರ್ಲೀಲಯಾ ವೀರೌ ಮತ್ತೌ ಬಾಲಗಜಾವಿವ ॥ ೧೩ ॥

ಮಹಾತ್ಮನಿಂದ ನಿರ್ಮಿತವಾಯಿತೋ ಅಂತಹ ಆಶ್ಚರ್ಯರೂಪನಾದ ನಿನ್ನೊಡನೆ ನಾನು ಸೇರಿರುವೆನು. ಈ ವಿಚಾರದಿಂದೇನು ಪ್ರಯೋಜನ? ಎಲೈ ಮಧುಸೂದನನೇ ಮಧುರೆಗೆ ಹೋಗೋಣ. ಕಂಸನಿಗೆ ನಾನು ಭಯಪಡುತ್ತೇನೆ. ಮತ್ತೊಬ್ಬರು ಕೊಟ್ಟ ಅನ್ನದಿಂದ ಜೀವಿಸುವ ಮನುಷ್ಯನನ್ನು ನಿಂದಿಸಬೇಕು" ಎಂದು ಹೇಳಿ ವಾಯುವೇಗದ ಕುದುರೆಗಳನ್ನು ವೇಗವಾಗಿ ನಡೆಸಿಕೊಂಡು ಆ ಅಕ್ರೂರನು ಸಂಧ್ಯಾಕಾಲಕ್ಕೆ ಮಧುರಾಪುರಿಯನ್ನು ಸೇರಿದನು. ಅಲ್ಲಿ ಅವನು ರಾಮಕೃಷ್ಣರನ್ನು ನೋಡಿ "ಶೂರರಾದ ನೀವಿಬ್ಬರೂ ಕಾಲಿನಲ್ಲಿ ನಡೆದುಕೊಂಡು ಬನ್ನಿ. ನಾನೊಬ್ಬನೇ ರಥದ ಮೇಲೆ ಹೋಗುವೆನು. ನೀವಿಬ್ಬರೂ ವಸುದೇವನ ಮನೆಗೆ ಹೋಗಬೇಡಿರಿ ನಿಮ್ಮಿಂದ ಮುದುಕನಾದ ಅವನನ್ನು ಕಂಸನು ಅಕ್ಷೇಪಿಸುವನು." ಎಂದು ಹೇಳಿದನು.

೧೨–೧೩. ಅಕ್ರೂರನು ಹೀಗೆಂದು ಹೇಳಿ ಮಧುರಾಪುರಿಯನ್ನು ಪ್ರವೇಶಿಸಿದನು. ರಾಮಕೃಷ್ಣರು ರಾಜಮಾರ್ಗದಲ್ಲಿ ನಡೆದು ಬಂದರು. ಮದಿಸಿದ ಆನೆಯ

ಭ್ರಮನಮಾಣೌ ತತೋ ದೃಷ್ಟ್ವಾ ರಜಕಂ ರಂಗಕಾರಕಂ ।
ಆಯಾಚೇತಾಂ ಸುರೂಪಾಣಿ ವಾಸಾಂಸಿ ರುಚಿರಾಣಿ ತೌ ॥ ೧೪ ॥

ಕಂಸಸ್ಯ ರಜಕಸ್ಸೋಽಥ ಪ್ರಸಾದಾರೂಢವಿಸ್ಮಯಃ ।
ಬಹೂನ್ಯಾಕ್ಷೇಪವಾಕ್ಯಾನಿ ಪ್ರಾಹೋಚ್ಚೈ ರಾಮಕೇಶವೌ ॥ ೧೫ ॥

ತತಸ್ತಲಪ್ರಹಾರೇಣ ಕೃಷ್ಣಸ್ತಸ್ಯ ದುರಾತ್ಮನಃ ।
ಪಾತಯಾಮಾಸ ರೋಷೇಣ ರಜಕಸ್ಯ ಶಿರೋ ಭುವಿ ॥ ೧೬ ॥

ಹತ್ವಾದಾಯ ಚ ವಸ್ತ್ರಾಣಿ ಪೀತನೀಲಾಂಬರೌ ತತಃ ।
ಕೃಷ್ಣರಾಮೌ ಮುದಾ ಯುಕ್ತೌ ಮಾಲಾಕಾರಗೃಹಂ ಗತೌ ॥ ೧೭ ॥

ವಿಕಾಸಿನೇತ್ರಯುಗಳೋ ಮಾಲಾಕಾರೋಽತಿವಿಸ್ಮಿತಃ ।
ಏತೌ ಕಸ್ಯ ಸುತೌ ಯಾತೌ ಮೈತ್ರೇಯಾಚಿಂತಯತ್ತದಾ ॥ ೧೮ ॥

ಮರಿಗಳಂತೆ ನಡೆದು ಬರುತ್ತಿರುವ ಅವರನ್ನು ಅಲ್ಲಿನ ಸ್ತ್ರೀಪುರುಷರು ಆನಂದದಿಂದ ನೋಡುತ್ತಿದ್ದರು. ಬೀದಿಯಲ್ಲಿ ತಿರುಗುತ್ತಿರುವ ಅವರಿಬ್ಬರೂ ಬಟ್ಟೆಗಳನ್ನು ಒಗೆದು ಮಡಿ ಮಾಡಿ ತರುತ್ತಿದ್ದ ಒಬ್ಬ ಅಗಸನನ್ನು ಕಂಡು ಒಳ್ಳೆಯ ಬೆಲೆಬಾಳುವ ವಸ್ತ್ರಗಳನ್ನು ಕೊಡೆಂದು ಕೇಳಿದರು. ಅವನು ಕಂಸನ ಅಗಸನು. ಅವನು ರಾಜನು ಕೊಟ್ಟ ಧನದಿಂದ ಗರ್ವಿತನಾಗಿದ್ದುದರಿಂದ ರಾಮಕೃಷ್ಣರನ್ನು ಕುರಿತು ಗಟ್ಟಿಯಾಗಿ ಅನೇಕ ಆಕ್ಷೇಪಕರವಾದ ಮಾತುಗಳನ್ನಾಡಿದನು.

೧೬--೨೦. ಅದನ್ನು ಕೇಳಿ ಕೃಷ್ಣನು ಕೋಪಿಸಿ ದುಷ್ಟನನ್ನು ಕೈಯಿಂದಲೇ ಹೊಡೆದು ಅವನ ತಲೆಯನ್ನು ನೆಲಕ್ಕೆ ಕೆಡವಿದನು. ಆಮೇಲೆ ರಾಮಕೃಷ್ಣರು ಆ ವಸ್ತ್ರಗಳಲ್ಲಿ ತಮಗೆ ಬೇಕಾದುವನ್ನು ತೆಗೆದುಕೊಂಡು ಸಂತೋಷದಿಂದ ಹೂವಾಡಿಗನ ಮನೆಗೆ ಹೋದರು. ಪ್ರಕಾಶಿಸುತ್ತಿರುವ ಕಣ್ಣುಗಳುಳ್ಳ ಅವರನ್ನು ನೋಡಿ

ಪೀತನೀಲಾಂಬರಧರೌ ತೌ ದೃಷ್ಟ್ವಾತಿಮನೋಹರೌ ।
ಸ ತರ್ಕಯಾಮಾಸ ತದಾ ಭುವಂ ದೇವಾವುಪಾಗತೌ ॥ ೧೯ ॥

ವಿಕಾಸಿಮುಖಪದ್ಮಾಭ್ಯಾಂ ತಾಭ್ಯಾಂ ಪುಷ್ಪಾಣಿ ಯಾಚಿತಃ ।
ಭುವಂ ವಿಷ್ಪೃಶ್ಯ ಹಸ್ತಾಭ್ಯಾಂ ಪಸ್ಪರ್ಶ ಶಿರಸಾ ಮಹೀಂ ॥ ೨೦ ॥

ಪ್ರಸಾದ ಪರವೌ ನಾಥೌ ಮಮ ಗೇಹಮುಪಾಗತೌ ।
ಧನ್ಯೋಽಹಮರ್ಚಯಿಷ್ಯಾಮೀತ್ಯಾಹ ತೌಮಾಲ್ಯಜೀವನಃ ॥ ೨೧ ॥

ತತಃ ಪ್ರಹೃಷ್ಟವದನಃ ತಯೋಃ ಪುಷ್ಪಾಣಿ ಕಾಮತಃ ।
ಚಾರೂಣ್ಯೇತಾನ್ಯಭೈತಾನಿ ಪ್ರದದೌ ಸ ಪ್ರಲೋಭಯನ್ ॥ ೨೨ ॥

ಪುನಃ ಪುನಃ ಪ್ರಣಮ್ಯೋಭೌ ಮಾಲಾಕಾರೋ ನರೋತ್ತಮೌ ।
ದದೌ ಪುಷ್ಪಾಣಿ ಚಾರೂಣಿ ಗಂಧವಂತ್ಯಮಲಾನಿ ಚ ॥ ೨೩ ॥

ಹೂವಾಡಿಗನು ಆಶ್ಚರ್ಯದಿಂದ ಇವರಾರ ಮಕ್ಕಳೆಂದು ಚಿಂತಿಸಿದನು. ಪೀತಾಂಬರ ನೀಲಾಂಬರಗಳನ್ನು ಧರಿಸಿದ ಅವರಿಬ್ಬರ ಮನೋಹರವಾವ ರೂಪವನ್ನು ನೋಡಿ ಅವನು ದೇವತೆಗಳೇ ಭೂಮಿಗೆ ಬಂದಿರಬೇಕೆಂದು ಊಹಿಸಿದನು. ಅವರಿಬ್ಬರೂ ನಗುತ್ತ ಹೂವನ್ನು ಕೇಳುತ್ತಲು ಅವನು ತನ್ನ ಕೈಗಳಿಂದ ಭೂಮಿಯನ್ನು ಮುಟ್ಟಿ ತಲೆಯಿಂದ ನಮಸ್ಕಾರ ಮಾಡಿದನು.

೨೧-೨೩. ಮತ್ತು ಅನುಗ್ರಹವಿಟ್ಟು ನನ್ನ ಮನೆಗೆ ದಯಮಾಡಿದಿರಿ ನಾನೇ ಕೃತಾರ್ಥನು. ಒಡೆಯರಾದ ನಿಮ್ಮನ್ನು ಪೂಜಿಸುವೆನು, ಎಂದು ಹೇಳಿ ಸಂತೋಷ ದಿಂದ ಅವರಿಬ್ಬರಿಗೂ ಬೇಕಾದಷ್ಟು ಹೂಗಳನ್ನು ಇದು ಹೆಚ್ಚು ಸುಗಂಧವಿಂದ ಕೂಡಿ ಚೆನ್ನಾಗಿರುವುದು, ಇದಕ್ಕಿಂತ ಇದು ಇನ್ನೂ ಚೆನ್ನಾಗಿದೆ ಎಂದು ಹೇಳುತ್ತ ಮತ್ತೆ ಮತ್ತೆ ನಮಸ್ಕಾರ ಮಾಡುತ್ತ ಹೊಸದಾಗಿಯೂ ನಿರ್ಮಲವಾಗಿಯೂ ಸುವಾಸನೆ ಯಾಗಿಯೂ ಇರುವ ಹೂಗಳನ್ನು ಕೊಟ್ಟನು.

ಮಾಲಾಕಾರಾಯ ಕೃಷ್ಣೋಽಪಿ ಪ್ರಸನ್ನಃ ಪ್ರದದೌ ವರಾನ್ ।
ಶ್ರೀಸ್ತ್ವಾಂ ಮತ್ಸಂಶ್ರಯಾ ಭದ್ರ ನ ಕದಾಚಿತ್ತ್ಯಜಿಷ್ಯತಿ ॥ ೨೪ ॥

ಬಲಹಾನಿರ್ನ ತೇ ಸೌಮ್ಯ ಧನಹಾನಿರಥಾಪಿ ವಾ ।
ಯಾವದ್ದಿನಾನಿ ತಾವಚ್ಚ ನ ನಶಿಷ್ಯತಿ ಸಂತತಿಃ ॥ ೨೫ ॥

ಭುಕ್ತ್ವಾ ಚ ವಿಪುಲಾನ್ ಭೋಗಾನ್ ತ್ವಮಂತೇ ಮತ್ಪ್ರಸಾದತಃ ।
ಮಮಾನುಸ್ಮರಣಂ ಪ್ರಾಪ್ಯ ದಿವ್ಯಂ ಲೋಕಮವಾಪ್ಸ್ಯಸಿ ॥ ೨೬ ॥

ಧರ್ಮೇ ಮನಶ್ಚ ತೇ ಭದ್ರ ಸಾರ್ವಕಾಲಂ ಭವಿಷ್ಯತಿ ।
ಯುಷ್ಮತ್ಸಂತತಿ ಜಾತಾನಾಂ ದೀರ್ಘಮಾಯುರ್ಭವಿಷ್ಯತಿ ॥ ೨೭ ॥

ನೋಪಸರ್ಗಾದಿಕಂ ದೋಷಂ ಯುಷ್ಮತ್ಸಂತತಿಸಂಭವಃ ।
ಅವಾಪ್ಸ್ಯತಿ ಮಹಾಭಾಗ ಯಾವತ್ಸೂರ್ಯೋದಯೇ ಭವಿಷ್ಯತಿ ॥ ೨೮ ॥

೨೪-೨೮. ಕೃಷ್ಣನು ಹೂವಾಡಿಗನಿಗೆ ಪ್ರಸನ್ನನಾಗಿ " ಎಲೈ ಸಜ್ಜನನೇ ಮತ್ತು ಮಂಗಳಕರನೇ ನನ್ನನ್ನಾಶ್ರಯಿಸಿದ ಲಕ್ಷ್ಮಿಯು ನಿನ್ನನ್ನೆಂದಿಗೂ ಬಿಟ್ಟು ಹೋಗುವುದಿಲ್ಲ. ನಿನಗೆ ಬಲಹಾನಿಯೂ ಧನಹಾನಿಯೂ ಸಂತತಿ ನಾಶವೂ ಆಗುವುದಿಲ್ಲ. ನೀನು ಈ ಭೂಮಿಯಲ್ಲಿ ನನ್ನ ಅನುಗ್ರಹದಿಂದ ಸಮಸ್ತ ಸುಖಗಳನ್ನೂ ಅನುಭವಿಸಿ ಕೊನೆಗೆ ನನ್ನ ಸ್ಮರಣೆಯನ್ನು ಮಾಡುತ್ತ ದಿವ್ಯಲೋಕಗಳನ್ನು ಪಡೆಯುವೆ. ನಿನ್ನ ಮನಸ್ಸು ಯಾವಾಗಲೂ ಧರ್ಮಬುದ್ಧಿಯುಳ್ಳದಾಗಿರುವುದು. ನಿನ್ನ ವಂಶದಲ್ಲಿ ಹುಟ್ಟಿದವರು ಹೆಚ್ಚುಕಾಲ ಬದುಕುವರು. ಅವರಿಗೆ ದಿವ್ಯಭೌಮ ಮುಂತಾದ ಉಪಸರ್ಗ (ಬಾಧೆ) ಗಳು ಉಂಟಾಗುವುದಿಲ್ಲ. ಸೂರ್ಯನಿರುವವರೆಗೂ ನಿನ್ನ ವಂಶವು ಈ ಗುಣಗಳಿಂದ ಕೂಡಿರುವುದು. " ಎಂದು ವರವನ್ನು ಕೊಟ್ಟನು.

॥ ಶ್ರೀ ಪರಾಶರಃ ॥

ಕಥ್ಯತಾಮಾತ್ಮಯೋನೇ ಬಲದೇವಸಹಾಯವಾನ್ ।
ಮುನಿಶ್ರೇಷ್ಠ ಮಾಲಾಕಾರೇಣ ಪೂಜಿತಃ ॥ ೨೯ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ಏಕೋನವಿಂಶೋಧ್ಯಾಯಃ

---

೨೯. ಹೀಗೆಂದು ಹೇಳಿ ಕೃಷ್ಣನು ಬಲರಾಮನೊಡನೆ ಹೂವಾಡಿಗನ ಪೂಜೆಯನ್ನು ಸ್ವೀಕರಿಸಿ ಅವನ ಮನೆಯಿಂದ ಹೊರಟನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ

ಹತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ವಿಂಶೋಽಧ್ಯಾಯಃ

॥ ಶ್ರೀ ಪರಾಶರಃ ॥

ರಾಜಮಾರ್ಗೇ ತತಃ ಕೃಷ್ಣಸ್ತಾನುಲೇಪನಧಾಜನಾಂ ।
ದದರ್ಶ ಕುಬ್ಜಾಮಾಯಾಂತೀಂ ನವಯೌವನಗೋಚರಾಂ ॥ ೧ ॥

ತಾಮಾಹ ಲಲಿತಂ ಕೃಷ್ಣಃ ಕಸ್ಯೇದಮನುಲೇಪನಂ ।
ಭವತ್ಯಾನೀಯತೇ ಸತ್ಯಂ ವದೇಂದೀವರಲೋಚನೇ ॥ ೨ ॥

ಸಕಾಮೇನೇವ ಸಾ ಪ್ರೋಕ್ತಾ ಸಾನುರಾಗಾ ಹರಿಂ ಪ್ರತಿ ।
ಪ್ರಾಹ ಸಾ ಲಲಿತಂ ಕುಬ್ಜಾ ತದ್ದರ್ಶನಬಲಾಕೃತಾ ॥ ೩ ॥

ಕಾಂತ ಕಸ್ಮಾನ್ನ ಜಾನಾಸಿ ಕಂಸೇನ ವಿನಿಯೋಜಿತಾಂ ।
ನೈಕವಕ್ರೇತಿ ವಿಖ್ಯಾತಾಮನುಲೇಪನಕರ್ಮಣಿ ॥ ೪ ॥

ಇಪ್ಪತ್ತನೆಯ ಅಧ್ಯಾಯವು

೧–೩. ಕೃಷ್ಣನು ರಾಜಮಾರ್ಗದಲ್ಲಿ ಹೋಗುತ್ತ ಗಂಧದ ಬಟ್ಟಲನ್ನು ಹಿಡಿದು ಬರುತ್ತಿರುವ ಯೌವನವತಿಯಾದ ಕುಬ್ಜೆಯನ್ನು ನೋಡಿದನು. ಆಗ ಕೃಷ್ಣನು ನಗುತ್ತ ಅವಳನ್ನು ಕುರಿತು " ಈ ಗಂಧವು ಯಾರದು ? ನೀನು ಯಾರಿಗೆ ತೆಗೆದು ಕೊಂಡುಹೋಗಿ ಕೊಡುವೆ ? ನಿಜವನ್ನು ಹೇಳು " ಎಂದು ಕೇಳಿದನು.

೩–೫. ಆ ಕುಬ್ಜೆಯು ಅವನನ್ನು ನೋಡಿದುದರಿಂದ ಪ್ರೀತಿಯುಳ್ಳವಳಾಗಿ ' ಎಲೈ ಮನೋಹರನೇ ? ನಾನು ಅರೆದ ಗಂಧವು ಕಂಸನಿಗೆ ಪ್ರೀತಿಪಾತ್ರವಾದುದು.

ನಾನ್ಯಚಿತ್ತೇಂ ಕಂಸಸ್ಯ ಪ್ರೀತಯೇ ಹ್ಯನುಲೇಪನಂ ।
ಭವತಾಮ್ಮಹಮತೀವಾಸ್ಯ ಪ್ರಸಾದಧನಭಾಜನಂ ॥ ೫ ॥

॥ ಶ್ರೀ ಕೃಷ್ಣಃ ॥

ಸುಗಂಧಮೇತದ್ರಾಜಾರ್ಹಂ ರುಚಿರಂ ರುಚಿರಾನನೇ ।
ಆವಯೋರ್ಗಾತ್ರಸದೃಶಂ ದೀಯತಾಮನುಲೇಪನಂ ॥ ೬ ॥

॥ ಶ್ರೀ ಪರಾಶರಃ ॥

ತ್ರುತ್ಯೈವ ತದಾಹ ಸಾ ಕುಬ್ಜಾ ಗೃಹ್ಯತಾಮಿತಿ ಸಾದರಂ ।
ಅನುಲೇಪನಂ ಚ ಪ್ರದದೌ ಗಾತ್ರಯೋರ್ಗ್ಮಮಥೋಭಯೋಃ ॥ ೭ ॥

ಭಕ್ತ್ಯಾಚ್ಛೈದಾನುಲಿಪ್ತಾಂಗೌ ತತಸ್ತೌ ಪುರುಷರ್ಷಭೌ ।
ಸೇಂದ್ರಚಾಪೌ ನ್ಯರಾಜೇತಾಂ ಸಿತಕೃಷ್ಣಾವಿವಾಂಬುದೌ ॥ ೮ ॥

ಅಷ್ಟನಿಗೆ ಗಂಧವನ್ನು ತೆಗೆದುಕೊಂಡುಹೋಗಿ ಕೊಡುವುದೇ ನನ್ನ ಕೆಲಸವು. ಇದ ರಿಂದ ನನ್ನ ವಿಷಯದಲ್ಲಿ ಅವನು ಪ್ರಸನ್ನನಾಗಿರುವನು. ಅನೇಕ ವಕ್ರಾವಯವಗ ಳುಳ್ಳವಳು ನಾನು ' ಎಂದು ಹೇಳಿದಳು.

೬-೮. ಕೃಷ್ಣನು ' ಎಲೈ ಸುಂದರಮುಖಿಯೇ ! ಈ ಗಂಧವು ರಾಜಯೋಗ್ಯ ವಾಗಿರುವುದು. ನಮ್ಮಿಬ್ಬರ ಶರೀರಕ್ಕೆ ತಕ್ಕ ಗಂಧವನ್ನು ಕೊಡು" ಎಂದನು. ಕುಬ್ಜೆಯು ಈ ಮಾತನ್ನು ಕೇಳಿ ಪ್ರೀತಿಯಿಂದ ತೆಗೆದುಕೊಳ್ಳಿರೆಂದು ಅವರಿಬ್ಬರಿಗೂ ತಕ್ಕಷ್ಟು ಗಂಧ ವನ್ನು ಕೊಟ್ಟಳು. ಆ ಮೇಲೆ ಅವರಿಬ್ಬರೂ ಗಂಧದಿಂದ ಎದೆ ಭುಜ ಮುಂತಾದ ಸ್ಥಳಗಳಲ್ಲಿ ಚಿತ್ರಗಳನ್ನು ಬರೆದುಕೊಂಡುದರಿಂದ ಆ ಗಂಧವು ಬಿಳಿದಾದ ಮತ್ತು ಕಪ್ಪಾದ ಮೋಡಗಳ ಮೇಲೆ ಕಾಮನ ಬಿಲ್ಲಿದ್ದಂತೆ ಬಗೆಬಗೆಯು ಬಣ್ಣದಿಂದ ಪ್ರಕಾಶಿ ಸಿತು.

ತತಸ್ತಾಂ ಚುಬುಕೇ ಶೌರಿರುಲ್ಲಾಪನವಿಧಾನವಿತ್ ।
ಉತ್ಪಾಟ್ಯ ತೋಲಯಾಮಾಸ ದ್ವ್ಯಂಗುಳೀನಾಗ್ರಪಾಣಿನಾ ॥ ೯ ॥

ಚಕರ್ಷ ಪದ್ಭ್ಯಾಂ ಚ ತದಾ ಋಜುತ್ವಂ ಕೇಶವೋಽನಯತ್ ।
ತತಸ್ಸಾ ಋಜುತಾಂ ಪ್ರಾಪ್ತಾ ಯೋಷಿತಾಮಭವದ್ವರಾ ॥ ೧೦ ॥

ವಿಲಾಸಲಲಿತಂ ಸ್ರಾಹ ಪ್ರೇಮಗರ್ಭಭರಾಲಸಂ ।
ವಸ್ರೇ ಪ್ರಗೃಹ್ಯ ಗೋವಿಂದಂ ಮಮ ಗೇಹಂ ವ್ರಜೇತಿ ವೈ ॥ ೧೧ ॥

ಏವಮುಕ್ತಸ್ತಯಾ ಶೌರೀ ರಾಮಸ್ಯಾಲೋಕ್ಯ ಚಾನನಂ ।
ಪ್ರಹಸ್ಯ ಕುಬ್ಜಾಂ ತಾಮಾಹ ನೈಕವಕ್ರಾಮನಿಂದಿತಾಂ ॥ ೧೨ ॥

ಆಯಾಸ್ಯೇ ಭವತೀಗೇಹಮಿತಿ ತಾಂ ಪ್ರಹಸನ್ ಹರಿಃ ।
ವಿಸಸರ್ಜ ಜಹಾಸೋಚ್ಚೈಃ ರಾಮಸ್ಯಾಲೋಕ್ಯ ಚಾನನಂ ॥ ೧೩ ॥

೯–೧೦. ಆ ಮೇಲೆ ಕೃಷ್ಣನು ಕುಬ್ಜೆಯ ಗಲ್ಲದಲ್ಲಿ ತನ್ನ ಎರಡು ಬೆರಳುಗಳನ್ನಿಟ್ಟು ಎತ್ತಿ ಅವಳನ್ನು ತೂಗಾಡಿಸಿ ತನ್ನ ಪಾದಗಳಿಂದ ಅವಳ ಪಾದಗಳನ್ನು ಮೆಟ್ಟಿ ಎಳೆದು ಅವಳ ಶರೀರವನ್ನು ಸರಳವಾಗಿ ಮಾಡಿದನು. ಬಳಿಕ ಅವಳ ಅವಯವಗಳೆಲ್ಲ ಸರಳವಾಗಿ ಸ್ತ್ರೀಯರಲ್ಲಿ ಶ್ರೇಷ್ಠಳೆನಿಸಿಕೊಂಡಳು.

೧೧–೧೩. ಅವಳು ಕೃಷ್ಣನ ವಸ್ತ್ರವನ್ನು ಹಿಡಿದುಕೊಂಡು ಅಂತರ್ಯವಾದ ಪ್ರೇಮದಿಂದ ಮೆಲ್ಲಗೆ ಕಡೆಗಣ್ಣಿನ ದೃಷ್ಟಿಯಿಂದ ನೋಡುತ್ತ ನಮ್ಮ ಮನೆಗೆ ಬರಬೇಕೆಂದು ಕೃಷ್ಣನಿಗೆ ಹೇಳಿದಳು. ಈ ಮಾತನ್ನು ಕೇಳಿ ಕೃಷ್ಣನು ಬಲರಾಮನ ಮುಖವನ್ನು ನೋಡಿ ನಗುತ್ತ ಕುಬ್ಜೆಯನ್ನು ಕುರಿತು ಕಂಸನನ್ನು ಕೊಂದು ನಮ್ಮ ಬಂಧುಗಳಿಗೆಲ್ಲ ಸುಖವನ್ನುಂಟುಮಾಡಿ ನಿಮ್ಮ ಮನೆಗೆ ಬರುತ್ತೇವೆಂದು ಅವಳನ್ನು ಕಳುಹಿಸಿಕೊಟ್ಟು ಅವಳ ಕಾಮಾತುರತೆಯ ವಿಷಯದಲ್ಲಿ ರಾಮನ ಮುಖವನ್ನು ನೋಡುತ್ತ ಗಟ್ಟಿಯಾಗಿ ನಕ್ಕನು .

ಭಕ್ತಿಚ್ಛೇದಾನುಲಿಪ್ತಾಂಗೌ ನೀಲಪೀತಾಂಬರೌ ತು ತೌ ।
ಧನುಶ್ಶಾಲಾಂ ತತೋ ಯಾತೌ ಚಿತ್ರಮಾಲ್ಯೋಪಶೋಭಿತೌ ॥ ೧೪ ॥

ಆಯೋಗಂ ತದ್ಧನೂರತ್ನಂ ಶಾಙ್ಗಾಂ ಪೃಷ್ಟ್ವಾಸ್ತು ರಕ್ಷಿಭಿಃ ।
ಅಜ್ಞಾತೇ ಸಹಸಾ ಕೃಷ್ಣೋ ಗೃಹೀತ್ವಾಪೂರಯದ್ಧನುಃ ॥ ೧೫ ॥

ತತಃ ಪೂರಯತಾ ತೇನ ಭಜ್ಯಮಾನಂ ಬಲಾದ್ಧನುಃ ।
ಚಕಾರ ಸುಮಹಚ್ಛಬ್ದ ಮಧುರಾ ಯೇನ ಪೂರಿತಾ ॥ ೧೬ ॥

ಅಥುಯುಕ್ತೌ ತತಸ್ತೌ ತು ಭಗ್ನೇ ಧನುಷಿ ರಕ್ಷಿಭಿಃ ।
ರಕ್ಷಿಸೈನ್ಯಂ ನಿಹತ್ಯೋಧೌ ನಿಷ್ಕ್ರಾಂತೌ ಕಾರ್ಮುಕಾಲಯಾತ್ ॥ ೧೭ ॥

ಅಕ್ರೂರಾಗಮವೃತ್ತಾಂತಮುಪಲಭ್ಯ ಮಹದ್ಧನುಃ ।
ಭಗ್ನಂ ಶ್ರುತ್ವಾ ಚ ಕಂಸೋಽಪಿ ಪ್ರಾಹ ಚಾಣೂರಮುಷ್ಟಿಕೌ ॥ ೧೮ ॥

೧೪–೧೭. ಅನಂತರ ಗಂಧವನ್ನು ಬಗೆಬಗೆಯ ಚಿತ್ರಗಳಿಂದ ಮೈಗೆ ಬಳದುಕೊಂಡ ರಾಮಕೃಷ್ಣರು ವಿಚಿತ್ರವಾಗಿ ಹೂಗಳನ್ನಲಂಕರಿಸಿಕೊಂಡು ಧನುಸ್ಸನ್ನಿಟ್ಟಿದ್ದ ಆಯುಧ ಶಾಲೆಗೆ ಹೋದರು. ಪೂಜೆಗಾಗಿ ಇಟ್ಟಿದ್ದ ಆ ಶ್ರೇಷ್ಠವಾದ ಧನುಸ್ಸು ಎಲ್ಲಿರುವುದೆಂದು ಕಾವಲುಗಾರರನ್ನು ಕೇಳುತ್ತಲು ಅವರು ತೋರಿಸಿದೊಡನೆಯೇ ಕೃಷ್ಣನು ಆ ಧನುಸ್ಸನ್ನು ತೆಗೆದುಕೊಂಡು ಅದಕ್ಕೆ ಹಗ್ಗವನ್ನು ಕಟ್ಟಿದನು. ಕೃಷ್ಣನು ಆ ಧನುಸ್ಸಿನ ಹಗ್ಗವನ್ನೆಳೆಯುತ್ತಿರುವಾಗ ಅದು ಮುರಿದು ಹೋದ ಶಬ್ದವು ಮಧುರಾಪಟ್ಟಣದ ಲ್ಲೆಲ್ಲಾ ತುಂಬಿತು. ಕಾವಲುಗಾರರು ಧನುಸ್ಸನ್ನು ಮುರಿದುದಕ್ಕೆ ಆಕ್ಷೇಪಿಸುತ್ತಲು ಇಬ್ಬರೂ ಆ ಕಾವಲು ಸೇನೆಯನ್ನು ಕೊಂದು ಆ ಆಯುಧಗಳ ಮನೆಯಿಂದ ಹೊರಟರು.

೧೮-೨೩. ಕಂಸನು ಅಕ್ರೂರನು ಬಂದ ವೃತ್ತಾಂತವನ್ನೂ ಧನುಸ್ಸು ಮುರಿದ ಶಬ್ದವನ್ನೂ ಕೇಳಿ ಚಾಣೂರ ಮುಷ್ಟಿಕರೆಂಬ ಜಟ್ಟಿಗಳನ್ನು ಕರೆದು ಅವರನ್ನು

॥ ಕಂಸಃ ॥

ಗೋಪಾಲದಾರಕೌ ಪ್ರಾಪ್ತೌ ಭವದ್ಭ್ಯಾಂ ತೌ ಮಮಾಗ್ರತಃ ।
ಮಲ್ಲಯುದ್ಧೇನ ಹಂತವ್ಯೌ ಮಮ ಪ್ರಾಣಹರೌ ಹಿ ತೌ ॥ ೯೯ ॥

ನಿಯುದ್ಧೇ ತದ್ವಿನಾಶೇನ ಭವದ್ಭ್ಯಾಂ ತೋಷಿತೋಹ್ಯಹಂ ।
ದಾಸ್ಯಾಮ್ಯಭಿಮತಾನ್ಕಾಮಾನ್ ನಾನ್ಯಥೈತೌ ಮಹಾಬಲೌ ॥ ೯೦ ॥

ನ್ಯಾಯತೋಽನ್ಯಾಯತೋ ವಾಪಿ ಭವದ್ಭ್ಯಾಂ ತೌ ಮಮಾಹಿತೌ ।
ಹಂತವ್ಯೌ ತದ್ವಧಾದ್ರಾಜ್ಯಂ ಸಾಮಾನ್ಯಂ ವಾಂ ಭವಿಷ್ಯತಿ ॥ ೯೧ ॥

ಇತ್ಯಾದಿಶ್ಯ ಸ ತೌ ಮಲ್ಲೌ ತತಶ್ಚಾಹೂಯ ಹಸ್ತಿಪಂ ।
ಪ್ರೋವಾಚೋಚ್ಚೈಸ್ತ್ವಯಾ ಮಲ್ಲ ಸಮಾಜದ್ವಾರಿ ಕುಂಜರಃ ॥ ೯೨ ॥

ಸ್ಥಾಪ್ಯಃ ಕುವಲಯಾಪೀಡಃ ಶೀಘ್ರಂ ತೌ ಗೋಪದಾರಕೌ ।
ಘಾತನೀಯೌ ನಿಯುದ್ಧಾಯ ರಂಗದ್ವಾರಮುಪಾಗತೌ ॥ ೯೩ ॥

ಕುರಿತು ' ಗೊಲ್ಲರ ಹುಡುಗರಿಬ್ಬರು ಬಂದಿರುವರು, ಅವರು ನನ್ನನ್ನು ಕೊಲ್ಲುವರಂತೆ, ನನ್ನಿದುರಿಗೆ ನೀವು ಅವರನ್ನು ಜಟ್ಟಿಯಕಾಳಗದಲ್ಲಿ ಕೊಲ್ಲಬೇಕು. ಮಲ್ಲಯುದ್ಧದಲ್ಲಿ ಅವರು ನಾಶವಾದರೆ ನಾನು ಸಂತೋಷದಿಂದ ನೀವು ಕೇಳಿದುದನ್ನು ಕೊಡುವೆನು. ಈ ನನ್ನ ಮಾತು ಸುಳ್ಳಲ್ಲ. ನ್ಯಾಯದಿಂದಲಾಗಲಿ ಅನ್ಯಾಯದಿಂದಲಾಗಲಿ ನನ್ನ ಶತ್ರುಗಳಾದ ಅವರನ್ನು ನೀವು ಕೊಂದರೆ ಈ ರಾಜ್ಯವು ನನಗೂ ನಿಮಗೂ ಸಮಾನವಾದುದೆಂದು ತಿಳಿಯಿರಿ ' ಎಂದು ಅಪ್ಪಣೆಮಾಡಿ ಆನೆಯ ಮಾವಟಿಗನನ್ನು ಕರೆದು ' ನೀನು ಜಟ್ಟಿಗಳ ಸಮಾಜದ ಬಾಗಿಲಿನಲ್ಲಿ ಕುವಲಯಾಪೀಡವೆಂಬ ಆನೆಯನ್ನು ಇಟ್ಟುಕೊಂಡಿರು. ಆ ಗೊಲ್ಲಹುಡುಗರು ಆ ಬಾಗಿಲಿಗೆ ಬಂದಾಗ ಆನೆಯಿಂದ ಅವರನ್ನು ಕೊಲ್ಲಿಸು ' ಎಂದು ಅಪ್ಪಣೆ ಮಾಡಿದನು.

ತಮುಪ್ಯಾಜ್ಞಾಪ್ಯ ದೃಷ್ಟ್ವಾ ಚ ಸರ್ವಾನ್ಮಂಚಾನುಪಾಕೃತಾನ್ ।
ಅಸನ್ನಮರಣಃ ಕಂಸಃ ಸೂರ್ಯೋದಯಮುದೈಕ್ಷತ ॥ ೨೪ ॥

ತತಸ್ಸಮಸ್ತಮಂಚೇಷು ನಾಗರಸ್ತದಾ ಜನಃ ।
ರಾಜಮಂಚೇಷು ಚಾರೂಢಾಸ್ಸಹಭೃತ್ಯೈರ್ನರಾಧಿಪಾಃ ॥ ೨೫ ॥

ಮಲ್ಲಪ್ರಾಶ್ನಿಕವರ್ಗಶ್ಚ ರಂಗಮಧ್ಯಸಮೀಪಗಃ ।
ಕೃತಃ ಕಂಸೇನ ಕಂಸೋಽಪಿ ತುಂಗಮಂಚೇ ವ್ಯವಸ್ಥಿತಃ ॥ ೨೬ ॥

ಅಂತಃ ಪುರಾಣಾಂ ಮಂಚಾಶ್ಚ ತಥಾಽನ್ಯೇ ಪರಿಕಲ್ಪಿತಾಃ ।
ಅನ್ಯೇ ಚ ವಾರಮುಖ್ಯಾನಾಂ ಅನ್ಯೇ ನಾಗರಯೋಷಿತಾಂ ॥ ೨೭ ॥

ನಂದಗೋಪಾದಯೋ ಗೋಪಾಃ ಮಂಚೇಷ್ವನ್ಯೇಷು ಚ ಸ್ಥಿತಾಃ ।
ಅಕ್ರೂರವಸುದೇವೌ ಚ ಮಂಚಪ್ರಾಂತೇ ವ್ಯವಸ್ಥಿತೌ ॥ ೨೮ ॥

೨೪–೨೯. ಕಂಸನು ಮಾವಟಿಗನಿಗೆ ಆಜ್ಞೆಮಾಡಿದಮೇಲೆ ಜಟ್ಟಿಗಳ ಮಲ್ಲಯುದ್ಧವು ನಡೆಯುವ ಸ್ಥಳದಲ್ಲಿ ಎಲ್ಲರಿಗೂ ಕುಳಿತುಕೊಳ್ಳಲು ಸಿದ್ಧಮಾಡಿದ್ದ ಪೀಠಗಳನ್ನು ನೋಡಿ ಮರಣಕಾಲವು ಸಮೀಪಿಸಿದ ಅವನು ಸೂರ್ಯೋದಯವಾಗುವುದನ್ನೇ ನಿರೀಕ್ಷಿಸುತ್ತಿದ್ದನು. ಬೆಳಗಾದಮೇಲೆ ಎಲ್ಲ ಪೀಠಗಳಲ್ಲಿಯೂ ಪಟ್ಟಣಿಗರು ಬಂದು ಕುಳಿತರು. ರಾಜರ ಪೀಠಗಳಲ್ಲಿ ಸೇವಕರೊಡನೆ ರಾಜರುಗಳು ಬಂದು ಕುಳಿತರು. ಮಲ್ಲಯುದ್ಧದಲ್ಲಿ ಯುಕ್ತಾ ಯುಕ್ತಗಳನ್ನು ಪರೀಕ್ಷಿಸುವವರ ಗುಂಪು ರಂಗಕ್ಕೆ ಸಮೀಪದಲ್ಲಿರಬೇಕೆಂದು ಕಂಸನು ಗೊತ್ತುಮಾಡಿ ತಾನು ಎತ್ತರವಾದ ಪೀಠದಮೇಲೆ ಕುಳಿತುಕೊಂಡನು. ಅಂತಃಪುರದ ಸ್ತ್ರೀಯರಿಗೂ ಸೂಳೆಯರಿಗೂ, ಪಟ್ಟಣದ ಸ್ತ್ರೀ ಜನರಿಗೂ ಬೇರೆ ಬೇರೆ ಪೀಠಗಳಿದ್ದುವು. ನಂದಗೋಪನೇ ಮೊದಲಾದ ಗೊಲ್ಲರು ಬೇರೆ ಪೀಠಗಳಲ್ಲಿ ಕುಳಿತಿದ್ದರು. ಅಕ್ರೂರ ವಸುದೇವರಿಬ್ಬರೂ ಪೀಠದ ತುದಿಯಲ್ಲಿ ಕುಳಿತಿದ್ದರು. ನಗರ ಸ್ತ್ರೀಯರ ನಡುವೆ ದೇವಕಿಯು ಪುತ್ರರ ಕ್ಷೇಮ

ನಾಗರೀಯೋಷಿತಾಂ ಮಧ್ಯೇ ದೇವಕೀ ಪುತ್ರಗರ್ಧಿನೀ ।
ಅಂತಕಾಲೇಽಪಿ ಪುತ್ರಸ್ಯ ದ್ರಕ್ಷ್ಯಾಮೀತಿ ಮುಖಂ ಸ್ಥಿತಾ ॥ ೪೯ ॥

ವಾದ್ಯಮಾನೇಷು ತೂರ್ಯೇಷು ಚಾಣೂರೇ ಚಾತಿವಲ್ಗತಿ ।
ಹಾಹಾಕಾರಪರೇ ಲೋಕೇ ಹ್ಯಾಸ್ಫೋಟಯತಿ ಮುಷ್ಟಿಕೇ ॥ ೫೦ ॥

ಈಷದ್ಧಸಂತೌ ತೌ ವೀರೌ ಬಲಭದ್ರ ಜನಾರ್ದನೌ ।
ಗೋಪವೇಷಧರೌ ಬಾಲೌ ರಂಗದ್ವಾರಮುಪಾಗತೌ ॥ ೫೧ ॥

ತತಃ ಕುವಲಯಾಪೀಡೋ ಮಹಾಮಾತ್ರಪ್ರಚೋದಿತಃ ।
ಅಭ್ಯಧಾವತ್ಸುವೇಗೇನ ಹಂತುಂ ಗೋಪಕುಮಾರಕೌ ॥ ೫೨ ॥

ಹಾಹಾಕಾರೋ ಮಹಾನ್ ಜಜ್ಞೇ ರಂಗಮಧ್ಯೇ ದ್ವಿಜೋತ್ತಮ ।
ಬಲದೇವೋಽನುಜಂ ದೃಷ್ಟ್ವಾ ವಚನಂ ಚೇದಮಬ್ರವೀತ್ ॥ ೫೩ ॥

ವನ್ನು ಪೇಕ್ಷಿಸುತ್ತ ಕೊನೆಗಾಲದಲ್ಲಿಯಾದರೂ ಮಗನ ಮುಖವನ್ನು ನೋಡುವೆನೆಂದು ನಿಂತಿದ್ದಳು.

೩೦-೩೨. ಮಲ್ಲರಂಗದಲ್ಲಿ ವಾದ್ಯಗಳು ಧ್ವನಿಮಾಡುತ್ತಿರಲು ಚಾಣೂರನು ವಿಶೇಷವಾಗಿ ಚಲಿಸುತ್ತಲೂ, ಮುಷ್ಟಿಕನು ಭುಜವನ್ನು ತಟ್ಟಿಕೊಳ್ಳುತ್ತಲೂ ಜನರೆಲ್ಲರೂ ಹಾಹಾಕಾರ ಮಾಡುತ್ತ ಶ್ಲಾಘಿಸುತ್ತಿರಲು ಬಲರಾಮಕೃಷ್ಣರು ಮುಗುಳು ನಗೆಯನ್ನು ನಗುತ್ತ ಗೊಲ್ಲರ ವೇಷದಿಂದ ಮಲ್ಲರಂಗದ ಬಾಗಿಲಿಗೆ ಬಂದರು. ಆಗ ಮಾವಟಿಗನಿಂದ ಪ್ರೇರಿತವಾದ ಕುವಲಯಾ ಪೀಡವೆಂಬ ಆನೆಯು ವೇಗವಾಗಿ ಬಂದು ರಾಮಕೃಷ್ಣರನ್ನು ಕೊಲ್ಲುವ ಪ್ರಯತ್ನವನ್ನು ಮಾಡಿತು.

೩೩-೩೫. ಆಗ ರಂಗದ ನಡುವೆ ದೊಡ್ಡ ಹಾಹಾಕಾರವು ಹುಟ್ಟಿತು. ಬಲರಾಮನು ತಮ್ಮನನ್ನು ನೋಡಿ ಶತ್ರುವು ನಮ್ಮ ಮೇಲೆ ಬಿಟ್ಟಿರುವ ಈ ದೊಡ್ಡ

ಪಂತವ್ಯೋ ಽಯಂ ಮಹಾಭಾಗ ನಾಗೋ ಽಯಂ ಶತ್ರುಚೋದಿತಃ ॥ ೩೪ ॥
ಇತ್ಯುಕ್ತೆಸ್ಸೋ ಽಗ್ರಜೇನಾಥ ಬಲದೇವೇನ ವೈ ದ್ವಿಜ ।

ಸಿಂಹನಾದಂ ತತಶ್ಚಕ್ರೇ ಮಾಧವಃ ಪರವೀರಹಾ ॥ ೩೫ ॥
ಕರೇಣ ಕರಮಾಕೃಷ್ಯ ತಸ್ಯ ಕೇಶಿನಿಷೂದನಃ ।

ಭ್ರಾಮಯಾಮಾಸ ತಂ ಶೌರಿರೈರಾವತಸಮಂ ಬಲೇ ॥ ೩೬ ॥
ಈಶೋ ಽಪಿ ಸರ್ವಜಗತಾಂ ಬಾಲಲೀಲಾನುಸಾರತಃ ।

ಕ್ರೀಡಿತ್ವಾಸುಚಿರಂ ಕೃಷ್ಣಃ ಕರಿದಂತಪದಾಂತರೇ ॥ ೩೭ ॥
ಉತ್ಪಾಟ್ಯ ವಾಮದಂತಂ ತು ದಕ್ಷಿಣೇನೈವ ಪಾಣಿನಾ ।

ತಾಡಯಾಮಾಸ ಯಂತಾರಂ ತಸ್ಯಾಸೀಚ್ಛತಥಾ ಶಿರಃ ॥ ೩೮ ॥

ದಕ್ಷಿಣಂ ದಂತಮುತ್ಪಾಟ್ಯ ಬಲಭದ್ರೋ ಽಪಿ ತತ್ಕ್ಷಣಾತ್ ।
ಸರೋಷಸ್ತೇನ ಪಾರ್ಶ್ವಸ್ಥಾನ್ ಗಜಪಾಲಾನಪೋಥಯತ್ ॥ ೩೯ ॥

ಆನೆಯನ್ನು ಕೊಲ್ಲಬೇಕೆಂದು ಹೇಳುತ್ತಲು ಕೃಷ್ಣನು ಶತ್ರುಗಳ ಪರಾಕ್ರಮವನ್ನು ನಾಶಮಾಡುವ ಸಿಂಹನಾದವನ್ನು ಮಾಡಿದನು.

೩೬-೪೧. ಕೇಶಿಯೆಂಬ ರಾಕ್ಷಸನನ್ನು ಕೊಂದ ಆ ಕೃಷ್ಣನು ತನ್ನ ಕೈಯಿಂದ ಆನೆಯ ಸೊಂಡಿಲನ್ನು ಹಿಡಿದೆಳೆದು ಬಲದಲ್ಲಿ ಐರಾವತಕ್ಕೆ ಸಮಾನವಾದ ಆ ಕುವಲಯಾಪೀಡವನ್ನು ತಿರುಗಿಸಿದನು. ಸಮಸ್ತ ಜಗತ್ತಿಗೂ ಸ್ವಾಮಿಯಾದರೂ ಕೃಷ್ಣನು ಆನೆಯ ದಂತಕ್ಕೂ ಕಾಲುಗಳಿಗೂ ನಡುವೆ ಬಹಳ ಹೊತ್ತು ಆಟವಾಡಿ ಬಲಗೈಯಿಂದ ಅದರ ಎಡದ ಕೊಂಬನ್ನು ಮುರಿದು ಮಾವಟಿಗನನ್ನು ಹೊಡೆದನು. ಅವನ ತಲೆ ನೂರು ಚೂರಾಯಿತು. ಬಲಭದ್ರನು ಆ ಕ್ಷಣದಲ್ಲಿಯೇ ಬಲದ ಕೊಂಬನ್ನು ಮುರಿದು ಕೋಪದಿಂದ ಆನೆಯ ಸಮೀಪದಲ್ಲಿದ್ದ ಅದನ್ನು ಸಾಕುವ

ಶತಸ್ಯೂತ್ಪ್ಲುತ್ಯ ವೇಗೇನ ರೌಹಿಣೇಯೋ ಮಹಾಬಲಃ ।
ಜಘಾನ ವಾಮಪಾದೇನ ಮಸ್ತಕೇ ಹಸ್ತಿನಂ ರುಷಾ ॥ ೪೦ ॥

ಸ ಪಪಾತ ಹತಸ್ತೇನ ಬಲಭದ್ರೇಣ ಲೀಲಯಾ ।
ಸಹಸ್ರಾಕ್ಷೇಣ ವಜ್ರೇಣ ತಾಡಿತಃ ಪರ್ವತೋ ಯಥಾ ॥ ೪೧ ॥

ಹತ್ವಾ ಕುವಲಯಾಪೀಡಂ ಹಸ್ತ್ಯಾರೋಹಪ್ರಚೋದಿತಂ ।
ಮದಾಸೃಗನುಲಿಪ್ತಾಂಗೌ ಹಸ್ತಿದಂತವರಾಯುಧೌ ॥ ೪೨ ॥

ಮೃಗಮಧ್ಯೇ ಯಥಾ ಸಿಂಹೌ ಗರ್ವಲೀಲಾವಲೋಕಿನೌ ।
ಪ್ರವಿಷ್ಟೌ ಸುಮಹಾರಂಗಂ ಬಲಭದ್ರಜನಾರ್ದನೌ ॥ ೪೩ ॥

ಹಾಹಾ ಕಾರೋ ಮಹಾನ್ ಜಜ್ಞೇ ಮಹಾರಂಗೇ ತ್ವನಂತರಂ ।
ಕೃಷ್ಣೋಽಯಂ ಬಲಭದ್ರೋಽಯಮಿತಿ ಲೋಕಸ್ಯ ವಿಸ್ಮಯಃ ॥ ೪೪ ॥

ಆಳುಗಳನ್ನು ಓಡಿಸಿದನು. ಬಳಿಕ ಮೇಲಕ್ಕೆ ಹಾರಿ ಮಹಾಬಲಶಾಲಿಯಾದ ಬಲರಾಮನು ತನ್ನೆಡಗಾಲಿನಿಂದ ಆನೆಯ ತಲೆಯಮೇಲೆ ಕೋಪದಿಂದ ಒದೆದನು. ಆಗ ಆ ಆನೆಯು ದೇವೇಂದ್ರನು ವಜ್ರಾಯುಧದಿಂದ ಹೊಡೆದ ಪರ್ವತದಂತೆ ಸತ್ತು ಬಿದ್ದಿತು.

೪೨-೪೪. ಬಲಭದ್ರನೂ ಕೃಷ್ಣನೂ ಕುವಲಯಾ ಪೀಡವನ್ನು ಕೊಂದು ಮೈಗೆಲ್ಲ ರಕ್ತವನ್ನು ಬಳಿದುಕೊಂಡು ಆನೆಯ ಕೊಂಬನ್ನೇ ಆಯುಧವನ್ನಾಗಿ ಹಿಡಿದು ಮದದಿಂದ ಮೃಗಗಳ ನಡುವೆ ಸಿಂಹವು ಗರ್ವದಿಂದ ನೋಡುತ್ತಿರುವಂತೆ ನೋಡುತ್ತ ಮಲ್ಲರಂಗಕ್ಕೆ ಪ್ರವೇಶಿಸಿದರು. ಬಳಿಕ ಆ ಮಲ್ಲರಂಗದಲ್ಲಿ ಇವನು ಕೃಷ್ಣ ಇವನು ಬಲರಾಮ ಎಂದು ಜನರು ಆಶ್ಚರ್ಯಪಡುತ್ತ ದೊಡ್ಡ ಹಾಹಾಕಾರವನ್ನು ಮಾಡಿದರು.

ಸೋಽಯಂ ಯೇನ ಹತಾ ಘೋರಾ ಪೂತನಾ ಬಾಲಘಾತಿನೀ ।
ಪ್ಷಿಪ್ತಂ ತು ಶಕಟಂ ಯೇನ ಭಗ್ನೌ ತು ಯಮಳಾರ್ಜುನೌ ॥ ೪೫ ॥

ಸೋಽಯಂ ಯಃ ಕಾಳಿಯಂ ನಾಗಂ ಮಮರ್ದಾರುಹ್ಯ ಬಾಲಕಃ ।
ಧೃತೋ ಗೋವರ್ಧನೋ ಯೇನ ಸಪ್ತರಾತ್ರಂ ಮಹಾಗಿರಿಃ ॥ ೪೬ ॥

ಅರಿಷ್ಟೋ ಧೇನುಕಃ ಕೇಶೀ ಲೀಲಯೈವ ಮಹಾತ್ಮನಾ ।
ನಿಹತಾ ಯೇನ ದುರ್ವೃತ್ತಾ ದೃಶ್ಯತಾಮೇಷ ಸೋಚ್ಯುತಃ ॥ ೪೭ ॥

ಅಯಂ ಚಾಸ್ಯ ಮಹಾಬಾಹುಃ ಬಲಭದ್ರೋಗ್ರತೋಽಗ್ರಜಃ ।
ಪ್ರಯಾತಿ ಲೀಲಯಾ ಯೋಷಿನ್ನಯನಾನಂದನಃ ॥ ೪೮ ॥

ಅಯಂ ಸ ಕೃಷ್ಣತೇ ಪ್ರಾಜ್ಞೈಃ ಪುರಾಣಾರ್ಥವಿಶಾರದೈಃ ।
ಗೋಪಾಲೋ ಯಾದವಂ ವಂಶಂ ಮಗ್ನಮಭ್ಯುದ್ಧರಿಷ್ಯತಿ ॥ ೪೯ ॥

ಅಯಂ ಹಿ ಸರ್ವಲೋಕಸ್ಯ ವಿಷ್ಣೋರಖಿಲಜನ್ಮನಃ ।
ಅವತೀರ್ಣೋ ಮಹೀ ಮಂಶೋ ನೂನಂ ಭಾರಹರೋ ಭುವಃ ॥ ೫೦ ॥

೪೫-೫೦. ಬಾಲಕರೆನ್ನು ನಾಶಮಾಡುವ ಪೂತನೆಯನ್ನು ಕೊಂದವನೂ, ಶಕಟವನ್ನೂ, ಯಮಳಾರ್ಜುನವನ್ನೂ ಮುರಿದವನೂ, ಬಾಲಕನಾಗಿದ್ದರೂ ಕಾಳಿಯ ನಾಗನನ್ನು ಮರ್ದಿಸಿದವನೂ, ಗೋವರ್ಧನ ಪರ್ವತವನ್ನು ಏಳು ದಿನದವರೆಗೆ ಎತ್ತಿ ಹಿಡಿದಿದ್ದವನೂ, ದುಷ್ಟನಾದ ಅರಿಷ್ಟ, ಧೇನುಕ, ಕೇಶಿ, ಎಂಬ ರಾಕ್ಷಸರನ್ನು ಲೀಲೆಯಿಂದ ಸಂಹರಿಸಿದವನೂ ಆದ ಮಹಾಮಹಿಮನಾದ ಅಚ್ಯುತನೇ ಇವನು. ಉದ್ದವಾದ ತೊಳುಗಳುಳ್ಳ ಸ್ತ್ರೀಯರ ಮನಸ್ಸಿಗೂ ಕಣ್ಣುಗಳಿಗೂ ಆನಂದವನ್ನುಂಟು ಮಾಡುವ ಈ ಬಲಭದ್ರನು ಅವನ ಅಣ್ಣನು. ಈ ಗೋಪಾಲನಾದ ಕೃಷ್ಣನು ಮುಳುಗಿಹೋದ ಯದುವಂಶವನ್ನು ಉದ್ಧಾರ ಮಾಡುವನೆಂದು ಪುರಾಣಾರ್ಥವನ್ನು ತಿಳಿದ ಜ್ಞಾನಿಗಳುಹೇಳುವರು. ಇವನು ಸಮಸ್ತ ಪ್ರಪಂಚಕ್ಕೂ ಕಾರಣನಾದ ವಿಷ್ಣುವಿನ ಅಂಶದಿಂದ ಭೂಭಾರವನ್ನು ನಾಶಮಾಡುವುದಕ್ಕಾಗಿ ಅವತಾರ ಮಾಡಿರುವನು.

ಇತ್ಯೇವಂ ವರ್ಣಿತೇ ಪೌರೈ ರಾಮೇಕೃಷ್ಣೇ ಚ ತತ್ಕ್ಷಣಾತ್ ।
ಉರಸ್ತತಾಪ ದೇವಕ್ಯಾಃ ಸ್ನೇಹಸ್ನುತಪಯೋಧರಂ ॥ ೫೦ ॥

ಮಹೋತ್ಸವಮಿವಾಸಾದ್ಯ ಪುತ್ರಾನನವಿಲೋಕನಾತ್ ।
ಯುವೇವ ವಸುದೇವೋಽಭೂದ್ವಿಹಾಯಾಭ್ಯಾಗತಾಂ ಜರಾಂ ॥ ೫೨ ॥

ವಿಸ್ತಾರಿತಾಕ್ಷಿಯುಗಲೋ ರಾಜಾಂತಃ ಪುರಯೋಷಿತಾಂ ।
ನಾಗರಸ್ತ್ರೀಸಮೂಹಶ್ಚ ದ್ರಷ್ಟುಂ ನ ವಿರರಾಮ ತಂ ॥ ೫೩ ॥

ಸಖ್ಯಃ ಪಶ್ಯತ ಕೃಷ್ಣಸ್ಯ ಮುಖಮುತ್ಫುಲ್ಲೇಕ್ಷಣಂ ।
ಗಜಯುದ್ಧಕೃತಾಯಾಸಸ್ವೇದಾಂಬುಕಣಕಾಚಿತಂ ॥ ೫೪ ॥

ವಿಕಾಸಿ ಶರದಂಭೋಜಮವಶ್ಯಾಯಜಲೋಕ್ಷಿತಂ ।
ಪರಿಭೂಯಸ್ಥಿತಂ ಜನ್ಮ ಸಫಲಂ ಕ್ರಿಯತಾಂ ದೃಶಃ ॥ ೫೫ ॥

೫೧–೫೫. ಪಟ್ಟಣಿಗರು ಈ ರೀತಿಯಲ್ಲಿ ರಾಮಕೃಷ್ಣರನ್ನು ವರ್ಣಿಸುತ್ತಿರಲು ದೇವಕಿಯ ಎದೆಯಲ್ಲಿ ಆ ಕ್ಷಣವೇ ಸಂತಾಪವುಂಟಾಯಿತು. ಮತ್ತು ಪುತ್ರವಾತ್ಸಲ್ಯದಿಂದ ಅವಳ ಸ್ತನದಲ್ಲಿ ಹಾಲುಸುರಿಯುತ್ತಿದ್ದಿತು. ಮಕ್ಕಳ ಮುಖವನ್ನು ನೋಡಿದುದರಿಂದುಂಟಾದ ಮಹೋತ್ಸವದಿಂದ ಮುದುಕನಾದ ವಸುದೇವನು ಯೌವನವಂತನಾದನು. ರಾಜನ ರಾಣಿವಾಸದ ಸ್ತ್ರೀಯರೂ, ಪಟ್ಟಣಿಗರ ಸ್ತ್ರೀ ಸಮೂಹವೂ ವಿಸ್ತಾರವಾದ ತಮ್ಮ ಕಣ್ಣುಗಳಿಂದ ಕೃಷ್ಣನನ್ನು ನೋಡುವುದನ್ನು ಬಿಡಲಿಲ್ಲ. ಅವರು ಹಾಗೆಯೇ ನೋಡುತ್ತ ತಂತಮ್ಮಲ್ಲಿ "ಸಖಿಯರೇ! ನೋಡಿ ಕೃಷ್ಣನ ಮುಖವು ವಿಶೇಷವಾಗಿ ಕೆಂಪಾದ ಕಣ್ಣುಗಳಿಂದ ಕೂಡಿದೆ. ಆನೆಯೊಡನೆ ಯುದ್ಧಮಾಡಿದ ಆಯಾಸದಿಂದುಂಟಾದ ಬೆವರಿನ ಹನಿಗಳಿಂದ ತುಂಬಿದೆ. ಹೀಗಿರುವುದರಿಂದ ಅವನ ಮುಖವು ಅರಳಿದ ಶರತ್ಕಾಲದ ಕಮಲದ ಮೇಲೆ ಹಿಮದ ನೀರನ್ನು ಚುಮುಕಿಸಿದಂತೆ ಕಾಣುತ್ತ ಆ ಕಮಲವನ್ನು ತಿರಸ್ಕರಿಸುವಂತಿದೆ. ಇದನ್ನು ನೋಡಿ ನಮ್ಮ ಕಣ್ಣುಗಳು ಸಾರ್ಥಕನಾಗಲಿ.

ಶ್ರೀವತ್ಸಾಂಕಮಮಹದ್ಧಾಮ ಬಾಲಸ್ಯೈತದ್ವಿಲೋಕ್ಯತಾಂ ।
ವಿಪಕ್ಷಕ್ಷಪಣಂ ವಕ್ಷೋ ಭುಜಯುಗ್ಮಂ ಚ ಧಾಮಿನಿ ॥ ೫೬ ॥

ಕಿಂ ನ ಪಶ್ಯಸಿ ದುಗ್ಧೇಂದುಮೃಣಾಳಧವಳಾಕೃತಿಂ ।
ಬಲಭದ್ರಮಿಮಂ ನೀಲಪರಿಧಾನಮುಪಾಗತಂ ॥ ೫೭ ॥

ವಲ್ಗತಾಮುಷ್ಟಿಕೇನೈವ ಚಾಣೂರೇಣ ತಥಾ ಸಖಿ ।
ಕ್ರೀಡತೋ ಬಲಭದ್ರಸ್ಯ ಹರೇರ್ಹಾಸ್ಯಂ ವಿಲೋಕ್ಯತಾಂ ॥ ೫೮ ॥

ಸಖ್ಯಃ ಪಶ್ಯತ ಚಾಣೂರಂ ನಿಯುದ್ಧಾರ್ಥಮುಯತಂ ಹರಿಃ ।
ಸಮುಪೈತಿ ನ ಸಂತ್ಯತ್ರ ಕಿಂ ವೃದ್ಧಾ ಯುಕ್ತಕಾರಿಣಃ ॥ ೫೯ ॥

ಕ್ವ ಯೌವನೋನ್ಮುಖೀಭೂತಸುಕುಮಾರತನುರ್ಹರಿಃ ।
ಕ್ವ ವಜ್ರಕಠಿನಾಭೋಗ ಶರೀರೋಽಯಂ ಮಹಾಸುರಃ ॥ ೬೦ ॥

೫೬–೬೦. ಈ ಬಾಲಕನ ಎದೆಯಲ್ಲಿರುವ ಮಹಾ ಪ್ರಕಾಶವಾದ ಶ್ರೀವತ್ಸ ಚಿಹ್ನೆಯನ್ನು ನೋಡಿರಿ. ಶತ್ರುಗಳನ್ನು ನಾಶಮಾಡುವ ಎದೆಯನ್ನೂ ಎರಡು ಭುಜಗಳನ್ನೂ ನೋಡಿರಿ ಹಾಲು ಚಂದ್ರ, ಕಮಲ ಇವುಗಳಂತೆ ಬೆಳ್ಳಗಿರುವ, ನೀಲಿಯ ವಸ್ತ್ರಗಳನ್ನು ಧರಿಸಿರುವ ಬಲಭದ್ರನನ್ನು ನೋಡಲಿಲ್ಲವೇ ? ನರ್ತನಮಾಡುತ್ತಿರುವ ಮುಷ್ಟಿಕನೊಡನೆಯೂ, ಚಾಣೂರನೊಡನೆಯೂ, ಆಟವಾಡುತ್ತಿರುವ ಬಲ ಭದ್ರನ ಮತ್ತು ಕೃಷ್ಣನ ನಗುವನ್ನು ನೋಡಿರಿ. ಸಖಿಯರೇ ನೋಡಿ ಈ ಕೃಷ್ಣನು ಮಲ್ಲಯುದ್ಧ ಮಾಡುವುದಕ್ಕೆ ಚಾಣೂರನ ಹತ್ತಿರಕ್ಕೆ ಹೋಗುತ್ತಾನೆ. ಯೋಗ್ಯರಾದ ಯುಕ್ತವಾದ ಕೆಲಸವನ್ನು ಮಾಡುವ ವೃದ್ಧರು ಇಲ್ಲಿ ಇಲ್ಲವೇ ? ಯೌವನವನ್ನು ಪಡೆಯುತ್ತಿರುವ ಮೃದುವಾದ ಶರೀರವುಳ್ಳ ಹರಿಯೆಲ್ಲಿ ? ವಜ್ರದಂತೆ ಕಠಿನವಾದ ಶರೀರವುಳ್ಳ ಈ ರಾಕ್ಷಸನೆಲ್ಲಿ ? ಇವರಿಬ್ಬರೂ ಪ್ರಾಯವನ್ನು ಪಡೆಯುತ್ತಿರುವ ಮೃದುವಾದ ಅವಯವಗಳುಳ್ಳವರು ಚಾಣೂರನೇ ಮುಂತಾದವರು ಭಯಂಕರರಾದ ರಾಕ್ಷಸ

ಇಮೌ ಸುಲಲಿತೈರಂಗೈ ರ್ನರ್ತೇತೇ ನವಯೌವನೌ ।
ದೈತೇಯಮಲ್ಲಾಶ್ಚಾಣೂರಪ್ರಮುಖಾಸ್ತ್ವಿದಾರುಣಾಃ ॥ ೬೬ ॥

ನಿಯುದ್ಧಪ್ರಾಶ್ನಿಕಾನಾಂ ತು ಮಹಾನೇಷ ವ್ಯತಿಕ್ರಮಃ ।
ಯದ್ಬಾಲಬಲಿನೋರ್ಯುದ್ಧಂ ಮಧ್ಯಸ್ಥೈಸ್ಸಮುಪೇಕ್ಷ್ಯತೇ ॥ ೬೭ ॥

॥ ಶ್ರೀ ಪರಾಶರಃ ॥

ಇತ್ಥಂ ಪುರಸ್ತ್ರೀಲೋಕಸ್ಯ ವದತಶ್ಚಾಲಯನ್ಭುವಂ ।
ವವಲ್ಗ ಬದ್ಧಕಕ್ಷ್ಯೋಂತರ್ಜನಸ್ಯ ಭಗವಾನ್ ಹರಿಃ ॥ ೬೮ ॥

ಬಲಭದ್ರೋಽಪಿ ಚಾಸ್ಫೋಟ್ಯ ವವಲ್ಗ ಲಲಿತಂ ತಥಾ ।
ಪದೇ ಪದೇ ತಥಾ ಭೂಮಿರ್ಯನ್ನ ಶೀರ್ಣಾ ತದದ್ಭುತಂ ॥ ೬೯ ॥

ಚಾಣೂರೇಣ ತತಃ ಕೃಷ್ಣೋ ಯುಯುಧೇಽಮಿತವಿಕ್ರಮಃ ।
ನಿಯುದ್ಧಕುಶಲೋ ದೈತ್ಯೋ ಬಲಭದ್ರೇಣ ಮುಷ್ಟಿಕಃ ॥ ೭೦ ॥

ಜಟ್ಟಿಗಳು ಜಟ್ಟಿಗಳ ಕಾಳಗದಲ್ಲಿ ಯುಕ್ತಾಯುಕ್ತವನ್ನು ವಿಮರ್ಶಿಮಾಡ ತಕ್ಕವರು ಬಾಲಕರಿಗೂ, ಬಲಿಷ್ಠರಿಗೂ ನಡೆಯುವ ಯುದ್ಧವನ್ನು ಉಪೇಕ್ಷೆಮಾಡು ತ್ತಿರುವರು." ಎಂದು ಸ್ತ್ರೀಯರು ಮಾತನಾಡುತ್ತಿರಲು ಕೃಷ್ಣನು ಜನರ ನಡುವೆ ನಡುಕಟ್ಟನ್ನು ಗಟ್ಟಿಯಾಗಿ ಕಟ್ಟಿ ಭೂಮಿಯು ಚಲಿಸುವಂತೆ ನರ್ತನಮಾಡಿದನು.

೬೪-೬೫. ಬಲರಾಮನೂ ಕೂಡ ಭುಜವನ್ನು ತಟ್ಟಿಕೊಂಡು ಮನೋಹರ ವಾಗಿ ನರ್ತನ ಮಾ ಡಿ ದ ನು. ಮಹಾಪರಾಕ್ರಮಿಯಾದ ಕೃಷ್ಣನು ಚಾಣೂರ ನೊಡನೆಯೂ ಮುಷ್ಟಿಕನು ಬಲರಾಮನೊಡನೆಯೂ ಯುದ್ಧಮಾಡಿದರು.

ಸನ್ನಿಪಾತಾವಧೂತೈಸ್ತು ಚಾಣೂರೇಣ ಸಮಂ ಹರಿಃ ।
ಪ್ರಕ್ಷೇಪಣೈರ್ಮುಷ್ಟಿಭಿಶ್ಚ ಕೀಲವಜ್ರನಿಪಾತನೈಃ ॥ ೬೬ ॥

ಪಾದೋದ್ಧೂತೈಃ ಪ್ರಸೃಪ್ಯೈಶ್ಚ ತಯೋರ್ಯುದ್ಧಮಭೂನ್ಮಹತ್ ॥ ೬೭ ॥

ಅಶಸ್ತ್ರಮತಿಘೋರಂ ತತ್ತಯೋರ್ಯುದ್ಧಂ ಸುದಾರುಣಂ ।
ಬಲಪ್ರಾಣವಿನಿಷ್ಪಾದ್ಯಂ ಸಮಾಜೋತ್ಸವಸನ್ನಿಧೌ ॥ ೬೮ ॥

ಯಾವದ್ಯಾವಚ್ಚ ಚಾಣೂರೋ ಯುಯುಧೇ ಹರಿಣಾ ಸಹ ।
ಪ್ರಾಣಹಾನಿಮವಾಪಾಗ್ರ್ಯಂ ತಾವತ್ತಾವಲ್ಲವಾಲ್ಲವಂ ॥ ೬೯ ॥

ಕೃಷ್ಣೋಽಪಿ ಯುಯುಧೇ ತೇನ ಲೀಲಯೈವ ಜಗನ್ಮಯಃ ।
ಖೇದಾಚ್ಚಾಲಯತಾ ಕೋಪಾತ್ ನಿಜಕೇಸರಶೇಖರಂ ॥ ೭೦ ॥

ಬಲಕ್ಷಯಂ ವಿವೃದ್ಧಿಂ ಚ ದೃಷ್ಟ್ವಾ ಚಾಣೂರಕೃಷ್ಣಯೋಃ ।
ವಾರಯಾಮಾಸ ತೂರ್ಯಾಣಿ ಕಂಸಃ ಕೋಪಪರಾಯಣಃ ॥ ೭೧ ॥

೬೬–೭೦. ಚಾಣೂರಕೃಷ್ಣರು ಒಬ್ಬರ ಮೇಲೊಬ್ಬರು ಬೀಳುವುದು. ಒಬ್ಬರನ್ನೊಬ್ಬರು ತಳ್ಳುವುದು. ಒಬ್ಬರನ್ನೊಬ್ಬರು ಎಳೆದು ಬಿಡುವುದು. ಮುಷ್ಟಿಯಿಂದ ಹೊಡೆವುದು. ಮೊಳಕೈಗಳಿಂದ ಗುದ್ದುವುದು. ಕಾಲುಗಳನ್ನೆತ್ತಿ ಕೊಡಹುವುದು, ಶರೀರವನ್ನೆಲ್ಲಾ ಉಂಡೆಯಾಗಿ ಮಾಡುವುದು. ಇವೇ ಮೊದಲಾದ ರೀತಿಯಿಂದ ಅವರಿಬ್ಬರೂ ಆಯುಧವಿಲ್ಲದೆ ಬಲದಿಂದಲೂ ಪ್ರಾಣಶಕ್ತಿಯಿಂದಲೂ ಭಯಂಕರವಾಗಿ ಯುದ್ಧಮಾಡಿದರು. ಸಮಾಜದ ಎದುರಿಗೆ ಚಾಣೂರನು ಕೃಷ್ಣನೋಡನೆ ಯುದ್ಧ ಮಾಡುತ್ತ ಸ್ವಲ್ಪ ಸ್ವಲ್ಪವಾಗಿ ಶಕ್ತಿಹೀನನಾಗುತ್ತ ಬಂದನು. ಕೃಷ್ಣನು ತನ್ನ ತಲೆಯ ಕೂದಲುಗಳನ್ನು ಕೋಪದಿಂದ ಚಲಿಸುವಂತೆ ಮಾಡುತ್ತ ಆಟವಾಡುವಂತೆ ಯುದ್ಧ ಮಾಡುತ್ತಿದ್ದನು.

೭೧–೭೫. ಕಂಸನು ಚಾಣೂರನಿಗೆ ಬಲಹಾನಿಯಾಗುತ್ತಿರುವುದನ್ನೂ ಕೃಷ್ಣನಿಗೆ ಬಲವು ಹೆಚ್ಚುತ್ತಿರುವುದನ್ನೂ ಕಂಡು ಕೋಪದಿಂದ ವಾದ್ಯಗಳನ್ನು ನಿಲ್ಲಿಸಿದನು. ಮೃದಂಗಾದಿ ವಾದ್ಯಗಳನ್ನು ಅವನು ತಡೆದ ಕ್ಷಣದಲ್ಲಿಯೇ ಆಕಾಶದಲ್ಲಿ ಸೇರಿದ್ದ

ವ್ಯಪದಂಗಾದಿಷು ತೂರ್ಯೇಷು ಪ್ರತಿಸಿದ್ಧೇಷು ತತ್ಕ್ಷಣಾತ್ ।
ಖೇ ಸಂಗತಾನ್ಯವಾದ್ಯಂತ ದೇವತೂರ್ಯಾಣ್ಯನೇಕಶಃ ॥ ೭೨ ॥

ಜಯ ಗೋವಿಂದ ಚಾಣೂರಂ ಜಹಿ ಕೇಶವ ದಾನವಂ ।
ಅಂತರ್ಧಾನಗತಾ ದೇವಾಸ್ತಮೂಚುರತಿಹರ್ಷಿತಾಃ ॥ ೭೩ ॥

ಚಾಣೂರೇಣ ಚಿರಂ ಕಾಲಂ ಕ್ರೀಡಿತ್ವಾ ಮಧುಸೂದನಃ ।
ಉತ್ಪಾಟ್ಯ ಭ್ರಾಮಯಾಮಾಸ ತದ್ವಧಾಯ ಕೃತೋದ್ಯಮಃ ॥ ೭೪ ॥

ಭ್ರಾಮಯಿತ್ವಾ ಶತಗುಣಂ ದೈತ್ಯಮಲ್ಲಮುವಿತ್ರಜಿತ್ ।
ಭೂಮಾವಾಸ್ಫೋಟಯಾಮಾಸಗಗನೇಗತಜೀವಿತಂ ॥ ೭೫ ॥

ಭೂಮಾವಾಸ್ಫೋಟಿತಸ್ತೇನ ಚಾಣೂರಶ್ಶತಧಾಭವತ್ ।
ರಕ್ತಸ್ರಾವಮಹಾಪಂಕಾಂ ಚಕಾರ ಚ ತದಾ ಭುವಂ ॥ ೭೬ ॥

ಬಲದೇವೋಽಪಿ ತತ್ಕಾಲಂ ಮುಷ್ಟಿಕೇನ ಮಹಾಬಲಃ ।
ಯುಯುಧೇ ದೈತ್ಯಮಲ್ಲೇನ ಚಾಣೂರೇಣ ಯಥಾ ಹರಿಃ ॥ ೭೭ ॥

ಸೋಽಸ್ಯೇನಂ ಮುಷ್ಟಿನಾ ಮೂರ್ಧ್ನಿ ವಕ್ಷಸ್ಯಾಹತ್ಯ ಜಾನುನಾ ।
ಪಾತಯಿತ್ವಾ ಧರಾಪೃಷ್ಠೇ ನಿಷ್ಪಿಪೇಷ ಗತಾಯುಷಂ ॥ ೭೮ ॥

ದೇವವಾದ್ಯಗಳು ಧ್ವನಿಮಾಡಿದುವು. "ಗೋವಿಂದನೇ ಕೇಶವನೇ ನಿನಗೆ ಜಯವಾಗಲಿ. ದಾನವನಾದ ಚಾಣೂರನನ್ನು ಕೊಲ್ಲು" ಎಂದು ದೇವತೆಗಳು ಯಾರ ಕಣ್ಣಿಗೂ ಕಾಣಿಸದೆ ಸಂತೋಷದಿಂದ ಕೃಷ್ಣನಿಗೆ ಹೇಳಿದರು. ಕೃಷ್ಣನು ಚಾಣೂರನೊಡನೆ ಬಹಳ ಕಾಲ ಆಟವಾಡಿ ಅವನನ್ನು ಕೊಲ್ಲಬೇಕೆಂದು ಅವನ ಶರೀರವನ್ನು ಆಕಾಶದಲ್ಲಿ ತಿರುಗಿಸಿದನು. ಶತ್ರುಗಳನ್ನು ಜಯಿಸುವ ಕೃಷ್ಣನು ಅವನನ್ನು ನೂರು ಭಾರಿ ತಿರುಗಿಸಿ ಆ ಕಾಶದಲ್ಲಿಯೇ ಪ್ರಾಣಹೋದಮೇಲೆ ಶರೀರವನ್ನು ನೆಲದಮೇಲೆ ಬಡಿದನು.

೭೬-೮೦. ಭೂಮಿಯಲ್ಲಿ ಬಡಿದ ಚಾಣೂರನ ಶರೀರವು ನೂರುಚೂರಾಗಿ ಅವನ ರಕ್ತದಿಂದ ಭೂಮಿಯೆಲ್ಲ ಕೆಸರಾಯಿತು. ಅದೇ ಕಾಲದಲ್ಲಿ ಬಲರಾಮನೂ ಮುಷ್ಟಿಕನೊಡನೆ, ಕೃಷ್ಣನು ಚಾಣೂರನೊಡನೆ ಯುದ್ಧಮಾಡಿದಂತೆ ಯುದ್ಧಮಾಡಿ

ಕೃಷ್ಣಸ್ತೋಸಲಕಂ ಭೂಯೋ ಮಲ್ಲರಾಜಂ ಮಹಾಬಲಂ ।
ವಾಮಮುಷ್ಟಿಪ್ರಹಾರೇಣ ಪಾತಯಾಮಾಸ ಭೂತಲೇ ॥ ೭೯ ॥

ಚಾಣೂರೇ ನಿಹತೇ ಮಲ್ಲೇ ಮುಷ್ಟಿಕೇ ವಿನಿಪಾತಿತೇ ।
ನೀತೇ ಕ್ಷಯಂ ತೋಸಲಕೇ ಸರ್ವೇ ಮಲ್ಲಾಃ ಪ್ರದುದ್ರುವುಃ ॥ ೮೦ ॥

ತತಲ್ಲತುಸ್ತತೋ ರಂಗೇ ಕೃಷ್ಣಸಂಕರ್ಷಣಾವುಭೌ ।
ಸಮಾನವಯಸೋ ಗೋಪಾನ್ ಬಲಾದಾಕೃಷ್ಯ ಹರ್ಷಿತೌ ॥ ೮೧ ॥

ಕಂಸೋಪಿ ಕೋಪರಕ್ತಾಕ್ಷಃ ಸ್ಫಾಹೋಚ್ಚೈರ್ವ್ಯಾಯತಾನ್ ನರಾನ್ ।
ಗೋಪಾವೇತೌ ಸಮಾಜಾದ್ಧಾನ್ನಿಷ್ಕ್ರಾಮ್ಯೇತಾಂ ಬಲಾದಿತಃ ॥ ೮೨ ॥

ನಂದೋಪಿ ಗೃಹ್ಯತಾಂ ಪಾಪೋ ನಿಗಳೈರಾಯಸೈರಿಹ ।
ಅವೃದ್ಧಾರ್ಹೇಣ ದಂಡೇನ ವಸುದೇವೋಪಿ ವಧ್ಯತಾಂ ॥ ೮೩ ॥

ದನು. ಅವನೂ ಮುಷ್ಟಿಯಿಂದ ಮುಷ್ಟಿಕನ ತಲೆಯ ಮೇಲೆ ಹೊಡೆದು ಮಂಡಿಯಿಂದ ಎದೆಗೆ ಹೊಡೆದು ನೆಲದಮೇಲೆ ಕೆಡವಿ ಆತನು ಅವನನ್ನು ಸಾಯಿಸಿದನು. ಕೃಷ್ಣನು ಪುನಃ ತೋಸಲಕನೆಂಬ ಮಹಾಬಲಶಾಲಿಯಾದ ಮೆಲ್ಲರಾಜನನ್ನು ಯಡಗೈಯ ಮುಷ್ಟಿಯ ಏಟಿನಿಂದ ನೆಲಕ್ಕೆ ಕೆಡಹಿದನು. ಚಾಣೂರ ಮುಷ್ಟಿಕ ತೋಸಲಕರೆಂಬ ಜಟ್ಟಿಗಳು ಸತ್ತಮೇಲೆ ಮಿಕ್ಕ ಜಟ್ಟಿಗಳೆಲ್ಲರೂ ಓಡಿ ಹೋದರು.

೮೧-೮೪. ಆ ಮೇಲೆ ಮಲ್ಲರಂಗದಲ್ಲಿ ಬಲರಾಮ ಕೃಷ್ಣರು ತಮ್ಮ ಸಮಾನ ವಯಸ್ಕರಾದ ಗೊಲ್ಲರನ್ನು ಸಂತೋಷದಿಂದ ಬಲವಾಗಿ ಹಿಡಿದೆಳೆಯುತ್ತ ನರ್ತನ ಮಾಡಿದರು. ಕಂಸನು ಕೋಪದಿಂದ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಅಲ್ಲಿದ್ದ ತನ್ನ ಕಡೆಯ ಜನರನ್ನು ಕುರಿತು ಗಟ್ಟಿಯಾಗಿ "ಈ ಇಬ್ಬರು ಗೊಲ್ಲರನ್ನು ಬಲಾತ್ಕಾರದಿಂದ ಈ ಸಮಾಜದಿಂದ ಹೊರಕ್ಕೆ ಕಳುಹಿಸಿ, ಪಾಪಿಯಾದ ನಂದನನ್ನು

ವಲ್ಗಂತಿ ಗೋಪಾಃ ಕೃಷ್ಣೇನ ಯೇ ಚೇ ಮೇ ಸಹಿತಾಃ ಪುರೇ ।
ಗಾವೋ ನಿಗೃಹ್ಯತಾಮೇಷಾಂ ಯಚ್ಚಾಸ್ತಿ ವಸು ಕಿಂಚನ ॥ ೪೪ ॥

ಏವಮಾಜ್ಞಾಪಯಾನಂ ತು ಪ್ರಹಸ್ಯ ಮಧುಸೂದನಃ ।
ಉತ್ಪ್ಲುತ್ಯಾರುಹ್ಯ ತಂ ಮಂಚಂ ಕಂಸಂ ಜಗ್ರಾಹ ವೇಗತಃ ॥ ೪೫ ॥

ಕೇಶೇಷ್ವಾಕೃಷ್ಯ ವಿಗಳತ್ಕಿರೀಟಮವನೀತಲೇ ।
ಸ ಕಂಸಂ ಪಾತಯಾಮಾಸ ತಸ್ಯೋಪರಿ ಪಪಾತ ಚ ॥ ೪೬ ॥

ಅಶೇಷಜಗದಾಧಾರಗುರುಣಾ ಪತತೋಪರಿ ।
ಕೃಷ್ಣೇನ ತ್ಯಾಜಿತಃ ಪ್ರಾಣಾನುಗ್ರಸೇನಾತ್ಮಜೋ ನೃಪಃ ॥ ೪೭ ॥

ಮೃತಸ್ಯ ಕೇಶೇಷು ತದಾ ಗೃಹೀತ್ವಾ ಮಧುಸೂದನಃ ।
ಚಕರ್ಷ ದೇಹಂ ಕಂಸಸ್ಯ ರಂಗಮಧ್ಯೇ ಮಹಾಬಲಃ ॥ ೪೮ ॥

ಕಬ್ಬಿಣದ ಸಂಕೋಲೆಯನ್ನು ಹಾಕಿ ಹಿಡಿಯಿರಿ. ವೃದ್ಧರಲ್ಲದವರಿಗೆ ಮಾಡುವ ದಂಡನೆಯಿಂದ ವಸುದೇವನನ್ನು ಕೊಲ್ಲಿರಿ. ಈ ಕೃಷ್ಣನೊಡನೆ ನರ್ತನ ಮಾಡುತ್ತಿರುವ ಗೊಲ್ಲರನ್ನೂ, ಅವರ ಧನವನ್ನೂ, ಗೋವುಗಳನ್ನೂ ವಶಮಾಡಿಕೊಳ್ಳಿರಿ" ಎಂದು ಹೇಳಿದನು.

೪೫-೪೮. ಹೀಗೆ ಆಜ್ಞೆಮಾಡಿದ ಕಂಸನನ್ನು ಕೃಷ್ಣನು ಹಾಸ್ಯಮಾಡುತ್ತ ನೆಗೆದು ಅವನು ಕುಳಿತಿದ್ದ ಪೀಠವನ್ನು ಹತ್ತಿ ವೇಗವಾಗಿ ಕಂಸನನ್ನು ಹಿಡಿದುಕೊಂಡನು. ಅವನ ತಲೆಯ ಕೂದಲನ್ನು ಹಿಡಿದು ಎಳೆಯಲು ತಲೆಯಲ್ಲಿದ್ದ ಕಿರೀಟವು ಭೂಮಿಗೆ ಬಿದ್ದುಹೋಯಿತು. ಕೃಷ್ಣನು ಕಂಸನನ್ನು ಕೆಳಕ್ಕೆ ಕೆಡವಿ ಅವನ ಮೇಲೆ ತಾನು ಬಿದ್ದನು. ಸಮಸ್ತ ಜಗತ್ತಿಗೂ ಆಶ್ರಯನಾದ ಭಾರವಾದ ಶ್ರೀ ಕೃಷ್ಣನು ಅವನ ಮೇಲೆ ಬಿದ್ದುದರಿಂದ ಉಗ್ರಸೇನನ ಮಗನಾದ ಕಂಸನು ಪ್ರಾಣವನ್ನು ಬಿಟ್ಟನು. ಕೃಷ್ಣನು ಮರಣಹೊಂದಿದ ಅವನ ತಲೆಯ ಕೂದಲನ್ನು

ಗೌರವೇಣಾತಿಪತತಾ ಪರಿಘೌತೇನ ಕೃಷ್ಯತಾ ।
ಕೃತಾ ಕಂಸಸ್ಯ ದೇಹೇನ ವೇಗೇನೇವ ಮಹಾಂಭಸಃ ॥ ೮೯ ॥

ಕಂಸೇ ಗೃಹೀತೇ ಕೃಷ್ಣೇನ ತದ್ಭ್ರಾತಾಭ್ಯಾಗತೋ ರುಷಾ ।
ಸುನಾಮಾ ಬಲಭದ್ರೇಣ ಲೀಲಯೈವ ನಿಪಾತಿತಃ ॥ ೯೦ ॥

ತತೋ ಹಾಹಾ ಕೃತಂ ಸರ್ವಮಾಸೀತ್ತದ್ರಂಗಮಂಡಲಂ ।
ಅವಜ್ಞಯಾಹತಂ ದೃಷ್ಟ್ವಾ ಕೃಷ್ಣೇನ ಮಧುರೇಶ್ವರಂ ॥ ೯೧ ॥

ಕೃಷ್ಣೋಽಪಿ ವಸುದೇವಸ್ಯ ಪಾದೌ ಜಗ್ರಾಹ ಸತ್ವರಃ ।
ದೇವಕ್ಯಾಶ್ಚ ಮಹಾಬಾಹುರ್ಬಲದೇವಸಹಾಯವಾನ್ ॥ ೯೨ ॥

ಉತ್ಥಾಪ್ಯ ವಸುದೇವಸ್ತಂ ದೇವಕೀ ಚ ಜನಾರ್ದನಂ ।
ಸ್ಮೃತಜನ್ಮೋಕ್ತವಚನೌ ತಾವೇವ ಪ್ರಣತೌ ಸ್ಥಿತೌ ॥ ೯೩ ॥

ಹಿಡಿದುಕೊಂಡು ಅವನ ಶರೀರವನ್ನು ಮಲ್ಲರಂಗದ ಮಧ್ಯಪ್ರದೇಶಕ್ಕೆ ಎಳೆದುಕೊಂಡು ಬಂದನು. ಎಳೆದುಕೊಂಡು ಬರುವ ಆ ಶರೀರದ ಭಾರದಿಂದ ನೀರಿನ ವೇಗದಿಂದ ಭೂಮಿಯಲ್ಲಿ ಹಳ್ಳವಾಗುವಂತೆ ನೆಲದಲ್ಲಿ ಕಂದಕದಂತೆ ದೊಡ್ಡ ಹಳ್ಳವಾಯಿತು.

೮೦-೯೩. ಕೃಷ್ಣನು ಕಂಸನನ್ನು ಹಿಡಿದುಕೊಂಡ ಮೇಲೆ ಅವನ ತಮ್ಮನಾದ ಸುನಾಮನು ಕೋಪದಿಂದ ಬರುತ್ತಲು ಬಲಭದ್ರನು ಅವನನ್ನು ಆಟವಾಡುವಂತೆ ಕೊಂದುಬಿಟ್ಟನು. ಆ ಬಳಿಕ ರಂಗಮಂಟಪದಲ್ಲಿ ಹಾಹಾಕಾರ ಶಬ್ದವು ಹೆಚ್ಚಿತು ಕೃಷ್ಣನು ಅಲಕ್ಷ್ಯದಿಂದ ಮಧುರಾ ರಾಜನಾದ ಕಂಸನನ್ನು ಕೊಂದುದನ್ನು ಎಲ್ಲರೂ ನೋಡಿದರು. ಆ ಮೇಲೆ ಕೃಷ್ಣಬಲರಾಮರಿಬ್ಬರೂ ವಸುದೇವ ದೇವಕಿಯರ ಪಾದಕ್ಕೆ ನಮಸ್ಕಾರಮಾಡಿದರು. ವಸುದೇವ ದೇವಕಿಯರು ನಮಸ್ಕಾರಮಾಡಿದ ಕೃಷ್ಣನನ್ನೆತ್ತಿ ಅವನು ಹುಟ್ಟಿದಾಗಹೇಳಿದ ಮಾತನ್ನು ಜ್ಞಾಪಿಸಿಕೊಂಡು ಅವರಿಬ್ಬರೂ ನಮಸ್ಕಾರಮಾಡಿ ನಿಂತುಕೊಂಡರು.

॥ ಶ್ರೀ ವಸುದೇವಃ ॥

ಪ್ರಸೀದ ಸೀದತಾಂ ದತ್ತೋ ದೇವಾನಾಂ ಯೋ (ಚ) ವರಃ ಪ್ರಭೋ ।
ತಥಾವಯೋಃ ಪ್ರಸಾದೇನ (ದಶ್ಚ) ಕೃತೋದ್ಧಾರಸ್ಸ (ರೋಸಿ) ಕೇಶವ

ಆರಾಧಿತೋ ಯದ್ಭಗವಾನವತೀರ್ಣೋ ಗೃಹೇ ಮಮ ।
ದುರ್ವೃತ್ತನಿಧನಾರ್ಥಾಯ ತೇನ ನಃ ಪಾವಿತಂ ಕುಲಂ ॥ ೯೫ ॥

ತ್ವಮಂತಸ್ಸರ್ವಭೂತಾನಾಂ ಸರ್ವಭೂತಮಯಸ್ಥಿತಃ ।
ಪ್ರವರ್ತೇತೇ ಸಮಸ್ತಾತ್ಮನ್ ತ್ವತ್ತೋ ಭೂತ ಭವಿಷ್ಯತಿ ॥ ೯೬ ॥

ಯಜ್ಞೇ ತ್ವಮಿಜ್ಯಸೇಽಚಿಂತ್ಯ ಸರ್ವದೇವಮಯಾಚ್ಯುತ ।
ತ್ವಮೇವ ಯಜ್ಞೋ ಯಷ್ಟಾ ಚ ಯಜ್ಞನಾಂ ಪರಮೇಶ್ವರ ॥ ೯೭ ॥

೯೪-೯೫. ವಸುದೇವನು " ಸ್ವಾಮಿಯಾದ ಕೇಶವನೇ ದುಃಖಪಡುತ್ತಿರುವ ದೇವತೆಗಳಿಗೆ ವರವನ್ನು ಕೊಟ್ಟು ಅನುಗ್ರಹಮಾಡಿ ನಮ್ಮಿಬ್ಬರನ್ನೂ ಉದ್ಧಾರ ಮಾಡಿದೆ. ಪೂರ್ವಜನ್ಮದಲ್ಲಿ ನಾನು ಮಾಡಿದ ಪೂಜಾಫಲದಿಂದ ದುಷ್ಟರನ್ನು ನಾಶ ಮಾಡುವುದಕ್ಕಾಗಿ ನನ್ನ ಮನೆಯಲ್ಲಿ ನೀನು ಅವತಾರ ಮಾಡಿ ನಮ್ಮ ವಂಶವನ್ನು ಪಾವನಮಾಡಿದೆ.

೯೬-೯೭. ನೀನು ಸಮಸ್ತ ಭೂತಸ್ವರೂಪನಾಗಿ ಸಮಸ್ತ ಪ್ರಾಣಿಗಳ ಅಂತರಾತ್ಮನಾಗಿರುವೆ. ಸರ್ವಾತ್ಮನಾದ ನಿನ್ನಿಂದಲೇ ಈ ಪ್ರಂಪಚವು ತ್ರಿಕಾಲದಲ್ಲಿಯೂ ಇರುವುದು. ಸಮಸ್ತ ದೇವತಾಸ್ವರೂಪನೂ ಯಜ್ಞಸ್ವರೂಪನೂ ಆದ ಪರಮೇಶ್ವರನಾದ ನಿನ್ನನ್ನು ಯಾಗಮಾಡತಕ್ಕವರು ಯಜ್ಞರೂಪವಾದ ಕರ್ಮದಿಂದ ಪೂಜಿಸುವರು.

ಸಮುದ್ಭವಸ್ಸಮಸ್ತಸ್ಯ ಜಗತಸ್ತ್ವಂ ಜನಾರ್ದನ ॥ ೯೮ ॥

ಸಾಪಹ್ನವಂ ಮಮ ಮನೋ ಯದೇತತ್ತ್ವಯಿ ಜಾಯತೇ ।
ದೇವಕ್ಯಾಶ್ಚಾತ್ಮಜಪ್ರೀತ್ಯಾ ತದತ್ಯಂತವಿಡಂಬನಾ ॥ ೯೯ ॥

ತ್ವಂ ಕರ್ತಾ ಸರ್ವಭೂತಾನಾಂ ಅನಾದಿನಿಧನೋ ಭವಾನ್ ।
ತ್ವಾಂ ಮನುಷ್ಯಸ್ಯ ಕಸ್ಯೈಷಾ ಜಿಹ್ವಾ ಪುತ್ರೇತಿ ವಕ್ಷ್ಯತಿ ॥ ೧೦೦ ॥

ಜಗದೇತಜ್ಜಗನ್ನಾಥ ಸಂಭೂತಮಖಿಲಂ ಯತಃ ।
ಕಯಾ ಯುಕ್ತ್ಯಾ ವಿನಾ ಮಾಯಾಂ ಸೋಽಸ್ಮತ್ತಸ್ಸಂಭವಿಷ್ಯತಿ ॥ ೧೦೧ ॥

ಯಸ್ಮಿನ್ ಪ್ರತಿಷ್ಠಿತಂ ಸರ್ವಂ ಜಗತ್ಸ್ಥಾವರಜಂಗಮಂ ।
ಸ ಕೋಷ್ಠೋತ್ಸಂಗಶಯನೋ ಮಾನುಷೋ ಜಾಯತೇ ಕಥಂ ॥ ೧೦೨ ॥

೯೮-೯೯. ಸಮಸ್ತ ಜಗತ್ತಿಗೂ ನೀನೇ ಉತ್ಪತ್ತಿಕಾರಣನಾಗಿರುವೆ. ನನಗೂ ದೇವಕಿಗೂ ಪುತ್ರನೆಂಬ ಪ್ರೀತಿಯಿಂದ ಮನಸ್ಸು ಭ್ರಾಂತಿಯಿಂದ ಕೂಡಿದೆ. ಇದು ಜನರ ಅಪಹಾಸ್ಯಕ್ಕೆ ಕಾರಣವಾಗಿರುವುದು.

೧೦೦-೧೦೨. ಆದ್ಯಂತಗಳಿಲ್ಲದ ಸಮಸ್ತ ಭೂತಗಳನ್ನೂ ಸೃಷ್ಟಿಸಿದ ನಿನ್ನನ್ನು ಯಾವ ಮನುಷ್ಯನ ನಾಲಿಗೆಯು ಮಗನೆಂದು ಹೇಳುವುದು ? ಜಗದೊಡೆಯನೇ ಈ ಜಗತ್ತೇ ನಿನ್ನಿಂದ ಹುಟ್ಟಿರುವಾಗ ನೀನು ಮಾಯೆಯನ್ನು ಬಿಟ್ಟು ಮತ್ತಾವ ಶಕ್ತಿಯಿಂದ ನಮಗೆ ಮಗನಾಗಿರುವೆ ? ಯಾವನಲ್ಲಿ ಈ ಸಮಸ್ತವಾದ ಚರಾಚರ ಜಗತ್ತು ಇರುವುದೋ ಅವನು ಮಾಯೆಯಿಂದಲ್ಲದೆ ಗರ್ಭಕೋಶದಲ್ಲಿಯೂ ತೊಡೆಯ ಮೇಲೆಯೂ ಮಲಗಿದವನಾಗಿ ಮನುಷ್ಯನಾಗಿ ಹೇಗೆ ಹುಟ್ಟುವನು ?

ಸ ತ್ವಂ ಪ್ರಸೀದ ಪರಮೇಶ್ವರ ಪಾಹಿ ವಿಶ್ವಂ
ಅಂಶಾವತಾರ ಕರಣೈರ್ನ ಮಮಾಸಿ ಪುತ್ರಃ ।
ಅಬ್ರಹ್ಮಪಾದಪಮಿದಂ ಜಗದೇತದೀಶ
ತ್ವತ್ತೋ ವಿಮೋಹಯಸಿ ಕಂ ಪುರುಷೋತ್ತಮಾಸ್ಮಾನ್ ॥ ೧೦೩ ॥

ಮಾಯಾವಿಮೋಹಿತ ದೃಶಾ ತನಯೋ ಮಮೇತಿ
ಕಂಸಾದ್ಭಯಂ ಕೃತಮಪಾಸ್ತಭಯೋಽತಿತೀವ್ರಂ ।
ನೀತೋಽಸಿ ಗೋಕುಲಮರಾತಿಭಯಾ ಕುಲೇನ
ವೃದ್ಧಿಂ ಗತೋಽಸಿ ಮಮನಾಸ್ತಿ ಮಮತ್ವಮೀಶೆ ॥ ೧೦೪ ॥

---

೧೦೩. ಪರಮೇಶ್ವರನೇ ಪ್ರಸನ್ನನಾಗು. ನೀನು ನನ್ನ ಮಗನಲ್ಲ. ಅಂಶಾವತಾರವನ್ನು ಮಾಡಿ ಲೋಕವನ್ನು ಕಾಪಾಡು. ಬ್ರಹ್ಮನು ಮೊದಲಾಗಿ ದೊಡ್ಡ ಮರದಂತಿರುವ ಈ ಜಗತ್ತು ನಿನ್ನಿಂದಲೇ ಹುಟ್ಟಿರುವುದು. ಪುರುಷೋತ್ತಮನೇ ನಮ್ಮನ್ನೇಕೆ ಮೋಹಗೊಳಿಸಿರುವೆ.

೧೦೪. ಪರಮೇಶ್ವರನೇ ಮಾಯೆಯಿಂದ ಮೋಹಿತವಾದ ಬುದ್ಧಿಯಿಂದ ನನ್ನ ಮಗನೆಂದು ಕಂಸನಿಂದ ಭಯಪಡುತ್ತಿದ್ದೆನು. ಆ ಭಯವು ಬಹುಬೇಗ ನಾಶವಾಯಿತು. ಶತ್ರುವಿನ ಭಯರೂಪವಾದ ದುಃಖದಿಂದ ನಿನ್ನನ್ನು ನಾನು ಗೋಕುಲಕ್ಕೆ ಎತ್ತಿಕೊಂಡು ಹೋಗಿ ಮಲಗಿಸಿದೆನು. ಅಲ್ಲಿಯೇ ನೀನು ಬೆಳೆದೆ. ನನ್ನ ಮಗನೆಂಬ ಅಭಿಮಾನವು ಈಗ ನನಗಿಲ್ಲ.

ಕರ್ಮಾಣಿ ರುದ್ರಮರುದಶ್ವಿ ಶತಕ್ರತೂನಾಂ
ಸಾಧ್ಯಾನಿ ಯಸ್ಯ ನ ಭವಂತಿ ನಿರೀಕ್ಷಿತಾನಿ ।
ತ್ವಂ ವಿಷ್ಣುರೀಶ ಜಗತಾಮುಪಕಾರಹೇತೋಃ
ಪ್ರಾಪ್ತೋಽಸಿ ನಃ ಪರಿಗತೋ ವಿಗತೋ ವಿಮೋಹಃ ॥ ೧೦೫ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ವಿಂಶೋಽಧ್ಯಾಯಃ

---

೧೦೫. ನೀನು ಮಾಡಿದ ಕೆಲಸಗಳು ರುದ್ರನಿಗೂ, ದೇವತೆಗಳಿಗೂ, ಅಶ್ವಿನೀ ದೇವತೆಗಳಿಗೂ, ದೇವೇಂದ್ರನಿಗೂ ಸಾಧ್ಯವಾದುದಲ್ಲವೆಂದು ನೋಡಿದುದಾಯಿತು. ನೀನು ಪರಮೇಶ್ವರನಾದ ವಿಷ್ಣುವು. ಲೋಕೋಪಕಾರಕ್ಕಾಗಿ ಪುತ್ರನೆಂಬ ನೆಪದಿಂದ ನಮ್ಮ ಸಮೀಪಕ್ಕೆ ಬಂದಿರುವೆಯೆಂದು ನಾವು ದೃಢವಾಗಿ ತಿಳಿದೆವು. ಇದರಿಂದ ನಮ್ಮ ಅಜ್ಞಾನವು ನಾಶವಾಯಿತು. " ಎಂದು ಸ್ತೋತ್ರಮಾಡಿದನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ
ಇಪ್ಪತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಏಕವಿಂಶೋಽಧ್ಯಾಯಃ

॥ ಶ್ರೀ ಪರಾಶರಃ ॥

ತೌ ಸಮುತ್ಪನ್ನವಿಜ್ಞಾನೌ ಭಗವತ್ಕರ್ಮದರ್ಶನಾತ್ ।
ದೇವಕೀವಸುದೇವೌ ತು ದೃಷ್ಟ್ವಾ ಮಾಯಾಂ ಪುನರ್ಹರಿಃ ॥
ಮೋಹಾಯ ಯದುಚಕ್ರಸ್ಯ ವಿತತಾನ ಸ ವೈಷ್ಣವೀಂ ॥ ೧ ॥

ಉವಾಚ ಚಾಂಬ ಹೇ ತಾತ ಚಿರಾದುತ್ಕಂಠಿತೇನ ಮೇ ।
ಭವಂತೌ ಕಂಸಭೀತೇನ ದೃಷ್ಟೌ ಸಂಕರ್ಷಣೇನ ಚ ॥ ೨ ॥

ಕುರ್ವತಾಂ ಯಾತಿ ಯಃ ಕಾಲೋ ಮಾತಾಪಿತ್ರೋರಭೂಜನಂ ।
ತತ್ಪಂಡಮಾಯುಷೋ ವ್ಯರ್ಥಮಸಾಧೂನಾಂ ಹಿ ಜಾಯತೇ ॥ ೩ ॥

ಇಪ್ಪತ್ತೊಂದನೆಯ ಅಧ್ಯಾಯವು.

೧-೫. ಮಹಾಮಹಿಮನಾದ ಭಗವಂತನ ಕಾರ್ಯಗಳನ್ನು ನೋಡಿದು ದರಿಂದ ದೇವಕೀ ವಸುದೇವರಿಗೆ ಜ್ಞಾನೋತ್ಪತ್ತಿಯಾದುದನ್ನು ತಿಳಿದು ಕೃಷ್ಣನು ಯದುವಂಶದವರ ಗುಂಪನ್ನು ಮೋಹಗೋಳಿಸುವುದಕ್ಕಾಗಿ ಪುನಃ ವೈಷ್ಣವೀ ಮಾಯೆಯನ್ನು ಹರಡಿದನು. ಮತ್ತು ತಾಯಿತಂದೆಗಳನ್ನು ಕುರಿತು " ತಂದೆ ತಾಯಿಗಳೇ ! ನಾನೂ ಬಲರಾಮನೂ ನಿಮ್ಮನ್ನು ನೋಡಬೇಕೆಂದು ಬಹುದಿವಸಗಳಿಂದ ಉತ್ಸಾಹ ಪಡುತ್ತಿದ್ದೆವು ಕಂಸನ ಭಯದಿಂದ ಸಾಧ್ಯವಾಗಲಿಲ್ಲ. ಈ ದಿವಸ ನಿಮ್ಮನ್ನು ನೋಡಿದೆವು. ತಾಯಿ ತಂದೆಗಳ ಪೂಜೆಯನ್ನು ಮಾಡದ ದುಷ್ಪುರ ಆಯುಸ್ಸು ಕಡಮೆಯಾಗುವುದಲ್ಲದೆ ಅವರು ಜೀವಿಸಿರುವ ಕಾಲವೂ ವ್ಯರ್ಥವಾಗುವುದು. ಗುರುಗಳನ್ನೂ ದೇವತೆ

ಗುರುದೇವದ್ವಿಜಾತೀನಾಂ ಮಾತಾ ಪಿತ್ರೋಶ್ಚ ಪೂಜನಂ ।
ಕುರ್ವತಾಂ ಸಫಲಃ ಕಾಲೋ ದೇಹಿನಾಂ ತಾತ ಜಾಯತೇ ॥ ೪ ॥

ತತ್ ಕ್ಷಂತವ್ಯಮಿದಂ ಸರ್ವಂ ಅತಿಕ್ರಮಕೃತಂ ಪಿತಃ ।
ಕಂಸವೀರ್ಯಪ್ರತಾಪಾಭ್ಯಾಮಾವಯೋಃ ಪರವಶ್ಯಯೋಃ ॥ ೫ ॥

॥ ಶ್ರೀ ಪರಾಶರಃ ॥

ಇತ್ಯುಕ್ತ್ವಾಥ ಪ್ರಣಮ್ಯೋಗ್ರೌ ಯದುವೃದ್ಧಾನನುಕ್ರಮಾತ್ ।
ಯಥಾವದಭಿಪೂಜ್ಯಾಥ ಚಕ್ರತುಃ ಪೌರಮಾನನಂ ॥ ೬ ॥

ಕಂಸಪತ್ನ್ಯಃ ತತಃ ಕಂಸಂ ಪರಿವಾರ್ಯ ಹತಂ ಭುವಿ ।
ವಿಲೇಪುರ್ಮಾತರಶ್ಚಾಸ್ಯ ದುಃಖಶೋಕಪರಿಪ್ಲುತಾಃ ॥ ೭ ॥

ಬಹುಪ್ರಕಾರಮುಸ್ರಸ್ಯಾಃ ಪಶ್ಚಾತ್ತಾಪಾತುರೋ ಹರಿಃ ।
ತಾಸ್ಸಮಾಶ್ವಾಸಯಾಮಾಸ ಸ್ವಯಮಸ್ರಾವಿಲೇಕ್ಷಣಃ ॥ ೮ ॥

ಗಳನ್ನೂ ಬ್ರಾಹ್ಮಣರನ್ನೂ ತಂದೆ ತಾಯಿಗಳನ್ನೂ ಪೂಜಿಸುವ ಸಜ್ಜನರ ಆಯುಸ್ಸು ಹೆಚ್ಚುವುದಲ್ಲದೆ ಅವರ ಜೀವಿತ ಕಾಲವೂ ಸಫಲವಾಗುವುದು. ಆದುದರಿಂದ ಕಂಸನ ಪರಾಕ್ರಮ ಪ್ರತಾಪಗಳಿಂದ ಪರಾಧೀನರಾದ ನಮ್ಮ ಅಪರಾಧಗಳನ್ನೆಲ್ಲ ನೀವು ಕ್ಷಮಿಸಬೇಕು." ಎಂದು ಹೇಳಿದನು.

೬-೮. ಹೀಗೆಂದು ಹೇಳಿ ರಾಮಕೃಷ್ಣರಿಬ್ಬರೂ ಯದುವೃದ್ಧರಿಗೆ ಕ್ರಮವಾಗಿ ನಮಸ್ಕಾರ ಮಾಡಿ ನಿಯಮಾನುಸಾರವಾಗಿ ಅವರನ್ನು ಪೂಜಿಸಿ ಪಟ್ಟಣಿಗರಿಗೂ ಮರ್ಯಾದೆಯನ್ನು ಮಾಡಿದರು. ಆ ಮೇಲೆ ಕಂಸನ ಪತ್ನಿಯರೂ ಅವನ ತಾಯಿಯರೂ ಸತ್ತು ಭೂಮಿಯಮೇಲೆ ಬಿದ್ದಿದ್ದ ಅವನ ಶರೀರದ ಸುತ್ತಲೂ ಸುತ್ತಿಕೊಂಡು ದುಃಖದಿಂದ ಅಳುತ್ತಿದ್ದರು. ಅನೇಕ ಬಗೆಯಲ್ಲಿ ದುಃಖದಿಂದ ಅಳುತ್ತಿರುವ ಅವರನ್ನು ನೋಡಿ ಕೃಷ್ಣನು ಪಶ್ಚಾತ್ತಾಪದಿಂದ ತನ್ನ ಕಣ್ಣಿನಲ್ಲಿಯೂ ನೀರನ್ನು ಸುರಿಸುತ್ತ ಅವರನ್ನು ಸಮಾಧಾನಪಡಿಸಿದನು

ಉಗ್ರಸೇನಂ ತತೋ ಬಂಧಾನ್ಮುಮೋಚ ಮಧುಸೂದನಃ ।
ಅಭ್ಯಷಿಂಚತ್ತದೈವೈನಂ ನಿಜರಾಜ್ಯೇ ಹತಾತ್ಮಜಂ ॥ ೯ ॥

ರಾಜ್ಯೇsಭಿಷಿಕ್ತಃ ಕೃಷ್ಣೇನ ಯದುಸಿಂಹಸ್ತಸ್ಯ ಸಃ ।
ಚಕಾರ ಪ್ರೇತಕಾರ್ಯಾಣಿ ಯೇ ಚಾನ್ಯೇ ತತ್ರ ಘಾತಿತಾಃ ॥ ೧೦ ॥

ಕೃತೌರ್ಧ್ವದೈಹಿಕಂ ಚೈನಂ ಸಿಂಹಾಸನಗತಂ ಹರಿಃ ।
ಉವಾಚಾಜ್ಞಾಪಯ ವಿಭೋ ಯತ್ಕಾರ್ಯಮವಿಶಂಕಿತಃ ॥ ೧೧ ॥

ಯಯಾತಿಶಾಪಾದ್ವಂಶೋsಯಮುರಾಜ್ಯಾರ್ಹಾಪಿ ಸಾಂಪ್ರತಂ ।
ಮಯಿ ಭೃತ್ಯೇ ಸ್ಥಿತೇ ದೇವಾನಾಜ್ಞಾಪಯತು ಕಿಂ ನೃಪೈಃ ॥ ೧೨ ॥

॥ ಶ್ರೀ ಪರಾಶರಃ ॥

ಇತ್ಯುಕ್ತ್ವಾ ಸೋsಸ್ಮರದ್ವಾಯುಮಾಜಗಾಮ ಚ ತತ್ಕ್ಷಣಾತ್ ।
ಉವಾಚ ಚೈನಂ ಭಗವಾನ್ ಕೇತನಃ ಕಾರ್ಯಮಾನುಷಃ ॥ ೧೩ ॥

೯-೧೨. ತರುವಾಯ ಕೃಷ್ಣನು ಉಗ್ರಸೇನನ್ನು ಸೆರೆಯಿಂದ ಬಿಡಿಸಿ ಕ್ಷಣವೇ ಮಗನು ಸತ್ತುಹೋದುದರಿಂದ ಆ ರಾಜ್ಯದಲ್ಲಿ ಅವನಿಗೇ ದೊರೆತನವನ್ನು ಕೊಟ್ಟು ಪಟ್ಟಾಭಿಷೇಕ ಮಾಡಿದನು. ರಾಜನಾದ ಉಗ್ರಸೇನನು ತನ್ನ ಮಗನಿಗೂ ಅಲ್ಲಿ ಮರಣಹೊಂದಿದ ಇತರರಿಗೂ ಪ್ರೇತಕಾರ್ಯಗಳನ್ನು ಮಾಡಿಸಿದನು. ಮಗನ ಪ್ರೇತಕರ್ಮಗಳೆಲ್ಲ ಮುಗಿದಮೇಲೆ ಒಂದು ದಿನ ಸಿಂಹಾಸನದಲ್ಲಿ ಕುಳಿತಿದ್ದ ಉಗ್ರಸೇನನನ್ನು ಕುರಿತು "ಕೃಷ್ಣನು ಎಲೈ ರಾಜನೇ ನಾವು ಯಾವ ಕೆಲಸವನ್ನು ಮಾಡಬೇಕೆಂಬುದನ್ನು ಸಂದೇಹಪಡದೆ ಆಜ್ಞಾಪಿಸಿಮಾಡು. ಯಯಾತಿಯು ಶಾಪಕೊಟ್ಟುದರಿಂದ ನಮ್ಮ ವಂಶವು ರಾಜ್ಯಾಧಿಪತ್ಯವನ್ನು ಪಡೆಯುವುದಕ್ಕೆ ಯೋಗ್ಯವಲ್ಲದಿದ್ದರೂ ಈಗ ಸೇವಕನಾದ ನಾವಿರುವಾಗ ನೀನು ದೇವತೆಗಳಿಗೂ ಆಜ್ಞೆಯನ್ನು ಕೊಡಬಹುದು. ಇನ್ನು ರಾಜರ ವಿಷಯವನ್ನು ಹೇಳುವುದೇನು" ಎಂದನು.

೧೩-೧೫. ಕೃಷ್ಣನು ಹೀಗೆ ಹೇಳಿ ವಾಯುದೇವನನ್ನು ಸ್ಮರಿಸಿದನು. ಕ್ಷಣದಲ್ಲಿಯೇ ಅವನು ಬಂದನು. ಕಾರ್ಯಕ್ಕೋಸ್ಕರವಾಗಿ ಮನುಷ್ಯರೂಪವನ್ನು

ಗಚ್ಛೇಂದ್ರಂ ಬ್ರೂಹಿ ವಾಯೋ ತ್ವಂ ಅಲಂ ಗರ್ವೇಣ ವಾಸವ ।
ದೀಯತಾಮುಗ್ರ ಸೇನಾಯ ಸುಧರ್ಮಾ ಭವತಾ ಸಭಾ ॥ ೧೪ ॥

ಕೃಷ್ಣೋ ಬ್ರವೀತಿ ರಾಜಾರ್ಹಮೇತದ್ರತ್ನಮನುತ್ತಮಂ ।
ಸುಧರ್ಮಾಖ್ಯಸಭಾಯುಕ್ತಮಸ್ಮಾಂ ಯದುಭಿರಾಸಿತುಂ ॥ ೧೫ ॥

॥ ಶ್ರೀ ಪರಾಶರಃ ॥

ಇತ್ಯುಕ್ತಃ ಪವನೋ ಗತ್ವಾ ಸರ್ವಮಾಹ ಶಚೀಪತಿಂ ।
ದದೌ ಸೋಽಪಿ ಸುಧರ್ಮಾಖ್ಯಾಂ ಸಭಾಂ ವಾಯೋಃ ಪುರಂದರಃ ॥ ೧೬ ॥

ವಾಯುನಾ ಚಾಹೃತಾಂ ದಿವ್ಯಾಂ ಸಭಾಂ ತೇ ಯದುಪುಂಗವಾಃ ।
ಬುಭುಜುಸ್ಸರ್ವರತ್ನಾಢ್ಯಾಂ ಗೋವಿಂದಭುಜಸಂಶ್ರಯಾಃ ॥ ೧೭ ॥

ಧರಿಸಿದ ಮಹಾಮಹಿಮನಾದ ಕೇಶವನು ಅವನನ್ನು ಕುರಿತು "ವಾಯುದೇವನೇ ನೀನು ದೇವೇಂದ್ರನ ಸಮೀಪಕ್ಕೆ ಹೋಗಿ 'ದೇವೇಂದ್ರನೇ ಗರ್ವಪಡಬೇಡ ಉಗ್ರಸೇನನಿಗೆ ನಿನ್ನ ಸಭೆಯಾದ ಸುಧರ್ಮೆಯನ್ನು ಕೊಡು. ಶ್ರೇಷ್ಠವಾದ ಈ ಸಭಾರತ್ನವು ರಾಜರಿಗೆ ಯೋಗ್ಯವಾದುದು ಈ ಸುಧರ್ಮೆಯೆಂಬ ಸಭೆಯು ಯಾದವರು ಕುಳಿತುಕೊಳ್ಳುವುದಕ್ಕೆ ಯೋಗ್ಯವಾದುದು, ಕೃಷ್ಣನು ಹೇಳುತ್ತಾನೆ' ಎಂದು ಹೇಳು" ಎಂಬುದಾಗಿ ಹೇಳಿಕಳುಹಿಸಿದನು.

೧೬–೧೭. ವಾಯುವು ಈ ಮಾತನ್ನು ದೇವೇಂದ್ರನಿಗೆ ಹೇಳಿದನು. ದೇವೇಂದ್ರನು ಆ ಸಭೆಯನ್ನು ವಾಯುವಿಗೆ ಕೊಟ್ಟನು. ವಾಯುವು ತಂದ ಸಮಸ್ತ ರತ್ನಗಳಿಂದಲೂ ತುಂಬಿದ ದಿವ್ಯವಾದ ಆ ಸಭೆಯನ್ನು ಗೋವಿಂದನ ಬಾಹುಬಲವನ್ನಾಶ್ರಯಿಸಿದ ಯಾದವರು ಅನುಭವಿಸಿದರು.

ವಿದಿತಾಖಿಲವಿಜ್ಞಾನೌ ಸರ್ವಜ್ಞಾನಮಯಾವಪಿ ।
ಶಿಷ್ಯಾಚಾರ್ಯಕ್ರಮಂ ವೀರೌ ಜ್ಞಾಪಯಂತೌಯದೂತ್ತಮೌ ॥ ೧೪ ॥

ತತಸ್ಸಾಂದೀಪನಿಂ ಕಾಶ್ಯಮವಂತೀ ಪುರವಾಸಿನಂ ।
ವಿದ್ಯಾರ್ಥಂ ಜಗ್ಮತುರ್ಬಾಲೌ ಕೃತೋಪನಯನಕ್ರಮೌ ॥ ೧೫ ॥

ವೇದಾಭ್ಯಾಸಕೃತಪ್ರೀತಿಸಂಕರ್ಷಣಜನಾರ್ದನೌ ।
ತಸ್ಯ ಶಿಷ್ಯತ್ವಮಭ್ಯೇತ್ಯ ಗುರುವೃತ್ತಿಪರೌ ಹಿತೌ ॥
ದರ್ಶಯಾಂಚಕ್ರತುರ್ವೀರಾವಾಚಾರಮಖಿಲೇ ಜನೇ ॥ ೧೦ ॥

ಸರಹಸ್ಯಂ ಧನುರ್ವೇದಂ ಸಸಂಗ್ರಹಮಧೀಯತಾಂ ।
ಅಹೋರಾತ್ರ ಚತುಷ್ಪಷ್ಟ್ಯಾ ತದದ್ಭುತಮಭೂದ್ದ್ವಿಜ ॥ ೧೧ ॥

೧೪-೧೧. ಬಳಿಕ ಯದುಶ್ರೇಷ್ಠರಾದ ರಾಮಕೃಷ್ಣರು ಜ್ಞಾನಿಗಳಾಗಿ ಸಮಸ್ತ ಶಾಸ್ತ್ರಗಳನ್ನು ತಿಳಿದವರಾಗಿದ್ದರೂ ಭೂಮಿಯಲ್ಲಿ ಗುರುಶಿಷ್ಯರ ಕ್ರಮವನ್ನು ತಿಳಿಸುವುದಕ್ಕಾಗಿ ಕ್ರಮವಾಗಿ ಉಪನಯನ ಮಾಡಿಸಿಕೊಂಡು ಕಾಶಿಯಲ್ಲಿ ಹುಟ್ಟಿ ಉಜ್ಜಯಿನೀ ಪಟ್ಟಣದಲ್ಲಿ ವಾಸವಾಗಿದ್ದ ಸಾಂದೀಪನಿಯೆಂಬ ಗುರುವಿನ ಸಮೀಪಕ್ಕೆ ವಿದ್ಯಾಭ್ಯಾಸಕ್ಕಾಗಿ ಹೋದರು. ಶೂರರಾದ ಸಂಕರ್ಷಣ ಜನಾರ್ದನರು ವೇದಾಭ್ಯಾಸದಲ್ಲಿ ಆಸಕ್ತರಾಗಿ ಸಾಂದೀಪನಿ ಶಿಷ್ಯರಾಗಿ ಗುರುಸೇವೆಯನ್ನು ಮಾಡುತ್ತ ಸಮಸ್ತ ಜನರಿಗೂ ಆಚಾರ ಕ್ರಮವನ್ನು ತೋರಿಸಿಕೊಟ್ಟರು. ಮೈತ್ರೇಯನೇ! ಅವರಿಬ್ಬರೂ ಅರವತ್ತನಾಲ್ಕು ದಿನಗಳೊಳಗೆ ಗುರುವಿನಿಂದ ಅಸ್ತ್ರ ಮಂತ್ರವೇ ಮೊದಲಾದ ಉಪನಿಷತ್ತುಗಳಿಂದ ಕೂಡಿದ ಧನುರ್ವೇದವನ್ನು ಸಂಪೂರ್ಣವಾಗಿ ಕಲಿತುಕೊಂಡರು. ಇದು ಗುರುವಿಗೆ ಆಶ್ಚರ್ಯವನ್ನುಂಟುಮಾಡಿತು.

ಸಾಂದೀಪನಿರಶಂಭಾವ್ಯಂ ತಯೋಃ ಕರ್ಮಾತಿಮಾನುಷಂ ।
ವಿಚಿಂತ್ಯ ತೌ ತದಾ ಮೇನೇ ಪ್ರಾಪ್ತೌ ಚಂದ್ರದಿವಾಕರೌ ॥ ೨೨ ॥

ಸಾಂಗಾಂಶ್ಚ ಚತುರೋ ವೇದಾನ್ ಸರ್ವಶಾಸ್ತ್ರಾಣಿ ಚೈವ ಹಿ ।
ಅಸ್ತ್ರಗ್ರಾಮಮಶೇಷಂ ಚ ಪ್ರೋಕ್ತೆನೋಕ್ತಮವಾಪ್ಯ ತೌ ॥ ೨೩ ॥

ಊಚತುಃ ಪ್ರೀಯತಾಂ ಯಾತೇ ದಾತವ್ಯಾ ಗುರುದಕ್ಷಿಣಾ ॥ ೨೪ ॥

ಸೋಽಪ್ಯತೀಂದ್ರಿಯಮಾಲೋಕ್ಯ ತಯೋಃ ಕರ್ಮ ಮಹಾಪತಿಃ ।
ಅಯಾಚತ ಮೃತಂ ಪುತ್ರಂ ಪ್ರಭಾಸೇ ಲವಣಾರ್ಣವೇ ॥ ೨೫ ॥

ಗೃಹೀತಾಸ್ತ್ರೌ ತತಸ್ತೌ ತು ಸಾಶ್ಮಾಹಸ್ತೌ ಮಹೋದಧಿಃ ।
ಉವಾಚ ನಮಯಾ ಪುತ್ರೋ ದೈತ್ಯಸ್ಸಾಂದೀಪನೇರಿತಿ ॥ ೨೬ ॥

ದೈತ್ಯಃ ಪಂಚಜನೋ ನಾಮ ಶಂಖರೂಪಸ್ಸ ಬಾಲಕಂ ।
ಜಗ್ರಾಹ ಯೋಽಸ್ತಿ ಸಲಿಲೇ ಮಮೈವಾಸುರ ಸೂದನ ॥ ೨೭ ॥

೨೨-೨೫. ಗುರುವಾದ ಸಾದೀಪನಿಯು ಮನುಷ್ಯರಿಗಸಾಧ್ಯವಾದ ಕಾರ್ಯವನ್ನು ಅವರು ಮಾಡುವುದನ್ನು ಕಂಡು ತನ್ನ ಮನದಲ್ಲಿ ಯೋಚಿಸಿ ಚಂದ್ರ ಸೂರ್ಯರೇ ಬಂದರೆಂದು ತಿಳಿದುಕೊಂಡನು. ಅಂಗಸಹಿತವಾದ ನಾಲ್ಕು ವೇದಗಳನ್ನೂ ಶಾಸ್ತ್ರಗಳನ್ನೂ ಸಮಸ್ತ ಅಸ್ತ್ರಮಂತ್ರಗಳನ್ನೂ ಹೇಳಿದೊಡನೆಯೇ ಗ್ರಹಿಸಿ ಆ ಶಿಷ್ಯರಿಬ್ಬರೂ ಗುರುವನ್ನು ಕುರಿತು ನಾವು ಹೊರಡುತ್ತೇವೆ. ತಮಗೇನು ಗುರುದಕ್ಷಿಣೆಯನ್ನು ಕೊಡಬೇಕೆಂಬುದನ್ನು ಹೇಳಿರೆಂದರು. ಮಹಾಬುದ್ಧಿವಂತನಾದ ಗುರುವು ಅವರುಮಾಡುವ ಇಂದ್ರಿಯಗೋಚರವಲ್ಲದ ಮಹಾಕಾರ್ಯಗಳನ್ನು ನೋಡಿ ಹಿಂದೆ ಲವಣ ಸಮುದ್ರದ ಪ್ರಭಾಸಕ್ಷೇತ್ರದಲ್ಲಿ ಮರಣಹೊಂದಿದ ತನ್ನ ಮಗನನ್ನು ತಂದುಕೊಡಬೇಕೆಂದು ಕೇಳಿದನು.

೨೬-೨೯. ಅಸ್ತ್ರಗಳನ್ನು ಹಿಡಿದುಬಂದ ಅವರಿಬ್ಬರನ್ನೂ ನೋಡಿ ಸಮುದ್ರರಾಜನು ಅರ್ಘ್ಯಾದಿಗಳಿಂದ ಪೂಜಿಸಿ " ನಾನು ಸಾಂದೀಪನಿಯ ಮಗನನ್ನು ಕೊಲ್ಲ

॥ ಶ್ರೀ ಪರಾಶರಃ ॥

ಇತ್ಯುಕ್ತೋಽಂತರ್ಜಲಂ ಗತ್ವಾ ಹತ್ವಾ ಪಂಚಜನಂ ಚ ತಂ।
ಕೃಷ್ಣೋ ಜಗ್ರಾಹ ತಸ್ಯಾಸ್ಥಿ ಪ್ರಭವಂ ಶಂಖಮುತ್ತಮಂ ॥ ೨೮ ॥

ಯಸ್ಯ ನಾದೇನ ದೈತ್ಯಾನಾಂ ಬಲಹಾನಿರಜಾಯತ।
ದೇವಾನಾಂ ವವೃಧೇ ತೇಜೋ ಯಾತ್ಯಧರ್ಮಶ್ಚ ಸಂಕ್ಷಯಂ ॥ ೨೯ ॥

ತಂ ಪಾಂಚಜನ್ಯಮಾಪೂರ್ಯ ಗತ್ವಾ ಯಮಪುರಂ ಹರಿಃ।
ಬಲದೇವಶ್ಚ ಬಲವಾನ್ ಜಿತ್ವಾ ವೈವಸ್ವತಂ ಯಮಂ ॥ ೩೦ ॥

ತಂ ಬಾಲಂ ಯಾತನಾಸಂಸ್ಥಂ ಯಥಾ ಪೂರ್ವಶರೀರಿಣಂ।
ಪಿತ್ರೇ ಪ್ರದತ್ತವಾನ್ಕೃಷ್ಣೋ ಬಲಶ್ಚ ಬಲಿನಾಂ ವರಃ ॥ ೩೧ ॥

ಲಿಲ್ಲ. ಪಂಚಜನನೆಂಬ ಶಂಖ ರೂಪನಾದ ದೈತ್ಯನು ಆ ಬಾಲಕನನ್ನು ಹಿಡಿದು ಕೊಂಡು ಹೋದನು. ಅವನು ನನ್ನ ನೀರಿನಲ್ಲಿಯೇ ಇರುವನು." ಎಂದು ಹೇಳಿದನು. ಈ ಮಾತನ್ನು ಕೇಳಿ ಕೃಷ್ಣನು ನೀರಿನೊಳಕ್ಕೆ ಹೋಗಿ ಆ ಪಂಚಜನನನ್ನು ಕೊಂದು ಅವನ ಮೂಳೆಯಿಂದ ಹುಟ್ಟಿದ ಉತ್ತಮವಾದ ಶಂಖವನ್ನು ಹಿಡಿದು ಕೊಂಡನು. ಆ ಶಂಖಧ್ವನಿಯಿಂದ ದೈತ್ಯರಿಗೆ ಬಲಹಾನಿಯೂ, ದೇವತೆಗಳಿಗೆ ಬಲ ವೃದ್ಧಿಯೂ ಆಗಿ ಅಧರ್ಮವು ನಾಶವಾಗುವುದು.

೩೦–೩೧. ಕೃಷ್ಣನು ಆ ಪಾಂಚಜನ್ಯ ಶಂಖವನ್ನು ಧ್ವನಿಮಾಡಿ ಬಲರಾಮನೊಡನೆ ಯಮನ ಪಟ್ಟಣಕ್ಕೆ ಹೋಗಿ ಯಮನನ್ನು ಜಯಿಸಿ ನರಕದಲ್ಲಿ ಯಾತನೆಯನ್ನನುಭವಿಸುತ್ತಿದ್ದ ಗುರುಪುತ್ರನನ್ನು ಹಿಂದಿನ ಶರೀರದೊಡನೆ ಕೂಡಿಸಿ ತಂದು ಗುರುವಿಗೆ ಕೊಟ್ಟನು.

ಮಥುರಾಂ ಚ ಪುನಃ ಪ್ರಾಪ್ತಾವುಗ್ರಸೇನೇನ ಪಾಲಿತಾಂ ।
ಪ್ರಹೃಷ್ಟಪುರುಷಸ್ತ್ರೀಕಾವುಭೌ ರಾಮಜನಾರ್ದನೌ ॥ ೩೨ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ಏಕವಿಂಶೋಽಧ್ಯಾಯಃ

---

೩೨. ಪುನಃ ರಾಮಕೃಷ್ಣರಿಬ್ಬರೂ ಸಂತೋಷಪಡುತ್ತಿರುವ ಪುರುಷ ಸ್ತ್ರೀಯರಿಂದ ತುಂಬಿದ ಉಗ್ರಸೇನರಾಜನು ರಕ್ಷಿಸುತ್ತಿದ್ದ ಮಥುರಾ ಪಟ್ಟಣಕ್ಕೆ ಬಂದರು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ

ಇಪ್ಪತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀಃ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ದ್ವಾವಿಂಶೋಽಧ್ಯಾಯಃ

॥ ಶ್ರೀ ಪರಾಶರಃ ॥

ಜರಾಸಂಧಸುತೇ ಕಂಸ ಉಪಯೇಮೇ ಮಹಾಬಲಃ।
ಅಸ್ತಿಂ ಪ್ರಾಪ್ತಿಂ [illegible] ಮೈತ್ರೇಯ ತಯೋರ್ಭರ್ತೃಹಣಂ ಹರಿಂ ॥ ೧ ॥

ಮಹಾಬಲಪರೀವಾರೋ ಮಗಧಾಧಿಪತಿರ್ಬಲೀ
ಹಂತುಮಭ್ಯಾಯಯೌ ಕೋಪಾತ್ ಜರಾಸಂದಸ್ಸ ಯಾದವಂ ॥ ೨ ॥

ಉಪೇತ್ಯ ಮಧುರಾಂ ಸೋಽಥ ರುರೋಧ ಮಗಧೇಶ್ವರಃ।
ಅಕ್ಷೌಹಿಣೀಭಿಸ್ಸೈನ್ಯಸ್ಯ ತ್ರಯೋವಿಂಶತಿಭಿರ್ವೃತಃ ॥ ೩ ॥

ಇಪತ್ತೆರಡನೆಯ ಅಧ್ಯಾಯವು

೧-೩. ಮೈತ್ರೇಯನೇ! ಕಂಸನು ಅಸ್ತಿಪ್ರಾಪ್ತಿಯೆಂಬ ಜರಾಸಂಧನ ಇಬ್ಬರು ಪುತ್ರಿಯರನ್ನು ಮದುವೆಯಾಗಿದ್ದನು. ಅವರಿಬ್ಬರ ಗಂಡನಾದ ಕಂಸನನ್ನು ಕೊಂದುದರಿಂದ ಶೂರನೂ ಮಗಧರಾಜನೂ, ಆದ ಜರಾಸಂಧನು ಕೃಷ್ಣನನ್ನು ಕೊಲ್ಲುವುದಕ್ಕಾಗಿ ಕೋಪದಿಂದ ಇಪ್ಪತ್ತಮೂರು ಅಕ್ಷೌಹಿಣೀ ಸೈನ್ಯದೊಡನೆ ಬಂದು ಮಥುರಾಪಟ್ಟಣಕ್ಕೆ ಮುತ್ತಿಗೆಯನ್ನು ಹಾಕಿದನು.

ನಿಷ್ಕ್ರಾಮ್ಯಾಲ್ಪಪರೀವಾರಾವುಭೌ ರಾಮಜನಾರ್ದನೌ ।
ಯುಯುಧಾತೇ ಸಮಂ ತಸ್ಯ ಬಲಿನೌ ಬಲಿಸೈನಿಕೈಃ ॥ ೪ ॥

ತತೋ ರಾಮಶ್ಚ ಕೃಷ್ಣಶ್ಚ ಮಂತ್ರಂ ಚಕ್ರತುರಂಜಸಾ ।
ಆಯುಧಾನಾಂ ಪುರಾಣಾನಾಮಾದಾನೇ ಮುನಿಸತ್ತಮ ॥ ೫ ॥

ಅನಂತರಂ ಹರೇಶ್ಶಾರ್ಙ್ಗಂ ತೂಣೇಚಾಕ್ಷಯಸಾಯಕೌ ।
ಆಕಾಶಾದಾಗತೌ ವಿಪ್ರ ತಥಾ ಕೌಮೋದಕೀ ಗದಾ ॥ ೬ ॥

ಹಲಂ ಚ ಬಲಭದ್ರಸ್ಯ ಗಗನಾದಾಗತಂ ಮಹತ್ ।
ಮುನಿಸೋಽಭಿಮತಂ ವಿಪ್ರ ಸಾನಂದಂ ಮುಸಲಂ ತಥಾ ॥ ೭ ॥

ತತೋ ಯುದ್ಧೇ ಪರಾಜಿತ್ಯ ಸಸೈನ್ಯಂ ಮಗಧಾಧಿಪಂ ।
ಪುರೀಂ ವಿವಿಶತುರ್ವೀರೌ ಉಭೌ ರಾಮಜನಾರ್ದನೌ ॥ ೮ ॥

೪-೮. ರಾಮಕೃಷ್ಣರಿಬ್ಬರೂ ಸ್ವಲ್ಪಸೈನ್ಯದೊಡನೆ ಪಟ್ಟಣದಿಂದ ಹೊರಟು ಶೂರನಾದ ಜರಾಸಂಧನೊಡನೆ ಸಮವಾಗಿ ಯುದ್ಧಮಾಡಿದರು. ಆ ಮೇಲೆ ರಾಮಕೃಷ್ಣರು ತಮ್ಮ ಹಿಂದಿನ ಆಯುಧಗಳನ್ನು ಧರಿಸಬೇಕೆಂದು ಮನಸ್ಸು ಮಾಡಿದರು. ಆಗ ಹರಿಯ ಶಾರ್ಙವೆಂಬ ಧನುಸ್ಸೂ ಕಡಿಮೆಯಾಗದ ಬಾಣಗಳನ್ನು ತುಂಬಿದ ಎರಡು ಬತ್ತಳಿಕೆಗಳೂ, ಕೌಮೋದಕಿಯೆಂಬ ಗದೆಯೂ ಆಕಾಶದಿಂದ ಇಳಿದು ಬಂದುವು. ಬಲರಾಮನ ದೊಡ್ಡ ಹಲಾಯುಧವೂ, ಮುಸಲಾಯುಧವೂ ಆಕಾಶದಿಂದ ಇಳಿದು ಬಂದುವು. ಆ ಮೇಲೆ ಅವರಿಬ್ಬರೂ ಯುದ್ಧದಲ್ಲಿ ಸೈನ್ಯದೊಡದೆ ಕೂಡಿದ ಮಗಧರಾಜನನ್ನು ಸೋಲಿಸಿ ಮಥರಾ ಪಟ್ಟಣವನ್ನು ಪ್ರವೇಶ ಮಾಡಿದರು.

ಜಿತೇ ತಸ್ಮಿನ್ ಸುದುರ್ವೃತ್ತೇ ಜರಾಸಂಧೇ ಮಹಾಮುನೇ ।
ಜೀವಮಾನೇ ಗತೇ ಕೃಷ್ಣಸ್ತಂ ನಾಮನ್ಯತ ನಿರ್ಜಿತಂ ॥ ೯ ॥

ಪುನರಪ್ಯಾಜಗಾಮಾಥ ಜಾರಾಸಂಧೋ ಬಲಾನ್ವಿತಃ ।
ಜಿತಶ್ಚ ರಾಮಕೃಷ್ಣಾಭ್ಯಾಮಪಕ್ರಾಂತೋ ದ್ವಿಜೋತ್ತಮ ॥ ೧೦ ॥

ದಶ ಚಾಷ್ಟೌ ಚ ಸಂಗ್ರಾಮಾನೇವಮತ್ಯಂತದುರ್ಮದಃ ।
ಯದುಭಿರ್ಮಾಗಧೋ ರಾಜಾ ಚಕ್ರೇ ಕೃಷ್ಣಪುರೋಗಮೈಃ ॥ ೧೧ ॥

ಸರ್ವೇಷ್ವೇತೇಷು ಯುದ್ಧೇಷು ಯಾದವೈಸ್ಸ ಪರಾಜಿತಃ ।
ಅಪಕ್ರಾಂತೋ ಜರಾಸಂಧಃ ಸ್ವಲ್ಪಸೈನ್ಯೈರ್ಬಲಾಧಿಕಃ ॥ ೧೨ ॥

ನ ತದ್ಬಲಂ ಯಾದವಾನಾಂ ವಿಜಿತಂ ಯದನೇಕಶಃ ।
ತತ್ತು ಸನ್ನಿಧಿಮಾಹಾತ್ಮ್ಯಂ ವಿಷ್ಣೋರಂಶಸ್ಯ ಚಕ್ರಿಣಃ ॥ ೧೩ ॥

೯-೧೩. ಮೈತ್ರೇಯನೇ ! ದುಷ್ಟನಾದ ಜರಾಸಂಧನು ಸೋತರೂ ಜೀವ ಸಹಿತನಾಗಿ ಹೊರಟು ಹೊದುದರಿಂದ ಕೃಷ್ಣನು ಅವನು ಸೋತನೆಂದು ತಿಳಿಯಲಿಲ್ಲ. ಆ ಜರಾಸಂಧನು ಪುನಃ ಸೈನ್ಯದೊಡನೆ ಬಂದನು. ಕೃಷ್ಣ ಬಲರಾಮರು ಅವನನ್ನು ಸೋಲಿಸಿದುದರಿಂದ ಮತ್ತೆ ಓಡಿಹೋದನು. ಹೀಗೆಯೇ ಮಗಧ ರಾಜನಾದ ಜರಾಸಂಧನು ಕೃಷ್ಣನೇ ಮೊದಲಾದ ಯಾದವರೊಡನೆ ಹದಿನೆಂಟುಬಾರಿ ಯುದ್ಧ ಮಾಡಿದನು. ಎಲ್ಲ ಯುದ್ಧಗಳಲ್ಲಿಯೂ ಅವನು ಯಾದವರಿಂದ ಸೋತು ಸೇನೆಯ ನ್ನೆಲ್ಲ ಕಳೆದುಕೊಂಡು ಸ್ವಲ್ಪ ಸೈನ್ಯದೊಡನೆ ಓಡಿ ಹೋಗುತ್ತಿದ್ದನು. ಒಂದಾವೃತ್ತಿ ಯಾದರೂ ಯಾದವರ ಸೈನ್ಯವನ್ನು ಅವನು ಜಯಿಸಲಿಲ್ಲ. ಇದು ವಿಷ್ಣುವಿನ ಅಂಶ ವಾದ ಚಕ್ರಾಯುಧವನ್ನು ಧರಿಸಿದ ಕೃಷ್ಣನ ಸನ್ನಿಧಿಯ ಮಹಿಮೆಯು.

ಮನುಷ್ಯಧರ್ಮಶೀಲಸ್ಯ ಲೀಲಾ ಸಾ ಜಗತೀಪತೇಃ ।
ಅಸ್ತ್ರಾಣ್ಯನೇಕರೂಪಾಣಿ ಯದರಾತಿಷು ಮುಂಚತಿ ॥ ೧೪ ॥

ಮನಸ್ಯೈವ ಜಗತ್ಸೃಷ್ಟಿಂ ಸಂಹಾರಂ ಚ ಕರೋತಿ ಯಃ ।
ತಸ್ಯಾರಿಪಕ್ಷಕ್ಷಪಣೇ ಕಿಯಾನುದ್ಯಮವಿಸ್ತರಃ ॥ ೧೫ ॥

ತಥಾಪಿ ಯೋ ಮನುಷ್ಯಾಣಾಂ ಧರ್ಮಸ್ತಮನುವರ್ತತೇ ।
ಕುರ್ವನ್ ಬಲವತಾ ಸಂಧಿಂ ಹೀನೈರ್ಯುದ್ಧಂ ಕರೋತ್ಯಸೌ ॥ ೧೬ ॥

ಸಾಮಚೋಪಪ್ರದಾನಂ ಚ ತಥಾ ಭೇದಂ ಚ ದರ್ಶಯನ್ ।
ಕರೋತಿ ದಂಡಪಾತಂ ಚ ಕ್ವಚಿದೇವ ಪಲಾಯನಂ ॥ ೧೭ ॥

೧೪-೧೬. ಮನುಷ್ಯ ಧರ್ಮವನ್ನಾಚರಿಸುತ್ತಿರುವ ಜಗತ್ಪತಿಯಾದ ಕೃಷ್ಣನು ಶತ್ರುಗಳ ಮೇಲೆ ಅನೇಕ ಬಗೆಯ ಅಸ್ತ್ರಗಳನ್ನು ಪ್ರಯೋಗಿಸುವುದು ಒಂದು ಲೀಲೆಯಾಗಿದ್ದಿತು. ಮನಸ್ಸಿನಿಂದಲೇ ಸಕಲ ಜಗತ್ತನ್ನೂ ಸೃಷ್ಟಿಸಿ ಸಂಹಾರವನ್ನು ಮಾಡುವ ಪರಮಾತ್ಮನು ಶತ್ರುಪಕ್ಷವನ್ನು ನಾಶಮಾಡುವುದಕ್ಕೆ ದೊಡ್ಡ ಪ್ರಯತ್ನವನ್ನು ಮಾಡಬೇಕೇ ಆದರೂ ಅವನು ಮನುಷ್ಯ ಧರ್ಮವನ್ನು ಆಶ್ರಯಿಸಿ ಬಲಿಷ್ಠರೊಡನೆ ಸಂಧಿಯನ್ನೂ ಬಲಹೀನರೊಡನೆ ಯುದ್ಧವನ್ನೂ ಮಾಡುವನು.

೧೭-೧೮. ಅವನು ಮನುಷ್ಯ ಧರ್ಮಾನುಸಾರವಾಗಿ ಶತ್ರುಗಳಲ್ಲಿ ಸಾಮ ದಾನ ಭೇದಗಳೆಂಬ ಉಪಾಯಗಳನ್ನೇ ಆಶ್ರಯಿಸಿ ಕೆಲವು ಸಂದರ್ಭಗಳಲ್ಲಿ ಮಾತ್ರ

ನುಷ್ಯದೇಹಿನಾಂ ಚೇಷ್ಟಾನುವರ್ತತೇ ॥ ಇಚ್ಛಾ
ಲೀಲಾ ಜಗತ್ಪತೇಸ್ತಸ್ಯ ಛಂದತಃ ಪರಿವರ್ತತೇ ॥ ೫೦ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ದ್ವಾವಿಂಶೋಽಧ್ಯಾಯಃ

ದಂಡೋಪಾಯವನ್ನು ಪ್ರಯೋಗಿಸುವನು. ಕೆಲವು ಸಂದರ್ಭಗಳಲ್ಲಿ ತಾನೇ ಓಡಿ ಹೋಗುವನು. ಇದು ಜಗದೀಶ್ವರನಾದ ಅವನ ಇಚ್ಛೆಯಿಂದುಂಟಾದ ಲೀಲೆಯೆಂದು ತಿಳಿಯಬೇಕು.

ಎಂಬಲ್ಲಿಗೆ ಶ್ರೀ ವಿಷ್ಣು ಪುರಾಣದ ಪಂಚಮಾಂಶದಲ್ಲಿ

ಇಪ್ಪತ್ತೆರಡನೆಯ ಅಧ್ಯಾಯವು ಮುಗಿದುದು

ಶ್ರೀಃ

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ತಯೋವಿಂಶೋಽಧ್ಯಾಯಃ

॥ ಶ್ರೀ ಪರಾಶರಃ ॥

ಗಾರ್ಗ್ಯಂ ಗೋಷ್ಟ್ರಾಂ ದ್ವಿಜಂ ಸ್ಯಾಲಪ್ಪಂಡ ಇತ್ಯುಕ್ತವಾನ್ ದ್ವಿಜ ।
ಯದೂನಾಂ ಸನ್ನಿಧೌ ಸರ್ವೇ ಜಹಾಸುರ್ಯಾದವಾಸ್ತದಾ ॥ ೧ ॥

ತತಃ ಕೋಪಪರೀತಾತ್ಮಾ ದಕ್ಷಿಣಾಪಥಮೇತ್ಯ ಸಃ ।
ಸುತಮಿಚ್ಛನ್ ತಪಸ್ತೇಪೇ ಯದುಚಕ್ರಭಯಾವಹಂ ॥ ೨ ॥

ಆರಾಧಯನ್ಮಹಾದೇವಂ ಲೋಹಚೂರ್ಣಮಭಕ್ಷಯತ್ ।
ದದೌ ವರಂ ಚ ತುಷ್ಟೋಽಸ್ಮೈ ವರ್ಷೇ ತು ದ್ವಾದಶೇಽಹರಃ ॥ ೩ ॥

ಇಪ್ಪತ್ತಮೂರನೆಯ ಅಧ್ಯಾಯವು

೧-೩. ಯಾದವರ ಪುರೋಹಿತನಾದ ಗಾರ್ಗ್ಯನಿಗೆ ಮಕ್ಕಳಿಲ್ಲದುದರಿಂದ ಅವನ ಹೆಂಡತಿಯ ಸಹೋದರನು ಯಾದವರ ಸಭೆಯಲ್ಲಿ ಅವನನ್ನು ನಪುಂಸಕನೆಂದು ಹಾಸ್ಯ ಮಾಡಿದನು. ಆಗ ಯಾದವರೆಲ್ಲರೂ ನಕ್ಕರು. ಇದರಿಂದ ಗಾರ್ಗ್ಯನು ಕೋಪಗೊಂಡು ದಕ್ಷಿಣದೇಶಕ್ಕೆ ಹೋಗಿ ಯಾದವರಿಗೆ ಭಯವನ್ನುಂಟುಮಾಡುವ ಮಗನನ್ನು ಪಡೆಯಬೇಕೆಂದು ತಪಸ್ಸುಮಾಡುವುದಕ್ಕೆ ಪ್ರಾರಂಭಿಸಿದನು. ಕಬ್ಬಿಣದ ಹುಡಿಯನ್ನು ಆಹಾರಮಾಡಿಕೊಂಡು ಮಹಾದೇವನನ್ನು ಪೂಜಿಸುತ್ತ ಹನ್ನೆರಡು ವರ್ಷ ತಪಸ್ಸುಮಾಡಿದನು. ಅವನಿಗೆ ಪಶುಪತೀಶ್ವರನು ಪ್ರತ್ಯಕ್ಷನಾಗಿ ಇಷ್ಟವಾದ ವರವನ್ನು ಕೊಟ್ಟನು.

ಸಂತೋಷಯಾಮಾಸ ಚ ತಂ ಯವನೇಶೋ ಹ್ಯನಾತ್ಮಜಃ ।
ತದ್ಯೋಷಿತ್ಸಂಗಮಾಚ್ಚಾಸ್ಯ ಪುತ್ರೋಽಭೂದಚಳಸನ್ನಿಭಃ ॥ ೪ ॥

ತಂ ಕಾಲಯವನಂ ನಾಮ ರಾಜ್ಯೇ ಸ್ವೇ ಯವನೇಶ್ವರಃ ।
ಅಭಿಷಿಚ್ಯ ವನಂ ಯಾತೋ ವಜ್ರಾಗ್ರಕಠಿನೋರಸಂ ॥ ೫ ॥

ಸ ತು ವೀರ್ಯಮದೋನ್ಮತ್ತಃ ಪೃಥಿವ್ಯಾಂ ಬಲಿನೋ ನೃಪಾನ್ ।
ಅಪೃಚ್ಛ ನ್ನಾರದಸ್ತಸ್ಮೈ ಕಥಯಾಮಾಸ ಯಾದವಾನ್ ॥ ೬ ॥

ಮ್ಲೇಚ್ಛಕೋಟಿಸಹಸ್ರಾಣಾಂ ಸಹಸ್ರೈಸ್ತೋಭಿ ಸಂವೃತಃ ।
ಗಜಾಶ್ವರಥಸಂಪನ್ನೈಶ್ಚಕಾರ ಪರಮೋದ್ಯಮಂ ॥ ೭ ॥

೪–೫. ವರವನ್ನು ಪಡೆದು ಬಂದ ಅವನನ್ನು ಮಕ್ಕಳಿಲ್ಲದ ಯವನ ದೇಶಾಧಿಪತಿಯು ಸಂತೋಷಪಡಿಸಿ ತನ್ನ ಪತ್ನಿಯಲ್ಲಿ ಪುತ್ರೋತ್ಪತ್ತಿಯನ್ನುಂಟು ಮಾಡಬೇಕೆಂದು ಪ್ರಾರ್ಥಿಸಿದರು. ಗಾರ್ಗ್ಯನು ಅವನ ಪತ್ನಿಯಲ್ಲಿ ಸಂಯೋಗ ಮಾಡಿದುದರಿಂದ ಅವಳಲ್ಲಿ ದುಂಬಿಗೆ ಸಮಾನವಾದ ದೇಹಕಾಂತಿಯುಳ್ಳ ಮಗನು ಹುಟ್ಟಿದನು. ಯವನಾಧಿಪತಿಯು ಅವನಿಗೆ ಕಾಲಯವನನೆಂದು ಹೆಸರಿಟ್ಟು ಅವನು ದೊಡ್ಡವನಾದ ಮೇಲೆ ವಜ್ರಾಯುಧದ ತುದಿಯಂತೆ ಕಠಿನವಾದ ಎದೆಯುಳ್ಳ ಅವನಿಗೆ ಪಟ್ಟಾಭಿಷೇಕವನ್ನು ಮಾಡಿ ತಾನು ತಪಸ್ಸಿಗಾಗಿ ಕಾಡಿಗೆ ಹೊರಟು ಹೋದನು.

೬–೮. ಆ ಕಾಲಯವನನು ಬಲಗರ್ವದಿಂದ ಮದಿಸಿದವನಾಗಿ ಭೂಮಿಯಲ್ಲಿ ಬಲಶಾಲಿಗಳಾದ ರಾಜರಾರೆಂದು ನಾರದನನ್ನು ಕೇಳಿದನು. ನಾರದನು ಯಾದವರೇ ಬಲಿಷ್ಠರೆಂದು ಹೇಳಿದನು. ಆಗ ಅವನು ಸಾವಿರ ಕೋಟಿ ಮ್ಲೇಚ್ಛರಿಂದಲೂ ಆನೆ, ಕುದುರೆ, ರಥಗಳಿಂದಲೂ ಕೂಡಿ ಮಥುರಾಪಟ್ಟಣಕ್ಕೆ ಬಂದು ಪಟ್ಟಣವನ್ನು

ಪ್ರಯಯೌ ಸವ್ಯವಚ್ಛಿನ್ನಂ ಭಿನ್ನಯಾನೋ ದಿನೇ ದಿನೇ ।
ಯಾದವಾನ್ಪ್ರತಿ ಸಾವಜ್ಞೋ ಮೈತ್ರೇಯ ಮಧುರಾಂ ಪುರೀಂ ॥ ೪ ॥

ಕೃಷ್ಣೋಽಪಿ ಚಿಂತಯಾಮಾಸ ಕ್ಷಪಿತಂ ಯಾದವಂ ಬಲಂ ।
ಯವನೇನ ರಣೇ ಗಮ್ಯಂ ಮಾಗಧಸ್ಯ ಭವಿಷ್ಯತಿ ॥ ೯ ॥

ಮಾಗಧಸ್ಯ ಬಲಂ ಕ್ಷೀಣಂ ಸ ಕಾಲಯವನೋ ಬಲೀ ।
ಹಂಸ್ಯೇತದೇವಮಾಯಾಂತಂ ಯದೂನಾಂ ವ್ಯಸನಂ ದ್ವಿಧಾ ॥ ೧೦ ॥

ತಸ್ಮಾದ್ದುರ್ಗಂ ಕರಿಷ್ಯಾಮಿ ಯದೂನಾಮರಿದುರ್ಜಯಂ ।
ಸ್ತ್ರಿಯೋಽಪಿ ಯತ್ರ ಯುಧ್ಯೇಯುಃ ಕಂ ಪುನರ್ವೃಷ್ಣಿಪುಂಗವಾಃ ॥ ೧೧ ॥

ಮಯಿ ಮತ್ತೇ ಪ್ರಮತ್ತೇ ವಾ ಸುಪ್ತೇ ಪ್ರವಸಿತೇಽಪಿ ವಾ ।
ಯಾದವಾಭಿಭವಂ ದುಷ್ಟಾ ಮಾ ಕುರ್ವಂತ್ವರಯೋಧಿಕಾಃ ॥ ೧೨ ॥

ಮುತ್ತಿ ತನ್ನ ವಾಹನಗಳು ಮುರ್ಬಲವಾದರೆ ಅದನ್ನಲ್ಲಿಯೇ ಬಿಟ್ಟು, ಮೊದಲೇ ಅಲ್ಲಲಿ ವಾಹನಗಳನ್ನು ಸಿದ್ಧಮಾಡಿ ಪ್ರತಿದಿನವೂ ಮಧುರಾಪಟ್ಟಣಕ್ಕೆ ಬಂದು ಯುದ್ಧಮಾಡುತ್ತಿದ್ದನು

೯-೧೨. ಕೃಷ್ಣನು ಯಾದವರ ಸೇನೆಯು ಕ್ಷೀಣವಾದುದನ್ನು ಕಂಡು ತನ್ನ ಮನಸ್ಸಿನಲ್ಲಿ " ಕಾಲಯವನನಿಂದ ಯಾದವರ ಸೇನೆಯು ಕ್ಷೀಣವಾದುದನ್ನು ಜರಾಸಂಧನು ತಿಳಿದರೆ ಅವನೂ ಯುದ್ಧಕ್ಕೆ ಬರುವನ. ಜರಾಸಂಧನ ಸೇನೆಯು ಕ್ಷೀಣವಾಗಿದೆ. ಯವನನ ಸೇನೆಯು ಬಲವಾದುದು. ಇಬ್ಬರೂ ಸೇರಿದರೆ ಅವರನ್ನು ಜಯಿಸುವುದಕ್ಕೆ ಕಷ್ಟವಾಗುವುದು. ಈಗ ಎರಡು ಬಗೆಯಲ್ಲಿ ಯಾದವರಿಗೆ ಕಷ್ಟವು ಬಂದಿರುವುದು. ಆದುದರಿಂದ ಶತ್ರುಗಳಿಗೆ ಜಯಿಸಲಸಾಧ್ಯವಾದ ಒಂದು ದುರ್ಗವನ್ನು ಯಾದವರಿಗೆ ಮಾಡಿಕೊಡುವೆನು. " ದುರ್ಗದಲ್ಲಿದ್ದರೆ ಸ್ತ್ರೀಯರೂ, ಯುದ್ಧಮಾಡುವರು. ಯಾದವರ ವಿಷಯವನ್ನು ಹೇಳಬೇಕಾದುದೇನು. ನಾನು ಮತ್ತನಾಗಿದ್ದರೂ, ನಿದ್ರೆಮಾಡುತ್ತಿದ್ದರೂ, ದೇಶಾಂತರಕ್ಕೆ ಹೋಗಿದ್ದರೂ, ದುಷ್ಟರಾದ ಶತ್ರುಗಳು ಯಾದವರಿಗೆ ಸೋಲನ್ನುಂಟುಮಾಡಲಾರರು.

ಇತಿ ಸಂಚಿಂತ್ಯ ಗೋವಿಂದೋ ಯೋಜನಾನಾಂ ಮಹೋದಧೇಃ ।
ಯಯೂಚೇ ದ್ವಾದಶಪುರೀಂ ದ್ವಾರಕಾಂ ತತ್ರ ನಿರ್ಮಮೇ ॥ ೧೩ ॥

ಮಹೋದ್ಯಾನಾಂ ಮಹಾವಪ್ರಾಂ ತಟಾಕೈರತಶೋಭಿತಾಂ ।
ಪ್ರಾಸಾದಗೃಹಸಂಬಾಧಾಮಿಂದ್ರಸ್ಯೇವಾಮರಾವತೀಂ ॥ ೧೪ ॥
ಮಧುರಾವಾಸಿನಂ ಲೋಕಂ ತತ್ರಾನೀಯ ಜನಾರ್ದನಃ ।

ಆಸನ್ನೇ ಕಾಲಯವನೇ ಮಧುರಾಂ ಚ ಸ್ವಯಂ ಯಯೌ ॥ ೧೫ ॥

ಬಹಿರಾವಾಸಿತೇ ಸೈನ್ಯೇ ಮಧುರಾಯಾ ನಿರಾಯುಧಃ ।
ನಿರ್ಜಗಾಮ ಚ ಗೋವಿಂದೋ ದದರ್ಶ ಯವನಶ್ಚ ತಂ ॥ ೧೬ ॥

೧೩-೧೫. ಹೀಗೆಂದು ಆಲೋಚಿಸಿ ಗೋವಿಂದನು ಸಮುದ್ರರಾಜನನ್ನು ಕೇಳಿ ಹನ್ನೆರಡು ಯೋಜನ ವಿಸ್ತಾರವಾದ ಭೂಮಿಯನ್ನು ಪಡೆದು ಅಲ್ಲಿ ದ್ವಾರಕಾಪಟ್ಟಣವನ್ನು ನಿರ್ಮಾಣಮಾಡಿದನು. ಆ ಪಟ್ಟಣದಲ್ಲಿ ದೊಡ್ಡ ದೊಡ್ಡ ಉದ್ಯಾನಗಳೂ ನೂರಾರು ಕೆರೆಗಳೂ, ಕ್ರೀಡಾಪರ್ವತಗಳೂ, ಉಪ್ಪರಿಗೆ ಮನೆಗಳೂ ತುಂಬಿದ್ದುವು. ಆ ಪಟ್ಟಣವು ದೇವೇಂದ್ರನ ಅಮರಾವತಿಯಂತೆ ಇದ್ದಿತು. ಕೃಷ್ಣನು ಮಧುರೆಯಲ್ಲಿದ್ದವರನ್ನೆಲ್ಲ ಅಲ್ಲಿಗೆ ಕರೆದುಕೊಂಡು ಬಂದು ಬಿಟ್ಟು ಕಾಲಯವನನು ಮಧುರೆಯ ಸಮೀಪಕ್ಕೆ ಬಂದಾಗ ತಾನೊಬ್ಬನೇ ಮಧುರೆಗೆ ಹೋದನು.

೧೬-೧೭. ಕಾಲಯವನನ ಸೈನ್ಯವು ಮಧುರೆಯ ಹೊರಗೆ ಮುತ್ತಿಗೆಯನ್ನು ಹಾಕಿರಲು ಕೃಷ್ಣನು ಆಯುಧವನ್ನು ಧರಿಸದೆ ಮಧುರೆಯಿಂದ ಹೊರಟನು. ಯವನನು ಅವನನ್ನು ನೋಡಿದನು. ತೋಳುಗಳೇ ಆಯುಧವಾಗಿ ಉಳ್ಳ ಅವನನ್ನು ನಾರದರು ಹೇಳಿದ ಗುರುತುಗಳಿಂದ ಯವನನು ತಿಳಿದು ಮಹಾಯೋಗಿಗಳ

ಸ ಜ್ಞಾತ್ವಾ ವಾಸುದೇವಂ ತಂ ಬಾಹುಪ್ರಹರಣಂ ನೃಪಃ ।
ಅನುಯಾತೋ ಮಹಾಯೋಗಿಚೇತೋಭಿಃ ಪ್ರಾಪ್ಯತೇ ನ ಯಃ ॥ ೧೬ ॥

ತೇನಾನುಯಾತಃ ಕೃಷ್ಣೋಽಪಿ ಪ್ರವಿವೇಶ ಮಹಾಗುಹಾಂ ।
ಯತ್ರ ಶೇತೇ ಮಹಾವೀರ್ಯೋ ಮುಚುಕುಂದೋ ನರೇಶ್ವರಃ ॥ ೧೭ ॥

ಸೋಽಪಿ ಪ್ರವಿಷ್ಟೋ ಯವನೋ ದೃಷ್ಟ್ವಾ ಶಯ್ಯಾಗತಂ ನೃಪಂ ।
ಪಾದೇನ ತಾಡಯಾಮಾಸ ಮತ್ವಾ ಕೃಷ್ಣಂ ಸ ದುರ್ಮತಿಃ ॥ ೧೮ ॥

ಉತ್ಥಾಯ ಮುಚುಕುಂದೋಽಪಿ ದದರ್ಶ ಯವನಂ ನೃಪಃ ॥ ೨೦ ॥

ದೃಷ್ಟಮಾತ್ರಶ್ಚ ತೇನಾಸೌ ಜಜ್ವಾಲಯವನೋಽಗ್ನಿನಾ ।
ತತ್ಕ್ರೋಧಜೇನ ಮೈತ್ರೇಯ ಭಸ್ಮೀಭೂತಶ್ಚ ತತ್ಕ್ಷಣಾತ್ ॥ ೨೧ ॥

ಸ ಹಿ ದೇವಾಸುರೇ ಯುದ್ಧೇ ಗತೋ ಹತ್ವಾ ಮಹಾಸುರಾನ್ ।
ನಿದ್ರಾರ್ತಶ್ಚಿರಮಹಾಕಾಲಂ ನಿದ್ರಾಂ ವವ್ರೇ ವರಂ ಸುರಾನ್ ॥ ೨೨ ॥

ಮನಸ್ಸಿಗೂ ಸಿಲುಕದೆ ಅವನನ್ನು ಅನುಸರಿಸಿ ಹೋದನು. ಕೃಷ್ಣನು ಮುಂದೆ ಮುಂದೆ ಹೋಗುತ್ತ ಶೂರನಾದ ಮುಚುಕುಂದನೆಂಬ ರಾಜನು ಮಲಗಿದ್ದ ದೊಡ್ಡ ಗುಹೆಯನ್ನು ಹೊಕ್ಕನು. ಯವನನೂ ಅವನ ಹಿಂದೆ ಹೋಗಿ ಮಲಗಿದ್ದ ರಾಜನನ್ನು ಕಂಡು ಕಾಲಿನಿಂದ ಒದೆದನು. ಮುಚುಕುಂದನು ಎದ್ದು ಯವನನನ್ನು ನೋಡಿದನು. ಅವನು ನೋಡಿದ ಮಾತ್ರದಿಂದಲೇ ಯವನನು ಅವನ ಕೋಪಾಗ್ನಿಯಿಂದ ಆ ಕ್ಷಣದಲ್ಲಿಯೇ ಸುಟ್ಟು ಬೂದಿಯಾದನು.

೨೨-೨೩. ಆ ಮುಚುಕುಂದರಾಜನು ದೇವಾಸುರರ ಯುದ್ಧದಲ್ಲಿ ದೇವತೆಗಳಿಗೆ ಸಹಾಯಾರ್ಥವಾಗಿ ಹೋಗಿ ಅಸುರರನ್ನು ಕೊಂದು ಅಯಾಸದಿಂದ ಬಹಳ

ಪ್ರೋಕ್ತಶ್ಚ ದೇವೈಸ್ಸಂಸುಪ್ತಂ ಯಸ್ತ್ವಾಮುತ್ಥಾಪಯಿಷ್ಯತಿ ।
ದೇಹಜೇನಾಗ್ನಿನಾ ಸದ್ಯಸ್ತು ಭಸ್ಮೀಭವಿಷ್ಯತಿ ॥ ೨೩ ॥

ಏವಂ ದಗ್ಧ್ವಾ ಸ ತಂ ಪಾಪಂ ದೃಷ್ಟ್ವಾ ಚ ಮಧುಸೂದನಂ ।

ಕಸ್ತ್ವಮಿತ್ಯಾಹ ಸೋಽಪ್ಯಾಹ ಜಾತೋಽಹಂ ಶಶಿನಃ ಕುಲೇ ॥
ವಸುದೇವಸ್ಯ ತನಯೋ ಯದೋರ್ವಂಶಮುದ್ಭವಃ ॥ ೨೪ ॥

ಮುಚುಕುಂದೋಽಪಿ ತತ್ರಾಸೌ ವೃದ್ಧಗಾರ್ಗ್ಯವಚೋಽಸ್ಮರತ್ ॥ ೨೫ ॥

ಸಂಸ್ಪೃಶ್ಯ ಪ್ರಣಿಪತ್ಯೇನಂ ಸರ್ವಂ ಸರ್ವೇಶ್ವರಂ ಹರಿಂ ।
ಪ್ರಾಹ ಜ್ಞಾತೋ ಭವಾನ್ವಿಷ್ಣೋರಂಶಸ್ತ್ವಂ ಪರಮೇಶ್ವರ ॥ ೨೬ ॥

ಪುರಾ ಗಾರ್ಗ್ಯೇಣ ಕಥಿತಂ ಅಷ್ಟಾವಿಂಶತಿಮೇ ಯುಗೇ ।
ದ್ವಾಪರಾಂತೇ ಹರೇರ್ಜನ್ಮ ಯದುವಂಶೇ ಭವಿಷ್ಯತಿ ॥ ೨೭ ॥

ಕಾಲ ನಿದ್ರೆಮಾಡಬೇಕೆಂದು ದೇವತೆಗಳಿಂದ ನಿದ್ರೆಯನ್ನೇ ವರವಾಗಿ ಕೇಳಿಕೊಂಡನು. ಆಗ ದೇವತೆಗಳು ನಿದ್ರೆಮಾಡುತ್ತಿರುವ ನಿನ್ನನ್ನು ಯಾರು ಎಚ್ಚರಗೊಳಿಸುವರೋ ಆವರು ಆ ಕ್ಷಣದಲ್ಲಿಯೇ ನಿನ್ನ ದೇಹದಿಂದ ಹುಟ್ಟಿದ ಅಗ್ನಿಯಿಂದ ಸುಟ್ಟು ಬೂದಿಯಾಗುವರು, ಎಂದು ವರವನ್ನು ಕೊಟ್ಟಿದ್ದರು.

೨೪-೩೦. ಮುಚುಕುಂದನು ಈ ವರದ ಬಲದಿಂದ ಆ ಪಾಪಿಯಾದ ಕಾಲಯವನನನ್ನು ಸುಟ್ಟು ಕೃಷ್ಣನನ್ನು ನೋಡಿ ನೀನು ಯಾರೆಂದು ಪ್ರಶ್ನೆಮಾಡಿದನು. ಆಗ ಕೃಷ್ಣನು " ನಾನು ಚಂದ್ರವಂಶದಲ್ಲಿ ಹುಟ್ಟಿದವನು ಯದುವಂಶದಲ್ಲಿ ಹುಟ್ಟಿದ ವಸುದೇವನ ಮಗನು. " ಎಂದನು ಮುಚುಕುಂದನು ವೃದ್ಧನಾದ ಗಾರ್ಗ್ಯನ ಮಾತನ್ನು ಜ್ಞಾಪಿಸಿಕೊಂಡು ಸರ್ವೇಶ್ವರನಾದ ವಿಷ್ಣುವಿಗೆ ನಮಸ್ಕಾರ ಮಾಡಿ " ಪರಮೇಶ್ವರನೇ ! ನೀನು ವಿಷ್ಣುವಿನ ಅಂಶವೆಂಬುದನ್ನು ನಾನು ತಿಳಿದಿರುವೆನು. ಇಪ್ಪತ್ತೆಂಟನೆಯ ದ್ವಾಪರಯುಗದ ಕೊನೆಯಲ್ಲಿ ಹರಿಯು ಯದುವಂಶದಲ್ಲಿ ಅವತಾರ

ಸ ತ್ವಂ ಪ್ರಾಪ್ತೋ ನ ಸಂದೇಹೋ ಮರ್ತ್ಯಾನಾಮುಪಕಾರಕೃತ್ ॥ ೨೬ ॥

ತಥಾ ಹಿ ಸುಮಹತ್ತೇಜೋ ನಾಲಂ ಸೋಢುಮಹಂ ತವ ।
ತಥಾ ಹಿ ಸ ಸಜಲಾಂಭೋದನಾದಧೀರತರಂ ತವ ॥
ವಾಕ್ಯಂ ನಮತಿಚೈವೋರ್ವೀ ಯುಷ್ಮತ್ಪಾದಪ್ರಪೀಡಿತಾ ॥ ೨೯ ॥

ದೇವಾಸುರಮಹಾಯುದ್ಧೇ ದೈತ್ಯಸೈನ್ಯಮಹಾಭಟಾಃ ।
ನ ಸೇಹುರ್ಯಮ ತೇಜಸ್ತೇ ತ್ವತ್ತೇಜೋ ನ ಸಹಾಮ್ಯಹಂ ॥ ೩೦ ॥

ಸಂಸಾರಪತಿತಸ್ಯೈಕೋ ಜಂತೋಸ್ತ್ವಂ ಶರಣಂ ಪರಂ ।
ಪ್ರಸೀದ ತ್ವಂ ಪ್ರಪನ್ನಾರ್ತಿಹರ ನಾಶಯ ಮೇಽಶುಭಂ ॥ ೩೧ ॥

ತ್ವಂ ಪಂಚಯೋನಿಧಯಶ್ಚೈಲಸರಿತಸ್ತ್ವಂ ವನಾನಿ ಚ ।
ಮೇದಿನೀ ಗಗನಂ ವಾಯುರಾಪೋಗ್ನಿಸ್ತ್ವಂ ತಥಾ ಮನಃ ॥ ೩೨ ॥

ಮಾಡುವನೆಂದು ಹಿಂದೆ ಗಾರ್ಗ್ಯನು ನನಗೆ ಹೇಳಿದ್ದನು. ಆ ದೇವನಾದ ನೀನು ಮನುಜರಿಗೆ ಉಪಕಾರ ಮಾಡಲು ಇಲ್ಲಿಗೆ ಬಂದಿರುವೆ. ಈ ವಿಷಯದಲ್ಲಿ ಸಂದೇಹ ವಿಲ್ಲ ನಿನ್ನ ಮಹಾ ತೇಜಸ್ಸನ್ನು ನಾನು ಸಹಿಸಲಾರೆನು ನಿನ್ನ ಮಾತು ಮೇಘ ಧ್ವನಿಯಂತೆ ಗಂಭೀರವಾಗಿರುವುದು. ನಿನ್ನ ಪಾದದಿಂದ ತುಳಿದರೆ ಭೂಮಿಯು ಬಗ್ಗಿಹೋಗುವುದು. ದೇವಾಸುರರ ಮಹಾಯುದ್ಧದಲ್ಲಿ ದೈತ್ಯಸೈನ್ಯದಲ್ಲಿದ್ದ ಮಹಾ ಶೂರರು ನನ್ನ ತೇಜಸ್ಸನ್ನು ಸಹಿಸಲಾರದೆ ಹೋದರು. ಅಂತಹ ನಾನು ನಿನ್ನ ತೇಜಸ್ಸನ್ನು ಸಹಿಸಲಾರೆನು.

೩೧-೩೪. ಶರಣು ಹೊಂದಿದವರ ದುಃಖವನ್ನು ನಾಶಮಾಡುವ ಸ್ವಾಮಿಯೇ! ಸಂಸಾರ ಸಮುದ್ರದಲ್ಲಿ ಬಿದ್ದ ಪ್ರಾಣಿಗೆ ನೀನೊಬ್ಬನೇ ರಕ್ಷಕನು. ಆದುದರಿಂದ ನನ್ನ ಅವಯವಗಳವನ್ನು ನಾಶಮಾಡು. ಸಮುದ್ರಗಳು, ಪರ್ವತಗಳು, ನದಿಗಳು, ವನಗಳು, ಭೂಮಿಯೇ ಮೊದಲಾದ ಪಂಚಭೂತಗಳು, ಮನಸ್ಸು, ಬುದ್ಧಿ, ಪ್ರಕೃತಿ, ಜೀವ,

ಬುದ್ಧಿರವ್ಯಾಕೃತಃ ಪ್ರಾಣಾಃ ಪ್ರಾಣೇಶತ್ವಂ ತಥಾ ಪುಮಾನ್ ।
ಪುಂಸಃ ಪರತರಂ ಯಚ್ಚ ವ್ಯಾಪ್ಯ ಜನ್ಮವಿಕಾರವತ್ ॥ ೩೩ ॥

ಶಬ್ದಾದಿಹೀನಮನುಚ್ಚಾರಮಮೇಯಂ ಕ್ಷಯವರ್ಜಿತಂ ।
ಆವೃದ್ಧಿನಾಶಂ ತದ್ಬ್ರಹ್ಮ ತ್ವಮಾದ್ಯಂತವಿವರ್ಜಿತಂ ॥ ೩೪ ॥

ತ್ವತ್ತೋಮರಾಸ್ಸಪಿತರೋ ಯಕ್ಷಗಂಧರ್ವಕಿನ್ನರಾಃ ।
ಸಿದ್ಧಾಶ್ಚಾಪ್ಸರಸಸ್ತ್ವತ್ತೋ ಮನುಷ್ಯಾಃ ಪಶವಃ ಖಗಾಃ ॥ ೩೫ ॥

ಸರೀಸೃಪಾ ಮೃಗಾಸ್ಸರ್ವೇ ತ್ವತ್ತಸ್ಸರ್ವೇ ಮಹೀರುಹಾಃ ।
ಯಚ್ಚ ಭೂತಂ ಭವಿಷ್ಯಂ ಚ ಕಂಚಿದತ್ರ ಚರಾಚರಂ ॥ ೩೬ ॥

ಮೂರ್ತಾಮೂರ್ತಂ ತಥಾ ಚಾಪಿ ಸ್ಥೂಲಂ ಸೂಕ್ಷ್ಮತರಂ ತಥಾ ।
ತತ್ಸರ್ವಂ ತ್ವಂ ಜಗತ್ಕರ್ತಾ ನಾಸ್ತಿ ಕಂಚಿತ್ತ್ವಯಾ ವಿನಾ ॥ ೩೭ ॥

ಈಶ್ವರ, ಪುರುಷ ಇವುಗಳೆಲ್ಲವೂ ನೀನೇ. ಪುರುಷನಿಗಿಂತ ಶ್ರೇಷ್ಠವಾದ ಸರ್ವವ್ಯಾಪಿಯಾದ ತತ್ವವೂ ನೀನೆ. ನೀನು ಶಬ್ದಾದಿಗುಣಗಳಿಲ್ಲದವನು, ಮುಪ್ಪಿಲ್ಲದವನು ಅಳತೆಗೆ ಸಿಕ್ಕದವನು, ನಾಶವಿಲ್ಲದವನು. ವಿಕಾರವಿಲ್ಲದವನು. ಆದ್ಯಂತಗಳಿಲ್ಲದ ಪರಬ್ರಹ್ಮತ್ವವೇ ನೀನು.

೩೫–೩೭. ನಿನ್ನಿಂದಲೇ ದೇವತೆಗಳು, ಪಿತೃಗಳು, ಯಕ್ಷರು, ಗಂಧರ್ವರು, ಕಿನ್ನರರು, ಸಿದ್ಧರು, ಅಪ್ಸರಸರು, ಮನುಷ್ಯರು, ಪಶುಪಕ್ಷಿಗಳು, ಹಾವುಗಳು, ಸಮಸ್ತ ಮೃಗಗಳು, ಮರಗಳು, ಈ ಭೂಮಿಯಲ್ಲಿ ಇದುವರೆಗೆ ಹುಟ್ಟಿರುವ, ಮುಂದೆ ಹುಟ್ಟುವ ಸಮಸ್ತ ಚರಾಚರ ಪ್ರಾಣಿಗಳು, ರೂಪಸಹಿತವಾದುವು, ರೂಪವಿಲ್ಲದುವು, ಸ್ಥೂಲವಾದುವು, ಸೂಕ್ಷ್ಮವಾದುವು, ಎಲ್ಲವೂ ಉಂಟಾಗಿರುವುವು. ಇವುಗಳಿಂದ ಕೂಡಿದ ಜಗತ್ತನ್ನು ಸೃಷ್ಟಿಸಿದವನೇ ನೀನು. ನಿನ್ನನ್ನು ಬಿಟ್ಟು ಯಾವ ವಸ್ತುವೂ ಇಲ್ಲ. ಭಗವಂತನೇ ನಾನು ಈ ಸಂಸಾರವೆಂಬ ಚಕ್ರದಲ್ಲಿ ಸುತ್ತುತ್ತ ಯಾವಾಗಲೂ

ಮಯಾ ಸಂಸಾರಚಕ್ರೇಽಸ್ಮಿನ್ ಭ್ರಮತಾ ಭಗವಂತ್ಸದಾ ।
ತಾಪತ್ರಯಾಭಿಭೂತೇನ ನ ಪ್ರಾಪ್ತಾ ನಿರ್ವೃತಿಃ ಕ್ವಚಿತ್ ॥ ೩೮ ॥

ದುಃಖಾನ್ಯೇವ ಸುಖಾನೀತಿ ಮೃಗತೃಷ್ಣಾಜಲಾಶಯಾಃ ।
ಮಯಾ ನಾಥ ಗೃಹೀತಾನಿ ತಾನಿ ತಾಪಾಯ ಮೇಽಭವನ್ ॥ ೩೯ ॥

ರಾಜ್ಯಮುರ್ವೀ ಬಲಂ ಕೋಶೋ ಮಿತ್ರಪಕ್ಷಸ್ತಥಾತ್ಮಜಾಃ ।
ಭಾರ್ಯಾ ಭೃತ್ಯಜನೋ ಯೇ ಚ ಶಬ್ದಾದ್ಯಾಃ ವಿಷಯಾಃ ಪ್ರಭೋ ॥೪೦॥

ಸುಖಬುದ್ಧ್ಯಾ ಮಯಾ ಸರ್ವಂ ಗೃಹೀತಮಿದಮವ್ಯಯಂ ।
ಪರಿಣಾಮೇ ತದೇವೇಶ ತಾಪಾತ್ಮಕಮಭೂನ್ಮಮ ॥ ೪೧

ದೇವಲೋಕಗತಿಂ ಪ್ರಾಪ್ತೋ ನಾಥ ದೇವಗಣೋಽಪಿ ಹಿ ।
ಮತ್ತಸ್ತ್ರಾಹಾಯ್ಯಕಾಮೋಽಭೂಚ್ಛಾಶ್ವತೀ ಕುತ್ರ ನಿರ್ವೃತಿಃ ॥ ೪೨ ॥

ತಾಪತ್ರಯಗಳಿಂದ ಕೂಡಿ ಸ್ವಲ್ಪವಾದರೂ ಸುಖವನ್ನು ಪಡೆಯಲಿಲ್ಲ. ಮರು ಭೂಮಿಯ ಬಿಸಲಿನ ಜಳವಲ್ಲಿ ನೀರನ್ನ ಪೇಕ್ಷಿಸಿದಂತೆ ದುಃಖಗಳನ್ನೇ ಸುಖಗಳೆಂದು ತಿಳಿದುಕೊಂಡಿದ್ದೆನು. ಅವುಗಳೆಲ್ಲ ನನ್ನನ್ನು ಹೀನಸ್ಥಿತಿಗೆ ತಂದುವು.

೪೦-೪೩ ಸರ್ವೇಶ್ವರನೇ! ರಾಜ್ಯ, ಭೂಮಿ, ಸೇನೆ, ಭಂಡಾರ, ಮಿತ್ರರಾಜರು, ಮಕ್ಕಳು, ಹೆಂಡತಿ, ಸೇವಕರು, ಶಬ್ದಾದಿ ವಿಷಯಗಳು ಇವೆಲ್ಲವೂ ನನಗೆ ಸುಖವನ್ನುಂಟುಮಾಡುವುವೆಂದು ತಿಳಿದಿದ್ದೆನು. ಕೊನೆಯಲ್ಲಿ ಅವುಗಳೇ ನನಗೆ ದುಃಖಗಳನ್ನು ಕೊಡತಕ್ಕುವುಗಳಾದುವು. ಓ ಸ್ವಾಮಿಯೇ! ದೇವಲೋಕಗಳಲ್ಲಿ ವಾಸಮಾಡುವ ದೇವತೆಗಳೂ ನನ್ನ ಸಹಾಯವನ್ನ ಪೇಕ್ಷಿಸಿದರು. ಹೀಗಿರುವಲ್ಲಿ ಸ್ಥಿರವಾದ

ತ್ವಾಮನಾರಾಧ್ಯ ಜಗತಾಂ ಸರ್ವೇಷಾಂ ಪ್ರಭವಾಪ್ಯಯೇ
ಶಾಶ್ವತೀ ಪ್ರಾಪ್ಯತೇ ಕೇನ ಪರಮೇಶ್ವರ ನಿರ್ವೃತಿಃ ॥ ೪೩ ॥

ಶ್ವನ್ಯಾಯಾಮೂಢಮನಸೋ ಜನ್ಮಮೃತ್ಯುಜರಾದಿಕಾನ್ ।
ಅವಾಪ್ಯ ತಾಪಾನ್ ಪಶ್ಯಂತಿ ಪ್ರೇತರಾಜಮನಂತರಂ ॥ ೪೪ ॥

ತತೋ ನಿಜಕ್ರಿಯಾಸೂತಿನರಕೇಷ್ವತಿ ದಾರುಣಂ ।
ಪ್ರಾಪ್ನುವಂತಿ ನರಾಃ ದುಃಖಮುಸ್ವರೂಪವಿದಸ್ತವ ॥ ೪೫ ॥

ಅಹಮತ್ಯಂತವಿಷಯೀ ಮೋಹಿತಸ್ತವ ಮಾಯಯಾ ।
ಮಮತ್ವಗರ್ವಗರ್ತಾಂತರ್ಭ್ರಮಾಮಿ ಪರಮೇಶ್ವರ ॥ ೪೬ ॥

ಸುಖವೆಲ್ಲಿರುವುದು ? ಸಮಸ್ತ ಜಗತ್ತುಗಳ ಉತ್ಪತ್ತಿ ನಾಶಗಳಿಗೆ ಕಾರಣನಾದ ಪರಮೇಶ್ವರನೇ ನಿನ್ನನ್ನು ಪೂಜಿಸದೆ ಯಾವನು ಶಾಶ್ವತವಾದಸುಖವನ್ನು ಪಡೆವನು ? ನಿನ್ನ ಮಾಯೆಯಿಂದ ಮೋಹಿತವಾದ ಮನಸ್ಸುಳ್ಳ ಜನರು ಹುಟ್ಟು, ಮುಪ್ಪು, ಮರಣ ಮುಂತಾದುವುಗಳನ್ನು ಪಡೆದು ದುಃಖ ಸಂತಾಪಗಳನ್ನನುಭವಿಸುವರು. ಕೊನೆಯಲ್ಲಿ ಯಮಲೋಕಕ್ಕೂ ಹೋಗುವರು. ನಿನ್ನ ಸ್ವರೂಪವನ್ನು ತಿಳಿಯದೆ ಅವರು ಯಮನಿಂದ ತಮ್ಮ ಕರ್ಮಕ್ಕೆ ಫಲವಾದ ನರಕಗಳಲ್ಲಿ ಅತ್ಯಂತ ಭಯಂಕರವಾದ ದುಃಖವನ್ನನುಭವಿಸುವರು.

೪೬. ಪರಮೇಶ್ವರನೇ ! ನಾನು ನಿನ್ನ ಮಾಯೆಯಿಂದ ಮೋಹಿತನಾಗಿ ಅತ್ಯಂತ ವಿಷಯಾಸಕ್ತನಾಗಿ ನಾನು ನನ್ನದು ಎಂಬ ಗರ್ವರೂಪವಾದ ಹಳ್ಳದಲ್ಲಿ ಬಿದ್ದು ತಿರುಗುತ್ತಿರುವೆನು.

ಸೋಽಹಂ ತ್ವಾಂ ಶರಣಮುಪಾರಮಪ್ರಮೇಯಂ
ಸಂಪ್ರಾಪ್ತಃ ಪರಮಪದಂ ಯತೋ ನ ಕಿಂಚಿತ್ ।
ಸಂಸಾರಭ್ರಮಪರಿತಾಪತಪ್ತ ಚೇತಾ
ನಿರ್ವಾಣೇ ಪರಿಣತಧಾಮ್ನಿ ಸಾಭಿಲಾಷಃ ॥ ೪೭ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ತ್ರಯೋವಿಂಶೋಽಧ್ಯಾಯಃ

೪೭. ಅಂತಹ ನಾನು ಅನಂತನೂ ಅಳತೆಗೆ ಸಿಕ್ಕದವನೂ ಪರಮಾತ್ಮನೂ ಆದ ನಿನ್ನನ್ನು ಶರಣುಹೊಂದಿರುವೆನು. ಈ ಸಂಸಾರದ ಭ್ರಾಂತಿಯಿಂದುಂಟಾದ ದುಃಖದಿಂದ ಸಂತಾಪಪಡುವ ಮನಸ್ಸುಳ್ಳವನಾಗಿ ಸಮಸ್ತ ದುಃಖನಿವೃತ್ತಿಯೂ ಸುಖೈಕಸ್ವರೂಪವೂ ಆದ ನಿನ್ನ ತೇಜಸ್ಸಿನಲ್ಲಿ ಅಪೇಕ್ಷೆಯುಳ್ಳವನಾಗಿರುವೆನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ
ಇಪ್ಪತ್ತಮೂರನೆಯ ಅಧ್ಯಾಯವು
ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಚತುರ್ವಿಂಶೋಽಧ್ಯಾಯಃ

॥ ಶ್ರೀ ಪರಾಶರಃ ॥

ಇತ್ಥಂ ಸ್ತುತಸ್ತದಾ ತೇನ ಮುಚುಕುಂದೇನ ಧೀಮತಾ ।
ಪ್ರಾಹೇಶಸ್ಸರ್ವಭೂತಾನಾಮನಾದಿನಿಧನೋ ಹರಿಃ ॥ ೧ ॥

॥ ಶ್ರೀ ಭಗವಾನುವಾಚ ॥

ಯಥಾಭಿವಾಂಛಿತಾನ್ ದಿವ್ಯಾನ್ ಗಚ್ಛ ಲೋಕಾನ್ನರಾಧಿಪ ।
ಅವ್ಯಾಹತಪರೈಶ್ವರ್ಯೋ ಮತ್ಪ್ರಸಾದೋಪಬೃಂಹಿತಃ ॥ ೨ ॥

ಭುಕ್ತ್ವಾ ದಿವ್ಯಾನ್ ಮಹಾಭೋಗಾನ್ ಭವಿಷ್ಯಸಿ ಮಹಾಕುಲೇ ।
ಜಾತಿಸ್ಮರೋ ಮತ್ಪ್ರಸಾದಾತ್ ತತೋ ಮೋಕ್ಷಮವಾಪ್ಸ್ಯಸಿ ॥ ೩ ॥

ಇಪ್ಪತ್ತನಾಲ್ಕನೆಯ ಅಧ್ಯಾಯವು.

೧–೩. ಈ ರೀತಿಯಲ್ಲಿ ಬುದ್ಧಿವಂತನಾದ ಮುಚುಕುಂದನು ಸ್ತೋತ್ರ ಮಾಡಿದಮೇಲೆ ಸಮಸ್ತ ಪ್ರಾಣಿಗಳಿಗೂ ಒಡೆಯನೂ ಆದ್ಯಂತಗಳಿಲ್ಲದವನೂ ಆದ ಹರಿಯು ಆ ರಾಜನನ್ನು ಕುರಿತು ‘ಎಲೈ ರಾಜನೇ! ನನ್ನ ಅನುಗ್ರಹದಿಂದ ಪ್ರೇರಿತನಾಗಿ ಹಿಂದೆ ನೀನು ಫಲಾಪೇಕ್ಷೆಯಿಂದ ಮಾಡಿದ ಕರ್ಮಗಳಿಗೆ ಫಲವಾದ ದಿವ್ಯ ಲೋಕಗಳಿಗೆ ಹೋಗಿ ತಡೆಯಿಲ್ಲದೆ ದಿವ್ಯವಾದ ಮಹಾ ಭೋಗಗಳನ್ನನುಭವಿಸು, ಬಳಿಕ ನನ್ನ ಅನುಗ್ರಹದಿಂದ ಒಂದು ಉತ್ತಮವಾದ ವಂಶದಲ್ಲಿ ಹಿಂದಿನ ಜನ್ಮಗಳ ಜ್ಞಾನವುಳ್ಳವನಾಗಿ ಹುಟ್ಟಿ ಅಮೇಲೆ ಮೋಕ್ಷವನ್ನು ಪಡೆಯುವೆ’ ಎಂದು ಹೇಳಿದನು.

॥ ಶ್ರೀ ಪರಾಶರಃ ॥

ಇತ್ಯುಕ್ತಃ ಪ್ರಣಿಪತ್ಯೇಶಂ ಜಗತಾಮಚ್ಯುತಂ ನೃಪಃ ।
ಗುಹಾಮುಖಾದ್ವಿನಿಷ್ಕ್ರಾಂತಸ್ಸ ದದರ್ಶಾಲ್ಪಕಾನ್ನರಾನ್ ॥ ೪ ॥

ತತಃ ಕಲಿಯುಗಂ ಮತ್ವಾ ಪ್ರಾಪ್ತಂ ತಪ್ತುಂ ನೃಪಸ್ತದಾ ।
ನರನಾರಾಯಣಸ್ಥಾನಂ ಪ್ರಯಯೌ ಗಂಧಮಾದನಂ ॥ ೫ ॥

ಕೃಷ್ಣೋಽಪಿ ಘಾತಯಿತ್ವಾರಿಂ ಉಪಾಯೇನ ಹಿ ತಪ್ಬಲಂ ।
ಜಗ್ರಾಹ ಮಧುರಾಮೇತ್ಯ ಹಸ್ತ್ಯಶ್ವಸ್ಯಂದನೋಜ್ವಲಂ ॥ ೬ ॥

ಅನೀಯ ಚೋಗ್ರಸೇನಾಯ ದ್ವಾರವತ್ಯಾಂ ನ್ಯವೇದಯತ್ ।
ಪರಾಭಿಭವನಿಶ್ಶಂಕೆಂ ಬಭೂವ ಚ ಯದೋಃ ಕುಲಂ ॥ ೭ ॥

ಬಲದೇವೋಽಪಿ ಮೈತ್ರೇಯ ಪ್ರಶಾಂತಾಖಿಲವಿಗ್ರಹಃ ।
ಜ್ಞಾತಿದರ್ಶನಸೋತ್ಕಶಃ ಪ್ರಯಯೌ ನಂದಗೋಕುಲಂ ॥ ೮ ॥

೪-೫. ಈ ಮಾತನ್ನು ಕೇಳಿ ಮುಚುಕುಂದರಾಜನು ಜಗದೀಶ್ವರನಾದ ಕೃಷ್ಣನಿಗೆ ನಮಸ್ಕಾರಮಾಡಿ ಗುಹೆಯಿಂದ ಹೊರಟು ಹೊರಗೆ ಸಂಚರಿಸುತ್ತಿದ್ದ ಕುಳ್ಳರಾದ ಜನರನ್ನು ನೋಡಿ ಕಲಿಯುಗವು ಬಂದಿತೆಂದು ತಿಳಿದು ತಪಸ್ಸು ಮಾಡುವುದಕ್ಕಾಗಿ ಗಂಧಮಾದನ ಪರ್ವತದಲ್ಲಿದ್ದ ನರನಾರಾಯಣಾಶ್ರಮಕ್ಕೆ ಹೋದನು.

೬-೮. ಕೃಷ್ಣನಾದರೋ ಉಪಾಯದಿಂದ ಶತ್ರುವನ್ನು ನಾಶಮಾಡಿ ಮಥುರಾ ಪಟ್ಟಣಕ್ಕೆ ಬಂದು ಆನೆ, ಕುದುರೆ, ರಥಗಳಿಂದ ಕೂಡಿದ ಆ ಕಾಲಯವನನ ಸೇನೆಯನ್ನು ತನ್ನಧೀನಮಾಡಿಕೊಂಡು ದ್ವಾರಕಾಪಟ್ಟಣಕ್ಕೆ ಬಂದು ಆ ಸೇನೆಯನ್ನು ಉಗ್ರಸೇನರಾಜನಿಗೆ ಕೊಟ್ಟನು. ಆಮೇಲೆ ಯದುಗಳ ವಂಶವು ಶತ್ರುಗಳ ಬಾಧೆಯನ್ನು ಮನಸ್ಸಿನಲ್ಲಿ ಯೋಚಿಸದೆ ಇದ್ದಿತು. ಬಲರಾಮನೂ ಯಾವ ಯುದ್ಧವೂ ಇಲ್ಲದುದರಿಂದ ಶಾಂತನಾಗಿ ತನ್ನ ಬಂಧುಗಳನ್ನು ನೋಡಬೇಕೆಂಬಾಸೆಯಿಂದ ನಂದಗೋಕುಲಕ್ಕೆ ಪ್ರಯಾಣಮಾಡಿದನು.

ತತೋ ಗೋಪಾಶ್ಚ ಗೋಪೀಶ್ಚ ಯಥಾಪೂರ್ವಮಮಿತ್ರಜಿತ್ ।
ತಥೈವಾಭ್ಯವದತ್ಪ್ರೇಮ್ಣಾ ಬಹುಮಾನಪುರಸ್ಸರಂ ॥ ೯ ॥

ಸ ಕೈಶ್ಚಿತ್ಸಂಪರಿಷ್ವಕ್ತಃ ಕಾಂಶ್ಚಿಚ್ಚ ಪರಿಷಸ್ವಜೇ ।
ಹಾಸ್ಯಂ ಚಕ್ರೇ ಸಮಂ ಕೈಶ್ಚಿತ್ ಗೋಪ್ಯಃ ಗೋಪೀಜನಸ್ಯೈತಥಾ ॥ ೧೦ ॥

ಪ್ರಿಯಾಣ್ಯನೇಕಾನ್ಯವದನ್ ಗೋಪಾಸ್ತತ್ರ ಹಲಾಯುಧಂ ।
ಗೋಪ್ಯಶ್ಚ ಪ್ರೇಮಕುಪಿತಾಃ ಪ್ರೋಚುಸ್ತೇರ್ಷ್ಯಮಥಾಪರಾಃ ॥ ೧೧ ॥

ಗೋಪ್ಯಃ ಪಪ್ರಚ್ಛುರಪರಾ ನಾಗರೀಜನವಲ್ಲಭಂ ।
ಕಚ್ಚಿದಾಸ್ತೇ ಸುಖಂ ಕೃಷ್ಣಶ್ಚಲಪ್ರೇಮಲವಾತ್ಮಕಃ ॥ ೧೨ ॥

ಅಸ್ಮಚ್ಚೇಷ್ಟಾಮಪಹಸನ್ ನ ಕೆಶ್ಚಿತ್ಪುರಯೋಷಿತಾಂ ।
ಸೌಭಾಗ್ಯಮಾನಮಧಿಕಂ ಕರೋತಿ ಕ್ಷಣಸೌಹೃದಃ ॥ ೧೩ ॥

೯–೧೦. ಶತ್ರುವನ್ನು ಜಯಿಸಿದವನಾದ ಬಲರಾಮನು ಹಿಂದಿನಂತೆ ಗೋಪ ಗೋಪಿಯರೊಡನೆ ಪ್ರೀತಿಯಿಂದಲೂ ಗೌರವದಿಂದಲೂ ಮಾತನಾಡಿದನು. ಕೆಲವು ದೊಡ್ಡ ಗೊಲ್ಲರು ಇವನನ್ನಾಲಿಂಗಿಸಿದರು. ಅವನು ಚಿಕ್ಕವಂದ ಕೆಲವು ಗೋಪಿಯರನ್ನಾಲಿಂಗಿಸಿದನು. ಸಮಾನರಾದ ಕೆಲವು ಗೋಪ ಗೋಪಿಯರೊಡನೆ ಹಾಸ್ಯಮಾಡುತ್ತಿದ್ದನು.

೧೧–೧೫. ಕೆಲವು ಗೊಲ್ಲರು ಬಲರಾಮನೊಡನೆ ಅನೇಕ ಪ್ರಿಯವಾದ ಮಾತುಗಳನ್ನಾಡಿದರು. ಗೋಪಿಯರು ಪ್ರಣಯ ಕೋಪದಿಂದಲೂ ಮತ್ತೆ ಕೆಲವರು ಸ್ಪರ್ಧೆಯಿಂದಲೂ ಮಾತನಾಡಿದರು. ಇನ್ನು ಕೆಲವು ಗೋಪಿಯರು ಚಂಚಲವಾದ ಅಲ್ಪ ಪ್ರೀತಿಯ ಸ್ವಭಾವವುಳ್ಳ ಕೃಷ್ಣನು ನಗರ ಸ್ತ್ರೀಯರಿಗೆ ಪ್ರೀತಿಪಾತ್ರನಾಗಿ ಸುಖವಾಗಿರುವನೇ ಎಂದು ಪ್ರಶ್ನೆ ಮಾಡಿದರು. ಕ್ಷಣಮಾತ್ರ ಸ್ನೇಹಿತನಾದ ಕೃಷ್ಣನು ಹಳ್ಳಿಯವರಾದ ನಮ್ಮ ನಡತೆಗಳನ್ನು ಹಾಸ್ಯಮಾಡುತ್ತ ಪಟ್ಟಣದ ಸ್ತ್ರೀಯರ

ಕೆಚ್ಚಿಚ್ಚ್ಮರತಿ ನಃ ಕೃಷ್ಣೋ ಗೀತಾನುಗಮನಂ ಕೆಲಂ ।
ಅಸ್ಮೈಸೌ ಮಾತರಂ ದ್ರಷ್ಟುಂ ಸಕೃದಪ್ಯಾಗಮಿಷ್ಯತಿ ॥ ೧೪ ॥

ಅಥವಾ ಕಿಂ ತದಾಲಾಪೈಃ ಕ್ರಿಯಂತಾಮಪರಾಃ ಕಥಾಃ ।
ಯೆಸ್ಮಾಸ್ಮಾಭಿರ್ವಿನಾ ತೇನ ವಿನಾಸ್ಮಾಕಂ ಭವಿಷ್ಯತಿ ॥ ೧೫ ॥

ಪಿತಾ ಮಾತಾ ತಥಾ ಭ್ರಾತಾ ಭರ್ತಾ ಬಂಧುಜನಶ್ಚ ಕಿಂ ।
ಸಂತ್ಯೆಕ್ತೈಸ್ತತ್ಕೃತೇಽಸ್ಮಾಭಿರಕೃತಜ್ಞಧ್ವಜೋ ಹಿ ಸಃ ॥ ೧೬ ॥

ತಥಾಪಿ ಕೆಚ್ಚಿದಾಲಾಪಮಿಹಾಗಮನಸಂಶ್ರಯಂ ।
ಕರೋತಿ ಕೃಷ್ಣೋ ವಕ್ತವ್ಯಂ ಭವತಾ ರಾಮ ನಾನ್ಯತಂ ॥ ೧೭ ॥

ದಾಮೋದರೋಽಸೌ ಗೋವಿಂದಃ ಪುರಸ್ತ್ರೀಸಕ್ತಮಾನಸಃ ।
ಅಪೇತಪ್ರೀತಿರಸ್ಮಾಸು ದುರ್ದರ್ಶಃ ಪ್ರತಿಭಾತಿ ನಃ ॥ ೧೮ ॥

ಸೌಭಾಗ್ಯದ ಅಳತೆಯನ್ನು ಹೆಚ್ಚುಮಾಡುತ್ತಿರುವನೇ ಎಂದೂ ಕೃಷ್ಣನು ಅವ್ಯಕ್ತ ಮಧುರವಾದ ನಮ್ಮ ಸಂಗೀತವನ್ನು ಸ್ಮರಿಸುತ್ತಿರುವನೇ ಎಂದೂ ತನ್ನ ತಾಯಿಯಾದ ಯಶೋದೆಯನ್ನು ನೋಡಲು ಒಂದು ಬಾರಿಯಾದರೂ ಬರುವನೇ ಎಂದೂ ಮತ್ತೆ ಕೆಲವರು ಅವನ ಮಾತನಿಂದೇನು ? ಬೇರೆ ಮಾತುಗಳನ್ನಾಡೋಣ. ನಾವಿಲ್ಲದಿದ್ದರೆ ಅವನಿಗಾಗಲಿ, ಅವನಿಲ್ಲದಿದ್ದರೆ ನಮಗಾಗಲಿ ಏನಾಗುವುದು ಎಂದೂ ಪ್ರಶ್ನೆ ಮಾಡಿದರು.

೧೬-೧೮. ತಂದೆ ತಾಯಿ ಸಹೋದರರು ಗಂಡ ನಂಟರು ಇವರನ್ನು ಕೃಷ್ಣನಿಗಾಗಿ ನಾವು ಏಕೆ ಬಿಟ್ಟೆವು ? ಅವನು ಉಪಕಾರಸ್ಮರಣೆಯಿಲ್ಲದ ಜನರಲ್ಲಿ ಪ್ರಸಿದ್ಧನಾದವನು. ಹಾಗಾದರೂ ಕೃಷ್ಣನು ಇಲ್ಲಿಗೆ ಬರುವ ವಿಷಯವಾಗಿ ಏನಾದರೂ ಮಾತನಾಡಿದನೇ ಬಲರಾಮನೇ ನಿಜವನ್ನು ಹೇಳು. ಸುಳ್ಳಾಡಬೇಡ. ಗೋವಿಂದನು ಪಟ್ಟಣದ ಸ್ತ್ರೀಯರಲ್ಲಿ ಮನಸ್ಸನ್ನಿಟ್ಟು ನಮ್ಮಲ್ಲಿ ಪ್ರೀತಿಯಿಲ್ಲದೆ ಇರುವುದರಿಂದ ಅವನನ್ನು ನೋಡುವುದೇ ಕಷ್ಟವೆಂದು ನಮಗೆ ತೋರುವುದು" ಎಂದರು.

ಆನುಂತ್ರಿಕಶ್ಚ ಕೃಷ್ಣೇತಿ ಪುನರ್ದಾಮೋದರೇತಿ ಚ ।
ಜಹಾಸುಸ್ಸ್ಸ್ವರಂ ಗೋಪ್ಯೋ ಹರಿಣಾ ಹೃತಚೇತಸಃ

ಸಂದೇಶೈಸ್ಸಾಮಮಧುರೈಃ ಪ್ರೇಮಗರ್ಭೈರಗರ್ವಿತೈಃ ।
ರಾಮೋಽಪಾಶ್ವಾಸಿತಾಃ ಗೋಪ್ಯಃ ಕೃಷ್ಣಸ್ಯಾತಿಮನೋಹರೈಃ ॥ ೨೦ ॥

ಗೋಪ್ಯೈಶ್ಚ ಪೂರ್ವವದ್ರಾಮಃ ಪರಿಹಾಸಮನೋಹರಾಃ ।
ಕಥಾಶ್ಚಕಾರ ರೇಮೇ ಚ ಸಹ ತೈರ್ವ್ರಜಭೂಮಿಷು ॥ ೨೧ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ಚತುರ್ವಿಂಶೋಽಧ್ಯಾಯಃ

೧೯–೨೦. ಕೆಲವು ಗೋಪಿಯರು ಕೃಷ್ಣನ ಅಧೀನವಾದ ಮನಸ್ಸುಳ್ಳವರಾಗಿ ಕೃಷ್ಣಾ ! ಕೃಷ್ಣಾ ! ಎಂದೂ ದಾಮೋದರ ಎಂದೂ ಕೂಗಿ ನಗುತ್ತಿದ್ದರು. ಬಲರಾಮನು ಸಮಾಧಾನಕರನಾಗಿಯೂ ಮಧುರವಾಗಿಯೂ ಪ್ರೀತಿ ವಿನಯಗಳಿಂದ ಕೂಡಿದುದಾಗಿಯೂ ಇರುವ ಕೃಷ್ಣನು ಹೇಳಿ ಕಳುಹಿಸಿದ ಮನೋಹರವಾದ ಮಾತುಗಳಿಂದ ಗೋಪಿಯರನ್ನು ಸಮಾಧಾನಪಡಿಸಿದನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ

ಇಪ್ಪತ್ತನಾಲ್ಕನೆಯ ಅಧ್ಯಾಯವು ಮುಗಿದುದು.

ಶ್ರೀಃ

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಪಂಚವಿಂಶೋಽಧ್ಯಾಯಃ

॥ ಶ್ರೀ ಪರಾಶರಃ ॥

ವನೇ ವಿಚರತಸ್ತಸ್ಯ ಸಹ ಗೋಪೈರ್ಮಹಾತ್ಮನಃ ।
ಮಾನುಷಳದ್ಮರೂಪಸ್ಯ ಶೇಷಸ್ಯ ಧರಣೀಧೃತಃ ॥ ೧ ॥

ನಿಷ್ಪಾದಿತೋರು ಕಾರ್ಯಸ್ಯ ಕಾರ್ಯೇಷೋರ್ವೀಪ್ರಚಾರಿಣಃ ।
ಉಪಭೋಗಾರ್ಥಮತ್ಯರ್ಥಂ ವರುಣಃ ಪ್ರಾಹ ವಾರುಣೀಂ ॥ ೨ ॥

ಅಭೀಷ್ಟಾ ಸರ್ವದಾ ಯಸ್ಯ ಮದಿರೇ ತ್ವಂ ಮಹೌಜಸಃ ।
ಅನಂತಸ್ಯೋಪಭೋಗಾಯ ತಸ್ಯ ಗಚ್ಛ ಮುದೇ ಶುಭೇ ॥ ೩ ॥

ಇಪ್ಪತ್ತೈದನೆಯ ಅಧ್ಯಾಯವು

೧–೩. ಭೂಮಿಯನ್ನು ತನ್ನ ಹೆಡೆಯಮೇಲೆ ಧರಿಸಿದ ಆದಿಶೇಷನು ಮನುಷ್ಯಾಕಾರದಿಂದ ಬಲರಾಮನಾಗಿ ಗೊಲ್ಲರೊಡನೆ ಕಾಡಿನಲ್ಲಿ ಸಂಚರಿಸುತ್ತ ಅನೇಕ ಮಹಾಕಾರ್ಯಗಳನ್ನು ಮಾಡಿ ಮತ್ತೆ ಕೆಲವು ಕಾರ್ಯಗಳನ್ನು ಮಾಡುವುದಕ್ಕಾಗಿ ಭೂಮಿಯಲ್ಲಿ ಸಂಚರಿಸುತ್ತಿದ್ದ ಅವನ ಉಪಭೋಗಕ್ಕಾಗಿ ವರುಣನು ವಾರುಣೀ ಎಂಬ ಮದ್ಯದೇವತೆಯನ್ನು ಕುರಿತು "ಎಲೈ ಮದಿರಾದೇವಿಯೇ! ನೀನು ಅನಂತನಿಗೆ ಯಾವಾಗಲೂ ಅತ್ಯಂತ ಪ್ರೀತಿ ಪಾತ್ರಳಾದವಳು, ಅವನು ಈಗ ಮಹಾಪರಾಕ್ರಮಿಯಾದ ಬಲರಾಮನಾಗಿರುವನು. ಅವನ ಉಪಭೋಗಕ್ಕಾಗಿ ಮಂಗಳಸ್ವರೂಪೆಯಾದ ನೀನು ಹೋಗು" ಎಂದು ಹೇಳಿದನು.

ಇತ್ಯುಕ್ತಾ ವಾರುಣೀ ತೇನ ಸನ್ನಿಧಾನಮುಪಾಕರೋತ್ ।
ವೃಂದಾವನಸಮುತ್ಪನ್ನ ಕದಂಬತರುಕೋಟರೇ ॥ ೪ ॥

ವಿಚರನ್ ಬಲದೇವೋಽಪಿ ಮದಿರಾಗಂಧಮುತ್ತಮಂ ।
ಆಘ್ರಾಯ ಮುದಿರಾತರ್ಷಮುವಾಪಾಥ ವರಾನನಃ ॥ ೫ ॥

ತತಃ ಕದಂಬಾತ್ಸಹಸಾ ಮದ್ಯಧಾರಾಂ ಸಲಾಂಗಲೀ ।
ಪತಂತೀಂ ವೀಕ್ಷ್ಯ ಮೈತ್ರೇಯ ಪ್ರಯಯೌ ಪರಮಾಂ ಮುದಂ ॥ ೬ ॥

ಪಪೌ ಚ ಗೋಪಗೋಪೀಭಿಸ್ಸಮವೇತೋ ಮುದಾನ್ವಿತಃ ।
ಪ್ರಗೀಯಮಾನೋ ಲಲಿತಂ ಗೀತವಾದ್ಯವಿಚಾರದೈಃ ॥ ೭ ॥

ಸ ಮತ್ತೋತ್ಯಂತಹರ್ಷಾಂಭಃ ಕಣಿಕಾಮೌಕ್ತಿಕೋಜ್ವಲಃ ।
ಆಗಚ್ಛ ಯಮುನೇ ಸ್ನಾತುಮಿಚ್ಛಾಮೀತ್ಯಾಹ ವಿಹ್ವಲಃ ॥ ೮ ॥

ತಸ್ಯ ವಾಚಂ ನದೀ ಸಾ ತು ಮತ್ತೋಕ್ತಾನುವಮತ್ಯ ವೈ ।
ನಾಜಗಾಮ ತತಃ ಕ್ರುದ್ಧೋ ಹಲಂ ಜಗ್ರಾಹ ಲಾಂಗಲೀ ॥ ೯ ॥

೪-೭. ಈ ಮಾತನ್ನು ಕೇಳಿ ಮದಿರಾದೇವಿಯು ವೃಂದಾವನದಲ್ಲಿ ಹುಟ್ಟಿದ ಕದಂಬವೃಕ್ಷದ ಪೊಟರೆಯಲ್ಲಿ ಕಾಣಿಸಿಕೊಂಡಳು ಬಲರಾಮನು ಸಂಚರಿಸುತ್ತಿರುವಾಗ ಶ್ರೇಷ್ಠವಾದ ಆ ಮದ್ಯದ ವಾಸನೆಯನ್ನು ಹಿಡಿದು ಅದರಲ್ಲಿ ಆಸಕ್ತನಾದನು. ಆ ಮೇಲೆ ಕದಂಬವೃಕ್ಷಗಳೆಲ್ಲವೂ ಮದ್ಯಧಾರೆಯನ್ನು ಸುರಿಸುವುದಕ್ಕೆ ಪ್ರಾರಂಭಿಸಿದುವು. ಬಲರಾಮನು ಅದನ್ನು ಕಂಡು ಪರಮ ಸಂತೋಷವನ್ನು ಹೊಂದಿದನು. ಮತ್ತು ಗೋಪಗೋಪಿಯರೊಡನೆ ಪ್ರೀತಿಯಿಂದ ಅದನ್ನು ಕುಡಿದು ಗೀತವಾದ್ಯಗಳಲ್ಲಿ ಬುದ್ಧಿವಂತರಾದವರೊಡನೆ ಕೂಡಿ ತಾನೂ ಮನೋಹರವಾಗಿ ಗಾನಮಾಡುತ್ತಿದ್ದನು.

೮-೧೦. ಅವನು ಒಂದಾನೊಂದು ದಿನ ಮದ್ಯಪಾನದಿಂದ ಮದಿಸಿದವನಾಗಿ ಬೇಸಿಗೆಯಲ್ಲಿ ವೈಜಿವರಿ ಬೆವರಿನ ಹನಿಗಳು ಮುತ್ತಿನಂತೆ ಹೊಳೆಯುತ್ತಿರಲು ಭ್ರಾಂತಿಯಿಂದ ಯಮುನೆಯನ್ನು ಕುರಿತು "ಎಲೈ ಯಮುನೆಯೇ! ನಾನು ಸ್ನಾನ

ಗೃಹೀತ್ವಾ ತಾಂ ಹಲಾಂಕೇನ ಚಕರ್ಷ ಮದವಿಹ್ವಲಃ ।
ಪಾಪೇನಾಯಾಸಿನಾಯಾಸಿ ಗಮ್ಯತಾಮಿಚ್ಛಯಾನ್ಯತಃ ॥ ೧೦ ॥

ಸಾ ಕೃಷ್ಟಾ ಸಹಸಾ ತೇನ ಮಾರ್ಗಂ ಸಂತ್ಯಜ್ಯ ನಿಮ್ನಗಾ ।
ಯತ್ರಾಸ್ತೇ ಬಲಭದ್ರೋಽಸೌ ಸ್ಥಾವಯಾಮಾಸ ತದ್ವನಂ ॥ ೧೧ ॥

ಶರೀರಿಣೀ ತದಾಭ್ಯೇತ್ಯ ತ್ರಾಸವಿಹ್ವಲಲೋಚನಾ ।
ಪ್ರಸೀದೇತ್ಯಬ್ರವೀದ್ರಾಮಂ ಮುಂಚ ಮಾಂ ಮುಸಲಾಯುಧ ॥ ೧೨ ॥

ತತಸ್ತಸ್ಯಾಸ್ತು ವಚನಂ ಅಕರ್ಣ್ಯ ಸಹಲಾಯುಧಃ ।
ಸೋಽಬ್ರವೀದವಜಾನಾಸಿ ಮನು ಶೌರ್ಯಬಲೇ ನದಿ ॥
ಸೋಽಹಂ ತ್ವಾಂ ಹಲಪಾತೇನ ನಯಿಷ್ಯಾಮಿ ಸಹಸ್ರಧಾ ॥ ೧೩ ॥

ಮಾಡಬೇಕು. ಇಲ್ಲಿ ಬಾ" ಎಂದು ಕರೆದನು. ಮದಿಸಿದವನ ಮಾತೆಂದು ಯಮುನೆಯು ಆ ಮಾತನ್ನು ಅಲಕ್ಷ್ಯಮಾಡಿ ಬರದೆ ಇರಲು ಬಲರಾಮನು ಕೋಪದಿಂದ ತನ್ನ ಆಯುಧವಾದ ನೇಗಿಲನ್ನು ಹಿಡಿದು "ಪಾಪಿಷ್ಠಳೇ! ಬರುವುದಿಲ್ಲವೇ ನಿನ್ನ ಮನಬಂದಂತೆ ಬೇರೆ ಕಡೆಗೆ ಹೋಗು. ನೋಡೋಣ" ಎಂದು ಹೇಳಿ ಮದದಿಂದ ತನ್ನ ಕಡೆಗೆ ಎಳೆದನು.

೧೧-೧೨. ಅವನು ಎಳೆದ ಕ್ಷಣದಲ್ಲಿಯೇ ಯಮುನಾನದಿಯು ತನ್ನ ಮಾರ್ಗವನ್ನು ಬಿಟ್ಟು ಬಲರಾಮನಿದ್ದ ವನದ ಕಡೆಗೆ ಬಂದು ಆ ವನವನ್ನೆಲ್ಲ ನೀರಿನಿಂದ ನೆನೆಸಿತು. ಆಗ ಯಮುನಾ ನದಿಯು ಮೂರ್ತಿರೂಪದಿಂದ ಬಂದು ಭಯದಿಂದ ಚಂಚಲವಾದ ಕಣ್ಣುಗಳುಳ್ಳವಳಾಗಿ ಬಲರಾಮನೇ ಪ್ರಸನ್ನನಾಗಿ ನನ್ನನ್ನು ಬಿಡು ಎಂದು ಕೇಳಿಕೊಂಡಳು.

೧೩-೧೫. ಬಲರಾಮನು ಅವಳ ಮಾತನ್ನು ಕೇಳಿ "ಎಲೈ ನದಿಯೇ ನನ್ನ ಬಲ ಪರಾಕ್ರಮಗಳನ್ನು ಅಲಕ್ಷ್ಯಮಾಡುವೆಯಾ ನಿನ್ನನ್ನು ನನ್ನ ನೇಗಿಲ ದಾರಿಯಲ್ಲಿ

॥ ಶ್ರೀ ಪರಾಶರಃ ॥

ಇತ್ಯುಕ್ತೆಯಾತಿಸಂತ್ರಾಸಾತ್ತಯಾ ನದ್ಯಾ ಪ್ರಸಾದಿತಃ ।
ಭೂಭಾಗೇ ಸ್ನಾವಿಶೇ ತಸ್ಮಿನ್ ಮುಮೋಚ ಯಮುನಾಂ ಬಲಃ ॥ ೧೪ ॥

ತತಸ್ಸ್ನಾತಸ್ಯ ವೈ ಕಾಂತಿರಜಾಯತ ಮಹಾತ್ಮನಃ ।
ಅವತಂಸೋತ್ಪಲಂ ಚಾರು ಗೃಹೀತ್ವೈಕಂ ಚ ಕುಂಡಲಂ ॥ ೧೫ ॥

ವರುಣಪ್ರಹಿತಾಂ ಚಾನ್ಯಾ ಮಾಲಾಮುಮ್ಲಾನ ಪಂಕಜಾಂ ।
ಸಮುದ್ರಾಭೇ ತಥಾ ವಸ್ತ್ರೇ ನೀಲೇ ಲಕ್ಷ್ಮೀರಯಚ್ಛತ ॥ ೧೬ ॥

ಕೈತಾವತಂಸಸ್ಯ ತದಾ ಚಾರುಕುಂಡಲಭೂಷಿತಃ ।
ನೀಲಾಂಬರಧರಸ್ಸ್ರಗ್ವೀ ಶುಶುಭೇ ಕಾಂತಿಸಂಯುತಃ ॥ ೧೭ ॥

ಸಾವಿರಪಾಲು ಮಾಡಿ ತೆಗೆದುಕೊಂಡು ಹೋಗುವೆನು ? ಎಂದ ಮಾತನ್ನು ಕೇಳಿ ಯಮುನೆಯು ಅತ್ಯಂತ ಭಯದಿಂದ ಪ್ರಾರ್ಥಿಸಿ ಆ ಭೂಭಾಗವನ್ನು ನೆನೆಸಿದ ಮೇಲೆ ಬಲರಾಮನು ಅದನ್ನು ಬಿಟ್ಟುಬಿಟ್ಟನು. ತರುವಾಯ ಸ್ನಾನಮಾಡಿದ ಆ ಮಹಾತ್ಮನಿಗೆ ಶರೀರದಲ್ಲಿ ವಿಶೇಷ ಕಾಂತಿಯುಂಟಾಯಿತು.

೧೬–೧೭. ಆ ಮೇಲೆ ಲಕ್ಷ್ಮೀದೇವಿಯು ಕರ್ಣಾಭರಣಕ್ಕಾಗಿ ಒಂದು ಬಿಳಿಯಬಣ್ಣದ ತಾವರೆಯನ್ನೂ ಮತ್ತೊಂದು ಕರ್ಣಾಭರಣವನ್ನೂ ವರುಣನು ಇವನಿಗಾಗಿ ಕಳುಹಿಸಿದ ಬಾಡದಿರುವ ಕಮಲದ ಮಾಲೆಯನ್ನೂ ಸಮುದ್ರದ ಬಣ್ಣಕ್ಕೆ ಸಮಾನವಾದ ನೀಲಿಯ ಎರಡು ವಸ್ತ್ರಗಳನ್ನೂ ತಂದುಕೊಟ್ಟಳು. ಅವನು ಕರ್ಣಾಭರಣವನ್ನಿಟ್ಟು ನೀಲಿಯ ವಸ್ತ್ರಗಳನ್ನು ಧರಿಸಿ ಕಮಲದ ಮಾಲೆಯನ್ನು ಹಾಕಿ

ಇತ್ಥಂ ವಿಭೂಷಿತೋ ರೇಮೇ ತತ್ರರಾಮಸ್ತಥಾ ವ್ರಜೇ ।
ಮಾಸದ್ವಯೇನ ಯಾತಶ್ಚ ಸ ಪುನರ್ದ್ವಾರಕಾಂ ಪುರೀಂ ॥ ೧೮ ॥

ರೇವತೀಂ ನಾಮ ತನಯಾಂ ರೈವತಸ್ಯ ಮಹೀಪತೇಃ ।
ಉಪಯೇಮೇ ಬಲಸ್ತಸ್ಯಾಂ ಜಜ್ಞಾತೇ ನಿಶಿತೋಲ್ಮುಕೌ ॥ ೧೯ ॥

ಇತಿ ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ ಪಂಚವಿಂಶೋಽಧ್ಯಾಯಃ

ಕೊಂಡು ಪ್ರಕಾಶಿಸುತ್ತಿದ್ದನು. ಬಲರಾಮನು ಹೀಗೆ ಅಲಂಕಾರಮಾಡಿಕೊಂಡು ಗೋಕುಲದಲ್ಲಿ ವಿಹರಿಸುತ್ತಿದ್ದನು. ಎರಡು ತಿಂಗಳ ಮೇಲೆ ಅವನು ದ್ವಾರಕಾ ಪಟ್ಟಣಕ್ಕೆ ಹೋದನು.

೧೯. ಬಳಿಕ ಬಲರಾಮನು ರೈವತರಾಜನ ಮಗಳಾದ ರೇವತಿಯನ್ನು ವಿವಾಹ ಮಾಡಿಕೊಂಡನು. ಅವಳಲ್ಲಿ ನಿಶಿತ, ಉಲ್ಮುಕ ಎಂಬಿಬ್ಬರು ಮಕ್ಕಳು ಹುಟ್ಟಿದರು.

ಎಂಬಲ್ಲಿಗೆ ಶ್ರೀ ವಿಷ್ಣು ಪುರಾಣದ ಪಂಚಮಾಂಶದಲ್ಲಿ

ಇಪ್ಪತ್ತೈದನೆಯ ಅಧ್ಯಾಯವು ಮುಗಿದುದು

॥ ಶ್ರೀಃ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಷಡ್ವಿಂಶೋಽಧ್ಯಾಯಃ

॥ ಶ್ರೀ ಪರಾಶರಃ ॥

ಭೀಷ್ಮಕಃ ಕುಂಡಿನೇ ರಾಜಾ ವಿದರ್ಭವಿಷಯೇಽಭವತ್ ।
ರುಕ್ಮೀ ತಸ್ಯಾಭವತ್ಪುತ್ರೋ ರುಕ್ಮಿಣೀ ಚ ವರಾ ನನಾ ॥ ೧ ॥

ರುಕ್ಮಿಣೀಂ ಚಕಮೇ ಕೃಷ್ಣಸ್ತಾಂ ಚ ತಂ ಚಾರುಹಾಸಿನೀ ।
ನ ದದೌ ಯೋಚತೇ ಚೈನಾಂ ರುಕ್ಮೀ ದ್ವೇಷೇಣ ಚಕ್ರಿಣೇ ॥ ೨ ॥

ದದೌ ಚ ಶಿಶುಪಾಲಾಯ ಜರಾಸಂಧಪ್ರಚೋದಿತಃ ।
ಭೀಷ್ಮಕೋ ರುಕ್ಮಿಣಾ ಸಾರ್ಧಂ ರುಕ್ಮಿಣೀಮುರುವಿಕ್ರಮಃ ॥ ೩ ॥

ಇಪ್ಪತ್ತಾರನೆಯ ಅಧ್ಯಾಯವು.

೧-೩. ವಿದರ್ಭದೇಶದ ರಾಜಧಾನಿಯಾದ ಕುಂಡಿನಪುರದಲ್ಲಿ ಭೀಷ್ಮಕನೆಂಬ ರಾಜನಿದ್ದನು. ಅವನಿಗೆ ರುಕ್ಮಿಯೆಂಬ ಮಗನೂ ರುಕ್ಮಿಣಿಯೆಂಬ ಮಗಳೂ ಇದ್ದರು ರುಕ್ಮಿಣಿಯನ್ನು ಕೃಷ್ಣನೂ ಕೃಷ್ಣನನ್ನು ರುಕ್ಮಿಣಿಯೂ ಪ್ರೀತಿಸುತ್ತಿದ್ದರು. ಕೃಷ್ಣನು ರುಕ್ಮಿಣಿಯನ್ನು ತನಗೆ ಕೊಡಬೇಕೆಂದು ಕೇಳಿದರೂ ರುಕ್ಮಿಯು ಅವನ ಮೇಲಿನ ದ್ವೇಷದಿಂದ ಕೊಡಲಿಲ್ಲ. ಜರಾಸಂಧನ ಪ್ರೇರಣೆಯಿಂದ ಭೀಷ್ಮಕನು ರುಕ್ಮಿಯೊಡನೆ ಸೇರಿ ರುಕ್ಮಿಣಿಯನ್ನು ಶಿಶುಪಾಲನಿಗೆ ಕೊಡುತ್ತೇನೆಂದು ಮಾತುಕೊಟ್ಟಿದ್ದನು.

ವಿವಾಹಾರ್ಥಂ ತತಸ್ಸರ್ವೇ ಜರಾಸಂಧಮುಖಾ ನೃಪಾಃ ।
ಭೀಷ್ಮಕಸ್ಯ ಪರಂ ಜಗ್ಮುಶ್ಶಿಶುಪಾಲಪ್ರಿಯೈಷಿಣಃ ॥ ೪ ॥

ಕೃಷ್ಣೋಽಪಿ ಬಲಭದ್ರಾದ್ಯೈ ರ್ಯದುಭಿಃ ಪರಿವಾರಿತಃ ।
ಪ್ರಯಯೌ ಕುಂಡಿನಂ ದ್ರಷ್ಟುಂ ವಿವಾಹಂ ಚೈದ್ಯಭೂಭೃತಃ ॥ ೫ ॥

ಶ್ವೋ ಭಾವಿನಿ ವಿವಾಹೇ ತು ತಾಂ ಕನ್ಯಾಂ ಹೃತವಾನ್ ಹರಿಃ ।
ವಿಪಕ್ಷಧಾರಮಾಸಜ್ಯ ರಾಮಾದಿಷ್ವಥ ಬಂಧುಷು ॥ ೬ ॥

ತತಶ್ಚ ಪೌಂಡ್ರಕಶ್ಶ್ರೀಮಾನ್ ದಂತವಕ್ತ್ರೋ ವಿದೂರಥಃ ।
ಶಿಶುಪಾಲಜರಾಸಂಧಶಾಲ್ವಾದ್ಯಾಶ್ಚ ಮಹೀಭೃತಃ ॥ ೭ ॥

ಕುಪಿತಾಸ್ತೇ ಹರಿಂ ಹಂತುಂ ಜಕ್ಮುರುದ್ಯೋಗಮುತ್ತಮಂ ।
ನಿರ್ಜಿತಾಶ್ಚ ಸಮಾಗಮ್ಯ ರಾಮಾದ್ಯೈರ್ಯದುಪುಂಗವೈಃ ॥ ೮ ॥

೪-೬. ವಿವಾಹಾರ್ಥವಾಗಿ ಶಿಶುಪಾಲನಿಗೆ ಹಿತವನ್ನು ಕೋರುವ ಜರಾಸಂಧನೇ ಮೊದಲಾದ ಎಲ್ಲ ರಾಜರೂ ಭೀಷ್ಮಕನ ಪಟ್ಟಣಕ್ಕೆ ಹೋದರು. ಶಿಶುಪಾಲನ ವಿವಾಹವನ್ನು ನೋಡುವುದಕ್ಕಾಗಿ ಕೃಷ್ಣನೂ ಬಲಭದ್ರನೇ ಮುಂತಾದ ಯಾದವರೊಡನೆ ಕುಂಡಿನಪುರಕ್ಕೆ ಹೋದನು. ಕೃಷ್ಣನು ಶತ್ರುಗಳಮೇಲೆ ಯುದ್ಧಮಾಡುವ ಭಾರವನ್ನು ಬಲರಾಮನೇ ಮುಂತಾದ ಬಂಧುಗಳಿಗೆ ವಹಿಸಿ ವಿವಾಹದ ಹಿಂದಿನ ದಿನವೇ ಆ ಕನ್ಯೆಯನ್ನು ಅಪಹಾರಮಾಡಿದನು

೭-೮. ಆಮೇಲೆ ಪೌಂಡ್ರಕ, ದಂತವಕ್ತ್ರ, ವಿದೂರಥ, ಶಿಶುಪಾಲ, ಜರಾಸಂಧ, ಸಾಲ್ವ ಮುಂತಾದ ರಾಜರು ಕೋಪಗೊಂಡು ಕೃಷ್ಣನನ್ನು ಕೊಲ್ಲುವ ಪ್ರಯತ್ನವನ್ನು ಮಾಡಿ ಬಲರಾಮನೇ ಮುಂತಾದ ಯಾದವರ ಮೇಲೆ ಯುದ್ಧಮಾಡಿ ಸೋತು ಹೋದರು,

ಕುಂಡಿನಂ ನ ಪ್ರವೇಕ್ಷ್ಯಾಮಿ ಹತ್ವಾ ಯುಧಿ ಕೇಶವಂ ।
ಕೃತ್ವಾ ಪ್ರತಿಜ್ಞಾಂ ರುಕ್ಮೀ ಚ ಹಂತುಂ ಕೃಷ್ಣಮನುದ್ಯತಃ ॥ ೯೯ ॥

ಹತ್ವಾ ಬಲಂ ಸನಾಗಾಶ್ವಂ ಪತ್ತಿಸ್ಯಂದನಸಂಕುಲಂ ।
ನಿರ್ಜಿತಃ ಪಾತಿತಶ್ಚೋರ್ವ್ಯಾಂ ಲೀಲಯೈವ ಸ ಚಕ್ರಿಣಾ ॥ ೧೦೦ ॥

ನಿರ್ಜಿತ್ಯ ರುಕ್ಮಿಣಂ ಸಮ್ಯಗುಪಯೇಮೇ ಚ ರುಕ್ಮಿಣೀಂ ।
ರಾಕ್ಷಸೇನ ವಿವಾಹೇನ ಸಂಪ್ರಾಪ್ತಾಂ ಮಧುಸೂದನಃ ॥ ೧೦೧ ॥

ತಸ್ಯಾಂ ಜಜ್ಞೇ ಚ ಪ್ರದ್ಯುಮ್ನೋ ಮದನಾಂಶಸ್ಸವೀರ್ಯವಾನ್ ।
ಜಹಾರ ಶಂಬರೋ ಯಂ ವೈ ಯೋ ಜಘಾನ ಚ ಶಂಬರಂ ॥ ೧೦೨ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ಷಡ್ವಿಂಶೋಽಧ್ಯಾಯಃ

೯೯-೧೦೨. ರುಕ್ಮಿಯು 'ಕೃಷ್ಣನನ್ನು ಕೊಲ್ಲದೆ ಕುಂಡಿನ ರಾಜಧಾನಿಯನ್ನು ಪ್ರವೇಶಿಸುವುದಿಲ್ಲ.' ಎಂದು ಪ್ರತಿಜ್ಞೆಯನ್ನು ಮಾಡಿ ಕೃಷ್ಣನನ್ನು ಕೊಲ್ಲಲು ಅವನ ಹಿಂದೆ ಓಡಿದನು. ಕೃಷ್ಣನು ರುಕ್ಮಿಯ ಚತುರಂಗ ಸೇನೆಯನ್ನು ಕೊಂದು ಅವನನ್ನು ಕೊಲ್ಲದೆ ನೆಲಕ್ಕೆ ಕೆಡಹಿದನು. ಕೃಷ್ಣನು ರುಕ್ಮಿಯನ್ನು ಜಯಿಸಿ ತನಗೆ ಸಿಕ್ಕಿದ ರುಕ್ಮಿಣಿಯನ್ನು ರಾಕ್ಷಸವಿವಾಹ ವಿಧಿಯಿಂದ ವಿವಾಹಮಾಡಿಕೊಂಡನು. ಅವಳಲ್ಲಿ ಮನ್ಮಥನ ಅಂಶದಿಂದ ಪರಾಕ್ರಮಶಾಲಿಯಾದ ಪ್ರದ್ಯುಮ್ನನು ಹುಟ್ಟಿದನು. ಶಂಬರನು ಪ್ರದ್ಯುಮ್ನನನ್ನು ಅಪಹರಿಸಿದನು. ಆ ಪ್ರದ್ಯುಮ್ನನೇ ಶಂಬರನನ್ನು ಕೊಂದನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ
ಇಪ್ಪತ್ತಾರನೆಯ ಅಧ್ಯಾಯವು
ಮುಗಿದುದು.

ಶ್ರೀಃ

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಸಪ್ತವಿಂಶೋಽಧ್ಯಾಯಃ

॥ ಮೈತ್ರೇಯಃ ॥

ಶಂಬರೇಣ ಹೃತೋ ವೀರಃ ಪ್ರದ್ಯುಮ್ನಃ ಸ ಕಥಂ ಮುನೇ ।
ಶಂಬರಸ್ಯ ಮಹಾವೀರ್ಯಃ ಪ್ರದ್ಯುಮ್ನೇನ ಕಥಂ ಹತಃ ॥ ೧ ॥

ಯಸ್ತೇನಾಪಹೃತಃ ಪೂರ್ವಂ ಸ ಕಥಂ ನಿಜಘಾನ ತಂ ।
ಏತದ್ವಿಸ್ತರತಶ್ಚ್ರೋತುಮಿಚ್ಛಾಮಿ ಸಕಲಂ ಗುರೋ ॥ ೨ ॥

॥ ಶ್ರೀ ಪರಾಶರಃ ॥

ಷಷ್ಠೇಽಹ್ನಿ ಜಾತಮಾತ್ರಂ ತು ಪ್ರದ್ಯುಮ್ನಂ ಸೂತಿಕಾಗೃಹಾತ್ ।
ಮಮೈಷ ಹಂತೇತಿ ಮುನೇ ಹೃತವಾನ್ ಕಾಲಶಂಬರಃ ॥ ೩ ॥

ಇಪ್ಪತ್ತೇಳನೆಯ ಅಧ್ಯಾಯವು.

೧-೨. ಮೈತ್ರೇಯನು ' ಗುರುಗಳೇ ! ಶೂರನಾದ ಪ್ರದ್ಯುಮ್ನನನ್ನು ಶಂಬರನು ಹೇಗೆ ಅಪಹರಿಸಿದನು ? ಆ ಶೂರನಾದ ಶಂಬರನನ್ನು ಪ್ರದ್ಯುಮ್ನನು ಹೇಗೆ ಕೊಂದನು ? ಇದನ್ನು ವಿಸ್ತಾರವಾಗಿ ಹೇಳಬೇಕು ' ಎಂದನು.

೩-೬. ಪರಾಶರರು ಹೇಳುವರು :—ಪ್ರದ್ಯುಮ್ನನು ಹುಟ್ಟಿದ ಆರು ದಿನದಲ್ಲಿಯೇ ಅವನೇ ತನ್ನನ್ನು ಕೊಲ್ಲುವನೆಂದು ತಿಳಿದಿದ್ದ ಶಂಬರನು ಹೆರಿಗೆಯ ಮನೆಯಲ್ಲಿಯೇ ಇದ್ದ ಬಾಲಕನನ್ನು ಅಪಹರಿಸಿ ಅನೇಕ ಜಲಜಂತುಗಳಿಂದ ತುಂಬಿ ದೊಡ್ಡ

ಹತ್ವಾ ಚಿಕ್ಷೇಪ ಚೈವೈನಂ ಗ್ರಾಹೋಽಗ್ರೇ ಲವಣಾರ್ಣವೇ ।
ಕಲ್ಲೋಲಜನಿತಾವರ್ತೇ ಸುಘೋರೇ ಮಕರಾಲಯೇ ॥ ೪ ॥

ಪಾತಿತಂ ತತ್ರ ಚೈವೈಕೋ ಮತ್ಸ್ಯೋ ಜಗ್ರಾಹ ಬಾಲಕಂ ।
ನ ಮಮಾರ ಚ ತಸ್ಯಾಪಿ ಜಠರಾಗ್ನಿಪ್ರದೀಪಿತಃ ॥ ೫ ॥

ಮತ್ಸ್ಯಬಂಧೈಶ್ಚ ಮತ್ಸ್ಯೋಽಸೌ ಮತ್ಸ್ಯೈರನ್ಯೈಸ್ಸಹ ದ್ವಿಜ ।
ಘಾತಿತೋಽಸುರವರ್ಯಾಯ ಶಂಬರಾಯ ನಿವೇದಿತಃ ॥ ೬ ॥

ತಸ್ಯ ಮಾಯಾವತೀ ನಾಮ ಪತ್ನೀ ಸರ್ವಗೃಹೇಶ್ವರೀ ।
ಕಾರಯಾಮಾಸ ಸೂದಾನಾಮಾಧಿಪತ್ಯಮನಿಂದಿತಾ ॥ ೭ ॥

ದಾರಿತೇ ಮತ್ಸ್ಯಜಠರೇ ಸಾ ದದರ್ಶಾತಿಶೋಭನಂ ।
ಕುಮಾರಂ ಮನ್ಮಥತರೋರ್ದಗ್ಧಸ್ಯ ಪ್ರಥಮಾಂಕುರಂ ॥ ೮ ॥

ಕೋಽಯಂ ಕಥಮಯಂ ಮತ್ಸ್ಯಜಠರೇ ಪ್ರವಿವೇಶಿತಃ ।
ಇತ್ಯೇವಂ ಕೌತುಕಾವಿಷ್ಟಾಂ ತನ್ವೀಂ ಪ್ರಾಹಾಥ ನಾರದಃ ॥ ೯ ॥

ಅಲೆಗಳೂ ಸುಳಿಗಳೂ ಉಳ್ಳ ಸಮುದ್ರದೊಳಗೆ ಆ ಮಗುವನ್ನು ಹಾಕಿದನು. ನೀರಿನೊಳಗೆ ಬಿದ್ದ ಮಗುವನ್ನು ಒಂದು ಮೀನು ನುಂಗಿತು. ಮಗುವು ಮೀನಿನ ಜಠರಾಗ್ನಿಯ ಶಾಖದಿಂದ ಸಾಯಲಿಲ್ಲ. ಮೀನನ್ನು ಹಿಡಿಯುವವರು ಇತರ ಮೀನುಗಳೊಡನೆ ಆ ಮೀನನ್ನೂ ಹಿಡಿದು ಶಂಬರಾಸುರನಿಗೆ ತಂದುಕೊಟ್ಟರು.

೭-೯. ಆ ಶಂಬರಾಸುರನಿಗೆ ಮಾಯಾವತಿಯೆಂಬ ನಿರ್ದುಷ್ಟಳಾದ ಪತ್ನಿಯಿದ್ದಳು. ಅವಳು ಅವನ ಮನೆಗೆಲ್ಲ ಸ್ವಾಮಿನಿಯಾಗಿ ಅಡಿಗೆಯವರಿಗೂ ಅಧಿಪತಿಯಾಗಿದ್ದಳು. ಮೀನಿನ ಹೊಟ್ಟೆಯನ್ನು ಸೀಳಿದಾಗ ಅವಳು ಸುಟ್ಟುಹೋದ ಮನ್ಮಥನೆಂಬ ವೃಕ್ಷದ ಮೊದಲನೆಯ ಮೊಳಕೆಯಂತೆ ಸುಂದರನಾದ ಬಾಲಕನನ್ನು ಕಂಡಳು. 'ಇವನಾರು ? ಮೀನಿನ ಹೊಟ್ಟೆಯೊಳಕ್ಕೆ ಹೇಗೆ ಸೇರಿದನು ?' ಎಂದು ಕಾತುಕಪಡುತ್ತಿರುವ ಅವಳಿಗೆ ನಾರದನು ಬಂದು ಹೇಳಿದನು. ಎಂತೆಂದರೆ :—

ಅಯಂ ಸಮಸ್ತಜಗತಃ ಸ್ಥಿತಿಸಂಹಾರಕಾರಿಣಃ ।
ಶಂಬರೇಣ ಹೃತೋ ವಿಷ್ಣೋರಸ್ತನಯಸ್ಸೂತಿಕಾಗೃಹಾತ್ ॥ ೧೦ ॥

ಕ್ಷಿಪ್ತಸ್ಸಮುದ್ರೇ ಮತ್ಸ್ಯೇನ ನಿಗೀರ್ಣಸ್ತೇ ಗೃಹಂ ಗತಃ ।
ನರರತ್ನಮಿದಂ ಸುಭ್ರು ವಿಸ್ರಬ್ಧಾ ಪರಿಪಾಲಯ ॥ ೧೧ ॥

॥ ಶ್ರೀ ಪರಾಶರಃ ॥

ನಾರದೇನೈವಮುಕ್ತಾ ಸಾ ಪಾಲಯಾಮಾಸ ತಂ ಶಿಶುಂ ।
ಬಾಲ್ಯಾದೇವಾತಿರಾಗೇಣ ರೂಪಾತಿಶಯಮೋಹಿತಾ ॥ ೧೨ ॥

ಸ ಯದಾ ಯೌವನಾಭೋಗಭೂಷಿತೋಽಭೂನ್ಮಹಾಮತೇ ।
ಸಾಭಿಲಾಷಾ ತದಾ ಸಾಪಿ ಬಭೂವ ಗಜಗಾಮಿನೀ ॥ ೧೩ ॥

ಮಾಯಾವತೀ ದದೌ ತಸ್ಮೈ ಮಾಯಾಸ್ಸರ್ವಾ ಮಹಾಮುನೇ ।
ಪ್ರದ್ಯುಮ್ನಾಯಾನುರಾಗಾಂಧಾ ತನ್ಮಸ್ತಹೃದಯೇಕ್ಷಣಾ ॥ ೧೪ ॥

೧೦-೧೨. ಇವನು ಸಮಸ್ತ ಜಗತ್ತನ್ನೂ ರಕ್ಷಿಸಿ ಸಂಹರಿಸುವ ವಿಷ್ಣುವಿನ ಮಗನು. ಇವನನ್ನು ಹೆರಿಗೆಯ ಮನೆಯಿಂದ ಶಂಬರನು ಅಪಹರಿಸಿ ತಂದು ಸಮುದ್ರಕ್ಕೆ ಹಾಕಿದನು. ಅಲ್ಲಿ ಮೀನು ನುಂಗಿತು. ಆ ಮೀನು ನಿನ್ನ ಮನೆಗೆ ಬಂದು ನಿನಗೆ ಈ ಬಾಲಕನು ಸಿಕ್ಕಿರುವನು. ಎಲೈ ಸುಂದರಿಯೇ ! ಇವನು ಪುರುಷ ಶ್ರೇಷ್ಠನು. ನಂಬಿಕೆಯನ್ನಿಟ್ಟು ಇವನನ್ನು ಕಾಪಾಡು ಹೀಗೆಂದು ನಾರದನು ಹೇಳುತ್ತಲು ಅವಳು ಆ ಮಗುವನ್ನು ಅವರ ರೂಪಾತಿಶಯದಿಂದ ಮೋಹಿಸಿ ಬಾಲ್ಯ ದಿಂದಲೇ ಅತ್ಯಂತ ಪ್ರೀತಿಯಿಂದ ಕಾಪಾಡಿದಳು.

೧೩-೧೪. ಮಹಾಬುದ್ಧಿಶಾಲಿಯಾದ ಮೈತ್ರೇಯನೇ ! ಕೇಳು. ಅವನು ಯಾವಾಗ ಯೌವನದಿಂದ ಅಲಂಕೃತನಾದನೋ ಆಗ ಆ ಮಾಯಾವತಿಯು ಅವನಲ್ಲಿ ಕಾಮದಿಂದುಂಟಾದ ಪ್ರೀತಿಯುಳ್ಳವಳಾಗಿ ತನಗೆ ತಿಳಿದಿದ್ದ ಮಾಯೆಯನ್ನೆಲ್ಲ ಅವನಿಗೂ ಹೇಳಿಕೊಟ್ಟಳು.

ಪ್ರಸಜ್ಜಂತೀಂ ತು ತಾಂ ಪ್ರಾಹ ಸ ಕಾಸ್ಮಿಗಃ ತಮಲೀಕ್ಷಣಾ
ಮಾತೃತ್ವಮುಪಹಾಯಾದ್ಯ ಕಮೇವಂ ವರ್ತಸೇನ್ಯಥಾ ॥೮೫॥

ಸಾ ತಸ್ಮೈ ಕಥಯಾಮಾಸ ನ ಪುತ್ರಸ್ತ್ವಂ ಮಮೇತಿ ವೈ ।
ತನಯಂ ತ್ವಾಮಯಂ ವಿಷ್ಣೋರ್ಹೃತವಾನ್ ಕಾಲಶಂಬರಃ ॥ ೮೬ ॥

ಕ್ಷಿಪ್ತಸ್ಯಮುದ್ರೇ ಮತ್ಸ್ಯಸ್ಯ ಸಂಪ್ರಾಪ್ತೋ ಜಠರಾನ್ಮಯಾ ।
ಸಾ ಹಿ ರೋದಿತಿ ತೇ ಮಾತಾ ಕಾಂತಾದ್ಯಾಪ್ಯತಿನಿತ್ಯಶಃ ॥ ೮೭ ॥

॥ ಶ್ರೀ ಪರಾಶರಃ ॥

ಇತ್ಯುಕ್ತೇ ಶಂಬರಂ ಯುದ್ಧೇ ಪ್ರದ್ಯುಮ್ನಃ ಸ ಸಮಾಹ್ವಯತ್ ।
ಕ್ರೋಧಾಕುಲೀಕೃತಮನಾ ಯುಯುಧೇ ಚ ಮಹಾಬಲಃ ॥ ೮೮ ॥

೮೫–೮೭. ಕಾಮವ್ಯಾಪಾರಕ್ಕೆ ಸಿದ್ಧಳಾಗುತ್ತಿದ್ದ ಅವಳನ್ನು ನೋಡಿ ಕೃಷ್ಣ ಪುತ್ರನು ನೀನು ತಾಯಿತನವನ್ನು ಬಿಟ್ಟು ಹೀಗೆ ಬೇರೆ ವಿಧದಲ್ಲಿ ನಡೆಯಲು ಕಾರಣವೇನೆಂದು ಕೇಳಿದನು. ಆಗ ಅವಳು " ನೀನು ನನ್ನ ಮಗನಲ್ಲ. ಕೃಷ್ಣನ ಮಗನು. ಯಮಸ್ವರೂಪನಾದ ಶಂಬರನು ನಿನ್ನನ್ನು ಅಪಹರಿಸಿ ಸಮುದ್ರದಲ್ಲಿ ಹಾಕಿದನು. ಮೀನಿನ ಹೊಟ್ಟೆಯಿಂದ ನಾನು ನಿನ್ನನ್ನು ಪಡೆದೆನು. ಎಲೈ ಪ್ರಿಯನೇ ಈಗಲೂ ನಿನ್ನಲ್ಲಿ ವಾತ್ಸಲ್ಯವುಳ್ಳ ತಾಯಿಯು ನಿನ್ನನ್ನು ನೆನೆಸಿಕೊಂಡು ದುಃಖಿಸುತ್ತಿರುವಳು. " ಎಂದು ಹೇಳಿದಳು.

೮೮–೯೦. ಈ ಮಾತನ್ನು ಕೇಳಿ ಪ್ರದ್ಯುಮ್ನನು ಶಂಬರನನ್ನು ಯುದ್ಧಕ್ಕೆ ಕರೆದನು. ಶಂಬರನು ಕೋಪದಿಂದ ಅವನೊಡನೆ ಯುದ್ಧಮಾಡಿದನು. ಯದು ವಂಶದ ಪ್ರದ್ಯುಮ್ನನು ಅವನ ಸೈನ್ಯವನ್ನೆಲ್ಲ ನಾಶಮಾಡಿ ತಿಳು ಮಾಯೆಗಳನ್ನು

ಹತ್ವಾ ಸೈನ್ಯಮಶೇಷಂ ತು ತಸ್ಯ ದೈತಸ್ಯ ಯಾದವಃ ।
ಸಪ್ತ ಮಾಯಾಂ ವ್ಯತಿಕ್ರಮ್ಯ ಮಾಯಾಂ ಪ್ರಯುಯುಜೇಽಸ್ಯಮೀಂ ॥೧೯॥

ತಯಾ ಜಘಾನೆ ತಂ ದೈತ್ಯಂ ಮಾಯಯಾ ಕಾಲಶಂಬರಂ ।
ಉತ್ಪತ್ಯ ಚ ತಯಾ ಸಾರ್ಧಮಾಜಗಾಮ ಪಿತುಃಪುರಂ ॥ ೨೦ ॥

ಅಂತಃ ಪುರೇ ನಿಪತಿತಂ ಮಾಯಾವತ್ಯಾ ಸಮನ್ವಿತಂ ।
ತಂ ದೃಷ್ಟ್ವಾ ಕೃಷ್ಣಸಂಕಲ್ಪಾ ಬಭೂವುಃ ಕೃಷ್ಣಯೋಷಿತಃ ॥ ೨೧ ॥

ರುಕ್ಮಿಣೀ ಸಾಽಭವತ್ಪ್ರೀವಾ ಸಾಸ್ರದೃಷ್ಟಿರನಿಂದಿತಾ ।
ಧನ್ಯಾಯಾಃ ಖಲ್ವಯಂ ಪುತ್ರೋ ವರ್ತತೇ ನವಯೌವನೇ ॥ ೨೨ ॥

ಅಸ್ಮಿನ್ ವಯಸಿ ಪುತ್ರೋ ಮೇ ಪ್ರದ್ಯುಮ್ನೋ ಯದಿ ಜೀವತಿ ।
ಸೌಭಾಗ್ಯಾ ಜನನೀ ವತ್ಸ ಸಾ ತ್ವಯಾ ಕಾ ವಿಭೂಷಿತಾ ॥ ೨೩ ॥

ಅಥವಾ ಯೋದೃಶಸ್ನೇಹೋ ಮಮ ಯಾದೃಗ್ವಪುಸ್ತವ ।
ಹರೇರಪತ್ಯಂ ಸುವ್ಯಕ್ತಂ ಭವಾನ್ ವತ್ಸ ಭವಿಷ್ಯತಿ ॥ ೨೪ ॥

ಮಿಂಚಿಸಿದ ಎಂಟನೆಯ ಮಾಯೆಯನ್ನು ಅವನಲ್ಲಿ ಪ್ರಯೋಗಿಸಿ ದೈತ್ಯನಾದ ಕಾಲ ಶಂಬರನನ್ನು ಕೊಂದು ಮಾಯಾವತಿಯೊಡನೆ ಆಕಾಶಮಾರ್ಗವಾಗಿ ತಂದೆಯ ಪಟ್ಟಣವಾದ ದ್ವಾರಕಾವತಿಗೆ ಬಂದನು.

೨೧–೨೪. ಮಾಯಾವತಿಯೊಡನೆ ಅಃಪುರಕ್ಕೆ ಬಂದಿಳಿದ ಅವನನ್ನು ಕಂಡು ಕೃಷ್ಣನ ಪತ್ನಿಯರು ಕೃಷ್ಣನೆಂದೇ ತಿಳಿದುಕೊಂಡರು. ರುಕ್ಮಿಣೀದೇವಿಯು ನವ ಯೌವನದೊಡನೆ ಕೂಡಿದ ಅವನನ್ನು ನೋಡಿ ಪ್ರೀತಿಯಿಂದ ಆನಂದಬಾಷ್ಪಉಳ್ಳವ ಳಾದಳು. ಮತ್ತು ನನ್ನ ಮಗನಾದ ಪ್ರದ್ಯುಮ್ನನು ಬದುಕಿದ್ದರೆ ಇವೇ ವಯಸ್ಸಿನವ ನಾಗುತ್ತಿದ್ದನು. ಎಂದು ಎಲೈ ವತ್ಸನೇ! ನಿನ್ನನ್ನು ನೋಡುತ್ತಿರುವ ನಿನ್ನ ತಾಯಿಯೇ ಭಾಗ್ಯವಂತೆಳು. ನಿನ್ನನ್ನು ನೋಡಿ ನನಗೇಕೆ ಇಷ್ಟು ಪ್ರೀತಿಯುಂಟಾಗ ಬೇಕು. ನೀನು ಕೃಷ್ಣನ ಮಗನೇ ಆಗಿರಬೇಕೆಂದು ಹೇಳಿದಳು.

॥ ಶ್ರೀ ಪರಾಶರಃ ॥

ಏತಸ್ಮಿನ್ನಂತರೇ ಪ್ರಾಪ್ತೇ ಸಹ ಕೃಷ್ಣೇನ ನಾರದಃ ।
ಅಂತಃಪುರ ಚರಾಂ ದೇವೀಂ ರುಕ್ಮಿಣೀಂ ಪ್ರಾಹ ಹರ್ಷಯನ್ ॥ ೫೫ ॥

ಏಷ ತೇ ತನಯಸ್ಸುಭ್ರು ಹೃತ್ವಾ ಶಂಬರಮಾಗತಃ ।
ಹೃತೋ ಯೇನಾಽಭವದ್ಬಾಲೋ ಭವತ್ಯಾಸ್ಸೂತಿಕಾಗೃಹಾತ್ ॥ ೫೬ ॥

ಇಯಂ ಮಾಯಾವತೀ ಭಾರ್ಯಾ ತನಯಸ್ಯಾಸ್ಯ ತೇ ಸತಿ ।
ಶಂಬರಸ್ಯ ನ ಭಾರ್ಯೇಯಂ ಶ್ರೂಯತಾಮತ್ರ ಕಾರಣಂ ॥ ೫೭ ॥

ಮನ್ಮಥೇ ತು ಗತೇ ನಾಶಂ ತದುದ್ಭವಪರಾಯಣಾ ।
ಶಂಬರಂ ಮೋಹಯಾಮಾಸ ಮಾಯಾರೂಪೇಣ ರೂಪಿಣೀ ॥ ೫೮ ॥

ವಿಹಾರಾದ್ಯುಪಭೋಗೇಷು ರೂಪಂ ಮಾಯಾವಮಯಂ ಶುಭಂ ।
ದರ್ಶಯಾಮಾಸ ದೈತ್ಯಸ್ಯ ತಸ್ಯೇಯಂ ಮದಿರೇಕ್ಷಣಾ ॥ ೫೯ ॥

೫೫-೫೯. ಆ ಸಮಯಕ್ಕೆ ಸರಿಯಾಗಿ ನಾರದನು ಕೃಷ್ಣನೊಡನೆ ಅಲ್ಲಿಗೆ ಬಂದು ಅತಃಪುರದಲ್ಲಿಯೇ ಸಂಚರಿಸುವ ರುಕ್ಮಿಣೀದೇವಿಗೆ ಸಂತೋಷವನ್ನುಂಟು ಮಾಡುತ್ತ " ಓ ರುಕ್ಮಿಣೀದೇವಿಯೇ ! ಇವನೇ ನಿನ್ನ ಮಗನಾದ ಪ್ರದ್ಯುಮ್ನನು. ನಿನ್ನ ಪ್ರಸವಗೃಹದಲ್ಲಿ ಬಾಲಕನಾಗಿದ್ದ ಇವನನ್ನು ಶಂಬರಾಸುರನು ಅಪಹರಿಸಿದ್ದನು. ಶಂಬರಾಸುರನನ್ನು ಕೊಂದು ಬಂದಿರುವನು. ಇವಳು ಮಾಯಾವತಿಯು. ನಿನ್ನ ಮಗನ ಹೆಂಡತಿಯು ಇವಳು ಶಂಬರನ ಪತ್ನಿಯಲ್ಲ. ಇದಕ್ಕೆ ಕಾರಣವನ್ನು ಹೇಳುವೆನು ಕೇಳು. ಮನ್ಮಥನು ಶಿವನ ನೇತ್ರಾಗ್ನಿಯಿಂದ ಸುಟ್ಟುಹೋದ ಮೇಲೆ ಆ ಮನ್ಮಥನು ಪುನಃ ಹುಟ್ಟುವನೆಂಬ ನಿರೀಕ್ಷಣೆಯಿಂದ ರತಿಯು ಮಾಯಾವಿದ್ಯೆಯಿಂದ ಮಾಯಾವತಿಯಾಗಿ ಶಂಬರನಿಗೆ ಮೋಹವನ್ನುಂಟುಮಾಡಿದಳು. ಈ ಮಾಯಾವತಿಯು ಶಂಬರದೈತ್ಯನಿಗೆ ಅವನ ವಿಹಾರಾದ್ಯುಪಭೋಗಗಳಿಗೆ ಮಾಯಾ

ಕಾಮೋಽತೀರ್ಣಃ ಪುತ್ರಸ್ತೇ ತಸ್ಯೇಯಂ ದಯಿತಾ ರತಿಃ ।
ವಿಶಂಕಾ ನಾತ್ರ ಕರ್ತವ್ಯಾ ಸ್ನುಷೇಯಂ ತವ ಶೋಭನೇ ॥ ೩೦ ॥

ತತೋ ಹರ್ಷಸಮಾವಿಷ್ಟೌ ರುಕ್ಮಿಣೀಕೇಶವೌ ತದಾ ।
ನಗರೀ ಚ ಸಮುಸ್ತಾ ಸಾ ಸಾಧುಸಾಧ್ವಿತ್ಯಭಾಷತ ॥ ೩೧ ॥

ಚಿರಂ ನಷ್ಟೇನ ಪುತ್ರೇಣ ಸಂಗತಾಂ ಪ್ರೇಕ್ಷ್ಯ ರುಕ್ಮಿಣೀಂ ।
ಅವಾಪ ವಿಸ್ಮಯಂ ಸರ್ವೋ ದ್ವಾರವತ್ಯಾಂ ತದಾಜನಃ ॥ ೩೨ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ಸಪ್ತವಿಂಶೋಽಧ್ಯಾಯಃ

ರೂಪವನ್ನು ತೋರಿಸುತ್ತಿದ್ದಳು. ಕಾಮನು ನಿನ್ನ ಮಗನಾಗಿ ಹುಟ್ಟಿದನು. ಅವನ ಪತ್ನಿಯಾದ ರತಿಯೇ ಇವಳು. ಸಂದೇಹಪಡಬೇಡ. ಇವಳು ನಿನ್ನ ಸೊಸೆಯು." ಎಂದು ಹೇಳಿದನು.

೩೧–೩೨. ಇದನ್ನುಕೇಳಿ ಕೃಷ್ಣ ರುಕ್ಮಿಣಿಯರು ಸಂತೋಷದಿಂದ ಕೂಡಿದರು. ಬಹಳ ದಿನಗಳ ಹಿಂದೆ ಕಳೆದು ಹೋದ ಮಗನನ್ನು ಪಡೆದ ರುಕ್ಮಿಣಿಯನ್ನು ನೋಡಿ ದ್ವಾರಕಾಪಟ್ಟಣದ ಜನರೆಲ್ಲರೂ ಆಶ್ಚರ್ಯಪಡುತ್ತ ಜಯಧ್ವನಿಯನ್ನು ಮಾಡಿದರು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ
ಇಪ್ಪತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಅಷ್ಟಾವಿಂಶೋಽಧ್ಯಾಯಃ

॥ ಶ್ರೀ ಪರಾಶರಃ ॥

ಚಾರುಧೇಷ್ಣಂ ಸುಧೇಷ್ಣಂ ಚ ಚಾರುದೇಹಂ ಚ ವೀರ್ಯವಾನ್ ।
ಸುಷೇಣಂ ಚಾರುಗುಪ್ತಂ ಚ ಭದ್ರಚಾರುಂ ತಥಾಪರಂ ॥ ೧ ॥

ಚಾರುವಿಂದಂ ಸುಚಾರುಂ ಚ ಚಾರುಂ ಚ ಬಲಿನಾಂ ವರಂ ।
ರುಕ್ಮಿಣ್ಯಜನಯತ್ಪುತ್ರಾನ್ ಕನ್ಯಾಂ ಚಾರುಮತೀಂ ತಥಾ ॥ ೨ ॥

ಅನ್ಯಾಶ್ಚ ಭಾರ್ಯಾಃ ಕೃಷ್ಣಸ್ಯ ಬಭೂವುಸ್ಸಪ್ತ ಶೋಭನಾಃ ।
ಕಾಳಿಂದೀ ಮಿತ್ರವಿಂದಾ ಚ ಸತ್ಯಾ ಚಾಗ್ನಜಿತೀ ತಥಾ ॥ ೩ ॥

ದೇವೀ ಜಾಂಬವತೀ ಚಾಪಿ ರೋಹಿಣೀ ಕಾಮರೂಪಿಣೀ ।
ಮದ್ರರಾಜಸುತಾ ಚಾನ್ಯಾ ಸುಶೀಲಾ ಶೀಲಮಂಡನಾ ॥ ೪ ॥

ಸತ್ರಾಜಿತೀ ಸತ್ಯಭಾಮಾ ಲಕ್ಷ್ಮಣಾ ಚಾರುಹಾಸಿನೀ ।
ಷೋಡಶಾಸನ್ ಸಹಸ್ರಾಣಿ ಸ್ತ್ರೀಣಾಮನ್ಯಾನಿ ಚಕ್ರಿಣಃ ॥ ೫ ॥

ಇಪ್ಪತ್ತೆಂಟನೆಯ ಅಧ್ಯಾಯವು

೧–೨. ರುಕ್ಮಿಣಿಗೆ ಪ್ರದ್ಯುಮ್ನನಲ್ಲದೆ ಚಾರುದೇಷ್ಣ, ಸುದೇಷ್ಣ, ಚಾರುದೇಹ, ಸುಷೇಣ, ಚಾರುಗುಪ್ತ, ಭದ್ರಚಾರು, ಚಾರುವಿಂದ, ಸುಚಾರು, ಚಾರು ಎಂಬ ಗಂಡು ಮಕ್ಕಳೂ ಚಾರುಮತಿಯೆಂಬ ಕನ್ಯೆಯೂ ಇದ್ದರು.

೩–೫. ಕೃಷ್ಣನಿಗೆ ರುಕ್ಮಿಣಿಯಲ್ಲದೆ ಕಾಳಿಂದಿ (ಮಿತ್ರವಿಂದೆ) ಸತ್ಯೆ, ಅಗ್ನಜಿತಿ, ಜಾಂಬವತಿ ಅಥವಾ (ರೋಹಿಣಿ) ಸುಶೀಲೆ, ಸತ್ಯಭಾಮೆ, ಲಕ್ಷ್ಮಣಾ ಎಂಬ ಏಳು ಜನ ಮುಖ್ಯ ಪತ್ನಿಯರಿದ್ದರು. ಇದಲ್ಲದೆ ಹದಿನಾರು ಸಾವಿರ ಸ್ತ್ರೀಯರು ಪತ್ನಿಯರಾಗಿದ್ದರು.

ಪ್ರದ್ಯುಮ್ನೋಽಪಿ ಮಹಾವೀರ್ಯೋ ರುಕ್ಮಿಣಸ್ತನಯಾಂ ಶುಭಾಂ ।
ಸ್ವಯಂವರೇ ತಾಂ ಜಗ್ರಾಹ ಸಾ ಚ ತಂ ತನಯಂ ಹರೇಃ ॥ ೬ ॥

ತಸ್ಯಾಮುತ್ಪಾದಯಾಮಾಸ ಮಹಾಬಲಪರಾಕ್ರಮಃ ।
ಅನಿರುದ್ಧೋ ರಣೇ ರುದ್ಧೋ ವೀರ್ಯೋದಧಿರರಿಂದಮಃ ॥ ೭ ॥

ತಸ್ಮಾಪಿ ರುಕ್ಮಿಣಃ ಪೌತ್ರೀಂ ವರಯಾಮಾಸ ಕೇಶವಃ ।
ದೌಹಿತ್ರಾಯ ದದೌ ರುಕ್ಮೀ ತಾಂ ಸ್ಪರ್ಧನ್ನಪಿ ಚಕ್ರಿಣಾ ॥ ೮ ॥

ತಸ್ಯಾ ವಿವಾಹೇ ರಾಮಾದ್ಯಾ ಯಾದವಾ ಹರಿಣಾ ಸಹ ।
ಕಲ್ಯಾಣಾರ್ಥಂ ತತಸ್ಸರ್ವೇ ಯಯೂ ಚಾನ್ಯೇ ಭೂಭೃತಸ್ತಥಾ ॥
ರುಕ್ಮಿಣೋ ನಗರಂ ಜಗ್ಮುರ್ಭಾಮ್ಯಾ ಭೋಜಕಟಂ ದ್ವಿಜ ॥ ೯ ॥

ವಿವಾಹೇ ತತ್ರ ನಿರ್ವೃತ್ತೇ ಪ್ರದ್ಯುಮ್ನಸ್ಯ ಮಹಾತ್ಮನಃ ।
ಕಳಿಂಗರಾಜಪ್ರಮುಖಾ ರುಕ್ಮಿಣಂ ವಾಕ್ಯಮಬ್ರುವನ್ ॥ ೧೦ ॥

೬-೮. ಶೂರನಾದ ಪ್ರದ್ಯುಮ್ನನು ಸೋದರಮಾವನಾದ ರುಕ್ಮಿಯ ಮಗಳನ್ನು ಸ್ವಯಂವರದಲ್ಲಿ ವರಿಸಿದನು. ಅವಳೂ ಕೃಷ್ಣನ ಪುತ್ರನಾದ ಇವನನ್ನೇ ವರಿಸಿದಳು. ಪ್ರದ್ಯುಮ್ನನಿಗೆ ಅವಳಲ್ಲಿ ಮಹಾಬಲಪರಾಕ್ರಮದಿಂದ ಕೂಡಿದವನೂ ವಿದ್ಯಾಸಮುದ್ರನೂ ಆದ ಅನಿರುದ್ಧನೆಂಬ ಮಗನು ಹುಟ್ಟಿದನು. ಅವನಿಗೂ ಕೃಷ್ಣನು ರುಕ್ಮಿಯ ಮೊಮ್ಮಗಳನ್ನು ವಿವಾಹಾರ್ಥವಾಗಿ ಯಾಚಿಸಿದನು. ರುಕ್ಮಿಯು ಕೃಷ್ಣನಲ್ಲಿ ಸ್ಪರ್ಧೆ ಮಾಡುತ್ತಿದ್ದರೂ ದೌಹಿತ್ರನಿಗೆ ತನ್ನ ಮೊಮ್ಮಗಳನ್ನು ಕೊಟ್ಟು ಲಗ್ನ ಮಾಡಿದನು.

೯-೧೨. ಮೈತ್ರೇಯನೇ ಕೇಳು. ಅವಳ ವಿವಾಹಕಾಲದಲ್ಲಿ ಬಲರಾಮನೇ ಮುಂತಾದ ಯಾದವರೂ ಇತರ ರಾಜರೂ ಕೃಷ್ಣನೊಡನೆ ರುಕ್ಮಿಯ ರಾಜಧಾನಿಯಾದ ಭೋಜಕಟವೆಂಬ ಪಟ್ಟಣಕ್ಕೆ ಹೋದರು. ಅನಿರುದ್ಧನ ವಿವಾಹವಾದ ಮೇಲೆ

ಅನಕ್ಷಜ್ಞೋ ಹಲೀ ದ್ಯೂತೇ ತಥಾಸ್ಯ ವ್ಯಸನಂ ಮಹತ್ ।
ತಜ್ಜ್ಞಯಾಮೋ ಬಲಂ ಕಸ್ಮಾದ್ಯೂತೇನೈನಂ ಮಹಾಬಲಂ ॥ ೧೧ ॥

॥ ಶ್ರೀ ಪರಾಶರಃ ॥

ತಥೇತಿ ತಾನಾಹ ನೃಪಾನ್ ರುಕ್ಮೀ ಬಲಮದಾನ್ವಿತಃ ।
ಸಭಾಯಾಂ ಸಹ ರಾಮೇಣ ಚಕ್ರೇ ದ್ಯೂತಂ ಚ ತೈ ತಥಾ ॥ ೧೨ ॥

ಸಹಸ್ರಮೇಕಂ ನಿಷ್ಕಾಣಾಂ ರುಕ್ಮಿಣಾ ವಿಜಿತೋ ಬಲಃ ।
ದ್ವಿತೀಯೇಽಪಿ ಪಣೇ ಚಾನ್ಯತ್ಸಹಸ್ರಂ ರುಕ್ಮಿಣಾ ಜಿತಃ ॥ ೧೩ ॥

ತತೋ ದಶಸಹಸ್ರಾಣಿ ನಿಷ್ಕಾಣಾಂ ಪಣಮಾದದೇ ।
ಬಲಭದ್ರೋಽಜಯತ್ತಾನಿ ರುಕ್ಮೀ ದ್ಯೂತವಿದಾಂ ವರಃ ॥ ೧೪ ॥

ತತೋ ಜಹಾಸ ಸ್ವನವತ್ಕಳಿಂಗಾಧಿಪತಿರ್ದ್ವಿಜ ।
ದಂತಾನ್ದಿದರ್ಶಯನ್ಮೂಢೋ ರುಕ್ಮೀ ಚಾಹ ಮದೋದ್ಧತಃ ॥ ೧೫ ॥

ಕಳಿಂಗರಾಜನೇ ಮೊದಲಾದವರು ರುಕ್ಮಿಯನ್ನು ಕುರಿತು " ಬಲರಾಮನು ಜೂಜಿನಲ್ಲಿ ಪಗಡೆಯ ಆಟದ ರಹಸ್ಯವನ್ನು ತಿಳಿದವನಲ್ಲ. ಆದರೆ ಆ ಆಟದಲ್ಲಿ ಆಸಕ್ತಿಯು ಹೆಚ್ಚಾಗಿರುವುದು. ಆದುದರಿಂದ ಮಹಾಬಲಶಾಲಿಯಾದ ಅವನನ್ನು ಜೂಜಿನಲ್ಲಿ ಜಯಿಸೋಣ " ಎಂದು ಹೇಳಿದರು. ರುಕ್ಮಿಯು ಬಲಗರ್ವದಿಂದ ಹಾಗೆಯೇ ಆಗಲೆಂದು ಒಪ್ಪಿ ಸಭೆಯಲ್ಲಿ ಬಲರಾಮನೊಡನೆ ಜೂಜನ್ನಾಡಿದನು.

೧೩-೧೬. ಮೊದಲನೆಯ ಆಟದಲ್ಲಿ ಬಲರಾಮನು ಸಾವಿರ ಚಿನ್ನದ ನಾಣ್ಯಗಳನ್ನು ಸೋತನು. ಎರಡನೆಯ ಆಟದಲ್ಲಿಯೂ ಮತ್ತೊಂದು ಸಾವಿರವನ್ನು ಸೋತನು ಆ ಮೇಲೆ ಬಲರಾಮನು ಹತ್ತು ಸಾವಿರ ನಾಣ್ಯಗಳನ್ನು ಪಣವಾಗಿಟ್ಟನು. ಜೂಜಿನಲ್ಲಿ ಬುದ್ಧಿವಂತನಾದ ರುಕ್ಮಿಯು ಅದನ್ನೂ ಗೆದ್ದುಕೊಂಡನು. ಆಗ

ಅವಿದ್ಯೋಽಯಂ ಮಯಾ ದ್ಯೂತೇ ಬಲಭದ್ರಃ ಪರಾಜಿತಃ ।
ಮುಧೈವಾಕ್ಷಾವಲೇಪಾಂಧೋ ಯೋ ಮಮೇನೇಕ್ಷಕೋವಿದಾನ್ ॥ ೧೬ ॥

ದೃಷ್ಟ್ವಾ ಕಳಿಂಗರಾಜಾನಂ ಪ್ರಕಾಶದಶನಾನನಂ ।
ರುಕ್ಮಿಣಂ ಚಾಪಿ ದುರ್ವಾಕ್ಯಂ ಕೋಪಂ ಚಕ್ರೇ ಹಲಾಯುಧಃ ॥ ೧೭ ॥

ತತಃ ಕೋಪಪರೀತಾತ್ಮಾ ನಿಷ್ಕಕೋಟಿಂ ಸಮಾದದೇ ।
ಗ್ಲಹಂ ಜಗ್ರಾಹ ರುಕ್ಮೀ ಚ ತದರ್ಥೇ ಕ್ಷಾನಪಾತಯತ್ ॥ ೧೮ ॥

ಅಜಯದ್ಬಲದೇವಸ್ತಂ ಪ್ರಾಹೂಚ್ಚೈರ್ವಿಜಿತಂ ಮಯಾ ।
ಮಯೇತಿ ರುಕ್ಮೀ ಪ್ರಾಹೋಚ್ಚೈರಳೀಕೋಕ್ತೇರಲಂ ಬಲ ॥ ೧೯ ॥

ಕಳಿಂಗರಾಜನು ತನ್ನ ಹಲ್ಲುಗಳನ್ನು ತೋರಿಸುತ್ತ ಗಟ್ಟಿಯಾದ ಧ್ವನಿಯಿಂದ ನಕ್ಕನು. ರುಕ್ಮಿಯು ಗರ್ವದಿಂದ ಮೆದಿಸಿ ತನಗೆ ಪಗಡೆಯ ಆಟವು ಬರುವುದೆಂಬ ವ್ಯರ್ಥವಾದ ಗರ್ವದಿಂದ ಮುಂದುಗಾಣದೆ ಜೂಜಿನಲ್ಲಿ ಜ್ಞಾನಹೀನನಾದ ಬಲರಾಮನನ್ನು ನಾನು ಜಯಿಸಿದೆನೆಂದು ಹೇಳಿಕೊಂಡನು ಮತ್ತು ಪಗಡೆಯ ಆಟದಲ್ಲಿ ಬುದ್ಧಿವಂತರಾದವರನ್ನೂ ಅಪಮಾನಪಡಿಸಿದನು.

೧೭-೨೦. ಕಳಿಂಗರಾಜನು ಹಲ್ಲುಬಿಟ್ಟು ನಕ್ಕುದನ್ನೂ ರುಕ್ಮಿಯು ಕೆಟ್ಟ ಮಾತನಾಡಿದುದನ್ನೂ ಕಂಡು ಬಲರಾಮನು ಕೋಪಗೊಂಡನು. ಆ ಕೋಪದಿಂದ ಕೋಟಿ ಸುವರ್ಣನಾಣ್ಯಗಳನ್ನು ಪಣವಾಗಿಟ್ಟನು. ರುಕ್ಮಿಯು ಅದಕ್ಕಾಗಿ ದಾಳಗಳನ್ನು ಉರುಳಿಸಿದನು. ಆ ಆಟದಲ್ಲಿ ಬಲರಾಮನು ರುಕ್ಮಿಯನ್ನು ಜಯಿಸಿದನು. ಮತ್ತು ನಾನು ಗೆದ್ದೆನೆಂದು ಗಟ್ಟಿಯಾಗಿ ಹೇಳಿದನು. ರುಕ್ಮಿಯು ಬಲರಾಮನೇ ಸುಳ್ಳು ಹೇಳಬೇಡ. ನಾನೇ ಗೆದ್ದೆನು. ಎಂದು ಹೇಳಿದನು. ಕಾರಣವೇನೆಂದರೆ,

ತ್ವಯೋಕ್ತೋಽಯಂ ಗ್ಲಹಸ್ತ್ಯಂ ನ ಮಯ್ಯೇಹೋಽನುಕೋಪಿತಃ ।
ಏವಂ ತ್ವಯಾ ಚೇದ್ಜಿತಂ ವಿಜಿತಂ ನ ಮಯಾ ಕೆಳಂ ॥ ೨೦ ॥

॥ ಶ್ರೀ ಪರಾಶರಃ ॥

ಅಥಾಂತರಿಕ್ಷೇ ವಾಗುಚ್ಚೈಃ ಪ್ರಾಹ ಗಂಭೀರನಾದಿನೀ ।
ಬಲದೇವಸ್ಯ ತಂ ಕೋಪಂ ವರ್ಧಯಂತೀ ಮಹಾತ್ಮನಃ ॥ ೨೧ ॥

ಜಿತಂ ಬಲೇನ ಧರ್ಮೇಣ ರುಕ್ಮಿಣಾ ಭಾಷಿತಂ ಮೃಷಾ ।
ಅನುಕ್ತ್ವಾಪಿ ವಚಃ ಕಿಂಚಿತ್ಕೃತಂ ಭವತಿ ಕರ್ಮಣಾ ॥ ೨೨ ॥

ತತೋ ಬಲಸ್ಸಮುತ್ಥಾಯ ಕೋಪಸಂರಕ್ತಲೋಚನಃ ।
ಜಘಾನಾಷ್ಟಾಪದೇನೈವ ರುಕ್ಮಿಣಂ ಸ ಮಹಾಬಲಃ ॥ ೨೩ ॥

ಕಳಿಂಗರಾಜಂ ಚಾದಾಯ ವಿಸ್ಫುರಂತಂ ಬಲಾದ್ಬಲಃ ।
ಬಭಂಜ ದಂತಾನ್ ಕುಪಿತೋ ಯೈಃ ಪ್ರಕಾಶೈರ್ಜಹಾಸ ಸಃ ॥ ೨೪ ॥

೨೧-೨೨. ಆ ಮೇಲೆ ಅಂತರಿಕ್ಷದಲ್ಲಿ ಗಂಭೀರಧ್ವನಿಯಿಂದ ಬಲರಾಮನ ಕೋಪವನ್ನು ಹೆಚ್ಚಿಸುವ ಒಂದು ಮಾತು ಕೇಳಿಸಿತು. ಎಂತೆಂದರೆ, ಬಲರಾಮನು ಆಟದಲ್ಲಿ ಧರ್ಮದಿಂದ ಜಯಿಸಿರುವನು. ರುಕ್ಮಿಯು ಹೇಳುವುದು ಸುಳ್ಳು. ಅವನು ಮಾತನಾಡಿ ಒಪ್ಪಿಗೆಯನ್ನು ಕೋಡದಿದ್ದರೂ ದಾಳವನ್ನು ರುಳಿಸಿದ ಕಾರ್ಯದಿಂದ ಒಪ್ಪಿಗೆಯನ್ನು ಕೊಟ್ಟಂತೆಯೇ ಆಯಿತು. ಎಂಬ ಆಕಾಶವಾಣಿಯನ್ನು ಎಲ್ಲರೂ ಕೇಳಿದರು.

೨೩-೨೫. ಆ ಮೇಲೆ ಬಲರಾಮನು ಎದ್ದು ಕೋಪದಿಂದ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಜೂಜಿನ ಹಲಗೆಯನ್ನು ತೆಗೆದುಕೊಂಡು ರುಕ್ಮಿಯನ್ನು ಬಲವಾಗಿ ಹೋಡೆದನು. ನಡುಗುತ್ತಿದ್ದ ಕಳಿಂಗರಾಜನನ್ನು ಹಿಡಿದುಕೊಂಡು ಅವನು ನಗುವಾಗ ಪ್ರಕಾಶಪಡಿಸಿದ ಹಲ್ಲುಗಳನ್ನು ಮುರಿದು ಹಾಕಿದನು. ಮತ್ತು ಅವರ ಪಕ್ಷವಾಗಿ ಬಂದ ರಾಜರನ್ನೆಲ್ಲ ಬಲರಾಮನು ಆ ಸಭೆಯಲ್ಲಿದ್ದ ಒಂದು ದೊಡ್ಡ

ಆಕೃಷ್ಯ ಚ ಮಹಾಸ್ತಂಭಂಜಾತರೂಪಮಯಂ ಬಲಃ ।
ಜಘಾನ ತಾನ್ಮೇ ತತ್ಪಕ್ಷೇ ಭೂಭೃತಃ ಕುಪಿತೋ ಭೃಶಂ ॥ ೨೫ ॥

ತತೋ ಹಾಹಾ ಕೃತಂ ಸರ್ವಂ ಪಲಾಯನಪರಂ ದ್ವಿಜ ।
ತದ್ರಾಜಮಂಡಲಂ ಭೀತಂ ಬಭೂವ ಕುಪಿತೇ ಬಲೇ ॥ ೨೬ ॥

ಬಲೇನ ನಿಹತಂ ದೃಷ್ಟ್ವಾ ರುಕ್ಮಿಣಂ ಮಧುಸೂದನಃ ।
ನೋವಾಚ ಕಂಚಿನ್ನೈತ್ರೇಯ ರುಕ್ಮಿಣೇ ಬಲಯೋರ್ಭಯಾತ್ ॥ ೨೭ ॥

ತತೋಽನಿರುದ್ಧಮಾದಾಯ ಕೃತದಾರಂ ದ್ವಿಜೋತ್ತಮ ।
ದ್ವಾರಕಾಮಾಜಗಾಮಾಥ ಯದುಚಕ್ರಂ ಚ ಕೇಶವಃ ॥ ೨೮ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ಅಷ್ಟಾವಿಂಶೋಽಧ್ಯಾಯಃ

ಚಿನ್ನದ ಕೆಲಸಮಾಡಿದ ಕಂಬವನ್ನು ಕಿತ್ತು ಅದರಿಂದ ಕೊಂದುಹಾಕಿದನು.

೨೬–೨೭. ಬಳಿಕ ಅಲ್ಲಿದ್ದವರೆಲ್ಲ ಹಾಹಾಕಾರಮಾಡುತ್ತ ಓಡಿಹೋದರು. ಬಲರಾಮನ ಕೋಪದಿಂದ ಅಲ್ಲಿದ್ದ ಮಿಕ್ಕ ರಾಜರ ಗುಂಪು ಭಯವನ್ನು ಹೊಂದಿತು. ಬಲರಾಮನು ರುಕ್ಮಿಯನ್ನು ಕೊಂದುದನ್ನು ನೋಡಿ ಕೃಷ್ಣನು ರುಕ್ಮಿಣಿ ಬಲರಾಮರ ಭಯದಿಂದ ಯಾವ ಮಾತನ್ನೂ ಆಡದಿದ್ದನು.

೨೮. ತರುವಾಯ ಕೃಷ್ಣನು ಮದುವೆಯಾದ ಅನಿರುದ್ಧನನ್ನು ಕರೆದು ಕೊಂಡು ಯಾದವರ ಗುಂಪಿನಿಂದ ಕೂಡಿ ದ್ವಾರಕೆಗೆ ಬಂದನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ

ಇಪ್ಪತ್ತೆಂಟನೆಯ ಅಧ್ಯಾಯವು ಮುಗಿದುದು

॥ ಶ್ರೀಃ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಏಕೋನತ್ರಿಂಶೋಽಧ್ಯಾಯಃ

॥ ಶ್ರೀ ಪರಾಶರಃ ॥

ದ್ವಾರವತ್ಯಾಂ ಸ್ಥಿತೇ ಕೃಷ್ಣೇ ಶಕ್ರಸ್ತ್ರಿಭುವನೇಶ್ವರಃ ।
ಆಜಗಾಮಾಥ ಮೈತ್ರೇಯ ಮಾರುಹ್ಯೈರಾವತಂ ಗಜಂ ॥ ೧ ॥

ಪ್ರವಿಶ್ಯ ದ್ವಾರಕಾಂ ಸೋಽಥ ಸಮೇತ್ಯ ಹರಿಣಾ ತತಃ ।
ಕಥಯಾಮಾಸ ದೈತ್ಯಸ್ಯ ನರಕಸ್ಯ ವಿಚೇಷ್ಟಿತಂ ॥ ೨ ॥

ತ್ವಯಾ ನಾಥೇನ ದೇವಾನಾಂ ಮನುಷ್ಯತ್ವೇ ಪ್ರತಿಷ್ಠತಾ ।
ಪ್ರಶಮಂ ಸರ್ವದುಃಖಾನಿ ನೀತಾನಿ ಮಧುಸೂದನ ॥ ೩ ॥

ಇಪ್ಪತ್ತೊಂಭತ್ತನೆಯ ಅಧ್ಯಾಯವು

೧-೨. ಕೃಷ್ಣನು ದ್ವಾರಕಾಪಟ್ಟಣದಲ್ಲಿರುತ್ತಿರಲಾಗಿ ಮೂರು ಲೋಕಕ್ಕೂ ಒಡೆಯನಾದ ದ್ರೀವೇಂದ್ರನು ಐರಾವತದ ಮೇಲೆ ಕುಳಿತು ದ್ವಾರಕಾಪಟ್ಟಣಕ್ಕೆ ಬಂದು ಕೃಷ್ಣನನ್ನು ಕಂಡು ನರಕನೆಂಬ ದೈತ್ಯನ ದುಷ್ಟ ಚೇಷ್ಟೆಯನ್ನು ಅವನಿಗೆ ಹೇಳುವುದಕ್ಕೆ ಮೊದಲುಮಾಡಿ ಅವನ್ನು ಕುರಿತು,

೩–೬. ದೇವತೆಗಳಿಗೆ ಸ್ವಾಮಿಯಾದ ಮಧುಸೂದನನೇ! ಮನುಷ್ಯಾವತಾರವನ್ನು ಮಾಡಿದ ನೀನು ಸಮಸ್ತ ದುಃಖಗಳನ್ನೂ ನಾಶಮಾಡಿದೆ. ಅರಿಷ್ಟ, ಧೇನುಕ, ಕೇಶಿ, ಮುಂತಾದ ರಾಕ್ಷಸರು ತಪಸ್ವಿಗಳಿಗೆ ತೊಂದರೆಯನ್ನುಂಟುಮಾಡುತ್ತಿದ್ದರು.

ತಪಸ್ವಿ ವ್ಯಸನಾರ್ತಾರ್ಥಂ ಸೋಽರಿಷ್ಟೋ ಧೇನುಕಸ್ತಥಾ ।
ಪ್ರಲಂಬೋ ಯಸ್ತಥಾ ಕೇಶೀ ತೇ ಸರ್ವೇ ನಿಹತಾಸ್ತ್ವಯಾ ॥ ೪ ॥

ಕಂಸಃ ಕುವಲಯಾಪೀಡೋ ಪೂತನಾ ಬಾಲಘಾತಿನೀ ।
ನಾಶಂ ನೀತಾಸ್ತ್ವಯಾ ಸರ್ವೇ ಯೇನ್ಯೇ ಜಗದುಪದ್ರವಾಃ ॥ ೫ ॥

ಯುಷ್ಮದ್ಬಾಹೂರ್ದಂಡಸಂಭೂತಿಪರಿತ್ರಾತೇ ಜಗತ್ತ್ರಯೇ ।
ಯಜ್ಞಯಜ್ಞಾಂಶ ಸಂಪ್ರಾಪ್ತ್ಯಾ ತೃಪ್ತಿಂ ಯಾಂತಿ ದಿವೌಕಸಃ ॥ ೬ ॥

ಸೋಽಹಂ ಸಾಂಪ್ರತ ಮಾಯಾತೋ ಯನ್ನಿಮಿತ್ತಂ ಜನಾರ್ದನ ।
ತಚ್ಛ್ರುತ್ವಾ ತತ್ಪ್ರತೀಕಾರಪ್ರಯತ್ನಂ ಕರ್ತುಮರ್ಹಸಿ ॥ ೭ ॥

ಭೌಮೋಽಯಂ ನರಕೋ ನಾಮ ಪ್ರಾಗ್ಜ್ಯೋತಿಷಪುರೇಶ್ವರಃ ।
ಕರೋತಿ ಸರ್ವಭೂತಾನಾಮುಪಘಾತಮರಿಂದಮ ॥ ೮ ॥

ದೇವಸಿದ್ಧಸುರಾದೀನಾಂ ನೃಪಾಣಾಂ ಚ ಜನಾರ್ದನ ।
ಹೃತ್ವಾ ತು ಸೋಽಸುರಃ ಕನ್ಯಾ ರುರುಧೇ ನಿಜಮಂದಿರೇ ॥ ೯ ॥

ಅವರನ್ನೆಲ್ಲ ಕೊಂದುಹಾಕಿದೆ. ಜಗತ್ತಿಗೇ ದುಃಖವನ್ನುಂಟುಮಾಡುತ್ತಿದ್ದ ಕಂಸ, ಕುವಲಯಾಪೀಡ, ಬಾಲಕರನ್ನು ನಾಶಮಾಡುತ್ತಿದ್ದ ಪೂತನಿ ಇವರನ್ನೂ ನಾಶ ಮಾಡಿದೆ. ನಿನ್ನ ಬಾಹು ಪರಾಕ್ರಮದಿಂದ ಮೂರು ಲೋಕವೂ ಸುಖವನ್ನು ಹೊಂದಿತು. ಯಾಗಮಾಡುವವರು ಕೊಟ್ಟ ಯಜ್ಞದ ಹವಿರ್ಭಾಗಗಳನ್ನು ಪಡೆದು ದೇವತೆಗಳು ತೃಪ್ತಿಪಡುತ್ತಿರುವರು. ಈಗ ನಾನು ಯಾವ ಕಾರಣದಿಂದ ನಿನ್ನ ಸಮೀಪಕ್ಕೆ ಬಂದಿರುವೆನೋ ಅದನ್ನು ಕೇಳಿ ಅದಕ್ಕೆ ತಕ್ಕ ಪ್ರತೀಕಾರವನ್ನು ಮಾಡ ಬೇಕು. ಅದೇನೆಂದರೆ :—

೮-೧೦ "ಭೂಮಿಯ ಪುತ್ರನಾದ ನರಕನೆಂಬ ದೈತ್ಯನು ಪ್ರಾಗ್ಜ್ಯೋತಿಷವೆಂಬ ಪಟ್ಟಣದಲ್ಲಿ ರಾಜನಾಗಿರುವನು. ಅವನು ಸಮಸ್ತ ಭೂತಗಳಿಗೂ ತೊಂದರೆಯನ್ನು ಕೊಡುತ್ತಿರುವನು. ದೇವತೆಗಳು, ಸಿದ್ಧರು, ರಾಜರುಗಳು. ಇವರ ಕನ್ಯೆಯರನ್ನು ಅಪಹರಿಸಿ ತನ್ನ ಮನೆಯಲ್ಲಿ ಸೆರೆಯಲ್ಲಿಟ್ಟಿರುವನು. ವರುಣನಿಂದ ನೀರನ್ನು ಸುರಿಸು

ಛತ್ರಂ ಯತ್ಸಲಿಲಸ್ರಾವಿ ತಜ್ಜಹಾರ ಪ್ರಚೇತಸಃ ।
ಮಂದರಸ್ಯ ತಥಾ ಶೃಂಗಂ ಹೃತವಾನ್ ಮಣಿಪರ್ವತಂ ॥ ೧೦ ॥

ಅಮೃತಸ್ರಾವಿಣೇ ದಿವ್ಯೇ ಮನ್ಮಾತುಃ ಕೃಷ್ಣಕುಂಡಲೇ ।
ಜಹಾರ ಸೋಽಸುರೋಽದಿತ್ಯಾ ವಾಂಛತ್ಯೈರಾವತಂ ಗಜಂ ॥ ೧೧ ॥

ದುರ್ನೀತಮೇತದ್ಧೋವಿಂದ ಮಯಾ ತಸ್ಯ ನಿವೇದಿತಂ ।
ಯದತ್ರ ಪ್ರತಿಕರ್ತವ್ಯಂ ತತ್ಸ್ವಯಂ ಪರಿಮೃಶ್ಯತಾಂ ॥ ೧೨ ॥

॥ ಶ್ರೀ ಪರಾಶರಃ ॥

ಇತಿ ಶ್ರುತ್ವಾ ಸ್ಮಿತಂ ಕೃತ್ವಾ ಭಗವಾನ್ ದೇವಕೀಸುತಃ ।
ಗೃಹೀತ್ವಾ ವಾಸವಂ ಹಸ್ತೇ ಸಮುತ್ತಸ್ಥೌ ವರಾಸನಾತ್ ॥ ೧೩ ॥

ತ್ತಿರುವ ಛತ್ರಿಯನ್ನು ಕಿತ್ತುಕೊಂಡು ಹೋಗಿರುವನು. ಮಂದರಪರ್ವತದ ಶಿಖರವಾದ ಮಣಿಪರ್ವತವನ್ನು ತೆಗೆದುಕೊಂಡು ಹೋಗಿರುವನು. ಅಮೃತವನ್ನು ಸುರಿಸುತ್ತಿರುವ ನನ್ನ ತಾಯಿಯಾದ ಅದಿತಿಯ ದಿವ್ಯವಾದ ಕರ್ಣಾಭರಣವನ್ನು ಅಪಹರಿಸಿದನು. ನನ್ನ ಐರಾವತವನ್ನು ಅಪೇಕ್ಷಿಸುತ್ತಿರುವನು. ಗೋವಿಂದನೇ ಇವುಗಳೆಲ್ಲ ಅವನ ಅನ್ಯಾಯಗಳು. ಇವುಗಳಿಗೆ ಏನು ಪ್ರತೀಕಾರವನ್ನು ಮಾಡಬೇಕೋ ಅದನ್ನು ನೀನೇ ವಿಮರ್ಶಿಸಬೇಕು" ಎಂದು ಹೇಳಿದನು.

೧೩-೧೩. ದೇವಕೀ ಪುತ್ರನಾದ ಕೃಷ್ಣನು ದೇವೇಂದ್ರನ ಮಾತನ್ನು ಕೇಳಿ ನಗುತ್ತ ಅವನ ಕೈಯನ್ನು ಹಿಡಿದುಕೊಂಡು ತನ್ನ ಪೀಠದಿಂದ ಎದ್ದನು. ಕೃಷ್ಣನು ಆ ಕ್ಷಣದಲ್ಲಿ ಗರುಡನನ್ನು ಸ್ಮರಿಸಿದುದರಿಂದ ಬಂದ ಅವನ ಮೇಲೆ ಸತ್ಯಭಾಮೆ

ಸಂಚಿಂತ್ಯಾಗತವಾರುಹ್ಯ ಗರುಡಂ ಗಗನೇ ಚರಂ ।
ಸತ್ಯಭಾಮಾಂ ಸಮಾರೋಪ್ಯ ಯಯೌ ಪ್ರಾಗ್ಜ್ಯೋತಿಷಂ ಪುರಂ ॥ ೧೪ ॥

ಅರುಹ್ಯೈರಾವತಂ ನಾಗಂ ಶಕ್ರೋಽಪಿ ತ್ರಿದಿವಂ ಯಯೌ ।
ತತೋ ಜಗಾಮ ಕೃಷ್ಣಶ್ಚ ಪಶ್ಯತಾಂ ದ್ವಾರಕೌಕಸಾಂ ॥ ೧೫ ॥

ಪ್ರಾಗ್ಜ್ಯೋತಿಷಪುರಸ್ಯಾಸೀತ್ಸಮಂತಾಚ್ಛತಯೋಜನಂ ।
ಅಚಿತಾ ಮೌರವೈಃಪಾಶೈಃ ಕ್ಷುರಾಂತೈರ್ಭೂರ್ದ್ವಿಜೋತ್ತಮ ॥ ೧೬ ॥

ತಾನ್ ಚಿಚ್ಛೇದ ಹರಿಃ ಪಾಶಾನ್ ಕ್ಷಿಪ್ತ್ವಾ ಚಕ್ರಂ ಸುದರ್ಶನಂ ।
ತತೋ ಮುರಸ್ಸಮುತ್ತಸ್ಥೌ ತಂ ಜಘಾನ ಚ ಕೇಶವಃ ॥ ೧೭ ॥

ಮುರಸ್ಯ ತನಯಾಂಶ್ಚಪ್ತ ಸಹಸ್ರಾಂಸ್ತಾಂಸ್ತತೋ ಹರಿಃ ।
ಚಕ್ರಧಾರಾಗ್ನಿನಿರ್ದಗ್ಧಾಂಶ್ಚಕಾರ ಶಲಭಾನಿವ ॥ ೧೮ ॥

ಯೊಡನೆ ಕುಳಿತುಕೊಂಡು ಪ್ರಾಗ್ಜ್ಯೋತಿಷ ಪಟ್ಟಣಕ್ಕೆ ಹೋದನು. ಕೃಷ್ಣನು ಪ್ರಯಾಣ ಮಾಡಿದುದನ್ನು ದ್ವಾರಕೆಯ ಜನರೆಲ್ಲರೂ ನೋಡುತ್ತಿರಲು ದೇವೇಂದ್ರನೂ ಐರಾವತವೆಂಬ ಆನೆಯ ಮೇಲೆ ಕುಳಿತು ಸ್ವರ್ಗಕ್ಕೆ ಹೋದನು.

೧೬–೧೮. ಪ್ರಾಗ್ಜ್ಯೋತಿಷ ಪಟ್ಟಣದ ಸುತ್ತಲೂ ನೂರು ಯೋಜನ ದೂರದ ವರೆಗೆ ಕತ್ತಿಯ ಅಲಗಿನಂತೆ ಹರಿತವಾದ ಮುರಾಸುರನೆಂಬ ರಾಕ್ಷಸನು ನಿರ್ಮಿಸಿದ ಮೌರವ ಪಾಶವು ವ್ಯಾಪಿಸಿದ ಭೂಮಿಯಿದ್ದಿತು. ಕೃಷ್ಣನು ಸುದರ್ಶನವೆಂಬ ಚಕ್ರಾಯುಧವನ್ನು ಪ್ರಯೋಗಿಸಿ ಆ ಪಾಶವನ್ನು ಕತ್ತರಿಸಿದನು. ಬಳಿಕ ಮುರನು ಯುದ್ಧಕ್ಕೆ ಬಂದನು. ಕೃಷ್ಣನು ಅವನನ್ನು ಕೊಂದನು. ಆಮೇಲೆ ಹಿರಿಯು ಮುರನ ಏಳುಸಾವಿರ ಮಕ್ಕಳನ್ನು ಚಕ್ರದ ಅಲಗೆಂಬ ಅಗ್ನಿಗೆ ಪತಂಗದ ಹುಳು ಗಳಂತೆ ಮಾಡಿದನು.

ಹತ್ವಾ ಮುರಂ ಹಯಗ್ರೀವಂ ತಥಾ ಪಂಚಜನಂ ದ್ವಿಜ ।
ಪ್ರಾಗ್ಜ್ಯೋತಿಷಪುರಂ ಧೀಮಾನ್ ತ್ವರಾವಾನ್ ಸಮುಪಾಯಯೌ ॥ ೧೯ ॥

ನರಕೇಣಾಸ್ಯ ತತ್ರಾಭೂನ್ಮಹಾಸೈನ್ಯೇನ ಸಂಯುಗಂ ।
ಕೃಷ್ಣಸ್ಯ ಯತ್ರ ಗೋವಿಂದೋ ಜಘ್ನೇ ದೈತ್ಯಾಂಸ್ತದಸ್ತ್ರಜಃ ॥ ೨೦ ॥

ಶಸ್ತ್ರಾಸ್ತ್ರವರ್ಷಮುಂಚಂತಂ ತಂ ಭೌಮಂ ನರಕಂ ಬಲೀ ।
ಕ್ಷಿಪ್ತ್ವಾ ಚಕ್ರಂ ದ್ವಿಧಾ ಚಕ್ರೇ ಚಕ್ರೀ ದೈತೇಯಜಕ್ರೀಹಾ ॥ ೨೧ ॥

ಹತೇ ತು ನರಕೇ ಭೂಮಿರ್ಗೃಹೀತ್ವಾದಿತಿಕುಂಡಲೇ ।
ಉಪತಸ್ಥೇ ಜಗನ್ನಾಥಂ ವಾಕ್ಯಂ ಚೇದಮುವಾಚ ಹ ॥ ೨೨ ॥

॥ ಪೃಥ್ವೀ ॥

ಯದಾಹಮುದ್ಧೃತಾ ನಾಥ ತ್ವಯಾ ಸೂಕರಮೂರ್ತಿನಾ ।
ತ್ವತ್ಸ್ಪರ್ಶಸಂಭವಃ ಪುತ್ರಸ್ತದಾಯಂ ಮಯ್ಯಜಾಯತ ॥ ೨೩ ॥

೧೯–೨೧. ಕೃಷ್ಣನು ಮುರ ಹಯಗ್ರೀವ ಪಂಚಜನ ಎಂಬ ರಾಕ್ಷಸರನ್ನು ಕೊಂದು ಪ್ರಾಗ್ಜ್ಯೋತಿಷಪುರದಲ್ಲಿ ನರಕನ ಸೈನ್ಯದೊಡನೆ ಯುದ್ಧಮಾಡಿ ಅನೇಕ ದೈತ್ಯರನ್ನು ಕೊಂದನು. ಬಳಿಕ ಶಸ್ತ್ರಾಸ್ತ್ರಗಳ ಮಳೆಯನ್ನು ಸುರಿಸುತ್ತ ಬಂದ ಭೂಮಿಪುತ್ರನಾದ ನರಕನನ್ನು ಚಕ್ರಾಯುಧದಿಂದ ಕತ್ತರಿಸಿದನು.

೨೨–೨೫. ನರಕನು ನಾಶವಾದಮೇಲೆ ಭೂದೇವಿಯು ಅದಿತಿಯ ಕರ್ಣಾಭರಣಗಳನ್ನು ತೆಗೆದುಕೊಂಡು ಬಂದು ಜಗದೊಡೆಯನಾದ ಕೃಷ್ಣನನ್ನು ಕುರಿತು “ಓ ಸ್ವಾಮಿಯೇ! ನೀನು ವರಾಹಾವತಾರವನ್ನು ಮಾಡಿ ನನ್ನನ್ನು ಉದ್ಧರಿಸಿದೆ. ಆಗ ನಿನ್ನ ಸ್ಪರ್ಶದಿಂದ ನನ್ನಲ್ಲಿ ಈ ನರಕನು ಹುಟ್ಟಿದನು. ನೀನೇ ಕೊಟ್ಟ ಪುತ್ರನನ್ನು ನೀನೇ ಕೊಂದುಹಾಕಿದೆ. ಈ ಕುಂಡಲಗಳನ್ನು ತೆಗೆದುಕೋ, ಇವನ ವಂಶ

ಸೋಽಯಂ ತ್ವಯ್ಯೇವ ದತ್ತೋ ಮೇ ತ್ವಯ್ಯೇವ ವಿನಿಪಾತಿತಃ ।
ಗೃಹಾಣ ಕುಂಡಲೇ ಚೇಮೇ ಪಾಲಯಾಸ್ಯ ಚ ಸಂತತಿಂ ॥ ೨೪ ॥

ಭಾರಾವತರಣಾರ್ಥಾಯ ಮನ್ಯೇವ ಭಗವಾನಿಮಂ ।
ಅಂಶೇನ ಲೋಕಮಾಯತಃ ಪ್ರಸಾದಸುಮುಖಃ ಪ್ರಭೋ ॥ ೨೫ ॥

ತ್ವಂ ಕರ್ತಾ ಚ ವಿಕರ್ತಾ ಚ ಸಂಹರ್ತಾ ಪ್ರಭವೋಽಪ್ಯಯಃ ।
ಜಗತಾಂ ತ್ವಂ ಜಗದ್ರೂಪಸ್ಸ್ತೂಯತೇಽಚ್ಯುತ ಕಿಂ ತವ ॥ ೨೬ ॥

ವ್ಯಾಪೀ ವ್ಯಾಪ್ಯಂ ಕ್ರಿಯಾ ಕರ್ತಾ ಕಾರ್ಯಂ ಚ ಭಗವಾನ್ ಯಥಾ ।
ಸರ್ವಭೂತಾತ್ಮಭೂತಸ್ಯ ಸ್ತೂಯತೇ ತವ ಕಿಂ ತಥಾ ॥ ೨೭ ॥

ಪರಮಾತ್ಮಾ ಚ ಭೂತಾತ್ಮಾ ತ್ವಮಾತ್ಮಾ ಜ್ಞಾಪ್ಯಯೋ ಭವಾನ್ ।
ಯಥಾ ತಥಾ ಸ್ತುತಿರ್ನಾಥ ಕಮರ್ಥಂ ತೇ ಪ್ರವರ್ತತೇ ॥ ೨೮ ॥

ವನ್ನು ಕಾಪಾಡು. ನನ್ನ ಭಾರವನ್ನು ಕಡಿಮೆ ಮಾಡುವುದಕ್ಕಾಯೇ ಭಗವಂತನಾದ ನೀನು ಅನುಗ್ರಹಮಾಡಿ ಒಂದಂಶದಿಂದ ಈ ಲೋಕದಲ್ಲಿ ಅವತರಿಸಿರುವೆ.

೨೬–೨೯. ನೀನು ಜಗತ್ತನ್ನು ಸೃಷ್ಟಿಸಿ ಸಂಹರಿಸತಕ್ಕವನು. ಜಗತ್ತಿಗೆ ಉಪಾದಾನಕಾರಣನಾಗಿಯೂ, ಲಯಸ್ಥಾನನಾಗಿಯೂ ಇರತಕ್ಕವನು. ಆವುದರಿಂದ ಜಗದ್ರೂಪನಾದ ನಿನ್ನ ಮಹಿಮೆಯನ್ನು ನಾನು ಸ್ತೋತ್ರಮಾಡಲು ಶಕ್ತಳಲ್ಲ. ವ್ಯಾಪಕಸ್ವರೂಪನೂ, ಕ್ರಿಯಾಸ್ವರೂಪನೂ, ಕರ್ತೃಸ್ವರೂಪನೂ, ಕಾರ್ಯರೂಪನೂ, ಸಮಸ್ತ ಭೂತಗಳಿಗೂ, ಆತ್ಮಸ್ವರೂಪನೂ ಆದ ನಿನ್ನನ್ನು ನಾನು ಹೇಗೆ ಸ್ತೋತ್ರ ಮಾಡಬೇಕು ? ಓ ಸ್ವಾಮಿಯೇ ನೀನೇ ಪರಮಾತ್ಮನೂ ಮನೋರೂಪನೂ ಸೂಕ್ಷ್ಮರೂಪನೂ ಆಗಿರುವಲ್ಲಿ ನಿನ್ನ ಸ್ತೋತ್ರವನ್ನು ನಾನು ಏತಕ್ಕೆ ಮಾಡಬೇಕು ? ಸರ್ವಭೂತಗಳಿಗೂ ಆತ್ಮಸ್ವರೂಪನಾದ ನೀನು ಪ್ರಸನ್ನನಾಗಿ ನರಕನು ಮಾಡಿದ

ಪ್ರಸೀದ ಸರ್ವಭೂತಾತ್ಮನ್ನರಕೇಣ ತು ಯತ್ಕೃತಂ ।
ತತ್ಕ್ಷಮ್ಯತಾಮದೋಷಾಯ ತ್ವತ್ಸುತಸ್ತ್ವನ್ನಿಷಾತಿತಃ ॥ ೨೯

॥ ಶ್ರೀ ಪರಾಶರಃ ॥

ತಥೇತಿ ಚೋಕ್ತ್ವಾ ಧರಣೀಂ ಭಗವಾನ್ ಭೂತಭಾವನಃ ।
ರತ್ನಾನಿ ನರಕಾವಾಸಾಜ್ಜಗ್ರಾಹ ಮುನಿಸತ್ತಮ ॥ ೩೦ ॥

ಕನ್ಯಾಪುರೇ ಸ ಕನ್ಯಾನಾಂ ಷೋಡಶಾತುಲವಿಕ್ರಮಃ ।
ಶತಾಧಿಕಾನಿ ದದೃಶೇ ಸಹಸ್ರಾಣಿ ಮಹಾಮುನೇ ॥ ೩೧ ॥

ಚತುರ್ದಂಷ್ಟ್ರಾನ್ ಗಜಾಂಶ್ಚಾಗ್ರ್ಯಾನ್ ಪಟ್ಟಸಹಸ್ರಾಂಶ್ಚ ದೃಷ್ಟವಾನ್ ।
ಕಾಂಭೋಜಾನಾಂ ತಥಾಶ್ವಾನಾಂ ನಿಯುತಾನ್ಯೇಕವಿಂಶತಿಂ ॥ ೩೨ ॥

ತಾಃ ಕನ್ಯಾಸ್ತಾಂಸ್ತಥಾ ನಾಗಾಂಸ್ತಾನಶ್ವಾನ್ ದ್ವಾರಕಾಪುರೀಂ ।
ಪ್ರಾಪಯಾಮಾಸ ಗೋವಿಂದಸ್ತದ್ಯೋ ನರಕಕಿಂಕರೈಃ ॥ ೩೩ ॥

ಅಪರಾಧಗಳನ್ನು ಕ್ಷಮಿಸು. ಅವನು ನಿನ್ನ ಮಗನು. ನೀನೇ ಅವನನ್ನು ಕೊಂದಿರುವೆ. ಈ ಕಾರಣದಿಂದ ನೀನು ಅವನಿಗೆ ಅನುಗ್ರಹವನ್ನು ಮಾಡಬೇಕು" ಎಂದು ಹೇಳಿದಳು.

೩೦-೩೫. ಕೃಷ್ಣನು ಹಾಗೆಯೇ ಆಗಲೆಂದು ಭೂದೇವಿಗೆ ಹೇಳಿ, ನರಕನ ಮನೆಯಲ್ಲಿದ್ದ ರತ್ನಗಳನ್ನೆಲ್ಲ ತೆಗೆದುಕೊಂಡನು. ಕನ್ಯೆಯರ ಅಂತಃಪುರದಲ್ಲಿ ಹದಿನಾರುಸಾವಿರದ ನೂರು ಜನ ಕನ್ಯೆಯರಿರುವುದನ್ನು ಕಂಡನು. ಮತ್ತು ಆರು ಸಾವಿರ ಶ್ರೇಷ್ಠವಾದ ನಾಲ್ಕು ಕೊಂಬಿನ ಆನೆಗಳನ್ನೂ, ಇಪ್ಪತ್ತೊಂದು ಲಕ್ಷ ಕುದುರೆಗಳನ್ನೂ ನೋಡಿ ಆ ಕನ್ಯೆಯರನ್ನೂ, ಆನೆ ಕುದುರೆಗಳನ್ನೂ ಆ ಕ್ಷಣವೇ ನರಕನ ದೂತರೊಡನೆ

ದದೃಶೇ ವಾರುಣಂ ಛತ್ರಂ ತಥೈವ ಮಣಿಪರ್ವತಂ ।
ಆರೋಪಯಾಮಾಸ ಹರಿರ್ಗರುಡೇ ಪತಗೇಶ್ವರೇ ॥ ೩೪ ॥

ಆರುಹ್ಯ ಚ ಸ್ವಯಂ ಕೃಷ್ಣಸ್ಸತ್ಯಭಾಮಾ ಸಹಾಯವಾನ್ ।
ಅದಿತ್ಯಾಃ ಕುಂಡಲೇ ದಾತುಂ ಜಗಾಮ ತ್ರಿದಶಾಲಯಂ ॥ ೩೫ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ಏಕೋನತ್ರಿಂಶೋಧ್ಯಾಯಃ

ದ್ವಾರಕಾ ಪಟ್ಟಣಕ್ಕೆ ಕಳುಹಿಸಿದನು. ವರುಣನ ಛತ್ರಿಯನ್ನೂ, ರತ್ನಪರ್ವತವನ್ನೂ, ಪಕ್ಷಿರಾಜನಾದ ಗರುಡನ ಮೇಲೆ ಇಟ್ಟು ತಾನೂ ಸತ್ಯಭಾಮೆಯೂ, ಗರುಡನನ್ನೇರಿ ಅದಿತಿಯ ಕರ್ಣಾಭರಣಗಳನ್ನು ಕೊಡುವುದಕ್ಕಾಗಿ ಸ್ವರ್ಗಕ್ಕೆ ಪ್ರಯಾಣಮಾಡಿದನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ

ಇಪ್ಪತ್ತೊಂಭತ್ತನೆಯ ಅಧ್ಯಾಯವು

ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ತ್ರಿಂಶೋಽಧ್ಯಾಯಃ

॥ ಶ್ರೀ ಪರಾಶರಃ ॥

ಗರುಡೋ ವಾರುಣಂ ಛತ್ರಂ ತಥೈವ ಮಣಿಪರ್ವತಂ ।
ಸಭಾರ್ಯಂ ಚ ಹೃಷೀಕೇಶಂ ಲೀಲಯೈವ ವಹನ್ ಯಯೌ ॥ ೧ ॥

ತತಶ್ಶಂಖಮುಪಾಧ್ಮಾಸೀತ್ಸ್ವರ್ಗದ್ವಾರಗತೋ ಹರಿಃ ।
ಉಪತಸ್ಥುಸ್ತದಾ ದೇವಾಸ್ಸಾರ್ಘ್ಯಹಸ್ತಾ ಜನಾರ್ದನಂ ॥ ೨ ॥

ಸ ದೇವೈರರ್ಚಿತಃ ಕೃಷ್ಣೋ ದೇವಮಾತುರ್ನಿವೇಶನಂ ।
ಸಿತಾಭ್ರಶಿಖರಾಕಾರಂ ಪ್ರವಿಶ್ಯ ದದೃಶೇಽದಿತಿಂ ॥ ೩ ॥

ಮೂವತ್ತನೆಯ ಅಧ್ಯಾಯವು

೧-೨. ಗರುಡನು ವರುಣನ ಛತ್ರಿಯನ್ನೂ, ಮಣಿಪರ್ವತವನ್ನೂ ಸತ್ಯಭಾಮಾಸಹಿತನಾದ ಕೃಷ್ಣನನ್ನೂ ಹೊತ್ತುಕೊಂಡು ಲೀಲೆಯಿಂದ ನಡೆದನು. ಸ್ವರ್ಗದ ಬಾಗಿಲಿಗೆ ಹೋದಾಗ ಕೃಷ್ಣನು ಶಂಖವನ್ನೂದಿದನು. ಆಗ ದೇವತೆಗಳು ಕೃಷ್ಣನಿಗೆ ಅರ್ಘ್ಯಾದಿ ಸತ್ಕಾರಗಳನ್ನು ಮಾಡಿ ಉಪಚರಿಸಿದರು.

೩-೪. ಕೃಷ್ಣನು ಅವರ ಸೇವೆಯನ್ನು ಸ್ವೀಕರಿಸಿ ಬಿಳಿಯ ಮೋಡದಂತೆ ಹೊಳೆಯುತ್ತಿರುವ ದೇವತೆಗಳ ತಾಯಿಯಾದ ಅದಿತಿಯ ಮನೆಯನ್ನು ಪ್ರವೇಶಿಸಿ

ಸ ತಾಂ ಪ್ರಣಮ್ಯ ಶಕ್ರೇಣ ಸಹ ತೇ ಕುಂಡಲೋತ್ತಮೇ ।
ದದೌ ನರಕನಾಶಂ ಚ ಶಶಂಸಾಸ್ಯೈ ಜನಾರ್ದನಃ ॥ ೪ ॥

ತತಃ ಪ್ರೀತಾ ಜಗನ್ಮಾತಾ ಧಾತಾರಂ ಜಗತಾಂ ಹರಿಂ ।
ತುಷ್ಟಾವಾದಿತಿರವ್ಯಗ್ರಾ ಕೃತ್ವಾ ತತ್ಪ್ರವಣಂ ಮನಃ ॥ ೫ ॥

॥ ಅದಿತಿಃ ॥

ನಮಸ್ತೇ ಪುಂಡರೀಕಾಕ್ಷ ಭಕ್ತಾನಾಮಭಯಂ ಕರ ।
ಸನಾತನಾತ್ಮನ್ ಸರ್ವಾತ್ಮನ್ ಭೂತಾತ್ಮನ್ ಭೂತಭಾವನ ॥ ೬ ॥

ಪ್ರಣೇತುರ್ಮನಸೋ ಬುದ್ಧೇರಿಂದ್ರಿಯಾಣಾಂ ಗುಣಾತ್ಮಕ ।
ತ್ರಿಗುಣಾತೀತ ನಿರ್ದ್ವಂದ್ವ ಶುದ್ಧಸತ್ವಹೃದಿಸ್ಥಿತ ॥ ೭ ॥

ಸಿತದೀರ್ಘಾದಿನಿರ್ದೇಶೈ ಕಲ್ಪನಾಪರಿವರ್ಜಿತ ।
ಜನ್ಮಾದಿಭಿರಸಂಸ್ಪೃಷ್ಟ ಸ್ವಪ್ನಾದಿಪರಿವರ್ಜಿತ ॥ ೮ ॥

ಆಕೆಯನ್ನು ನೋಡಿದನು. ದೇವೇಂದ್ರನೊಡನೆ ತಾನೂ ಅವಳಿಗೆ ನಮಸ್ಕಾರ ಮಾಡಿ ಆಕೆಯ ಕರ್ಣಾ ಭರಣಗಳನ್ನು ಅವಳಿಗೆ ಕೊಟ್ಟನು. ಮತ್ತು ನರಕನು ನಾಶವಾದುದನ್ನೂ ಹೇಳಿದನು.

೫-೮. ಜಗನ್ಮಾತೆಯಾದ ಅದಿತಿಯು ಸಂತೋಷಗೊಂಡು ತನ್ನ ಮನಸ್ಸನ್ನು ಏಕಾಗ್ರವಾಗಿ ಅವನಲ್ಲಿಯೇ ನೆಲೆಗೊಳಿಸಿ ಜಗತ್ತನ್ನು ಸೃಷ್ಟಿಸಿದ ಅವನನ್ನು ಸ್ತೋತ್ರ ಮಾಡಿದಳು. ಕಮಲದಂತೆ ಕಣ್ಣುಗಳುಳ್ಳ ಭಕ್ತರಿಗೆ ಅಭಯವನ್ನುಂಟುಮಾಡುವ ನಿತ್ಯನೂ ಸರ್ವಾಂತರ್ಯಾಮಿಯೂ ಪಂಚಭೂತಸ್ವರೂಪನೂ ಮಹಾಭೂತ ಗಳನ್ನು ಉತ್ಪತ್ತಿ ಮಾಡಿದವನೂ, ಇಂದ್ರಿಯಗಳು ಮನಸ್ಸು ಬುದ್ಧಿ ಇವುಗಳನ್ನೂ ಮಾಡಿದವನೂ, ಸುಖದುಃಖಾದಿ ದ್ವಂದ್ವಗಳಿಲ್ಲದವನೂ, ಶುದ್ಧಸತ್ವಸ್ವರೂಪನೂ ಜ್ಞಾನಿಗಳ ಮನಸ್ಸಿನಲ್ಲಿ ನೆಲಸಿರುವವನೂ ಆದ ನಿನಗೆ ನಮಸ್ಕಾರವು. ನೀನು ಆಕಾರ, ಬಣ್ಣ, ಉತ್ಪತ್ತಿ, ಅವಸ್ಥೆ, ಮುಂತಾದ ವಿಕಾರಗಳಿಲ್ಲದವನು.

ಸಂಧ್ಯಾರಾತ್ರಿರಹೋ ಭೂಮಿರ್ಗಗನಂ ವಾಯುರಂಬು ಚ ।
ಹುತಾಶನೋ ಮನೋಬುದ್ಧಿರ್ಭೂತಾದಿಸ್ತ್ವಂ ತಥಾಚ್ಯುತ ॥ ೯ ॥

ಸರ್ಗಸ್ಥಿತಿವಿನಾಶಾನಾಂ ಕರ್ತಾ ಕರ್ತೃಪತಿರ್ಭವಾನ್ ।
ಬ್ರಹ್ಮವಿಷ್ಣುಶಿವಾಖ್ಯಾಭಿರಾತ್ಮಮೂರ್ತಿಭಿರೀಶ್ವರ ॥ ೧೦ ॥

ದೇವಾ ದೈತ್ಯಾಸ್ತಥಾ ಯಕ್ಷಾ ರಾಕ್ಷಸಾಸ್ಸಿದ್ಧಪನ್ನಗಾಃ ।
ಕೂಶ್ಮಾಂಡಾಶ್ಚ ಪಿಶಾಚಾಶ್ಚ ಗಂಧರ್ವಾ ಮನುಜಾಸ್ತಥಾ ॥ ೧೧ ॥

ಪಶವಶ್ಚ ಮೃಗಾಶ್ಚೈವ ಪತಂಗಾಶ್ಚ ಸರೀಸೃಪಾಃ ।
ವೃಕ್ಷಗುಲ್ಮಲತಾಬಹ್ವ್ಯಸ್ಸಮಸ್ತಾಸ್ತೃಣಜಾತಯಃ ॥ ೧೨ ॥

ಸ್ಥೂಲಾ ಮಧ್ಯಾಸ್ತಥಾ ಸೂಕ್ಷ್ಮಾಸ್ಸೂಕ್ಷ್ಮತರಾಶ್ಚ ಯೇ ।
ದೇಹಭೇದಾ ಭವಾನ್ ಸರ್ವೇ ಯೇ ಕೇಚಿತ್ಪರ್ಗಳಾಶ್ರಯಾಃ ॥ ೧೩ ॥

೯-೧೦. ಸಂಧ್ಯಾಕಾಲಗಳು ರಾತ್ರಿ, ಹಗಲು, ಭೂಮಿ, ಆಕಾಶ, ವಾಯು, ನೀರು, ಅಗ್ನಿ, ಮನಸ್ಸು, ಬುದ್ಧಿ, ಅಹಂಕಾರ ಇವುಗಳೆಲ್ಲವೂ ನೀನೇ ಆಗಿರುವೆ. ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಬ್ರಹ್ಮ, ವಿಷ್ಣು, ಶಿವರೂಪದಿಂದ ನೀನೇ ಮಾಡುವೆ. ಸೃಷ್ಟ್ಯಾದಿಕಾರ್ಯಗಳನ್ನು ಮಾಡುವ ದಕ್ಷನೇ ಮುಂತಾದವರಿಗೂ ನೀನೇ ಸ್ವಾಮಿಯಾಗಿರುವೆ.

೧೧-೧೩. ದೇವತೆಗಳು ದೈತ್ಯರು, ಯಕ್ಷಸರು, ಸಿದ್ಧರು, ಪನ್ನಗರು, ಕೂಶ್ಮಾಂಡಪಿಶಾಚ, ಗಂಧರ್ವ ಮುಂತಾದವರು ಮನುಷ್ಯರು, ಪಶುಪಕ್ಷಿ, ಮೃಗಗಳು, ಹುಳುಗಳು, ವೃಕ್ಷ, ಗುಲ್ಮಲತೆಗಳು, ಸಮಸ್ತ ಹುಲ್ಲಿನ ಜಾತಿಗಳು, ಸ್ಥೂಲ ಮಧ್ಯಸೂಕ್ಷ್ಮತರವಾದ ದೇಹಗಳು ಪರಮಾಣುಗಳು ಇವುಗಳೆಲ್ಲವೂ ನೀನೇ ಆಗಿರುವೆ.

ಮಾಯಾ ತವೇಯಮಜ್ಞಾತಪರಮಾರ್ಥಾತಿ ಮೋಹಿನೀ ।
ಅನಾತ್ಮನ್ಯಾತ್ಮವಿಜ್ಞಾನಂ ಯಯಾ ಮೂಢೋ ನಿರುಧ್ಯತೇ ॥ ೧೪ ॥

ಅಸ್ವೇ ಸ್ವಮಿತಿ ಭಾವೋಽತ್ರ ಯತ್ಪುಂಸಾಮುಪಜಾಯತೇ ।
ಅಹಂ ಮಮೇತಿ ಭಾವೋ ಯತ್ ಪ್ರಾಯೇಣೈವಾಭಿಜಾಯತೇ ॥
ಸಂಸಾರಮಾತುರ್ಮಾಯಾಯಾಸ್ತವೈತನ್ನಾಥ ಚೇಷ್ಟಿತಂ ॥ ೧೫ ॥

ಯೈಸ್ಸ್ವಧರ್ಮಪರೈರ್ನಾಥ ನರೈರಾರಾಧಿತೋ ಭವಾನ್ ।
ತೇ ತರಂತ್ಯಖಿಲಾಮೇತಾಂ ಮಾಯಾಮಾತ್ಮವಿನಾಶಿನೀಂ ॥ ೧೬ ॥

ಬ್ರಹ್ಮಾದ್ಯಾಸ್ಸಕಲಾ ದೇವಾ ಮನುಷ್ಯಾಃ ಪಶವಸ್ತಥಾ ।
ವಿಷ್ಣುಮಾಯಾಮಹಾವರ್ತ ಮೋಹಾಂಧತಮಸಾ ವೃತಾಃ ॥ ೧೭ ॥

ಆರಾಧ್ಯ ತ್ವಾಮಭೀಪ್ಸಂತೇ ಕಾಮಾನಾತ್ಮಭವಕ್ಷಯಂ ।
ಯದೇತೇ ಪುರುಷಾ ಮಾಯಾ ಸೈವೇಯಂ ಭಗವಂಸ್ತವ ॥ ೧೮ ॥

೧೪-೧೫. ಇವುಗಳೆಲ್ಲವೂ ನಿನ್ನ ಪರಮಾರ್ಥಸ್ವರೂಪವನ್ನು ತಿಳಿಯದ ಅಜ್ಞಾನಿಗಳಿಗೆ ಮೋಹವನ್ನುಂಟುಮಾಡುವ ಮಾಯಾರೂಪಗಳಾಗಿವೆ ಆತ್ಮ ಸ್ವರೂಪವಲ್ಲದುದನ್ನು ಆತ್ಮಸ್ವರೂಪವೆಂದು ತಿಳಿಯುವುದೇ ಮಾಯೆಯು. ಈ ಮಾಯೆಯಿಂದ ಮೂಢನು ಜ್ಞಾನವಿಲ್ಲದವನಾಗುವನು. ಮನುಷ್ಯನಿಗೆ ತಾನಲ್ಲದ ಶರೀರಾದಿಗಳಲ್ಲಿ ತಾನೆಂಬ ಭಾವವು ಹುಟ್ಟಿ ನಾನು ನನ್ನದು ಎಂಬ ಅಭಿಮಾನವು ಉಂಟಾಗುವುದೇ ಸಂಸಾರೋತ್ಪತ್ತಿಗೆ ಕಾರಣವಾದ ನಿನ್ನ ಮಾಯೆಯ ಚೇಷ್ಟೆಯು.

೧೬-೧೯. ಓ ಸ್ವಾಮಿಯೇ ! ಸ್ವಧರ್ಮಾಸಕ್ತರಾದ ಯಾವ ಮನುಜರು ನಿನ್ನನ್ನು ಪೂಜಿಸುವರೋ ಅವರು ಈ ಎಲ್ಲ ಮಾಯೆಯನ್ನೂ ದಾಟಿ ತಮ್ಮ ದುಃಖದ ಬಿಡುಗಡೆಯನ್ನು ಹೊಂದುವರು. ಬ್ರಹ್ಮಾದಿ ಸಮಸ್ತ ದೇವತೆಗಳೂ ಮನುಷ್ಯರೂ

ಮಯಾ ತ್ವಂ ಪುತ್ರಕಾಮಿನ್ಯಾ ವೈರಿಪಕ್ಷಜಯಾಯ ಚ ।
ಆರಾಧಿತೋ ನ ಮೋಕ್ಷಾಯ ಮಾಯಾ ವಿಲಸಿತಂ ಹಿ ತತ್ ॥ ೯೯ ॥

ಕೌಪೀನಾಚ್ಛಾದನಪ್ರಾಯಾ ವಾಂಛಾಕಲ್ಪದ್ರುಮಾದಪಿ ।
ಜಾಯತೇ ಯದಪುಣ್ಯಾನಾಂ ಸೋಪರಾಧಸ್ತ್ವದೋಷಜಃ ॥ ೨೦ ॥

ತತ್ಪ್ರಸೀದಾಖಿಲಜಗನ್ಮಾಯಾ ಮೋಹಕರಾವ್ಯಯ ।
ಅಜ್ಞಾನಂ ಜ್ಞಾನಸದ್ಭಾವಭೂತಂ ಭೂತೇಶ ನಾಶಯ ॥ ೨೧ ॥

ಪಶುಗಳೂ ವಿಷ್ಣು ಮಾಯೆಯೆಂಬ ದೊಡ್ಡ ಕತ್ತಲೆಯಿಂದ ಆವರಿಸಿರುವರು. ಇದರಿಂದ ನಾನು ನನ್ನದು ಎಂಬ ಅಭಿಮಾನವೂ ಕರ್ತೃತ್ವ ಭೋಕ್ತೃತ್ವಗಳೂ ಉಂಟಾಗಿರುವುವು. ಅವರು ನಿನ್ನನ್ನು ಪೂಜಿಸಿ ತಮ್ಮ ಇಷ್ಟಾರ್ಥಗಳನ್ನು ಬಯಸುವರು. ಪುನರ್ಜನ್ಮನಾಶವನ್ನಪೇಕ್ಷಿಸುವುದಿಲ್ಲ. ಇದೂ ನಿನ್ನ ಮಾಯೆಯೇ ಆಗಿರುವುದು. ನಾನೂ ಪುತ್ರಾಪೇಕ್ಷೆಯಿಂದಲೂ, ಶತ್ರುಗಳನ್ನು ಜಯಿಸಬೇಕೆಂದೂ, ನಿನ್ನನ್ನು ಪೂಜಿಸಿದೆನು. ಮೋಕ್ಷಕ್ಕೋಸ್ಕರವಾಗಿ ನಿನ್ನನ್ನು ಪೂಜಿಸಲಿಲ್ಲ. ಇದೂ ಮಾಯೆಯ ವಿಲಾಸವೇ ಆಗಿರುವುದು.

೨೦. ಪುಣ್ಯಹೀನರು ತಮ್ಮ ಕರ್ಮದೋಷದಿಂದ ಕೇಳಿದುದನ್ನು ಕೊಡುವ ಕಲ್ಪವೃಕ್ಷವು ಸಿಕ್ಕಿದ್ದರೂ ಒಂದು ಕೌಪೀನವನ್ನು ಮಾತ್ರ ಕೇಳಿಕೊಳ್ಳುವರು. ಇದು ಅವರ ಕರ್ಮ ಫಲದ ದೋಷವಾಗಿರುವುದು. (ಪುಣ್ಯಹೀನರು ಇಷ್ಟಾರ್ಥಗಳನ್ನು ಬಯಸುವರೇ ಹೊರತು ಮೋಕ್ಷವನ್ನು ಬಯಸುವುದಿಲ್ಲವೆಂದು ಭಾವ.)

೨೧-೨೩. ಆದುದರಿಂದ ಸಮಸ್ತ ಜಗತ್ತಿಗೂ ಮಾಯೆಯಿಂದ ಮೋಹವನ್ನುಂಟುಮಾಡುವ ನಿತ್ಯನಾದ ಸ್ವಾಮಿಯೇ ನೀನು ಪ್ರಸನ್ನನಾಗು. ನಾನು ಜ್ಞಾನಿಯೆಂಬ ಅಭಿಮಾನ ಸ್ವರೂಪವಾದ ಅಜ್ಞಾನವನ್ನು ನಾಶಮಾಡು. ಚಕ್ರ, ಶಾರ್ಙ್ಗ, ಶಂಖ, ನಂದಕವೆಂಬ ಖಡ್ಗ, ಇವುಗಳನ್ನು ಧರಿಸಿದ ನಿನಗೆ ನಮಸ್ಕಾರ ಮಾಡುವೆನು

ನಮಸ್ತೇ ಚಕ್ರಹಸ್ತಾಯ ಶಾರ್ಙ್ಗಹಸ್ತಾಯ ತೇ ನ ಮಃ ।
ನಂದಹಸ್ತಾಯ ತೇ ವಿಷ್ಣೋ ಶಂಖಹಸ್ತಾಯ ತೇ ನಮಃ ॥ ೨೨ ॥

ವಿಶತ್ವೇಶ್ಯಾಮಿ ತೇ ರೂಪಂ ಸ್ಥೂಲಚಿಹ್ನೋಪಲಕ್ಷಿತಂ ।
ನ ಜಾನಾಮಿ ಪರಂ ಯತ್ತೇ ಪ್ರಸೀದ ಪರಮೇಶ್ವರ ॥ ೨೩ ॥

॥ ಶ್ರೀ ಪರಾಶರಃ ॥

ಅದಿತ್ಯೈವಂ ಸ್ತುತೋ ವಿಷ್ಣುಃ ಪ್ರಹಸ್ಯಾಹ ಸುರಾರಣಿಂ ।
ಮಾತಾ ದೇವಿ ತ್ವಮಸ್ಮಾಕಂ ಪ್ರಸೀದ ವರದಾ ಭವ ॥ ೨೪ ॥

॥ ಅದಿತಿರುವಾಚ ॥

ಏವಮಸ್ತು ಯಥೇಚ್ಛಾ ತೇ ತ್ವಮಶೇಷೈಸ್ಸುರಾಸುರೈಃ ।
ಅಜೇಯಃ ಪುರುಷವ್ಯಾಘ್ರ ಮರ್ತ್ಯಲೋಕೇ ಭವಿಷ್ಯಸಿ ॥ ೨೫ ॥

ತತಃ ಕೃಷ್ಣಸ್ಯ ಪತ್ನೀ ಚ ಶಕ್ರೇಣ ಸಹಿತಾದಿತಿಂ ।
ಸತ್ಯಭಾಮಾ ಪ್ರಣಮ್ಯಾಹ ಪ್ರಸೀದೇತಿ ಪುನಃ ಪುನಃ ॥ ೨೬ ॥

ಈ ಚಿಹ್ನೆಗಳಿಂದ ಕೂಡಿದ ನಿನ್ನ ಸ್ಥೂಲರೂಪವನ್ನು ನಾನು ನೋಡುವೆನು. ಸೂಕ್ಷ್ಮವಾದ ನಿನ್ನ ಪರರೂಪವನ್ನು ಕಾಣೆನು. ಆದುದರಿಂದ ಪರಮೇಶ್ವರನಾದ ನೀನು ಪ್ರಸನ್ನನಾಗು.

೨೪. ಹೀಗೆಂದು ಹೇಳಿದ ಅದಿತಿಗೆ ಕೃಷ್ಣನು ನಗುತ್ತ ಮತ್ತೆ ಅಜ್ಞಾನವನ್ನುಂಟುಮಾಡಿ ಅದಿತಿದೇವಿಯೇ ನೀನು ನಮಗೆಲ್ಲ ತಾಯಿಯಾದುದರಿಂದ ನಮ್ಮಲ್ಲಿ ಅನುಗ್ರಹವಿಟ್ಟು ವರವನ್ನು ಕೊಡು ಎಂದನು.

೨೫–೨೬. ಅದಿತಿಯು "ಪುರುಷಶ್ರೇಷ್ಠನೇ! ನಿನ್ನ ಇಷ್ಟದಂತೆಯೇ ಆಗಲಿ. ನೀನು ಸಮಸ್ತ ಸುರಾಸುರರಿಗೆ ಅಜೇಯನಾಗಿ ಭೂಲೋಕದಲ್ಲಿರು" ಎಂದಳು. ಬಳಿಕ ಕೃಷ್ಣನ ಪತ್ನಿಯಾದ ಸತ್ಯಭಾಮೆಯು ದೇವೇಂದ್ರನೊಡನೆ ಅದಿತಿಗೆ ನಮ

॥ ಅದಿತಿರುವಾಚ ॥

ಮತ್ಪ್ರಸಾದಾನ್ನ ತೇ ಸುಭ್ರು ಜರಾವೈರೂಪ್ಯಮೇವವಾ ।
ಭವಿಷ್ಯತ್ಯನವದ್ಯಾಂಗಿ ಸುಸ್ಥಿರಂ ನವಯೌವನಂ ॥ ೨೭ ॥

॥ ಶ್ರೀ ಪರಾಶರಃ ॥

ಅದಿತ್ಯಾ ತು ಕೃತಾನುಜ್ಞೋ ದೇವರಾಜೋ ಜನಾರ್ದನಂ ।
ಯಥಾವತ್ಪೂಜಯಾಮಾಸ ಬಹುಮಾನಪುರಸ್ಸರಂ ॥ ೨೮ ॥

ಶಚೀ ಚ ಸತ್ಯಭಾಮಾಯೈ ಪಾರಿಜಾತಸ್ಯ ಪುಷ್ಪಕಂ ।
ನ ದದೌ ಮಾನುಷೀಂ ಮತ್ವಾ ಸ್ವಯಂ ಪುಷ್ಪೈರಲಂಕೃತಾ ॥ ೨೯ ॥

ತತೋ ದದರ್ಶ ಕೃಷ್ಣೋಪಿಸತ್ಯಭಾಮಾ ಸಹಾಯವಾನ್ ।
ದೇವೋದ್ಯಾನಾನಿ ಹೃದ್ಯಾನಿ ನಂದನಾದೀನಿ ಸತ್ತಮ ॥ ೩೦ ॥

ಸ್ಕಾರ ಮಾಡಿ ಪ್ರಸನ್ನಳಾಗಬೇಕೆಂದು ಬೇಡಿಕೊಂಡಳು. ಅದಿತಿಯು " ಮಂಗಳ ಕರವಾದ ಹುಬ್ಬುಗಳುಳ್ಳ ಸತ್ಯಭಾಮೆಯೇ ನನ್ನ ಅನುಗ್ರಹದಿಂದ ನಿನಗೆ ಮುಪ್ಪಾಗಲಿ ಶರೀರದಲ್ಲಿ ವಿಕಾರವಾಗಲಿ ಉಂಟಾಗುವುದಿಲ್ಲ. ನಿನ್ನ ಯೌವನವು ಸ್ಥಿರವಾದು ದಾಗಿರುವುದು ' ಎಂದಳು.

೨೮–೨೯. ದೇವರಾಜನಾದ ಇಂದ್ರನು ಅದಿತಿಯ ಅಪ್ಪಣೆಯಿಂದ ಕೃಷ್ಣನಿಗೆ ವಿಧಿಯನ್ನನುಸರಿಸಿ ಪೂಜೆಯನ್ನು ಮಾಡಿ ಮಾರ್ಯಾದೆಯನ್ನು ಮಾಡಿದನು. ಶಚೀದೇವಿಯು ಸತ್ಯಭಾಮೆಯನ್ನು ಮನುಷ್ಯ ಸ್ತ್ರೀಯೆಂದು ತಿಳಿದು ಅವಳಿಗೆ ಪಾರಿ ಜಾತ ಪುಷ್ಪವನ್ನು ಕೊಡದೆ ತಾನು ಮಾತ್ರ ಆ ಹೂಗಳಿಂದ ಅಲಂಕಾರ ಮಾಡಿ ಕೊಂಡಿದ್ದಳು.

೩೦-೩೩. ಬಳಿಕ ಕೃಷ್ಣನು ಸತ್ಯಭಾಮೆಯೊಡನೆ ಮನೋಹರವಾದ ದೇವತೆ ಗಳ ನಂದನ ವನವೇ ಮುಂತಾದ ವನಗಳಲ್ಲಿ ಹೂಗೊಂಚಲುಗಳಿಂದ ಕೂಡಿದ ಗಿಡ

ದದರ್ಶ ಚ ಸುಗಂಧಾಢ್ಯಂ ಮಂಜರೀಪುಂಜಧಾರಿಣಂ ।
ನಿತ್ಯಾಹ್ಲಾದಕರಂ ತಾಮ್ರ ಬಾಲಪಲ್ಲವಶೋಭಿತಂ ॥ ೩೧ ॥

ವಂಥ್ಯಮಾನೇಽಮೃತೇ ಜಾತಂ ಜಾತರೂಪೋಪಮತ್ವಚಂ ।
ಪಾರಿಜಾತಂ ಜಗನ್ನಾಥಃ ಕೇಶವಃ ಕೇಶಿಸೂದನಃ ॥ ೩೨ ॥

ತುತೋಷ ಪರಮಪ್ರೀತ್ಯಾ ತರುರಾಜಮನುತ್ತಮಂ ।
ತಂ ದೃಷ್ಟ್ವಾ ಸ್ಮಾಹ ಗೋವಿಂದಂ ಸತ್ಯಭಾಮಾ ದ್ವಿಜೋತ್ತಮ ॥
ಕಸ್ಮಾನ್ನ ದ್ವಾರಕಾನೇಷ ನೀಯತೇ ಕೃಷ್ಣ ಪಾದಪಃ ॥ ೩೩ ॥

ಯದಿ ಚೇತ್ತ್ವದ್ಗ ತಃ ಸತ್ಯಂ ತ್ವಮತ್ಯರ್ಥಂ ಪ್ರಿಯೇತಿ ನೋ ।
ಮದ್ಗೇಹನಿಷ್ಕುಟೋದ್ಯಾಯ ತದಯಂ ನೀಯತಾಂ ತರುಃ ॥ ೩೪ ॥

ನ ಮೇಜಾಂಬವತೀ ತಾದೃಗಭೀಷ್ಟಾ ನ ಚ ರುಕ್ಮಿಣೀ ।
ಸತ್ಯೇ ಯಥಾ ತ್ವಮಿತ್ಯುಕ್ತಂ ತ್ವಯಾ ಕೃಷ್ಣಾ ಸಕೈಪ್ರಿಯಂ ॥ ೩೫ ॥

ಗಳನ್ನೂ ಯಾವಾಗಲೂ ಸಂತೋಷವನ್ನುಂಟುಮಾಡುವ ಕೆಂಪಾದ ಚಿಗುರುಗಳಿಂದ ಕೂಡಿದ ಚಿನ್ನದ ಬಣ್ಣದ ತೊಗಟೆಯುಳ್ಳ ಕ್ಷೀರಸಮುದ್ರವನ್ನು ಕಡೆದಾಗ ಆ ಸಮುದ್ರದಲ್ಲಿ ಹುಟ್ಟಿದ ಪಾರಿಜಾತ ವೃಕ್ಷವನ್ನು ಕಂಡು ಸಂತೋಷಪಟ್ಟನು. ಅವನ್ನು ಕಂಡು ಸತ್ಯಭಾಮೆಯು ಕೃಷ್ಣನನ್ನು ಕುರಿತು " ಈ ಪಾರಿಜಾತ ವೃಕ್ಷವನ್ನು ದ್ವಾರಕಾ ಪಟ್ಟಣಕ್ಕೆ ಏಕೆ ತೆಗೆದು ಕೊಂಡು ಹೋಗಬಾರದು " ಎಂದಳು.

೩೪–೩೭. ಮತ್ತು " ನೀನು ಜಾಂಬವತಿಯೂ ರುಕ್ಮಿಣಿಯೂ ನಿನ್ನಷ್ಟು ಪ್ರೀತಿಪಾತ್ರರಲ್ಲ. ಸತ್ಯೇ ! ನೀನೇ ಪ್ರೀತಿಪಾತ್ರಳು. ಎಂದು ಅನೇಕ ಬಾರಿ ಹೇಳಿರುವೆ ಇದು ನನ್ನ ಉಪಚಾರಕ್ಕಾಗಿ ಹೇಳಿದ ಮಾತಲ್ಲದೆ ನಿಜವಾಗಿದ್ದರೆ ನನ್ನ ಮನೆಯ ಕೈ ತೋಟದಲ್ಲಿ ಈ ಪಾರಿಜಾತದ ಮರವನ್ನು ಬೆಳೆಸಬೇಕು. ಅಲ್ಲಿ ಅಲಂಕಾರ

ಸತ್ಯಂ ತದ್ಯದಿ ಗೋವಿಂದ ನೋಪಚಾರಕೃತಂ ಮಮ ।
ತದಸ್ತು ಪಾರಿಜಾತೋಯಂ ಮುನು ಗೇಹ ವಿಭೂಷಣಂ ॥ ೩೬ ॥

ಬಿಭ್ರತೀ ಪಾರಿಜಾತಸ್ಯ ಕೇಶಪಕ್ಷೇಣ ಮಜರೀಂ ।
ಸಪತ್ನೀನಾಮಹಂ ಮಧ್ಯೇ ಶೋಭೇಯಮಿತಿ ಕಾಮುಯೇ ॥ ೩೭ ॥

॥ ಶ್ರೀ ಪರಾಶರಃ ॥

ಇತ್ಯುಕ್ತಸ್ಯ ಪ್ರಹಸ್ಯೇನಾಂ ಪಾರಿಜಾತಂ ಗರುತ್ಮತಿ ।
ಆರೋಪಯಾಮಾಸ ಹರಿಸ್ತಮೂಚುರ್ವನರಕ್ಷಿಣಃ ॥ ೩೮ ॥

ಭೋ ಶಚೀ ದೇವರಾಜಸ್ಯ ಮಹಿಷೀ ತತ್ಪರಿಗ್ರಹಂ ।
ಪಾರಿಜಾತಂ ನ ಗೋವಿಂದ ಹರ್ತುಮರ್ಹಸಿ ಪಾದಪಂ ॥ ೩೯ ॥

ಉತ್ಪನ್ನೋ ದೇವರಾಜಾಯ ದತ್ತಸ್ಸೋಽಪಿ ದದೌ ಪುನಃ ।
ಮಹಿಷ್ಯೈ ಸುಮಹಾಭಾಗ ದೇವ್ಯೈ ಶಚ್ಯೈ ಕುತೂಹಲಾತ್ ॥ ೪೦ ॥

ವಾಗಿರಲಿ ಅಲ್ಲಿಗೆ ಇದನ್ನು ತೆಗೆದುಕೊಂಡು ಹೋಗೋಣ. ನಾನು ಈ ಪಾರಿಜಾತದ ಗೊಂಚಲನ್ನು ತಲೆಯಲ್ಲಿ ಮುಡಿದುಕೊಂಡು ಸವತಿಯರ ನಡುವೆ ಪ್ರಕಾಶಿಸುತ್ತಿರ ಬೇಕೆಂದು ಬಯಸುವೆನು" ಎಂದಳು.

೩೮-೪೧. ಈ ಮಾತನ್ನು ಕೇಳಿ ಕೃಷ್ಣನು ಸ್ತ್ರೀಯರು ಅನರ್ಥವನ್ನುಂಟು ಮಾಡುವರೆಂಬ ಅಭಿಪ್ರಾಯದಿಂದ ನಕ್ಕು ಪಾರಿಜಾತವೃಕ್ಷವನ್ನು ಗರುಡನ ಮೇಲಿಟ್ಟು ಕೊಂಡನು. ಆಗ ವನಪಾಲಕರು ಕೃಷ್ಣನನ್ನು ಕುರಿತು" ಗೋವಿಂದನೇ! ಈ ಪಾರಿ ಜಾತವೃಕ್ಷವು ದೇವೇಂದ್ರನ ಪತ್ನಿಯಾದ ಶಚೀದೇವಿಗೆ ಸೇರಿದುದು. ಇದನ್ನು ನೀನು ತೆಗೆದುಕೊಂಡು ಹೋಗಬೇಡ. ಇದು ದೇವತೆಗಳು ಅಮೃತಕ್ಕಾಗಿ ಕ್ಷೀರಸಮುದ್ರ ವನ್ನು ಕಡೆದಾಗ ಹುಟ್ಟಿತು. ಆಗ ಅವರು ದೇವೇಂದ್ರನಿಗೆ ಇದನ್ನು ಕೊಟ್ಟರು.

ಶಚೀ ವಿಭೂಷಣಾರ್ಥಾಯ ದೇವೈರಮೃತಮಂಥನೇ ।
ಅಲಂಕೃತಿರಿಯಂ ನ ಕ್ಷೇಮೀ ಗೃಹೀತ್ವೈನಂ ಗಮಿಷ್ಯಸಿ ॥ ೪೧ ॥

ದೇವರಾಜೋ ಮುಖಪ್ರೇಕ್ಷೀ ಯಸ್ಯಾಸ್ತಸ್ಯಾಃ ಪರಿಗ್ರಹಂ ।
ಮೌಢ್ಯಾತ್ಕಾ ಪ್ರಾರ್ಥಯಸೇ ಕ್ಷೇಮೀ ಗೃಹೀತ್ವೈನಂ ಹಿ ಕೋ ವ್ರಜೇತ್

ಅವಶ್ಯಮಸ್ಯ ದೇವೇಂದ್ರೋ ನಿಷ್ಕೃತಿಂ ಕೃಷ್ಣ ಯಾಸ್ಯತಿ ।
ವಜ್ರೋದ್ಯತಕರಂ ಶಕ್ರಮನುಯಾಸ್ಯಂತಿ ಚಾಮರಾಃ ॥ ೪೩ ॥

ತದಲಂ ಸಕಲೈರ್ದೇವೈರ್ವಿಗ್ರಹೇಣ ತವಾಚ್ಯುತ ।
ವಿಷಾಕಲೆಟು ಯತ್ಕರ್ಮ ತನ್ನ ಶಂಸಂತಿ ಪಂಡಿತಾಃ ॥ ೪೪ ॥

॥ ಶ್ರೀ ಪರಾಶರಃ ॥

ಇತ್ಯುಕ್ತೇ ತೈರುವಾಚೈತಾನ್ ಸತ್ಯಭಾಮಾತಿ ಕೋಪಿನೀ ।
ಕಾ ಶಚೀ ಪಾರಿಜಾತಸ್ಯ ಕೋವಾ ಶಕ್ರಸ್ಸುರಾಧಿಪಃ ॥ ೪೫ ॥

ಆ ದೇವೇಂದ್ರನು ತನ್ನ ಪತ್ನಿಯಾದ ಶಚೀದೇವಿಯ ಅಲಂಕಾರಕ್ಕಾಗಿ ಅವಳಿಗೆ ಕೊಟ್ಟನು. ಇದನ್ನು ತೆಗೆದುಕೊಂಡು ನೀನು ಕ್ಷೇಮವಾಗಿ ಹೋಗಲಾರೆ.

೪೨–೪೪. ದೇವರಾಜನಿಗೆ ಪ್ರೀತಿಪಾತ್ರಳಾದ ಶಚೀ ದೇವಿಯ ಈ ವರವನ್ನು. ಅವಿವೇಕದಿಂದ ಅಪೇಕ್ಷಿಸಿ ಇದನ್ನು ತೆಗೆದುಕೊಂಡು ಯಾವನು ತಾನೆ ಸುಖವಾಗಿ ಹೋಗುವನು ? ದೇವೇಂದ್ರನು ಇದಕ್ಕೆ ಪ್ರತೀಕಾರವನ್ನು ಮಾಡಿಯೇ ಮಾಡುವನು. ವಜ್ರಾಯುಧವನ್ನು ಹಿಡಿದು ಬಂದ ದೇವತೆಗಳು ದೇವೇಂದ್ರನಿಗೆ ಸಹಾಯಕರಾಗಿ ಬರುವರು. ಎಲ್ಲ ದೇವತೆಗಳಿಗೂ ನಿನಗೂ ಯುದ್ಧವೇಕಾಗಬೇಕು ? ಕೊನೆಗೆ ದುಷ್ಟ ಫಲವನ್ನು ಕೊಡುವ ಕಾರ್ಯವನ್ನು ಬುದ್ಧಿವಂತರು ಮಾಡಬಾರದು " ಎಂದರು.

೪೫–೪೮. ವನಪಾಲಕರ ಈ ಮಾತನ್ನು ಕೇಳಿ ಸತ್ಯಭಾಮೆಯು ಕೋಪದಿಂದ " ಪಾರಿಜಾತ ವೃಕ್ಷಕ್ಕೂ, ಶಚಿಗೂ, ದೇವೇಂದ್ರನಿಗೂ, ಸಂಬಂಧವೇನು ? ಸಮುದ್ರ

ಸಾಮಾನ್ಯಸ್ಸರ್ವಲೋಕಸ್ಯ ಯದ್ಯೇಷೋಽಮೃತಮಂಥನೇ ।
ಸಮುತ್ಪನ್ನಸ್ತರುಃ ಕಸ್ಮಾದೇಕೋ ಗೃಹ್ಣಾತಿ ವಾಸವಃ ॥ ೪೬ ॥

ಯಥಾ ಸುಧಾಯಥೈವೇಂದು ರ್ಯಥಾ ಶ್ರೀರ್ಜನರಕ್ಷಿಣಃ ।
ಸಾಮಾನ್ಯಸ್ಸರ್ವಲೋಕಸ್ಯ ಪಾರಿಜಾತಸ್ತಥಾ ದ್ರುಮಃ ॥ ೪೭ ॥

ಭರ್ತೃಬಾಹು ಮಹಾಗರ್ವಾದ್ರುಣದ್ಧ್ಯೇನಮಥೋ ಕಚೀ ।
ತತ್ಪಥ್ಯತಾಮಲಂ ಕ್ಷಾಂತ್ಯಾ ಸತ್ಯಾ ಹಾರಯತಿ ದ್ರುಮಂ ॥ ೪೮ ॥

ಕಥ್ಯತಾಂ ಚ ದ್ರುತಂ ಗತ್ವಾ ಪೌಲೋಮ್ಯಾ ವಚನಂ ಮಮ ।
ಸತ್ಯಭಾಮಾ ವದತ್ಯೇತದಿತಿ ಗರ್ವೋದ್ಧತಾಕ್ಷರಂ ॥ ೪೯ ॥

ಯದಿ ತ್ವಂ ದಯಿತಾ ಭರ್ತುರ್ಯದಿ ವಶ್ಯಃ ಪತಿಸ್ತವ ।
ಮದ್ಭರ್ತುರ್ಹರತೋ ವೃಕ್ಷಂ ತತ್ಕಾರಯ ನಿವಾರಣಂ ॥ ೫೦ ॥

ಮಥನದಲ್ಲಿ ಹುಟ್ಟಿದ ಈ ವೃಕ್ಷವು ಎಲ್ಲರಿಗೂ ಸೇರಿದುದು. ಇದನ್ನು ಇಂದ್ರನೊಬ್ಬನೇ ತೆಗೆದುಕೊಳ್ಳಲು ಕಾರಣವೇನು ? ಅಮೃತ, ಚಂದ್ರ, ಲಕ್ಷ್ಮಿ, ಇವರು ಎಲ್ಲರಿಗೂ ಹೇಗೆ ಸಾಮಾನ್ಯವಾದುವಾಗಿರುವುದೋ ಹಾಗೆಯೇ ಈ ಪಾರಿಜಾತವೃಕ್ಷವೂ ಸರ್ವ ಸಾಮಾನ್ಯವಾದುದು. ವನಪಾಲಕರೇ ಗಂಡನ ಬಾಹುಪರಾಕ್ರಮದ ಗರ್ವದಿಂದ ಶಚಿಯು ತಡೆದರೆ ತಡೆಯಲಿ, ಸತ್ಯಭಾಮೆಯು ತೆಗೆದುಕೊಂಡು ಹೋಗುತ್ತಾಳೆಂದು ಬೇಗ ಹೋಗಿ ಶಚಿಗೆ ಹೇಳಿರಿ" ಎಂದು ಗರ್ವದಿಂದ ಹೇಳಿದಳು.

೫೦-೫೧. ಮತ್ತು " ಶಚಿಯೇ ನೀನು ಗಂಡನಿಗೆ ಪ್ರೀತಿ ಪಾತ್ರಳಾಗಿದ್ದರೆ ಗಂಡನು ನಿನ್ನ ವಶನಾಗಿದ್ದರೆ ನನ್ನ ಗಂಡನು ಪಾರಿಜಾತವೃಕ್ಷವನ್ನು ತೆಗೆದುಕೊಂಡು

ಜಾನಾಮಿ ತೇ ಪತಿಂ ಶಕ್ರಂ ಜಾನಾಮಿ ತ್ರಿದಶೇಶ್ವರಂ ।
ಪಾರಿಜಾತಂ ತಥಾಪ್ಯೇನಂ ಮಾನುಷೀ ಹಾರಯಾಮಿ ತೇ ॥ ೫೧ ॥

॥ ಶ್ರೀ ಪರಾಶರಃ ॥

ಇತ್ಯುಕ್ತಾ ರಕ್ಷಿಣೋ ಗತ್ವಾ ಶಚ್ಯಾಃ ಪ್ರೋಚುರ್ಯಥೋದಿತಂ ।
ಶ್ರುತ್ವಾ ಚೋತ್ಸಾಹಯಾಮಾಸ ಶಚೀ ಶಕ್ರಂ ಸುರಾಧಿಪಂ ॥ ೫೨ ॥

ತತಸ್ಸಮಸ್ತದೇವಾನಾಂ ಸೈನ್ಯೈಃ ಪರಿವೃತೋ ಹರಿಂ ।
ಪ್ರಯಯೌ ಪಾರಿಜಾತಾರ್ಥಮಿಂದ್ರೋ ಯೋದ್ಧುಂ ದ್ವಿಜೋತ್ತಮ ॥ ೫೩ ॥

ತತಃ ಪರಿಘನಿಸ್ತ್ರಿಂಶಗದಾಶೂಲವರಾಯುಧಾಃ ।
ಬಭೂವುಸ್ತ್ರಿದಶಾಸ್ಸರ್ವೇ ಶಕ್ರೇ ವಜ್ರಕರೇ ಸ್ಥಿತೇ ॥ ೫೪ ॥

ತತೋ ನಿರೀಕ್ಷ್ಯ ಗೋವಿಂದೋ ನಾಗರಾಜೋ ಪರಿಸ್ಥಿತಂ ।
ಶಕ್ರಂ ದೇವಪರೀವಾರಂ ಯುದ್ಧಾಯ ಸಮುಪಸ್ಥಿತಂ ॥ ೫೫ ॥

ಹೋಗುವುದನ್ನು ತಡೆಯಲಿ. ಹಾಗೆಮಾಡಿಸು, ನಿನ್ನ ಗಂಡನು ದೇವೇಂದ್ರನೆಂಬುದನ್ನು ಬಲ್ಲೆನು. ಆದರೂ ಮನುಷ್ಯಳಾದ ನಾನು ನಿನ್ನ ಪಾರಿಜಾತ ವೃಕ್ಷವನ್ನು ತೆಗೆದುಕೊಂಡು ಹೋಗುತ್ತೇನೆ" ಎಂದು ಹೇಳಿದಳು. ಎಂಬದಾಗಿ ಹೇಳಿರಿ ಎಂದು ಆ ವನಪಾಲಕರನ್ನು ಕಳುಹಿಸಿದಳು.

೫೨-೫೬. ಈ ಮಾತನ್ನು ಕೇಳಿ ವನರಕ್ಷಕರು ಹೋಗಿ ಶಚಿಗೆಹೇಳಿದರು. ಅವಳು ದೇವೇಂದ್ರನನ್ನು ಪ್ರೋತ್ಸಾಹಿಸಿದಳು. ದೇವೇಂದ್ರನು ದೇವತೆಗಳ ಸೈನ್ಯದೊಡನೆ ಪಾರಿಜಾತ ವೃಕ್ಷಕ್ಕಾಗಿ ಕೃಷ್ಣನೊಡನೆ ಯುದ್ಧಮಾಡಲು ಹೊರಟನು. ದೇವೇಂದ್ರನು ವಜ್ರಾಯುಧವನ್ನು ಹಿಡಿದು ನಿಲ್ಲಲು ದೇವತೆಗಳೆಲ್ಲರೂ ಕತ್ತಿ, ಗುರಾಣಿ, ಶೂಲ, ಗದೆ ಮುಂತಾದ ಆಯುಧಗಳನ್ನು ಹಿಡಿದು ಹೊರಟರು. ಐರಾವತದ

ಚಕಾರ ಶಂಖನಿಸ್ಸ್ವೋಪಂ ದಿಶಶ್ಶಬ್ದೇನ ಪೂರಯನ್ ।
ಮುಮೋಚ ಶರಸಂಘಾತಾನ್ ಸಹಸ್ರಾಯುತಶಶ್ಶಿತಾನ್ ॥ ೫೬ ॥

ತತೋ ದಿಶೋ ನಭಶ್ಚೈವ ದೃಷ್ಟ್ವಾ ಶರಶತೈಶ್ಚಿತಂ ।
ಮುಮುಚುಸ್ತ್ರಿದಶಾಸ್ಸರ್ವೇ ಹ್ಯಸ್ತ್ರಶಸ್ತ್ರಾಣ್ಯನೇಕಶಃ ॥ ೫೭ ॥

ಏಕೈಕಮಸ್ತ್ರಂ ಶಸ್ತ್ರಂ ಚ ದೇವೈರ್ಮುಕ್ತಂ ಸಹಸ್ರಶಃ ।
ಚಿಚ್ಛೇದ ಲೀಲಯೈವೇಶೋ ಜಗತಾಂ ಮಧುಸೂದನಃ ॥ ೫೮ ॥

ಪಾಶಂ ಸಲಿಲರಾಜಸ್ಯ ಸಮಾಕೃಷ್ಯೋರಗಾಸನಃ ।
ಚಕಾರ ಖಂಡಶಶ್ಚಂಚ್ವಾ ಬಾಲಪನ್ನಗದೇಹವತ್ ॥ ೫೯ ॥

ಯಮೇನ ಪ್ರಹಿತಂ ದಂಡಂ ಗದಾವಿಕ್ಷೇಪ ಖಂಡಿತಂ ।
ಪೃಥಿವ್ಯಾಂ ಪಾತಯಾಮಾಸ ಭಗವಾನ್ ದೇವಕೀಸುತಃ ॥ ೬೦ ॥

ಮೇಲೆ ಕುಳಿತು ದೇವತೆಗಳ ಪರಿವಾರದೊಡನೆ ಯುದ್ಧಕ್ಕೆ ಬಂದ ದೇವೇಂದ್ರನನ್ನು ಕಂಡು ಕೃಷ್ಣನು ಶಂಖಧ್ವನಿಯನ್ನು ಮಾಡಿ ಅನೇಕ ಹರಿತವಾದ ಬಾಣಗಳನ್ನು ಪ್ರಯೋಗಿಸಿದನು.

೫೭-೬೦. ಕೃಷ್ಣನು ಬಿಟ್ಟ ಬಾಣಗಳಿಂದ ದಿಕ್ಕುಗಳೂ, ಆಕಾಶವೂ ತುಂಬಲು ಸಮಸ್ತ ದೇವತೆಗಳೂ, ಅನೇಕ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸಿದರು. ಕೃಷ್ಣನು ಅವುಗಳೆಲ್ಲವನ್ನೂ ಲೀಲೆಯಿಂದ ಸಾವಿರ ಪಾಲುಗಳಾಗುವಂತೆ ಕತ್ತರಿಸಿದನು. ಗರುಡನು ವರುಣನ ಪಾಶವನ್ನು ಎಳೆದು ಹಾವುಗಳನ್ನು ಕತ್ತರಿಸುವಂತೆ ಅದನ್ನು ಕೊಕ್ಕಿನಿಂದ ತುಂಡು ತುಂಡು ಮಾಡಿದನು. ಯಮನು ಪ್ರಯೋಗಿಸಿದ ದಂಡಾಯುಧವು ಕೃಷ್ಣನ ಗದೆಯಿಂದ ತುಂಡಾಗಿ ಭೂಮಿಗೆ ಬಿದ್ದಿತು.

ತಿಬಿಶಾಂ ಚ ಧನೇಶಸ್ಯ ಚಕ್ರೇಣ ತಿಲಶೋ ವಿಭುಃ ।
ಚಕರ್ಷ ಕೌರಿರರ್ಕಂ ಚ ದೃಷ್ಟ್ವದೃಷ್ಟ್ವಾಹರೌಜಸಂ ॥ ೬೧ ॥

ವೀತೋಽಗ್ನಿಶ್ಶೀತತಾಂ ಬಾಣೈರ್ದ್ಯಾವಿತಾ ವಸವೋ ದಿಶಃ ।
ಚಕ್ರೈರ್ವಿಚ್ಛಿನ್ನ ಶೂಲಾಗ್ರಂ ರುದ್ರಾ ಭುವಿ ನಿಪಾತಿತಾಃ ॥ ೬೨ ॥

ಸಾಧ್ಯಾ ವಿಶ್ವೇಽಥ ಮರುತೋ ಗಂಧರ್ವಾಶ್ಚೈವ ಸಾಯಕೈಃ ।
ಶಾಙ್ಗಿಣಾ ಪ್ರೇರಿತೈರಸ್ತಾ ವ್ಯೋಮ್ನಿ ಕಾಲ್ಮಲಿತೂಲವತ್ ॥ ೬೩ ॥

ಗರುತ್ಮಾನಪಿ ತುಂಡೇನ ಪಕ್ಷಾಭ್ಯಾಂ ಚ ನಖಾಂಕುರೈಃ ।
ಭಕ್ಷಯುಂಸ್ತಾಡಯನ್ ದೇವಾನ್ ದಾರಯಂಶ್ಚ ಜಘಾರ ವೈ ॥ ೬೪ ॥

ತತಶ್ಶರಸಹಸ್ರೇಣ ದೇವೇಂದ್ರಮಧುಸೂದನೌ ।
ಪರಸ್ಪರಂ ವವರ್ಷಾತೇ ಧಾರಾಭಿರಿವ ತೋಯದೌ ॥ ೬೫ ॥

೬೧–೬೪. ಕೃಷ್ಣನು ಕುಬೇರನ ಪಲ್ಲಕ್ಕಿಯನ್ನು ಚಕ್ರದಿಂದ ಎಳ್ಳಿನಂತೆ ಚೂರುಮಾಡಿದನು. ಸೂರ್ಯನನ್ನು ಕಣ್ಣಿನಿಂದ ನೋಡಿ ಅವನ ಕಾಂತಿಯನ್ನು ಕಡಿಮೆಮಾಡಿದನು. ಬಾಣಗಳಿಂದ ಅಗ್ನಿಯನ್ನು ತಣ್ಣಗೆ ಮಾಡಿದನು. ಅಷ್ಟ ವಸುಗಳನ್ನು ದಿಕ್ಕುಗಳಿಗೆ ಓಡಿಸಿದನು. ಏಕಾದಶರುದ್ರರನ್ನೂ, ಅವರ ಶೂಲಾಯುಧ ಗಳನ್ನೂ ಚಕ್ರದಿಂದ ಕತ್ತರಿಸಿ ಭೂಮಿಗೆ ಕೆಡುಹಿದನು. ಸಾಧ್ಯರೂ, ವಿಶ್ವೇದೇವತೆ ಗಳೂ, ಗಂಧರ್ವರೂ, ಕೃಷ್ಣನು ಬಿಟ್ಟ ಬಾಣಗಳಿಂದ ಆಕಾಶದಲ್ಲಿ ಬೂರುಗದ ಹತ್ತಿಯು ಗಾಳಿಯಿಂದ ಹಾರಿಹೋಗುವಂತೆ ಹಾರಿಹೊಗುತ್ತಿದ್ದರು. ಗರುಡನ ಕೊಕ್ಕಿನಿಂದಲೂ, ರೆಕ್ಕೆಗಳಿಂದಲೂ, ಉಗುರುಗಳಿಂದಲೂ, ದೇವತೆಗಳನ್ನು ತಿನ್ನು ತ್ತಲೂ, ಹೊಡೆಯುತ್ತಲೂ, ಸೀಳುತ್ತಲೂ, ಸಂಚರಿಸುತ್ತಿದ್ದನು.

೬೫-೬೯. ತರುವಾಯ ದೇವೇಂದ್ರ ಕೃಷ್ಣರು ಮೇಘವು ಮಳೆಯನ್ನು ಸುರಿಸುವಂತೆ ಬಾಣಗಳ ಮಳೆಯನ್ನು ಸುರಿಸಿ ಯುದ್ಧಮಾಡಿದರು. ಐರಾವತ

ಐರಾವತೇನ ಗರುಡೋ ಯುಯುಧೇ ತತ್ರ ಸಂಕುಲೇ ।
ದೇವೈಸ್ಸಮಸ್ತೈರ್ಯುಯುಧೇ ಶಕ್ರೇಣ ಚ ಜನಾರ್ದನಃ ॥ ೬೬ ॥

ಭಿನ್ನೇಷ್ವಶೇಷ ಬಾಣೇಷು ಶಸ್ತ್ರೇಷ್ವಸ್ತ್ರೇಷು ಚ ತ್ವರನ್ ।
ಜಗ್ರಾಹ ವಾಸವೋ ವಜ್ರಂ ಕೃಷ್ಣಶ್ಚಕ್ರಂ ಸುದರ್ಶನಂ ॥ ೬೭ ॥

ತತೋ ಹಾಹಾಕೃತಂ ಸರ್ವಂ ತ್ರೈಲೋಕ್ಯಂ ದ್ವಿಜಸತ್ತಮ ।
ವಜ್ರ ಚಕ್ರಕರೌ ದೃಷ್ಟ್ವಾ ದೇವರಾಜ ಜನಾರ್ದನೌ ॥ ೬೮ ॥

ಕ್ಷಿಪ್ತಂ ವಜ್ರಮಥೇಂದ್ರೇಣ ಜಗ್ರಾಹ ಭಗವಾನ್ ಹರಿಃ ।
ನ ಮುಮೋಚ ತದಾ ಚಕ್ರಂ ಶಕ್ರಂ ತಿಷ್ಠೇತಿ ಚಾಬ್ರವೀತ್ ॥ ೬೯ ॥

ಪ್ರಣಷ್ಟವಜ್ರಂ ದೇವೇಂದ್ರಂ ಗರುಡಕ್ಷತವಾಹನಂ ।
ಸತ್ಯಭಾಮಾಬ್ರವೀದ್ವೀರಂ ಪಲಾಯನಪರಾಯಣಂ ॥ ೭೦ ॥

ದೊಡನೆ ಗರುಡನು ಯುದ್ಧ ಮಾಡಿದನು. ಕೃಷ್ಣನೊಬ್ಬನೇ ಸಮಸ್ತ ದೇವತೆಗಳೊಡನೆಯೂ, ಇಂದ್ರನೊಡನೆಯೂ, ಯುದ್ಧಮಾಡಿದನು. ಬಾಣಗಳೂ, ಶಸ್ತ್ರಾಸ್ತ್ರಗಳೂ, ನಾಶವಾದ ಮೇಲೆ ದೇವೇಂದ್ರನು ವಜ್ರವನ್ನೂ ಕೃಷ್ಣನು ಚಕ್ರವನ್ನೂ ಹಿಡಿದು ಯುದ್ಧಕ್ಕೆ ನಿಂತರು. ಇದನ್ನು ಕಂಡು ಮೂರು ಲೋಕದವರೂ ಭಯದಿಂದ ಹಾಹಾಕಾರ ಮಾಡಿದರು. ಇಂದ್ರನು ಬಿಟ್ಟ ವಜ್ರಾಯುಧವನ್ನು ಕೃಷ್ಣನು ಹಿಡಿದನು. ತನ್ನ ಚಕ್ರವನ್ನು ಪ್ರಯೋಗಿಸದೆ ದೇವೇಂದ್ರನನ್ನು ನಿಲ್ಲು ಎಂದು ಹೇಳಿದನು.

೭೦-೭೬. ತನ್ನ ವಜ್ರಾಯುಧವನ್ನು ಕಳೆದುಕೊಂಡು ಗರುಡನ ಏಟಿನಿಂದ ನೋವನ್ನು ಹೊಂದಿದ ವಾಹನವನ್ನು ಬಿಟ್ಟು ಓಡುವುದಕ್ಕೆ ಸಿದ್ಧನಾದ ದೇವೇಂದ್ರನನ್ನು ಕುರಿತು ಸತ್ಯಭಾಮೆಯು "ಮೂರು ಲೋಕಕ್ಕೂ ಒಡೆಯನಾದ ಶಚೀ ಪತಿ

ಶ್ರೀಯೋಽಯೇಕ ನ ತೇ ಯುಕ್ತಂ ಶಚೀಭರ್ತ್ಯುಃ ಪಲಾಯನಂ ।
ಪಾರಿಜಾತಸ್ರಗಾಭೋಗಾ ತ್ವಾಮುಪಸ್ಥಾಸ್ಯತೇ ಶಚೀ ॥ ೭೦ ॥

ಈದೃಶಂ ದೇವರಾಜ್ಯಂ ತೇ ಪಾರಿಜಾತಸ್ರಗುಜ್ವಲಾಂ ।
ಅಪಶ್ಯತೋ ಯಥಾಪೂರ್ವಂ ಪ್ರಣಯಾಭ್ಯಾಗತಾಂ ಶಚೀಂ ॥ ೭೨ ॥

ಅಲಂ ಶಕ್ರ ಪ್ರಯಾಸೇನ ಪ್ರೀಣಾಂ ಗಂತುಮರ್ಹಸಿ ।
ನೀಯತಾಂ ಪಾರಿಜಾತೋಽಯಂ ದೇವಾಸ್ತಂತು ಗತವ್ಯಥಾಃ ॥ ೭೩ ॥

ಪತಿಗರ್ವಾವಲೇಪೇನ ಬಹುಮಾನಪುರಸ್ಸರಂ ।
ನ ದದರ್ಶ ಗೃಹಂ ಯಾತಾಮುಪಚಾರೇಣ ಮಾಂ ಶಚೀ ॥ ೭೪ ॥

ಸ್ತ್ರೀತ್ವಾದಗುರುಚಿತ್ತಾಹಂ ಸ್ವಭರ್ತೃಶ್ಲಾಘನಾಪರಾ ।
ತತಃ ಕೃತವತೀ ಶಕ್ರ ಭವತಾ ಸಹ ವಿಗ್ರಹಂ ॥ ೭೫ ॥

ಯಾದ ದೇವೇಂದ್ರನೇ ನೀನು ಓಡಿಹೋಗುವುದು ಯೋಗ್ಯವಾದುದಲ್ಲ. ಪಾರಿಜಾತದ ಹೂವಿನ ಆಲಂಕಾರ ಮಾಡಿಕೊಂಡ ಶಚೀದೇವಿಯು ನಿನ್ನ ಸಮೀಪಕ್ಕೆ ಬರುವಳು. ಹಿಂದಿನಂತೆ ಪಾರಿಜಾತದ ಹೂವನ್ನಲಂಕರಿಸಿಕೊಂಡು ಪ್ರಕಾಶಿಸುತ್ತ ಪ್ರೀತಿಯಿಂದ ಬಂದ ಶಚೀದೇವಿಯನ್ನು ನೋಡದಿರುವ ನಿನ್ನ ದೇವರಾಜತ್ವವು ಎಂಥದು ? ದೇವೇಂದ್ರನೇ ಅಯಾಸಪಡಬೇಡ. ನಾಚಿಕೆಯನ್ನೂ ಹೊಂದಬೇಡ. ಈ ಪಾರಿಜಾತ ವೃಕ್ಷವನ್ನು ತೆಗೆದುಕೊಂಡು ಹೋಗು. ದೇವತೆಗಳೆಲ್ಲರೂ ದುಃಖ ಪಡದೆ ಇರಿ. ತನ್ನ ಪತಿಯು ದೇವರಾಜನೆಂಬ ಗರ್ವದಿಂದ ಶಚಿಯು ಮನೆಗೆ ಬಂದ ನನ್ನನ್ನು ನೋಡಲಿಲ್ಲ. ಉಪಚಾರದ ಮಾತನ್ನೂ ಆಡಲಿಲ್ಲ. ಸ್ತ್ರೀಸ್ವಭಾವದಿಂದ ಅಲ್ಪಬುದ್ಧಿಯುಳ್ಳ ನಾನು ನನ್ನ ಪತಿಯ ಶ್ಲಾಘನೆಗಾಗಿ ನಿನ್ನೊಡನೆ ಯುದ್ಧವನ್ನು ಮಾಡಿಸಿದೆನು. ಪರದ್ರವ್ಯವಾದ ಪಾರಿಜಾತ ವೃಕ್ಷವು ನನಗೆ ಬೇಡ. ಒಳ್ಳೆಯ

ಸಕಲಂ ಪಾರಿಜಾತೇನ ಪರಸ್ತ್ರೀನ ಹೃತೇನ ಮೇ ।
ರೂಪೇಣ ಗರ್ವಿತಾ ಸಾ ತು ಭರ್ತ್ರಾ ಕಾ ಸ್ತ್ರೀ ನ ಗರ್ವಿತಾ ॥ ೭೬ ॥

॥ ಶ್ರೀ ಪರಾಶರಃ ॥

ಇತ್ಯುಕ್ತೋ ವೈ ನಿವವೃತೇ ದೇವರಾಜಸ್ತಯಾ ದ್ವಿಜ ।
ಪ್ರಾಹ ಚೈನಾಮಲಂ ಚಂಡಿ ಸಖ್ಯುಃ ಖೇದೋಕ್ತಿವಿಸ್ತರೈಃ ॥ ೭೭ ॥

॥ ಇಂದ್ರೋವಾಚ ॥

ನ ಚಾಪಿ ಸರ್ಗಸಂಹಾರಸ್ಥಿತಿಕರ್ತಾಖಿಲಸ್ಯ ಯಃ ।
ಜಿತಸ್ಯ ತೇ ಮೇ ವ್ರೀಳಾ ಜಾಯತೇ ವಿಶ್ವರೂಪಿಣಾ ॥ ೭೮ ॥

ಯಸ್ಮಾಜ್ಜಗತ್ಸಕಲಮೇತದನಾದಿಮಧ್ಯಾ
ದಸ್ಮಿನ್ ಯತಶ್ಚ ನ ಭವಿಷ್ಯತಿ ಸರ್ವಭೂತಾತ್ ।
ತೇನೋದ್ಭವಪ್ರಳಯಪಾಲನ ಕಾರಣೇನ
ವ್ರೀಳಾ ಕಥಂ ಭವತಿ ದೇವಿ ನಿರಾಕೃತಸ್ಯ ॥ ೭೯ ॥

ರೂಪವುಳ್ಳ ಸ್ತ್ರೀಯು ವೀರನಾದ ಪತಿಯನ್ನು ಪಡೆದಮೇಲೆ ಯಾವಳು ತಾನೇ ಗರ್ವ ಪಡದೆ ಇದ್ದಾಳು? ಎಂದು ಹೇಳಿದಳು.

೭೭-೭೮. ಮೈತ್ರೇಯನೇ ಸತ್ಯಭಾಮೆಯ ಮಾತನ್ನು ಕೇಳಿ ದೇವರಾಜನು ಹಿಂದಿರುಗಿ ಬಂದು ಹಠಗಾತಿಯಾದ ಸತ್ಯಭಾಮಾ ದೇವಿಯೇ ಮಿತ್ರರಾದ ಕೃಷ್ಣನಿಗೂ ನನಗೂ ಭೇದಬುದ್ಧಿಯನ್ನುಂಟುಮಾಡಿದುದು ಸಾಕು. ಪ್ರಪಂಚಸ್ವರೂಪನ್ನೂ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಮಾಡುವವನೂ, ಅದ ಕೃಷ್ಣನಿಗೆ ನಾನು ಸೋತುದು ನನಗೆ ನಾಚಿಕೆಯನ್ನುಂಟುಮಾಡುವುದಿಲ್ಲ.

೭೯. ಆದಿಮಧ್ಯಾಂತಗಳಿಲ್ಲದ ಸರ್ವಭೂತ ಸ್ವರೂಪನಾದ ಯಾವ ಪರಮಾತ್ಮನಿಂದ ಸಕಲ ಜಗತ್ತೂ ಹುಟ್ಟಿ ಯಾವನಲ್ಲಿ ಲಯಹೊಂದುವುದೋ ಅಂತಹ ಸೃಷ್ಟಿ, ಸ್ಥಿತಿ, ಸಂಹಾರ ಕಾರಣನೂ, ನಿರಾಕಾರನೂ, ಅದ ದೇವನಿಂದ ನನಗೆ ಹೇಗೆ ನಾಚಿಕೆಯುಂಟಾಗುವುದು?

ಸಕಲಭುವನಸೂತಿರ್ಮೂರ್ತಿರಲ್ಪಾಲ್ಪ ಸೂಕ್ಷ್ಮಾ ಽ
ವಿದಿತ ಸಕಲವೇದ್ಯೈರ್ಜ್ಞಾಯತೇ ಯಸ್ಯ ನಾನ್ಯೈಃ ।
ತಮುಜಮಕೃತಮೀಶಂ ಶಾಶ್ವತಂ ಸ್ವೇಚ್ಛಯೈನಂ
ಜಗದುಪಕೃತಿಮರ್ತ್ಯಂ ಕೋ ವಿಜೇತುಂ ಸಮರ್ಥಃ ॥ ೮೦ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ತ್ರಿಂಶೋಽಧ್ಯಾಯಃ

---

೮೦. ಸಕಲ ಪ್ರಪಂಚವನ್ನೂ ಸೃಷ್ಟಿಸುವ ಅತ್ಯಂತ ಸೂಕ್ಷ್ಮ ಸ್ವರೂಪನಾದ ಪರಮಾತ್ಮನನ್ನು ಸರ್ವಜ್ಞರಾದ ಜ್ಞಾನಿಗಳು ತಿಳಿವರು. ಇತರರು ತಿಳಿಯಲಾರರು. ಅಂತಹ ಉತ್ಪತ್ತಿರಹಿತನೂ, ಸ್ವತಸ್ಸಿದ್ಧನೂ, ಈಶ್ವರನೂ, ನಿತ್ಯನೂ, ಜಗತ್ತಿನ ಉಪಕಾರಕ್ಕಾಗಿ ಮನುಷ್ಯಾವತಾರವನ್ನು ಮಾಡಿದವನೂ ಆದ ಕೃಷ್ಣನನ್ನು ಯಾವನು ಜಯಿಸಲು ಸಮರ್ಥನಾಗುವನು ?

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ

ಮೂವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಏಕವಿಂಶೋಽಧ್ಯಾಯಃ

॥ ಶ್ರೀ ಪರಾಶರಃ ॥

ಸಂಸ್ತುತೋ ಭಗವಾನಿತ್ಥಂ ದೇವರಾಜೇನ ಕೇಶವಃ ।
ಪ್ರಹಸ್ಯ ಭಾವಗಂಭೀರಮುವಾಚೇಂದ್ರಂ ದ್ವಿಜೋತ್ತಮ ॥ ೧ ॥

॥ ಶ್ರೀ ಕೃಷ್ಣಃ ॥

ದೇವರಾಜೋ ಭವಾನಿಂದ್ರೋ ವಯಂ ಮರ್ತ್ಯಾ ಜಗತ್ಪತೇ ।
ಕ್ಷಂತವ್ಯಂ ಭವತೈವೇದಮಪರಾಧ ಕೃತಂ ಮಯಾ ॥ ೨ ॥

ಪಾರಿಜಾತತರುಶ್ಚಾಯಂ ನೀಯತಾಮುಚಿತಾಸ್ಪದಂ ।
ಗೃಹೀತೋಽಯಂ ಮಯಾ ಶಕ್ರ ಸತ್ಯಾವಚನ ಕಾರಣಾತ್ ॥ ೩ ॥

ಮೂವತ್ತೊಂದನೆಯ ಅಧ್ಯಾಯವು

೧-೪. ಈ ರೀತಿಯಲ್ಲಿ ದೇವರಾಜನಾದ ದೇವೇಂದ್ರನು ಸ್ತೋತ್ರಮಾಡಿದ ಮೇಲೆ ಭಗವಂತನಾದ ಕೃಷ್ಣನು ಗಂಭೀರಭಾವದಿಂದ ನಗುತ್ತ ದೇವೇಂದ್ರನನ್ನು ಕುರಿತು " ಇಂದ್ರನೇ ನೀನು ದೇವರಾಜನು ನಾವು ಮನುಜರು. ನಾನು ಮಾಡಿದ ತಪ್ಪನ್ನು ನೀನು ಕ್ಷಮಿಸಬೇಕು. ಈ ಪಾರಿಜಾತ ವೃಕ್ಷವನ್ನು ಆದರ ಸ್ಥಳಕ್ಕೆ ತೆಗೆದುಕೊಂಡು ಹೋಗು. ನಾನು ಸತ್ಯಭಾಮೆಯ ಮಾತಿನಿಂದ ಇದನ್ನು ತೆಗೆದು ಕೊಂಡೆನು. ನೀನು ನನ್ನ ಮೇಲೆ ಪ್ರಯೋಗಿಸಿದ ವಜ್ರಾಯುಧವನ್ನು ತೆಗೆದುಕೋ.

ವಜ್ರಂ ಚೇದಂ ಗೃಹಾಣ ತ್ವಂ ಯದತ್ರ ಪ್ರಹಿತಂ ತ್ವಯಾ ।
ತವೈವೈತತ್ಪ್ರಹರಣಂ ಶಕ್ರವೈರಿವಿದಾರಣಂ ॥ ೪ ॥

॥ ಇಂದ್ರೋವಾಚ ॥

ವಿಮೋಹಯಸಿ ಮಾಮೀಶ ಮರ್ತ್ಯೋಽಹಮಿತಿ ಕಂವದನ್ ।
ಜಾನೀಮಸ್ತ್ವಾಂ ಭಗವತೋ ನ ತು ಸೂಕ್ಷ್ಮವಿದೋ ವಯಂ ॥ ೫ ॥

ಯೋಽಸಿ ಸೋಽಸಿ ಜಗತ್ರ್ತ್ರಾಣಪ್ರವೃತ್ತೌ ನಾಥ ಸಂಸ್ಥಿತಃ ।
ಜಗತಶ್ಶಲ್ಯನಿಷ್ಕರ್ಷಂ ಕರೋಷ್ಯಸುರಸೂದನ ॥ ೬ ॥

ನೀಯತಾಂ ಪಾರಿಜಾತೋಽಯಂ ಕೃಷ್ಣದ್ವಾರವತೀಂ ಪುರೀಂ ।
ಮರ್ತ್ಯಲೋಕೇ ತ್ವಯಾ ತ್ಯಕ್ತೇ ನಾಯಂ ಸಂಸ್ಥಾಸ್ಯತೇ ಭುವಿ ॥ ೭ ॥

ಇದು ಶತ್ರುಗಳನ್ನು ನಾಶಮಾಡುವ ನಿನ್ನ ಆಯುಧವಾಗಿಯೇ ಇರುವುದು" ಎಂದು ಹೇಳಿದನು.

೫-೮. ದೇವೇಂದ್ರನು 'ಈಶ್ವರನೇ ನಾನು ಮನುಷ್ಯನೆಂದು ಹೇಳುತ್ತ ನಮ್ಮನ್ನೇಕೆ ಮೋಹಗೊಳಿಸುವೆ. ನೀನು ಭಗವಂತನ ಸಗುಣರೂಪನೆಂದು ನಾವು ತಿಳಿದಿರುವೆವು. ನಿನ್ನ ಸೂಕ್ಷ್ಮ ಸ್ವರೂಪವನ್ನು ತಿಳಿದವರಲ್ಲ. ಲೋಕವನ್ನು ರಕ್ಷಿಸುವ ಕೆಲಸದಲ್ಲಿರುವ ನೀನು ಪರಮಾತ್ಮನೇ ಆಗಿರುವೆ. ರಾಕ್ಷಸರನ್ನು ಸಂಹರಿಸುವ ನೀನು ಜಗತ್ತಿನ ಶತ್ರುಗಳನ್ನು ನಾಶಮಾಡುತ್ತಿರುವೆ. ಈ ಪಾರಿಜಾತ ವೃಕ್ಷವನ್ನು ದ್ವಾರಕಾಪಟ್ಟಣಕ್ಕೆ ತೆಗೆದುಕೊಂಡು ಹೋಗು. ನೀನು ಭೂಲೋಕವನ್ನು ಬಿಟ್ಟ ಮೇಲೆ ಇದು ಭೂಮಿಯಲ್ಲಿರುವುದಿಲ್ಲ. ದೇವದೇವನೇ, ಜಗತ್ತಿಗೆ ಸ್ವಾಮಿಯೇ,

ದೇವ ದೇವ ಜಗನ್ನಾಥ ಕೃಷ್ಣವಿಷ್ಣೋ ಮಹಾಭುಜ ।
ಶಂಖಚಕ್ರಗದಾಪಾಣೇ ಕ್ಷಮಸ್ವೈತದ್ಮತಿಕ್ರಮಂ ॥ ೪ ॥

॥ ಶ್ರೀ ಪರಾಶರಃ ॥

ತಥೇತ್ಯುಕ್ತ್ವಾ ತು ದೇವೇಂದ್ರಮಾಜಗಾಮ ಭುವಂ ಹರಿಃ ।
ಪ್ರಸಕ್ತೈಸ್ಸಿದ್ಧಗಂಧರ್ವೈಸ್ತೂಯಮಾನಸ್ಸುರರ್ಷಿಭಿಃ ॥ ೯ ॥

ತತಶ್ಶಂಖಮುಪಾಧ್ಮಾಯ ದ್ವಾರಕೋಪರಿಸಂಸ್ಥಿತಃ ।
ಹರ್ಷಮುತ್ಪಾದಯಾಮಾಸ ದ್ವಾರಕಾವಾಸಿನಾಂ ದ್ವಿಜ ॥ ೧೦ ॥

ಅವತೀರ್ಯಾಥ ಗರುಡಾತ್ಸತ್ಯಭಾಮಾ ಸಹಾಯವಾನ್ ।
ನಿಷ್ಕುಟೇ ಸ್ಥಾಪಯಾಮಾಸ ಪಾರಿಜಾತಂ ಮಹಾತರುಂ ॥ ೧೧ ॥

ಯಮಭ್ಯೇತ್ಯ ಜನಸ್ಸರ್ವೋ ಜಾತಿಂ ಸ್ಮರತಿ ಪೌರ್ವಿಕೀಂ ।
ವಾಸ್ಯತೇ ಯಸ್ಯ ಪುಷ್ಪೋತ್ಥಗಂಧೇನೋರ್ವೀ ತ್ರಿಯೋಜನಂ ॥ ೧೨ ॥

ಸರ್ವವ್ಯಾಪಿಯಾದ ಕೃಷ್ಣನೇ ಶಂಖ, ಚಕ್ರ, ಗಧಾಪಾಣಿಯಾದ ಮಹಾಪರಾಕ್ರಮಿಯೇ ನಾನು ಮಾಡಿದ ಯುದ್ಧರೂಪವಾದ ಅಪರಾಧವನ್ನು ಕ್ಷಮಿಸು' ಎಂದು ಸ್ತೋತ್ರವಾಡಿದನು.

೯–೧೦. ಕೃಷ್ಣನು ದೇವೇಂದ್ರನಿಗೆ ಹಾಗೆಯೇ ಆಗಲೆಂದು ಹೇಳಿ ಸಿದ್ಧರೂ, ಗಂಧರ್ವರೂ, ದೇವರ್ಷಿಗಳೂ, ಸ್ತೋತ್ರಮಾಡುತ್ತಿರಲು ಭೂಲೋಕಕ್ಕೆ ಬಂದು ದ್ವಾರಕಾ ಪಟ್ಟಣದ ಮೇಲೆ ಶಂಖವನ್ನೂದಿ ಪಟ್ಟಣದಲ್ಲಿರುವ ಜನರಿಗೆಲ್ಲ ಸಂತೋಷವನ್ನುಂಟುಮಾಡಿದನು.

೧೧–೧೩. ಆ ಮೇಲೆ ಸತ್ಯಭಾಮೆಯೊಡನೆ ಗರುಡನಿಂದಿಳಿದು ಪಾರಿಜಾತ ವೃಕ್ಷವನ್ನು ಮನೆಯ ಕೈತೋಟದಲ್ಲಿರಿಸಿದನು. ಆ ವೃಕ್ಷದ ಸಮೀಪಕ್ಕೆ ಬಂದ ಜನರೆಲ್ಲರೂ ತಮ್ಮ ಪೂರ್ವಜನ್ಮದ ಸ್ಮರಣೆಯನ್ನು ಪಡೆಯುತ್ತಿದ್ದರು. ಅದರ

ತತಸ್ತೇ ಯಾದವಾಸ್ಸರ್ವೇ ದೇಹಬಂಧಾನಮಾನುಷಾನ್ ।
ದದೃಶುಃ ಪಾದಪೇ ತಸ್ಮಿನ್ ಕುರ್ವಂತೋ ಮುಖದರ್ಶನಂ ॥ ೧೩ ॥

ಕಂಕೇರೈಸ್ಸಮುಪಾನೀತಂ ಹಸ್ತ್ಯಶ್ವಾದಿ ತತೋ ಧನಂ ।
ವಿಭಜ್ಯ ಪ್ರದದೌ ಕೃಷ್ಣೋ ಬಾಂಧವಾನಾಂ ಮಹಾಮತಿಃ ॥ ೧೪ ॥

ಕನ್ಯಾಶ್ಚ ಕೃಷ್ಣೋ ಜಗ್ರಾಹ ನರಕಸ್ಯ ಪರಿಗ್ರಹಾನ್ ॥ ೧೫ ॥

ತತಃ ಕಾಲೇ ಶುಭೇ ಪ್ರಾಪ್ತೇ ಉಪಯೇಮೇ ಜನಾರ್ದನಃ ।
ತಾಃ ಕಾನ್ಯಾ ನರಕೇಣಾಸಂಸ್ಸರ್ವತೋ ಯಾಸ್ಸಮಾಹೃತಾಃ ॥ ೧೬ ॥

ಏಕಸ್ಮಿನ್ನೇವ ಗೋವಿಂದಃ ಕಾಲೇ ತಾಸಾಂ ಮಹಾಮುನೇ ।
ಜಗ್ರಾಹ ವಿಧಿವತ್ಪಾಣೀನ್ ಪೃಥಗ್ಗೇಹೇಷು ಧರ್ಮತಃ ॥ ೧೭ ॥

ಷೋಡಶಸ್ತ್ರೀಸಹಸ್ರಾಣಿ ಶತಮೇಕಂ ತತೋऽಧಿಕಂ ।
ತಾವಂತಿ ಚಕ್ರೇರೂಪಾಣಿ ಭಗವಾನ್ ಮಧುಸೂದನಃ ॥ ೧೮ ॥

ಹೂವಿನ ಸುವಾಸನೆಯು ಮೂರು ಯೋಜನದವರೆಗೂ ಹರಡುತ್ತಿತ್ತು. ಯಾದವರೆಲ್ಲರೂ ಬಂದು ಆ ವೃಕ್ಷದಲ್ಲಿ ತಮ್ಮ ಮುಖವನ್ನು ನೋಡಿಕೊಂಡು (ಪೂರ್ವಜನ್ಮದ ಸ್ಮರಣೆಯಿಂದ) ತಮ್ಮ ಶರೀರವು ಮನುಷ್ಯಸಂಬಂಧವಾದುದಲ್ಲ (ದೇವಾಕಾರವು) ವೆಂದು ಕಂಡುಕೊಂಡರು.

೧೪-೧೮. ಕೃಷ್ಣನು ನರಕನ ರಾಜಧಾನಿಯಿಂದ ಆಳುಗಳು ತಂದ ಆನೆ, ಕುದುರೆ, ಧನ, ಮುಂತಾದುವುಗಳನ್ನು ತನ್ನ ಬಂಧುಗಳಿಗೆ ಹಂಚಿಕೊಟ್ಟನು. ನರಕನು ತಾನು ವಿವಾಹಮಾಡಿಕೊಳ್ಳಬೇಕೆಂದು ಸಕಲದೇಶಗಳಿಂದಲೂ ತಂದು ಸೆರೆಯಲ್ಲಿಟ್ಟಿದ್ದ ಹದಿನಾರು ಸಾವಿರದ ನೂರು ಜನ ಕನ್ಯೆಯರನ್ನು ಒಂದು ಶುಭದಿನದಲ್ಲಿ ಕೃಷ್ಣನು ವಿವಾಹ ಮಾಡಿಕೊಂಡನು. ಒಂದೇ ಕಾಲದಲ್ಲಿ ಹದಿನಾರು ಸಾವಿರದ ನೂರುರೂಪಗಳಿಂದ ವಿಧಿಗನುಸಾರವಾಗಿ ಅವರನ್ನು ಮದುವೆಯಾದನು.

ಏಕೈಕಮೇವ ತಾಃ ಕನ್ಯಾ ಮೇನಿರೇ ಮಧುಸೂದನಃ ।
ಮಯ್ಯೇವ ಪಾಣಿಗ್ರಹಣಂ ಮೈತ್ರೇಯ ಕೃತವಾನಿತಿ ॥ ೯೯ ॥

ನಿಶಾಸು ಚ ಜಗತ್ಸ್ರಷ್ಟಾ ತಾಸಾಂ ಗೇಹೇಷು ಕೇಶವಃ ।
ಉವಾಸ ವಿಪ್ರ ಸರ್ವಾಸಾಂ ವಿಶ್ವರೂಪಧರೋ ಹರಿಃ ॥ ೨೦ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ಏಕತ್ರಿಂಶೋಽಧ್ಯಾಯಃ

---

೧೯. ಮೈತ್ರೇಯನೇ ಆ ಕನ್ಯೆಯರು ಪ್ರತಿಯೊಬ್ಬರೂ ಕೃಷ್ಣನು ನನ್ನೊಬ್ಬಳನ್ನೇ ವಿವಾಹಮಾಡಿಕೊಂಡನೆಂದು ತಿಳಿದುಕೊಂಡರು.

೨೦. ಕೃಷ್ಣನು ವಿಶ್ವರೂಪವನ್ನು ಧರಿಸಿ ರಾತ್ರಿಯ ಕಾಲದಲ್ಲಿ ಆ ಎಲ್ಲ ಕನ್ಯೆಯರ ಮನೆಯಲ್ಲಿಯೂ ಇರುತ್ತಿದ್ದನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ

ಮೂವತ್ತೊಂದನೆಯ ಅಧ್ಯಾಯವು

ಮುಗಿದುದು

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ದ್ವಾತ್ರಿಂಶೋಽಧ್ಯಾಯಃ

॥ ಶ್ರೀ ಪರಾಶರಃ ॥

ಪ್ರದ್ಯುಮ್ನಾದ್ಯಾಃ ಹರೇಃ ಪುತ್ರಾಃ ರುಕ್ಮಿಣ್ಯಾಂ ಕಥಿತಾಸ್ತ್ವಯಾ ।
ಭಾನುಭೌಮೇರಿಕಾದ್ಯಾಂಶ್ಚ ಸತ್ಯಭಾಮಾ ವ್ಯಜಾಯತ ॥ ೧ ॥

ದೀಪ್ತಿಮತ್ತಾಮ್ರಪಕ್ಷಾದ್ಯಾ ರೋಹಿಣ್ಯಾಂ ಕಥಿತಾ ಹರೇಃ ।
ಬಭೂವುರ್ಜಾಂಬವತ್ಯಾಂ ಚ ಸಾಂಬಾದ್ಯಾ ಬಾಹುಶಾಲಿನಃ ॥ ೨ ॥

ತನಯಾ ಭದ್ರವಿಂದಾದ್ಯಾ ನಾಗ್ನಜಿತ್ಯಾಂ ಮಹಾಬಲಾಃ ।
ಸಂಗ್ರಾಮಜಿತ್ಪ್ರಧಾನಾಸ್ತು ಶೈಬ್ಯಾಯಾಂ ಚ ಹರೇಸ್ಸುತಾಃ ॥ ೩ ॥

ವೃಕಾದ್ಯಾಶ್ಚ ಸುತಾಮಾದ್ರ್ಯಾಂ ಗಾತ್ರವತ್ಪ್ರಮುಖಾನ್ ಸುತಾನ್ ।
ಅವಾಪ ಲಕ್ಷ್ಮಣಾ ಪುತ್ರಾನ್ ಕಾಳಿಂದ್ಯಾಶ್ಚ ಶ್ರುತಾದಯಃ ॥ ೪ ॥

ಮೂವತ್ತೆರಡನೆಯ ಅಧ್ಯಾಯವು.

೧–೪. ಮೈತ್ರೇಯನೇ ರುಕ್ಮಿಣಿಯಲ್ಲಿ ಹುಟ್ಟಿದ ಪ್ರದ್ಯುಮ್ನನೇ ಮುಂತಾದ ಕೃಷ್ಣನ ಪುತ್ರರನ್ನು ನಿನಗೆ ಹೇಳಿರುವೆನು. ಕೃಷ್ಣನಿಗೆ ಸತ್ಯಭಾಮೆಯಲ್ಲಿ ಭಾನು, ಭೌಮ. ಈರಿಕ ಮುಂತಾದವರೂ ರೋಹಿಣಿಯಲ್ಲಿ ದೀಪ್ತಿಮಂತ ತಾಮ್ರಪಕ್ಷ ಮುಂತಾದವರೂ, ಜಾಂಬವತಿಯಲ್ಲಿ ಸಾಂಬನೇ ಮೊದಲಾದವರೂ, ಆಗ್ನಜಿತಿಯಲ್ಲಿ ಭದ್ರವಿಂದ, ಮುಂತಾದವರೂ ಶೈಬ್ಯೆಯಲ್ಲಿ ಸಂಗ್ರಾಮಜಿತು ಮುಂತಾದವರೂ, ಮಾದ್ರಿಯಲ್ಲಿ ವೃಕಾದಿಗಳೂ, ಲಕ್ಷ್ಮಣಾ ಎಂಬವಳಲ್ಲಿ ಗಾತ್ರವಂತನೇ ಮೊದಲಾವ

ಅನ್ಯಾಸಾಂ ಚೈವ ಭಾರ್ಯಾಣಾಂ ಸಮುತ್ಪನ್ನಾನಿ ಚಕ್ರಿಣಃ ।
ಅಷ್ಟಾಯುತಾನಿ ಪುತ್ರಾಣಾಂ ಸಹಸ್ರಾಣಿ ಶತಂ ತಥಾ ॥ ೫ ॥

ಪ್ರದ್ಯುಮ್ನಃ ಪ್ರಥಮಸ್ತೇಷಾಂ ಸರ್ವೇಷಾಂ ರುಕ್ಮಿಣೀಸುತಃ ।
ಪ್ರದ್ಯುಮ್ನಾದನಿರುದ್ಧೋಽಭೂದ್ವಜ್ರಸ್ತಸ್ಮಾದಜಾಯತ ॥ ೬ ॥

ಅನಿರುದ್ಧೋ ರಣೇ ರುದ್ಧೋ ಬಲೇಃ ಪೌತ್ರೀಂ ಮಹಾಬಲಃ ।
ಉಷಾಂ ಬಾಣಸ್ಯ ತನಯಾಯುಪಯೇಮೇ ದ್ವಿಜೋತ್ತಮ ॥ ೭ ॥

ಯತ್ರ ಯುದ್ಧಮಭೂದ್ಘೋರಂ ಹರಿಶಂಕರಯೋರ್ಮಹತ್ ।
ಭಿನ್ನಂ ಸಹಸ್ರಂ ಬಾಹೂನಾಂ ಯತ್ರ ಬಾಣಸ್ಯ ಚಕ್ರಿಣಾ ॥ ೮ ॥

॥ ಮೈತ್ರೇಯಃ ॥

ಕಥಂ ಯುದ್ಧಮಭೂದ್ಬ್ರಹ್ಮನ್ನುಷಾರ್ಥೇ ಹರಕೃಷ್ಣಯೋಃ ।
ಕಥಂ ಕ್ಷಯಂ ಚ ಬಾಣಸ್ಯ ಬಾಹೂನಾಂ ಕೃತವಾನ್ ಹರಿಃ ॥ ೯ ॥

ವರೂ, ಕಾಳಿಂದಿಯಲ್ಲಿ ಶ್ರುತನೇ ಮುಂತಾದವರೂ ಇತರ ಸ್ತ್ರೀಯರಲ್ಲಿ ಎಂಭತ್ತೆಂಟು ಸಾವಿರದ ಎಂಟುನೂರು ಜನಪುತ್ರರೂ ಹುಟ್ಟಿದರು.

೬–೮. ಈ ಮಕ್ಕಳುಗಳಲ್ಲಿ ರುಕ್ಮಿಣಿಯ ಪುತ್ರನಾದ ಪ್ರದ್ಯುಮ್ನನೇ ಮೊದಲನೆಯವನು. ಪ್ರದ್ಯುಮ್ನನ ಮಗನೇ ಅನಿರುದ್ಧನು, ಇವನಿಗೆ ವಜ್ರನೆಂಬ ಮಗನು ಹುಟ್ಟಿದನು. ಅನಿರುದ್ಧನು ಯುದ್ಧದಲ್ಲಿ ಗೆದ್ದು ಬಲಿಯ ಮೊಮ್ಮಗಳೂ, ಬಾಣನ ಮಗಳೂ ಆದ ಉಷಾ ಎಂಬವಳನ್ನು ವಿವಾಹ ಮಾಡಿಕೊಂಡನು. ಆ ಯುದ್ಧದಲ್ಲಿ ಹರಿಶಂಕರರಿಗೆ ಭಯಂಕರವಾದ ಯುದ್ಧವಾಯಿತು. ಬಾಣನ ಸಾವಿರ ತೋಳುಗಳನ್ನು ಕೃಷ್ಣನು ಕತ್ತರಿಸಿದನು ಎಂದು ಪರಾಶರರು ಹೇಳಿದರು.

೯–೧೦. ಮೈತ್ರೇಯನು ಉಷೆಗಾಗಿ ಹರಿಹರರಿಗೆ ಹೇಗೆ ಯುದ್ಧವಾಯಿತು? ಕೃಷ್ಣನು ಬಾಣನ ಬಾಹುಗಳನ್ನು ಹೇಗೆ ನಾಶಮಾಡಿದನು? ಈ ಕಥೆಯನ್ನು

ವಿಶಸ್ವೈವಂ ಮಹಾಭಾಗ ಮಮಾಖ್ಯಾತುಂ ತ್ವಮರ್ಹಸಿ ।
ಮಹತ್ಕೌತೂಹಲಂ ಜಾತಂ ಕಥಾಂ ಶ್ರೋತುಮಿಮಾಂ ಹರೇಃ ॥ ೧೦ ॥

॥ ಶ್ರೀ ಪರಾಶರಃ ॥

ಉಷಾ ಬಾಣಸುತಾ ವಿಪ್ರ ಪಾರ್ವತೀಂ ಸಹ ಶಂಭುನಾ ।
ಕ್ರೀಡಂತೀಮುಪಲಕ್ಷ್ಯೋಚ್ಚೈಃ ಸ್ಪೃಹಾಂಚಕ್ರೇ ತದಾಶ್ರಯಾಂ ॥ ೧೧ ॥

ತತಸ್ಸಕಲಚಿತ್ತಜ್ಞಾ ಗೌರೀ ತಾಮಾಹ ಭಾಮಿನೀಂ ।
ಅಲಮತ್ಯರ್ಥತಾಪೇನ ಭರ್ತ್ರಾ ತ್ವಮಪಿ ರಂಸ್ಯಸೇ ॥ ೧೨ ॥

ಇತ್ಯುಕ್ತಾ ಸಾ ತಯಾ ಜಕ್ರೇ ಕದೇತಿ ಮತಿಮಾತ್ಮನಃ ।
ಕೋ ವಾ ಭರ್ತಾ ಮಮೇತ್ಯಾಹ ಪುನಸ್ತಾಮಾಹ ಪಾರ್ವತೀ ॥ ೧೩ ॥

॥ ಪಾರ್ವತ್ಯುವಾಚ ॥

ವೈಶಾಖಶುಕ್ಲದ್ವಾದಶ್ಯಾಂ ಸ್ವಪ್ನೇ ಯೋಭಿಭವಂ ತವ ।
ಕರಿಷ್ಯತಿ ಸ ತೇ ಭರ್ತಾ ರಾಜಪುತ್ರಿ ಭವಿಷ್ಯತಿ ॥ ೧೪ ॥

ಕೇಳಬೇಕೆಂದು ನನಗೆ ಕುತೂಹಲವುಂಟಾಗಿರುವುದರಿಂದ ವಿಸ್ತಾರವಾಗಿ ಎಲ್ಲವನ್ನೂ ನನಗೆ ಹೇಳಬೇಕು' ಎಂದು ಪ್ರಶ್ನೆ ಮಾಡಿದನು.

೧೧-೧೪. ಪರಾಶರರು ಹೇಳುವರು :— ಮೈತ್ರೇಯನೇ! ಬಾಣನ ಮಗಳಾದ ಉಷೆಯು ಶಿವನೊಡನೆ ಕ್ರೀಡಿಸುತ್ತಿರುವ ಪಾರ್ವತಿಯನ್ನು ನೋಡಿ ತಾನೂ ಇಂತಹ ಕ್ರೀಡೆಯನ್ನು ಮಾಡಬೇಕೆಂದು ಮನಸ್ಸಿನಲ್ಲಿ ಆಶಿಸಿದಳು. ಎಲ್ಲರ ಮನಸ್ಸಿನ ಅಭಿಪ್ರಾಯವನ್ನೂ ತಿಳಿದ ಗೌರಿಯು ಅವಳನ್ನು ಕುರಿತು "ವಿಶೇಷವಾಗಿ ಸಂತಾಪ ಪಡಬೇಡ, ನೀನೂ ನಿನ್ನ ಪತಿಯೊಡನೆ ಕ್ರೀಡಿಸುವೆ" ಎಂದು ಹೇಳಿದಳು. ಇದನ್ನು ಕೇಳಿ ಉಷೆಯು ನನ್ನ ಪತಿಯಾರು? ಯಾವಾಗ ಅವನೊಡನೆ ಕ್ರೀಡಿಸುವೆನು ಎಂದು ಕೇಳಿದಳು. ಮತ್ತೆ ಪಾರ್ವತಿಯು ಅವಳನ್ನು ಕುರಿತು "ವೈಶಾಖ ಶುದ್ಧ ದ್ವಾದಶಿಯ ದಿನ ಸ್ವಪ್ನದಲ್ಲಿ ನಿನ್ನನ್ನು ಯಾವನು ಬಲಾತ್ಕಾರದಿಂದ ಅನುಭವಿಸುವನೋ ಅವನೇ ನಿನ್ನ ಪತಿಯಾಗುವನು" ಎಂದು ಹೇಳಿದಳು.

॥ ಶ್ರೀ ಪರಾಶರಃ ॥

ತಸ್ಯಾಂ ತಿಥಾವುಷಾ ಸ್ವಪ್ನೇ ಯಥಾ ದೇವ್ಯಾ ಸಮೀರಿತಂ ।
ತಥೈವಾಭಿಭವಂ ಚಕ್ರೇ ಕಶ್ಚಿದ್ರಾಗಂ ಚ ತತ್ರ ಸಾ ॥ ೧೫ ॥

ತತಃ ಪ್ರಬುದ್ಧಾ ಪುರುಷಮಪಶ್ಯಂತೀ ಸಮುತ್ಸುಕಾ ।
ಕ್ವ ಗತೋಽಸೀತಿ ನಿರ್ಲಜ್ಜಾ ಮೈತ್ರೇಯೋಕ್ತವತೀ ಸಖೀಂ ॥ ೧೬ ॥

ಬಾಣಸ್ಯ ಮಂತ್ರೀ ಕುಂಭಾಂಡಃ ಚಿತ್ರರೇಖಾ ಚ ತತ್ಸುತಾ ।
ತಸ್ಯಾಃ ಸಖ್ಯಭವತ್ಸಾ ಚ ಪ್ರಾಹ ಕೋಽಯಂ ತ್ವಯೋಚ್ಯತೇ ॥ ೧೭ ॥

ಯದಾ ಲಜ್ಜಾಕುಲಾ ನಾಸ್ಯೈ ಕಥಯಾಮಾಸ ಸಾ ಸಖೀ ।
ತದಾ ವಿಶ್ವಾಸಮಾನೀಯ ಸರ್ವಮೇವಾಭ್ಯಧಾದಯತ್ ॥ ೧೮ ॥

ವಿದಿತಾರ್ಥಾಂ ತು ತಾಮಾಹ ಪುನಶ್ಚೋಷಾ ಯಥೋದಿತಂ ।
ದೇವ್ಯಾ ತಥೈವ ತತ್ಪ್ರಾಪ್ತೌ ಯೋ ಹ್ಯುಪಾಯಃ ಕುರುಷ್ವ ತಂ ॥ ೧೯ ॥

೧೫–೧೮. ಗೌರೀದೇವಿಯು ಹೇಳಿದ ಆ ತಿಥಿಯಲ್ಲಿ ಉಷೆಯ ಸ್ವಪ್ನದಲ್ಲಿ ದೇವಿಯು ಹೇಳಿದಂತೆ ಒಬ್ಬ ಪುರುಷನು ಅವಳನ್ನು ಬಲಾತ್ಕಾರದಿಂದ ಉಪಭೋಗಿಸಿದನು. ಅವಳು ಅವನಲ್ಲಿ ಪ್ರೀತಿಯನ್ನೂ ತೋರಿಸಿದಳು. ಆ ಮೇಲೆ ಎಚ್ಚರಗೊಂಡು ಆ ಪುರುಷನನ್ನು ಕಾಣದೆ ಸಖಿಯನ್ನು ಕುರಿತು ಉತ್ಸಾಹದಿಂದ ಲಜ್ಜೆಯಿಲ್ಲದೆ ಎಲ್ಲಿಗೆ ಹೋದೆ ? ಎಂದು ಪ್ರಶ್ನೆಮಾಡಿದಳು. ಬಾಣನ ಮಂತ್ರಿಯಾದ ಕುಂಭಾಂಡನೆಂಬವನ ಮಗಳಾದ ಚಿತ್ರಲೇಖೆಯೆಂಬವಳು ಅವಳ ಸಖಿಯಾಗಿದ್ದಳು. ಅವಳು ನೀನು ಯಾವನ ವಿಷಯವನ್ನು ಹೇಳುವೆ ಎಂದು ಪ್ರಶ್ನೆಮಾಡಿದಳು. ನಾಚಿಕೆಯಿಂದ ಹೇಳದೆ ಇರಲು ಸಖಿಯು ನಂಬಿಕೆಯನ್ನು ಹುಟ್ಟಿಸಿದ ಮೇಲೆ ತನ್ನ ಸಮಸ್ತ ವೃತ್ತಾಂತವನ್ನೂ ಆ ಸಖಿಗೆ ಹೇಳಿದಳು.

೧೯–೨೧. ಉಷೆಯು ಗೌರೀದೇವಿಯು ತನಗೆ ಹೇಳಿದುದನ್ನೆಲ್ಲ ಸಖಿಗೆ ಹೇಳಿ ಆ ಪುರುಷನ ಪ್ರಾಪ್ತಿಗೆ ತಕ್ಕ ಉಪಾಯವನ್ನು ಮಾಡಿದು ಹೇಳಿದಳು. ಚಿತ್ರಲೇಖೆಯು " ಪ್ರೀತಿಪಾತ್ರಳಾದ ಸಖಿಯೆ ! ತಿಳಿಯಲಸಾಧ್ಯವಾದ ಈ ವಿಷಯವನ್ನು

॥ ಚಿತ್ರಲೇಖೋವಾಚ ॥

ದುರ್ವಿಜ್ಞೇಯಮಿದಂ ವಕ್ತುಂ ಪ್ರಾಪ್ತುಂ ವಾಪಿ ನ ಶಕ್ಯತೇ ।
ತಥಾಪಿ ಕಿಂಚಿತ್ಕರ್ತವ್ಯಮುಪಕಾರಂ ಪ್ರಿಯೇ ತವ ॥ ೨೦ ॥

ಸಪ್ತಾಷ್ಟದಿನಪರ್ಯಂತಂ ತಾವತ್ಕಾಲಃ ಪ್ರತೀಕ್ಷ್ಯತಾಂ ।
ಇತ್ಯುಕ್ತ್ವಾಭ್ಯಂತರಂ ಗತ್ವಾ ಉಪಾಯಂ ತಮುಪಾಕರೋತ್ ॥ ೨೧ ॥

॥ ಶ್ರೀ ಪರಾಶರಃ ॥

ತತಃ ಪಟೇ ಸುರಾನ್ ದೈತ್ಯಾನ್ ಗಂಧರ್ವಾಂಶ್ಚ ಪ್ರಧಾನತಃ ।
ಮನುಷ್ಯಾಂಶ್ಚ ವಿಲಿಖ್ಯಾಸ್ಯೈ ಚಿತ್ರಲೇಖಾ ನ್ಯದರ್ಶಯತ್ ॥ ೨೨ ॥

ಅಪಾಸ್ಯ ಸಾ ತು ಗಂಧರ್ವಾಂಸ್ತಥೋರಗಸುರಾಸುರಾನ್ ।
ಮನುಷ್ಯೇಷು ದದೌ ದೃಷ್ಟಿಂ ತೇಷ್ವಪ್ಯಂಧಕವೃಷ್ಣಿಷು ॥ ೨೩ ॥

ಹೇಳುವುದಕ್ಕೂ ಅದರ ಫಲವನ್ನು ಪಡೆಯುವುದಕ್ಕೂ ಅಸಾಧ್ಯವಾಗಿರುವುದು. ಹಾಗಾದರೂ ನಿನಗೆ ಸ್ವಲ್ಪವಾದರೂ ಉಪಕಾರವನ್ನು ಮಾಡಬೇಕು. ಏಳೆಂಟು ದಿನಗಳವರೆಗೆ ನಿರೀಕ್ಷಿಸುತ್ತಿರು" ಎಂದು ಹೇಳಿ ಮನೆಯೊಳಗೆ ಹೋಗಿ ಒಂದು ಉಪಾಯವನ್ನು ಮಾಡಿದಳು.

೨೨–೨೩. ಬಳಿಕ ಚಿತ್ರಲೇಖೆಯು ಬಟ್ಟೆಯ ಮೇಲೆ ಮುಖ್ಯರಾದ ದೇವತೆಗಳನ್ನೂ, ದೈತ್ಯರನ್ನೂ, ಗಂಧರ್ವರನ್ನೂ, ಮನುಷ್ಯರನ್ನೂ ಚಿತ್ರದಲ್ಲಿ ಬರೆದು ಉಷೆಗೆ ತೋರಿಸಿದಳು. ಅವಳು ಗಂಧರ್ವರನ್ನೂ, ಸುರಾಸುರರನ್ನೂ ಬಿಟ್ಟು ಮನುಷ್ಯರಲ್ಲಿ ಅದರಲ್ಲಿಯೂ, ಅಂಧಕವೃಷ್ಣಿಗಳಲ್ಲಿ ದೃಷ್ಟಿಯನ್ನಿಟ್ಟಳು.

ಕೃಷ್ಣರಾಮೌ ವಿಲೋಕ್ಯಾಸೀತ್ಸಭ್ರೂರ್ಲಜ್ಜಾ ಜಡೇವ ಸಾ ।
ಪ್ರದ್ಯುಮ್ನದರ್ಶನೇ ವ್ರೀಡಾ ದೃಷ್ಟಿಂ ನಿನ್ಯೇಽನ್ಯತೋ ದ್ವಿಜ ॥ ೨೪ ॥

ದೃಷ್ಟಮಾತ್ರೇ ತತಃ ಕಾಂತೇ ಪ್ರದ್ಯುಮ್ನತನಯೇ ದ್ವಿಜ ।
ದೃಷ್ಟ್ವಾತ್ಯರ್ಥವಿಲಾಸಿನ್ಯಾ ಲಜ್ಜಾ ಕ್ವಾಪಿ ನಿರಾಕೃತಾ ॥ ೨೫ ॥

ಸೋಽಯಂ ಸೋಽಯಮಿತೀತ್ಯುಕ್ತೇ ತಯಾ ಸಾಯೋಗಗಾಮಿನೀ ।
ಚಿತ್ರಲೇಖಾಽಬ್ರವೀದೇನಾಮುಷಾಂ ಬಾಣಸುತಾಂ ತದಾ ॥ ೨೬ ॥

॥ ಚಿತ್ರಲೇಖೋವಾಚ ॥

ಅಯಂ ಕೃಷ್ಣಸ್ಯ ಪೌತ್ರಸ್ತೇ ಭರ್ತಾ ದೇವ್ಯಾ ಪ್ರಸಾದಿತಃ ।
ಅನಿರುದ್ಧ ಇತಿಖ್ಯಾತಃ ಪ್ರಖ್ಯಾತಃ ಪ್ರಿಯದರ್ಶನಃ ॥ ೨೭ ॥

ಪ್ರಾಪ್ತೋಽಸಿ ಯದಿ ಭರ್ತಾರಮಿಮಂ ಪ್ರಾಪ್ತಂ ತ್ವಯಾಖಿಲಂ ।
ದುಷ್ಪ್ರವೇಶಾ ಪುರೀ ಪೂರ್ವಂ ದ್ವಾರಕಾ ಕೃಷ್ಣಪಾಲಿತಾ ॥ ೨೮ ॥

೨೪-೨೬ ಉಷೆಯು ಚಿತ್ರದಲ್ಲಿ ಕೃಷ್ಣ ಬಲರಾಮರನ್ನು ನೋಡಿದಾಗ ನಾಚಿಕೆಯಿಂದ ಜಡವಾದ ಮನಸ್ಸುಳ್ಳವಳಾದಳು. ಪ್ರದ್ಯುಮ್ನನನ್ನು ನೋಡಿದಾಗ ಹೆಚ್ಚಾದ ನಾಚಿಕೆಯಿಂದ ತನ್ನ ದೃಷ್ಟಿಯನ್ನು ಮತ್ತೊಂದು ಕಡೆಗೆ ತಿರುಗಿಸಿದಳು. ಅನಿರುದ್ಧನ ಚಿತ್ರವನ್ನು ನೋಡಿದೊಡನೆಯೇ ಅವಳ ನೋಟದಲ್ಲಿ ನಾಚಿಕೆಯು ಹೊರಟುಹೋಗಿ ಸೊಗಸು ಹೆಚ್ಚಿತು. " ಇವನೇ ! ಇವನೇ ! ನನ್ನ ಸ್ವಪ್ನದಲ್ಲಿ ಕಂಡವನು " ಎಂದು ಹೇಳುತ್ತಲು ಯೋಗಬಲದಿಂದ ಆಕಾಶದಲ್ಲಿ ಸಂಚರಿಸುವ ಶಕ್ತಿಯುಳ್ಳ ಚಿತ್ರಲೇಖೆಯು ಬಾಣಪುತ್ರಿಯಾದ ಉಷೆಯನ್ನು ಕುರಿತು ಹೇಳಿದಳು. ಏನೆಂದರೆ

೨೭-೩೦. " ಉಷೆಯೇ ! ಇವನು ಕೃಷ್ಣನ ಮೊಗನಾದ ಪ್ರದ್ಯುಮ್ನನ ಪುತ್ರನು. ಅನಿರುದ್ಧನೆಂದು ಇವನ ಹೆಸರು. ಪ್ರಸಿದ್ಧನೂ, ಸುಂದರನೂ ಆದ ಇವನನ್ನು ಗೌರೀದೇವಿಯು ನಿನಗೆ ಪತಿಯನ್ನಾಗಿ ಅನುಗ್ರಹಿಸಿರುವಳು. ಇವನನ್ನು ನೀನು ಪತಿಯನ್ನಾಗಿ ಪಡೆದರೆ ಎಲ್ಲ ಫಲವನ್ನೂ ನೀನು ಪಡೆದಂತೆ ಆಗುವುದು ಕೃಷ್ಣನು ಪಾಲಿಸುತ್ತಿರುವ ದ್ವಾರಕಾಪಟ್ಟಣವನ್ನು ಪ್ರವೇಶಿಸುವುದೇ ಅಸಾಧ್ಯವಾಗಿರು

ತಥಾಪಿ ಯತ್ನಾದ್ಭರ್ತಾರಮಾನಯಿಷ್ಯಾಮಿ ತೇ ಸಖಿ ।
ಗುಹ್ಯಮೇತದ್ವಕ್ತವ್ಯಂ ನ ಕಸ್ಯಚಿದಪಿ ತ್ವಯಾ ॥ ೨೯ ॥

ಅಚಿರಾದಾಗಮಿಷ್ಯಾಮಿ ಸಹಸ್ವ ವಿರಹಂ ಮಮ ।
ಯಯೌ ದ್ವಾರವತೀಂ ಚೋಷಾಂಸಮಾಶ್ವಾಸ್ಯ ತತಸ್ಸಖೀಂ ॥ ೩೦ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ದ್ವಾತ್ರಿಂಶೋಽಧ್ಯಾಯಃ

ವುದು. ಹಾಗಾದರೂ ಪ್ರಯತ್ನಪಟ್ಟು ನಿನ್ನ ಪತಿಯನ್ನು ಇಲ್ಲಿಗೆ ತರುವೆನು. ಗುಟ್ಟಾದ ಈ ಸಂಗತಿಯನ್ನು ನೀನು ಯಾರಿಗೂ ಹೇಳಬಾರದು. ಬೇಗ ಬರುವೆನು ನನ್ನ ಅಗಲಿಕೆಯನ್ನು ಸಹಿಸು ಎಂದು ಚಿತ್ರಲೇಖೆಯು ತನ್ನ ಸಖಿಯಾದ ಉಷೆಯನ್ನು ಸಮಾಧಾನಪಡಿಸಿ ದ್ವಾರಕಾಪಟ್ಟಣಕ್ಕೆ ಪ್ರಯಾಣಮಾಡಿದಳು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ

ಮೂವತ್ತೆರಡನೆಯ ಅಧ್ಯಾಯವು

ಮುಗಿದುದು

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ತ್ರಯಸ್ತ್ರಿಂಶೋಽಧ್ಯಾಯಃ

॥ ಶ್ರೀ ಪರಾಶರಃ ॥

ಬಾಣೋಽಪಿ ಪ್ರಣಿಪತ್ಯಾಗ್ರೇ ಮೈತ್ರೇಯಾಹ ತ್ರಿಲೋಚನಂ ।
ದೇವ ಬಾಹುಸಹಸ್ರೇಣ ನಿರ್ವಿಣ್ಣೋಽಸ್ಮ್ಯಹವಂ ವಿನಾ ॥ ೧ ॥

ಕೆಚ್ಚಿನ್ಮಮೈಷಾಂ ಬಾಹೂನಾಂ ಸಾಫಲ್ಯ ಜನಕೋ ರಣಃ ।
ಭವಿಷ್ಯತಿ ವಿನಾ ಯುದ್ಧಂ ಧಾರಾಯ ಮಮ ಕಂ ಭುಜೈಃ ॥ ೨ ॥

॥ ಶ್ರೀ ಶಂಕರಃ ॥

ಮಯೂರಧ್ವಜ ಭಂಗಸ್ತೇ ಯದಾ ಬಾಣ ಭವಿಷ್ಯತಿ ।
ಪಿಶಿತಾಶಿಜನಾನಂದಂ ಪ್ರಾಪ್ಸ್ಯಸೇ ತ್ವಂ ತದಾ ರಣಂ ॥ ೩ ॥

ಮೂವತ್ತಮೂರನೆಯ ಅಧ್ಯಾಯವು.

೧–೩. ಮೈತ್ರೇಯನೇ ! ಬಾಣಾಸುರನು ಈಶ್ವರನನ್ನು ಪೂಜಿಸಿ ನಮಸ್ಕಾರ ಮಾಡಿ ' ಓ ಸ್ವಾಮಿಯೇ ! ನನಗೆ ಸಾವಿರ ತೋಳುಗಳಿವೆ. ಕೊಬ್ಬಿದ ಆ ತೋಳು ಗಳಿಗೆ ಯುದ್ಧವಿಲ್ಲದುದರಿಂದ ಬೇಸರವುಂಟಾಗಿದೆ. ಈ ತೋಳುಗಳಿಗೆ ಫಲವನ್ನುಂಟು ಮಾಡುವ ಯುದ್ಧವು ಒದಗುವುದೇ ? ಯುದ್ಧವಿಲ್ಲದೆ ಶರೀರಕ್ಕೆ ಭಾರವಾದ ತೋಳು ಗಳಿದ್ದು ಫಲವೇನು ? ' ಎಂದು ಕೇಳಿಕೊಂಡನು. ಆಗ ಶಿವನು ' ಎಲ್ಲೆ ಬಾಣನೇ ! ನಿನ್ನ ನವಿಲಿನ ಧ್ವಜವು ಮುರಿದುಬಿದ್ದಾಗ ಮಾಂಸವನ್ನು ತಿನ್ನುವ ಭೂತಪ್ರೇತ ಪಿಶಾಚಾದಿ ಗಳಿಗೆ ಆನಂದಕರವಾದ ಯುದ್ಧವು ಪ್ರಾಪ್ತವಾಗುವುದು ' ಎಂದು ಹೇಳಿದನು.

॥ ಶ್ರೀ ಪರಾಶರಃ ॥

ತತಃ ಪ್ರಣಮ್ಯ ವರದಂ ಶಂಭುಮಭ್ಯಾಗತೋ ಗೃಹಂ ।
ಸ ಭಗ್ನಂ ಧ್ವಜಮಾಲೋಕ್ಯ ಹೃಷ್ಟೋ ಹರ್ಷಂ ಪುನರ್ಯಯೌ ॥ ೪ ॥

ವಿತಸ್ಮಿನ್ನೇವ ಕಾಲೇ ತು ಯೋಗವಿದ್ಯಾಬಲೇನ ತಂ ।
ಅನಿರುದ್ಧಮುಷಾನಿನ್ಯೇ ಚಿತ್ರಲೇಖಾ ವರಾಪ್ಸರಾಃ ॥ ೫ ॥

ಕನ್ಯಾಂತಃ ಪುರಮಭ್ಯೇತ್ಯ ರಮಮಾಣಂ ಸಹೋಷಯಾ ।
ವಿಜ್ಞಾಯ ರಕ್ಷಿಣೋ ಗತ್ವಾ ಶಶಂಸುರ್ದೈತ್ಯಭೂಪತೇಃ ॥ ೬ ॥

ವ್ಯಾದಿಷ್ಟಂ ಕಿಂಕರಾಣಾಂ ತು ಸೈನ್ಯಂ ತೇನ ಮಹಾತ್ಮನಾ ।
ಜಘಾನ ಪರಿಘಂ ಘೋರಮಾದಾಯ ಪರವೀರಹಾ ॥ ೭ ॥

ಹತೇಷು ತೇಷು ಬಾಣೋಽಪಿ ರಥಸ್ಥಸ್ತದ್ವಧೋದ್ಯತಃ ।
ಯುದ್ಧ್ಯಮಾನೋ ಯಥಾಶಕ್ತಿ ಯದುವೀರೇಣ ನಿರ್ಜಿತಃ ॥ ೮ ॥

೪-೮. ಅಮೇಲೆ ಬಾಣನು ವರವನ್ನು ಕೊಟ್ಟ ಶಿವನಿಗೆ ನಮಸ್ಕರಿಸಿ ಮನೆಗೆ ಬಂದನು. ಒಂದು ದಿನ ಧ್ವಜವು ಮುರಿದು ಬಿದ್ದುದನ್ನು ನೋಡಿ ಮತ್ತಿ ಸಂತೋಷದಿಂದ ಉತ್ಸಾಹ ಹೊಂದಿದನು. ಆ ಕಾಲಕ್ಕೆ ಸರಿಯಾಗಿ ಚಿತ್ರಲೇಖೆಯು ಯೋಗ ವಿದ್ಯಾ ಬಲದಿಂದ ಅನಿರುದ್ಧನನ್ನು ಕನ್ಯೆಯ ಅಂತಃಪುರಕ್ಕೆ ತಂದಿದ್ದಳು. ಅವನು ಉಷೆಯೊಡನೆ ವಿಹರಿಸುತ್ತಿರುವುದನ್ನು ಕಾವಲುಗಾರರು ತಿಳಿದು ದೈತ್ಯರಾಜನಿಗೆ ಹೇಳಿದರು. ಬಾಣಾಸುರನ ಅಪ್ಪಣೆಯಿಂದ ಯುದ್ಧಕ್ಕೆ ಬಂದ ಕಿಂಕರರೆಂಬ ರಾಕ್ಷಸ ಸೈನ್ಯವನ್ನು ಶತ್ರುವೀರರನ್ನು ನಾಶಮಾಡುವ ಅನಿರುದ್ಧನು ಪರಿಘಾಯುಧದಿಂದ ನಾಶಮಾಡಿದನು. ಸೇನೆಯು ನಾಶವಾಗುತ್ತಲು ಬಾಣಾಸುರನು ರಥದಲ್ಲಿ ಕುಳಿತು ಅವನನ್ನು ಕೊಲ್ಲಬೇಕೆಂದು ಯುದ್ಧಮಾಡಿ ಯದು ವೀರನಾದ ಅನಿರುದ್ಧನಿಗೆ ಸೋತುಹೋದನು.

ಮಾಯಯಾ ಯುಯುಧೇ ತೇನ ಸ ತದಾ ಮಂತ್ರಿಚೋದಿತಃ ।
ತತಸ್ತಂ ಪನ್ನಗಾಸ್ತ್ರೇಣ ಬಬಂಧ ಯದುನಂದನಂ ॥ ೯ ॥

ದ್ವಾರವತ್ಯಾಂ ಕ್ವ ಯಾತೋಸಾವನಿರುದ್ಧೇತಿ ಜಲ್ಪತಾಂ ।
ಯದೂನಾಮಾಚಚಕ್ಷೇ ತಂ ಬದ್ಧಂ ಬಾಣೇನ ನಾರದಃ ॥ ೧೦ ॥

ತಂ ಶೋಣಿತಪುರಂ ನೀತಂ ಶ್ರುತ್ವಾ ವಿದ್ಯಾವಿದಗ್ಧಯಾ ।
ಯೋಷಿತಾ ಪ್ರತ್ಯಯಂ ಜಗ್ಮುರ್ಯಾದವಾನಾಮುರೈರಿತಿ ॥ ೧೧ ॥

ತತೋ ಗರುಡಮಾರುಹ್ಯ ಸ್ಮೃತಮಾತ್ರಾಗತಂ ಹರಿಃ ।
ಬಲಪ್ರದ್ಯುಮ್ನಸಹಿತೋ ಬಾಣಸ್ಯ ಪ್ರಯಯೌ ಪುರೀಂ ॥ ೧೨ ॥

ಪುರಪ್ರವೇಶೇ ಪ್ರಮಥೈರ್ಯುದ್ಧ ಮಾಸೀನ್ಮಹಾತ್ಮನಃ ।
ಯಯೌ ಬಾಣಪುರಾಭ್ಯಾಶಂ ನೀತ್ವಾ ತಾನ್ ಸಂಕ್ಷಯಂ ಹರಿಃ ॥ ೧೩ ॥

೯–೧೧. ಬಳಿಕ ಬಾಣನು ಮಂತ್ರಿಯ ಪ್ರೇರಣೆಯಿಂದ ಮಾಯಾಯುದ್ಧವನ್ನು ಮಾಡಿ ಸರ್ಪಾಸ್ತ್ರದಿಂದ ಅನಿರುದ್ಧನನ್ನು ಕಟ್ಟಿಹಾಕಿದನು. ಅತ್ತ ದ್ವಾರಕಾಪಟ್ಟಣದಲ್ಲಿ ಅನಿರುದ್ಧನು ಎಲ್ಲಿ ಹೋದನೆಂದು ಯದುಗಳು ಮಾತನಾಡಿಕೊಳ್ಳುತ್ತಿರಲು ನಾರದನು ಬಂದು ಬಾಣನಿಗೆ ಸೆರೆ ಸಿಕ್ಕಿರುವುದಾಗಿ ಹೇಳಿದನು. ಯೋಗ ವಿದ್ಯಾವಿಶಾರದಳಾದ ಚಿತ್ರಲೇಖೆಯು ಅವನನ್ನು ಶೋಣಿತಪುರಕ್ಕೆ ತೆಗೆದುಕೊಂಡು ಹೋದಳೆಂಬುದನ್ನು ಕೇಳಿ ಸ್ತ್ರೀಯರು ಪಾರಿಜಾತವೃಕ್ಷವೆನ್ನು ತಂದುದರಿಂದುಂಟಾದ ದ್ವೇಷದಿಂದ ದೇವತೆಗಳು ಅನಿರುದ್ಧನನ್ನು ತೆಗೆದುಕೊಂಡು ಹೋಗಿರುವರೆಂಬ ಸಂದೇಹವನ್ನು ಬಿಟ್ಟುಬಿಟ್ಟರು.

೧೨-೧೫. ಆ ಮೇಲೆ ಕೃಷ್ಣನು ಗರುಡನನ್ನು ಸ್ಮರಿಸುತ್ತಲು ಬಂದ ಗರುಡನ ಮೇಲೇರಿ ಬಲರಾಮ ಪ್ರದ್ಯುಮ್ನರೊಡನೆ ಬಾಣನ ಪಟ್ಟಣಕ್ಕೆ ಹೋದನು. ಪಟ್ಟಣವನ್ನು ಪ್ರವೇಶಿಸುವುದಕ್ಕಿಂತ ಮುಂಚಿತವಾಗಿಯೇ ಶಿವನ ಪ್ರಮಥಗಣಗಳಿಗೂ

ತತಸ್ತ್ರಿಪಾದಸ್ತ್ರಿಶಿರಾಜ್ವರೋ ಮಾಹೇಶ್ವರೋ ಮಹಾನ್ ।
ಬಾಣರಕ್ಷಾರ್ಥಮಭ್ಯೇತ್ಯ ಯುಯುಧೇ ಶಾರ್ಙ್ಗಧನ್ವನಾ ॥ ೧೪ ॥

ತದ್ಭಸ್ಮಸ್ಪರ್ಶಸಂಭೂತತಾಪಃ ಕೃಷ್ಣಾಂಗಸಂಗಮಾತ್ ।
ಅವಾಪ ಬಲದೇವೋಽಪಿ ಶಮಮಾಮೀಲಿತೇಕ್ಷಣಃ ॥ ೧೫ ॥

ತತಸ್ಸ ಯುಧ್ಯಮಾನಸ್ತು ಸಹದೇವೇನ ಕಾರ್ಜಿಣಾ ।
ವೈಷ್ಣವೇನ ಜ್ವರೇಣಾಶು ಕೃಷ್ಣದೇಹಾನ್ನಿರಾಕೃತಃ ॥ ೧೬ ॥

ನಾರಾಯಣಭುಜಾಘಾತಾಪರಿಪೀಡನವಿಹ್ವಲಂ ।
ಶಂ ವೀಕ್ಷ್ಯ ಕ್ಷಮ್ಯತಾಮಸ್ಯೇತ್ಯಾಹ ದೇವಃ ಪಿತಾಮಹಃ ॥ ೧೭ ॥

ತತಶ್ಚ ಕ್ಷಾಂತಮೇವೇತಿ ಪ್ರೋಕ್ತ್ವಾ ಶಂ ವೈಷ್ಣವಂ ಜ್ವರಂ ।
ಆತ್ಮನ್ಯೇವ ಲಯಂ ನಿನ್ಯೇ ಭಗವಾನ್ಮಧುಸೂದನಃ ॥ ೧೮ ॥

ಕೃಷ್ಣನಿಗೂ ಯುದ್ಧವು ಸಂಭವಿಸಿತು. ಕೃಷ್ಣನು ಅವರನ್ನೆಲ್ಲ ನಾಶಮಾಡಿ ಬಾಣನ ರಾಜಧಾನಿಯ ಸಮೀಪಕ್ಕೆ ಹೋದನು. ಆಗ ಮೂರು ಕಾಲುಗಳೂ, ಮೂರು ತಲೆಯೂ, ಉಳ್ಳ ಮಾಹೇಶ್ವರಜ್ವರನು ಬಾಣನ ರಕ್ಷಣೆಗಾಗಿ ಬಂದು ಕೃಷ್ಣನೋಡನೆ ಯುದ್ಧವನ್ನು ಮಾಡಿದನು. ಆ ಜ್ವರನ ಆಯುಧವಾದ ಭಸ್ಮದ ಸ್ಪರ್ಶದಿಂದ ಬಲರಾಮನು ಸಂತಾಪವನ್ನು ಹೊಂದಿ ಕೃಷ್ಣನ ಅಂಗಸ್ಪರ್ಶದಿಂದ ಸ್ವಲ್ಪ ಕಣ್ಣನ್ನು ಮುಚ್ಚಿ ಶಾಂತಿಯನ್ನು ಹೊಂದಿದನು.

೧೬-೧೯. ಬಳಿಕ ಮಾಹೇಶ್ವರ ಜ್ವರವು ಕೃಷ್ಣನ ದೇಹವನ್ನು ಪ್ರವೇಶಿಸಿ ಯುದ್ಧಮಾಡಲು ಕೃಷ್ಣನ ದೇಹದಲ್ಲಿದ್ದ ವೈಷ್ಣವ ಜ್ವರವು ಆ ಮಾಹೇಶ್ವರ ಜ್ವರವನ್ನು ಓಡಿಸಿಬಿಟ್ಟಿತು. ನಾರಾಯಣನ ಜ್ವರದ ತೋಳಿನ ಏಟಿನಿಂದ ಹಿಂಸೆಪಡುತ್ತಿದ್ದ ಮಾಹೇಶ್ವರ ಜ್ವರವನ್ನು ಕಂಡು ಬ್ರಹ್ಮನು ಬಂದು ಕ್ಷಮಿಸಬೇಕೆಂದು ಕೃಷ್ಣನನ್ನು ಬೇಡಿಕೊಂಡನು. ಆಗ ಕೃಷ್ಣನು ಕ್ಷಮಿಸಿರುವೆನೆಂದು ಹೇಳಿ ವೈಷ್ಣವ ಜ್ವರವನ್ನು ತನ್ನಲ್ಲಿಯೇ ಸೂಕ್ಷ್ಮವಾಗಿ ಅಡಗಿಸಿಕೊಂಡನು. ಆಗ ಜ್ವರನು 'ನನಗೂ

॥ ಜ್ವರೋವಾಚ ॥

ಮಮ ತ್ವಯಾ ಸಮಂ ಯುದ್ಧಂ ಯೇ ಸ್ಮರಿಷ್ಯಂತಿ ಮಾನವಾಃ ।
ವಿಜ್ವರಾಸ್ತೇ ಭವಿಷ್ಯಂತೀತ್ಯುಕ್ತ್ವಾ ಚೈನಂ ಯಯೌ ಜ್ವರಃ ॥ ೧೯ ॥

ತತೋಽಗ್ನೀನ್ ಭಗವಾನ್ಪಂಚ ಜಿತ್ವಾ ನೀತ್ವಾ ತಥಾಕ್ಷಯಂ ।
ದಾನವಾನಾಂ ಬಲಂ ಕೃಷ್ಣಶ್ಚೂರ್ಣಯಾಮಾಸ ಲೀಲಯಾ ॥ ೨೦ ॥

ತತಸ್ಸಮಸ್ತಸೈನ್ಯೇನ ದೈತೇಯಾನಾಂ ಬಲೇಶ್ವರಃ ।
ಯುಯುಧೇ ಶಂಕರಶ್ಚೈವ ಕಾರ್ತಿಕೇಯಶ್ಚ ಶೌರಿಣಾ ॥ ೨೧ ॥

ಹರಿಶಂಕರಯೋರ್ಯುದ್ಧಮತೀವಾಸೀತ್ಸುದಾರುಣಂ ।
ಚುಕ್ಷುಭುಸ್ಸಕಲಾ ಲೋಕಾಶ್ಶಸ್ತ್ರಾಸ್ತ್ರಾಂಶುಪ್ರತಾಪಿತಾಃ ॥ ೨೨ ॥

ಪ್ರಳಯೋಽಯಮಶೇಷಸ್ಯ ಜಗತೋ ನೂನಮಾಗತಃ ।
ಮೇನಿರೇ ತ್ರಿದಶಾಸ್ತತ್ರ ವರ್ತಮಾನೇ ಮಹಾರಣೇ ॥ ೨೩ ॥

ನಿನಗೂ ಆದ ಯುದ್ಧವನ್ನು ಯಾವ ಮನುಜರು ಸ್ಮರಿಸುವರೋ ಅವರು ಜ್ವರದ ಬಾಧೆಯಿಂದ ಬಿಡುಗಡೆಯನ್ನು ಹೊಂದುವರು' ಎಂದು ಹೇಳಿ ಹೊರಟು ಹೋದನು.

೨೦. ಆ ಮೇಲೆ ಕೃಷ್ಣನು ಯುದ್ಧಕ್ಕೆ ಬಂದ ಗಾರ್ಹಪತ್ಯಾದಿ ಪಂಚಾಗ್ನಿಗಳನ್ನು ಗೆದ್ದು ರಾಕ್ಷಸರ ಸೇನೆಯನ್ನು ಲೀಲೆಯಿಂದ ನಾಶಮಾಡಿದನು.

೨೧-೨೩. ಆ ಮೇಲೆ ಬಲಿಪುತ್ರನಾದ ಬಾಣನು ರಾಕ್ಷಸ ಸೈನ್ಯದೊಡನೆಯೂ ಶಿವ ಮತ್ತು ಕುಮಾರಸ್ವಾಮಿಯೊಡನೆಯೂ, ಕೂಡಿ ಕೃಷ್ಣನ ಮೇಲೆ ಯುದ್ಧಕ್ಕೆ ಬಂದನು. ಹರಿಶಂಕರರಿಗೆ ಭಯಂಕರವಾದ ಯುದ್ಧವಾಯಿತು. ಅವರ ಶಸ್ತ್ರಾಸ್ತ್ರಗಳ ಕಿರಣಗಳಿಂದ ಸಮಸ್ತ ಲೋಕಗಳೂ ತಾಪವನ್ನು ಹೊಂದಿದುವು. ಆ ಮಹಾ ಯುದ್ಧದಲ್ಲಿ ಸಮಸ್ತ ಲೋಕಕ್ಕೂ ನಾಶವೇ ಪ್ರಾಪ್ತವಾಯಿತೆಂದು ದೇವತೆಗಳು ತಿಳಿದುಕೊಂಡರು.

ಜೃಂಭಕಾಸ್ತ್ರೇಣ ಗೋವಿಂದೋ ಜೃಂಭಯಾಮಾಸ ಶಂಕರಂ ।
ತತಃ-ಪ್ರಣೇಶುರ್ದೈತೇಯಾಃ ಪ್ರಮಥಾಶ್ಚ ಸಮಂತತಃ ॥ ೨೪ ॥

ಜೃಂಭಾಭಿಭೂತಸ್ತು ಹರೋ ರಥೋಪಸ್ಥ ಉಪಾವಿಶತ್ ।
ನ ಶಶಾಕ ತತೋ ಯೋದ್ಧುಂ ಕೃಷ್ಣೇನಾಕ್ಲಿಷ್ಟ ಕರ್ಮಣಾ ॥ ೨೫ ॥

ಗರುಡಕ್ಷತವಾಹಶ್ಚ ಪ್ರದ್ಯುಮ್ನಾಸ್ತ್ರೇಣ ಪೀಡಿತಃ ।
ಕೃಷ್ಣಹುಂಕಾರನಿರ್ಧೂತಶಕ್ತಿಶ್ಚಾಪಯಯೌ ಗುಹಃ ॥ ೨೬ ॥

ಜೃಂಭಿತೇ ಶಂಕರೇ ನಷ್ಟೇ ದೈತ್ಯಸೈನ್ಯೇ ಗುಹೇ ಜಿತೇ ।
ನೀತೇ ಪ್ರಮಥಸೈನ್ಯೇ ಚ ಸಂಕ್ಷಯಂ ಶಾರ್ಙ್ಗಧನ್ವನಾ ॥ ೨೭ ॥

ನಂದಿನಾ ಸಂಗೃಹೀತಾಶ್ವಮಧಿರೂಢೋ ಮಹಾರಥಂ ।
ಬಾಣಸ್ತತ್ರಾಯಯೌ ಯೋದ್ಧುಂ ಕೃಷ್ಣಕಾರ್ಷ್ಣಿಬಲೈಸ್ಸಹ ॥ ೨೮ ॥

೨೪–೨೬. ಕೃಷ್ಣನು ಜೃಂಭಕಾಸ್ತ್ರವನ್ನು ಪ್ರಯೋಗಿಸಿ ಶಂಕರನು ಆಕಳಿಸುತ್ತ ಜಡನಾಗುವಂತೆ ಮಾಡಿದನು. ಅದರಿಂದ ದೈತ್ಯರೂ, ಪ್ರಮಥಗಣಗಳೂ, ನಾಶವಾದರು. ಶಿವನೂ ಜಡನಾಗಿ ರಥದಲ್ಲಿ ಕುಳಿತುಕೊಂಡನು. ಕೃಷ್ಣನೊಡನೆ ಯುದ್ಧಮಾಡಲು ಶಕ್ತನಾಗಲಿಲ್ಲ. ಕುಮಾರಸ್ವಾಮಿಯು ಪ್ರದ್ಯುಮ್ನನ ಬಾಣದಿಂದ ನೋವನ್ನು ಹೊಂದಿ ಗರುಡನಿಂದ ತನ್ನವಾಹನವಾದ ನವಿಲಿಗೆ ಏಟುಬೀಳುತ್ತಲು ಕೃಷ್ಣನ ಹುಂಕಾರಶಬ್ದಕ್ಕೆ ತನ್ನ ಶಕ್ತಿಯನ್ನು ಕಳೆದುಕೊಂಡು ಯುದ್ಧವನ್ನು ಬಿಟ್ಟು ಹೋದನು.

೨೭–೩೧. ಶಿವನು ಜಡನಾಗಿ ಗುಹನು ಸೋತು ಪ್ರಮಥಗಣಗಳು ನಾಶ ಹೊಂದುತ್ತಲು ಬಾಣನು ರಥದಲ್ಲಿ ಕುಳಿತು ನಂದಿಯು ಸಾರಥಿಯಾಗಿರಲು ಕೃಷ್ಣನೊಡನೆಯೂ, ಅವನ ಸೇನೆಯೊಡನೆಯೂ, ಯುದ್ಧಮಾಡುವುದಕ್ಕಾಗಿ ಬಂದನು. ಶೂರನಾದ ಬಲರಾಮನು ಬಾಣನ ಸೈನ್ಯವನ್ನು ಅನೇಕ ಬಗೆಯಲ್ಲಿ ಬಾಣಗಳಿಂದ ಹೊಡೆದನು. ಆ ಸೇನೆಯೆಲ್ಲ ಓಡಿಹೋದುವು. ಬಲರಾಮನು ತನ್ನ ಸೈನ್ಯವನ್ನು

ಬಲಭದ್ರೋ ಮಹಾವೀರ್ಯೋ ಬಾಣಸೈನ್ಯಮನೇಕಧಾ ।
ವಿವ್ಯಾಧ ಬಾಣೈಃ ಪ್ರಭೃಶ್ಯ ಧರ್ಮತಶ್ಚಾಪಲಾಯತ ॥ ೨೯ ॥

ಆಕೃಷ್ಯ ಲಾಂಗ ಲಾಗ್ರೇಣ ಮುಸಲೇನಾಶು ತಾಡಿತಂ ।
ಬಲಂ ಬಲೇನ ದದೃಶೇ ಬಾಣೋ ಬಾಣೈಶ್ಚ ಚಕ್ರಣಾ ॥ ೩೦ ॥

ತತಃ ಕೃಷ್ಣೇನ ಬಾಣಸ್ಯ ಯುದ್ಧಮಾಸೀತ್ಸುದಾರುಣಂ ॥ ೩೧ ॥
ಸಮುಸ್ಯತೋರಿಷೂನ್ ದೀಪ್ತಾನ್ ಕಾಯತ್ರಾಣವಿಭೇದಿನಃ ।

ಕೃಷ್ಣಶ್ಚಿಚ್ಛೇದ ಬಾಣೈಸ್ತಾನ್ ಬಾಣೇನ ಪ್ರಹಿತಾನ್ ಶಿತಾನ್ ॥
ವಿವ್ಯಾಧ ಕೇಶವಂ ಬಾಣೋ ಬಾಣಂ ವಿವ್ಯಾಧ ಚಕ್ರಧೃತ್ ॥ ೩೨ ॥

ಮುಮುಚಾತೇ ತಥಾಸ್ತ್ರಾಣಿ ಬಾಣಕೃಷ್ಣೌ ಜಿಗೀಷಯಾ ।
ಪರಸ್ಪರಕ್ಷತಿಕರೌ ಲಾಘವಾದನಿಶಂ ದ್ವಿಜ ॥ ೩೩ ॥

ನೇಗಿಲಿನಿಂದ ಎಳೆದು ಮುಸಲಾಯುಧದಿಂದ ಬಡಿಯುತ್ತಿದ್ದುದನ್ನೂ, ಕೃಷ್ಣನು ಬಾಣಗಳಿಂದ ಹೊಡೆಯುತ್ತಿದ್ದುದನ್ನೂ, ಬಾಣನು ನೋಡಿದನು. ಆ ಮೇಲೆ ಕೃಷ್ಣನಿಗೂ, ಬಾಣನಿಗೂ ಭಯಂಕರವಾದ ಯುದ್ಧವಾಯಿತು.

೩೨-೩೫. ಕವಚವನ್ನು ಭೇದಿಸುವ ಪ್ರಕಾಶಯುಕ್ತವಾದ ಬಾಣಗಳನ್ನು ಪ್ರಯೋಗಿಸುತ್ತಿರುವ ಆವರಿಬ್ಬರಲ್ಲಿ ಕೃಷ್ಣನು ಬಾಣನ ಹರಿತವಾದ ಬಾಣಗಳನ್ನು ಕತ್ತರಿಸಿ ಅವನನ್ನು ಹೊಡೆದನು. ಬಾಣನೂ ಕೃಷ್ಣನನ್ನೂ ಹೊಡೆದನು. ಒಬ್ಬರನ್ನೊಬ್ಬರು ಜಯಿಸಬೇಕೆಂದು ಗಾಯವನ್ನುಂಟುಮಾಡುವ ಮಂತ್ರಾಸ್ತ್ರಗಳನ್ನು

ಭಿದ್ಯಮಾನೇಷ್ವಶೇಷೇಷು ಶರೇಷ್ವಸ್ತ್ರೇ ಚ ಸೀದತಿ ।
ಪ್ರಾಚುರ್ಯೇಣ ತತೋ ಬಾಣಂ ಹಂತುಂ ಚಕ್ರೇ ಹರಿರ್ಮನಃ ॥ ೩೪ ॥

ತತೋಽರ್ಕಶತಸಂಘಾತತೇಜಸಾ ಸದೃಶದ್ಯುತಿ ।
ಜಗ್ರಾಹ ದೈತ್ಯಚಕ್ರಾರಿರ್ಹರಿಶ್ಚಕ್ರಂ ಸುದರ್ಶನಂ ॥ ೩೫ ॥

ಮುಂಚತೋ ಬಾಣನಾಶಾಯ ತತಶ್ಚಕ್ರಂ ಮಧುದ್ವಿಷಃ ।
ನಗ್ನಾ ದೈತೇಯ ವಿದ್ಯಾಭೂತ್ಕೋಟರೀ ಪುರತೋ ಹರೇಃ ॥ ೩೬ ॥

ತಾಮುಗ್ರಕೋ ಹರಿರ್ದೃಷ್ಟ್ವಾ ಮೀಲಿತಾಕ್ಷಸ್ತದಾದರ್ಶನಂ ।
ಮುನೋಚ ಬಾಣಮುದ್ದಿಶ್ಯ ಛೇತ್ತುಂ ಬಾಹುವನಂ ರಿಪೋಃ ॥ ೩೭ ॥

ಕ್ರಮೇಣ ತತ್ತು ಬಾಹೂನಾಂ ಬಾಣಸ್ಯಾಚ್ಯುತಚೋದಿತಂ ।
ಛೇದಂ ಚಕ್ರೇ ಸುರಾಪಾಸ್ತ್ರಶಸ್ತ್ರೌಘಕ್ಷಪಣಾ ದೃತಂ ॥ ೩೮ ॥

ಇಬ್ಬರೂ ಚಟುವಟಿಕೆಯಿಂದ ಬಿಡದೆ ಪ್ರಯೋಗಿಸುತ್ತಿದ್ದರು. ಸಮಸ್ತ ಬಾಣಗಳೂ ಮುರಿದು ಮುಂತ್ರಾಸ್ತ್ರಗಳೆಲ್ಲ ನಾಶವಾದಮೇಲೆ ಕೃಷ್ಣನು ಬಾಣನನ್ನು ಕೊಲ್ಲಬೇಕೆಂದು ಮನಸ್ಸುಮಾಡಿದನು. ಅದಕ್ಕಾಗಿ ಕೋಟಿಸೂರ್ಯಪ್ರಕಾಶದಂತೆ ಹೊಳೆಯುತ್ತಿರುವ ಸುದರ್ಶನವೆಂಬ ಚಕ್ರಾಯುಧವನ್ನು ಹಿಡಿದನು.

೩೬-೩೮. ಬಾಣನನ್ನು ಕೊಲ್ಲುವುದಕ್ಕಾಗಿ ಚಕ್ರಾಯುಧವನ್ನು ಪ್ರಯೋಗಿಸುತ್ತಿರುವ ಕೃಷ್ಣನ ಇದುರಿಗೆ ಕೋಟರಿ ಎಂಬ ದೈತ್ಯವಿದ್ಯಾದೇವತೆಯು ದಿಗಂಬರಳಾಗಿ ಬಂದು ನಿಂತಳು. ಕೃಷ್ಣನು ಅವಳನ್ನು ನೋಡಿ ಕಣ್ಣುಮುಚ್ಚಿಕೊಂಡು ಶತ್ರುವಿನ ತೋಳುಗಳನ್ನು ಕತ್ತರಿಸುವುದಕ್ಕಾಗಿ ಚಕ್ರವನ್ನು ಪ್ರಯೋಗಿಸಿದನು. ಆ ಚಕ್ರಾಯುಧವು ದೇವತೆಗಳು ಪ್ರಯೋಗಿಸಿದ ಬಾಣಗಳನ್ನು ನಾಶಮಾಡುತ್ತಿದ್ದ ಅವನ ತೋಳುಗಳನ್ನು ಕ್ರಮವಾಗಿ ಕತ್ತರಿಸಿತು.

ಛಿನ್ನೇ ಬಾಹುವನೇ ತಸ್ಮಿನ್ ಕರಸ್ಥಂ ಮಧುಸೂದನಃ ।
ಮುಮುಕ್ಷುರ್ಬಾಣನಾಶಾಯ ವಿಜ್ಞಾತಸ್ತ್ರಿಪುರದ್ವಿಷಾ ॥ ೫೯ ॥

ಸಮುಪೇತ್ಯಾಹ ಗೋವಿಂದಂ ಸಾಮ ಪೂರ್ವಮುಮಾಪತಿಃ ।
ವಿಲೋಕ್ಯ ಬಾಣಂ ದೋರ್ದಂಡಛೇದಾಸೃಕ್ಸ್ರಾವವರ್ಷಿಣಂ ॥ ೪೦ ॥

॥ ಶಂಕರ ಉವಾಚ ॥

ಕೃಷ್ಣ ಕೃಷ್ಣ ಜಗನ್ನಾಥ ಜಾನೇ ತ್ವಾಂ ಪುರುಷೋತ್ತಮಂ ।
ಪರೇಶಂ ಪರಮಾತ್ಮಾನಮನಾದಿನಿಧನಂ ಹರಿಂ ॥ ೪೧ ॥

ದೇವತಿರ್ಯಙ್ಮನುಷ್ಯೇಷು ಶರೀರಗ್ರಹಣಾತ್ಮಿಕಾ ।
ಲೀಲೇಯಂ ಸರ್ವಭೂತಸ್ಯ ತವ ಚೇಷ್ಟೋಪಲಕ್ಷಣಾ ॥ ೪೨ ॥

೫೯-೪೦. ಬಾಣನ ತೊಳುಗಳೆಂಬ ಕಾಡನ್ನು ಕತ್ತರಿಸಿ ತನ್ನ ಕೈಗೆ ಬಂದ ಚಕ್ರಾಯುಧವನ್ನು ಬಾಣನನ್ನು ಕೊಲ್ಲುವುದಕ್ಕಾಗಿ ಪುನಃ ಪ್ರಯೋಗಿಸಬೇಕೆಂದಿದ್ದು ದನ್ನು ಶಿವನು ತಿಳಿದು ಕೃಷ್ಣನ ಸಮೀಪಕ್ಕೆ ಬಂದು ತೋಳುಗಳು ಕತ್ತರಿಸಿದುದರಿಂದ ಸುರಿಯುತ್ತಿರುವ ರಕ್ತದಲ್ಲಿ ನೆನೆದಿರುವ ಬಾಣನನ್ನು ನೋಡಿ ಸಮಾಧಾನಕರವಾದ ಮಾತುಗಳನ್ನಾಡಿದನು. ಎಂತೆಂದರೆ

೪೧-೪೪. "ಓ ಕೃಷ್ಣನೇ! ನೀನು ಲೋಕಕ್ಕೊಡೆಯನಾದ ಪುರುಷೋತ್ತಮನೆಂಬುದನ್ನು ನಾನು ತಿಳಿದಿರುವೆನು. ನೀನು ಉತ್ಪತ್ತಿನಾಶಗಳಿಲ್ಲದ ಪರಮಾತ್ಮನೂ, ಪರಮೇಶ್ವರನೂ ಆದ ವಿಷ್ಣುವಾಗಿರುವೆ. ದೇವತೆಗಳು ತಿರ್ಯಗ್ಯೋನಿಗಳು. ಮನುಷ್ಯರು ಇವರಲ್ಲಿ ಶರೀರವನ್ನು ಧರಿಸಿ ಅವತಾರ ಮಾಡುವ ಲೀಲೆಯು ಸಮಸ್ತ ಭೂತ ಸ್ವರೂಪನಾದ ನಿನ್ನ ಕೆಲಸವೇ ಆಗಿರುವುದು. ಓ ಸ್ವಾಮಿಯೇ! ಈ

ತಪ್ಪ್ರಸೀದಾಭಯಂ ದತ್ತಂ ಬಾಣಸ್ಯಾಸ್ಯ ಮಯಾ ಪ್ರಭೋ ।
ತತ್ತ್ವಯಾ ನಾನೃತಂ ಕಾರ್ಯಂ ಯನ್ಮಯಾ ವ್ಯಾಹೃತಂ ವಚಃ ॥ ೪೩ ॥

ಅಸ್ಮತ್ಸಂಶ್ರಯದೃಪ್ತೋಽಯಂ ನಾಪರಾಧೀತವಾವ್ಯಯ ।
ಮಯಾ ದತ್ತವರೋ ದೈತ್ಯಸ್ತತಸ್ತ್ವಾಂ ಕ್ಷಮಯಾಮ್ಯಹಂ ॥ ೪೪ ॥

॥ ಶ್ರೀ ಪರಾಶರಃ ॥

ಇತ್ಯುಕ್ತಃ ಪ್ರಾಹ ಗೋವಿಂದಃ ಶೂಲಪಾಣಿಮುಮಾಪತಿಂ ।
ಪ್ರಸನ್ನವದನೋ ಭೂತ್ವಾ ಗತಾವಹೋಽಸುರಂ ಪ್ರತಿ ॥ ೪೫ ॥

॥ ಶ್ರೀ ಭಗವಾನುವಾಚ ॥

ಯುಷ್ಮದ್ದತ್ತವರೋ ಬಾಣೋ ಜೀವತಾಮೇಷ ಶಂಕರ ।
ತ್ವದ್ವಾಕ್ಯಗೌರವಾದೇತನ್ಮಯಾ ಚಕ್ರಂ ವಿವರ್ತಿತಂ ॥ ೪೬ ॥

ಬಾಣನಿಗೆ ನಾನು ಅಭಯವನ್ನು ಕೊಟ್ಟಿರುವೆನು. ನನ್ನ ಮಾತನ್ನು ನೀನು ಸುಳ್ಳಾಗಿ ಮಾಡಬೇಡ. ಇವನಲ್ಲಿ ಪ್ರಸನ್ನನಾಗು. ನನ್ನ ಆಶ್ರಯದಿಂದ ಇವನು ಗರ್ವಿಸಿರುವನು. ನಿನ್ನ ವಿಷಯದಲ್ಲಿ ತಪ್ಪುಮಾಡಿದವನಲ್ಲ. ನಾನು ದೈತ್ಯನಿಗೆ ವರವನ್ನು ಕೊಟ್ಟಿರುವುದರಿಂದ ನೀನೂ ಇವನನ್ನು ಕ್ಷಮಿಸಬೇಕೆಂದು ಕೇಳುತ್ತಿರುವೆನು" ಎಂದನು.

೪೫–೪೦. ಈ ಮಾತನ್ನು ಕೇಳಿ ಕೃಷ್ಣನು ಕೋಪವನ್ನು ಬಿಟ್ಟು ಉಮಾಪತಿಯಾದ ಶಿವನನ್ನು ಕುರಿತು "ಶಂಕರನೇ! ನಿನ್ನ ವರದಿಂದ ಬಾಣನು ಜೀವಿಸಿರಲಿ. ನಿನ್ನ ಮಾತಿನ ಗೌರವಕ್ಕಾಗಿ ನಾನು ಚಕ್ರಾಯುಧವನ್ನು ಉಪಸಂಹರಿಸಿರುವೆನು. ನೀನು ಅಭಯವನ್ನು ಕೊಟ್ಟಮೇಲೆ ನಾನು ಕೊಟ್ಟಂತೆಯೇ ಸರಿ. ನನಗೂ, ನಿನಗೂ

ತ್ವಯಾ ಯದಭಯಂ ದತ್ತಂ ತದ್ದತ್ತಮಖಿಲಂ ಮಯಾ ।
ಮತ್ತೋ ವಿಭಿನ್ನಮಾತ್ಮಾನಂ ದ್ರಷ್ಟುಮರ್ಹಸಿ ಶಂಕರೆ ॥ ೪೭ ॥

ಯೋಽಹಂ ಸತ್ವಂ ಜಗಚ್ಚೇದಂ ಸದೇವಾಸುರಮಾನುಷಂ ।
ಮತ್ತೋ ನಾನ್ಯದಶೇಷಂ ಯತ್ತ ತ್ತ್ವಂ ಜ್ಞಾತುಮಿಹಾರ್ಹಸಿ ॥ ೪೮ ॥

ಅವಿದ್ಯಾಮೋಹಿತಾತ್ಮಾನಃ ಪುರುಷಾಭಿನ್ನದರ್ಶಿನಃ ।
ವದಂತಿ ಭೇದಂ ಪಶ್ಯಂತಿ ಚಾವಯೋರಂತರಂ ಹರ ॥ ೪೯ ॥

ಪ್ರಸನ್ನೋಽಹಂ ಗಮಿಷ್ಯಾಮಿ ತ್ವಂ ಗಚ್ಛ ವೃಷಭಧ್ವಜ ॥ ೫೦ ॥

॥ ಶ್ರೀ ಪರಾಶರಃ ॥

ಇತ್ಯುಕ್ತ್ವಾ ಪ್ರಯಯೌ ಕೃಷ್ಣಃ ಪ್ರಾದ್ಯುಮ್ನಿರ್ಯತ್ರ ತಿಷ್ಠತಿ ।
ತದ್ಬಂಧಫಣಿನೋ ನೇಶುರ್ಗರುಡಾನಿಲಪೋಥಿತಾಃ ॥ ೫೧ ॥

ಭೇದವಿಲ್ಲ. ನಾನು ಯಾರೋ ನಿನೂ ಅವನೇ ಆಗಿರುವೆ. ದೇವಾಸುರ ಮನುಷ್ಯರಿಂದ ಕೂಡಿದ ಈ ಜಗತ್ತು ನನಗಿಂತ ಬೇರೆಯಾದುದಲ್ಲ. ಈ ತತ್ವವನ್ನು ನೀನು ತಿಳಿಯಬೇಕು. ಶಿವನೇ! ಅವಿದ್ಯಾ ರೂಪವಾದ ಅಜ್ಞಾನದಿಂದ ಮೋಹಗೊಂಡವರು ನನಗೂ ನಿನಗೂ ಭೇದವನ್ನೆಣಿಸುವರು. ನಾನು ಪ್ರಸನ್ನನಾದೆನು. ಇನ್ನು ಇಲ್ಲಿಂದ ಪ್ರಯಾಣಮಾಡುವೆನು. ನೀನೂ ಪ್ರಯಾಣಮಾಡು" ಎಂದು ಹೇಳಿದನು.

೫೧-೫೨. ಕೃಷ್ಣನು ಹೀಗೆಂದು ಹೇಳಿ ಅನಿರುದ್ಧನಿದ್ದೆಡೆಗೆ ಪ್ರಯಾಣ ಮಾಡಿದನು. ಗರುಡನ ಗಾಳಿಯಿಂದ ಅವನನ್ನು ಕಟ್ಟಿಹಾಕಿದ್ದ ಸರ್ಪಗಳು ಅಲ್ಲಿ

ತತೋಽನಿರುದ್ಧಮಾದೋಪ್ಯ ಸಪತ್ನೀಕಂ ಗರುತ್ಮತಿ ।
ಆಜಗ್ಮುರ್ದ್ವಾರಕಾಂ ರಾಮಕಾಷ್ಣಿ೯ದಾಮೋದರಾಃ ಪುರೀಂ ॥ ೫೨ ॥

ಪುತ್ರಪೌತ್ರೈಃ ಪರಿವೃತಸ್ತತ್ರ ರೇಮೇ ಜನಾರ್ದನಃ ।
ದೇವೀಭಿಸ್ಸತತಂ ವಿಪ್ರ ಭೂಭಾರತರಣೇಚ್ಛಯಾ ॥ ೫೩ ॥

ಇತಿ ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ ತ್ರಯಸ್ತ್ರಿಂಶೋಽಧ್ಯಾಯಃ

ನಿಲ್ಲಲಾರದೆ ಓಡಿದುವು ಬಳಿಕ ಪತ್ನೀಸಹಿತನಾದ ಅನಿರುದ್ಧನನ್ನು ಗರುಡನ ಮೇಲೇರಿಸಿಕೊಂಡು ಪ್ರದ್ಯುಮ್ನ ರಾಮಕೃಷ್ಣರು ದ್ವಾರಕಾ ಪಟ್ಟಣಕ್ಕೆ ಬಂದರು.

೫೩. ಅಲ್ಲಿ ಕೃಷ್ಣನು ಮಕ್ಕಳು ಮೊಮ್ಮಕ್ಕಳುಗಳೊಡನೆಯೂ, ಪತ್ನಿಯರೊಡನೆಯೂ ಭೂ ಭಾರವನ್ನು ನಾಶಮಾಡಬೇಕೆಂಬ ಉದ್ದೇಶದಿಂದ ವಿಹರಿಸುತ್ತಿದ್ದನು.

ಎಂಬಲ್ಲಿಗೆ ಶ್ರೀ ವಿಷ್ಣು ಪುರಾಣದ ಪಂಚಮಾಂಶದಲ್ಲಿ

ಮೂವತ್ತಮೂರನೆಯ ಅಧ್ಯಾಯವು

ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಚತುಸ್ತ್ರಿಂಶೋಽಧ್ಯಾಯಃ

॥ ಮೈತ್ರೇಯಃ ॥

ಚಕ್ರೇ ಕರ್ಮ ಮಹಚ್ಛಾರ್ಙ್ಗಿರ್ಬಿಭ್ರಾಣೋ ಮಾನುಷೀಂ ತನುಂ ।
ಜಿಗಾಯ ಶಕ್ರಂ ಶರ್ವಂ ಚ ಸರ್ವಾನ್ ದೇವಾಂಶ್ಚ ಲೀಲಯಾ ॥ ೧ ॥

ಯಚ್ಚಾನ್ಯದಕರೋತ್ಕರ್ಮ ದಿವ್ಯಚೇಷ್ಟಾವಿಘಾತಕೃತ್ ।
ತತ್ಕಥ್ಯತಾಂ ಮುಹಾಭಾಗ ಪರಂ ಕೌತೂಹಲಂ ಹಿ ಮೇ ॥ ೨ ॥

॥ ಶ್ರೀ ಪರಾಶರಃ ॥

ಗದತೋ ಮಮ ವಿಪ್ರರ್ಷೇ ಶ್ರೂಯತಾಮಿದಮಾದರಾತ್ ।
ನರಾವತಾರೇ ಕೃಷ್ಣೇ ನದಗ್ಧಾ ವಾರಾಣಸೀ ಯಥಾ ॥ ೩ ॥

ಮೂವತ್ತನಾಲ್ಕನೆಯ ಅಧ್ಯಾಯವು

೧–೨. ಮೈತ್ರೇಯನು "ಗುರುಗಳೇ! ವಿಷ್ಣುವು ಮನುಷ್ಯಶರೀರವನ್ನು ಧರಿಸಿ ದೇವೇಂದ್ರನನ್ನೂ ಲೀಲೆಯಿಂದ ಜಯಿಸಿದನು. ದೇವತೆಗಳ ಪರಾಕ್ರಮವನ್ನು ನಾಶಮಾಡುವ ಅವನು ಮತ್ತೇನು ಆಶ್ಚರ್ಯಕರವಾದ ಕೆಲಸಗಳನ್ನು ಮಾಡಿದನೆಂಬುದನ್ನು ಹೇಳಬೇಕು" ಎಂದು ಪ್ರಶ್ನೆಮಾಡಿದನು.

೩–೫. ಪರಾಶರರು, ಬ್ರಹ್ಮರ್ಷಿಯಾದ ಮೈತ್ರೇಯನೇ! ಮನುಷ್ಯಾವತಾರದಲ್ಲಿ ಕೃಷ್ಣನು ಕಾಶೀಪಟ್ಟಣವನ್ನು ಹೇಗೆ ಸುಟ್ಟನೆಂಬುದನ್ನು ಹೇಳುವೆನು ಕೇಳು.

ಪೌಂಡ್ರಕೋ ವಾಸುದೇವಸ್ತು ವಾಸುದೇವೋಽಭವದ್ಭುವಿ ।
ಅವತೀರ್ಣಸ್ತ್ವಿತ್ಯುಕ್ತೋ ಜನೈರಜ್ಞಾನಮೋಹಿತೈಃ ॥ ೪ ॥

ಸ ಮೇನೇ ವಾಸುದೇವೋಽಹಮವತೀರ್ಣೋ ಮಹೀತಲೇ ।
ನಷ್ಟಸ್ಮೃತಿಸ್ತತಸ್ಸರ್ವಂ ವಿಷ್ಣು ಚಿಹ್ನಮಧೀಕರತ್ ॥ ೫ ॥

ದೂತಂ ಚ ಪ್ರೇಷಯಾಮಾಸ ಕೃಷ್ಣಾಯ ಸುಮಹಾತ್ಮನೇ ।
ತ್ಯಕ್ತ್ವಾ ಚಕ್ರಾದಿಕಂ ಚಿಹ್ನಂ ಮದೀಯಂ ನಾಮ ಚಾತ್ಮನಃ ॥ ೬ ॥

ವಾಸುದೇವಾತ್ಮಕಂ ಮೂಢ ತ್ಯಕ್ತ್ವಾ ಸರ್ವಮಶೇಷತಃ ।
ಅತ್ಮನೋ ಜೀವಿತಾರ್ಥಾಯ ಶರಣೋ ಮೇ ಪ್ರಣತಿಂ ವಜ್ರ ॥ ೭ ॥

ಇತ್ಯುಕ್ತಸ್ಸಂಪ್ರಹಸ್ಯೈನಂ ದೂತಂ ಪ್ರಾಹ ಜನಾರ್ದನಃ ।
ನಿಜಚಿಹ್ನಮಹಂ ಚಕ್ರಂ ಸಮುತ್ಸೃಜ್ಯೇ ತ್ವಯೀತಿ ವೈ ॥ ೮ ॥

ಪೌಂಡ್ರದೇಶಾಧಿಪತಿಯಾದ ವಾಸುದೇವನೆಂಬವನು "ಮಹಾವಿಷ್ಣುವೇ ವಾಸುದೇವನಾಗಿ ಭೂಮಿಯಲ್ಲಿ ಅವತಾರವಾತಿರುವನು" ಅಜ್ಞಾನಿಗಳಾದ ಜನರು ಹೇಳಿದುದನ್ನು ಕೇಳಿ ತಾನೇ ಭೂಮಿಯಲ್ಲಿ ಅವತಾರವೆಂದು ತಿಳಿದು ಜ್ಞಾನಹೀನನಾಗಿ ಕೃಷ್ಣನ ಸಮಸ್ತ ಚಿಹ್ನೆಗಳನ್ನೂ ಧರಿಸಿದನು.

೬-೧೦. ಬಳಿಕ ಮಹಾಮಹಿಮನಾದ ಕೃಷ್ಣನ ಸಮೀಪಕ್ಕೆ ದೂತನನ್ನು ಕಳುಹಿಸಿ ಅವನೊಡನೆ "ನೀನು ಧರಿಸಿರುವ ಚಕ್ರಾದಿ ಚಿಹ್ನೆಯನ್ನೂ ನನ್ನ ವಾಸುದೇವನೆಂಬ ಹೆಸರನ್ನೂ ಬಿಟ್ಟು ನಿನ್ನ ಜೀವನಕ್ಕಾಗಿ ನನ್ನ ಶರಣುಹೊಂದು" ಎಂದು ಹೇಳಿ ಕಳುಹಿಸಿದನು. ಈ ಮಾತನ್ನು ಕೇಳಿ ಕೃಷ್ಣನು ಹಾಸ್ಯಮಾಡುತ್ತ ದೂತನನ್ನು ಕುರಿತು "ಎಲೈ ದೂತನೆ! ನನ್ನ ಚಿಹ್ನೆಯಾದ ಚಕ್ರವನ್ನು ನಿನ್ನಲ್ಲಿಯೇ ಬಿಡು

ನಾಚ್ಯುತ್ಪ ಪೌಂಡ್ರಕೋ ಗತ್ವಾ ತ್ವಯಾ ದೂತವಚೋ ಮಮ ।
ಜ್ಞಾತಸ್ತದ್ವಾಕ್ಯಸದ್ಭಾವೋ ಯತ್ಕಾರ್ಯಂ ತದ್ವಿಧೀಯತಾಂ ॥ ೯ ॥

ಗೃಹೀತ ಚಿಹ್ನವೇಷೋಹಮಾಗಮಿಷ್ಯಾಮಿ ತೇ ಪುರಂ ।
ಉತ್ಸೃಕ್ಷ್ಯಾಮಿ ಚ ತಚ್ಚಕ್ರಂ ನಿಜಚಿಹ್ನಮಸಂಶಯಂ ॥ ೧೦ ॥

ಆಜ್ಞಾಪೂರ್ವಂ ಚ ಯದಿವಮಾಗಚ್ಛೇತಿ ತ್ವಯೋದಿತಂ ।
ಸಂಪಾದಯಿಷ್ಯೇ ತ್ವತ್ಸುಭ್ಯಂ ಸಮಾಗಮ್ಯಾವಿಲಂಬಿತಂ ॥ ೧೧ ॥

ಶರಣಂ ತೇ ಸಮುಭ್ಯೇತ್ಯ ಕರ್ತಾಸ್ಮಿ ನೃಪ ತೇ ತಥಾ ।
ಯಥಾ ತ್ವತ್ತೋ ಭಯಂ ಭೂಯೋ ನ ಮೇ ಕಿಂಚಿದ್ವಿಷ್ಯತಿ ॥ ೧೨ ॥

॥ ಶ್ರೀ ಪರಾಶರಃ ॥

ಇತ್ಯುಕ್ತೇಪಗತೇ ದೂತೇ ಸಂಸ್ಮೃತ್ಯಾಭ್ಯಾಗತಂ ಹರಿಃ ।
ಗರುತ್ಮಂತಮಥಾರುಹ್ಯ ತ್ವರಿತಸ್ತತ್ಪುರಂ ಯಯೌ ॥ ೧೩ ॥

ವೆನು ಎಂದು ಹೇಳಿದ ನನ್ನ ಮಾತನ್ನು ಪೌಂಡ್ರಕನಿಗೆ ಹೇಳು. ನಿನ್ನ ಮಾತಿದ ಅಭಿಪ್ರಾಯವನ್ನು ನಾನು ತಿಳಿದುಕೊಂಡೆನು. ಅದಕ್ಕೆ ಮಾಡಬೇಕಾದ ಕೆಲಸ ಗಳನ್ನು ಮಾಡು. ನನ್ನ ಚಿಹ್ನೆ ಮತ್ತು ವೇಷಗಳನ್ನು ಧರಿಸಿ ನಿನ್ನ ಪಟ್ಟಣಕ್ಕೆ ಬರುವೆನು ನನ್ನ ಚಿಹ್ನೆಯಾದ ಚಕ್ರವನ್ನು ನನ್ನಿಲ್ಲಿ ಬಿಡುವೆನು. ಸಂದೇಹಪಡಬೇಡ ಎಂದು ಹೇಳಿದನೆಂದು ಹೇಳು

೧೧-೧೨. ಮತ್ತು ನನ್ನ ಆಜ್ಞೆಯಿಂದ ಇಲ್ಲಿಗೆ ಬರಬೇಕೆಂದು ನೀನು ಹೇಳಿದೆ ಯಷ್ಟೆ. ನಾಳೆಯ ದಿನವೇ ನಿನ್ನ ಮನೆಗೆ ಬಂದು ನಿನ್ನ ಇಷ್ಟಾರ್ಥವನ್ನು ನೆರವೇರಿ ಸುವೆನು. ಎಲೈ ರಾಜನೇ ನಿನ್ನಿಂದ ನನಗೆ ಪುನಃ ಭಯವುಂಟಾಗದಂತೆ ಮಾಡು ವೆನು" ಎಂದು ಹೇಳೆಂದು ದೂತನೊಡನೆ ಹೇಳಿ ಕಳುಹಿಸಿದನು.

೧೩-೧೫. ದೂತನು ಹೊರಟುಹೋದ ಮೇಲೆ ಕೃಷ್ಣನು ಗರುಡನನ್ನು ಸ್ಮರಿಸಿ ಅವನು ಬರುತ್ತಲು ಅವನ ಮೇಲೇರಿ ವೇಗವಾಗಿ ಪೌಂಡ್ರಕ ವಾಸುದೇವನ

ತತಸ್ತು ಕೇಶವೋದ್ಯೋಗಂ ಶ್ರುತ್ವಾ ಕಾಶೀಪತಿಸ್ತಥಾ ।
ಸರ್ವಸೈನ್ಯಪರೀವಾರಃ ಪಾಷ್ಣಿರ್ಗ್ರಾಹಳುಪಾಯಯೌ ॥ ೧೪ ॥

ತತೋ ಬಲೇನ ಮಹತಾ ಕಾಶೀರಾಜ ಬಲೇನ ಚ ।
ಪೌಂಡ್ರಕೋ ವಾಸುದೇವೋsಸೌ ಕೇಶವಾಭಿಮುಖಂ ಯಯೌ ॥ ೧೫ ॥

ತಂ ದದರ್ಶ ಹರಿರ್ದೂರಾದುದಾರಸ್ಯಂದನೇ ಸ್ಥಿತಂ ।
ಚಕ್ರಹಸ್ತಂ ಗದಾಶಾರ್ಙ್ಗಬಾಹುಂ ಪಾಣಿಗತಾಂಬುಜಂ ॥ ೧೬ ॥

ಸ್ರಗ್ಧರಂ ಪೀತವಸನಂ ಸುಪರ್ಣರಚಿತಧ್ವಜಂ ।
ವತ್ಸಸ್ಥಲೇ ಕೃತಂ ಚಾಸ್ಯ ಶ್ರೀವತ್ಸಂ ದದೃಶೇ ಹರಿಃ ॥ ೧೭ ॥

ಕಿರೀಟಕುಂಡಲಧರಂ ನಾನಾರತ್ನೋಪಶೋಭಿತಂ ।
ತಂ ದೃಷ್ಟ್ವಾ ಭಾವಗಂಭೀರಂ ಜಹಾಸ ಗರುಡಧ್ವಜಃ ॥ ೧೮ ॥

ಪಟ್ಟಣಕ್ಕೆ ಹೋದನು. ಕಾಶೀರಾಜನು ಕೃಷ್ಣನು ಯುದ್ಧಕ್ಕೆ ಬರುವುದನ್ನು ಕೇಳಿ ತನ್ನ ಸೈನ್ಯದೊಡನೆ ಪೌಂಡ್ರಕವಾಸುದೇವನಿಗೆ ಸಹಾಯಕನಾಗಿ ಹೋದನು. ಅವನು ಮಿತ್ರರಾಜನೊಡನೆ ಕೂಡಿ ಕೃಷ್ಣನಿಗೆದುರಾಗಿ ದೊಡ್ಡಸೇನೆಯೊಡನೆ ಯುದ್ಧಕ್ಕೆ ನಿಂತನು

೧೬-೧೮. ದೊಡ್ಡದಾದ ರಥದಲ್ಲಿ ಕುಳಿತು ಚಕ್ರವನ್ನೂ, ಗದೆಯನ್ನೂ, ಶಾರ್ಙವೆಂಬ ಧನುಸ್ಸನ್ನೂ, ಶಂಖವನ್ನೂ, ಕೈಗಳಲ್ಲಿ ಹಿಡಿದು ಪೀತಾಂಬರವನ್ನುಟ್ಟು ವನಮಾಲೆಯನ್ನು ಧರಿಸಿ ಗರುಡಧ್ವಜದಿಂದಲೂ ಕಿರೀಟ ಕುಂಡಲ ಬಗೆ ಬಗೆಯ ರತ್ನಗಳು ಇವುಗಳಿಂದಲೂ ಅಲಂಕರಿಸಿಕೊಂಡಿರುವ ಅವನನ್ನು ನೋಡಿ ಕೃಷ್ಣನು ಗಂಭೀರಭಾವದಿಂದ ನಕ್ಕನು.

ಯುಯುಧೇ ಚ ಬಲೇನಾಸ್ಯ ಹಸ್ತ್ಯಶ್ವಬಲಿನಾ ದ್ವಿಜ ।
ನಿಸ್ತ್ರಿಂಶಾಸಿಗದಾಶೂಲಶಕ್ತಿಕಾರ್ಮುಕಶಾಲಿನಾ ॥ ೮೯ ॥

ಕ್ಷಣೇನ ಶಾರ್ಙ್ಗನಿರ್ಮುಕ್ತೈಃ ಶರೈರರಿವಿದಾರಣೈಃ ।
ಗದಾಚಕ್ರನಿಪಾತೈಶ್ಚ ಸೂದಯಾಮಾಸ ತದ್ಬಲಂ ॥ ೯೦ ॥

ಕಾಶೀರಾಜಬಲಂ ಚೈವಂ ಕ್ಷಯಂ ನೀತ್ವಾ ಜನಾರ್ದನಃ ।
ಉವಾಚ ಪೌಂಡ್ರಕಂ ಮೂಢ ಮಾತ್ಮ ಚಿಹ್ನೋಪಲಕ್ಷಿತಂ ॥ ೯೧ ॥

॥ ಶ್ರೀ ಭಗವಾನುವಾಚ ॥

ಪೌಂಡ್ರಕೋಕ್ತಂ ತ್ವಯಾ ಯತ್ತು ದೂತವಕ್ತ್ರೇಣ ಮಾಂ ಪ್ರತಿ ।
ಸಮುತ್ಸೃಜೇತಿ ಜಿಹ್ಮಾನಿ ತತ್ತೇ ಸಂಪಾದಯಾಮ್ಯಹಂ ॥ ೯೨ ॥

ಚಕ್ರಮೇತತ್ಸಮುತ್ಸೃಷ್ಟಂ ಗದೇಯಂ ತೇ ವಿಸರ್ಜಿತಾ ।
ಗರುತ್ಮಾನೇಷ ಚೋತ್ಸೃಷ್ಟಸ್ಸಮಾರೋಹತು ತೇ ಧ್ವಜಂ ॥ ೯೩ ॥

೮೯-೯೧. ಪೈತ್ರೇಯನೇ ! ಕೃಷ್ಣನು ಅನೆ ಕುದುರೆ ಮುಂತಾದ ಬಲಗಳೂ, ಕತ್ತಿ, ಗದೆ, ಬಿಲ್ಲು, ಶೂಲ ಮುಂತಾದ ಆಯುಧಗಳೂ ಉಳ್ಳ ಆ ಪೌಂಡ್ರಕವಾಸುದೇವನೊಡನೆ ಯುದ್ಧಮಾಡಿ ಕ್ಷಣದೊಳಗಾಗಿ ಶಾರ್ಙವೆಂಬ ಬಿಲ್ಲಿನಿಂದ ಬಿಟ್ಟ ಬಾಣಗಳಿಂದ ಶತ್ರುಗಳ ಆಯುಧಗಳನ್ನು ಕೆಡವಿ ಅವನ ಸೇನೆಯನ್ನೆಲ್ಲಾ ನಾಶಮಾಡಿ ತನ್ನ ಚಿಹ್ನೆಯನ್ನು ಧರಿಸಿದ್ದ ಮೂಢನಾದ ಆ ಪೌಂಡ್ರಕವಾಸುದೇವನನ್ನು ಕುರಿತು ಮಾತನಾಡಿದನು.

೯೨-೯೩. "ಎಲೈ ಪೌಂಡ್ರಕನೇ! ನೀನು ಚಿಹ್ನೆಗಳನ್ನು ತ್ಯಾಗಮಾಡೆಂದು ದೂತನೊಡನೆ ಹೇಳಿಕಳುಹಿಸಿದ್ದೆಯಲ್ಲವೇ ಅದನ್ನು ನಿನಗೆ ಮಾಡಿಸುವೆನು. ಇಗೋ ಚಕ್ರವನ್ನೂ, ಗದೆಯನ್ನೂ ಬಿಟ್ಟಿರುವೆನು. ಗರುಡನನ್ನೂ ಬಿಟ್ಟಿರುವೆನು. ನಿನ್ನ ಧ್ವಜವನ್ನೇರಲಿ" ಎಂದನು.

॥ ಶ್ರೀ ಪರಾಶರಃ ॥

ಇತ್ಯುಚ್ಚಾರ್ಯ ವಿಮುಕ್ತೇನ ಚಕ್ರೇಣಾಸೌ ವಿದಾರಿತಃ ।
ಪಾತಿತೋ ಗದಯಾ ಭಗ್ನೋ ಧ್ವಜಶ್ಚಾಸ್ಯ ಗರುತ್ಮತಾ ॥ ೨೪ ॥

ತತೋ ಹಾಹಾಕೃತೇ ಲೋಕೇ ಕಾಶೀಪುರ್ಯಧಿಪೋ ಬಲೀ ।
ಯುಯುಧೇ ವಾಸುದೇವೇನ ಮಿತ್ರಸ್ಯಾಪಚಿತೌ ಸ್ಥಿತಃ ॥ ೨೫ ॥

ತತಶ್ಚಾರ್ಜ್ಜಧನುರ್ಮುಕ್ತೈಶ್ಛಿತ್ವಾ ತಸ್ಯ ಶಿರಶ್ಶರೈಃ ।
ಕಾಶೀಪುರ್ಯಾಂ ಸ ಚಿಕ್ಷೇಪ ಕುರ್ವನ್ ಲೋಕಸ್ಯ ವಿಸ್ಮಯಂ ॥ ೨೬ ॥

ಹತ್ವಾ ತಂ ಪೌಂಡ್ರಕಂ ಶೌರಿಃ ಕಾಶೀರಾಜಂ ಚ ಸಾನುಗಂ ।
ಪುನರ್ದ್ವಾರವತೀಂ ಪ್ರಾಪ್ತೋ ರೇಮೇ ಸ್ವರ್ಗಗತೋ ಯಥಾ ॥ ೨೭ ॥

ತಚ್ಛಿರಃ ಪತಿತಂ ತತ್ರ ದೃಷ್ಟ್ವಾ ಕಾಶೀಪತೇಃ ಪುರೇ ।
ಜನಃ ಕಿಮೇತದಿತ್ಯಾಹ ಛಿನ್ನಂ ಕೇನೇತಿ ವಿಸ್ಮಿತಃ ॥ ೨೮ ॥

೨೪-೨೭. ಹೀಗೆಂದು ಹೇಳಿ ಅವನನ್ನು ಗದೆಯಿಂದ ಕೆಡಹಿ ಚಕ್ರದಿಂದ ಸೀಳಿದನು. ಗರುಡನು ಅವನ ಧ್ವಜವನ್ನು ಮುರಿದನು. ಜನಗಳೆಲ್ಲರೂ ಹಾಹಾ ಕಾರ ಮಾಡುತ್ತಿದ್ದರು. ಬಳಿಕ ಕಾಶೀರಾಜನು ತನ್ನ ಮಿತ್ರನಿಗಾಗಿ ಕೃಷ್ಣನೊಡನೆ ಯುದ್ಧ ಮಾಡಿದನು. ಕೃಷ್ಣನು ತನ್ನ ಧನುಸ್ಸಿನಿಂದ ಬಿಟ್ಟಬಾಣದಿಂದ ಆ ರಾಜನ ತಲೆಯನ್ನು ಕತ್ತರಿಸಿ ಜನಗಳಿಗೆ ಆಶ್ಚರ್ಯವಾಗುವಂತೆ ಕಾಶೀಪಟ್ಟಣದಲ್ಲಿ ಅವನ ತಲೆಯು ಬೀಳುವಂತೆ ಮಾಡಿದನು. ಕೃಷ್ಣನು ಪೌಂಡ್ರಕವಾಸುದೇವನನ್ನೂ ಅವನ ಮಿತ್ರನಾದ ಕಾಶೀರಾಜನನ್ನೂ ಕೊಂದು ದ್ವಾರಕಾಪಟ್ಟಣಕ್ಕೆ ಬಂದು ಸ್ವರ್ಗಸುಖವನ್ನನುಭವಿಸುತ್ತಿದ್ದನು.

೨೮-೩೦. ಕಾಶೀರಾಜನ ತಲೆಯು ಕಾಶೀಪಟ್ಟಣದಲ್ಲಿ ಬಿದ್ದುದನ್ನು ಕಂಡು ಜನರು ಆಶ್ಚರ್ಯಪಡುತ್ತ ಈ ತಲೆಯನ್ನು ಕತ್ತರಿಸಿದವರಾರೆಂದು ಕೇಳುತ್ತಿದ್ದರು.

ಜ್ಞಾತ್ವಾ ತಂ ವಾಸುದೇವೇನ ಹತಂ ತಸ್ಯ ಸುತಸ್ತತಃ ।
ಪುರೋಹಿತೇನ ಸಹಿತಸ್ತೋಷಯಾಮಾಸ ಶಂಕರಂ ॥ ೪೯ ॥

ಅವಿಮುಕ್ತೇ ಮಹಾಕ್ಷೇತ್ರೇ ತೋಷಿತಸ್ತೇನ ಶಂಕರಃ ।
ವರಂ ವೃಣೀಷ್ವೇತಿ ತದಾ ತಂ ಪ್ರೋವಾಚ ನೃಪಾತ್ಮಜಂ ॥ ೫೦ ॥

ಸ ವವ್ರೇ ಭಗವನ್ ಕೃತ್ಯಾ ಪಿತೃಹಂತುರ್ವಧಾಯ ಮೇ ।
ಸಮುತ್ತಿಷ್ಠತು ಕೃಷ್ಣಸ್ಯ ತ್ವತ್ಪ್ರಸಾದಾನ್ಮಹೇಶ್ವರ ॥ ೫೧ ॥

॥ ಶ್ರೀ ಪರಾಶರಃ ॥

ಏವಂ ಭವಿಷ್ಯತೀತ್ಯುಕ್ತೇ ದಕ್ಷಿಣಾಗ್ನೇರನಂತರಂ ।
ಮಹಾಕೃತ್ಯಾ ಸಮುತ್ತಸ್ಥೌ ತಸ್ಯೈವಾತ್ಮವಿನಾಶಿನೀ ॥ ೫೨ ॥

ಕಾಶೀರಾಜನ ಮಗನು ಕೃಷ್ಣನು ತನ್ನ ತಂದೆಯನ್ನು ಕೊಂದನೆಂಬುದನ್ನು ತಿಳಿದು ಪುರೋಹಿತನೊಡನೆ ಸೇರಿ ಶಿವನನ್ನು ಪೂಜಿಸಿ ಸಂತೋಷಪಡಿಸಿದನು. ಅವಿಮುಕ್ತ ಕ್ಷೇತ್ರದಲ್ಲಿ ತನ್ನನ್ನು ಸಂತೋಷಪಡಿಸಿದ ಆ ರಾಜಪುತ್ರನಿಗೆ ಶಿವನು ಪ್ರತ್ಯಕ್ಷನಾಗಿ ವರವನ್ನು ಕೇಳೆಂದು ಹೇಳಿದನು.

೪೯-೫೨. ಕಾಶೀರಾಜಪುತ್ರನು "ಮಹಾಮಹಿಮನಾದ ಶಿವನೇ! ನಿನ್ನ ಅನುಗ್ರಹದಿಂದ ನನ್ನ ತಂದೆಯನ್ನು ಕೊಂದವನ ನಾಶಕಾರ್ಯಕ್ಕೋಸ್ಕರವಾಗಿ ನಾನ್ತ ಮಾಡುವ ಅಭಿಚಾರ ಯಾಗದಲ್ಲಿ ಕೃತ್ಯಾದೇವಿಯು ಉತ್ಪತ್ತಿಯಾಗಬೇಕು" ಎಂದು ವರವನ್ನು ಕೇಳಿಕೊಂಡನು. ಶಿವನು ಹಾಗೆಯೇ ಆಗಲೆಂದು ವರವನ್ನು ಕೊಡುತ್ತಲು ದಕ್ಷಿಣಾಗ್ನಿಯಲ್ಲಿ ಹೋಮಮಾಡಿದಮೇಲೆ ಅವನಿಗೇ ನಾಶವನ್ನುಂಟುಮಾಡುವ ಕೃತ್ಯಾದೇವಿಯು ಆ ಅಗ್ನಿಕುಂಡದಲ್ಲಿ ಹುಟ್ಟಿದಳು.

ತತೋ ಜ್ವಾಲಾ ಕರಾಳಾ ಸ್ಯಾಜ್ಜ್ವಲಚ್ಛೇಕಪಾಲಿಕಾ ।
ಕೃಷ್ಣೇ ಕೃಷ್ಣೇತಿ ಕುಪಿತಾ ಕೃತ್ಯಾ ದ್ವಾರವತೀಂ ಯಯೌ ॥ ೩೩ ॥

ತಾಮವೇಕ್ಷ್ಯ ಜನಸ್ತ್ರಾಸಾತ್ ವಿಚಲಲ್ಲೋಚನೋ ಮುನೇ ।
ಯದುಪೌ ಶರಣ್ಯಂ ಜಗತಾಂ ಶರಣಂ ಮಧುಸೂದನಂ ॥ ೩೪ ॥

ಕಾಶೀರಾಜಸುತೇನೇಯಮಾರಾಧ್ಯ ವೃಷಭಧ್ವಜಂ ।
ಉತ್ಪಾದಿತಾಮಹಾಕೃತ್ಯೇ ತ್ಯವಗಮ್ಯಾಥ ಚಕ್ರಿಣಾ ॥ ೩೫ ॥

ಜಹಿ ಕೃತ್ಯಾಮಿಮಾಮುಗ್ರಾಂ ವಹ್ನಿಜ್ವಾಲಾ ಜಟಾಲಕಾಂ ।
ಚಕ್ರೇಮುಚ್ಯೈವಮುಕ್ಷೇಷು ಕ್ರೀಡಾಸಕ್ತೇನ ಲೀಲಯಾ ॥ ೩೬ ॥

ತದಗ್ನಿಮಾಲಾಜಟಿಲಜ್ವಾಲೋದ್ಗಾರಾತಿ ಭೀಷಣಾಂ ।
ಕೃತ್ಯಾಮನುಜಗಾಮಾಶು ವಿಷ್ಣುಚಕ್ರಂ ಸುದರ್ಶನಂ ॥ ೩೭ ॥

೩೩-೩೬. ಆ ಮೇಲೆ ಉರಿಯಿಂದ ಭಯಂಕರವಾದ ಬಾಯಿಯೂ ಉರಿಯುತ್ತಿರುವ ಕೂದಲುಗಳೂ ತಲೆಯೂ ಉಳ್ಳ ಕೃತ್ಯಾದೇವತೆಯು ಕೃಷ್ಣ ಕೃಷ್ಣನೆಂದು ಹೇಳುತ್ತ ಕೋಪದಿಂದ ದ್ವಾರಕಾಪಟ್ಟಣಕ್ಕೆ ಹೋದಳು. ಅಲ್ಲಿಯ ಜನರು ಆ ದೇವತೆಯನ್ನು ನೋಡಿ ಭಯದಿಂದ ಕೃಷ್ಣನ ಮರೆಹೊಕ್ಕರು. ಕಾಶೀರಾಜ ಪುತ್ರನು ಈಶ್ವರನನ್ನಾರಾಧಿಸಿ ಈ ಮಹಾಕೃತ್ಯಾದೇವತೆಯನ್ನು ಹುಟ್ಟಿಸಿರುವನೆಂದು ಪಗಡೆಯಾಡುತ್ತಿದ್ದ ಕೃಷ್ಣನು ತಿಳಿದು ಈ ಕ್ರೂರವಾದ ಬೆಂಕಿಯ ಉರಿಯಿಂದ ಕೂಡಿದ ಕೂದಲುಗಳುಳ್ಳ ಕೃತ್ಯಾಶಕ್ತಿಯನ್ನು ನಾಶಮಾಡೆಂದು ಲೀಲೆಯಿಂದ ತನ್ನ ಚಕ್ರವನ್ನು ಪ್ರಯೋಗಿಸಿದನು.

೩೭-೩೯. ಆ ಸುದರ್ಶನವೆಂಬ ವಿಷ್ಣುಚಕ್ರವು ಉರಿಯ ಸಮೂಹದಿಂದ ಕೂಡಿದ ಶರೀರವುಳ್ಳ ಭಯಂಕರವಾದ ಕೃತ್ಯಾದೇವತೆಯನ್ನು ಹಿಂದಟ್ಟಿಸಿಕೊಂಡು

ಚಕ್ರಪ್ರತಾಪನಿರ್ದಗ್ಧಾ ಕೃತ್ಯಾ ಮಾಹೇಶ್ವರೀ ತದಾ ।
ನನಾಶ ವೇಗಿನೀ ವೇಗಾತ್ತದಪ್ಯನುಜಗಾಮ ತಾಂ ॥ ೩೮ ॥

ಕೃತ್ಯಾ ವಾರಾಣಸೀಮೇವ ಪ್ರವಿವೇಶ ತ್ವರಾನ್ವಿತಾ ।
ವಿಷ್ಣುಚಕ್ರಪ್ರತಿಹತಪ್ರಭಾವಾ ಮುನಿಸತ್ತಮ ॥ ೩೯ ॥

ತತಃ ಕಾಶೀಬಲಂ ಭೂರಿ ಪ್ರಮಥಾನಾಂ ತಥಾ ಬಲಂ ।
ಸಮಸ್ತ ಶಸ್ತ್ರಾಸ್ತ್ರಯುತಂ ಚಕ್ರಸ್ಯಾಭಿಮುಖಂ ಯಯೌ ॥ ೪೦ ॥

ತಸ್ತ್ರಾಸ್ತ್ರಮೋಕ್ಷಚತುರಂ ದಗ್ಧ್ವಾ ತದ್ಬಲಮೋಜಸಾ ।
ಕೃತ್ಯಾ ಗರ್ಭಮಶೇಷಾಂ ತಾಂ ತದಾ ವಾರಾಣಸೀಂ ಪುರೀಂ ॥ ೪೧ ॥

ಸಭೂಭೃದ್ಭೃತ್ಯಪೌರಾಂ ತು ಸಾ ಶ್ವಮಾತಂಗಮಾನವಾಂ ।
ಅಶೇಷಗೋಷ್ಠಕೋಶಾಂ ತಾಂ ದುರ್ನಿರೀಕ್ಷ್ಯಾಂ ಸುರೈರಪಿ ॥ ೪೨ ॥

ಜ್ವಾಲಾಪರಿಷ್ಕೃತಾ ಶೇಷ ಗೃಹಪ್ರಾಕಾರಚತ್ವರಾಂ ।
ದದಾಹ ತದ್ಧರೇಶ್ಚಕ್ರಂ ಸಕಲಾಮೇವ ತಾಂ ಪುರೀಂ ॥ ೪೩ ॥

ಹೋಯಿತು. ಚಕ್ರದ ತಾಪವನ್ನು ತಡೆಯಲಾರದೆ ಮಹೇಶ್ವರನ ಸಂಬಂಧವಾದ ಕೃತ್ಯಾದೇವತೆಯು ವೇಗವಾಗಿ ಓಡುತ್ತಿದ್ದಿತು. ಚಕ್ರವು ಅದನ್ನನು ಸರಿಸಿ ಹೋಗುತಿದ್ದಿತು. ಕೃತ್ಯೆಯು ಆತುರದಿಂದ ಕಾಶಿಯನ್ನೇ ಪ್ರವೇಶಿಸಿತು.

೪೦-೪೩. ಆ ಮೇಲೆ ಕಾಶೀರಾಜನ ದೊಡ್ಡ ಸೈನ್ಯವೂ, ಪ್ರಮಥಗಣಗಳ ಸೈನ್ಯವೂ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸುತ್ತ ಚಕ್ರಕ್ಕೆ ಎದುರಾಗಿ ಬಂದುವು. ಚಕ್ರವು ಆ ಸೇನೆಯನ್ನೆಲ್ಲ ಸುಟ್ಟು ಕೃತ್ಯಾಶಕ್ತಿಯೊಡನೆ ಆ ಕಾಶೀಪಟ್ಟಣವನ್ನೆಲ್ಲ ರಾಜನೂ ಅವನ ಸೇವಕರೂ, ಪಟ್ಟಣಿಗರೂ, ಅನೆ ಕುದುರೆಗಳೂ, ಸಮಸ್ತಗೋವುಗಳೂ, ಬಂಡಾರಗಳೊಡನೆ ದೇವತೆಗಳಿಗೂ, ಕಾಣದಂತೆ ಸಮಸ್ತ ಪುರಭವನಗಳನ್ನೂ ಸುಟ್ಟುಬಿಟ್ಟಿತು.

ಅಕ್ಷೀಣಾಮರ್ಷಮತ್ಯುಗ್ರಂ ಸಾಧ್ಯಸಾಧನಸಸ್ಪೃಹಂ ।
ತಚ್ಚಕ್ರಂ ಪ್ರಸ್ಖಲದ್ದೀಪ್ತಿ ವಿಷ್ಣೋರಭ್ಯಯಯೌ ಕರಂ ॥ ೪೪ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ಚತುಸ್ತ್ರಿಂಶೋಽಧ್ಯಾಯಃ

---

೪೪. ಕಡಿಮೆಯಾಗದ ರೋಷವೂ, ಮಹಾಕ್ರೂರವೂ, ಮಾಡಬೇಕಾದ ಕೆಲಸವನ್ನು ಮಾಡುವುದರಲ್ಲಿ ಆಸಕ್ತಿಯುಳ್ಳದೂ, ಪ್ರಕಾಶಮಾನವಾದುದೂ ಆದ ಆ ವಿಷ್ಣುಚಕ್ರವು ಪುನಃ ಕೃಷ್ಣನ ಕೈಗೆ ಬಂದು ಸೇರಿತು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ

ಮೂವತ್ತನಾಲ್ಕನೆಯ ಅಧ್ಯಾಯವು

ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಪಂಚತ್ರಿಂಶೋಽಧ್ಯಾಯಃ

॥ ಮೈತ್ರೇಯಃ ॥

ಭೂಯ ಏವಾಹಮಿಚ್ಛಾಮಿ ಬಲಭದ್ರಸ್ಯ ಧೀಮತಃ ।
ಶ್ರೋತುಂ ಪರಾಕ್ರಮಂ ಬ್ರಹ್ಮನ್ ತನ್ಮಮಾಖ್ಯಾತುಮರ್ಹಸಿ ॥ ೧ ॥

ಯಮುನಾಕರ್ಷಣಾದೀನಿ ಶ್ರುತಾನಿ ಭಗವನ್ಮಯಾ ।
ತತ್ಕಥ್ಯತಾಂ ಮಹಾಭಾಗ ಯದನ್ಯತ್ಕೃತವಾನ್ಬಲಃ ॥ ೨ ॥

॥ ಶ್ರೀ ಪರಾಶರಃ ॥

ಮೈತ್ರೇಯ ಶ್ರೂಯತಾಂ ಕರ್ಮ ಯದ್ರಾಮೇಣಾಭವತ್ಕೃತಂ ।
ಅನಂತೇನಾಪ್ರಮೇಯೇಣ ಶೇಷೇಣ ಧರಣೀಧೃತಾ ॥ ೩ ॥

ಮೂವತ್ತೈದನೆಯ ಅಧ್ಯಾಯವು

೧-೨. ಮೈತ್ರೇಯನು "ಬ್ರಹ್ಮಜ್ಞಾನಿಗಳಾದ ಗುರುಗಳೇ ಮಹಾಬುದ್ಧಿಶಾಲಿಯಾದ ಬಲರಾಮನ ಪರಾಕ್ರಮಾದಿಗಳನ್ನು ಕೇಳಬೇಕೆಂದು ನನ್ನ ಅಪೇಕ್ಷೆಯಿರುವುದು. ಯಮುನಾಕರ್ಷಣೆಯೇ ಮುಂತಾದ ಪರಾಕ್ರಮಗಳನ್ನು ಹೇಳಿರುವಿರಿ. ಬಲರಾಮನು ಮತ್ತೇನಾದರೂ ಕಾರ್ಯಗಳನ್ನು ಮಾಡಿದ್ದರೆ ಅದನ್ನು ವಿಸ್ತಾರವಾಗಿ ನನಗೆ ಹೇಳಬೇಕು" ಎಂದು ಪ್ರಶ್ನೆ ಮಾಡಿದನು.

೩-೬. ಪರಾಶರರು "ಮೈತ್ರೇಯನೇ! ಭೂಮಿಯನ್ನು ಧರಿಸಿದ ಆದಿಶೇಷನಾದ ಅನಂತನು ಬಲರಾಮಾವತಾರವನ್ನು ಮಾಡಿ ಯಾವ ಆಶ್ಚರ್ಯಕರವಾದ ಕಾರ್ಯ

ಸುಯೋಧನಸ್ಯ ತನಯಾಂ ಸ್ವಯಂವರಕೃತಕ್ಷಣಾಂ ।
ಬಲಾದಾದತ್ತವಾನ್ವೀರಸ್ತಾಂಭೋ ಜಾಂಬವತೀಸುತಃ ॥ ೪ ॥

ತತಃ ಕ್ರುದ್ಧಾ ಮಹಾವೀರ್ಯಾಃ ಕರ್ಣದುರ್ಯೋಧನಾದಯಃ ।
ಭೀಷ್ಮದ್ರೋಣಾದಯಶ್ಚೈನಂ ಬಬಂಧುರ್ಯುಧಿ ನಿರ್ಜಿತಂ ॥ ೫ ॥

ತಚ್ಛ್ರುತ್ವಾ ಯಾದವಾಸ್ಸರ್ವೇ ಕ್ರೋಧಂ ದುರ್ಯೋಧನಾದಿಷು ।
ಮೈತ್ರೇಯ ಚಕ್ರುಃ ಕೃಷ್ಣಶ್ಚ ತಾನ್ನಿಹಂತುಂ ಮಹೋದ್ಯಮಂ ॥ ೬ ॥

ತಾನ್ನಿವಾರ್ಯ ಬಲಃ ಪ್ರಾಹ ಮದಲೋಲಕಲಾಕ್ಷರಂ ।
ಮೋಕ್ಷ್ಯಂತಿ ತೇ ಮದ್ವಚನಾದ್ಯಾಸ್ಯಾಮ್ಯೇಕೋ ಹಿ ಕೌರವಾನ್ ॥ ೭ ॥

॥ ಶ್ರೀ ಪರಾಶರಃ ॥

ಬಲದೇವಸ್ತತೋ ದೃಷ್ಟ್ವಾ ನಗರಂ ನಾಗಸಾಹ್ವಯಂ ।
ಬಾಹ್ಯೋಪವನ ಮಧ್ಯೇಽಭೂನ್ನ ವಿವೇಶ ಚ ತತ್ಪುರಂ ॥ ೮ ॥

ವನ್ನು ಮಾಡಿದನೆಂಬುದನ್ನು ಹೇಳುವೆನು ಕೇಳು. ದುರ್ಯೋಧನನು ತನ್ನ ಮಗಳಿಗೆ ಸ್ವಯಂವರವನ್ನು ಮಾಡಬೇಕೆಂದು ಏರ್ಪಡಿಸಿದ್ದಾಗ ಜಾಂಬವತಿಯ ಪುತ್ರನಾದ ಸಾಂಬನು ತನ್ನ ಪರಾಕ್ರಮದಿಂದ ಆ ಕನ್ಯೆಯನ್ನು ಬಲಾತ್ಕಾರವಾಗಿ ತಾನು ಪಡೆದನು. ಇದರಿಂದ ಮಹಾಪರಾಕ್ರಮಿಗಳಾದ ಕರ್ಣ, ದುರ್ಯೋಧನ, ಭೀಷ್ಮ, ದ್ರೋಣಾದಿಗಳು ಸಾಂಬನ ಮೇಲೆ ಯುದ್ಧಮಾಡಿ ಅವನನ್ನು ಗೆದ್ದು ಸೆರೆಯಲ್ಲಿಟ್ಟರು ಇದನ್ನು ಕೇಳಿ ಯಾದವರೆಲ್ಲರೂ ದುರ್ಯೋಧನನೇ ಮೊದಲಾದವರ ಮೇಲೆ ಕೋಪ ಗೊಂಡರು. ಕೃಷ್ಣನು ಅವರನ್ನು ಕೊಲ್ಲಲು ಯುದ್ಧಕ್ಕೆ ಸಿದ್ಧನಾದನು.

೭–೧೦. ಬಲರಾಮನು ಅವರನ್ನು ತಡೆದು ಅವರು ನನ್ನ ಮಾತಿನಿಂದ ಸಾಂಬನನ್ನು ಬಿಟ್ಟುಬಿಡುವರು. ನಾನೊಬ್ಬನೇ ಕೌರವರ ಸಮೀಪಕ್ಕೆ ಹೋಗಿ ಬರುತ್ತೇನೆಂದು ಸಮಾಧಾನಪಡಿಸಿ ಹಸ್ತಿನಾಪಟ್ಟಣಕ್ಕೆ ಹೋಗಿ ಪಟ್ಟಣವನ್ನು ಪ್ರವೇಶಿಸದೆ ಹೊರಗಿನ ಉಪವನದ ನಡುವೆ ಇಳಿದುಕೊಂಡನು. ಬಲರಾಮನು

ಬಲಮಾಗತಮಾಜ್ಞಾಯ ಭೂಪಾ ದುರ್ಯೋಧನಾದಯಃ ।
ಗಾಮರ್ಘ್ಯಮುದಕಂ ಚೈವ ರಾಮಾಯ ಪ್ರತ್ಯವೇದಯನ್ ॥ ೯೪ ॥

ಗೃಹೀತ್ವಾ ವಿಧಿವತ್ಸರ್ವಂ ತತಸ್ತಾನಾಹ ಕೌರವಾನ್ ।
ಆಜ್ಞಾಪಯತ್ಯುಗ್ರಸೇನಸ್ಸಾಂಬಮಾಶು ವಿಮುಂಚತ ॥ ೯೦ ॥

ತತಸ್ತದ್ವಚನಂ ಶ್ರುತ್ವಾ ಭೀಷ್ಮದ್ರೋಣಾದಯೋ ನೃಪಾಃ ।
ಕರ್ಣದುರ್ಯೋಧನಾದ್ಯಾಶ್ಚ ಚುಕ್ಷುಭುರ್ದ್ವಿಜಸತ್ತಮ ॥ ೯೧ ॥

ಊಚುಶ್ಚ ಕುಪಿತಾಸ್ಸರ್ವೇ ಬಾಹ್ಲೀಕಾದ್ಯಾಶ್ಚ ಕೌರವಾಃ ।
ಅರಾಜ್ಯಾರ್ಹಂ ಯದೋರ್ವಂಶಮುವೇಕ್ಷ್ಯ ಮುಸಲಾಯುಧ ॥ ೯೨ ॥

ಭೋ ಭೋ ಕಿಮೇತದ್ಭವತಾ ಬಲಭದ್ರೇರಿತಂ ವಚಃ ।
ಆಜ್ಞಾಂ ಕುರು ಕುಲೋತ್ಥಾನಾಂ ಯಾದವಃ ಕಃ ಪ್ರದಾಸ್ಯತಿ ॥ ೯೩ ॥

ಬಂದುದನ್ನು ದುರ್ಯೋಧನನೇ ಮೊದಲಾದವರು ತಿಳಿದು ಅವನಿಗೆ ಅರ್ಘ್ಯಾದಿ ಪೂಜೆಗಳನ್ನು ಮಾಡಿ ಸತ್ಕರಿಸಿದರು. ಬಲರಾಮನು ಅವರ ಪೂಜೆಯನ್ನು ಸ್ವೀಕರಿಸಿ ಕೌರವರನ್ನು ಕುರಿತು 'ನಮ್ಮ ರಾಜನಾದ ಉಗ್ರಸೇನನು ಸಾಂಬನನ್ನು ಬೇಗ ಬಿಡಬೇಕೆಂದು ಅಪ್ಪಣೆ ಮಾಡಿರುವನು' ಎಂದನು.

೧೧-೧೫. ಈ ಮಾತನ್ನು ಕೇಳಿ ಭೀಷ್ಮ, ದ್ರೋಣ, ದುರ್ಯೋಧನಾದಿಗಳು ಮನಸ್ಸಿನಲ್ಲಿ ಚಾಂಚಲ್ಯವನ್ನು ಹೊಂದಿದರು. ಕೌರವರೆಲ್ಲರೂ ಕೋಪದಿಂದ ಬಲರಾಮನನ್ನು ಕುರಿತು 'ಎಲೈ ರಾಮನೇ! ಎಂತಹ ಮಾತನ್ನಾಡುವೆ. ಯದು ವಂಶವೇ ರಾಜ್ಯಭಾರ ಮಾಡುವುದಕ್ಕೆ ಯೋಗ್ಯವಾದುದಲ್ಲ ಇದನ್ನು ತಿಳಿದ ನೀನು ಕುರು ವಂಶದವರಿಗೆ ಯಾವ ಯಾದವನು ಆಜ್ಞೆಯನ್ನು ಕೊಡಬಲ್ಲನೆಂದು ತಿಳಿಯಬೇಡವೆ? ಉಗ್ರಸೇನನೂ ಕೌರವರಿಗೆ ಆಜ್ಞೆ ಮಾಡುವುದಾದರೆ ರಾಜಯೋಗ್ಯವಾದ ಶ್ವೇತಛತ್ರಿಗೆ

ಉಗ್ರಸೇನೋಽಪಿ ಯದ್ಯಾಜ್ಞಾಂ ಕೌರವಾಣಾಂ ಪ್ರದಾಸ್ಯತಿ ।
ತದಲಂ ಸಾಂಡರೈಶ್ವತ್ರೈರ್ನೃಪಯೋಗ್ಯೈರ್ವಿಡಂಬಿತೈಃ ॥ ೧೪ ॥

ತದ್ಗಚ್ಛ ಬಲ ಮಾವಾ ತ್ವಂ ಸಾಂಬಮನ್ಯಾಯ ಚೇಷ್ಟಿತಂ ।
ವಿನೋಕ್ಷ್ಯಾಮೋ ನ ಭವತಶ್ಚೋಗ್ರಸೇನಸ್ಯ ಶಾಸನಾತ್ ॥ ೧೫ ॥

ಪ್ರಣತಿರ್ಯಾ ಕೃತಾಸ್ಮಾಕಂ ಮಾನ್ಯಾನಾಂ ಕುಕುರಾಂಧಕೈಃ ।
ನನಾಮ ಸಾ ಕೃತಾ ಕೇಯಮಾಜ್ಞಾ ಸ್ವಾಮಿನಿ ಭೃತ್ಯತಃ ॥ ೧೬ ॥

ಗರ್ವಮಾರೋಪಿತಾ ಯೂಯಂ ಸಮಾನಾಸನಭೋಜನೈಃ ।
ಕೋ ದೋಷೋ ಭವತಾಂ ನೀತಿರ್ಯಪ್ಪ್ರೀತ್ಯಾ ನಾವಲೋಕಿತಾ ॥ ೧೭ ॥

ಅಸ್ಮಾಭಿರಫ್ಯೂಢೇ ಭವತೋ ಯೋಽಯಂ ಬಲ ನಿವೇದಿತಃ ।
ಪ್ರೇಮ್ಣೈತನ್ನೈತದಸ್ಮಾಕಂ ಕುಲಾದ್ಯುಷ್ಮತ್ಕುಲೋಚಿತಂ ॥ ೧೮ ॥

ಗೌರವವೆಲ್ಲಿಬಂತು? ಅದು ಬರಿಯ ಅಲಂಕಾರ ಮಾತ್ರವಾಗುವುದು. ಆದುದರಿಂದ ಬಲರಾಮನೇ ನೀನು ಹೋಗು. ಅಥವಾ ಇಲ್ಲಿಯೇ ಇರು. ಅನ್ಯಾಯಾಚರಣೆಯನ್ನು ಮಾಡಿದ ಸಾಂಬನನ್ನು ನಾವು ನಿಮ್ಮ ಉಗ್ರಸೇನನ ಆಜ್ಞೆಯಿಂದ ಬಿಡತಕ್ಕವರಲ್ಲ.

೧೬–೧೯. ಕುಕುರರೂ ಅಂಧಕರೂ ಆದ ಯಾದವರು ಗೌರವಾರ್ಹರಾದ ನಮಗೆ ನಮಸ್ಕಾರವನ್ನು ಮಾಡಲಿಲ್ಲ. ರಾಜರಾವ ನಮಗೆ ಸೇವಕರಾದ ನಿಮ್ಮಿಂದ ಆಜ್ಞೆಯು ಎಂಥದು? ನಿಮ್ಮನ್ನು ನಮ್ಮ ಜತೆಯಲ್ಲಿ ಭೋಜನಾದಿಗಳಿಗೆ ಸೇರಿಸಿದುದರಿಂದ ನಿಮಗೆ ಗರ್ವವುಂಟಾಗಿರುವುದು. ಇದು ನಿಮ್ಮ ತಪ್ಪಲ್ಲ. ನಾವು ನಿಮ್ಮನ್ನು ಪ್ರೀತಿಸಿದುದರ ದೋಷವಾಗಿರುವುದು. ಹೀನರಿಗೆ ವಿಶೇಷ ಮರ್ಯಾದೆಯನ್ನು ಮಾಡಬಾರದೆಂಬ ರಾಜನೀತಿಯನ್ನು ನಾವು ನಿಮ್ಮಲ್ಲಿರುವ ಪ್ರೀತಿಯಿಂದ ಗಮನಿಸಲಿಲ್ಲ. ಬಲರಾಮನೇ ನಾವು ನಿನಗೆ ಅಫ್ಯೂಢಿ ಸತ್ಕಾರಗಳನ್ನು ಮಾಡಿದುದು ನಿನ್ನಲ್ಲಿರುವ ಪ್ರೀತಿಯಿಂದಲೇ ಹೊರತು ನಮ್ಮ ನಿಮ್ಮ ಕುಲಧರ್ಮವಲ್ಲ.

॥ ಶ್ರೀ ಪರಾಶರಃ ॥

ಇತ್ಯುಕ್ತ್ವಾ ಕುರವಸ್ತಾಂಬಂ ಮುಂಚಾಮೋ ನ ಹರೇಸ್ಸುತೆಂ ।
ಕೃತ್ವೈಕನಿಶ್ಚಯಾಸ್ತೂರ್ಣಂ ವಿವಿಶುರ್ಗಜಸಾಹ್ವಯಂ ॥ ೮೯ ॥

ಮತ್ತಃ ಕೋಪೇನ ಚಾಪೂರ್ಣಸ್ತತೋಽಧಿಕ್ಷೇಪಜನ್ಮನಾ ।
ಉತ್ಥಾಯ ಪಾಷ್ಣ್ಯಾರ್ಕ ವಸುಧಾಂ ಜಘಾನ ಸ ಹಲಾಯುಧಃ ॥ ೯೦ ॥

ತತೋ ವಿದಾರಿತಾ ಪೃಥ್ವೀ ಪಾಷ್ಣ್ರಿಘಾತಾನ್ಮಹಾತ್ಮನಃ ।
ಅಸ್ಫೋಟಯಾಮಾಸ ತದಾ ದಿಶಶ್ಶಬ್ದೇನ ಪೂರಯನ್ ॥ ೯೧ ॥

ಉವಾಚ ಚಾತಿತಾಮ್ರಾಕ್ಷೋ ಭೃಕುಟೀಕುಟಿಲಾನನಃ ॥ ೯೨ ॥

ಅಹೋ ಮದಾವಲೇಪೋಽಯಮನುಸಾರಾಣಾಂ ದುರಾತ್ಮನಾಂ ।
ಕೌರವಾಣಾಂ ಮಹೀಪತ್ವಮಸ್ಮಾಕಂ ಕಿಲ ಕಾಲಜಂ ॥
ಉಗ್ರಸೇನಸ್ಯ ಯೋನಾಜ್ಞಾಂ ಮನ್ಯಂತೇಽದ್ಯಾಪಿ ಲಂಘನಂ ॥ ೯೩ ॥

ಎಂದು ಹೇಳಿ ಕೌರವರು ಕೃಷ್ಣನ ಮಗನಾದ ಸಾಂಬನನ್ನು ಸೆರೆಯಿಂದ ಬಿಡುವುದಿಲ್ಲ ವೆಂದು ನಿಶ್ಚಯಿಸಿ ಹಸ್ತಿನಾಪಟ್ಟಣವನ್ನು ಪ್ರವೇಶಿಸಿದರು.

೮೦–೯೩. ಬಲರಾಮನು ಕೌರವರು ತನ್ನನ್ನು ತಿರಸ್ಕಾರ ಮಾಡಿದ ಕೋಪ ದಿಂದ ಮದಿಸಿ ಎದ್ದು ನಿಂತು ನೇಗಿಲನ್ನು ಕೈಯಲ್ಲಿ ಹಿಡಿದು ಕಾಲಿನ ಹಿಮ್ಮಡಿಯಿಂದ ಭೂಮಿಯನ್ನು ತುಳಿದನು. ಅವನ ಹಿಮ್ಮಡಿಯ ಏಟಿನಿಂದ ಭೂಮಿಯು ಬಿರಿಯಿತು. ಬಲರಾಮನು ಭುಜವನ್ನು ತಟ್ಟಿ ಧ್ವನಿಮಾಡುತ್ತ ಕೆಂಪಾದ ಕಣ್ಣು ಗಳುಳ್ಳವನಾಗಿ ಹುಬ್ಬು ಗಂಟಿಕ್ಕಿಕೊಂಡು ಬಲಹೀನರೂ ದುರಾತ್ಮರೂ ಆದ ಕೌರವ ರಿಗೆ ಇಷ್ಟು ಅಹಂಕಾರವೇ ಅವರಿಗೆ ದೊರೆತನವು ಸ್ವಾಭಾವಿಕವಂತೆ. ನಮಗೆ ಅವರ ಅನುಗ್ರಹದಿಂದ ಬರಬೇಕಂತೆ. ಉಗ್ರಸೇನನ ಆಜ್ಞೆಯನ್ನು ಆದರಿಸದೆ ಅದನ್ನು ಮೀರಲು ಯೋಚಿಸಿರುವರು.

ಉಗ್ರಸೇನಸ್ಸುಧರ್ಮಾಸ್ತೇ ಸುಧರ್ಮಾಂ ನ ಕಚೀಪತಿಃ ।
ದ್ವಿಜಾನುಷಕತೋಚ್ಛಿಷ್ಟೇ ತುಷ್ಟಿರೇಷಾಂ ನೃಪಾಸನೇ ॥ ೨೪ ॥

ಪಾರಿಜಾತತರೋಃ ಪುಷ್ಪಮುಂಜರೀರ್ವನಿತಾಜನಃ ।
ಬಿಭರ್ತಿ ಯಸ್ಯ ಭೃತ್ಯಾನಾಂ ಸೋಽಪ್ಯೇಷಾಂ ನೋ ಮಹೀಪತಿಃ ॥ ೨೫ ॥

ಸಮಸ್ತ ಭೂಭೃತಾಂ ನಾಥ ಉಗ್ರಸೇನಸ್ಸ ತಿಷ್ಠತು ।
ಅದ್ಯ ನಿಷ್ಕೌರವಾಮುರ್ವೀಂ ಕೃತ್ವಾ ಯಾಸ್ಯಾಮಿ ತತ್ಪುರೀಂ ॥ ೨೬ ॥

ಕರ್ಣಂ ದುರ್ಯೋಧನಂ ದ್ರೋಣಂ ಅದ್ಯ ಭೀಷ್ಮಂ ಸಬಾಹ್ಲಿಕಂ ।
ದುಶ್ಶಾಸನಾದೀನ್ ಭೂರಿಂ ಚ ಭೂರಿಶ್ರವಸಮೇವ ಚ ॥ ೨೭ ॥

ಸೋಮದತ್ತಂ ಶಲಂ ಚೈವ ಭೀಮಾರ್ಜುನಯುಧಿಷ್ಠಿರಾನ್ ।
ಯಮೌ ಚ ಕೌರವಾಂಶ್ಚಾನ್ಯಾನ್ ಹತ್ವಾ ಸಾಶ್ವರಥದ್ವಿಪಾನ್ ॥ ೨೮ ॥

೨೪–೩೦. ಉಗ್ರಸೇನನು ಸುಧರ್ಮೆಯೆಂಬ ದೇವೇಂದ್ರನ ಸಭೆಯಲ್ಲಿ ರಾಜನಾಗಿ ಕುಳಿತಿರುವನು. ಆ ಸಭೆಯು ಈಗ ದೇವೇಂದ್ರನಿಗಿಲ್ಲ. ನೂರಾರು ಮನುಜರು ಕುಳಿತು ರಾಜ್ಯಭಾರಮಾಡಿದ ಈ ಸಿಂಹಾಸನದಿಂದ ಸಂತೋಷಪಡುವವನನ್ನು ನಿಂದಿಸಬೇಕು. ಯಾವ ಉಗ್ರಸೇನರಾಜನ ಸೇವೆಯನ್ನು ಮಾಡುವ ಅಳುಗಳ ಹೆಂಡಿರು ಪಾರಿಜಾತವೃಕ್ಷದ ಹೂ ಗೊಂಚಲನ್ನು ಧರಿಸುತ್ತಿರುವರೋ ಅಂತಹ ಉಗ್ರಸೇನನು ಇವರಿಗೆ ರಾಜನಲ್ಲವಂತೆ. ಸಮಸ್ತ ರಾಜರಿಗೂ ಒಡೆಯನಾದ ಆ ಉಗ್ರಸೇನನು ಅಲ್ಲಿರಲಿ. ಈ ದಿನ ನಾನು ಭೂಮಿಯಲ್ಲಿ ಕೌರವರಿಲ್ಲದಂತೆ ಮಾಡಿ ದ್ವಾರಕಾಪಟ್ಟಣಕ್ಕೆ ಹೋಗುವೆನು. ಕರ್ಣ, ದುರ್ಯೋಧನ, ದ್ರೋಣ, ಭೀಷ್ಮ, ಬಾಹ್ಲೀಕ, ದುಶ್ಶಾಸನಾದಿಗಳು, ಭೂರಿಶ್ರವ, ಸೋಮದತ್ತ, ಶಲ್ಯ, ಭೀಮಾರ್ಜುನ ಯುಧಿಷ್ಠಿರರು, ಯಮಳರಾದ ನಕುಲ ಸಹದೇವರು ಮಿಕ್ಕ ಕೌರವರು ಇವರೆಲ್ಲರನ್ನೂ ಚತುರಂಗ ಬಲ ಸಮೇತರಾಗಿ ನಾಶಮಾಡಿ ವೀರನಾದ ಸಾಂಬನನ್ನು ಪತ್ನೀ ಸಹಿತ

ವೀರಮಾದಾಯ ತಂ ಸಾಂಬಂ ಸಪತ್ನೀಕಂ ತತಃ ಪುರೀಂ ।
ದ್ವಾರಕಾಮುಗ್ರಸೇನಾದೀನ್ ಗತ್ವಾ ದ್ರಕ್ಷ್ಯಾಮಿ ಬಾಂಧವಾನ್ ॥ ೩೯ ॥

ಅಥವಾ ಕೌರವಾವಾಸಂ ಸಮಸ್ತೈಃ ಕುರುಭಿಸ್ಸಹ ।
ಭಾಗೀರಥ್ಯಾಂ ಕ್ಷಿಪಾಮ್ಯಾಶು ನಗರಂ ನಾಗಸಾಹ್ವಯಂ ॥ ೪೦ ॥

॥ ಶ್ರೀ ಪರಾಶರಃ ॥

ಇತ್ಯುಕ್ತ್ವಾ ಮದರಕ್ತಾಕ್ಷಃ ಕರ್ಷಣಾಧೋ ಮುಖಂ ಹಲಂ ।
ಪ್ರಾಕಾರವಪ್ರದುರ್ಗಸ್ಯ ಚಕರ್ಷ ಮುಸಲಾಯುಧಃ ॥ ೪೧ ॥

ಆಘೂರ್ಣಿತಂ ತತ್ಸಹಸಾ ತತೋ ವೈ ಹಾಸ್ತಿನಂ ಪುರಂ ।
ದೃಷ್ಟ್ವಾ ಸಂಕ್ಷುಬ್ಧಹೃದಯಾಶ್ಚುಕ್ರುಶುಸ್ಸರ್ವಕೌರವಾಃ ॥ ೪೨ ॥

ರಾಮ ರಾಮ ಮಹಾಬಾಹೋ ಕ್ಷಮ್ಯತಾಂ ಕ್ಷಮ್ಯತಾಂ ತ್ವಯಾ ।
ಉಪಸಂಹ್ರಿಯತಾಂ ಕೋಪಃ ಪ್ರಸೀದ ಮುಸಲಾಯುಧ ॥ ೪೩ ॥

ಏಷ ಸಾಂಬಸ್ಸಪತ್ನೀಕಸ್ತವ ನಿರ್ಯಾತಿತೋ ಬಲಾತ್ ।
ಅವಿಜ್ಞಾತಪ್ರಭಾವಾನಾಂ ಕ್ಷಮ್ಯತಾಮಪರಾಧಿನಾಂ ॥ ೪೪ ॥

ನಾಗಿ ಕರೆದುಕೊಂಡು ದ್ವಾರಕಿಗೆ ಹೋಗಿ ಉಗ್ರಸೇನನೇ ಮುಂತಾದ ಬಂಧುಗಳನ್ನು ನೋಡುವೆನು. ಇಲ್ಲದಿದ್ದರಿ ಕೌರವರು ವಾಸವಾಗಿರುವ ಈ ಹಸ್ತಿನಪಟ್ಟಣವನ್ನು ಸಮಸ್ತ ಕೌರವರೊಡನೆ ಗಂಗೆಯಲ್ಲಿ ಮುಳುಗಿಸಿ ಬಿಡುವೆನು.

೩೯-೪೪. ಹೀಗೆಂದು ಬಲರಾಮನು ಹಸ್ತಿನಪಟ್ಟಣವನ್ನು ಎಳೆಯುವುದ ಕ್ಕಾಗಿ ತನ್ನ ನೇಗಿಲನ್ನು ಕೆಳಮುಖವಾಗಿ ಕೊಟೆಯ ಗೋಡೆಗೆ ಹಾಕಿ ಎಳೆದನ. ಆ ಕ್ಷಣದಲ್ಲಿಯೇ ಹಸ್ತಿನಪಟ್ಟಣವು ಅಲುಗಿ ಅಲ್ಲೋಲಕಲ್ಲೋಲವಾಯಿತು. ಇದನ್ನು ಕಂಡು ಕೌರವರೆಲ್ಲರೂ ಭಯದಿಂದ ಕೂಗಿಕೊಂಡರು. " ಮಹಾಪರಾಕ್ರಮಿಯಾದ ಬಲರಾಮನೇ ಕೋಪವನ್ನು ಬಿಟ್ಟು ನಮ್ಮನ್ನು ಕ್ಷಮಿಸು. ನಿನ್ನ ಮಹಿಮೆಯನ್ನು ತಿಳಿಯದ ನಾವು ಮಾಡಿದ ತಪ್ಪನ್ನು ಕ್ಷಮಿಸು. ಈ ಪತ್ನೀ ಸಹಿತನಾದ ಸಾಂಬನನ್ನು ನಿನಗೆ ಒಪ್ಪಿಸಿರುವೆವು " ಎಂದು ಕೂಗಿಕೊಂಡರು.

॥ ಶ್ರೀ ಪರಾಶರಃ ॥

ತತೋ ನಿರ್ಯಾತಯಾಮಾಸುಸ್ಸಾಂಬಂ ಪತ್ನೀಸಮನ್ವಿತಂ ।
ನಿಷ್ಕ್ರಮ್ಯಸ್ವ ಪುರಾತ್ತೂರ್ಣಂ ಕೌರವಾ ಮುನಿಪುಂಗವ ॥ ೩೫ ॥

ಭೀಷ್ಮದ್ರೋಣಕೃಪಾದೀನಾಂ ಪ್ರಣಮ್ಯ ವದತಾಂ ಪ್ರಿಯಂ ।
ಕ್ಷಾಂತಮೇವ ಮಯೇತ್ಯಾಹ ಬಲೋ ಬಲವತಾಂ ವರಃ ॥ ೩೬ ॥

ಅದ್ಯಾಪ್ಯಾಘೂರ್ಣಿತಾಕಾರಂ ಲಕ್ಷ್ಯತೇ ತತ್ಪುರಂ ದ್ವಿಜ ।
ಏಷ ಪ್ರಭಾವೋ ರಾಮಸ್ಯ ಬಲಶೌರ್ಯೋಪಲಕ್ಷಣಃ ॥ ೩೭ ॥

ತತಸ್ತು ಕೌರವಾಸ್ಸಾಂಬಂ ಸಂಪೂಜ್ಯ ಬಲಿನಾ ಸಹ ।
ಪ್ರೇಷಯಾಮಾಸುರುದ್ವಾಹಧನಭಾರ್ಯಾಸಮನ್ವಿತಂ ॥ ೩೮ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ಪಂಚತ್ರಿಂಶೋಽಧ್ಯಾಯಃ

೩೫-೩೭. ಆ ಮೇಲೆ ಕೌರವರು ತಮ್ಮ ಪಟ್ಟಣದಿಂದ ಹೊರಟು ಬೇಗನೆ ಪತ್ನೀಸಹಿತನಾದ ಸಾಂಬನನ್ನು ಕರೆದುಕೊಂಡು ಬಂದು ಬಲರಾಮನಿಗೆ ಒಪ್ಪಿಸಿದರು. ಹಿತವಾದ ಮಾತುಗಳನ್ನಾಡುತ್ತಿದ್ದ ಭೀಷ್ಮ, ದ್ರೋಣ, ಕೃಪಾದಿಗಳಿಗೆ ಬಲಶಾಲಿಯಾದ ಬಲರಾಮನು ನಮಸ್ಕಾರಮಾಡಿ ನಾನು ಕ್ಷಮಿಸಿದೆನೆಂದು ಹೇಳಿದನು. ಮೈತ್ರೇಯನೇ ಈಗಲೂ ಹಸ್ತಿನಪಟ್ಟಣವು ವಿಶೇಷವಾಗಿ ಚಲಿಸಿದುದರಿಂದ ಓರೆಯಾದ ಆಕಾರವುಳ್ಳದಾಗಿರುವುದು. ಇದೇ ಬಲರಾಮನ ಬಲ ಪರಾಕ್ರಮಗಳಿಗೆ ಗುರುತಾಗಿರುವುದು.

೩೮. ಬಳಿಕ ಕೌರವರು ಸಾಂಬನನ್ನು ಪೂಜಿಸಿ ಪತ್ನಿಯೊಡನೆಯೂ ಬಲುವಳಿಯಾಗಿ ಕೊಟ್ಟವಸ್ತುಗಳೊಡನೆಯೂ ಬಲರಾಮನ ಜತೆಯಲ್ಲಿ ಕಳುಹಿಸಿಕೊಟ್ಟರು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ
ಮೂವತ್ತೈದನೆಯ ಅಧ್ಯಾಯವು
ಮುಗಿದುದು

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಷಟ್ತ್ರಿಂಶೋಽಧ್ಯಾಯಃ

॥ ಶ್ರೀ ಪರಾಶರಃ ॥

ಮೈತ್ರೇಯೈತದ್ಬಲಂ ತಸ್ಯ ಬಲಸ್ಯ ಬಲಶಾಲಿನಃ ।
ಕೈಶಂ ಯದನ್ಯತ್ತ್ರೇನಾಽಭೂತ್ ತದಪಿ ಶ್ರೂಯತಾಂ ತ್ವಯಾ ॥ ೧ ॥

ನರಕಸ್ಯಾಸುರೇಂದ್ರಸ್ಯ ದೇವಪಕ್ಷವಿರೋಧಿನಃ ।
ಸಖಾಽಭವನ್ಮಹಾವೀರ್ಯೋ ದ್ವಿವಿದೋ ವಾನರರ್ಷಭಃ ॥ ೨ ॥

ವೈರಾನುಬಂಧಂ ಬಲವಾನ್ ಸ ಚಕಾರ ಸುರಾನ್ಪ್ರತಿ ।
ನರಕಂ ಹತವಾನ್ಕೃಷ್ಣೋ ದೇವರಾಜೇನ ಚೋದಿತಃ ॥ ೩ ॥

ಕರಿಷ್ಯೇ ಸರ್ವದೇವಾನಾಂ ತಸ್ಮಾದೇತತ್ಪ್ರತಿಕ್ರಿಯಾಂ ।
ಯಜ್ಞವಿಧ್ವಂಸನಂ ಕುರ್ವನ್ ಮರ್ತ್ಯಲೋಕಕ್ಷಯಂ ತಥಾ ॥ ೪ ॥

ಮೂವತ್ತಾರನೆಯ ಅಧ್ಯಾಯವು

೧-೪. ಮೈತ್ರೇಯನೇ! ಬಲಶಾಲಿಯಾದ ಬಲರಾಮನು ಮತ್ತೇನುಮಾಡಿದನು ಎಂಬುದನ್ನು ಹೇಳುವೆನು ಕೇಳು. ದೇವತೆಗಳ ಶತ್ರುವಾದ ನರಕಾಸುರನ ಸ್ನೇಹಿತನಾದ ದ್ವಿವಿದನೆಂಬ ಮಹಾಶೂರನಾದ ವಾನರನಿದ್ದನು. ಅವನು ದೇವತೆಗಳ ವಿಷಯದಲ್ಲಿ ದ್ವೇಷವನ್ನಿಟ್ಟುಕೊಂಡು ದೇವೇಂದ್ರನ ಮಾತಿನಿಂದ ಕೃಷ್ಣನು ನರಕನನ್ನು ಕೊಂದನು. ಇದಕ್ಕೆ ಪ್ರತಿಯಾಗಿ ನಾನು ಸಕಲ ದೇವತೆಗಳಿಗೂ ಪ್ರತೀಕಾರವನ್ನು ಮಾಡುವೆನು. ಎಂದು ಯಜ್ಞಗಳನ್ನು ನಾಶಮಾಡುತ್ತ ಮನುಷ್ಯ ಲೋಕವನ್ನು ನಾಶಮಾಡಲು ಪ್ರಾರಂಭಿಸಿದನು.

ತತೋ ವಿಧ್ವಂಸಯಾಮಾಸ ಯಜ್ಞಾನಜ್ಞಾನಮೋಹಿತಃ ।
ಬಿಭೇದ ಸಾಧುಮರ್ಯಾದಾಂ ಕ್ಷಯಂ ಚಕ್ರೇ ಚ ದೇಹಿನಾಂ ॥ ೫ ॥

ದದಾಹ ಸ ವನಾನ್ ದೇಶಾನ್ ಪುರಗ್ರಾಮಾಂತರಾಣಿ ಚ ।
ಕ್ವಚಿತ್ಕ್ವ ಪರ್ವತಾಕ್ಷೇಪೈರ್ಗ್ರಾಮಾದೀನ್ ಸಮಚೂರ್ಣಯತ್ ॥ ೬ ॥

ಶೈಲಾನುತ್ಪಾಟ್ಯ ತೋಯೇಷು ಮುನೋಚಾಂಬುನಿಧೌ ತಥಾ ।
ಪುನಶ್ಚಾರ್ಣವಮಧ್ಯಸ್ಥಃ ಕ್ಷೋಭಯಾಮಾಸ ಸಾಗರಂ ॥ ೭ ॥

ತೇನ ವಿಕ್ಷೋಭಿತಶ್ಚಾಬ್ಧಿರುದ್ವೇಲೋ ದ್ವಿಜ ಜಾಯತೇ ।
ಪ್ಲಾವಯಂಸ್ತೀರಜಾನ್ ಗ್ರಾಮಾನ್ ಪುರಾದೀನತಿವೇಗವಾನ್ ॥ ೮ ॥

ಕಾಮರೂಪೀ ಮಹಾರೂಪಂ ಕೃತ್ವಾ ಸಸ್ಯಾನ್ಯಶೇಷತಃ ।
ಲುಠನ್ ಭ್ರಮಣಸಮ್ಮರ್ದೈಸ್ಸಂಚೂರ್ಣಯತಿ ವಾನರಃ ॥ ೯ ॥

ತೇನ ವಿಪ್ರಕೃತಂ ಸರ್ವಂ ಜಗದೇತದ್ದುರಾತ್ಮನಾ ।
ನಿಸ್ಸ್ವಾಧ್ಯಾಯವಷಟ್ಕಾರಂ ಮೈತ್ರೇಯಾಸೀತ್ಸುದುಃಖಿತಂ ॥ ೧೦ ॥

೫-೧೦. ಆ ದ್ವಿವಿದನು ಅಜ್ಞಾನದಿಂದ ಯಜ್ಞಗಳನ್ನು ನಾಶಮಾಡಿ ಸಜ್ಜನರ ಸಂಪ್ರದಾಯಗಳನ್ನೂ ಹಾಳುಮಾಡುತ್ತ ಪ್ರಾಣಿಗಳನ್ನು ಕೊಲ್ಲುತ್ತಿದ್ದನು. ಕಾಡನ್ನೂ ದೇಶಗಳನ್ನೂ, ಪಟ್ಟಣಗಳನ್ನೂ, ಗ್ರಾಮಗಳನ್ನೂ, ಸುಡುತ್ತಿದ್ದನು. ಕೆಲವು ಕಡೆ ಪರ್ವತಗಳನ್ನು ತಂದು ಗ್ರಾಮಗಳ ಮೇಲೆ ಹಾಕಿ ಅವುಗಳನ್ನು ನಾಶಮಾಡುತ್ತಿದ್ದನು. ಪರ್ವತಗಳನ್ನು ಕಿತ್ತು ಸಮುದ್ರದಲ್ಲಿ ಮುಳುಗಿಸುತ್ತಿದ್ದನು. ತಾನೇ ಸಮುದ್ರ ದೊಳಗಿದ್ದು ಅದನ್ನು ಕದಡಿ ನೀರು ಉಕ್ಕುವಂತೆ ಮಾಡಿ ತೀರದಲ್ಲಿದ್ದ ಗ್ರಾಮು ಗಳನ್ನೂ ಪಟ್ಟಣಗಳನ್ನೂ ನೀರಿನಲ್ಲಿ ಮುಳುಗಿಸುತ್ತಿದ್ದನು ತನಗಿಷ್ಟವಾದ ಮಹಾ ರೂಪಗಳಿಂದ ಭೂಮಿಯಲ್ಲಿ ಬೆಳೆದ ಸಸ್ಯಗಳನ್ನೆಲ್ಲ ಕಿತ್ತುಹಾಕಿ ತಾನು ಅವುಗಳ ಮೇಲೆ ತಿರುಗುತ್ತ ತುಳಿದು ನಾಶಮಾಡುತ್ತಿದ್ದನು. ದುಷ್ಟನಾದ ಈ ವಾನರನ ದುಷ್ಕಾರ್ಯಗಳಿಂದ ಪ್ರಪಂಚದಲ್ಲಿ ವೇದಾಧ್ಯಯನವೂ ಯಜ್ಞಾದಿಗಳೂ ನಡೆಯದೆ ಲೋಕವೆಲ್ಲವೂ ದುಃಖವನ್ನನುಭವಿಸುತ್ತಿದ್ದಿತು.

ಏಕದಾ ರೈವತೋದ್ಯಾನೇ ಹಪೌ ಪಾನಂ ಹಲಾಯುಧಃ ।
ರೇವತೀ ಚ ಮಹಾಭಾಗಾ ತಥೈವಾನ್ಯಾ ವರಸ್ತ್ರಿಯಃ ॥ ೧೧ ॥

ಉದ್ಗೀಯಮಾನೋ ವಿಲಸಲ್ಲಲನಾವಲೀವಿಮಧ್ಯಗಃ ।
ರೇಮೇ ಯದುಕುಲಶ್ರೇಷ್ಠಃ ಕುಬೇರ ಇವ ನಂದನೇ ॥ ೧೨ ॥

ತತಸ್ಸವಾನರೋಽಭ್ಯೇತ್ಯ ಗೃಹೀತ್ವಾ ಸೀರಿಣೋ ಹಲಂ ।
ಮುಸಲಂ ಚ ಚಕಾರಾಸ್ಯ ಸಮ್ಮುಖಂ ಚ ವಿಡಂಬನಂ ॥ ೧೩ ॥

ತಥೈವ ಯೋಷಿತಾಂ ತಾಸಾಂ ಜಹಾಸಾಭಿಮುಖಂ ಕಪಿಃ ।
ಪಾನಪೂರ್ಣಾಂಶ್ಚ ಕರಕಾನ್ ಬಿಭ್ಲೇಪಾಹತ್ಯ ವೈ ತದಾ ॥ ೧೪ ॥

ತತಃ ಕೋಪಪರೀತಾತ್ಮಾ ಭರ್ತ್ಸಯಾಮಾಸ ತಂ ಹಲೀ ।
ತಥಾಪಿ ತಮವಜ್ಞಾಯ ಚಕ್ರೇ ಕಿಲ ಕಿಲಧ್ವನಿಂ ॥ ೧೫ ॥

೧೧-೧೨. ಒಂದಾನೊಂದು ದಿನ ಹಲಾಯುಧನಾದ ಬಲರಾಮನು ರೈವತೋದ್ಯಾನದಲ್ಲಿ ರೇವತೀದೇವಿಯೊಡನೆಯೂ ಇತರ ಸ್ತ್ರೀಯರೊಡನೆಯೂ ಕೂಡಿ ಮೆಧುಪಾನ ಮಾಡಿ ಆ ಸ್ತ್ರೀಯರ ನಡುವೆ ಗಾನಮಾಡುತ್ತ ನಂದನೋದ್ಯಾನದಲ್ಲಿ ಕುಬೇರನು ವಿಹರಿಸುವಂತೆ ಸ್ತ್ರೀಯರೊಡನೆ ವಿನೋದಪಡುತ್ತಿದ್ದನು.

೧೩-೧೫. ದ್ವಿವಿದ ವಾನರನು ಅಲ್ಲಿಗೆ ಬಂದು ಬಲರಾಮನ ಹಲಾಯುಧವನ್ನೂ ಮುಸಲಾಯುಧವನ್ನೂ ತೆಗೆದುಕೊಂಡು ಅವನೆದುರಿಗೆ ಹಲ್ಲುಕಿರಿದು ಹುಬ್ಬು ಹಾರಿಸಿ ಅಣಕಿಸಿದನು. ಮತ್ತು ಅಲ್ಲಿದ್ದ ಸ್ತ್ರೀಯರನ್ನೂ ಹಾಸ್ಯಮಾಡಿ ಅವರು ಮೆಧುಪಾನ ಮಾಡಿದ ಗಿಂಡಿಗಳನ್ನು ಎಸೆದು ಒಡೆದುಹಾಕಿದನು. ಇದರಿಂದ ಬಲರಾಮನು ಕೋಪಗೊಂಡು ಆ ಕಪಿಯನ್ನು ಗದರಿಸಿದನು. ಆ ಕಪಿಯು ಅವನನ್ನು ಲೆಕ್ಕಿಸದೆ ಕಿರಿಚಿಕೊಂಡಿತು.

ತತಸ್ಸ್ಮಯಿತ್ವಾ ಸ ಬಲೋ ಜಗ್ರಾಹ ಮುಸಲಂ ರುಷಾ ।
ಸೋಽಪಿ ಶೈಲಶಿಲಾಂ ಭೀಮಾಂ ಜಗ್ರಾಹ ಪ್ಲವಗೋತ್ತಮಃ ॥ ೧೬ ॥

ಚಿಕ್ಷೇಪ ಸ ಚ ತಾಂ ಕ್ಷಿಪ್ತಾಂ ಮುಸಲೇನ ಸಹಸ್ರಧಾ ।
ಬಿಭೇದ ಯಾದವಶ್ರೇಷ್ಠಃ ಸಾ ಪಪಾತ ಮಹೀತಲೇ ॥ ೧೭ ॥

ಅಥ ತನ್ಮುಸಲಂ ಚಾಸೌ ಸಮುಲ್ಲಂಘ್ಯ ಪ್ಲವಂಗಮಃ ।
ವೇಗೇನಾಗತ್ಯ ರೋಷೇಣ ಕರೇಣೋರಸ್ಯತಾಡಯತ್ ॥ ೧೮ ॥

ತತೋ ಬಲೇನ ಕೋಪೇನ ಮುಷ್ಟಿನಾ ಮೂರ್ಧ್ನಿ ತಾಡಿತಃ ।
ಪಪಾತ ರುಧಿರೋದ್ಗಾರೀ ದ್ವಿವಿದಃ ಕ್ಷೀಣಜೀವಿತಃ ॥ ೧೯ ॥

ಪತತಾ ತಚ್ಛರೀರೇಣ ಗಿರೇಶ್ಶೃಂಗಮಶೀರ್ಯತ ।
ಮೈತ್ರೇಯ ಶತಧಾ ವಜ್ರಿ ವಜ್ರೇಣೇವ ವಿದಾರಿತಂ ॥ ೨೦ ॥

ಪುಷ್ಪವೃಷ್ಟಿಂ ತತೋ ದೇವಾ ರಾಮಸ್ಯೋಪರಿ ಚಿಕ್ಷಿಪುಃ ।
ಪ್ರಶಶಂಸುಶ್ಚತೋಽಭ್ಯೇತ್ಯ ಸಾಧ್ವೇತತ್ತೇ ಮಹತ್ಕೃತಂ ॥ ೨೧ ॥

೧೬–೧೯. ಬಲರಾಮನು ನಗುತ್ತ ಮುಸಲಾಯುಧವನ್ನು ಹಿಡಿದನು. ವಾನರನು ದೊಡ್ಡ ಕಲ್ಲುಬಂಡೆಯನ್ನು ತೆಗೆದುಕೊಂಡು ಬಲರಾಮನ ಮೇಲೆ ಎಸೆದನು. ಬಲರಾಮನು ಮುಸಲಾಯುಧದಿಂದ ಅದನ್ನು ಪುಡಿ ಮಾಡಲು ಅದು ಭೂಮಿಯಮೇಲೆ ಬಿದ್ದಿತು. ಆ ಮೇಲೆ ವಾನರನು ರೋಷದಿಂದ ಹಾರಿ ಮುಸಲಾಯುಧವನ್ನು ದಾಟಿ ಬಂದು ಬಲರಾಮನ ಎದೆಗೆ ಕೈಯಿಂದ ಹೊಡೆದನು. ಬಳಿಕ ಬಲರಾಮನು ಕೋಪದಿಂದ ಆ ವಾನರನ ನೆತ್ತಿಯ ಮೇಲೆ ಮುಷ್ಟಿಯಿಂದ ಹೊಡೆದನು. ದ್ವಿವಿದನುರಕ್ತವನ್ನು ಕಾರುತ್ತಾ ಭೂಮಿಯ ಮೇಲೆ ಬಿದ್ದು ಸತ್ತನು.

೨೦-೨೩. ಬೀಳುತ್ತಿರುವ ಆ ವಾನರನ ಶರೀರದಿಂದ ಜಿಟ್ಟಿದ ಶಿಖರವು ದೇವೇಂದ್ರನ ವಜ್ರಾಯುಧದಿಂದ ಶೀಳಿದ ಪರ್ವತದಂತೆ ಚೂರು ಚೂರಾಯಿತು. ದೇವತೆಗಳು ಇದನ್ನು ನೋಡಿ ಬಲರಾಮನ ಮೇಲೆ ಹೂಮಳೆಯನ್ನು ಸುರಿಸಿದರು

ಅನೇನ ದುಷ್ಪಕಪಿನಾ ದೈತ್ಯಪಕ್ಷೋಪಕಾರಿಣಾ ।
ಜಗನ್ನಿರಾಕೃತಂ ವೀರ ದಿಷ್ಟ್ಯಾ ಸ ಕ್ಷಯಮಾಗತಃ ॥ ೨೨ ॥

ಇತ್ಯುಕ್ತ್ವಾ ದಿವಮಾಜಗ್ಮುರ್ದೇವಾ ಹೃಷ್ಟಾಸ್ಸಗುಹ್ಯಕಾಃ ॥ ೨೩ ॥

॥ ಶ್ರೀ ಪರಾಶರಃ ॥

ಏವಂ ವಿಧಾನ್ಯನೇಕಾನಿ ಬಲದೇವಸ್ಯ ಧೀಮತಃ ।
ಕರ್ಮಾಣ್ಯಪರಿಮೇಯಾನಿ ಶೇಷಸ್ಯ ಧರಣೀಭೃತಃ ॥ ೨೪ ॥

ಇತಿ ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ ಷಟ್ತ್ರಿಂಶೋಽಧ್ಯಾಯಃ

ಮತ್ತು ಅವನ ಸಮೀಪಕ್ಕೆ ಬಂದು "ವೀರನಾದ ರಾಮನೇ! ಈ ದುಷ್ಪಕಪಿಯು ರಾಕ್ಷಸರಿಗೆ ಉಪಕಾರಮಾಡುತ್ತ ಲೋಕಕ್ಕೆ ತೊಂದರೆಯನ್ನುಂಟುಮಾಡುತ್ತಿದ್ದಿತು. ನಮ್ಮ ಪುಣ್ಯದಿಂದ ಅದು ಸತ್ತಿತು. ನೀನು ಇದನ್ನು ಕೊಂದು ಒಳ್ಳೆಯ ಕೆಲಸವನ್ನು ಮಾಡಿದೆ." ಎಂದು ಹೊಗಳಿ ದೇವತೆಗಳೂ ಗುಹ್ಯಕರೂ ಸ್ವರ್ಗಕ್ಕೆ ಹೋದರು.

೨೪. ವೈವಸ್ವತಮನ್ವಂತರದಲ್ಲಿ ಭೂಮಿಯನ್ನು ಧರಿಸಿದ ಆದಿಶೇಷನ ಅವತಾರವಾದ ಬಲರಾಮನ ಕಾರ್ಯಗಳು ಇದರಂತೆ ಇನ್ನೂ ಲೆಕ್ಕವಿಲ್ಲದಷ್ಟು ಇರುವುವು. ಎಂದು ಹೇಳಿದನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ

ಮೂವತ್ತಾರನೆಯ ಅಧ್ಯಾಯವು

ಮುಗಿದುದು

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ

ಸಪ್ತತ್ರಿಂಶೋಽಧ್ಯಾಯಃ

॥ ಶ್ರೀ ಪರಾಶರಃ ॥

ಏವಂ ದೈತ್ಯವಧಂ ಕೃತ್ವಾ ಬಲದೇವಸಹಾಯವಾನ್ ।
ಚಕ್ರೇ ದುಷ್ಟಕ್ಷಿತೀಶಾನಾಂ ತಥೈವ ಜಗತಃ ಕೃತೇ ॥ ೧ ॥

ಕ್ಷಿತೇಶ್ಚ ಭಾರಂ ಭಗವಾನ್ ಫಲ್ಗುನೇನ ಸಮನ್ವಿತಃ ।
ಅವತಾರಯಾಮಾಸ ವಿಭುಸ್ಸಮಸ್ತಾಕ್ಷೌಹಿಣೀವಧಾತ್ ॥ ೨ ॥

ಕೃತ್ವಾ ಭಾರಾವತರಣಂ ಭುವೋ ಹತ್ವಾಖಿಲಾನ್ನೃಪಾನ್ ।
ಶಾಪವ್ಯಾಜೇನ ವಿಪ್ರಾಣಾಮುಪಸಂಹೃತವಾನ್ ಕುಲಂ ॥ ೩ ॥

ಉತ್ಸೃಜ್ಯ ದ್ವಾರಕಾಂ ಕೃಷ್ಣಸ್ತ್ಯಕ್ತ್ವಾ ಮಾನುಷ್ಯಮಾತ್ಮನಃ ।
ಸಾಂಶೋ ವಿಷ್ಣುಮಯಂ ಸ್ಥಾನಂ ಪ್ರವಿವೇಶ ಮುನೇ ನಿಜಂ ॥ ೪ ॥

ಮೂವತ್ತೇಳನೆಯ ಅಧ್ಯಾಯವು

೧-೪. ಹೀಗೆ ಕೃಷ್ಣನು ಬಲರಾಮನ ಸಹಾಯದಿಂದ ಲೋಕರಕ್ಷಣಾರ್ಥವಾಗಿ ದೈತ್ಯರನ್ನೂ ದುಷ್ಟ ರಾಜರುಗಳನ್ನೂ ನಾಶಮಾಡಿದನು. ಅರ್ಜುನನೊಡನೆ ಸೇರಿ ಭೂಮಿಗೆ ಭಾರವಾಗಿದ್ದ ಸಮಸ್ತ ರಾಜರನ್ನೂ ಕೊಂದು ಭೂಭಾರವನ್ನಿಳಿಸಿ ಬ್ರಾಹ್ಮಣರ ಶಾಪದ ನೆಪದಿಂದ ಯಾದವ ಕುಲವನ್ನೇ ನಾಶಮಾಡಿದನು. ಕೃಷ್ಣನು ದ್ವಾರಕೆಯನ್ನು ಬಿಟ್ಟು ಕನ್ನ ಅಂಶವಾದ ಬಲರಾಮ ಪ್ರದ್ಯುಮ್ನರೊಡನೆ ತನ್ನ ವಿಷ್ಣುಸ್ಥಾನಕ್ಕೆ ಪ್ರವೇಶಿಸಿದನು. ಎಂದು ಪರಾಶರರು ಹೇಳಿದರು.

॥ ಮೈತ್ರೇಯಃ ॥

ಸ ನಿಪ್ರಶಾಪವ್ಯಾಜೇನ ಸಂಜಹ್ರೇ ಸ್ವಕುಲಂ ಕಥಂ ।
ಕಥಂ ಚ ಮಾನುಷಂ ದೇಹಮುತ್ಸಸರ್ಜ ಜನಾರ್ದನಃ ॥ ೫ ॥

॥ ಶ್ರೀ ಪರಾಶರಃ ॥

ವಿಶ್ವಾಮಿತ್ರಸ್ತಥಾ ಕಣ್ವೋ ನಾರದಶ್ಚ ಮಹಾಮುನಿಃ ।
ಪಿಂಡಾರಕೇ ಮಹಾತೀರ್ಥೇ ದೃಷ್ಟ್ವಾ ಯದುಕುಮಾರಕೈಃ ॥ ೬ ॥

ತತಸ್ತೇ ಯೌವನೋನ್ಮತ್ತಾ ಭಾವಿಕಾರ್ಯಪ್ರಚೋದಿತಾಃ ।
ಸಾಂಬಂ ಜಾಂಬವತೀಪುತ್ರಂ ಭೂಷಯಿತ್ವಾ ಸ್ತ್ರಿಯಂ ಯಥಾ ॥ ೭ ॥

ಪ್ರಶ್ರಿತಾಸ್ತನ್ಮುನೀನೂಚುಃ ಪ್ರಣಿಪಾತಪುರಸ್ಸರಂ ।
ಇಯಂ ಸ್ತ್ರೀ ಪುತ್ರಕಾಮಾ ವೈ ಬ್ರೂತ ಕಿಂ ಜನಯಿಷ್ಯತಿ ॥ ೮ ॥

---

೫. ಮೈತ್ರೇಯನು "ಗುರುಗಳೇ! ಕೃಷ್ಣನು ಬ್ರಾಹ್ಮಣರ ಶಾಪದ ನೆಪದಿಂದ ತನ್ನ ಕುಲವನ್ನು ಹೇಗೆ ಸಂಹರಿಸಿದನು? ತನ್ನ ಮನುಷ್ಯ ಶರೀರವನ್ನು ಹೇಗೆ ತ್ಯಾಗಮಾಡಿದನು? ಎಂದು ಪ್ರಶ್ನೆ ಮಾಡಿದನು.

೬-೮. ಪರಾಶರರು ಹೇಳಿದರು :— ಮೈತ್ರೇಯನೇ! ಕೇಳು ವಿಶ್ವಾಮಿತ್ರ, ಕಣ್ವ, ನಾರದ ಎಂಬ ಮುನಿಗಳು ಪಿಂಡಾರಕವೆಂಬ ಮಹಾತೀರ್ಥದ ಸಮೀಪದಲ್ಲಿ ದ್ವಾಗ ಯದು ಕುಮಾರರೆಲ್ಲರೂ ಸೇರಿ ಯೌವನ ಮದದಿಂದ ಕೂಡಿದವರಾಗಿ ಕ್ರೀಡಿಸುತ್ತ ಮುಂದೆ ನಡೆಯಬೇಕಾಗಿರುವ ಕಾರ್ಯದ ಪ್ರೇರಣೆಯಿಂದ ಜಾಂಬವತೀ ಪುತ್ರನಾದ ಸಾಂಬನಿಗೆ ಸ್ತ್ರೀವೇಷವನ್ನು ಹಾಕಿ ಆ ಋಷಿಗಳ ಸಮೀಪಕ್ಕೆ ಕರೆದುಕೊಂಡು ಹೋಗಿ ಅವರಿಗೆ ವಿನಯದಿಂದ ನಮಸ್ಕರಿಸಿ ಈ ಸ್ತ್ರೀಯು ಪುತ್ರಾರ್ಥಿಯಾಗಿರುವಳು.

॥ ಶ್ರೀ ಪರಾಶರಃ ॥

ದಿವ್ಯಜ್ಞಾನೋಪಪನ್ನಾಸ್ತೇ ವಿಪ್ರಲಬ್ಧಾಃ ಕುಮಾರಕೈಃ ।
ಮುನಯಃ ಕುಪಿತಾಃ ಪ್ರೋಚುಮ್ಮುಸಲಂ ಜನಯಿಷ್ಯತಿ ॥ ೯ ॥

ಸರ್ವಯಾದವಸಂಹಾರಕಾರಣಂ ಭುವನೋತ್ತರಂ ।
ಯೇನಾಖಿಲಕುಲೋತ್ಸಾದೋ ಯಾದವಾನಾಂ ಭವಿಷ್ಯತಿ ॥ ೧೦ ॥

ಇತ್ಯುಕ್ತಾಸ್ತೇ ಕುಮಾರಾಸ್ತು ಆಚಚಕ್ಷುರ್ಯಥಾ ತಥಂ ।
ಉಗ್ರಸೇನಾಯ ಮುಸಲಂ ಜಜ್ಞೇ ಸಾಂಬಸ್ಯ ಚೋದರಾತ್ ॥ ೧೧ ॥

ತದುಗ್ರಸೇನೋ ಮುಸಲಮಯಕ್ಕೂರ್ಣಮಕಾರಯತ್ ।
ಜಜ್ಞೇ ತದೇರಕಾಚೂರ್ಣಂ ಪ್ರಕ್ಷಿಪ್ತಂ ತೈರ್ಮಹೋದಧೌ ॥ ೧೨ ॥

ಮುಸಲಸ್ಯಾಥ ಲೋಹಸ್ಯ ಚೂರ್ಣಿತಸ್ಯ ತು ಯಾದವೈಃ ।
ಖಂಡಂಚೂರ್ಣಿತಶೇಷಂ ತು ಃತಶೋ ಯತ್ಕ್ಷೋಮರಾಕೃತಿ ॥ ೧೩ ॥

ಎಂತಹ ಮಗುವನ್ನು ಪ್ರಸುವಿಸುವಳು ?' ಎಂದು ಪ್ರಶ್ನೆ ಮಾಡಿದರು.

೯-೧೦. ದಿವ್ಯಜ್ಞಾನಿಗಳಾದ ಆ ಮುನಿಗಳು ಯದುಕುಮಾರಕರ ವಂಚನೆಯ ರೂಪವಾದ ಹಾಸ್ಯವನ್ನು ತಿಳಿದು ಕೋಪವಿಂದ ಇವಳು ಸಮಸ್ತ ಯಾದವರ ಸಂಹಾರಕ್ಕೆ ಕಾರಣವಾದ ಲೋಕೋತ್ತರವಾದ ಒಂದು ಒನಕೆಯನ್ನು ಹೆರುವಳು ಅದರಿಂದ ಸಮಸ್ತ ಯಾದವ ವಂಶವೇ ನಾಶವಾಗುವುದು" ಎಂದು ಹೇಳಿದರು.

೧೧-೧೫. ಈ ಮಾತನ್ನು ಕೇಳಿದ ಯದುಕುಮಾರರು ಸಾಂಬನ ಹೊಟ್ಟೆಯಿಂದ ಕಬ್ಬಿಣದ ಒನಕೆಯು ಹುಟ್ಟಿತೆಂದು ಉಗ್ರಸೇನನಿಗೆ ಹೇಳಿದರು. ಉಗ್ರಸೇನನು ಆ ಒನಕೆಯನ್ನು ಕಬ್ಬಿಣದ ಪುಡಿಯನ್ನಾಗಿ ಮಾಡಿಸಿ ಸಮುದ್ರಕ್ಕೆ ಹಾಕಿಸಿದನು. ಇದನ್ನು ಕೃಷ್ಣನಿಗೆ ಯಾರೂ ಹೇಳಲಿಲ್ಲ. ಆ ಹುಡಿಯು ಸಮುದ್ರದ ದಡದಲ್ಲಿ ಹೊಂಡುಹುಲ್ಲಾಗಿ ಬೆಳೆಯಿತು. ಒನಕೆಯನ್ನು ಪುಡಿಮಾಡಿ ಉಳಿದ ಬಾಣದ ಆಕಾರದ ಒಂದು ಚೂರನ್ನು ಸಮುದ್ರಕ್ಕೆ ಹಾಕಿದರು. ಅದನ್ನು ಒಂದು ಮೀನು ನುಂಗಿತು.

ತದಪ್ಯಂಬುನಿಧೌ ಕ್ಷಿಪ್ತಂ ಮತ್ಸ್ಯೋ ಜಗ್ರಾಹ ಜಾಲಿಭಿಃ ।
ಘಾತಿತಸ್ಯೋದರಾತ್ತಸ್ಯ ಲುಬ್ಧೋ ಜಗ್ರಾಹ ತಜ್ಜರಾಃ ॥ ೧೪ ॥

ವಿಜ್ಞಾತಪರಮಾರ್ಥೋಽಪಿ ಭಗವಾನ್ ಮಧುಸೂದನಃ ।
ನೈಚ್ಛತ್ತ ದನ್ಯಥಾ ಕರ್ತುಂ ವಿಧಿನಾ ಯತ್ಸಮೀಹಿತಂ ॥ ೧೫ ॥

ದೇವೈಶ್ಚ ಪ್ರಹಿತೋ ವಾಯುಃ ಪ್ರಣಿಪತ್ಯಾಹ ಕೇಶವಂ ।
ರಹಸ್ಯೇವಮಹಂ ದೂತಃ ಪ್ರಹಿತೋ ಭಗವನ್ ಸುರೈಃ ॥ ೧೬ ॥

ವಸ್ವಶ್ವಿಮರುದಾದಿತ್ಯ ರುದ್ರಸಾಧ್ಯಾದಿಭಿಸ್ಸಹ ।
ವಿಜ್ಞಾಪಯತಿ ಶಕ್ರಸ್ತ್ವಾಂ ತದಿದಂ ಶ್ರೂಯತಾಂ ವಿಭೋ ॥ ೧೭ ॥

ಭಾರಾವತರಣಾರ್ಥಾಯ ವರ್ಷಾಣಾಮಧಿಕಂ ಶತಂ ।
ಭಗವಾನವತೀರ್ಣೋಽತ್ರ ತ್ರಿದಶೈಸ್ಸಹ ಚೋದಿತಃ ॥ ೧೮ ॥

ದುರ್ವೃತ್ತಾ ನಿಹತಾ ದೈತ್ಯಾ ಭುವೋ ಭಾರೋಽವತಾರಿತಃ ।
ತ್ವಯಾ ಸನಾಥಾಸ್ತ್ರಿದಶಾ ಭವಂತು ತ್ರಿದಿವೇ ಸದಾ ॥ ೧೯ ॥

ಆ ಮೀನನ್ನು ಬೆಸ್ತರು ಬಲೆಯಲ್ಲಿ ಹಿಡಿದರು. ಮೀನನ್ನು ಕೊಂದು ಅದರ ಹೊಟ್ಟೆಯಲ್ಲಿದ್ದ ಬಾಣದ ಚೂರನ್ನು ಜರಾ ಎಂಬ ಬೇಡನು ತೆಗೆದುಕೊಂಡನು. ಇವುಗಳನ್ನೆಲ್ಲ ಕೃಷ್ಣನು ತಿಳಿದಿದ್ದರೂ ಕರ್ಮವಿಧಿಯಂತೆ ಮುಂದೆ ನಡೆಯಬೇಕಾದ ಕಾರ್ಯಗಳನ್ನು ಬೇರೆ ವಿಧವಾಗಿ ಮಾಡಲು ಅವನು ಇಷ್ಟಪಡಲಿಲ್ಲ.

೧೬-೧೯. ದೇವತೆಗಳು ಕಳುಹಿಸಿದ ವಾಯುವು ಗುಟ್ಟಾಗಿ ಕೃಷ್ಣನ ಸಮೀಪಕ್ಕೆ ಬಂದು ಅವನಿಗೆ ನಮಸ್ಕರಿಸಿ "ಓ ಸ್ವಾಮಿಯೇ! ದೇವತೆಗಳು ನನ್ನನ್ನು ದೂತನಾಗಿ ಕಳುಹಿಸಿರುವರು. ಅಷ್ಟವಸುಗಳು, ದ್ವಾದಶಾದಿತ್ಯರು, ಏಕಾದಶರುದ್ರರು, ಅಶ್ವಿನೀದೇವತೆಗಳು, ಸಾಧ್ಯರೇ ಮುಂತಾದ ದೇವತೆಗಳೊಡನೆ ಕೂಡಿದ ದೇವೇಂದ್ರನು ನಿನ್ನಲ್ಲಿ ವಿಜ್ಞಾಪಿಸಬೇಕೆಂದು ಹೇಳಿರುವುದನ್ನು ಹೇಳುವೆನು ಕೇಳು. ಭೂಮಿಯು

ಶತತೀಶಂ ಜಗನ್ನಾಥ ವರ್ಷಾಣಾಮಧಿಕಂ ಶತಂ ।
ಇದಾನೀಂ ಗಮ್ಯತಾಂ ಸ್ವರ್ಗೋ ಭವತಾ ಯದಿ ರೋಚತೇ ॥ ೨೦ ॥

ದೇವೈರ್ವಿಜ್ಞಾಪ್ಯತೇ ದೇವ ತಥಾತ್ರೈವ ಸ್ಥಿತಿಸ್ತವ ।
ತಸ್ಮಿನ್ಯಾತಾಂ ಯಥಾ ಕಾಲಮಾಸ್ಮೀಯಮನುಜೀವಿಭಿಃ ॥ ೨೧ ॥

॥ ಶ್ರೀ ಭಗವಾನುವಾಚ ॥

ಯತ್ತ್ವಮಾತ್ಥಾಖಿಲಂ ದೂತ ವೇದ್ಮ್ಯೇತದಹಮಪ್ಯುತ ।
ಪ್ರಾರಬ್ಧ ಏವ ಹಿ ಮಯಾ ಯಾದವಾನಾಂ ಪರಿಕ್ಷಯಃ ॥ ೨೨ ॥

ಭುವೋ ನಾದ್ಯಾಪಿ ಭಾರೋಽಯಂ ಯಾದವೈರನಿಬರ್ಹಿತೈಃ ।
ಅವತಾರ್ಯ ಕರೋಮ್ಯೇತತ್ಸಪ್ತ ರಾತ್ರೇಣ ಸತ್ವರಃ ॥ ೨೩ ॥

ಭಾರವನ್ನು ಕಡಿಮೆಮಾಡುವುದಕ್ಕಾಗಿ ದೇವತೆಗಳ ಪ್ರೇರಣೆಯಿಂದ ನೀನು ಭೂಮಿಯಲ್ಲಿ ಅವತಾರ ಮಾಡಿ ನೂರಿಪ್ಪತ್ತೈದು ವರ್ಷಗಳಾದುವು ದುಷ್ಪರಾದ ದೈತ್ಯರನ್ನು ಕೊಂದು ಭೂಭಾರವನ್ನು ಕಡಿಮೆಮಾಡಿದೆ. ದೇವತೆಗಳು ಸ್ವರ್ಗದಲ್ಲಿ ಸ್ವಾಮಿಯಾದ ನಿನ್ನೊಡನೆ ಯಾವಾಗಲೂ ಇರಬೇಕೆಂದು ಬಯಸುತ್ತಾರೆ. ಬಹಳ ಕಾಲವು ಕಳೆದು ಹೋದುದರಿಂದ ನಿನ್ನ ಇಷ್ಟದಂತೆ ಈಗಲೇ ಸ್ವರ್ಗಕ್ಕೆ ಬರಬೇಕೆಂದು ಅಪೇಕ್ಷಿಸುತ್ತಾರೆ. ನಿನಗೆ ಇಲ್ಲಿಯೇ ಇರಬೇಕೆಂಬ ಅಪೇಕ್ಷೆಯಿದ್ದರೆ ನಿನ್ನ ಕಾರ್ಯ ಸಿದ್ಧಿಗಾಗಿ ಇಷ್ಟಬಂದಷ್ಟು ಕಾಲದವರೆಗೆ ಇವರೊಡನೆ ಇರಬಹುದು" ಎಂದು ಹೇಳಿದನು.

೨೨-೨೩. ಈ ಮಾತನ್ನು ಕೇಳಿ ಕೃಷ್ಣನು ವಾಯುವನ್ನು ಕುರಿತು 'ಎಲೈ ದೂತನೇ! ನೀನು ಹೇಳಿದುದೆಲ್ಲವನ್ನೂ ನಾನೂ ತಿಳಿದಿರುವೆನು. ನಾನು ಯಾದವರ ನಾಶವನ್ನು ಪ್ರಾರಂಭಿಸಿರುವೆನು. ಯಾದವರನ್ನು ನಿಗ್ರಹಿಸದಿದ್ದರೆ ಭೂಮಿಯ ಭಾರವು ಕಳೆದ ಹಾಗಾಗುವುದಿಲ್ಲ. ಇನ್ನು ಏಳು ದಿನಮೊಳಗೆ ಈ ಕಾರ್ಯವನ್ನು

ಯಥಾ ಗೃಹೀತಮಂಭೋಧೇರ್ದತ್ತ್ವಾಽಹಂ ದ್ವಾರಕಾಭುವಂ ।
ಯಾದವಾನುಪಸಂಹೃತ್ಯ ಯಾಸ್ಯಾಮಿ ತ್ರಿದಶಾಲಯಂ ॥ ೨೪ ॥

ಮನುಷ್ಯದೇಹಮುತ್ಸೃಜ್ಯ ಸಂಕರ್ಷಣಸಹಾಯವಾನ್ ।
ಪ್ರಾಪ್ತ ಏವಾಸ್ಮಿ ಮಂತವ್ಯೋ ದೇವೇಂದ್ರೇಣ ತಥಾಮರ್ಷಃ ॥ ೨೫ ॥

ಜರಾಸಂಧಾದಯೋ ಯೇಽನ್ಯೇ ನಿಹತಾ ಭಾರಹೇತವಃ ।
ಕ್ಷಿತೇಸ್ತೇಭ್ಯಸ್ತು ಬಾಲೋಽಪಿ ಯದೂನಾಂ ನಾಪಚೀಯತೇ ॥ ೨೬ ॥

ತದೇತಂ ಸುಮಹಾಭಾರಂ ಅವತಾರ್ಯ ಕ್ಷಿತೇರಹಂ ।
ಯಾಸ್ಯಾಮ್ಯಮರಲೋಕಸ್ಯ ಪಾಲನಾಯ ಬ್ರವೀಹಿ ತಾನ್ ॥ ೨೭ ॥

॥ ಶ್ರೀ ಪರಾಶರಃ ॥

ಇತ್ಯುಕ್ತೋ ವಾಸುದೇವೇನ ದೇವದೂತಃ ಪ್ರಣಮ್ಯ ತಂ ।
ವೈತ್ರೇಯ ದಿವ್ಯಯಾ ಗತ್ಯಾ ದೇವರಾಜಾಂತಿಕಂ ಯಯೌ ॥ ೨೮ ॥

ಮುಗಿಸುವೆನು. ದ್ವಾರಕಾಪಟ್ಟಣಕ್ಕಾಗಿ ಸಮುದ್ರದಿಂದ ನಾನು ತೆಗೆದುಕೊಂಡಿದ್ದ ಭೂಮಿಯನ್ನು ಸಮುದ್ರರಾಜನಿಗೆ ಕೊಟ್ಟು ಯಾದವರನ್ನೆಲ್ಲ ಉಪಸಂಹಾರಮಾಡಿ ಸ್ವರ್ಗಕ್ಕೆ ಬರುವೆನು ಮನುಷ್ಯ ದೇಹವನ್ನು ಬಿಟ್ಟು ಬಲರಾಮನೊಡನೆ ಸ್ವರ್ಗಕ್ಕೆ ಬಂದೆನೆಂಬುದಾಗಿ ದೇವೇಂದ್ರನೇ ಮೊದಲಾದ ದೇವತೆಗಳು ತಿಳಿದುಕೊಳ್ಳಲಿ. ಭೂಮಿಗೆ ಭಾರಕಾರಣರಾದ ಜರಾಸಂಧಾದಿಗಳನ್ನು ಕೊಂದುದಾಯಿತು. ಯದುಗಳಲ್ಲಿ ಒಬ್ಬ ಬಾಲಕನೂ ಆ ಜರಾಸಂಧಾದಿಗಳಿಗಿಂತ ಕಡಮೆಯಾದವರಲ್ಲ. ಆದುದರಿಂದ ಭೂಮಿಗೆ ಇರುವ ವಿಶೇಷವಾದ ಈ ಭಾರವನ್ನು ಇಳಿಸಿ ದೇವಲೋಕ ರಕ್ಷಣೆಗಾಗಿ ನಾನು ಬರುವೆನೆಂಬುದನ್ನು ದೇವೇಂದ್ರನೇ ಮೊದಲಾದ ದೇವತೆಗಳಿಗೆ ತಿಳಿಸು' ಎಂದು ಹೇಳಿದನು.

೨೮-೩೦. ಕೃಷ್ಣನು ಹೇಳಿದ ಮಾತನ್ನು ಕೇಳಿ ದೇವದೂತನಾದ ವಾಯುವು ಅವನಿಗೆ ನಮಸ್ಕರಿಸಿ ದಿವ್ಯಗಮನದಿಂದ ದೇವೇಂದ್ರನ ಸಮೀಪಕ್ಕೆ ಹೋದನು. ಭಗವಂತನಾದ ಕೃಷ್ಣನು ಯಾದವರ ನಾಶಕ್ಕಾಗಿ ದ್ವಾರಕಾಪಟ್ಟಣದಲ್ಲಿ ಹಗಲೂ ರಾತ್ರಿಯೂ ಆಗುತ್ತಿರುವ ಗ್ರಹಯುದ್ಧವೇ ಮೊದಲಾದ ದೇವಲೋಕದ ಉತ್ಪಾತ

ಭಗವಾನಪ್ಯಥೋತ್ಪಾತಾನ್ ದಿವ್ಯಭೌಮಾಂತರಿಕ್ಷಜಾನ್ ।
ದದರ್ಶ ದ್ವಾರಕಾಪುರ್ಯಾಂ ವಿನಾಶಾಯ ದಿವಾನಿಶಂ ॥ ೨೯ ॥

ತಾನ್ ದೃಷ್ಟ್ವಾ ಯಾದವಾನಾಹ ಪಶ್ಯಧ್ವಮಿತಿ ದಾರುಣಾನ್ ।
ಮಹೋತ್ಪಾತಾನ್ ಶಮಾಯೈಷಾಂ ಪ್ರಭಾಸಂ ಯಾಮಮಾಚಿರಂ ॥ ೩೦ ॥

॥ ಶ್ರೀ ಪರಾಶರಃ ॥

ಏವಮುಕ್ತೇ ತು ಕೃಷ್ಣೇನ ಯಾದವಪ್ರವರಸ್ತತಃ ।
ಮಹಾಭಾಗವತಃ ಪ್ರಾಹ ಪ್ರಣಿಪತ್ಯೋದ್ಧವೋ ಹರಿಂ ॥ ೩೧ ॥

ಭಗವನ್ಮನ್ಮಯಾ ಕಾರ್ಯಂ ತದಾಜ್ಞಾಪಯ ಸಾಂಪ್ರತಂ ।
ಮನ್ಯೇ ಕುಲಮಿದಂ ಸರ್ವಂ ಭಗವಾನ್ ಸಂಹರಿಷ್ಯತಿ ॥ ೩೨ ॥

ನಾಶಾಯಾಸ್ಯ ನಿಮಿತ್ತಾನಿ ಕುಲಸ್ಯಾಚ್ಯುತ ಲಕ್ಷಯೇ ॥ ೩೩ ॥

ಗಳನ್ನೂ ಭೂಕಂಪವೇ ಮೊದಲಾದ ಭೂಲೋಕದ ಉತ್ಪಾತಗಳನ್ನೂ ದಿಕ್ಕುಗಳಲ್ಲಿ ಉರಿ, ಉಲ್ಕಾಪಾತ ಮುಂತಾದ ಅಂತರಿಕ್ಷ ಸಂಬಂಧವಾದ ಉತ್ಪಾತಗಳನ್ನೂ ಕಂಡು ಯಾದವರನ್ನು ಕುರಿತು 'ಈ ಭಯಂಕರವಾದ ಅಪಶಕುನಗಳನ್ನು ನೋಡಿರಿ. ಇದರಿ ಶಾಂತಿಗಾಗಿ ಸಾವಕಾಶಮಾಡದೆ ಸಮುದ್ರತೀರದಲ್ಲಿರುವ ಪ್ರಭಾಸ ಕ್ಷೇತ್ರಕ್ಕೆ ಹೋಗೋಣ' ಎಂದು ಹೇಳಿದನು.

೩೧–೩೩. ಕೃಷ್ಣನು ಹೀಗೆ ಹೇಳುತ್ತಲು ಮಹಾ ಭಗವದ್ಭಕ್ತನೂ ಯದು ಶ್ರೇಷ್ಠನೂ ಆದ ಉದ್ಧವನು ಅವನಿಗೆ ನಮಸ್ಕರಿಸಿ 'ಮಹಾಮಹಿಮನಾದ ಕೃಷ್ಣನೇ! ಈಗ ನಾನು ಮಾಡಬೇಕಾದ ಕೆಲಸವನ್ನು ಆಜ್ಞಾಪಿಸು. ಈ ಸಮಸ್ತ ಯದುವಂಶವನ್ನೂ ನೀನು ಸಂಹರಿಸುವೆ ಎಂಬುದನ್ನು ನಾನು ಬಲ್ಲೆನು. ಈ ವಂಶ ನಾಶಕ್ಕಾಗಿಯೇ ಅಪಶಕುನಗಳಾಗುತ್ತಿರುವುವು' ಎಂದನು.

॥ ಶ್ರೀ ಭಗವಾನುವಾಚ ॥

ಗಚ್ಛ ತ್ವಂ ದಿವ್ಯಯಾ ಗತ್ಯಾ ಮತ್ಪ್ರಸಾದಸಮುತ್ಥಯಾ ।
ಯದ್ವದರ್ಯಾಶ್ರಮಂ ಪುಣ್ಯಂ ಗಂಧಮಾದನಪರ್ವತೇ ॥
ನರನಾರಾಯಣಸ್ಥಾನೇ ತತ್ಪವಿತ್ರಂ ಮಹೀತಲೇ ॥ ೩೪ ॥

ಮನ್ಮನಾ ಮತ್ಪ್ರಸಾದೇನ ತತ್ರ ಸಿದ್ಧಿಮವಾಪ್ಸ್ಯಸಿ ।
ಅಹಂ ಸ್ವರ್ಗಂ ಗಮಿಷ್ಯಾಮಿ ಹ್ಯುಪಸಂಹೃತ್ಯ ವೈ ಕುಲಂ ॥ ೩೫ ॥

ದ್ವಾರಕಾಂ ಚ ಮಯಾ ತ್ಯಕ್ತಾಂ ಸಮುದ್ರಃ ಪ್ಲಾವಯಿಷ್ಯತಿ ।
ಮದ್ವೇಶ್ಮ ಚೈಕಂ ಮುಕ್ತ್ವಾ ತು ಭಯಾನ್ಮತ್ತೋ ಜಲಾಶಯೇ ॥
ತತ್ರ ಸನ್ನಿಹಿತಶ್ಚಾಹಂ ಭಕ್ತಾನಾಂ ಹಿತಕಾಮ್ಯಯಾ ॥ ೩೬ ॥

॥ ಶ್ರೀ ಪರಾಶರಃ ॥

ಇತ್ಯುಕ್ತಃ ಪ್ರಣಿಪತ್ಯೈನಂ ಜಗಾಮಾಶು ತಪೋವನಂ ।
ನರನಾರಾಯಣಸ್ಥಾನಂ ಕೇಶವೇನಾನುನೋದಿತಃ ॥ ೩೭ ॥

೩೪-೩೭. ಭಗವಂತನು ಉದ್ಧವನನ್ನು ಕುರಿತು 'ನೀನು ನನ್ನ ಅನುಗ್ರಹದಿಂದುಂಟಾದ ದಿವ್ಯಗಮನದಿಂದ ಗಂಧಮಾದನ ಪರ್ವತದಲ್ಲಿರುವ ಪುಣ್ಯಕರವಾದ ಬದರಿಕಾಶ್ರಮದಲ್ಲಿ ನರನಾರಾಯಣ ಸ್ಥಾನವೆಂಬ ಪ್ರದೇಶಕ್ಕೆ ಹೋಗು. ಭೂಮಿಯಲ್ಲಿ ಅದು ಪವಿತ್ರಸ್ಥಾನವಾಗಿರುವುದು. ನನ್ನ ಅನುಗ್ರಹದಿಂದ ನೀನು ನನ್ನಲ್ಲಿಯೇ ಮನಸ್ಸನ್ನು ನೆಲೆಗೊಳಿಸಿ ಸಿದ್ಧಿಯನ್ನು ಪಡೆಯುವೆ. ನಾನು ಬಿಟ್ಟುಹೋದ ದ್ವಾರಕಾಪಟ್ಟಣದಲ್ಲಿ ನನ್ನ ಭಯದಿಂದ ನನ್ನ ಮನೆಯೊಂದನ್ನು ಬಿಟ್ಟು ಮಿಕ್ಕ ಭೂಭಾಗವು ಸಮುದ್ರದಲ್ಲಿ ಮುಳುಗಿಹೋಗುವುದು. ನಾನು ಆ ಮನೆಯಲ್ಲಿ ಭಕ್ತರ ಹಿತಕ್ಕಾಗಿ ಸನ್ನಿಹಿತನಾಗಿರುವೆನು.' ಎಂದು ಹೇಳಿದನು. ಈ ಮಾತನ್ನು ಕೇಳಿ ಉದ್ಧವನು ಭಗವಂತನಿಗೆ ನಮಸ್ಕಾರ ಮಾಡಿ ಅವನ ಅಪ್ಪಣೆಯನ್ನು ಪಡೆದು ತಪಸ್ಸಿಗಾಗಿ ನರನಾರಾಯಣಾಶ್ರಮಕ್ಕೆ ಪ್ರಯಾಣಮಾಡಿದನು.

ತತಸ್ತೇ ಯಾದವಾಸ್ಸರ್ವೇ ರಥಾನಾರುಹ್ಯ ಶೀಘ್ರಗಾನ್ ।
ಪ್ರಭಾಸಂ ಪ್ರಯಯುಸ್ಸಾರ್ಧಂ ಕೃಷ್ಣರಾಮಾದಿಭಿರ್ದ್ವಿಜ ॥ ೩೮ ॥

ಪ್ರಭಾಸಂ ಸಮನುಪ್ರಾಪ್ತಾಃ ಕುಕುರಾಂಧಕವೃಷ್ಣಯಃ ।
ಚಕ್ರುಸ್ತತ್ರ ಮಹಾಪಾನಂ ವಾಸುದೇವೇನ ಚೋದಿತಾಃ ॥ ೩೯ ॥

ಪಿಬತಾಂ ತತ್ರ ಚೈತೇಷಾಂ ಸಂಘರ್ಷೇಣ ಪರಸ್ಪರಂ ।
ಅತಿವಾದೇಂಧನೋ ಜಜ್ಞೇ ಕಲಹಾಗ್ನಿಃ ಕ್ಷಯಾವಹಃ ॥ ೪೦ ॥

॥ ಮೈತ್ರೇಯಃ ॥

ಸ್ವಂ ಸ್ವಂ ವೈ ಭುಂಜತಾಂ ತೇಷಾಂ ಕಲಹಃ ಕಿನ್ನಿಮಿತ್ತಕಃ ।
ಸಂಘರ್ಷೋ ವಾ ದ್ವಿಜಶ್ರೇಷ್ಠ ತನ್ಮಮಾಖ್ಯಾತುಮರ್ಹಸಿ ॥ ೪೧ ॥

೩೮-೪೦. ಅಮೇಲೆ ಯಾದವರೆಲ್ಲರೂ ವೇಗವಾದ ರಥದಲ್ಲಿ ಕುಳಿತು ರಾಮ ಕೃಷ್ಣರೊಡನೆ ಪ್ರಭಾಸಕ್ಷೇತ್ರಕ್ಕೆ ಪ್ರಯಾಣಮಾಡಿದರು. ಪ್ರಭಾಸಕ್ಷೇತ್ರವನ್ನು ಸೇರಿದ ಕುಕುರ, ಅಂಧಕ, ವೃಷ್ಣಿಗಳೆಂಬ ಯಾದವರು ಕೃಷ್ಣನ ಪ್ರೇರಣೆಯಿಂದ ಮಹಾಪಾನವನ್ನು ಮಾಡಿದರು. ವಿಶೇಷವಾಗಿ ಮದ್ಯಪಾನಮಾಡುತ್ತಿರುವ ಅವರಲ್ಲಿ ಒಬ್ಬರಿಬ್ಬರ ಸ್ಪರ್ಧೆಯಿಂದ ನಾನಕಾರಣವಾದ ಅತಿವಾದ ಮಾತುಗಳೆಂಬ ಸಮಿತ್ತುಗಳಿಂದ ಕಲಹಾಗ್ನಿಯು ಹುಟ್ಟಿತು.

೪೧. ಮೈತ್ರೇಯನು ಗುರುಗಳೇ! "ತಾವು ತಾವೇ ಊಟಮಾಡುತ್ತಿರುವಾಗ ಆ ಯದುಗಳಲ್ಲಿ ಜಗಳವು ಯಾವ ಕಾರಣದಿಂದ ಉಂಟಾಯಿತು? ಸ್ಪರ್ಧೆಯು ಹೇಗೆ ಹುಟ್ಟಿತು? ಅದನ್ನು ನನಗೆ ಹೇಳಬೇಕು" ಎಂದನು.

॥ ಶ್ರೀ ಪರಾಶರಃ ॥

ಮೃಷ್ಟಂ ಮದೀಯಮನ್ನಂ ತೇ ನ ಮೃಷ್ಟಮಿತಿ ಜಲ್ಪತಾಂ ।
ಮೃಷ್ಟಾಮೃಷ್ಟಕಥಾ ಜಜ್ಞೇ ಸಂಘರ್ಷಕಲಹೌ ತತಃ ॥ ೪೨ ॥

ತತಶ್ಚಾನ್ಯೋನ್ಯಮಭ್ಯೇತ್ಯ ಕ್ರೋಧಸಂರಕ್ತಲೋಚನಾಃ ।
ಜಘ್ನುಃ ಪರಸ್ಪರಂ ತೇ ತು ಶಸ್ತ್ರೈರ್ದೈವಬಲಾತ್ಕೃತಾಃ ॥ ೪೩ ॥

ಕ್ಷೀಣಶಸ್ತ್ರಾಶ್ಚ ಜಗೃಹುಃ ಪ್ರತ್ಯಾಸನ್ನಾಮಥೈರಕಾಂ ॥ ೪೪ ॥

ಏರಕಾ ತು ಗೃಹೀತಾ ವೈ ವಜ್ರಭೂತೇವ ಲಕ್ಷ್ಯತೇ ।
ತಯಾ ಪರಸ್ಪರಂ ಜಘ್ನುಃ ಸಂಪ್ರಹಾರೇ ಸುದಾರುಣೇ ॥ ೪೫ ॥

ಪ್ರದ್ಯುಮ್ನ ಸಾಂಬಪ್ರಮುಖಾಃ ಕೃತವರ್ಮಾಥ ಸಾತ್ಯಕೇ ।
ಅನಿರುದ್ಧಾದಯಶ್ಚಾನ್ಯೇ ಪೃಥುರ್ವಿ ಪೃಥುರೇವ ಚ ॥ ೪೬ ॥

೪೨-೪೫. ಪರಾಶರರು ಮೈತ್ರೇಯನೇ ! ಕೇಳು. ಆ ಯದುಗಳಲ್ಲಿ ಊಟ ಮಾಡುವಾಗ ನನ್ನ ಅನ್ನ ರುಚಿಯಾಗಿದೆ. ನಿನ್ನದು ರುಚಿಯಿಲ್ಲ. ಎಂದು ವ್ಯರ್ಥವಾದ ರುಚಿಯ ಮಾತು ಹುಟ್ಟಿ ಬಳಿಕ ಸ್ಪರ್ಧೆಯೂ, ಜಗಳವೂ ಹುಟ್ಟಿತು. ಆ ಮೇಲೆ ಅವರು ಅದೃಷ್ಟದಿಂದ ಪ್ರೇರಿತರಾಗಿ ಒಬ್ಬರ ಮೇಲೊಬ್ಬರು ಕೋಪದಿಂದ ಕಣ್ಣುಗಳನ್ನು ಕೆಂಪಾಗಿ ಮಾಡಿಕೊಂಡು ತಮ್ಮ ಕೈಯಲ್ಲಿದ್ದ ಆಯುಧಗಳಿಂದ ಒಬ್ಬರನ್ನೊಬ್ಬರು ಹೊಡೆದರು. ಆಯುಗಳು ನಾಶವಾದಮೇಲೆ ಸಮೀಪದಲ್ಲಿದ್ದ ಮೊದಲೇ ಮುಸಲಚೂರ್ಣದಿಂದ ಹುಟ್ಟಿದ್ದ ಜೊಂಡು ಹುಲ್ಲನ್ನು ತೆಗೆದುಕೊಂಡು ಹೊಡೆದಾಡಿದರು. ಆ ಜೊಂಡುಹುಲ್ಲು ವಜ್ರಾಯುಧದಂತೆ ಕಾಣುತ್ತಿದ್ದಿತು. ಆ ಭಯಂಕರ ಯುದ್ಧದಲ್ಲಿ ಅವುಗಳಿಂದಲೇ ಹೊಡೆದಾಡಿದರು.

೪೬-೫೦. ಪ್ರದ್ಯುಮ್ನ ಸಾಂಬ ಮುಂತಾದ ಕೃಷ್ಣನ ಮಕ್ಕಳೂ ಕೃತವರ್ಮ ಸಾತ್ಯಕಿಗಳೂ ಅನಿರುದ್ಧನೇ ಮುಂತಾದ ಅವನ ಮೊಮ್ಮಕ್ಕಳೂ ಪೃಥು, ವಿಪೃಥು

ಚಾರುವರ್ಮಾ ಚಾರುಕಶ್ಚ ತಥಾಕ್ರೂರಾದಯೋ ದ್ವಿಜ ।
ವಿರಥೀಕೃತಿಭಿರ್ವಜ್ರೈಸ್ತೇ ನಿಜಘ್ನುಃ ಪರಸ್ಪರಂ ॥ ೪೭ ॥

ನಿವಾರಯಾಮಾಸ ಹರಿರ್ಯಾದವಾಂಸ್ತೇ ಚ ಕೇಶವಂ ।
ಸಹಾಯಂ ಮೇನಿರೇಽರೀಣಾಂ ಪ್ರಾಪ್ತಂ ಜಘ್ನುಃ ಪರಸ್ಪರಂ ॥ ೪೮ ॥

ಕೃಷ್ಣೋಽಪಿ ಕುಪಿತಸ್ತೇಷಾಮೇರಕಾಮುಷ್ಟಿಮಾದದೇ ।
ವಧಾಯ ಸೋಽಪಿ ಮುಸಲಂ ಮುಷ್ಟಿಲೌಹಮಭೂತ್ತದಾ ॥ ೪೯ ॥

ಜಘಾನ ತೇನ ನಿಶ್ಶೇಷಾನ್ ಯಾದವಾನಾತತಾಯಿನಃ ।
ಜಘ್ನುಸ್ತೇ ಸಹಸಾಭ್ಯೇತ್ಯ ತಥಾನ್ಯೇಽಪಿ ಪರಸ್ಪರಂ ॥ ೫೦ ॥

ತತಸ್ತಾರ್ಣವಮಧ್ಯೇ ನ ಜೈತ್ರೋಽಸೌ ಚಕ್ರಿಣೋ ರಥಃ ।
ಪಶ್ಯತೋ ದಾರುಕಸ್ಯಾಥ ಪ್ರಾಯಾದಶ್ವೈರ್ಧೃತೋ ದ್ವಿಜ ॥ ೫೧ ॥

ಗಳೂ ಚಾರುವರ್ಮ ಚಾರುಕರೂ, ಅಕ್ರೂರಾದಿಗಳೂ ಜೊಂಡಿನ ರೂಪವಾದ ವಜ್ರಾಯುಧಗಳಿಂದ ಒಬ್ಬರನ್ನೊಬ್ಬರು ಹೊಡೆದುಕೊಂದರು. ಕೃಷ್ಣನು ಹೊಡೆದಾಡಬೇಡಿರೆಂದು ತಡೆದರೂ ಅವನು ಶತ್ರುಪಕ್ಷಕ್ಕೆ ಸಹಾಯಕನೆಂದು ತಿಳಿದು ಅವನ ಮಾತನ್ನು ಕೇಳದೆ ಅವನನ್ನೂ ಹೊಡೆದರು. ಕೃಷ್ಣನು ಅವರ ಮೇಲೆ ಕೋಪಗೊಂಡು ಒಂದು ಹಿಡಿ ಜೊಂಡನ್ನು ಹಿಡಿದನು. ಆ ಜೊಂಡು ಅವರನ್ನು ಕೊಲ್ಲುವುದಕ್ಕಾಗಿ ಕಬ್ಬಿಣದ ಒನಕೆಯಾಯಿತು. ಆದರಿಂದ ತನ್ನನ್ನು ಕೊಲ್ಲಲು ಬಂದ ಮಿಕ್ಕ ಯಾದವರನ್ನು ಹೊಡೆದು ಕೊಂದನು. ಮಿಕ್ಕವರೂ ಬೇಗ ಬಂದು ಒಬ್ಬರನ್ನೊಬ್ಬರು ಹೊಡೆದು ಕೊಂಡು ಹಾಕಿದರು.

೫೧-೫೩. ಆ ಮೇಲೆ ಕುದುರೆಯನ್ನು ಕಟ್ಟಿದ ಕೃಷ್ಣನ ಜೈತ್ರವೆಂಬ ರಥವು ದಾರುಕನೆಂಬ ಸಾರಥಿಯು ನೋಡುತ್ತಿರಲು ಸಮುದ್ರ ಮಧ್ಯದಿಂದ ಹೊರಟ

ಚಕ್ರಂ ಗದಾ ತಥಾ ಶಾರ್ಙ್ಗಂ ತೂಣೀ ಶಂಖೋಽಸಿರೇವ ಚ ।
ಪ್ರದಕ್ಷಿಣಂ ಹರಿಂ ಕೃತ್ವಾ ಜಗ್ಮುರಾದಿತ್ಯವರ್ತ್ಮನಾ ॥ ೫೨ ॥

ಕ್ಷಣೇನ ನಾಭವತ್ಕಶ್ಚಿದ್ಯಾದವಾನಾಮುಪೌತಿತಃ ।
ಋತೇ ಕೃಷ್ಣಂ ಮಹಾತ್ಮಾನಂ ದಾರುಕಂ ಚ ಮಹಾಮುನೇ ॥ ೫೩ ॥

ಚಂಕ್ರಮ್ಯಮಾಣೌ ತೌ ರಾಮಂ ವೃಕ್ಷಮೂಲೇ ಕೃತಾಸನಂ ।
ದದೃಶಾತೇ ಮುಖಾಚ್ಚಾಸ್ಯ ನಿಷ್ಕ್ರಾಮಂತಂ ಮಹೋರಗಂ ॥ ೫೪ ॥

ನಿಷ್ಕ್ರಮ್ಯ ಸ ಮುಖಾತ್ತಸ್ಯ ಮಹಾಭೋಗೋ ಭುಜಂಗಮಃ ।
ಪ್ರಯಯಾವರ್ಣವಂ ಸಿದ್ಧೈಃ ಪೂಜ್ಯಮಾನಸ್ತಥೋರಗೈಃ ॥ ೫೫ ॥

ತತೋಽಭ್ಯರ್ಚ್ಯಮಾದಾಯ ತದಾ ಜಲಧಿಸ್ತಂಮುಖಂ ಯಯೌ ।
ಪ್ರವಿವೇಶ ತತಸ್ತೋಯಂ ಪೂಜಿತಃ ಪನ್ನಗೋತ್ತಮೈಃ ॥ ೫೬ ॥

ಹೋಯಿತು. ಚಕ್ರ, ಗದೆ, ಶಾರ್ಙಧನುಸ್ಸು, ಬತ್ತಳಿಕೆ, ಶಂಖ, ಖಡ್ಗ ಈ ಆಯುಧಗಳು ಕಿರಣರೂಪವಾಗಿ ಕೃಷ್ಣನಿಗೆ ಪ್ರದಕ್ಷಿಣೆಯನ್ನು ಮಾಡಿ ಸೂರ್ಯನ ಮಾರ್ಗದಿಂದ ಹೊರಟು ಹೋದುವು. ಒಂದು ಕ್ಷಣದೊಳಗಾಗಿ ಕೃಷ್ಣದಾರುಕರನ್ನು ಬಿಟ್ಟು ಯಾದವರಲ್ಲಿ ಏಟು ತಿಂದು ಸಾಯದವರೊಬ್ಬರೂ ಇರಲಿಲ್ಲ.

೫೪-೫೬. ಬಳಿಕ ಕೃಷ್ಣದಾರುಕರಿಬ್ಬರೂ ಸಂಚರಿಸುತ್ತ ಒಂದು ಮರದ ಬುಡದಲ್ಲಿ ಯೋಗಾಸನವನ್ನು ಹಾಕಿ ಕುಳಿತಿದ್ದ ಬಲರಾಮನನ್ನು ನೋಡಿದರು. ಅವನ ಬಾಯಿಂದ ಒಂದು ದೊಡ್ಡ ಸರ್ಪವು ಬರುತ್ತಿದ್ದುದನ್ನು ಕಂಡರು. ಆ ವಿಸ್ತಾರವಾದ ಹೆಡೆಯುಳ್ಳ ಸರ್ಪವು ಅವನ ಬಾಯಿಂದ ಹೊರಟು ಸಿದ್ಧರೂ, ಉರಗರೂ ಪೂಜಿಸುತ್ತಿರಲು ಸಮುದ್ರಾಭಿಮುಖವಾಗಿ ಹೋಯಿತು. ಸಮುದ್ರರಾಜನು ಅವನಿಗೆ ಅರ್ಘ್ಯವನ್ನು ಕೊಟ್ಟನು. ಬಳಿಕ ಸರ್ಪವು ನೀರಿನಲ್ಲಿ ಪ್ರವೇಶಿಸಿತು.

ದೃಷ್ಟ್ವಾ ಬಲಸ್ಯ ನಿರ್ಯಾಣಂ ದಾರುಕಂ ಪ್ರಾಹ ಕೇಶವಃ ।
ಇದಂ ಸರ್ವಂ ಸಮಾಚಕ್ಷ್ವ ವಸುದೇವೋಗ್ರಸೇನಯೋಃ ॥ ೫೭ ॥

ನಿರ್ಯಾಣಂ ಬಲಭದ್ರಸ್ಯ ಯಾದವಾನಾಂ ತಥಾ ಕ್ಷಯಂ ।
ಯೋಗೇ ಸ್ಥಿತ್ವಾಹಮಪ್ಯೇತತ್ ಪರಿತ್ಯಕ್ಷ್ಯೇ ಕಲೇವರಂ ॥ ೫೮ ॥

ವಾಚ್ಯಶ್ಚ ದ್ವಾರಕಾವಾಸೀ ಜನಸ್ಸರ್ವಸ್ತಥಾಮುಕಃ ।
ಯಥೇಮಾಂ ನಗರೀಂ ಸರ್ವಾಂ ಸಮುದ್ರಃ ಪ್ಲಾವಯಿಷ್ಯತಿ ॥ ೫೯ ॥

ತಸ್ಮಾದ್ಭವದ್ಭಿಸ್ಸರ್ವೈಸ್ತು ಪ್ರತೀಕ್ಷ್ಯೋ ಹ್ಯರ್ಜುನಾಗಮಃ ।
ನ ಸ್ಥೇಯಂ ದ್ವಾರಕಾಮಧ್ಯೇ ನಿಷ್ಕ್ರಾಂತೇ ತತ್ರ ಪಾಂಡವೇ ॥ ೬೦ ॥

ತೇನೈವ ಸಹ ಗಂತವ್ಯಂ ಯತ್ರ ಯಾತಿ ಸ ಕೌರವಃ ॥ ೬೧ ॥

೫೭-೬೧. ಬಲರಾಮನು ಶರೀರವನ್ನು ಬಿಟ್ಟು ಹೋದುದನ್ನು ಕಂಡು ಕೃಷ್ಣನು ದಾರುಕನನ್ನು ಕುರಿತು " ನೀನು ಬಲರಾಮನು ಶರೀರವನ್ನು ಬಿಟ್ಟುದನ್ನೂ ಯಾದವರು ನಾಶವಾದುದನ್ನೂ ವಸುದೇವನಿಗೂ ಉಗ್ರಸೇನನಿಗೂ ಹೇಳು. ನಾನೂ ಯೋಗದಿಂದ ಈ ಶರೀರತ್ಯಾಗವನ್ನು ಮಾಡುವೆನು. ದ್ವಾರಕಾವಾಸಿಗಳಾದ ಸಮಸ್ತರಿಗೂ ಉಗ್ರಸೇನನಿಗೂ ಇದನ್ನು ಹೇಳು. ಈ ದ್ವಾರಕಾಪಟ್ಟಣವನ್ನು ಸಮುದ್ರವು ಮುಳುಗಿಸಿ ಬಿಡುವುದು. ಆದುದರಿಂದ ನೀವೆಲ್ಲರೂ ಅರ್ಜುನನು ಬರುವವರೆಗೆ ನಿರೀಕ್ಷಿಸುತ್ತಿರಿ. ಅವನು ದ್ವಾರಕೆಯನ್ನು ಬಿಟ್ಟು ಹೊರಟಮೇಲೆ ನೀವು ಅಲ್ಲಿರಬೇಡಿ. ಆ ಅರ್ಜುನನು ಎಲ್ಲಿಗೆ ಹೋಗುವನೋ ಅಲ್ಲಿಗೆ ಅವನೊಡನೆಯೇ ಹೊರಟು ಹೋಗಿರಿ. ನೀವು ಹೋಗಿ ಅರ್ಜುನನಿಗೆ ನಿನ್ನ ಶಕ್ತ್ಯನುಸಾರವಾಗಿ ನನ್ನ ಸ್ತ್ರೀಯರನ್ನು ಕಾಪಾಡಬೇಕೆಂದು ನಾನು ಹೇಳಿದೆನೆಂದು ಹೇಳು. ದ್ವಾರಕಾವಾಸಿಗಳೊ

ಗತ್ವಾ ಚ ಬ್ರೂಹಿ ಕೌಂತೇಯಮರ್ಜುನಂ ವಚನಾನ್ಮಮ ।
ಪಾಲನೀಯಸ್ತ್ವಯಾ ಶಕ್ತ್ಯಾ ಜನೋಽಯಂ ಮತ್ಪರಿಗ್ರಹಃ ॥ ೬೨ ॥

ತ್ವಮರ್ಜುನೇನ ಸಹಿತೋ ದ್ವಾರವತ್ಯಾಂ ತಥಾ ಜನಂ ।
ಗೃಹೀತ್ವಾ ಯಾಹಿ ವಜ್ರಶ್ಚ ಯದುರಾಜೋ ಭವಿಷ್ಯತಿ ॥ ೬೩ ॥

॥ ಶ್ರೀ ಪರಾಶರಃ ॥

ಇತ್ಯುಕ್ತೋ ದಾರುಕಃ ಕೃಷ್ಣಂ ಪ್ರಣಿಪತ್ಯ ಪುನಃ ಪುನಃ ।
ಪ್ರದಕ್ಷಿಣಂ ಚ ಬಹುಶಃ ಕೃತ್ವಾ ಪ್ರಾಯಾದ್ಯ ಥೋದಿತಂ ॥ ೬೪ ॥

ಸ ಚ ಗತ್ವಾ ತದಾಚಷ್ಟ ದ್ವಾರಕಾಯಾಂ ತಥಾರ್ಜುನಂ ।
ಆನಿನಾಯ ಮಹಾಬುದ್ಧಿರ್ವಜ್ರಂ ಚಕ್ರೇ ತಥಾ ನೃಪಂ ॥ ೬೫ ॥

ಭಗವಾನಪಿ ಗೋವಿಂದೋ ವಾಸುದೇವಾತ್ಮಕಂ ಪರಂ ।
ಬ್ರಹ್ಮಾತ್ಮನಿ ಸಮಾರೋಪ್ಯ ಸರ್ವಭೂತೇಷ್ವಧಾರಯತ್
ನಿಷ್ಪ್ರಪಂಚೇ ಮಹಾಭಾಗ ಸಂಯೋಜ್ಯಾತ್ಮಾನಮಾತ್ಮನಿ
ತುರ್ಯಾವಸ್ಥಸ್ಸಲೀಲಂ ಚ ಶೇತೇಸ್ಮ ಪುರುಷೋತ್ತಮಃ ॥ ೬೬ ॥

ಡನೆ ಅರ್ಜುನನ ಜೊತೆಯಲ್ಲಿ ಹೋಗು. ವಜ್ರನು ಯದುಗಳ ರಾಜನಾಗುವನು.” ಎಂದು ಹೇಳಿದನು.

೬೪-೬೫. ಈ ಮಾತನ್ನು ಕೇಳಿ ದಾರುಕನು ಕೃಷ್ಣನಿಗೆ ಅನೇಕ ಪ್ರದಕ್ಷಿಣೆಯನ್ನು ಮಾಡಿ ಮತ್ತೆ ಮತ್ತೆ ನಮಸ್ಕರಿಸಿ ಅವನಪ್ಪಣೆಯಂತೆ ಪ್ರಯಾಣಮಾಡಿದನು. ಬುದ್ಧಿವಂತನಾದ ದಾರುಕನು ದ್ವಾರಕೆಗೆ ಹೋಗಿ ಎಲ್ಲವನ್ನೂ ಹೇಳಿ ಅರ್ಜುನನನ್ನು ಕರೆದುಕೊಂಡು ಬಂದು ವಜ್ರನನ್ನು ರಾಜನನ್ನಾಗಿ ಮಾಡಿದನು.

೬೬–೭೦. ಇತ್ತ ಮಹಾಮಹಿಮನಾದ ಗೋವಿಂದನು ವಾಸುದೇವಸ್ವರೂಪವಾದ ಪರಬ್ರಹ್ಮ ತತ್ವವನ್ನು ಸರ್ವಭೂತಸ್ವರೂಪವಾದ ಆತ್ಮ ತತ್ವದಲ್ಲಿ

ಸಮ್ಮಾನಯನ್ ದ್ವಿಜವಚೋ ದುರ್ವಾ ಸಾ ಯದುವಾಚ ಹ ।
ಯೋಗಯುಕ್ತೋ ಭವತ್ಪಾದಂ ಕೃತ್ವಾ ಜಾನುನಿ ಸತ್ತಮ ॥ ೬೭ ॥

ಆಯಯೌ ಸ ಜರಾನಾಮ ತದಾ ತತ್ರ ಸಲುಬ್ಧಕಃ ।
ಮುಸಲಾವಶೇಷಲೋಹೈಕಸಾಯಕನ್ಯಸ್ತತೋಮರಃ ॥ ೬೮ ॥

ಸ ತತ್ಪಾದಂ ಮೃಗಾಕಾರಮವೇಕ್ಷ್ಯಾರಾದವಸ್ಥಿತಃ ।
ತಲೇ ವಿವ್ಯಾಧ ತೇನೈವ ತೋಮರೇಣ ದ್ವಿಜೋತ್ತಮ ॥ ೬೯ ॥

ತತಶ್ಚ ದದೃಶೇ ತತ್ರ ಚತುರ್ಬಾಹುಧರಂ ನರಂ ।
ಪ್ರಣಿಪತ್ಯಾಹ ಚೈವೈನಂ ಪ್ರಸೀದೇತಿ ಪುನಃ ಪುನಃ ॥ ೭೦ ॥

ಸೇರಿಸಿ ಪ್ರಪಂಚರಹಿತವಾದ ತುರ್ಯಾವಸ್ಥೆಯಲ್ಲಿ ಲೀಲೆಯಿಂದ ಮಲಗಿದ್ದನು ಹಿಂದೆ ಒಂದು ದಿನ ಕೃಷ್ಣನು ಹುಚ್ಚನಂತಿದ್ದ ದುರ್ವಾಸಮುನಿಗೆ ಅತಿಥಿಸತ್ಕಾರವನ್ನು ಮಾಡಿದನು. ಆಗ ಅವನಾಜ್ಞೆಯಿಂದ ಕೃಷ್ಣನು ಅವನೆಂಜಲನ್ನು ತನ್ನ ಕಾಲವನ್ನು ಬಿಟ್ಟು ಮೈಗೆಲ್ಲ ಬಳಿದುಕೊಂಡನು. ಇದರಿಂದ ಕೋಪಗೊಂಡ ಮುನಿಯು ನಿನ್ನ ಅಂಗಾಲು ಅಪಾಯಸ್ಥಾನವಾಗಲಿ" ಎಂದು ಶಪಿಸಿದ ದುರ್ವಾಸ ಮುನಿಯ ಮಾತಿಗೆ ಗೌರವವನ್ನುಂಟುಮಾಡುತ್ತ ಯೋಗಯುಕ್ತನಾಗಿ ಒಂದು ಕಾಲನ್ನು ಮತ್ತೊಂದು ಕಾಲಿನ-ಮಂಡಿಯ ಮೇಲಿಟ್ಟುಕೊಂಡು ಮಲಗಿದ್ದನು. ಸಮಯಕ್ಕೆ ಸರಿಯಾಗಿ ಜರಾ ಎಂಬ ಬೇಡನು ಮುಸಲಾಯಧದ ಚೂರನ್ನು ಬಾಣದ ತುದಿಯಲ್ಲಿ ಸೇರಿಸಿಕೊಂಡು ಬಂದು ಆ ಕೃಷ್ಣನ ಪಾದವು ಜಿಂಕೆಯ ಆಕಾರವಾಗಿರುವುದನ್ನು ತಿಳಿದು ದೂರದಲ್ಲಿ ನಿಂತು ಆ ತೋಮರಾಯುಧದಿಂದ ಅಂಗಾಲಿಗೆ ಹೊಡೆದನು. ಬಳಿಕ ಅಲ್ಲಿಗೆ ಬಂದು ನಾಲ್ಕು ತೋಳುಗಳುಳ್ಳ ಕೃಷ್ಣನನ್ನು ನೋಡಿ ತನಗೆ ಪ್ರಸನ್ನನಾಗಬೇಕೆಂದು ಅನೇಕ ಬಾರಿ ಬೇಡಿಕೊಂಡನು.

ಅಜಾನತಾ ಕೃತಮಿದಂ ಮಯಾ ಹರಿಣಶಂಕಯಾ ।
ಕ್ಷಮ್ಯತಾಂ ಮಮ ಪಾಪೇನ ದಗ್ಧಂ ಮಾಂತ್ರಾಣಮರ್ಹಸಿ ॥ ೭೦ ॥

॥ ಶ್ರೀ ಪರಾಶರಃ ॥

ತತಸ್ತಂ ಭಗವಾನಾಹ ನ ತೇಽಸ್ತು ಭಯಮಣ್ವಪಿ ।
ಗಚ್ಛ ತ್ವಂ ಮತ್ಪ್ರಸಾದೇನ ಲುಬ್ಧಸ್ವರ್ಗಂ ಸುರಾಸ್ಪದಂ ॥ ೭೨ ॥

॥ ಶ್ರೀ ಪರಾಶರಃ ॥

ವಿಮಾನಮಾಗತಂ ಸದ್ಯಸ್ತದ್ವಾಕ್ಯಸಮನಂತರಂ ।
ಆರುಹ್ಯ ಪ್ರಯಯೌ ಸ್ವರ್ಗಂ ಲುಬ್ಧಕಸ್ತತ್ಪ್ರಸಾದತಃ ॥ ೭೩ ॥

ಗತೇ ತಸ್ಮಿನ್ ಸ ಭಗವಾಂತ್ಸಂಯೋಜ್ಯಾತ್ಮಾನಮಾತ್ಮನಿ ।
ಬ್ರಹ್ಮಭೂತೋಽವ್ಯಯೋಽಚಿಂತ್ಯೋ ವಾಸುದೇವಮಯೋಽಮಲೋ ॥ ೭೪ ॥

೭೧-೭೩. "ಓ ಸ್ವಾಮಿಯೇ! ನಾನು ತಿಳಿಯದೆ ಜಿಂಕೆಯೆಂದು ಸಂದೇಹದಿಂದ ಈ ಕಾರ್ಯವನ್ನು ಮಾಡಿದೆನು. ಪಾಪದಿಂದ ಸುಟ್ಟುಹೋದ ನನ್ನನ್ನು ಕ್ಷಮಿಸಿ ಕಾಪಾಡಬೇಕು" ಎಂದು ಬೇಡಿಕೊಂಡನು. ಆಗ ಕೃಷ್ಣನು ಅವನನ್ನು ಕುರಿತು "ಎಲೈ ಬೇಡನೇ! ನಿನಗೆ ಸ್ವಲ್ಪವೂ ಭಯವಿಲ್ಲ ನೀನು ನನ್ನ ಅನುಗ್ರಹದಿಂದ ದೇವತೆಗಳು ವಾಸಿಸುವ ಸ್ವರ್ಗಕ್ಕೆ ಹೋಗು" ಎಂದುಹೇಳಿದನು. ಆ ಕ್ಷಣದಲ್ಲಿಯೇ ಒಂದು ವಿಮಾನವು ಬಂದಿತು. ಬೇಡನು ಕೃಷ್ಣನ ಅನುಗ್ರಹದಿಂದ ಆ ವಿಮಾನವನ್ನೇರಿ ಸ್ವರ್ಗಕ್ಕೆ ಹೊರಟು ಹೋದನು.

೭೪-೭೫. ಆ ಬೇಡನು ಸ್ವರ್ಗಕ್ಕೆ ಹೊರಟುಹೋದ ಮೇಲೆ ಮಹಾಮಹಿಮನಾದ ಕೃಷ್ಣನು ತನ್ನ ಮನಸ್ಸನ್ನು ನಾಶರಹಿತನೂ ಪರಬ್ರಹ್ಮಸ್ವರೂಪನೂ ಮನಸ್ಸಿಗೆ ಅಗೋಚರನೂ, ವಾಸುದೇವಸ್ವರೂಪನೂ, ನಿರ್ಮಲನೂ, ಜನ್ಮಮರಣ

ಅಜನ್ಮನ್ಯಮುರೇ ವಿಷ್ಣಾವಪ್ರಮೇಯೇಽಖಿಲಾತ್ಮನಿ ।
ತತ್ಯಾಜ ಮಾನುಷಂ ದೇಹಮತೀತ್ಯ ತ್ರಿವಿಧಾಂ ಗತಿಂ ॥ ೭೫ ॥

ಇತಿ ಶ್ರೀ ವಿಷ್ಣು ಪುರಾಣೇ ಪಂಚಮಾಂಶೇ ಸಪ್ತತ್ರಿಂಶೋಽಧ್ಯಾಯಃ

ಗಳಿಲ್ಲದವನೂ, ಅಳತೆಗೆ ಸಿಕ್ಕದವನೂ, ಸರ್ವಾತ್ಮನೂ, ಆದ ವಿಷ್ಣು ವಿನಲ್ಲಿಟ್ಟು ತ್ರಿಗುಣಾತ್ಮಕವಾದ ಮನುಷ್ಯ ಶರೀರವನ್ನು ಬಿಟ್ಟನು.

ಎಂಬಲ್ಲಿಗೆ ಶ್ರೀ ವಿಷ್ಣು ಪುರಾಣದ ಪಂಚಮಾಂಶದಲ್ಲಿ

ಮೂವತ್ತೇಳನೆಯ ಅಧ್ಯಾಯವು

ಮುಗಿದುದು

॥ ಶ್ರೀಃ ॥

ಶ್ರೀ ವಿಷ್ಣುಪುರಾಣೇ ಪಂಚಮಾಂಶೇ

ಅಷ್ಟತ್ರಿಂಶೋಽಧ್ಯಾಯಃ

॥ ಶ್ರೀ ಪರಾಶರಃ ॥

ಅರ್ಜುನೋಽಪಿ ತದಾನ್ವಿಷ್ಯ ರಾಮಕೃಷ್ಣಕಳೇಬರೇ ।
ಸಂಸ್ಕಾರಂ ಲಂಭಯಾಮಾಸ ತಥಾನ್ಯೇಷಾಮನುಕ್ರಮಾತ್ ॥ ೧ ॥

ಅಷ್ಟೌ ಮಹಿಷ್ಯಃ ಕಥಿತಾ ರುಕ್ಮಿಣೀ ಪ್ರಮುಖಾಸ್ತು ಯಾಃ ।
ಉಪಗೂಹ್ಯ ಹರೀರ್ದೇಹಂ ವಿವಿಶುಸ್ತಾ ಹುತಾಶನಂ ॥ ೨ ॥

ರೇವತೀ ಚಾಪಿ ರಾಮಸ್ಯ ದೇಹಮಾಶ್ಲಿಷ್ಯ ಸತ್ತಮಾ ।
ವಿವೇಶ ಜ್ವಲಿತಂ ವಹ್ನಿಂ ತತ್ಸಂಗಾಹ್ಲಾದಶೀತಲಂ ॥ ೩ ॥

ಮೂವತ್ತೆಂಟನೆಯ ಅಧ್ಯಾಯವು

೧–೩. ಆಗ ಅರ್ಜುನನು ಬಂದು ರಾಮಕೃಷ್ಣರ ಶರೀರಗಳನ್ನು ಹುಡುಕಿ ಅವರಿಗೂ ಇತರರಿಗೂ ಕ್ರಮವಾಗಿ ಪರಲೋಕ ಸಂಸ್ಕಾರಗಳನ್ನು ಮಾಡಿಸಿದನು. ರುಕ್ಮಿಣಿಯೇ ಮುಂತಾದ ಕೃಷ್ಣನ ಅಷ್ಟಮಹಿಷಿಯರು ಹರಿಯ ಶರೀರವನ್ನಪ್ಪಿಕೊಂಡು ಅಗ್ನಿಪ್ರವೇಶಮಾಡಿದರು. ರೇವತಿಯು ಬಲರಾಮನ ದೇಹವನ್ನು ತಬ್ಬಿಕೊಂಡು ಅವನ ಸಂಗದಿಂದುಂಟಾದ ಸಂತೋಷದಿಂದ ತಣ್ಣಗೆ ಉರಿಯುತ್ತಿರುವ ಅಗ್ನಿಯನ್ನು ಪ್ರವೇಶಿಸಿದಳು. ಇದನ್ನು ಕೇಳಿ ಉಗ್ರಸೇನನೂ, ವಸುದೇವನೂ, ದೇವಕೀ

ಉಗ್ರಸೇನಸ್ತು ತಚ್ಛ್ರುತ್ವಾ ತಥೈವಾನಕದುಂದುಭಿಃ ।
ದೇವಕೀರೋಹಿಣೀ ಚೈವ ವಿವಿಶುರ್ಜಾತವೇದಸಂ ॥ ೪ ॥

ತತೋಽರ್ಜುನಃ ಪ್ರೇತಕಾರ್ಯಂ ಕೃತ್ವಾ ತೇಷಾಂ ಯಥಾವಿಧಿ ।
ನಿಷ್ಕ್ರಾಮ್ಯ ಜನಂ ಸರ್ವಂ ಗೃಹೀತ್ವಾ ವಜ್ರಮೇವ ಚ ॥ ೫ ॥

ದ್ವಾರವತ್ಯಾ ವಿನಿಷ್ಕ್ರಾಂತಾಃ ಕೃಷ್ಣಪತ್ನ್ಯಸ್ಸಹಸ್ರಶಃ ।
ವಜ್ರಂ ಜನಂ ಚ ಕೌಂತೇಯಃ ಪಾಲಯನ್ ಶನಕೈರ್ಯಯೌ ॥ ೬ ॥

ಸಭಾ ಸುಧರ್ಮಾ ಕೃಷ್ಣೇನ ಮರ್ತ್ಯಲೋಕೇ ಸಮುಜ್ಝಿತೇ ।
ಸ್ವರ್ಗಂ ಜಗಾಮ ಮೈತ್ರೇಯ ಪಾರಿಜಾತಶ್ಚ ಪಾದಪಃ ॥ ೭ ॥

ಯಸ್ಮಿನ್ ದಿನೇ ಹರಿರ್ಯಾತೋ ದಿವಂ ಸಂತ್ಯಜ್ಯ ಮೇದಿನೀಂ ।
ತಸ್ಮಿನ್ನೇವಾವತೀರ್ಣೋಽಯಂ ಕಾಲಕಾಯೋ ಬಲೀ ಕಲಿಃ ॥ ೮ ॥

ರೋಹಿಣಿಯರೂ ಅಗ್ನಿ ಪ್ರವೇಶಮಾಡಿದರು. ಅರ್ಜುನನು ಅವರೆಲ್ಲರಿಗೂ ವಿಧಿಯನ್ನನುಸರಿಸಿ ಪರಲೋಕಕ್ರಿಯೆಯನ್ನು ಮಾಡಿ ದ್ವಾರಕೆಯ ಜನರನ್ನೆಲ್ಲಾ ಕರೆದುಕೊಂಡು ವಜ್ರನೊಡನೆ ಅಲ್ಲಿಂದ ಹೊರಟನು.

೬–೯. ಸಾವಿರಗಟ್ಟಲೆಯ ಕೃಷ್ಣನ ಪತ್ನಿಯರೂ ದ್ವಾರಕೆಯಿಂದ ಹೊರಟರು. ಅರ್ಜುನನು ಅವರೆಲ್ಲರನ್ನೂ ರಕ್ಷಣೆಮಾಡುತ್ತ ಮೆಲ್ಲಗೆ ಪ್ರಯಾಣ ಮಾಡುತ್ತಿದ್ದನು. ಕೃಷ್ಣನು ಭೂಲೋಕವನ್ನು ಬಿಡುತ್ತಲು ಸುಧರ್ಮೆಯೆಂಬ ದೇವೇಂದ್ರನ ಸಭೆಯು ಸ್ವರ್ಗಕ್ಕೆ ಹೋಯಿತು. ಪಾರಿಜಾತವೃಕ್ಷವೂ ಹೊರಟು ಹೋಯಿತು. ಕೃಷ್ಣನು ಯಾವ ದಿನ ಭೂಮಿಯನ್ನು ಬಿಟ್ಟು ಹೋದನೋ ಆ ದಿನವೇ ಕಪ್ಪಾದ ಶರೀರವುಳ್ಳ ಬಲಶಾಲಿಯಾದ ಕಲಿಯು ಭೂಮಿಗೆ ಇಳಿದನು. ಜನರಿಲ್ಲದ ದ್ವಾರಕಾಪಟ್ಟಣದಲ್ಲಿ

ಪ್ಲಾವಯಾಮಾಸ ತಾಂ ಶೂನ್ಯಾಂ ದ್ವಾರಕಾಂ ತು ಮಹೋದಧಿಃ
ವಾಸುದೇವ ಗೃಹಂ ತ್ವೇಕಂ ನ ಪ್ಲಾವಯತಿ ಸಾಗರಃ ॥ ೯ ॥

ನಾತಿಕ್ರಾಂತುಮುಲಂ ಬ್ರಹ್ಮಂಸ್ತದದ್ಯಾಪಿ ಮಹೋದಧಿಃ ।
ನಿತ್ಯಂ ಸನ್ನಿಹಿತಸ್ತತ್ರ ಭಗವಾನ್ ಕೇಶವೋ ಯತಃ ॥ ೧೦ ॥

ತದತೀವ ಮಹಾಪುಣ್ಯಂ ಸರ್ವಪಾತಕನಾಶನಂ ।
ವಿಷ್ಣುಶ್ರಿಯಾನ್ವಿತಂ ಸ್ಥಾನಂ ದೃಷ್ಟ್ವಾ ಪಾಪಾದ್ವಿಮುಚ್ಯತೇ ॥ ೧೧ ॥

ಪಾರ್ಥಃ ಪಂಚನದೇ ದೇಶೇ ಬಹುಧಾನ್ಯಧನಾನ್ವಿತೇ ।
ಚಕಾರ ವಾಸಂ ಸರ್ವಸ್ಯ ಜನಸ್ಯ ಮುನಿಸತ್ತಮ ॥ ೧೨ ॥

ತತೋ ಲೋಭಸ್ಸಮಭವತ್ ಪಾರ್ಥೇನೈಕೇನ ಧನ್ವಿನಾ ।
ದೃಷ್ಟ್ವಾ ಸ್ತ್ರಿಯೋ ನೀಯಮಾನಾ ದಸ್ಯೂನಾಂ ನಿಹತೇಶ್ವರಾಃ ॥ ೧೩ ॥

ಕೃಷ್ಣನ ಮನೆಯೊಂದನ್ನು ಬಿಟ್ಟು ಏಕ್ಯ ಭಾಗವನ್ನೆಲ್ಲ ಸಮುದ್ರರಾಜನು ಮಳುಗಿಸಿ ಬಿಟ್ಟನು.

೧೦–೧೧. ಮೈತ್ರೇಯನೇ ! ಈಗಲೂ ಆ ಸಮುದ್ರವನ್ನು ದಾಟಿ ಕೃಷ್ಣನ ಅರಮನೆಗೆ ಹೋಗಲು ಸಾಧ್ಯವಿಲ್ಲ. ಆ ಕೃಷ್ಣನು ವಾಸವಾಡಿದ ಸ್ಥಳವು ಅತ್ಯಂತ ಪುಣ್ಯಕರವಾದುದು. ದರ್ಶನಮಾತ್ರದಿಂದ ಮಹಾಪಾಪಗಳನ್ನು ನಾಶಮಾಡ ತಕ್ಕುದು. ಅಲ್ಲಿ ಯಾವಾಗಲೂ ವಿಷ್ಣುವು ತೇಜೋರೂಪದಿಂದ ವಾಸವಾಗಿರುವನು.

೧೨–೧೪. ಅರ್ಜುನನು ದ್ವಾರಕೆಯಿಂದ ಕರೆದುಕೊಂಡು ಹೋದ ಸಕಲ ಜನರಿಗೂ ಧನ ಧಾನ್ಯ ಸಮೃದ್ಧಿಯುಳ್ಳ ಪಂಚನದವೆಂಬ ದೇಶದಲ್ಲಿ ವಾಸವನ್ನು ಕಲ್ಪಿಸಿದನು. ಧನುಸ್ಸನ್ನು ಧರಿಸಿದ ಅರ್ಜುನನೊಬ್ಬನೇ ದಿಕ್ಕಿಲ್ಲದ ಅನೇಕ ಸ್ತ್ರೀಯರನ್ನು ಕರೆದುಕೊಂಡು ಹೋಗುತ್ತಿರುವುದನ್ನು ನೋಡಿ ಕಳ್ಳರಿಗೆ ಅವರ ಒಡವೆ

ತತಸ್ತೇ ಪಾಪಕರ್ಮಾಣೋ ಲೋಭೋಪಹತಚೇತಸಃ ।
ಆಭೀರಾ ಮಂತ್ರಯಾಮಾಸುಸ್ಸಮೇತ್ಯಾತ್ಯಂತದುರ್ಮದಾಃ ॥ ೧೪ ॥

ಅಯಮೇಕೋಽರ್ಜುನೋ ಧನ್ವೀ ಸ್ತ್ರೀಜನಂ ನಿಹತೇಶ್ವರಂ ।
ನಯತ್ಯಸ್ಮಾನತಿಕ್ರಮ್ಯ ಧಿಗೇತದ್ಭವತಾಂ ಬಲಂ ॥ ೧೫ ॥

ಹತ್ವಾ ಗರ್ವಸಮಾರೂಢೋ ಭೀಷ್ಮದ್ರೋಣ ಜಯದ್ರಥಾನ್ ।
ಕರ್ಣಾದೀಂಶ್ಚ ನ ಜಾನಾತಿ ಬಲಂ ಗ್ರಾಮನಿವಾಸಿನಾಂ ॥ ೧೬ ॥

ಯಷ್ಟಿಹಸ್ತಾನವೇಕ್ಷ್ಯಾಸ್ಮಾನ್ ಧನುಷ್ಪಾಣಿಸ್ಸುದುರ್ಮತಿಃ ।
ಸರ್ವಾನೇವಾವಜಾನಾತಿ ಕಿಂ ವೋ ಬಾಹುಭಿರುನ್ನತೈಃ ॥ ೧೭ ॥

ತತೋ ಯಷ್ಟಿಪ್ರಹರಣಾದಸ್ಮದ್ಭೋ ಲೋಷ್ಟಧಾರಿಣಃ ।
ಸಹಸ್ರಶೋಽಭ್ಯಧಾವಂತ ತಂ ಜನಂ ನಿಹತೇಶ್ವರಂ ॥ ೧೮ ॥

ವಸ್ತುಗಳ ವಿಷಯದಲ್ಲಿ ಅತ್ಯಾಸೆಯುಂಟಾಯಿತು. ಹಳ್ಳಿಯ ಜನರಾದ ಆ ಕಳ್ಳರು ಗುಂಪಾಗಿ ಕೆಟ್ಟಗರ್ವದಿಂದ ಪಾಪಕಾರ್ಯಾಸಕ್ತರಾಗಿ ಆಲೋಚನೆಯನ್ನು ಮಾಡಿದರು. ಏನೆಂದರೆ :—

೧೫-೧೮. ಧನುಸ್ಸನ್ನು ಧರಿಸಿದ ಅರ್ಜುನನೊಬ್ಬನೇ ಗಂಡಸಿಲ್ಲದ ಸ್ತ್ರೀಯರನ್ನು ನಮ್ಮನ್ನು ಲಕ್ಷ್ಯಮಾಡದೆ ಕರೆದುಕೊಂಡು ಹೋಗುತ್ತಿರುವನು. ಅವನು ಭೀಷ್ಮ, ದ್ರೋಣ, ಜಯದ್ರಥ, ಕರ್ಣ, ಮುಂತಾದವರನ್ನು ಕೊಂದು ಗರ್ವಪಡುತ್ತಿರುವನು. ಹಳ್ಳಿಯ ಜನರಾದ ನಮ್ಮ ಬಲವನ್ನು ಅವನು ತಿಳಿಯನು. ದೊಣ್ಣೆಗಳನ್ನು ಹಿಡಿದಿರುವ ನಮ್ಮನ್ನು ನೋಡಿ ದುರ್ಬುದ್ಧಿಯುಳ್ಳ ಅರ್ಜುನನು ತಾನು ಧನುಸ್ಸನ್ನು ಧರಿಸಿದವನೆಂದು ನಮ್ಮನ್ನು ಅಲಕ್ಷ್ಯಮಾಡುತ್ತಿರುವನು. "ನಿಮ್ಮ ಉದ್ಧವಾದ ತೋಳುಗಳನ್ನೂ ಬಲವನ್ನೂ ನಿಂದಿಸಬೇಕು. ಅವುಗಳಿಂದೇನು ಪ್ರಯೋಜನ" ಎಂದು ಹೇಳಿಕೊಂಡು ಅನೇಕ ಜನ ಕಳ್ಳರು ದೊಣ್ಣೆಗಳನ್ನೂ ಕಲ್ಲುಗಳನ್ನೂ ಹಿಡಿದು ಓಡಿಬಂದು ಹೆಂಗಸರನ್ನು ಮುತ್ತಿದರು.

ತತೋ ನಿರ್ಭರ್ತ್ಸ್ಯ ಕೌಂತೇಯಃ ಪ್ರಾಹಾಭೀರಾನ್ ಹಸನ್ನಿವ ।
ನಿವರ್ತ ಧ್ವಮಧರ್ಮಜ್ಞಾ ಯದಿ ಪ್ರಷ್ಠ ಮುಮೂರ್ಷವಃ ॥ ೧೯ ॥

ಅವಜ್ಞಾಯ ವಚಸ್ತಸ್ಯ ಜಗೃಹುಸ್ತೇ ತದಾ ಧನಂ ।
ಸ್ತ್ರೀಧನಂ ಚೈವ ಮೈತ್ರೇಯ ವಿಷ್ವಕ್ಸೇನಪರಿಗ್ರಹಂ ॥ ೨೦ ॥

ತತೋಽರ್ಜುನೋ ಧನುರ್ದಿವ್ಯಂ ಗಾಂಢೀವ ಮಜರಂ ಯುಧಿ ।
ಆರೋಪಯಿತುಮಾರೇಭೇ ನ ಶಶಾಕ ಚ ವೀರ್ಯವಾನ್ ॥ ೨೧ ॥

ಚಕಾರ ಸಜ್ಯಂ ಕೃಚ್ಛ್ರಾಚ್ಚ ತಚ್ಚಾಭೂಚ್ಛಿಥಿಲಂ ಪುನಃ ।
ನ ಸಸ್ಮಾರ ತತೋಽಸ್ತ್ರಾಣಿ ಚಿಂತಯನ್ನಪಿ ಪಾಂಡವಃ ॥ ೨೨ ॥

ಶರಾನ್ಮುಮೋಚ ಚೈತೇಷು ಪಾರ್ಥೋ ವೈರಿಷ್ವಮರ್ಷಿತಃ ।
ತ್ಯಕ್ತೋದಂ ತೈಃ ಪರಂ ಚಕ್ರೇರಸ್ತ್ರಾ ಗಾಂಢೀವಧನ್ವನಾ ॥ ೨೩ ॥

೧೯–೨೨. ಬಳಿಕ ಅರ್ಜುನನು ಅವರನ್ನು ಕುರಿತು "ಅಧರ್ಮಿಗಳಾದ ಕಳ್ಳರಿ ನಿಮಗೆ ಸಾಯುವ ಆಸೆಯಿಲ್ಲದಿದ್ದರೆ ಹಿಂದಿರುಗಿ ಹೋಗಿ" ಎಂದು ಗರ್ಜಿಸಿದರೂ. ಅವರು ಅವನ ಮಾತನ್ನು ಲಕ್ಷಿಸದೆ ಕೃಷ್ಣನ ಪತ್ನಿಯರನ್ನೂ ಧನವನ್ನೂ ತಮ್ಮ ವಶಮಾಡಿಕೊಂಡರು. ಆಗ ಅರ್ಜುನನು ತನ್ನ ದಿವ್ಯವಾದ ಗಾಂಡೀವ ಧನುಸ್ಸಿಗೆ ಹೆದೆಯನ್ನೇರಿಸಲು ಪ್ರಾರಂಭಿಸಿದನು. ಅವನಿಗೆ ಶಕ್ತಿಯು ಸಾಲದೆ ಹೋಯಿತು. ಬಹಳ ಕಷ್ಟದಿಂದ ಹೆದೆಯನ್ನೇರಿಸಿದನು. ಪುನಃ ಅದು ಸಡಿಲವಾಯಿತ್ತು. ಮಂತ್ರಾಸ್ತ್ರಗಳು ಅವನ ಜ್ಞಾಪಕಕ್ಕೆ ಬರಲಿಲ್ಲ.

೨೩–೨೪. ಅರ್ಜುನನು ಶತ್ರುಗಳಮೇಲೆ ಕೋಪದಿಂದ ಬಾಣಗಳನ್ನು ಪ್ರಯೋಗಿಸಿದನು. ಆ ಬಾಣಗಳು ತಾವಾಗಿಯೇ ಬಿದ್ದುಹೋದುವು. ಅಗ್ನಿಯು

ವಹ್ನಿನಾ ಯೇಽಕ್ಷಯಾ ದತ್ತಾಶ್ಚರಾಸ್ತೇಽಪಿ ಕ್ಷಯಂ ಯಯುಃ ।
ಯುಧ್ಯತಸ್ಸಹಗೋಪಾಲೈರರ್ಜುನಸ್ಯ ಭವತ್ಕ್ಷಯೇ ॥ ೨೪ ॥

ಅಚಿಂತಯಚ್ಚ ಕೌಂತೇಯಃ ಕೃಷ್ಣಸ್ಯೈವ ಹಿ ತದ್ಬಲಂ ।
ಯನ್ಮಯಾ ಶರಸಂಘಾತೈಸ್ಸಕೆಲಾ ಭೂಭೃತೋ ಹತಾಃ ॥ ೨೫ ॥

ನಿಘತಃ ಪಾಂಡುಪುತ್ರಸ್ಯ ತತಸ್ತಾಃ ಪ್ರಮದೋತ್ತಮಾಃ ।
ಅಭೀರ್ಭೈರಪಕೃಷ್ಯಂತ ಕಾಮಂ ಚಾನ್ಯಾಃ ಪ್ರದುದ್ರುವುಃ ॥ ೨೬ ॥

ತತಶ್ಶರೇಷು ಕ್ಷೀಣೇಷು ಧನುಷ್ಕೋಟ್ಯಾ ಧನಂಜಯಃ ।
ಜಘಾನ ದಸ್ಯೂನ್ ತೇ ಚಾಸ್ಯ ಪ್ರಹಾರಾನ್ ಜಹಸುರ್ಮುನೇ ॥ ೨೭ ॥

ಪ್ರೇಕ್ಷತಸ್ತಸ್ಯ ಪಾರ್ಥಸ್ಯ ವೃಷ್ಣ್ಯಂಧಕವರಸ್ತ್ರಿಯಃ ।
ಜಗ್ಮುರಾದಾಯ ತೇ ಮ್ಲೇಚ್ಛಾಸ್ತಮಸ್ತಾ ಮುನಿಸತ್ತಮ ॥ ೨೮ ॥

ಖಾಂಡವವನ ದಹನದಲ್ಲಿ ಅವನಿಗೆ ಕೊಟ್ಟ ಅಕ್ಷಯವಾದ ಬಾಣಗಳೂ ಅವನ ಕೊನೆಗಾಲದಲ್ಲಿ ಕ್ಷಯಿಸಿ ಹೋದುವು. ಆಗ ಅರ್ಜುನನು ಅನೇಕ ಬಾಣಗಳಿಂದ ಯುದ್ಧದಲ್ಲಿ ಅನೇಕ ರಾಜರನ್ನು ಕೊಂದ ತನಗಿದ್ದ ಬಲವೆಲ್ಲವೂ ಕೃಷ್ಣನ ಬಲವೇ ಎಂದು ತಿಳಿದುಕೊಂಡನು. ಅರ್ಜುನನು ನೋಡುತ್ತಿದ್ದ ಹಾಗೆಯೇ ಗೊಲ್ಲರಾದ ಹಳ್ಳಿಯ ಕಳ್ಳರು ಸ್ತ್ರೀಯರನ್ನು ಎಳೆದುಕೊಂಡು ಹೋಗುತ್ತಿದ್ದರು. ಮಿಕ್ಕ ಸ್ತ್ರೀಯರು ದಿಕ್ಕುದಿಕ್ಕಿಗೆ ಓಡಿಹೋಗುತ್ತಿದ್ದರು. ತನ್ನ ಬಾಣಗಳೆಲ್ಲ ನಾಶವಾಗುತ್ತಲು ಅರ್ಜುನನು ಧನುಸ್ಸಿನ ತುದಿಯಿಂದ ಕಳ್ಳರನ್ನು ಹೊಡೆದನು. ದೊಣ್ಣೆಯಿಂದ ಹೊಡೆವುದರಲ್ಲಿ ಅರ್ಜುನನಿಗಿಂತಲೂ ಅವರು ಬುದ್ಧಿವಂತರಾದುದರಿಂದ ಅವನನ್ನು ಹಾಸ್ಯಮಾಡಿದರು. ಮತ್ತು ಅವನು ನೋಡುತ್ತಿದ್ದ ಹಾಗೆಯೇ ಆ ಮ್ಲೇಚ್ಛರೆಲ್ಲರೂ ವೃಷ್ಣಿಗಳು, ಅಂಧಕರು ಮುಂತಾದ ಯಾದವರ ಸ್ತ್ರೀಯರನ್ನು ಎತ್ತಿ ತೆಗೆದುಕೊಂಡು ಹೊರಟುಹೋದರು.

ತತಸ್ತದುಃಖಿತೋ ಜಿಷ್ಣುಃ ಕಷ್ಟಂ ಕಷ್ಟಮಿತಿ ಬ್ರುವನ್ ।
ಅಹೋ ಭಗವತಾನೇನ ಮುಷ್ಟೋಽಸ್ಮೀತಿ ರುರೋದ ವೈ ॥ ೨೯ ॥

ತದ್ಧನುಸ್ತಾನಿ ಶಸ್ತ್ರಾಣಿ ಸರಥಸ್ತೇ ಚ ವಾಜಿನಃ ।
ಸರ್ವಮೇಕಪದೇ ನಷ್ಟಂ ದಾನಮಶ್ರೋತ್ರಿಯೇ ಯಥಾ ॥ ೩೦ ॥

ಅಹೋತಿಬಲವದ್ದೈವಂ ವಿನಾ ತೇನ ಮಹಾತ್ಮನಾ ।
ಯದಸಾಮರ್ಥ್ಯಯುಕ್ತೋಽಪಿ ನೀಚವರ್ಗೇ ಜಯಪ್ರದಂ ॥ ೩೧ ॥

ತೌ ಬಾಹೂ ಸ ಚ ಮೇಮುಷ್ಟಿಃ ಸ್ಥಾನಂ ತತ್ರೋಽಸ್ಮಿ ಚಾರ್ಜುನಃ ।
ಪುಣ್ಯೇ ನೈವ ವಿನಾ ತೇನ ಗತಂ ಸರ್ವಮಸಾರತಾಂ ॥ ೩೨ ॥

ಮಮಾರ್ಜುನತ್ವಂ ಭೀಮಸ್ಯ ಭೀಮತ್ವಂ ತತ್ಕೃತಂ ಧ್ರುವಂ ।
ವಿನಾ ತೇನ ಯಥಾಭೀರ್ಭಿರ್ಜಿತೋಽಹಂ ರಥಿನಾಂ ವರಃ ॥ ೩೩ ॥

೨೯–೩೪. ಆಮೇಲೆ ಅರ್ಜುನನು ದುಃಖಪಡುತ್ತ 'ಅಯ್ಯೋ! ನನಗೆ ಕಷ್ಟವು ಪ್ರಾಪ್ತವಾಯಿತು ಭಗವಂತನಾದ ಕೃಷ್ಣನ ಮಾಯಾಶಕ್ತಿಯಿಂದ ನಾನು ವಂಚಿತನಾದೆನು. ವೇದವನ್ನರಿಯದ ಬ್ರಾಹ್ಮಣನಿಗೆ ದಾನಮಾಡಿದುದು ನಷ್ಟವಾಗುವಂತೆ ಆ ಗಾಂಡೀವ ಧನುಸ್ಸು, ಅಕ್ಷಯವಾದ ಬಾಣಗಳು, ಆ ರಥ, ಆ ಕುದುರೆಗಳು ಎಲ್ಲವೂ ಒಂದೇ ಬಾರಿಗೆ ನಷ್ಟವಾಗಿ ಹೋಯಿತು. ಅದೃಷ್ಟವೇ ಪ್ರಬಲವಾದುದು. ನನ್ನೊಡನೆ ಆ ಮಹಾತ್ಮನಾದ ಕೃಷ್ಣನಿಲ್ಲದುದರಿಂದ ಶಕ್ತಿಹೀನರಾದ ನೀಚ ಜನರಿಗೂ ಜಯವುಂಟಾಯಿತು. ನನಗೆ ಹಿಂದಿದ್ದುದೇ ತೋಳುಗಳು, ಅದೇ ಮುಷ್ಟಿಯು, ಅದೇ ಸ್ಥಾನವು. ಹಿಂದಿದ್ದ ಅರ್ಜುನನೇ ನಾನು. ಆದರೂ ಪುಣ್ಯಪುರುಷನಾದ ಕೃಷ್ಣನಿಲ್ಲದುದರಿಂದ ಎಲ್ಲವೂ ಸಾರವಿಲ್ಲದುದಾಯಿತು. ನನಗೆ ಅರ್ಜುನತ್ವವೂ, ಭೀಮನಿಗೆ ಭೀಮತ್ವವೂ ಆ ಕೃಷ್ಣನಿಂದಲೇ ಉಂಟಾದುದು. ಅವನಿಲ್ಲದುದರಿಂದ ರಥಿಕರಲ್ಲಿ

॥ ಶ್ರೀ ಪರಾಶರಃ ॥

ಇತ್ಥಂ ವದನ್ ಯಯೌ ಜಿಷ್ಣುರಿಂದ್ರಪ್ರಸ್ಥಂ ಪುರೋತ್ತಮಂ ।
ಚಕಾರ ತತ್ರ ರಾಜಾನಂ ವಜ್ರಂ ಯಾದವನಂದನಂ ॥ ೩೪ ॥

ಸ ದದರ್ಶ ತತೋ ವ್ಯಾಸಂ ಫಲ್ಗುನಃ ಕಾನನಾಶ್ರಯಂ ।
ತಮುಪೇತ್ಯ ಮಹಾಭಾಗಂ ವಿನಯೇನಾಭ್ಯವಾದಯತ್ ॥ ೩೫ ॥

ತಂ ವಂದಮಾನಂ ಚರಣಾವವಲೋಕ್ಯ ಮುನಿಶ್ಚಿರಂ ।
ಉವಾಚ ವಾಕ್ಯಂ ವಿಜ್ಞಾಯಃ ಕಥಮದ್ಯ ತ್ವಮೀದೃಶಃ ॥ ೩೬ ॥

ಅವೀರಜೋಽನುಗಮನಂ ಬ್ರಹ್ಮಹತ್ಯಾ ಕೃತಾಥವಾ ।
ದೃಢಾಶಾಭಂಗದುಃಖೀವ ಭ್ರಷ್ಟಶ್ರೀರ್ಯೋಽಸಿ ಸಾಂಪ್ರತಂ ॥ ೩೭ ॥

ಸಾಂತಾನಿಕಾದಯೋ ವಾತೇ ಯಾಚಮಾನಾಃ ನಿರಾಕೃತಾಃ ।
ಅಗಮ್ಯಸ್ತ್ರೀರತಿರ್ವಾ ತ್ವಂ ಯೇನಾಸಿ ವಿಗತಪ್ರಭಃ ॥ ೩೮ ॥

ಶ್ರೀಕೃಷ್ಣನಾದ ನಾನು ಗೊಲ್ಲರಿಗೆ ಸೋತುಹೋದೆನು.” ಎಂದು ಹೇಳುತ್ತ ಅರ್ಜುನನು ಇಂದ್ರಪ್ರಸ್ಥಪಟ್ಟಣಕ್ಕೆ ಹೋಗಿ ಅಲ್ಲಿ ವಜ್ರನನ್ನು ರಾಜನನ್ನಾಗಿ ಮಾಡಿದನು.

೩೫ ೩೭. ಆಮೇಲೆ ಅರ್ಜುನನು ಇಂದ್ರಪ್ರಸ್ಥದಿಂದ ಹಸ್ತಿನಪಟ್ಟಣಕ್ಕೆ ಹೋಗುತ್ತ ದಾರಿಯಲ್ಲಿರುವ ಒಂದು ಕಾಡಿನಲ್ಲಿದ್ದ ವ್ಯಾಸಮಹರ್ಷಿಯನ್ನು ಕಂಡು ಆ ಮಹಾಮಹಿಮನ ಸಮೀಪಕ್ಕೆ ಹೋಗಿ ವಿನಯದಿಂದ ಗೋತ್ರ ಪ್ರವರಾದಿಗಳನ್ನು ಹೇಳಿಕೊಂಡು ನಮಸ್ಕಾರ ಮಾಡಿದನು. ತನ್ನ ಪಾದಕ್ಕೆ ನಮಸ್ಕರಿಸಿದ ಅವನನ್ನು ವ್ಯಾಸಮುನಿಯು ಬಹಳ ಕಾಲದವರೆಗೆ ನೋಡಿ ನೀನು ಹೀಗೆ ಮುಖದಲ್ಲಿ ಕಾಂತಿ ಹೀನನಾಗಿರಲು ಕಾರಣವೇನೆಂದು ಕೇಳುತ್ತ ಮಾತನಾಡಿದನು

೩೭-೪೧. “ಎಲೈ ಅರ್ಜುನನೇ! ಬಲವಾದ ಆಶೆಯನ್ನಿಟ್ಟುಕೊಂಡಿದ್ದವನಿಗೆ ಆಶಾಭಂಗವಾದರೆ ಎಷ್ಟು ದುಃಖವಾಗುವುದೋ ಅಂತಹ ದುಃಖವುಳ್ಳವನಂತೆ ನಿನ್ನ

ಭುಜ್ತೇಽಸ್ಮದಾಯ ವಿಪ್ರೇಭ್ಯೋ ಮೃಷ್ಟಮೇಕೋಽಥವಾ ಭವಾನ್ ।
ಕಂ ವಾ ಕೃಪಣವಿತ್ತಾನಿ ಹೃತಾನಿ ಭವತಾರ್ಜುನ ॥ ೬೯ ॥

ಕಚ್ಚಿನ್ನು ಗೂರ್ಪವಾತಸ್ಯ ಗೋಚರತ್ವಂ ಗತೋಽರ್ಜುನ ।
ದುಷ್ಪಚಕ್ಷುರ್ಹತೋ ವಾಪಿ ನಿಶ್ಶ್ರೀಕಃ ಕಥಮನ್ಯಥಾ ॥ ೪೦ ॥

ಸ್ಪೃಷ್ಟೋ ನಖಾಂಭಸಾ ವಾಥ ಘಟವಾರ್ಯ್ಯುಕ್ಷಿತೋಪಿ ವಾ ।
ಕೇನ ತ್ವಂ ವಾಪಿ ವಿಚ್ಛಾಯೋ ನ್ಯೂನ್ಯೆರ್ವಾ ಯುಧಿ ನಿರ್ಜಿತಃ ॥ ೪೧ ॥

॥ ಶ್ರೀ ಪರಾಶರಃ ॥

ತತಃ ಸಾಥೋರ್ಜೀ ವಿನಿಶ್ವಸ್ಯ ಶ್ರೂಯತಾಂ ಭಗವನ್ನಿತಿ ।
ಪ್ರೋಕ್ತ್ವಾ ಯಥಾವದಾಚಷ್ಟೇ ವ್ಯಾಸಾಯಾತ್ಮಪರಾಭವಂ ॥ ೪೨ ॥

॥ ಅರ್ಜುನಃ ॥

ಯದ್ಬಲಂ ಯಚ್ಚ ತತ್ತೇಜೋ ಯದ್ವೀರ್ಯಂ ಯಃ ಪರಾಕ್ರಮಃ ।
ಯಾಶ್ರೀಶ್ಚಾಯಾ ಚ ನ ಸ್ಸೋಸ್ಮಾನ್ಪರಿತ್ಯಜ್ಯ ಹರಿರ್ಗತಃ ॥ ೪೩ ॥

ಮುಖವು ಕಾಂತಿಹೀನವಾಗಿರುವುದು. ಕುರಿಗಳ ದೊಳನ್ನನುಸರಿಸಿ ಬಂದೆಯಾ? ಬ್ರಹ್ಮಹತ್ಯೆಯನ್ನು ಮಾಡಿದೆಯಾ? ಸಂತಾನಾರ್ಥವಾಗಿ ವಿವಾಹವಾಗಬೇಕೆಂದು ಯಾಚನೆ ಮಾಡಿದವರಿಗೆ ದ್ರವ್ಯವನ್ನು ಕೊಡದೆ ತಿರಸ್ಕರಿಸಿದೆಯಾ? ಅಥವಾ ಅಗಮ್ಯ ಸ್ತ್ರೀಗಮನವನ್ನು ಮಾಡಿದಯಾ? ನಿನ್ನ ಮುಖದಲ್ಲಿ ಕಾಂತಿಹೀನವಾಗಲು ಕಾರಣವೇನು? ಅರ್ಜುನನೇ ನೀನೊಬ್ಬನೇ ಮೃಷ್ಟಾನ್ನವನ್ನು ಬ್ರಾಹ್ಮಣನಿಗೆಕೊಡದೆ ಭೋಜನಮಾಡಿದೆಯಾ? ಮೊರದ ಗಾಳಿಗೇನಾದರೂ ಎದುರಾಗಿದ್ದೆಯಾ? ದುಷ್ಟರ ಕಣ್ಣಿನ ನೋಟಕ್ಕೆ ಸಿಕ್ಕಿದೆಯಾ? ಉಗುರು ನೀರು ನಿನ್ನ ಮೇಲೇನಾದರೂ ಬಿದ್ದಿತೇ? ಗಡಿಗೆಯ ನೀರನ್ನು ನಿನ್ನ ಮೇಲೆ ಯಾರಾದರೂ ಎರಚಿದರೇ? ದುರ್ಬಲರಿಂದ ಯುದ್ಧದಲ್ಲಿ ಸೋತೆಯಾ? ಯಾವ ಕಾರಣದಿಂದ ನಿನ್ನ ಮುಖವು ಕಾಂತಿಹೀನವಾಗಿರುವುದು? ಹೇಳು" ಎಂದು ಪ್ರಶ್ನೆ ಮಾಡಿದನು.

೪೨–೪೩. ಅರ್ಜುನನು ನಿಟ್ಟುಸಿರನ್ನು ಬಿಟ್ಟು ಮಹಾತ್ಮರೇ ಕೇಳಿರಿ. ಎಂದು ತನಗಾದ ಅಪಮಾನವನ್ನು ವಿಸ್ತಾರವಾಗಿ ಹೇಳಿದನು. ಎಂತೆಂದರೆ:—ನಮಗೆ ಬಲ, ತೇಜಸ್ಸು, ಉತ್ಸಾಹ, ಪರಾಕ್ರಮ, ಸಂಪತ್ತು, ಕಾಂತಿ ಇವುಗಳ ಸ್ವರೂಪನಾಗಿದ್ದ

ಈಶ್ವರೇಣಾಪಿ ಮಹತಾ ಸ್ಮಿತಪೂರ್ವಾಭಿಭಾಷಿಣಾ ।
ಹೀನಾ ವಯಂ ಮುನೇ ತೇನ ಜಾತಾ ಸ್ತೃಣಮಯಾ ಇವ ॥ ೪೪ ॥

ಅಸ್ತ್ರಾಣಾಂ ಸಾಯಕಾನಾಂ ಚ ಗಾಂಡೀವಸ್ಯ ತಥಾ ಮಮ ।
ಸಾರಥಾಯಾ ಭವನ್ಮೂರ್ತಿಸ್ಸ ಗತಃ ಪುರುಷೋತ್ತಮಃ ॥ ೪೫ ॥

ಯಸ್ಯಾವಲೋಕನಾದಸ್ಮಾನ್ ಶ್ರೀರ್ಜಯಸ್ಸಂಪದುನ್ನತಿಃ ।
ನ ತತ್ಯಾಜ ಸ ಗೋವಿಂದಸ್ತ್ಯಕ್ತ್ವಾಸ್ಮಾನ್ಭಗವಾನ್ ಗತಃ ॥ ೪೬ ॥

ಭೀಷ್ಮದ್ರೋಣಾಂಗರಾಜಾದ್ಯಾಸ್ತಥಾ ದುರ್ಯೋಧನಾದಯಃ ।
ಯತ್ಪ್ರಭಾವೇನ ನಿರ್ದಗ್ಧಾಸ್ಸ ಕೃಷ್ಣಸ್ತ್ಯಕ್ತವಾನ್ಭುವಂ ॥ ೪೭ ॥

ನಿರ್ಯೌವನಾ ಗತಶ್ರೀಕಾ ನಷ್ಟಚ್ಛಾಯೇವ ಮೇದಿನೀ ।
ವಿಭಾತಿ ತಾತ ನೈಕೋಽಹಂ ವಿರಹೇ ತಸ್ಯ ಚಕ್ರಿಣಃ ॥ ೪೮ ॥

ಮಹಾತ್ಮನಾದ ಕೃಷ್ಣನು ನಮ್ಮನ್ನು ಬಿಟ್ಟು ಹೋದನು. ಮಹಾತ್ಮನಾದರೂ ಸಾಮಾನ್ಯನಂತೆ ಇದ್ದು ಸ್ನೇಹದಿಂದ ನಮ್ಮಲ್ಲಿ ಮಾತನಾಡುತ್ತಿದ್ದ ಕೃಷ್ಣನಿಲ್ಲದುದರಿಂದ ನಾವು ಹುಲ್ಲಿನಿಂದ ಮಾಡಿದ ಬೊಂಬೆಗಳಂತಾಗಿರುವೆವು ನನ್ನ ಮಂತ್ರಾಸ್ತ್ರಗಳಿಗೂ ಬಾಣಗಳಿಗೂ ಗಾಂಡೀವಕ್ಕೂ ಬಲವನ್ನುಂಟುಮಾಡುವ ಮೂರ್ತಿರೂಪನಾದ ಪುರುಷೋತ್ತಮನು ನಮ್ಮನ್ನು ಬಿಟ್ಟುಹೋದನು. ಅವನ ದಯಾದೃಷ್ಟಿಯಿಂದ ಸಂಪತ್ತು, ಜಯ, ಐಶ್ವರ್ಯ, ಅಭಿವೃದ್ಧಿ ಇವುಗಳು ನಮ್ಮನ್ನು ಬಿಟ್ಟಿರಲಿಲ್ಲ ಅಂತಹ ಭಗವಂತನಾದ ಗೋವಿಂದನು ನಮ್ಮನ್ನು ಬಿಟ್ಟು ಹೋದನು. ಯಾವನ ಮಹಿಮೆಯಿಂದ ಭೀಷ್ಮ, ದ್ರೋಣ, ಕರ್ಣ, ದುರ್ಯೋಧನಾದಿಗಳು ನಾಶಹೊಂದಿದರೋ ಆ ಕೃಷ್ಣನು ಭೂಮಿಯನ್ನು ಬಿಟ್ಟನು. ತಾತನೇ! ಚಕ್ರಾಯುಧವನ್ನು ಧರಿಸಿದ ಕೃಷ್ಣನ ವಿರಹದಿಂದ ನಾನೊಬ್ಬನೇ ಅಲ್ಲ. ಭೂಮಿಯೇ ಶ್ರಾಯವನ್ನೂ ಸಂಪತ್ತನ್ನೂ ಕಳೆದುಕೊಂಡು ಕಾಂತಿಹೀನವಾಗಿದೆ. ಯಾವ ಕೃಷ್ಣನ ಮಹಿಮೆಯಿಂದ ಭೀಷ್ಮಾದಿಗಳು ಅಗ್ನಿಸ್ವರೂಪನಾದ ನನ್ನಲ್ಲಿ ಚಿಟ್ಟೆಯ ಹುಳುಗಳಂತಾದರೋ

ಯಸ್ಯ ಪ್ರಭಾವಾದ್ಭೀಷ್ಮಾದ್ಯೈರ್ಮಯ್ಯಗ್ನೌ ತಲಧಾಯಿತಂ ।
ವಿನಾ ತೇನಾದ್ಯ ಕೃಷ್ಣೇನ ಗೋಪಾಲ್ಯೇರಸ್ಮಿ ನಿರ್ಜಿತಃ ॥ ೪೯ ॥

ಗಾಂಡೀವಃ ತ್ರಿಷು ಲೋಕೇಷು ಖ್ಯಾತಿಂ ಯದನುಭಾವತಃ ।
ಗತಸ್ತೇನ ವಿನಾಭೀರಲಗುಡ್ಯೈಸ್ಸ ತಿರಸ್ಕೃತಃ ॥ ೫೦ ॥

ಸ್ತ್ರೀಸಹಸ್ರಾಣ್ಯನೇಕಾನಿ ಮುನ್ನಾಥಾನಿ ಮಹಾಮುನೇ ।
ಯತತೋ ಮಮ ನೀತಾನಿ ದಸ್ಯುಭಿರ್ಲಗುಡಾಯುಧೈಃ ॥ ೫೧ ॥

ಅನೀಯಮಾನಮಾಭೀರೈಃ ಕೃಷ್ಣಕೃಷ್ಣಾವರೋಧನಂ ।
ಹೃತಂ ಯಷ್ಟಿಪ್ರಹರಣೈಃ ಪರಿಭೂಯ ಬಲಂ ಮಮ ॥ ೫೨ ॥

ನಿಶ್ಶ್ರೀಕತಾ ನ ಮೇ ಚಿತ್ರಂ ಯಜ್ಜೀವಾಮಿ ತದದ್ಭುತಂ ।
ನೀಚಾವಮಾನಪಂಕಾಂಕೀ ನಿರ್ಲಜ್ಜೋಽಸ್ಮಿ ಪಿತಾಮಹ ॥ ೫೩ ॥

ಆ ಕೃಷ್ಣನಿಲ್ಲದುದರಿಂದ ಈ ದಿನ ನಾನು ಧನಕಾಯುವ ಗೊಲ್ಲರಿಗೆ ಸೋತುಹೋದೆನು ಯಾವನ ಮಹಿಮೆಯಿಂದ ನನ್ನ ಗಾಂಡೀವವು ಮೂರು ಲೋಕದಲ್ಲಿಯೂ ಪ್ರಸಿದ್ಧಿ ಹೊಂದಿದ್ದಿತೋ ಅವನಿಲ್ಲದುದರಿಂದ ಗೊಲ್ಲರು ದೊಣ್ಣೆಗಳಿಂದ ನನ್ನನ್ನು ತಿರಸ್ಕರಿಸಿದರು. ಮಹಾಮುನಿಯೇ ಅನೇಕ ಸಾವಿರ ಸ್ತ್ರೀಯರನ್ನು ರಕ್ಷಿಸುವುದಕ್ಕೆ ನಾನು ಪ್ರಯತ್ನಪಡುತ್ತಿದ್ದರೂ ದೊಣ್ಣೆಗಳನ್ನೇ ಆಯುಧವಾಗಿ ಧರಿಸಿದ ಕಳ್ಳರು ಆ ಸ್ತ್ರೀಯರನ್ನೆತ್ತಿಕೊಂಡು ಹೋದರು. ಕೃಷ್ಣನ ರಾಣಿವಾಸದ ಸ್ತ್ರೀಯರನ್ನು ನಾನು ಕರೆದುಕೊಂಡು ಬರುತ್ತಿದ್ದರೆ ದೊಣ್ಣೆಯಿಂದ ಹೊಡೆದು ನನ್ನ ಬಲವನ್ನು ಅಪಮಾನಗೊಳಿಸಿ ಆ ಸ್ತ್ರೀಯರನ್ನು ಅಪಹರಿಸಿದರು. ನಾನು ಕಾಂತಿಹೀನನಾಗಿರುವುದು ಆಶ್ಚರ್ಯವೇನಲ್ಲ. ನಾನು ಜೀವಿಸಿರುವುದೇ ಆಶ್ಚರ್ಯವು. ಪಿತಾಮಹನೇ! ನೀಚರು ಮಾಡಿದ ಅಪಮಾನವೆಂಬ ಕೆಸರಿನ ಗುರುತುಳ್ಳ ನಾನು ನಾಚಿಕೆಯಿಲ್ಲದವನಾಗಿರುತ್ತೇನೆ" ಎಂದು ಹೇಳಿದನು.

॥ ವ್ಯಾಸ ಉವಾಚ ॥

ಅಲಂ ತೇ ವ್ರೀಡಯಾ ಪಾರ್ಥ ನ ತ್ವಂ ಶೋಚಿತುಮರ್ಹಸಿ ।
ಅವೇಹಿ ಸರ್ವಭೂತೇಷು ಕಾಲಸ್ಯಗತಿ ರೀದೃಶೀ ॥ ೫೪

ಕಾಲೋ ಭವಾಯ ಭೂತಾನಾಮಭವಾಯ ಚ ಪಾಂಡವ ।
ಕಾಲಮೂಲಮಿದಂ ಜ್ಞಾತ್ವಾ ಭವ ಸ್ಥೈರ್ಯಪರೋ೭ರ್ಜುನ ॥ ೫೫ ॥

ನದ್ಯಸ್ಸಮುದ್ರಾ ಗಿರಯಸ್ಸಕಲಾ ಚ ವಸುಂಧರಾ ।
ದೇವಾ ಮನುಷ್ಯಾಃ ಪಶವಸ್ತರವಶ್ಚ ಸರೀಸೃಪಾಃ ॥ ೫೬ ॥

ಸೃಷ್ಟಾಃ ಕಾಲೇನ ಕಾಲೇನ ಪುನರ್ಯಾಸ್ಯಂತಿ ಸಂಕ್ಷಯಂ ।
ಕಾಲಾತ್ಮಕಮಿದಂ ಸರ್ವಂ ಜ್ಞಾತ್ವಾ ಶಮಮವಾಪ್ನುಹಿ ॥ ೫೭ ॥

ಕಾಲಸ್ವರೂಪೀ ಭಗವಾನ್ ಕೃಷ್ಣಃ ಕಮಲಲೋಚನಃ ।
ಯಚ್ಚಾತ್ಥ ಕೃಷ್ಣವಾಹಾತ್ಮ್ಯಂ ತತ್ತಥೈವ ಧನಂಜಯ ॥ ೫೮ ॥

೫೪-೫೮. ವ್ಯಾಸರು ಹೇಳುವರು :— "ಅರ್ಜುನನೇ ! ನಾಚಿಕೆಪಡಬೇಡ ದುಃಖವನ್ನು ಬಿಡು. ಸಮಸ್ತಪ್ರಾಣಿಗಳ ವಿಷಯದಲ್ಲಿಯೂ ಕಾಲಗತಿಯೇ ಹೀಗಿರುವುದು. ಪಾಂಡು ಪುತ್ರನೇ ! ಕಾಲವೇ ಸಕಲ ಭೂತಗಳ ಹುಟ್ಟು ಸಾವುಗಳಿಗೆ ಕಾರಣವಾಗಿರುವುದು. ಈ ಪ್ರಪಂಚವೆಲ್ಲವೂ ಕಾಲ ಕಾರಣವಾದುದೆಂದು ತಿಳಿದು ಸ್ಥಿರತೆಯನ್ನು ಹೊಂದು. ನದಿಗಳು, ಸಮುದ್ರಗಳು, ಪರ್ವತಗಳು, ಸಮಸ್ತ ಭೂಮಂಡಲವೂ, ದೇವತೆಗಳೂ, ಮನುಷ್ಯರೂ, ಪಶುಗಳೂ, ಮರಗಳೂ, ಹಾವು ಮುಂತಾದ ಪ್ರಾಣಿಗಳೂ, ಕಾಲದಿಂದಲೇ ಹುಟ್ಟಿ ಕಾಲದಿಂದಲೇ ನಾಶವನ್ನು ಪಡೆವುವು. ಈ ಪ್ರಪಂಚವೆಲ್ಲವೂ ಕಾಲಸ್ವರೂಪವೆಂದು ತಿಳಿದು ಶಾಂತಿಯನ್ನು ಹೊಂದು ಧನಂಜಯನೇ ! ಕಮಲನೇತ್ರನಾದ ಕೃಷ್ಣನು ಮಹಾಮಹಿಮನೂ, ಕಾಲಸ್ವರೂಪನೂ, ಆದ ಭಗವಂತನೆಂದು ಕೃಷ್ಣನ ಮಹಿಮೆಯನ್ನು ನೀನೇ ಹೇಳಿದೆ. ಅದು ನಿಜವಾದುದು. ಭೂಭಾರವನ್ನು ಕಡಿಮೆಮಾಡುವುದಕ್ಕಾಗಿ ಅವನು ಭೂಮಿಗೆ

ಭಾರಾವತಾರಕಾರ್ಯಾರ್ಥಮವತೀರ್ಣಸ್ಯ ಮೇದಿನೀಂ ।
ಭಾರಾಕ್ರಾಂತಾ ಧರಾ ಯಾತಾ ದೇವಾನಾಂ ಸಮಿತಿಂ ಪುರಾ ॥ ೫೯ ॥

ತದರ್ಥಮವತೀರ್ಣೋಽಸೌ ಕಾಲರೂಪೀ ಜನಾರ್ದನಃ ।
ತಚ್ಚ ನಿಷ್ಪಾದಿತಂ ಕಾರ್ಯಮಶೇಷಾ ಭೂಭುಜೋ ಹತಾಃ ॥ ೬೦ ॥

ವೃಷ್ಣ್ಯಂಧಕಕುಲಂ ಸರ್ವಂ ತಥಾ ಸಾರ್ಥೋಽಪಸಂಹೃತಂ ।
ನ ಕಿಂಚಿದನ್ಯತ್ಕರ್ತವ್ಯಂ ತಸ್ಯ ಭೂಮಿತಲೇ ಪ್ರಭೋಃ ॥
ಅತೋ ಗತಸ್ಯ ಭಗವಾನ್ ಕೃತಕೃತ್ಯೋ ಯಥೇಚ್ಛಯಾ ॥ ೬೧ ॥

ಸೃಷ್ಟಿಂ ಸರ್ಗೇ ಕರೋತ್ಯೇಷ ದೇವದೇವಃಸ್ಥಿತೌ ಸ್ಥಿತಿಂ ।
ಅಂತೇಽಂತಾಯಸಮರ್ಥೋಽಯಂ ಸಾಂಪ್ರತಂ ನೈ ಯಥಾಗತಃ ॥ ೬೨ ॥

ಅವತರಿಸಿದನು. ಹಿಂದೆ ದುಷ್ಕರ ಭಾರದಿಂದ ದುಃಖಗೊಂಡ ಭೂದೇವಿಯು ದೇವತೆಗಳ ಸಭೆಗೆ ಹೋದಳು, ಅವಳ ದುಃಖನಿವಾರಣೆಗಾಗಿ ಕಾಲರೂಪನಾದ ವಿಷ್ಣುವು ಅವತಾರಮಾಡಿ ಅನೇಕರಾಜರನ್ನು ಕೊಂದು ॥ ಕಾರ್ಯವನ್ನು ನೆರವೇರಿಸಿದನು. ಹಾಗೆಯೇ ವೃಷ್ಣಿಗಳು, ಅಂಧಕರು, ಮುಂತಾದ ಯಾದವರ ವಂಶವನ್ನೂ ಉಪಸಂಹಾರಮಾಡಿದನು. ಇನ್ನು ಭೂಮಿಯಲ್ಲಿ ಅವನು ಮಾಡಬೇಕಾದ ಕೆಲಸವೇನೂ ಉಳಿಯಲಿಲ್ಲ. ಆದುದರಿಂದ ಆ ಭಗವಂತನು ಕೃತಕೃತ್ಯನಾಗಿ ತನ್ನ ಇಚ್ಛೆಯಂತೆ ಹೊರಟುಹೋದನು.

೬೨-೬೩ ಆ ದೇವದೇವನಾದ ವಿಷ್ಣುವು ಸೃಷ್ಟಿಕಾಲದಲ್ಲಿ ಸೃಷ್ಟಿಯನ್ನೂ ರಕ್ಷಣಕಾಲದಲ್ಲಿ ರಕ್ಷಣೆಯನ್ನೂ ಪ್ರಳಯಕಾಲದಲ್ಲಿ ನಾಶವನ್ನೂ ಮಾಡಲು ಸಮರ್ಥನಾಗಿರುವನು. ಆದುದರಿಂದ ಅವನು ಈ ಕಾಲಕ್ರಮಾನುಸಾರವಾಗಿ ತನ್ನ ಇಚ್ಛೆಯಂತೆ ಸ್ವರ್ಗಕ್ಕೆ ಹೊರಟುಹೋದನು. ಆ ಕಾರಣದಿಂದ ಎಲೈ ಅರ್ಜುನನೇ! ನೀನು

ತಸ್ಮಾತ್ಪಾರ್ಥ ನ ಸಂತಾಪಸ್ತ್ವಯಾ ಕಾರ್ಯಃ ಪರಾಭವೇ ।
ಭವಂತಿ ಭಾವಾಃ ಕಾಲೇಷು ಪುರುಷಾಣಾಂ ಯತಸ್ಸ್ತುತಿಃ ॥ ೬೩ ॥

ತ್ವಯ್ಯೇಕೇನ ಹತಾ ಭೀಷ್ಮದ್ರೋಣಕರ್ಣಾದಯೋ ರಣೇ ।
ತೇಷಾಮರ್ಜುನ ಕಾಲೋತ್ಥಃ ಕಿಂ ನ್ಯೂನಾಭಿಭವೋ ನ ಸಃ ॥ ೬೪ ॥

ವಿಷ್ಣೋಸ್ತಸ್ಯ ಪ್ರಭಾವೇನ ಯಥಾ ತೇಷಾಂ ಪರಾಭವಃ ।
ಕೃತಸ್ತಥೈವ ಭವತೋ ದಸ್ಯುಭ್ಯಸ್ಸ ಪರಾಭವಃ ॥ ೬೫ ॥

ಸ ದೇವೇಶಶ್ಶರೀರಾಣಿ ಸಮಾವಿಶ್ಯ ಜಗತ್ಸ್ಥಿತಿಂ ।
ಕರೋತಿ ಸರ್ವಭೂತಾನಾಂ ನಾಶಮಂತೇ ಜಗತ್ಪತಿಃ ॥ ೬೬ ॥

ಭಗೋದಯೇ ತೇ ಕೌಂತೇಯ ಸಹಾಯೋಽಭೂಜ್ಜನಾರ್ದನಃ ।
ತಥಾಂತೇ ತ್ವದ್ವಿಪಕ್ಷಾಸ್ತೇ ಕೇಶವೇನ ವಿನಾಶಿತಾಃ ॥ ೬೭ ॥

ಸೋತುದಕ್ಕೆ ಸಂತಾಪಪಡಬೇಡ. ಪುರುಷರಿಗೆ ಅವರ ಅಭ್ಯುದಯ ಕಾಲದಲ್ಲಿ ಲೋಕದ ಜನರಿಗೆ ಅವರನ್ನು ಸ್ತೋತ್ರಮಾಡುವ ಸ್ವಭಾವವುಂಟಾಗುವುದು. ನೀನೊಬ್ಬನೇ ಯುದ್ಧದಲ್ಲಿ ಭೀಷ್ಮ, ದ್ರೋಣ, ಕರ್ಣಾದಿಗಳನ್ನು ಕೊಲ್ಲಲಿಲ್ಲವೇ? ಅವರಿಗೆ ಕಾಲದ ಮಹಿಮೆಯಿಂದುಂಟಾದ ಆ ಸೋಲು ಕಡಿಮೆಯಾದುದೇ? ಅದು ತಿರಸ್ಕಾರ ಕಾರಣ ವಲ್ಲವೇ? ವಿಷ್ಣುವಿನ ಆ ಮಹಿಮೆಯಿಂದ ಅವರಿಗೆ ಹೇಗೆ ಅಪಜಯವಾಯಿತೋ ಹಾಗೆಯೇ ನಿನಗೂ ಕಳ್ಳರಿಂದ ಅಪಜಯವುಂಟಾಯಿತು.

೬೬-೭೦. ದೇವದೇವನಾದ ವಿಷ್ಣುವು ಸಮಸ್ತ ಶರೀರದಲ್ಲಿಯೂ ಇದ್ದು ಕೊಂಡು ಜಗದೀಶ್ವರನಾಗಿ ಜಗತ್ತನ್ನು ರಕ್ಷಿಸುತ್ತಿರುವನು. ಕೊನೆಯಲ್ಲಿ ಸಮಸ್ತ ಭೂತಗಳನ್ನೂ ನಾಶಮಾಡುವನು. ಕುಂತೀಪುತ್ರನೇ! ನಿನ್ನ ಭಾಗ್ಯೋದಯ ಕಾಲದಲ್ಲಿ ಕೃಷ್ಣನು ನಿನಗೆ ಸಹಾಯಕನಾಗಿದ್ದನು. ಹಾಗೆಯೇ ನಿನ್ನ ಶತ್ರುಗಳ ಭಾಗ್ಯನಾಶಕಾಲದಲ್ಲಿ ಕೃಷ್ಣನೇ ಅವರನ್ನು ನಾಶಮಾಡಿದನು. ಭೀಷ್ಮನೊಡನೆ ಕೂಡಿದ

ಕಃ ಶ್ರದ್ಧಧ್ಯಾತ್ ಸಗಾಂಗೇಯಾನ್ ಹನ್ಯಾಸ್ತ್ವಂ ಕೌರವಾನಿತಿ ।
ಅಭೀರೇಭ್ಯಶ್ಚ ಭವತಃ ಕಶ್ಯಾದ್ಧ್ಯಾತ್ಪರಾಭವಂ ॥ ೬೮ ॥

ಪಾರ್ಥೈತತ್ಸರ್ವಭೂತಸ್ಯ ಹರೇರ್ಲೀಲಾವಿಚೇಷ್ಟಿತಂ ।
ತ್ವಯಾ ಯತ್ಕೌರವಾ ಧ್ವಸ್ತಾ ಯದಾಭೀರೈರ್ಭವಾನ್ ಜಿತಃ ॥ ೬೯ ॥

ಗೃಹೀತಾ ದಸ್ಯುಭಿರ್ಯಾಶ್ಚ ಭವಾನ್ ಶೋಚತಿ ತಾಸ್ಕ್ರಿಯಃ ।
ತದಪ್ಯಹಂ ಯಥಾವೃತ್ತಂ ಕಥಯಾಮಿ ತವಾರ್ಜುನ ॥ ೭೦ ॥

ಅಷ್ಟಾವಕ್ರೇಃ ಪುರಾ ವಿಪ್ರೋ ಜಲವಾಸರತೋಽಭವತ್ ।
ಬಹೂನ್ ವರ್ಷಗಣಾನ್ಪಾರ್ಥ ಧ್ಯಾಯನ್ ಬ್ರಹ್ಮಸನಾತನಂ ॥ ೭೧ ॥

ಜಿತೇಷ್ವಸುರಸಂಘೇಷು ಮೇರುಪೃಷ್ಠೇ ಮಹೋತ್ಸವಃ ।
ಬಭೂವ ತತ್ರ ಗಚ್ಛಂತ್ಯೋ ದದೃಶುಸ್ತಂ ಸುರಸ್ತ್ರಿಯಃ ॥ ೭೨ ॥

ಕೌರವರನ್ನು ನೀನು ಕೊಲ್ಲುವೆಯೆಂದು ಯಾರು ನಂಬಿದ್ದರು? ಗೊಲ್ಲರಿಂದ ನಿನಗೆ ಸೋಲಾಗುವುದೆಂದು ಯಾರು ತಿಳಿದಿದ್ದರು? ನೀನು ಕೌರವರನ್ನು ಕೊಂದೆ. ಗೊಲ್ಲರು ನಿನ್ನನ್ನು ಜಯಿಸಿದರು. ಅರ್ಜುನನೇ! ಇವೆಲ್ಲವೂ ಸರ್ವಾತ್ಮಕನಾದ ವಿಷ್ಣುವಿನ ಲೀಲೆಯು. ಕಳ್ಳರು ಹಿಡಿದುಕೊಂಡು ಹೋದ ಸ್ತ್ರೀಯರಿಂಗಾಗಿ ನೀನು ದುಃಖಪಡುವೆಯಲ್ಲವೇ? ಅದರ ಪೂರ್ವ ವೃತ್ತಾಂತವನ್ನು ನಿನಗೆ ಹೇಳುವೆನು ಕೇಳು.

೭೧-೭೫. "ಹಿಂದೆ ಅಷ್ಟಾವಕ್ರನೆಂಬ ಮುನಿಯು ನೀರಿನಲ್ಲಿ ನಿಂತು ಅನೇಕ ವರ್ಷಗಳ ಪರ್ಯಂತವಾಗಿ ಬ್ರಹ್ಮನನ್ನು ಧ್ಯಾನಿಸುತ್ತಿದ್ದನು. ರಾಕ್ಷಸರನ್ನೆಲ್ಲ ಜಯಿಸಿದ ಮೇಲೆ ದೇವತೆಗಳು ಮೇರುಪರ್ವತದ ತಪ್ಪಲಿನಲ್ಲಿ ಒಂದು ಮಹೋತ್ಸವವನ್ನು ಮಾಡಿದರು. ಅಲ್ಲಿಗೆ ಹೋಗುತ್ತಿದ್ದ ದೇವಸ್ತ್ರೀಯರು ಆ ಮುನಿಯನ್ನು ನೋಡಿದರು. ರಂಭೆ, ತಿಲೋತ್ತಮೆ ಮುಂತಾದ ಅಪ್ಸರ ಸ್ತ್ರೀಯರು ಸಾವಿರಾರು ಬಗೆಯಲ್ಲಿ

ರಂಭಾತಿಲೋತ್ತಮಾದ್ಯಾಸ್ತು ಶತಶೋಽಥ ಸಹಸ್ರಶಃ ।
ತುಷ್ಟುವುಸ್ತಂ ಮಹಾತ್ಮಾನಂ ಪ್ರಶಶಂಸುಶ್ಚ ಪಾಂಡವ ॥ ೭೩ ॥

ಅಕೇಂತಮಗ್ನಂ ಸಲಿಲೇ ಜಟಾಧಾರವಹಂ ಮುನಿಂ ।
ವಿನಯಾವನತಾಶ್ಚೈನಂ ಪ್ರಣೇಮುಸ್ತೋತ್ರ ತತ್ಪರಾಃ ॥ ೭೪ ॥

ಯಥಾ ಯಥಾ ಪ್ರಸನ್ನೋಽಸೌ ತುಷ್ಟುವುಸ್ತಂ ತಥಾ ತಥಾ ।
ಸರ್ವಾಸ್ತಾಃ ಕೌರವಶ್ರೇಷ್ಠ ತಂ ವರಿಷ್ಠಂ ದ್ವಿಜನ್ಮನಾಂ ॥ ೭೫ ॥

॥ ಅಷ್ಟಾವಕ್ರಃ ॥

ಪ್ರಸನ್ನೋಽಹಂ ಮಹಾಭಾಗಾ ಭವತೀನಾಂ ಯದಿಷ್ಯತೇ ।
ಮತ್ತಸ್ತದ್ದ್ರಿಯತಾಂ ಸರ್ವಂ ಪ್ರದಾಸ್ಯಾಮ್ಯತಿದುರ್ಲಭಂ ॥ ೭೬ ॥

ರಂಭಾತಿಲೋತ್ತಮಾದ್ಯಾಸ್ತಂ ವೈದಿಕ್ಯೋಽಪ್ಸರಸೋಽಬ್ರುವನ್ ।
ಪ್ರಸನ್ನೇ ತ್ವಯ್ಯಹರ್ಯಾಪ್ತಂ ಕಿಮುಸ್ಮಾಕಮಿತಿ ದ್ವಿಜ ॥ ೭೭ ॥

ಆ ಮಹಾತ್ಮನನ್ನು ಸೋಗಲಿದರು. ಮತ್ತು ಕುಶಿಗೆಯವರೆಗೆ ಶರೀರವನ್ನು ನೀರಿನಲ್ಲಿ ಮುಳುಗಿಸಿ ಜಟಾಧಾರಿಯಾಗಿದ್ದ ಮುನಿಗೆ ವಿನಯದಿಂದ ಸ್ತೋತ್ರವಾಕ್ಯಗಳಿಂದ ನಮಸ್ಕರಿಸಿದರು. ಕುರುಗಳಲ್ಲಿ ಶ್ರೇಷ್ಠನಾದ ಅರ್ಜುನನೇ! ಆ ಸ್ತ್ರೀಯರೆಲ್ಲರೂ ಬ್ರಾಹ್ಮಣಶ್ರೇಷ್ಠನಾದ ಆವನು ಪ್ರಸನ್ನನಾಗುವವರೆಗೂ ಸ್ತೋತ್ರವನ್ನು ಮಾಡಿದರು.

೭೬-೭೦. ಅಷ್ಟಾವಕ್ರನು ಪ್ರಸನ್ನನಾಗಿ ಅವರನ್ನು ಕುರಿತು "ಪುಣ್ಯವತಿಯರಾದ ಸ್ತ್ರೀಯರೇ! ನಿಮ್ಮ ವಿಷಯದಲ್ಲಿ ನಾನು ಸಂತೋಷಪಟ್ಟಿರುವೆನು. ನಿಮಗಿಷ್ಟವಾದ ವರವನ್ನು ಕೇಳಿರಿ. ಅದು ಅಸಾಧ್ಯವಾದುದಾರೂ ಕೊಡುವೆನು" ಎಂದನು. ವೇದ ಪ್ರಸಿದ್ಧರಾದ ರಂಭೆ, ತಿಲೋತ್ತಮೆ ಮುಂತಾದ ಅಪ್ಸರಸ್ತ್ರೀಯರು ಆ ಮುನಿಯನ್ನು ಕುರಿತು "ನೀನು ಪ್ರಸನ್ನನಾದ ಮೇಲೆ ನಮಗೆ ಎಲ್ಲವೂ ಸಿದ್ಧಿಸಿದಂತಾ

ಇತಿವಾಸ್ಯಬ್ರುವನ್ ವಿಪ್ರ ಪ್ರಸನ್ನೋ ಭಗವಾನ್ ಯದಿ ।
ತದಿಚ್ಛಾಮಃ ಪತಿಂ ಪ್ರಾಪ್ತುಂ ವಿಪ್ರೇಂದ್ರ ಪುರುಷೋತ್ತಮಂ ॥ ೭೫ ॥

॥ ವ್ಯಾಸ ಉವಾಚ ॥

ಏವಂ ಭವಿಷ್ಯತೀತ್ಯುಕ್ತ್ವಾ ಹ್ಯುತ್ತತಾರ ಜಲಾನ್ಮುನಿಃ ।
ತಮುತ್ತೀರ್ಣಂ ಚ ದದೃಶುರ್ವಿರೂಪಂ ವಕ್ರಮಷ್ಟಧಾ ॥ ೭೯ ॥

ತಂ ದೃಷ್ಟ್ವಾ ಗೂಹಮಾನಾನಾಂ ಯಾಸಾಂ ಹಾಸಸ್ಸ್ಫುಟೋಽಭವತ್ ।
ತಾಶ್ಯಶಾಪ ಮುನಿಃ ಕೋಪಮವಾಪ್ಯ ಕುರುನಂದನ ॥ ೮೦ ॥

ಯಸ್ಮಾದ್ವಿಕೃತರೂಪಂ ಮಾಂ ಮತ್ವಾ ಹಾಸಾವಮಾನನಾ ।
ಭವತೀಭಿಃ ಕೃತಾ ತಸ್ಮಾದೇತಂ ಶಾಪಂ ದದಾಮಿ ವಃ ॥ ೮೧ ॥

ಯಿತು" ಎಂದರು. ಮಿಕ್ಕವರು "ಎಲೈ ಬ್ರಾಹ್ಮಣನೇ! ನೀನು ಪ್ರಸನ್ನನಾಗಿದ್ದರೆ ಪುರುಷೋತ್ತಮನು ನಮಗೆ ಪತಿಯಾಗಬೇಕೆಂದು ಅಪೇಕ್ಷಿಸುವೆವು. ಆ ವರವನ್ನು ಕರುಣಿಸಬೇಕು." ಎಂದು ಕೇಳಿಕೊಂಡರು. ಅಷ್ಟಾವಕ್ರನು ಹಾಗೆಯೇ ಆಗಲೆಂದು ಹೇಳಿ ನೀರಿನಿಂದ ಎದ್ದು ಮೇಲಕ್ಕೆ ಬಂದನು. ಹಾಗೆ ಬಂದ ಅವನು ಎಂಟು ಬಗೆಯಲ್ಲಿ ಅವನ ಶರೀರವು ವಕ್ರವಾಗಿರುವುದನ್ನು ಅವರು ನೋಡಿದರು. ಅದನ್ನು ನೋಡಿದುದರಿಂದ ತಮ್ಮಲ್ಲಿಯುಂಟಾದ ಹಾಸ್ಯದಿಂದ ನಗುವುದನ್ನು ಮುಚ್ಚುವ ಪ್ರಯತ್ನದಲ್ಲಿ ಯಾರ ನಗುವು ವ್ಯಕ್ತವಾಯಿತೋ ಅವರಿಗೆ ಮುನಿಯು ಕೋಪದಿಂದ ಶಾಪವನ್ನು ಕೊಟ್ಟನು.

೮೧-೮೫. ಶಾಪವೇನೆಂದರೆ:— "ಯಾವ ಕಾರಣದಿಂದ ನೀವು ನನ್ನನ್ನು ವಿಕಾರವಾದ ರೂಪವುಳ್ಳವನೆಂದು ಹಾಸ್ಯಮಾಡಿ ಅವಮಾನಪಡಿಸಿದಿರೋ ಆ ಕಾರಣದಿಂದ ನನ್ನ ಅನುಗ್ರಹದಿಂದ ನೀವು ಪುರುಷೋತ್ತಮನನ್ನು

ಮತ್ಪ್ರಸಾದೇನ ಭರ್ತಾರಂ ಲಬ್ಧ್ವಾ ತು ಪುರುಷೋತ್ತಮಂ ।
ಮಚ್ಛಾಪೋಪಹತಾಸ್ತ್ವರ್ವಾ ದಸ್ಯುಹಸ್ತಂ ಗಮಿಷ್ಯಥ ॥ ೮೨ ॥

॥ ವ್ಯಾಸ ಉವಾಚ ॥

ಇತ್ಯುದೀರಿತಮಾಕರ್ಣ್ಯ ಮುನಿಸ್ತಾಭಿಃ ಪ್ರಸಾದಿತಃ ।
ಪುನಸ್ಸುರೇಂದ್ರಲೋಕಂ ವೈ ಪ್ರಾಹ ಭೂಯೋ ಗಮಿಷ್ಯಥ ॥ ೮೩ ॥

॥ ವ್ಯಾಸ ಉವಾಚ ॥

ಏವಂ ತಸ್ಯ ಮುನೇಶ್ಶಾಪಾದಷ್ಟಾವಕ್ರಸ್ಯ ಚಕ್ರಿಣಂ ।
ಭರ್ತಾರಂ ಪ್ರಾಪ್ಯ ತಾ ಯಾತಾ ದಸ್ಯುಹಸ್ತಂ ಸುರಾಂಗನಾಃ ॥ ೮೪ ॥

ತತ್ತ್ವಯಾ ನಾತ್ರ ಕರ್ತವ್ಯಶ್ಶೋಕೋಲ್ಪೋಽಪಿ ಹಿ ಪಾಂಡವ ।
ತೇನೈವಾಖಿಲನಾಥೇನ ಸರ್ವಂ ತದುಪಸಂಹೃತಂ ॥ ೮೫ ॥

ಭವತಾಂ ಚೋಪಸಂಹಾರ ಆಸನ್ನಸ್ತೇನ ಪಾಂಡವ ।
ಬಲಂ ತೇಜಸ್ತಥಾ ವೀರ್ಯಂ ಮಾಹಾತ್ಮ್ಯಂ ಚೋಪಸಂಹೃತಂ ॥ ೮೬ ॥

ಪತಿಯಾಗಿ ಪಡೆದರೂ ನನ್ನ ಶಾಪದಿಂದ ಕಳ್ಳರ ಕೈಗೆ ಸಿಕ್ಕುವಿರಿ" ಎಂದು ಶಾಪ ಕೊಟ್ಟುದನ್ನು ಕೇಳಿ ಆ ಸ್ತ್ರೀಯರು ಮತ್ತೆ ಆ ಮುನಿಯನ್ನು ಬೇಡಿಕೊಳ್ಳುತ್ತಲು ಅವನು ದಯೆಯಿಂದ " ನೀವುಪುನಃ ದೇವೇಂದ್ರನ ಲೋಕಕ್ಕೆ ಹೋಗುವಿರಿ" ಎಂದು ಹೇಳಿದನು. ಈ ರೀತಿಯಲ್ಲಿ ಆ ದೇವಸ್ತ್ರೀಯರು ಅಷ್ಟಾವಕ್ರನ ಶಾಪದಿಂದ ಹರಿಯನ್ನು ಪತಿಯನ್ನಾಗಿ ಪಡೆದರೂ ಕಳ್ಳರ ಅಧೀನರಾದರು. ಆದುದರಿಂದ ನೀನು ಯಾವ ಯೋಚನೆಯನ್ನೂ ಮಾಡದೆ ಸ್ವಲ್ಪವೂ ದುಃಖಪಡದಿರು. ಸರ್ವಸ್ವಾಮಿಯಾದ ಅವನೇ ಎಲ್ಲವನ್ನೂ ಉಪಸಂಹಾರ ಮಾಡಿರುವನು.

೮೬-೯೦. ಪಾಂಡುಪುತ್ರನೇ! ಅವನಿಂದಲೇ ನಿನ್ನ ಉಪಸಂಹಾರ ಕಾಲವೂ ಸಮೀಪಿಸಿರುವುದು. ನಿನ್ನ ಬಲ, ತೇಜಸ್ಸು, ಉತ್ಸಾಹ, ಮಹಿಮೆ ಎಲ್ಲವೂ ಉಪ

ಜಾತಸ್ಯ ನಿಯತೋ ಮೃತ್ಯುಃ ಪತನಂ ಚ ತಥೋನ್ನತೇಃ ।
ಸಂಪ್ರಯೋಗಾವಸಾನಸ್ತು ಸಂಯೋಗಸ್ಸಂಚಯೇ ಕ್ಷಯಃ ॥ ೮೭ ॥

ವಿಜ್ಞಾಯ ನ ಬುಧಾಶ್ಶೋಕಂ ನ ಹರ್ಷಮುಪಯಾಂತಿ ಯೇ ।
ತೇಷಾಮೇವೇತರೇ ಚೇಷ್ಟಾಂ ಶಿಕ್ಷಂತಸ್ಸಂತಿ ತಾದೃಶಾಃ ॥ ೮೮ ॥

ತಸ್ಮಾತ್ತ್ವಯಾ ನರಶ್ರೇಷ್ಠ ಜ್ಞಾತ್ವೈತದ್ಭ್ರಾತೃಭಿಸ್ಸಹ ।
ಪರಿತ್ಯಜ್ಯಾಖಿಲಂ ತಂತ್ರಂ ಗಂತವ್ಯಂ ತಪಸೇ ವನಂ ॥ ೮೯ ॥

ತದ್ಗಚ್ಛ ಧರ್ಮರಾಜಾಯ ನಿವೇದ್ಯೈತದ್ವಚೋ ಮಮ ।
ಪರಶ್ವೋ ಭ್ರಾತೃಭಿಸ್ಸಾರ್ಧಂ ಯಥಾ ಯಾಸಿ ತಥಾ ಕುರು ॥ ೯೦ ॥

ಇತ್ಯುಕ್ತೋಽಭ್ಯೇತ್ಯ ಪಾರ್ಥಾಭ್ಯಾಂ ಯಮಾಭ್ಯಾಂ ಚ ಸಹಾರ್ಜುನಃ ।
ದೃಷ್ಟಂ ಚೈವಾನುಭೂತಂ ಚ ಸರ್ವಮಾಖ್ಯಾತವಾಂಸ್ತಥಾ ॥ ೯೧ ॥

ಸಂಹಾರವಾಗಿರುವುದು. ಹುಟ್ಟಿದವನಿಗೆ ಮರಣವೂ, ಉನ್ನತಿಗೆ ಅವನತಿಯೂ, ಸಂಯೋಗಕ್ಕೆ ಅಗಲಿಕೆಯೂ, ಸಂಪಾದಿಸಿ ಕೂಡಿಟ್ಟುದಕ್ಕೆ ಕ್ಷಯವೂ, ನಿಯತವಾಗಿ ಆಗಬೇಕಾಗಿರುವುದು. ಇದನ್ನು ತಿಳಿದು ಯಾವ ವಿದ್ವಾಂಸರು ಹರ್ಷಶೋಕಗಳನ್ನು ಹೊಂದುವುದಿಲ್ಲವೋ ಅಂಥವರನ್ನು ನೋಡಿ ಇತರರೂ ಅವರ ನಡತೆಯನ್ನು ಕಲಿತು ಹರ್ಷ ಸಂತೋಷಗಳಿಲ್ಲದ ವರಾಗಿ ಇರುವರು. ಆದುದರಿಂದ ನರಶ್ರೇಷ್ಠನಾದ ಅರ್ಜುನನೇ! ನೀನೂ ಇದನ್ನು ತಿಳಿದು ಸಹೋದರರೊಡನೆ ರಾಜ್ಯಪರಿಕರಗಳನ್ನೆಲ್ಲ ಬಿಟ್ಟು ತಪಸ್ಸಿಗಾಗಿ ಕಾಡಿಗೆ ಹೋಗಬೇಕು. ಆ ಕಾರಣದಿಂದ ನೀನೂ ಹೋಗಿ ಧರ್ಮ ರಾಜನಿಗೆ ನಾನು ಹೇಳಿದ ಮಾತನ್ನು ಹೇಳಿ ನಾಳಿದ್ದಿನ ದಿನದಲ್ಲಿ ಸಹೋದರರೊಡನೆ ಕಾಡಿಗೆ ಪ್ರಯಾಣಮಾಡು" ಎಂದು ಹೇಳಿದನು.

೮೧-೯೨. ವ್ಯಾಸರ ಮಾತನ್ನು ಕೇಳಿ ಅರ್ಜುನನು ಸಹೋದರರ ಸಮೀಪಕ್ಕೆ ಬಂದು ತಾನು ಕಂಡ ಮತ್ತು ಅನುಭವಿಸಿದ ಸಮಸ್ತ ವಿಷಯವನ್ನೂ ಹೇಳಿದನು

ವ್ಯಾಸವಾಕ್ಯಂ [illegible] ತೇ ಸರ್ವೇ ಶ್ರುತ್ವಾರ್ಜುನಮುದೀರಿತಂ ।
ರಾಜ್ಞೇ ಪರಿಕ್ಷಿತಂ ಕೃತ್ವಾ ಯಯುಃ ಪಾಂಡುಸುತಾ ವನಂ ॥ ೯೨ ॥

ಇತ್ಯೇತತ್ತವ ಮೈತ್ರೇಯ ವಿಸ್ತರೇಣ ಮಯೋದಿತಂ ।
ಜಾತಸ್ಯ ಯದ್ಯದೋರ್ವಂಶೇ ವಾಸುದೇವಸ್ಯ ಚೇಷ್ಟಿತಂ ॥ ೯೩ ॥

ಯಶ್ಚೈತಚ್ಚರಿತಂ ತಸ್ಯ ಕೃಷ್ಣಸ್ಯ ಶ್ರುಣುಯಾತ್ಸದಾ ।
ಸರ್ವಪಾಪವಿನಿರ್ಮುಕ್ತೋ ವಿಷ್ಣುಲೋಕಂ ಸ ಗಚ್ಛತಿ ॥ ೯೪ ॥

ಇತಿ ಶ್ರೀ ವಿಷ್ಣುಪುರಾಣೇ ಪಂಚಮಾಂಶೇ ಅಷ್ಟತ್ರಿಂಶೋಽಧ್ಯಾಯಃ

ಪಂಚಮಾಂಶಸ್ಸಮಾಪ್ತಃ

ಅವರೆಲ್ಲರೂ ಅರ್ಜುನನು ಹೇಳಿದ ವ್ಯಾಸರ ಮಾತನ್ನು ಕೇಳಿ ಪರಿಕ್ಷಿತನಿಗೆ ಪಟ್ಟಾಭಿಷೇಕವನ್ನು ಮಾಡಿ ವನಕ್ಕೆ ಪ್ರಯಾಣಮಾಡಿದರು.

೯೩-೯೪. ಮೈತ್ರೇಯನೇ ! ಯದುವಂಶದಲ್ಲಿ ಅವತಾರಮಾಡಿದ ವಿಷ್ಣುವಿನ ಕಾರ್ಯಗಳನ್ನು ವಿಸ್ತಾರವಾಗಿ ಹೇಳಿದೆನು. ಯಾವ ಮನುಜನು ಕೃಷ್ಣನ ಈ ಚರಿತ್ರೆಯನ್ನು ಯಾವಾಗಲೂ ಕೇಳುತ್ತಿರುವನೋ ಅವನು ಸಮಸ್ತ ಪಾಪಗಳನ್ನೂ ಕಳೆದುಕೊಂಡು ವಿಷ್ಣುಲೋಕಕ್ಕೆ ಹೋಗುವನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಪಂಚಮಾಂಶದಲ್ಲಿ

ಮೂವತ್ತೆಂಟನೆಯ ಅಧ್ಯಾಯವು

ಮುಗಿದುದು

ಪಂಚಮಾಂಶವು ಸಂಪೂರ್ಣವು

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಷಷ್ಠಾಂಶೇ

ಪ್ರಥಮೋಽಧ್ಯಾಯಃ

ವ್ಯಾಖ್ಯಾತಾ ಭವತಾ ಸರ್ಗವಂಶಮನ್ವಂತರಸ್ಥಿತಿಃ ।
ವಂಶಾನುಚರಿತಂ ಚೈವ ವಿಸ್ತರೇಣ ಮಹಾಮುನೇ ॥ ೧ ॥

ಶ್ರೋತುಮಿಚ್ಛಾಮ್ಯಹಂ ತ್ವತ್ತೋ ಯಥಾವದುಪಸಂಹೃತಿಂ ।
ಮಹಾಪ್ರಳಯಸಂಜ್ಞಾಂ ಚ ಕಲ್ಪಾಂತೇ ಚ ಮಹಾಮುನೇ ॥ ೨ ॥

॥ ಶ್ರೀ ಪರಾಶರಃ ॥

ಮೈತ್ರೇಯ ಶ್ರೂಯತಾಂ ಮತ್ತೋ ಯಥಾವದುಪಸಂಹೃತಿಃ ।
ಕಲ್ಪಾಂತೇ ಪ್ರಾಕೃತೇನೈವ ಪ್ರಳಯೋ ಜಾಯತೇ ತಥಾ ॥ ೩ ॥

ಒಂದನೆಯ ಅಧ್ಯಾಯವು

೧-೨. ಮೈತ್ರೇಯನು " ಗುರುಗಳಾದ ಪರಾಶರರೇ ! ತಾವು ಪ್ರಪಂಚ ಸೃಷ್ಟಿಯ ವಿಷಯ, ವಂಶ, ಮನ್ವಂತರ, ವಂಶಾನುಚರಿತ ಇವುಗಳನ್ನು ವಿಸ್ತಾರವಾಗಿ ಹೇಳಿದಿರಿ ಕಲ್ಪಾಂತದಲ್ಲಿ ಆಗುವ ಪ್ರಳಯವೆಂಬ ಉಪಸಂಹಾರ ವಿಷಯವನ್ನು ಕೇಳಬೇಕೆಂದು ಅಪೇಕ್ಷಿಸುವೆನು " ಎಂದು ಹೇಳಿದನು.

೩-೫. ಪರಾಶರರು ಮೈತ್ರೇಯನೇ ! ಕೇಳು " ಬ್ರಹ್ಮನ ಹಗಲಿನ ಕೊನೆಯಲ್ಲಿ ಮಹಾ ಪ್ರಳಯವೆಂಬ ಪ್ರಾಕೃತ ಪ್ರಳಯವಾಗುವುದು ಅದು ಹೇಗಾಗುವುದೆಂಬ

ಅಹೋರಾತ್ರಂ ಪಿತೃಣಾಂ ತು ಮಾಸೋಽಬ್ದಸ್ತ್ರಿದಿವೌಕಸಾಂ ।
ಚತುರ್ಯುಗಸಹಸ್ರೇ ತು ಬ್ರಹ್ಮಣೋ ದ್ವೇ ದ್ವಿಜೋತ್ತಮ ॥ ೪ ॥

ಕೃತಂ ತ್ರೇತಾ ದ್ವಾಪರಂ ಚ ಕಲಿಶ್ಚೇತಿ ಚತುರ್ಯುಗಂ ।
ದಿವ್ಯೈರ್ವರ್ಷಸಹಸ್ರೈಸ್ತು ತದ್ವಾದಶಭಿರುಚ್ಯತೇ ॥ ೫ ॥

ಚತುರ್ಯುಗಾಣ್ಯಶೇಷಾಣಿ ಸದೃಶಾನಿ ಸ್ವರೂಪತಃ ।
ಆದ್ಯಂ ಕೃತಯುಗಂ ಮುಕ್ತ್ವಾ ಮೈತ್ರೇಯಾಂತ್ಯಂ ತಥಾ ಕಲಿಂ ॥ ೬ ॥

ಆದ್ಯೇ ಕೃತಯುಗೇ ಸರ್ಗೋ ಬ್ರಹ್ಮಣಾ ಕ್ರಿಯತೇ ಯಥಾ ।
ಕ್ರಿಯತೇ ಚೋಪಸಂಹಾರಸ್ತಥಾಂತೇ ಚ ಕಲೌ ಯುಗೇ ॥ ೭ ॥

॥ ಮೈತ್ರೇಯಃ ॥

ಕಲೇಃ ಸ್ವರೂಪಂ ಭಗವನ್ ವಿಸ್ತರಾದ್ವಕ್ತುಮರ್ಹಸಿ ।
ಧರ್ಮಶ್ಚತುಷ್ಪಾದ್ಭಗವಾನ್ ಯಸ್ಮಿನ್ ವಿಪ್ಲವಮೃಚ್ಛತಿ ॥ ೮ ॥

ದನ್ನು ಹೇಳುವೆನು ಕೇಳು. ಮನುಷ್ಯರ ಒಂದು ತಿಂಗಳ ಕಾಲವುಪಿತೃಗಳಿಗೆ ಒಂದು ದಿನವಾಗುವುದು, ಮನುಷ್ಯರ ಒಂದು ವರ್ಷವು ದೇವತೆಗಳಿಗೆ ಒಂದು ದಿನವಾಗುವುದು. ಕೃತ, ತ್ರೇತ, ದ್ವಾಪರ, ಕಲಿ ಎಂಬಿವೇ ಚತುರ್ಯುಗಗಳು. ದೇವತೆಗಳಿಗೆ ಹನ್ನೆರಡು ಸಾವಿರ ವರ್ಷಗಳಾದರೆ ಒಂದು ಚತುರ್ಯುಗವಾಗುವುದು.

೭-೮ ಎಲ್ಲ ಚತುರ್ಯುಗಗಳೂ ಪರಿಮಾಣ ಧರ್ಮಾಧರ್ಮ ಸ್ವರೂಪಗಳಿಂದ ಒಂದಕ್ಕೊಂದು ಸಮಾನವಾದುವುಗಳಾಗಿರುವುವು. ಮೊದಲನೆಯದಾದ ಕೃತಯುಗಕ್ಕೂ ಕೊನೆಯದಾದ ಕಲಿಯುಗಕ್ಕೂ ವಿಶೇಷ ಭೇದವಿರುವುದು ಕೃತಯುಗದಲ್ಲಿ ಚತುರ್ಮುಖ ಬ್ರಹ್ಮನ ಸೃಷ್ಟಿಯು ಪ್ರಾರಂಭವಾಗುವುದು. ಕಲಿಯುಗದ ಕೊನೆಯಲ್ಲಿ ಉಪಸಂಹಾರವಾಗುವುದು (ಕೃತಯುಗದಲ್ಲಿ ನಾಲ್ಕು, ಪಾಲು ಧರ್ಮ, ಒಂದು ಪಾಲು ಅಧರ್ಮ, ತ್ರೇತೆಯಲ್ಲಿ ಮೂರು ಪಾಲು ಧರ್ಮ, ಎರಡು ಪಾಲು ಅಧರ್ಮ, ದ್ವಾಪರದಲ್ಲಿ ಎರಡು ಪಾಲು ಧರ್ಮ, ಮೂರು ಪಾಲು ಅಧರ್ಮ, ಕಲಿಯುಗದಲ್ಲಿ ಒಂದು ಪಾಲು ಧರ್ಮ, ನಾಲು ಪಾಲ್ಕು ಅಧರ್ಮ ಎಂಬ ವ್ಯವಸ್ಥೆಯಿರುವುದು)

॥ ಶ್ರೀ ಪರಾಶರಃ ॥

ಕಲೇಸ್ಸ್ವರೂಪಂ ಮೈತ್ರೇಯ ಯದ್ಭವಾನ್ ಶ್ರೋತುಮಿಚ್ಛತಿ ।
ತನ್ನಿಬೋಧ ಸಮಾಸೇನ ವರ್ತತೇ ಯನ್ಮಹಾಮುನೇ ॥ ೯ ॥

ವರ್ಣಾಶ್ರಮಾಚಾರವತೀ ಪ್ರವೃತ್ತಿರ್ನ ಕಲೌ ನೃಣಾಂ ।
ನ ಸಾಮಯುಗ್ಯಜುರ್ಧರ್ಮ ವಿನಿಷ್ಪಾದನಹೈತುಕೀ ॥ ೧೦ ॥

ವಿವಾಹಾ ನ ಕಲೌ ಧರ್ಮ್ಯಾ ನ ಶಿಷ್ಯಗುರುಸಂಸ್ಥಿತಿಃ ।
ನ ದಾಂಪತ್ಯಕ್ರಮೋ ನೈವ ವಹ್ನಿದೇವಾತ್ಮಕಃ ಕ್ರಮಃ ॥ ೧೧ ॥

ಯತ್ರ ಕುತ್ರ ಕುಲೇ ಜಾತೋ ಬಲೀ ಸರ್ವೇಶ್ವರಃ ಕಲೌ ।
ಸರ್ವೇಧ್ಯ ಏವ ವರ್ಣೇಭ್ಯೋ ಯೋಗ್ಯಃ ಕನ್ಯಾವರೋಧನೇ ॥ ೧೨ ॥

ಯೇನ ಕೇನ ಚ ಯೋಗೇನ ದ್ವಿಜಾತಿರ್ದೀಕ್ಷಿತಃ ಕಲೌ ।
ಯೈವ ಸೈವ ಚ ಮೈತ್ರೇಯ ಪ್ರಾಯಶ್ಚಿತ್ತಂ ಕಲೌ ಕ್ರಿಯಾ ॥ ೧೩ ॥

---

೮ ಮೈತ್ರೇಯನು ' ಮಹಾಮಹಿಮರಾದ ಪರಾಶರರೇ ! ಧರ್ಮದ ನಾಲ್ಕು ಪಾದಗಳೂ ನಾಶವಾಗುವ ಕಲಿಯುಗದ ಸ್ವರೂಪವನ್ನು ವಿಸ್ತಾರವಾಗಿ ಹೇಳಬೇಕು " ಎಂದು ಪ್ರಶ್ನೆ ಮಾಡಿದನು.

೯-೧೩. ಪರಾಶರರು ಹೇಳುವರು :—ಮೈತ್ರೇಯ ಮಹಾಮುನಿಯೇ ! ಕಲಿಯುಗದ ಸ್ವರೂಪವನ್ನು ಸಂಗ್ರಹವಾಗಿ ಹೇಳುವೆನು ಕೇಳು. ಕಲಿಯುಗದಲ್ಲಿ ಮನುಜರಿಗೆ ವರ್ಣಾಶ್ರಮಾಚಾರಗಳನ್ನು ನಡೆಸಬೇಕೆಂಬಾಸಕ್ತಿಯಿರುವುದಿಲ್ಲ. ವೇದೋಕ್ತವಾದ ಕರ್ಮಗಳನ್ನು ಮಾಡಬೇಕೆಂದೂ ಧರ್ಮವನ್ನು ಗಳಿಸಬೇಕೆಂದೂ ಬುದ್ಧಿಯುಂಟಾಗುವುದಿಲ್ಲ. ಅರ್ಥ ಕಾಮಗಳೇ ಅವರಿಗೆ ಮುಖ್ಯವಾದುವುಗಳಾಗಿರುವುವು. ಬ್ರಾಹ್ಮಾದಿ ವಿವಾಹ ವಿಧಿಗಳಲ್ಲಿ ಯಾರಿಗೆ ಯಾವುದು ವಿಹಿತವೋ ಅವರು ಆ ವಿಧಿಯಿಂದಲೇ ವಿವಾಹಮಾಡಿಕೊಳ್ಳಬೇಕೆಂಬ ವ್ಯವಸ್ಥೆಯಿರುದಿಲ್ಲ. ಗುರು ಶಿಷ್ಯ

ಸರ್ವಮೇವ ಕಲೌ ಶಾಸ್ತ್ರಂ ಯಸ್ಯ ಯದ್ವಚನಂ ದ್ವಿಜ ।
ದೇವತಾ ಚ ಕಲೌ ಸರ್ವಾ ಸರ್ವಸ್ಯಾರ್ವಸ್ಯ ಚಾಶ್ರಮಃ ॥ ೧೪ ॥

ಉಪವಾಸಸ್ತಥಾಯಾಸೋ ವಿತ್ತೋತ್ಸರ್ಗ ಸ್ತಪಃ ಕಲೌ ।
ಧರ್ಮೋ ಯಥಾಭಿರುಚಿತೈರನುಷ್ಠಾನೈರನುಷ್ಠಿತಃ ॥ ೧೫ ॥

ವಿತ್ತೇನ ಭವಿತಾ ಪುಂಸಾಂ ಸ್ವಲ್ಪೇನಾಢ್ಯಮದಃ ಕಲೌ ।
ಸ್ತ್ರೀಣಾಂ ರೂಪಮದಶ್ಚೈವಂ ಕೇಶೈರೇವ ಭವಿಷ್ಯತಿ ॥ ೧೬ ॥

ಸುವರ್ಣಮಣಿರತ್ನಾದೌ ವಸ್ತ್ರೇ ಚೋಪಕ್ಷಯಂ ಗತೇ ।
ಕಲೌ ಸ್ತ್ರಿಯೋ ಭವಿಷ್ಯಂತಿ ತದಾ ಕೇಶೈರಲಂಕೃತಾಃ ॥ ೧೭ ॥

ಪರಿತ್ಯಕ್ಷ್ಯಂತಿ ಭರ್ತಾರಂ ವಿತ್ತಹೀನಂ ತಥಾ ಸ್ತ್ರಿಯಃ ।
ಭರ್ತಾ ಭವಿಷ್ಯತಿ ಕಲೌ ವಿತ್ತವಾನೇವ ಯೋಷಿತಾಂ ॥ ೧೮ ॥

ಸಂಪ್ರದಾಯವೂ ಇರುವುದಿಲ್ಲ. ದಾಂಪತ್ಯ ಧರ್ಮವೂ ಔಪಾಸನ ದೇವತಾರ್ಚನೆ ಗಳೂ ಕ್ರಮವಾಗಿ ನಡೆವುದಿಲ್ಲ. ಯಾವ ಕುಲದಲ್ಲಿ ಹುಟ್ಟಿದವನಾದರೂ ಬಲಿಷ್ಠ ನಾದವನೇ ಸರ್ವೇಶ್ವರನಾಗುವನು. ಯಾವ ವರ್ಣದವನಾದರೂ ಧನವಂತನಾಗಿದ್ದರೆ ಅವನೇ ಕನ್ಯೆಗೆ ಯೋಗ್ಯನಾದ ವರನು. ಯಾವುದಾದರೊಂದು ಉಪಾಯದಿಂದ ಬ್ರಾಹ್ಮಣನು ನಿಷಿದ್ಧವಾದ ದ್ರವ್ಯಾದಿಗಳನ್ನು ಉಪಯೋಗಿಸಿ ಯಜ್ಞದೀಕ್ಷಿತನಾಗು ವನು. ಯಾವ ಕರ್ಮವನ್ನು ಮಾಡಿದರೂ ಅದೇ ಪ್ರಾಯಶ್ಚಿತ್ತರೂಪವಾದ ಕರ್ಮ ವೆನಿಸುವುದು. ಯಾರು ಯಾವ ಮಾತನ್ನಾಡಿದರೂ ಅವೆಲ್ಲವೂ ಶಾಸ್ತ್ರವಾಕ್ಯವೆನಿ ಸುವುವು. ಕಲಿಯುಗದಲ್ಲಿ ಎಲ್ಲರೂ ದೇವತೆಗಳೇ, ಎಲ್ಲರಿಗೂ ಎಲ್ಲ ಆಶ್ರಮಗಳೂ ಇರುವುವು. ಉಪವಾಸ ಮಾಡುವುದು, ಆಯಾಸಕರವಾದ ಕೆಲಸಗಳನ್ನು ಮಾಡು ವುದು, ಧನವನ್ನು ಕೊಡುವುದು ಇವೇ ಕಲಿಯುಗದತ ತಪಸ್ಸೆನಿಸುವುವು. ತನಗೆ ಇಷ್ಟ ಬಂದ ನಿಯಮಾಚರಣೆಯೇ ಧರ್ಮವೆನಿಸುವುದು.

೧೬-೨೦. ಮನುಷ್ಯನಿಗೆ ಸ್ವಲ್ಪ ಧನಪ್ರಾಪ್ತವಾದರೂ ಧನಮದವು ಬರ್ಸ ವುದು. ಸ್ತ್ರೀಯರಿಗೆ ರೂಪಮದವು ಅವರ ಕೂದಲುಗಳ ಅಲಂಕಾರದಿಂದಲೇ ಉಂಟಾಗುವುದು. ಚಿನ್ನ, ರತ್ನಾದಿಗಳು, ವಸ್ತ್ರಗಳು ಇವುಗಳು ನಾಶವಾಗಿ ದೊರೆ

ಯೋ ವೈ ದದಾತಿ ಬಹುಳಂ ಸ್ವಂ ಸ ಸ್ವಾಮೀ ಸದಾ ನೃಣಾಂ ।
ಸ್ವಾಮಿತ್ವಹೇತುಸ್ಸಂಬಂಧೋ ನ ಜಾಭಿಜನತಾ ತಥಾ ॥ ೧೯ ॥

ಗೃಹಾಂತಾ ದ್ರವ್ಯ ಸಂಘಾತಾ ದ್ರವ್ಯಾಂತಾ ಚ ತಥಾ ಮತಿಃ ।
ಅರ್ಥಾಶ್ಚಾತ್ಮೋಪಭೋಗ್ಯಾಂತಾ ಭವಿಷ್ಯಂತಿ ಕಲೌ ಯುಗೇ ॥ ೨೦ ॥

ಸ್ತ್ರಿಯಃ ಕಲೌ ಭವಿಷ್ಯಂತಿ ಸ್ವೈರಿಣ್ಯೋ ಲಲಿತಸ್ಪೃಹಾಃ ।
ಅನ್ಯಾಯಾದಾಪ್ತವಿತ್ತೇಷು ಪುರುಷಾಸ್ಪೃಹಯಾಳವಃ ॥ ೨೧ ॥

ಅಭ್ಯರ್ಥಿತಾಪಿ ಸುಹೃದಾ ಸ್ವಾರ್ಥಮೇವ ನಿರೀಕ್ಷತೇ ।
ಪಣಾರ್ಧಾರ್ಧಾರ್ಧಮಾತ್ರೇಣ ಕರಿಷ್ಯಂತಿ ತಥಾ ಸ್ಪೃಹಾಂ ॥ ೨೨ ॥

ಸಮಾನಸೌರುಷಂ ಚೇತೋ ಭಾವಿವಿಪ್ರೇಷು ವೈ ಕಲೌ ।
ಕ್ಷೀರಪ್ರದಾನಸಂಬಂಧಿ ಭಾವಿಗೋಷು ಚ ಗೌರವಂ ॥ ೨೩ ॥

ಯೆದೆ ಹೋಗಲು ಸ್ತ್ರೀಯರಿಗೆ ಕೂದಲೇ ಅಲಂಕಾರ ಸಾಧನಗಳಾಗುವುವು. ಸ್ತ್ರೀಯರು ಹಣವಿಲ್ಲದ ಗಂಡನನ್ನು ತ್ಯಾಗಮಾಡುವರು ಹಣವುಳ್ಳವನೇ ಅವರಿಗೆ ಗಂಡನಾಗುವನು. ಯಾವನು ಹೆಚ್ಚಾಗಿ ಧನವನ್ನು ಕೊಡುವನೋ ಅವನನ್ನೇ ಜನರು ಸ್ವಾಮಿಯನ್ನಾಗಿ ಭಾವಿಸುವರು. ಸತ್ಕುಲದಲ್ಲಿ ಹುಟ್ಟಿದವನು ಸ್ವಾಮಿಯೆಂಬ ರೂಢಿಯು ಹೊರಟುಹೋಗುವುದು. ಕಲಿಯುಗದಲ್ಲಿ ಧನವಿದ್ದವರು ಧರ್ಮ ಕಾರ್ಯ ಮಾಡುವುದಿಲ್ಲ. ವಿಶೇಷವಾಗಿ ಮನೆಗಳನ್ನು ಕಟ್ಟಿಸುವುದಕ್ಕೆ ಧನವನ್ನು ಪಯೋಗಿಸುವರು. ಮನುಷ್ಯರ ಬುದ್ಧಿಯು ದ್ರವ್ಯಾರ್ಜನೆಯಲ್ಲಿಯೇ ಆಸಕ್ತವಾಗುವುದು ಆತ್ಮಜ್ಞಾನಕ್ಕೆ ಉಪಯೋಗವಾಗುವುದಿಲ್ಲ ಧನವು ತನ್ನ ಸುಖಾನುಭವಕ್ಕೆ ಮಾತ್ರ ಉಪಯೋಗವಾಗುವುದು. ಅತಿಥಿಸೇವತಾ ಪೂಜೆಗಳಿಗಲ್ಲ.

೨೧–೨೩. ಕಲಿಯುಗದಲ್ಲಿ ಸ್ತ್ರೀಯರು ಸೌಂದರ್ಯದಲ್ಲಿ ಆಸಕ್ತರಾಗುವುದರಿಂದ ಪರಪುರುಷಾಸಕ್ತರಾಗುವರು. ಪುರುಷರು ಅನ್ಯಾಯದಿಂದ ಸಂಪಾದಿಸಿದ ದ್ರವ್ಯದಲ್ಲಿ ಇಚ್ಛೆಯುಳ್ಳವರಾಗುತ್ತಾರೆ. ಜನರು ಸ್ನೇಹಿತನಾದವನು ಕೇಳಿಕೊಂಡರೂ ಅವನಿಗೆ ಮಾಡುವ ಉಪಕಾರಕ್ಕೆ ಸ್ವಪ್ರಯೋಜನವನ್ನೇ ನಿರೀಕ್ಷಿಸುತ್ತಾರೆ. ಮಂದಿರು ಕಾಸಿಗಾದರೂ ಆಸೆಪಡುತ್ತಾರೆ. ಬ್ರಾಹ್ಮಣರಲ್ಲಿ ವೇದಶಾಸ್ತ್ರಜ್ಞರಲ್ಲಿಯಾದರೂ

ಅನಾವೃಷ್ಟಿಭಯಸ್ಯಾಯೋಃ ಪ್ರಜಾಃ ಕ್ಷುದ್ಭಯಕಾತರಾಃ ।
ಭವಿಷ್ಯಂತಿ ತಥಾ ಸರ್ವೇ ಗಗನಾಸಕ್ತದೃಷ್ಟಯಃ ॥ ೨೪ ॥

ಕಂದಮೂಲಫಲಾಹಾರಾಸ್ತಾಪಸಾ ಇವ ಮಾನವಾಃ ।
ಆತ್ಮಾನಂ ಶೋಷಯಿಷ್ಯಂತಿ ಹ್ಯನಾವೃಷ್ಟ್ಯಾದಿದುಃಖಿತಾಃ ॥ ೨೫ ॥

ದುರ್ಭಿಕ್ಷಮೇವ ಸತತಂ ತಥಾ ಕ್ಲೇಶಮನೀಶ್ವರಾಃ ।
ಪ್ರಾಪ್ಸ್ಯಂತಿ ವ್ಯಾಹತಸುಖಪ್ರಮೋದಾ ಮಾನವಾಃ ಕಲೌ ॥ ೨೬ ॥

ಅಸ್ನಾನಭೋಜಿನೋ ನಾಗ್ನಿದೇವತಾತಿಥಿಪೂಜನಂ ।
ಕರಿಷ್ಯಂತಿ ಕಲೌ ಪ್ರಾಪ್ತೇನ ಚ ಪಿಂಡೋದಕಕ್ರಿಯಾಂ ॥ ೨೭ ॥

ಲೋಲುಪಾ ಹ್ರಸ್ವದೇಹಾಶ್ಚ ಬಹ್ವನ್ನಾದನತತ್ಪರಾಃ ।
ಬಹುಪ್ರಜಾಲ್ಪಭಾಗ್ಯಾಶ್ಚ ಭವಿಷ್ಯಂತಿ ಕಲೌ ಸ್ತ್ರಿಯಃ ॥ ೨೮ ॥

ಪುರುಷರೂಪದಿಂದ ಸಮಾನರೆಂಬ ಭಾವನೆಯನ್ನಿಡುವರು. ಗೌರವಬುದ್ಧಿಯು ಇರುವುದಿಲ್ಲ. ಹಾಲುಕೊಡುವುದೆಂಬುದರಿಂದ ಗೋವುಗಳಲ್ಲಿ ಗೌರವಬುದ್ಧಿಯಿರುವುದು. ವಿಶೇಷವಾಗಿ ಜನರು ಅನಾವೃಷ್ಟಿ, ಹಸಿವು ಇವುಗಳ ಭಯವುಳ್ಳವರಾಗಿ ಯಾವಾಗ ಮಳೆ ಬರುವುದೋ ಎಂದು ಆಕಾಶವನ್ನೇ ನೋಡುತ್ತಿರುವರು. ಅನಾವೃಷ್ಟಿಯೇ ಮೊದಲಾದ ದುಃಖಗಳಿಂದ ಜನರು ತಪಸ್ವಿಗಳಂತೆ ಗೆಡ್ಡೆ, ಗೆಣಸು ಹಣ್ಣುಗಳನ್ನು ಆಹಾರ ಮಾಡಿಕೊಳ್ಳುತ್ತಿರುವರು.

೨೬-೩೧. ಕಲಿಯುಗದಲ್ಲಿ ಜನರು ಧನವಿಲ್ಲದವರಾಗಿ ಯಾವಾಗಲೂ ದುರ್ಭಿಕ್ಷವನ್ನೂ, ಕಷ್ಟವನ್ನೂ ಅನುಭವಿಸುತ್ತ ಸುಖಸಂತೋಷಗಳಿಲ್ಲದೆ ದಾರಿದ್ರ್ಯವನ್ನು ಅನುಭವಿಸುತ್ತಿರುವರು. ಸ್ನಾನವನ್ನೂ ದೇವತಾತಿಥಿಪೂಜೆಗಳನ್ನೂ ಮಾಡದೆ ಭೋಜನ ಮಾಡುವರು. ಪಿತೃಗಳಿಗೆ ಪಿಂಡತರ್ಪಣರೂಪವಾದ ಕರ್ಮಗಳನ್ನು ಮಾಡುವುದಿಲ್ಲ. ಸ್ತ್ರೀಯರು ಇಂದ್ರಿಯಸುಖಾಸಕ್ತರಾಗಿ ಕುಳ್ಳಾದ ಶರೀರವುಳ್ಳವರೂ ಹೆಚ್ಚಾಗಿ ಊಟ ಮಾಡುವುದರಲ್ಲಾಸಕ್ತರೂ ಹೆಚ್ಚು ಮಕ್ಕಳುಳ್ಳವರೂ ಸ್ವಲ್ಪವಾದ ಸಂಪತ್ತುಳ್ಳವರೂ

ಉಭಾಭ್ಯಾಮಪಿ ಪಾಣಿಭ್ಯಾಂ ಶಿರಃ ಕಂಡೂಯನಂ ಸ್ತ್ರಿಯಃ ।
ಕುರ್ವಂತ್ಯೋ ಗುರುಭರ್ತೃಣಾಮಾಜ್ಞಾಂ ಭಕ್ಷ್ಯಂತ್ಯನಾದರಾಃ ॥ ೨೯ ॥

ಸ್ವಪೋಷಣಪರಾಃ ಕ್ಷುದ್ರಾಃ ದೇಹಸಂಸ್ಕಾರವರ್ಜಿತಾಃ ।
ಪರುಷಾನೃತಭಾಷಿಣ್ಯೋ ಭವಿಷ್ಯಂತಿ ಕಲೌ ಸ್ತ್ರಿಯಃ ॥ ೩೦ ॥

ದುಶ್ಶೀಲಾ ದುಷ್ಪಶೀಲೇಷು ಕುರ್ವಂತ್ಯಸ್ಸತತಂ ಸ್ಪೃಹಾಂ ।
ಅಸದ್ವೃತ್ತಾ ಭವಿಷ್ಯಂತಿ ಪುರುಷೇಷು ಕುಲಾಂಗನಾಃ ॥ ೩೧ ॥

ವೇದಾ ದಾನಂ ಕರಿಷ್ಯಂತಿ ವಟವಶ್ಚಾಕೃತವ್ರತಾಃ ।
ಗೃಹಸ್ಥಾಶ್ಚ ನ ಹೋಷ್ಯಂತಿ ನ ದಾಸ್ಯಂತ್ಯುಚಿತಾನ್ಯಪಿ ॥ ೩೨ ॥

ವಾನಪ್ರಸ್ಥಾ ಭವಿಷ್ಯಂತಿ ಗ್ರಾಮ್ಯಾಹಾರಪರಿಗ್ರಹಾಃ ।
ಭಿಕ್ಷವಶ್ಚಾಪಿ ವಿತ್ತಾದಿಸ್ನೇಹ ಸಂಬಂಧಯಂತ್ರಣಾಃ ॥ ೩೩ ॥

ಆಗಿರುವರು. ತಮ್ಮ ಎರಡು ಕೈಗಳಿಂದಲೂ ತಲೆಯನ್ನು ಕೆರೆದುಕೊಳ್ಳುತ್ತ ಗುರುಗಳ ಮತ್ತು ಪತಿಯ ಆಜ್ಞೆಯನ್ನು ಅದರಿಸದೆ ಅವರನ್ನೆ ಧಿಕ್ಕರಿಸುವರು. ತಮ್ಮ ಶರೀರವನ್ನು ಪೋಷಿಸಿಕೊಳ್ಳುವವರಾಗಿ ಶರೀರವನ್ನು ಶುಚಿಯಾಗಿಟ್ಟು ಕೊಳ್ಳದೆ ನೀಚರ ಸಹವಾಸ ಉಳ್ಳವರಾಗಿ ಕಠಿನವೂ ಸುಳ್ಳೂ ಆದ ಮಾತುಗಳನ್ನಾಡುತ್ತ ಕೆಟ್ಟ ನಡತೆಯುಳ್ಳವರಾಗಿ ಅಂಥವರ ಸ್ನೇಹದಲ್ಲಿಯೇ ಆಸಕ್ತರಾಗಿ ತಮ್ಮ ಪುರುಷರ ವಿಷಯದಲ್ಲಿ ತಾವು ಸತ್ಕುಲಪ್ರಸೂತರಾದರೂ ದುಷ್ಟವಾದ ನಡತೆಯುಳ್ಳವರಾಗುವರು.

೩೨-೩೩. ಬ್ರಹ್ಮಚಾರಿಗಳು ತಾವು ಮಾಡಬೇಕಾದ ಗುರುಸೇವೆ ಭಿಕ್ಷೆ ಮುಂತಾದ ಬ್ರಹ್ಮಚರ್ಯವ್ರತಗಳನ್ನು ಮಾಡದೆ ವೇದಾಭ್ಯಾಸವನ್ನು ಮಾಡುವರು. ಗೃಹಸ್ಥರು ಔಪಾಸನವನ್ನು ಮಾಡುವುದಿಲ್ಲ. ಉಚಿತವಾದ ಅನ್ನದಾನಾದಿಗಳನ್ನೂ

ಆಚಕ್ಷಿತಾರೋ ಹರ್ತಾರಕ್ಯಾಲ್ಯ ವ್ಯಾಜೇನ ಪಾರ್ಥಿವಾಃ ।
ಜನವಿತ್ತೋ ಜನವಿತ್ತಾನಾಂ ಸಂಪ್ರಾಪ್ತೇ ತು ಕಲೌ ಯುಗೇ ॥ ೩೪ ॥

ಯೋ ಯೋಽಶ್ವರಥನಾಗಾಢ್ಯಸ್ಸ ಸ ರಾಜಾ ಭವಿಷ್ಯತಿ ।
ಯಸ್ಯ ಯಶ್ಚಾಬಲಸ್ಸರ್ವಸ್ಸ ಸ ಭೃತ್ಯಃ ಕಲೌ ಯುಗೇ ॥ ೩೫ ॥

ವೈಶ್ಯಾಃ ಕೃಷಿವಣಿಜ್ಯಾದಿ ಸಂತ್ಯಜ್ಯ ನಿಜಕರ್ಮ ಯತ್ ।
ಶೂದ್ರವೃತ್ತ್ಯಾ ಪ್ರವರ್ತ್ಸ್ಯಂತಿ ಕಾರುಕರ್ಮೋಪಜೀವಿನಃ ॥ ೩೬ ॥

ಭೈಕ್ಷವ್ರತಪರಾ ಶೂದ್ರಾಃ ಪ್ರವ್ರಜ್ಯಾ ಲಿಂಗಿನೋಽಧಮಾಃ ।
ಪಾಷಂಡಸಂಶ್ರಯೋಪೇಂ ವೃತ್ತಿಮಾಶ್ರಯಿಷ್ಯಂತಿ ಸತ್ಕೃತಾಃ ॥ ೩೭ ॥

ದುರ್ಭಿಕ್ಷಕರಪೀಡಾಭಿರತೀವೋ ಪದ್ರುತಾ ಜನಾಃ ।
ಗೋಧೂಮಾನ್ನ ಯವಾನ್ನಾಢ್ಯಾನ್ ದೇಶಾನ್ಯಾಸ್ಯಂತಿ ದುಃಖಿತಾಃ ॥ ೩೮ ॥

ಪೂಡುವುದಿಲ್ಲ. ವಾನಪ್ರಸ್ಥರು ವನಾಹಾರವಾದ ಕಂದಮೂಲಾದಿಗಳನ್ನು ಬಿಟ್ಟು ಗ್ರಾಮ್ಯಾಹಾರವನ್ನೇ ಮಾಡುವರು. ಸನ್ಯಾಸಿಗಳು ಸಹೋದರರೇ ಮುಂತಾದ ಬಂಧುಗಳನ್ನು ಬಿಟ್ಟು ಇತರ ಮಿತ್ರರನ್ನು ಸಂಪಾದಿಸಿಕೊಂಡು ಅವರಲ್ಲಿ ಪ್ರೀತಿಯಿಂದ ಅವರ ಅಧೀನರಾಗಿ ಹೋಗುವರು. ರಾಜರು ಪ್ರಜೆಗಳನ್ನು ರಕ್ಷಿಸದೆ ಕಂದಾಯ ಸುಂಕ ಮುಂತಾದ ನೆಪದಿಂದ ಪ್ರಜೆಗಳ ದ್ರವ್ಯವನ್ನು ಪಹರಿಸುವರು. ಯಾರಿಗೆ ಆನೆ, ಕುದುರೆ, ರಥಾದಿಗಳಿರುವುವೋ ಅವರೆಲ್ಲರೂ ರಾಜರೂ, ಬಲಹೀನರೆಲ್ಲರೂ ಅವರ ಸೇವಕರೂ ಆಗುವರು.

೩೬-೪೦. ವೈಶ್ಯರು ತಮ್ಮ ಕರ್ಮಗಳಾದ ಕೃಷಿವಾಣಿಜ್ಯಾದಿಗಳನ್ನು ಬಿಟ್ಟು ಸೇವಾವೃತ್ತಿಯಿಂದಲೂ, ಕೈಗಾರಿಕೆಗಳಿಂದಲೂ ಜೀವಿಸುವರು. ಶೂದ್ರರು ಭಿಕ್ಷಾವೃತ್ತಿಯಲ್ಲಾಸಕ್ತರಾಗಿ ಸನ್ಯಾಸಿಗಳ ಚಿಹ್ನೆಯನ್ನು ಧರಿಸಿ ನೀಚರಾಗಿ ಪಾಷಂಡ ವೃತ್ತಿಯನ್ನಾಶ್ರಯಿಸಿ ಪೂಜಾಯೋಗ್ಯರಾಗಿ ಸತ್ಕಾರವನ್ನು ಪಡೆಯುತ್ತಿರುವರು. ಜನರು ದುರ್ಭಿಕ್ಷ, ಸುಂಕ ಇವುಗಳ ಬಾಧೆಯಿಂದ ಅತ್ಯಂತ ಕಷ್ಟವನ್ನನುಭವಿಸುತ್ತ

ವೇದಮಾರ್ಗೇ ಪ್ರಲೀನೇ ತು ಪಾಷಂಡಾಢ್ಯೇ ತತೋ ಜನೇ ।
ಅಧರ್ಮವೃದ್ಧ್ಯಾ ಲೋಕಾನಾಮಲ್ಪಮಾಯುರ್ಭವಿಷ್ಯತಿ ॥ ೫೯ ॥

ಅಶಾಸ್ತ್ರವಿಹಿತಂ ಘೋರಂ ತಪ್ಯಮಾನೇಷು ವೈ ತಪಃ ।
ನರೇಷು ನೃಪದೋಷೇಣ ಬಾಲ್ಯೇ ಮೃತ್ಯುರ್ಭವಿಷ್ಯತಿ ॥ ೬೦ ॥

ಭವಿತಾ ಯೋಷಿತಾಂ ಸೂತಿಃ ಪಂಚಷಟ್ಸಪ್ತವಾರ್ಷಿಕೀ ।
ನವಾಷ್ಟದಶವರ್ಷಾಣಾಂ ಮನುಷ್ಯಾಣಾಂ ತಥಾ ಕಲೌ ॥ ೬೧ ॥

ಪಲಿತೋದ್ಭವಶ್ಚ ಭವಿತಾ ತಥಾ ದ್ವಾದಶವಾರ್ಷಿಕಃ ।
ನಾತಿ ಜೀವತಿ ವೈ ಕಶ್ಚಿತ್ ಕಲೌ ವರ್ಷಾಣಿ ವಿಂಶತಿಃ ॥ ೬೨ ॥

ಅಲ್ಪಪ್ರಜ್ಞಾ ವೃಥಾ ಲಿಂಗಾ ದುಷ್ಟಾಂತಃ ಕರಣಾಃ ಕಲೌ ।
ಯತಸ್ತತೋ ವಿನಂಕ್ಷ್ಯಂತಿ ಕಾಲೇನಾಲ್ಪೇನ ಮಾನವಾಃ ॥ ೬೩ ॥

ದುಃಖದಿಂದ ಗೋಧಿ, ಮತ್ತು ಜವೆಗಳ ಆಹಾರವು ವಿಶೇಷವಾಗಿ ದೊರೆಯುವ ದೇಶಗಳಿಗೆ ಹೋಗಿ ಸೇರಿಕೊಳ್ಳುವರು. ವೇದಮಾರ್ಗವು ನಾಶವಾಗಿ ಜನರೆಲ್ಲರೂ ಪಾಷಂಡ ಮಾರ್ಗವನ್ನನುಸರಿಸುತ್ತಿರಲು ಅಧರ್ಮವು ಹೆಚ್ಚಿ ಪ್ರಜೆಗಳಿಗೆ ಆಯುಸ್ಸು ಕಡಿಮೆಯಾಗುವುದು. ಶಾಸ್ತ್ರನಿಯಮವನ್ನನುಸರಿಸದೆ ಕ್ರೂರವಾದ ತಪಸ್ಸನ್ನು ಮಾಡುವುದರಿಂದ ರಾಜನ ದೋಷದಿಂದ ಪ್ರಜೆಗಳಲ್ಲಿಯೇ ಬಾಲ್ಯದಲ್ಲಿ ಅನೇಕರು ಮರಣ ಹೊಂದುವರು.

೪೧-೪೪. ಕಲಿಧರ್ಮವು ಪ್ರಬಲವಾದಂತೆಲ್ಲ ಎಂಟು ಒಂಭತ್ತು ಹತ್ತು ವರ್ಷ ವಯಸ್ಸಿನ ಪುರುಷರಿಗೆ ಐದು, ಆರು, ಏಳು ವರ್ಷ ವಯಸ್ಸಿನ ಕನ್ಯೆಯರಲ್ಲಿ ಮಕ್ಕಳು ಹುಟ್ಟುವರು. ಹನ್ನೆರಡು ವರ್ಷ ವಯಸ್ಸಿಗೆ ಕೂದಲುಗಳು ನರೆತು ವೃದ್ಧರಾಗುವರು. ಇಪ್ಪತ್ತುವರ್ಷಕ್ಕೆಂತ ಹೆಚ್ಚಾಗಿ ಯಾವನೂ ಬದುಕಿರುವುದಿಲ್ಲ. ಕಲಿಯುಗದಲ್ಲಿ ಮನುಜರು ಅಲ್ಪ ಬುದ್ಧಿಯುಳ್ಳವರೂ ವ್ಯರ್ಥವಾದ ಸ್ತ್ರೀ ಪುರುಷರ ಚಿಹ್ನೆಯುಳ್ಳವರೂ, ದುಷ್ಟವಾದ ಮನಸ್ಸುಳ್ಳವರೂ ಆದುದರಿಂದ ಹೆಚ್ಚುಕಾಲ ಜೀವಿಸಿರುವುದಿಲ್ಲ.

ಯದಾ ಯದಾ ಹಿ ಮೈತ್ರೇಯ ಹಾನಿರ್ಧರ್ಮಸ್ಯ ಲಕ್ಷ್ಯತೇ ।
ತದಾ ತದಾ ಕಲೇ ವೃದ್ಧಿರನುಮೇಯಾ ವಿಚಕ್ಷಣೈಃ ॥ ೪೪ ॥

ಯದಾ ಯದಾಹಿಪಾಷಂಡ ವೃದ್ಧಿರ್ಮೈತ್ರೇಯ ಲಕ್ಷ್ಯತೇ ।
ತದಾ ತದಾ ಕಲೇರ್ವೃದ್ಧಿರನು ಮೇಯಾ ಮಹಾತ್ಮಭಿಃ ॥ ೪೫ ॥

ಯದಾ ಯದಾ ಸತಾಂ ಹಾನಿರ್ವೇದಮಾರ್ಗಾನು ಸಾರಿಣಾಂ ।
ತದಾ ತದಾ ಕಲೇರ್ವೃದ್ಧಿರನುಮೇಯಾ ವಿಚಕ್ಷಣೈಃ ॥ ೪೬ ॥

ಪ್ರಾರಂಧಾಶ್ಚಾವಸೀದಂತಿ ಯದಾ ಧರ್ಮಭೃತಾಂ ನೃಣಾಂ ।
ತದಾನುಮೇಯಂ ಪ್ರಾಧಾನ್ಯಂ ಕಲೇರ್ಮೈತ್ರೇಯ ಪಂಡಿತೈಃ ॥ ೪೭ ॥

ಯದಾ ಯದಾ ನ ಯಜ್ಞಾನಾಮೀಶ್ವರಃ ಪುರುಷೋತ್ತಮಃ ।
ಇಜ್ಯತೇ ಪುರುಷೈರ್ಯಜ್ಞೈಸ್ತದಾ ಜ್ಞೇಯಂ ಕಲೇರ್ಬಲಂ ॥ ೪೮ ॥

ಬಾಲ್ಯದಲ್ಲಿಯೇ ಮರಣಹೊಂದುವರು. ಮೈತ್ರೇಯನೇ ಯಾವ ಯಾವ ಕಾಲದಲ್ಲಿ ಧರ್ಮಹಾನಿಯಾಗುವುದು ಕಂಡು ಬರುವುದೋ ಆ ಕಾಲದಲ್ಲಿ ಕಲಿಯು ಪ್ರಬಲವಾಯಿತೆಂದು ತಿಳಿಯಬೇಕು.

೪೫-೪೯. ವೇದ ವಿರುದ್ಧವಾದ ಪಾಷಂಡ ಧರ್ಮಗಳು ಯಾವಕಾಲದಲ್ಲಿ ಹೆಚ್ಚುವುವೋ ಯಾವ ಕಾಲದಲ್ಲಿ ವೇದಮಾರ್ಗವನ್ನನುಸರಿಸುವ ಸಜ್ಜನರಿಗೆ ಹಾನಿಯುಂಟಾಗುವುದೋ ಆ ಕಾಲದಲ್ಲೆಲ್ಲ ಕಲಿಯು ಪ್ರಬಲವಾಯಿತೆಂದು ಬುದ್ಧಿವಂತರು ಊಹಿಸಬೇಕು. ಧರ್ಮಜ್ಞರಾದ ಜನರು ಧರ್ಮಾನುಸಾರವಾಗಿ ಹಿಡಿದ ಕೆಲಸವು ಕೈಗೂಡದಿರುವಾಗಲೂ ಯಜ್ಞೇಶ್ವರನಾದ ಯಜ್ಞಪುರುಷನನ್ನು ಯಜ್ಞಗಳಿಂದ ಪೂಜಿಸದಿರುವಾಗಲೂ ಪಾಷಂಡ ಧರ್ಮದಲ್ಲಿ ಪ್ರೀತಿಯಿರುವ ಕಾಲದಲ್ಲಿಯೂ, ವೇದ

ಧರ್ಮೇ ಪ್ರೀತಿರ್ವ್ಯವಾದೇಷು ಪಾಷಂಡೇಷು ಯದಾ ರತಿಃ ।
ಕಲೇರ್ವೃದ್ಧಿಸ್ತದಾ ಪ್ರಾಜ್ಞೈರನುಮೇಯಾ ವಿಚಕ್ಷಣೈಃ ॥ ೪೯ ॥

ಕಲೌ ಜಗತ್ಪತಿಂ ವಿಷ್ಣುಂ ಸರ್ವಸ್ರಷ್ಟಾರಮೀಶ್ವರಂ ।
ನಾರ್ಚಯಿಷ್ಯಂತಿ ಮೈತ್ರೇಯ ಪಾಷಂಡೋಪಹತಾ ಜನಾಃ ॥ ೫೦ ॥

ಕಿಂ ದೇವೈಃ ಕಿಂ ದ್ವಿಜೈರ್ವೇದೈಃ ಕಿಂ ಶೌಚೇನಾಂಬುಜನ್ಮನಾ ।
ಇತ್ಯೇವಂ ವಿಪ್ರ ವಕ್ಷ್ಯಂತಿ ಪಾಷಂಡೋಪಹತಾ ಜನಾಃ ॥ ೫೧ ॥

ಸ್ವಲ್ಪಾಂಬುವೃಷ್ಟಿಃ ಪರ್ಜನ್ಯಸ್ಸಸ್ಯಂ ಸ್ವಲ್ಪಫಲಂ ತಥಾ ।
ಫಲಂ ತಥಾಲ್ಪಸಾರಂ ಚ ವಿಪ್ರ ಪ್ರಾಪ್ತೇ ಕಲೌ ಯುಗೇ ॥ ೫೨ ॥

ಶಾಣೀಪ್ರಾಯಾಣಿ ವಸ್ತ್ರಾಣಿ ಶಮೀಪ್ರಾಯಾ ಮಹೀರುಹಃ ।
ಶೂದ್ರಪ್ರಾಯಾಸ್ತಥಾ ವರ್ಣಾ ಭವಿಷ್ಯಂತಿ ಕಲೌ ಯುಗೇ ॥ ೫೩ ॥

ಧರ್ಮದಲ್ಲಿ ಪ್ರೀತಿಯಿಲ್ಲದಿರುವಾಗಲೂ ಕಲಿಯು ಪ್ರಬಲವಾಯಿತೆಂದು ತಿಳಿದವರು ಊಹಿಸಬೇಕು.

೫೦-೫೪. ಮೈತ್ರೇಯನೇ ! ಕಲಿಯುಗದಲ್ಲಿ ಪಾಷಂಡ ಧರ್ಮಕ್ಕಧೀನರಾದ ಜನರು ಸೃಷ್ಟಿಕರ್ತನೂ, ಸರ್ವೇಶ್ವರನೂ ಜಗತ್ಪತಿಯೂ ಆದ ವಿಷ್ಣುವನ್ನು ಪೂಜಿಸುವುದಿಲ್ಲ. ದೇವತೆಗಳು, ವೇದಗಳು, ಬ್ರಾಹ್ಮಣರು, ನೀರಿನಲ್ಲಿ ಸ್ನಾನಮಾಡುವುದು, ಇವುಗಳಿಂದೇನು ಪ್ರಯೋಜನ ಎಂದು ಹೇಳುತ್ತಿರುವರು. ಮಳೆಯು ಸ್ವಲ್ಪವೇ ಬೀಳುವುದು. ಭೂಮಿಯಲ್ಲಿ ಸಸ್ಯಗಳು ಸಾರವಿಲ್ಲದುದಾಗಿ ಸ್ವಲ್ಪವೇ ಬೆಳೆಯಾಗುವುದು. ಒಟ್ಟೆಗಳು ವಿಶೇಷವಾಗಿ ಶಣಬಿನ ನಾರಿನಿಂದ ಮಾಡಿದುವುಗಳಾಗಿರುವುವು. ದೊಡ್ಡಮರಗಳು ಸಣ್ಣ ಗಿಡಗಳಂತೆ ಬೆಳೆಯುವುವು. ಸಮಸ್ತ ವರ್ಣದವರೂ ಶೂದ್ರ ವರ್ಣದಂತಿರುವರು. ಧಾನ್ಯಗಳು ಅಣುಗಳಂತಿರುವುವು. ನೀರನ್ನು (ಹಾಲನ್ನು)

ಅಣುಪ್ರಾಯಾಣಿ ಧಾನ್ಯಾನಿ ಚಾಜ್ಯಪ್ರಾಯಂ ತಥಾ ಪಯಃ ।
ಭವಿಷ್ಯಂತಿ ಕಲೌ ಪ್ರಾಪ್ತೇ ಹ್ಯೌಶೀರಂ ಚಾನುಲೇಪನಂ ॥ ೫೪ ॥

ಶ್ವಶ್ರೂಶ್ವಶುರಭೂಯಿಷ್ಠಾ ಗುರವಶ್ಚ ನೃಣಾಂ ಕಲೌ ।
ಸ್ಯಾಲಾದ್ಯಾಹಾರಿ ಭಾರ್ಯಾಶ್ಚ ಸುಹೃದೋ ಮುನಿಸತ್ತಮ ॥ ೫೫ ॥

ಕಸ್ಯ ಮಾತಾ ಪಿತಾ ಕಸ್ಯ ಯಥಾ ಕರ್ಮಾನುಗಃ ಪುಮಾನ್ ।
ಇತಿ ಚೋದಾಹರಿಷ್ಯಂತಿ ಶ್ವಶುರಾನುಗತಾ ನರಾಃ ॥ ೫೬ ॥

ವಾಙ್ಮನಃ ಕಾಯಗೈರ್ದೋಷೈರಭಿಭೂತಾಃ ಪುನಃ ಪುನಃ ।
ನರಾಃ ಪಾಪಾನ್ಯನುದಿನಂ ಕರಿಷ್ಯಂತ್ಯಲ್ಪಮೇಧಸಃ ॥ ೫೭ ॥

ನಿಸ್ಸತ್ಯಾನಾಮಶೌಚಾನಾಂ ನಿರ್ಹ್ರೀಕಾಣಾಂ ತಥಾ ನೃಣಾಂ ।
ಯದ್ಭದ್ರಾಯ ತತ್ಸರ್ವಂ ಕಲಿಕಾಲೇ ಭವಿಷ್ಯತಿ ॥ ೫೮ ॥

ತುಪ್ಪದಂತೆ ಉಪಯೋಗಿಸಬೇಕಾಗುವುದು. ಲಾಮಂಜವೆಂಬ ಹುಲ್ಲಿನ ಬೇರನ್ನು ಗಂಧಕ್ಕೆ ಉಪಯೋಗಿಸಬೇಕಾಗುವುದು.

೫೫-೫೬. ಮುನಿಶ್ರೇಷ್ಠನೇ! ಕಲಿಯುಗದಲ್ಲಿ ಜನರಿಗೆ ಅತ್ತೆ ಮಾವಂದಿರೇ ಗುರುಗಳು. ಸುಂದರಿಯಾದ ಹೆಂಡತಿಯೂ ಅವನ ಸಹೋದರರೂ ಮಿತ್ರರು " ತಾಯಿ ಯಾರಿಗೆ, ತಂದೆಯಾರಿಗೆ ಮನುಷ್ಯನು ಅವನ ಕರ್ಮಕ್ಕೆ ಅಧೀನನು " ಎಂದ ಮಾವನನ್ನು ಅನುಸರಿಸಿದ ಜನರು ಹೇಳುವರು.

೫೭-೫೮. ಕಲಿಯುಗದಲ್ಲಿ ಜನರು ಮನೋವಾಕ್ಕಾಯಗಳ ದೋಷಗಳಿಂದ ತಿರಸ್ಕೃತರಾಗಿ ಬುದ್ಧಿಯಿಲ್ಲದೆ ಪ್ರತಿದಿನವೂ ಮತ್ತೆ ಮತ್ತೆ ಪಾಪಕಾರ್ಯಗಳನ್ನೇ ಮಾಡುತ್ತಿರುವರು. ಸತ್ಯವೂ ಶುಚಿತ್ವವೂ ನಾಚಿಕೆಯೂ ಇಲ್ಲದೆ ಜನರಿಗೆ ಸಕಲ ವಸ್ತುಗಳೂ ದುಃಖಫಲವನ್ನೇ ಕೊಡುತ್ತಿರುವುವು.

ನಿಸ್ಸ್ವಾಧ್ಯಾಯವಷಟ್ಕಾರೇ ಸ್ವಧಾಸ್ವಾಹಾ ವಿವರ್ಜಿತೇ ।
ತದಾ ಪ್ರವಿರಳೋ ಧರ್ಮಃ ಕ್ವಚಿಲ್ಲೋಕೇ ನಿವತ್ಸ್ಯತಿ ॥ ೫೯ ॥

ತಸ್ಮಾಲ್ಪೇನೈವ ಯತ್ನೇನ ಪುಣ್ಯಸ್ಕಂಧಮನುತ್ತಮಂ ।
ಕರೋತಿ ಯಃ ಕೃತಯುಗೇ ಕ್ರಿಯತೇ ತಪಸಾ ಹಿ ಸಃ ॥ ೬೦ ॥

ಇತಿ ಶ್ರೀ ವಿಷ್ಣುಪುರಾಣೇ ಷಷ್ಠಾಂಶೇ ಪ್ರಥಮೋಽಧ್ಯಾಯಃ

೫೯-೬೦. ವೇದಾಭ್ಯಾಸವೂ ದೇವಪಿತೃಯಜ್ಞಗಳೂ ಇಲ್ಲದ ಕಲಿಕಾಲದಲ್ಲಿ ಧರ್ಮವು ಎಲ್ಲಿಯೋ ಕೆಲವು ಕಡೆಗಳಲ್ಲಿ ನೆಲಸಿರುವುದು. ಕಲಿಯುಗದಲ್ಲಿ ಅಲ್ಪವಾದ ಪ್ರಯತ್ನದಿಂದ ಸಂಪಾದಿಸುವ ಪುಣ್ಯರಾಶಿಯನ್ನು ಕೃತಯುಗದಲ್ಲಿ ಮಹಾ ತಪಸ್ಸಿನಿಂದ ಸಂಪಾದಿಸಬೇಕಾಗುವುದು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಆರನೆಯ ಅಂಶದಲ್ಲಿ

ಮೊದಲನೆಯ ಅಧ್ಯಾಯವು

ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಷಷ್ಠಾಂಶೇ

ದ್ವಿತೀಯೋಽಧ್ಯಾಯಃ

॥ ಶ್ರೀ ಪರಾಶರಃ ॥

ವ್ಯಾಸಶ್ಚಾಹ ಮಹಾ ಬುದ್ಧಿರ್ಯದತ್ರೈವ ಹಿ ವಸ್ತುನಿ ।
ತಚ್ಛ್ರೂಯತಾಂ ಮಹಾಭಾಗ ಗದತೋ ಮಮ ತತ್ತ್ವತಃ ॥ ೧ ॥

ಕಸ್ಮಿನ್ ಕಾಲೇಽಲ್ಪಕೋ ಧರ್ಮೋ ದದಾತಿ ಸುಮಹತ್ಫಲಂ ।
ಮುನೀನಾಂ ಪುಣ್ಯವಾದೋಽಭೂತ್ ಕೈಶ್ಚಾಸೌ ಕ್ರಿಯತೇ ಸುಖಂ ॥ ೨ ॥

ಸಂದೇಹನಿರ್ಣಯಾರ್ಥಾಯ ವೇದವ್ಯಾಸಂ ಮಹಾಮುನಿಂ ।
ಯಯುಸ್ತೇ ಸಂಶಯಂ ಪ್ರಷ್ಟುಂ ಮೈತ್ರೇಯ ಮುನಿಪುಂಗವಾಃ ॥ ೩ ॥

ಎರಡನೆಯ ಅಧ್ಯಾಯವು

೧-೫. ಮೈತ್ರೇಯನೇ ! ಕಲಿಕಾಲವು ನಿಕೃಷ್ಟವಾದುದಾದರೂ ಸ್ವಲ್ಪವಾದ ಆಯಾಸಕ್ಕೆ ಮಹಾಫಲವನ್ನು ಕೊಡತಕ್ಕುದಾಗಿರುವುದು ಎಂಬ ವಿಷಯದಲ್ಲಿ ಮಹಾ ಬುದ್ಧಿವಂತನಾದ ವ್ಯಾಸನು ಹೇಳಿದುದನ್ನು ಹೇಳುವೆನು ಕೇಳು. ಯಾವ ಕಾಲದಲ್ಲಿ ಧರ್ಮಾಚರಣೆಯು ಅಲ್ಪವಾದರೂ ಮಹಾಫಲವನ್ನು ಕೊಡುವುದು ಎಂಬ ವಿಷಯದಲ್ಲಿಯೂ ಯಾವ ಜಾತಿಯವರು ಈ ಧರ್ಮವನ್ನು ಅನಾಯಾಸವಾಗಿ ನಡೆಸುವರೆಂಬ ವಿಷಯದಲ್ಲಿಯೂ ಋಷಿಗಳಲ್ಲಿ ಈ ಪುಣ್ಯಕರವಾದ ವಾದವುಂಟಾಯಿತು. ಋಷಿಗಳು ತಮ್ಮ ಸಂದೇಹವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ವೇದವ್ಯಾಸನೆಂಬ ಮಹಾಮುನಿಯನ್ನು ಪ್ರಶ್ನಿಸಿ ತಿಳಿದುಕೊಳ್ಳಬೇಕೆಂದು

ದದೃಶುಸ್ತೇ ಮುನಿಂ ತತ್ರ ಜಾಹ್ನವೀಸಲಿಲೇ ದ್ವಿಜ ।
ವೇದವ್ಯಾಸಂ ಮಹಾಭಾಗಮುರ್ಧಸ್ನಾತಂ ಸುತಂ ಮಮ ॥ ೪ ॥

ಸ್ನಾನಾವಸಾನಂ ತೇ ತಸ್ಯ ಪ್ರತೀಕ್ಷಂತೋ ಮಹರ್ಷಯಃ ।
ತಸ್ಥುಸ್ತೀರೇ ಮಹಾನದ್ಯಾಸ್ತರುಷಂಡಮುಪಾಶ್ರಿತಾಃ ॥ ೫ ॥

ಮಗ್ನೋಽಥ ಜಾಹ್ನವೀತೋಯಾಮುತ್ಥಾಯಾಹ ಸುತೋ ಮಮ ।
ಶೂದ್ರಸ್ಸಾಧುಃ ಕಲಿಸ್ಸಾಧುರಿತ್ಯೇವಂ ಶೃಣ್ವತಾಂ ವಚಃ ॥
ತೇಷಾಂ ಮುನೀನಾಂ ಭೀತಶ್ಚ ಮಮಜ್ಜ ಸ ನದೀಜಲೇ ॥ ೬ ॥

ಸಾಧುಸಾಧ್ವಿತಿ ಚೋತ್ಥಾಯ ಶೂದ್ರ ಧನ್ಯೋಽಸಿ ಚಾಬ್ರವೀತ್ ॥ ೭ ॥

ನಿಮಗ್ನಶ್ಚ ಸಮುತ್ಥಾಯ ಪುನಃ ಪ್ರಾಹ ಮಹಾಮುನಿಃ ।
ಯೋಷಿತಸ್ಸಾಧು ಧನ್ಯಾಸ್ತಾ ಸ್ತಾಭ್ಯೋ ಧನ್ಯತರೋಸ್ತಿ ಕಃ ॥ ೮ ॥

ಅವನ ಸಮೀಪಕ್ಕೆ ಹೋದರು. ಆ ಋಷಿಗಳು ಗಂಗೆಯಲ್ಲಿ ಸ್ನಾನಮಾಡುತ್ತಿದ್ದ ನನ್ನ ಪುತ್ರನಾದ ವೇದವ್ಯಾಸನನ್ನು ಕಂಡರು. ಆ ಮಹರ್ಷಿಗಳು ಅವನ ಸ್ನಾನ ಕಾರ್ಯವು ಮುಗಿವುದನ್ನು ನಿರೀಕ್ಷಿಸುತ್ತ ಗಂಗೆಯ ದಡದಲ್ಲಿರುವ ಮರಗಳ ಗುಂಪಿನಲ್ಲಿ ನಿಂತಿದ್ದರು.

೬-೮. ನನ್ನ ಮಗನಾದ ವ್ಯಾಸನು ಒಂದಾವೃತ್ತಿ ಗಂಗೆಯಲ್ಲಿ ಮುಳುಗಿ ಎದ್ದು ಆ ಋಷಿಗಳು ಕೇಳುವಂತೆ " ಶೂದ್ರನೇ ಶ್ರೇಷ್ಠನು, ಕಲಿಯೇ ಶ್ರೇಷ್ಠವು ಎಂದು ಹೇಳಿ ಮತ್ತೆ ಮುಳುಗಿದನು. ಪುನಃ ಎದ್ದು ಒಳ್ಳೆಯದು ಒಳ್ಳೆಯದು ಶೂದ್ರನೇ ನೀನೇ ಕೃತಾರ್ಥನಾದವನು ಎಂದನು. ಪುನಃ ಮುಳುಗಿ ಎದ್ದು ಸ್ತ್ರೀಯರೇ ಶ್ರೇಷ್ಠರು, ಅವರೇ ಕೃತಾರ್ಥರು, ಅವರಿಗಿಂತ ಕೃತಾರ್ಥರಾರಿರುವರು " ಎಂದು ಹೇಳಿದನು.

ತತಸ್ತಾ ಸ್ನಾತ್ವಾ ಯಥಾನ್ಯಾಯಮಾಚಾಂತಂ ಚ ಕೃತಕ್ರಿಯಂ ।
ಋಷಿಸಙ್ಘವೃಂದಾಭಾಗಂ ಮುನಯಸ್ತೇ ಸುತಂ ಮನು ॥ ೯ ॥

ಕೃತಸಂವಂದನಾಂಶ್ಚಾಹ ಕೃತಾಸನಪರಿಗ್ರಹಾನ್ ।
ಕಿಮರ್ಥಮಾಗತಾ ಯೂಯಮಿತಿ ಸತ್ಯವತೀಸುತಃ ॥ ೧೦ ॥

॥ ಶ್ರೀ ಪರಾಶರಃ ॥

ತಮೂಚುಃ ಸಂಶಯಂ ಪ್ರಷ್ಟುಂ ಭವಂತಂ ವಯಮಾಗತಾಃ ।
ಅಲಂ ತೇನಾಸ್ತು ತಾವನ್ನಃ ಕಥ್ಯತಾಮುಪರಂ ತ್ವಯಾ ॥ ೧೧ ॥

ಕಲಿಸ್ತಾಧ್ವಿತಿ ಯತ್ಪ್ರೋಕ್ತಂ ಶೂದ್ರಸ್ತಾಧ್ವಿತಿ ಯೋಷಿತಃ ।
ಯದಾಹ ಭಗವಾನ್ತಾಧು ಧನ್ಯಾಶ್ಚೇತಿ ಪುನಃ ಪುನಃ ॥ ೧೨ ॥

ತತ್ಸರ್ವಂ ಶ್ರೋತುಮಿಚ್ಛಾಮೋ ನ ಚೇದ್ಗುಹ್ಯಂ ಮಹಾಮುನೇ ।
ತತ್ಕಥ್ಯತಾಂ ತತೋ ಹೃತ್ಸ್ಥಂ ಪೃಚ್ಛಾಮಸ್ತ್ವಾಂ ಪ್ರಯೋಜನಂ ॥ ೧೩ ॥

೯–೧೦. ಬಳಿಕ ವಿಧಿಗನುಸಾರವಾಗಿ ಸ್ನಾನಾಚಮನಗಳನ್ನು ಮಾಡಿ ಸಂಧ್ಯಾದಿ ಕರ್ಮಗಳನ್ನು ಮಾಡಿದಮೇಲೆ ಋಷಿಗಳು ನನ್ನ ಮಗನ ಸಮೀಪಕ್ಕೆ ಬಂದರು. ನಮಸ್ಕಾರಗಳನ್ನು ಮಾಡಿ ಪೀಠಗಳಲ್ಲಿ ಕುಳಿತುಕೊಂಡಿರುವ ಋಷಿಗಳನ್ನು ಸತ್ಯವತೀ ಸುತನು " ಏನು ಪ್ರಯೋಜನಕ್ಕಾಗಿ ಬಂದಿರುವಿರಿ ' ಎಂದು ಪ್ರಶ್ನೆಮಾಡಿದನು.

೧೧–೧೩. ಋಷಿಗಳು ಅವನನ್ನು ಕುರಿತು " ನಮಗೆ ಉಂಟಾಗಿದ್ದ ಸಂದೇಹ ವಿಷಯದಲ್ಲಿ ನಿಮ್ಮನ್ನು ಪ್ರಶ್ನೆಮಾಡಿ ತಿಳಿದುಕೊಳ್ಳಬೇಕೆಂದು ಬಂದೆವು. ಅದಿರಲಿ. ಈಗ ನೀವು ಕಲಿಯೇ ಶ್ರೇಷ್ಠವು. ಶೂದ್ರನೂ ಸ್ತ್ರೀಯರೂ ಶ್ರೇಷ್ಠರು. ಎಂದೂ ಅವರೇ ಕೃತಾರ್ಥರೆಂದೂ ಮತ್ತೆ ಮತ್ತೆ ಹೇಳಿದಿರಷ್ಟೆ. ಗುಟ್ಟಾದ ವಿಷಯವಲ್ಲವಿದ್ದರೆ ಅದರ ಅಭಿಪ್ರಾಯವನ್ನು ಮೊದಲು ಹೇಳಿರಿ. ಆಮೇಲೆ ನಮ್ಮ ಮನಸ್ಸಿನಲ್ಲಿರುವ ಸಂದೇಹವನ್ನು ಪ್ರಶ್ನೆಮಾಡುವೆವು " ಎಂದು ಹೇಳಿದರು.

॥ ಶ್ರೀ ಪರಾಶರಃ ॥

ಇತ್ಯುಕ್ತೋ ಮುನಿಭಿರ್ವ್ಯಾಸಃ ಪ್ರಹಸ್ಯೇದಮುವಾಚ ಹ ।
ಶ್ರೂಯತಾಂ ಭೋ ಮುನಿಶ್ರೇಷ್ಠಾ ಯದುಕ್ತಂ ಸಾಧುಸಾಧ್ವಿತಿ ॥ ೧೪ ॥

॥ ವ್ಯಾಸಃ ॥

ಯತ್ಕೃತೇ ದಶಭಿರ್ವರ್ಷೈಸ್ತ್ರೇತಾಯಾಂ ಹಾಯನೇ ನ ತತ್ ।
ದ್ವಾಪರೇ ತಚ್ಚ ಮಾಸೇನ ಹ್ಯಹೋರಾತ್ರೇಣ ತತ್ಕಲೌ ॥ ೧೫ ॥

ತಪಸೋ ಬ್ರಹ್ಮಚರ್ಯಸ್ಯ ಜಪಾದೇಶ್ಚ ಫಲಂ ದ್ವಿಜಾಃ ।
ಪ್ರಾಪ್ನೋತಿ ಪುರುಷಸ್ತೇನ ಕಲಿಸ್ಸಾಧ್ವಿತಿ ಭಾಷಿತಂ ॥ ೧೬ ॥

ಧ್ಯಾಯನ್ ಕೃತೇ ಯಜನ್ ಯಜ್ಞೈಃ ತ್ರೇತಾಯಾಂ ದ್ವಾಪರೇರ್ಚಯನ
ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇಶವಂ ॥ ೧೭ ॥

---

೧೪. ಈ ಮಾತನ್ನು ಕೇಳಿ ವ್ಯಾಸನು ನಗುತ್ತ " ಮುನಿಶ್ರೇಷ್ಠರೇ ! ಶ್ರೇಷ್ಠವಾದುದೆಂದು ಹೇಳಿದುದರ ಕಾರಣವನ್ನು ಹೇಳುವೆನು ಕೇಳಿರಿ " ಎಂದು ಹೇಳಲ್ಪ ಪ್ರಾರಂಭಿಸಿದನು.

೧೫-೧೭. " ಮನುಷ್ಯನು ಬ್ರಹ್ಮಚರ್ಯಾದಿ ನೇಮಗಳಿಂದ ಮಾಡಿದ ತಪಸ್ಸು ಮಂತ್ರಜಪ ಮುಂತಾದುವುಗಳ ಫಲವನ್ನು ಕೃತಯುಗದಲ್ಲಿ ಹತ್ತು ವರ್ಷಗಳ ಮೇಲೆಯೂ, ತ್ರೇತಾಯುಗದಲ್ಲಿ ಒಂದು ವರ್ಷದಮೇಲೆಯೂ, ದ್ವಾಪರಯುಗದಲ್ಲಿ ಒಂದು ತಿಂಗಳಮೇಲೆಯೂ ಕಲಿಯುಗದಲ್ಲಿ ಒಂದು ದಿನದಮೇಲೆಯೂ ಪಡೆಯುವರು. ಆದುದರಿಂದ ಕಲಿಯು ಶ್ರೇಷ್ಠವೆಂದು ಹೇಳಿದೆನು. ಕೃತಯುಗದಲ್ಲಿ ಧ್ಯಾನ್ಯದಿಂದಲೂ ತ್ರೇತಾಯುಗದಲ್ಲಿ ಯಜ್ಞಮಾಡುವುದರಿಂದಲೂ, ದ್ವಾಪರಯುಗದಲ್ಲಿ ಪೂಜೆಸೂಡುವುದರಿಂದಲೂ ಯಾವ ಫಲವನ್ನು ಪಡೆವರೋ ಆ ಫಲವನ್ನು ಕಲಿಯುಗದಲ್ಲಿ

ಧರ್ಮೋತ್ಕರ್ಷಮವೀವಾತ್ರ ಪ್ರಾಪ್ನೋತಿ ಪುರುಷಃ ಕಲೌ ।
ಅಲ್ಪಾಯಾಸೇನ ಧರ್ಮಜ್ಞಾಸ್ತೇನ ತುಷ್ಟೋಸ್ಮ್ಯಹಂ ಕಲೇಃ ॥ ೧೮ ॥

ವ್ರತಚರ್ಯಾಪರೈರ್ಗ್ರಾಹ್ಯಾ ವೇದಾಃ ಪೂರ್ವಂ ದ್ವಿಜಾತಿಭಿಃ ।
ತತಸ್ತು ಧರ್ಮ ಸಂಪ್ರಾಪ್ತ್ಯೈರ್ಯಷ್ಟವ್ಯಂ ವಿಧಿವದ್ಧನೈಃ ॥ ೧೯ ॥

ವೃಥಾ ಕಥಾ ವೃಥಾ ಭೋಜ್ಯಂ ವೃಥೇಜ್ಯಾ ಚ ದ್ವಿಜನ್ಮನಾಂ ।
ಅತನಾಯು ತತೋ ಭಾವ್ಯಂ ತೈಸ್ತು ಸಂಯಮಿಭಿಸ್ಸದಾ ॥ ೨೦ ॥

ಅಸಮ್ಯಕ್ಚರಣೇ ದೋಷಸ್ತೇಷಾಂ ಸರ್ವೇಷು ವಸ್ತುಷು ।
ಭೋಜ್ಯಪೇಯಾದಿಕಂ ಚೈಷಾಂ ನೇಚ್ಛಾಪ್ರಾಪ್ತಿಕರಂ ದ್ವಿಜಾಃ ॥ ೨೧ ॥

ಪಾರತಂತ್ರ್ಯಂ ಸಮಸ್ತೇಷು ತೇಷಾಂ ಕಾರ್ಯೇಷು ವೈ ಯತಃ ।
ಜಯತಿಂತೇ ನಿಜಾನ್ ಲೋಕಾನ್ ಕ್ಲೇಶೇನ ಮಹತಾ ದ್ವಿಜಾಃ ॥ ೨೨ ॥

ವಿಷ್ಣುವಿನ ನಾಮಸಂಕೀರ್ತನೆಯಿಂದ ಪಡೆವರು. ಕಲಿಯುಗದಲ್ಲಿ ಸ್ವಲ್ಪ ಆಯಾಸದಿಂದ ಪುರುಷರು ಹೆಚ್ಚಾದ ಧರ್ಮವನ್ನು ಗಳಿಸುವರಾದುದರಿಂದ ಕಲಿಯುಗದ ವಿಷಯದಲ್ಲಿ ನಾನು ತೃಪ್ತನಾಗಿರುವೆನು.

೧೯–೨೨. ಬ್ರಾಹ್ಮಣರು (ದ್ವಿಜರು) ಮೊದಲು ಬ್ರಹ್ಮಚರ್ಯವ್ರತನಿಷ್ಠರಾಗಿ ವೇದಾಭ್ಯಾಸವನ್ನು ಮಾಡಬೇಕು. ಬಳಿಕ ಧರ್ಮಸಂಪಾದನೆಗಾಗಿ ನ್ಯಾಯಾರ್ಜಿತವಾದ ಧನದಿಂದ ವೇದವಿಧಿಯನ್ನನುಸರಿಸಿ ಯಜ್ಞಗಳನ್ನು ಮಾಡಬೇಕು. ಕೃಷ್ಣ ಸಂಕೀರ್ತನವಿಲ್ಲದ ಕಥೆಯೂ ಅವನಿಗೆ ನಿವೇದನಮಾಡದ ಅನ್ನಭೋಜನವೂ ದಂಭ ಲೋಭಾದಿಗಳಿಂದ ಮಾಡುವ ಪೂಜೆಯೂ ಇಂದ್ರಿಯನಿಗ್ರಹವುಳ್ಳ ದ್ವಿಜರಿಗೆ ಪಾಪ ಕಾರಣವಾಗುವುದು. ಮಾಡಬೇಕಾದ ಕರ್ಮಗಳನ್ನು ವಿಧಿಗನುಸಾರವಾಗಿ ಮಾಡದಿದ್ದರೆ ದೋಷಬರುವುದು. ಅವರು ಭೋಜನ ಪಾನಾದಿಗಳನ್ನು ಮನಬಂದಂತೆ ಮಾಡಲಾಗದು. ವಿಧಿಗನುಸಾರವಾಗಿ ಮಾಡಬೇಕು. ಅವರು ಮಾಡುವ ಸಮಸ್ತ ಕರ್ಮಗಳೂ ಪರಾಧೀನವಾಗಿಯೇ ನಡೆಯಬೇಕು. ಆದುದರಿಂದ ದ್ವಿಜರು ಬಹು ಕಷ್ಟದಿಂದ ಉತ್ತಮಲೋಕವನ್ನು ಸಂಪಾದಿಸುವರು.

ದ್ವಿಜಶುಶ್ರೂಷಯೈವೈಷಪಾಕಯಜ್ಞಾಧಿಕಾರವಾನ್ ।
ನಿಜಾನ್ ಜಯತಿ ವೈ ಲೋಕಾನ್ ಶೂದ್ರೋ ಧನ್ಯತರಸ್ತತಃ ॥ ೨೩ ॥

ಭಕ್ಷ್ಯಾ ಭಕ್ಷ್ಯೇಷು ನಾಸ್ಯಾಸ್ತಿ ಪೇಯಾಪೇಯೇಷು ವೈ ಯತಃ ।
ನಿಯಮೋ ಮುನಿಶಾರ್ದೂಲಾಸ್ತೇನಾಸೌ ಸಾಧ್ವತೀರಿತಃ ॥ ೨೪ ॥

ಸ್ವಧರ್ಮಸ್ಯಾವಿರೋಧೇನ ನರೈರ್ಲಬ್ಧಂ ಧನಂ ಸದಾ ।
ಪ್ರತಿಪಾದನೀಯಂ ಪಾತ್ರೇಷು ಯಷ್ಟವ್ಯಂ ಚ ಯಥಾವಿಧಿ ॥ ೨೫ ॥

ತಸ್ಯಾರ್ಜನೇ ಮಹಾಕ್ಲೇಶಃ ಪಾಲನೇ ಚ ದ್ವಿಜೋತ್ತಮಾಃ ।
ತಥಾ ಸದ್ವಿನಿಯೋಗೇ ಚ ವಿಜ್ಞಾತಂ ಗಹನಂ ನೃಣಾಂ ॥ ೨೬ ॥

ಏವಮನ್ಯೈಸ್ತಥಾ ಕ್ಲೇಶೈಃ ಪುರುಷಾ ದ್ವಿಜಸತ್ತಮಾಃ ।
ನಿಜಾನ್ ಜಯಂತಿ ವೈ ಲೋಕಾನ್ ಸ್ವಾಜಾಪತ್ಯಾದಿಕಾನ್ ಕ್ರಮಾತ್ ॥೨೭॥

೨೩–೨೪. ಶೂದ್ರನಾದರೋ ದ್ವಿಜರ ಸೇವೆಯಿಂದಲೇ ಪಾಕಯಜ್ಞಾದಿಗಳಿಗೆ ಅಧಿಕಾರಿಯಾಗಿ ಉತ್ತಮ ಲೋಕವನ್ನು ಸಂಪಾದಿಸುವನು. ಅವನಿಗೆ ಇದನ್ನು ತಿನ್ನಬಾರದು ಇದನ್ನು ತಿನ್ನಬಹುದು, ಇದನ್ನು ಕುಡಿಯಬಾರದು ಇದನ್ನು ಕುಡಿಯಬಹುದು ಎಂಬ ನಿಯಮವಿಲ್ಲ. ಆದುದರಿಂದ ಶೂದ್ರನೇ ಶ್ರೇಷ್ಠನೆಂದು ಹೇಳಿದೆನು.

೨೫–೨೭. ಜನರು ತಮ್ಮ ಧರ್ಮಕ್ಕೆ ವಿರೋಧವಿಲ್ಲದಂತೆ ಸಂಪಾದಿಸಿದ ಧನವನ್ನು ಸತ್ಪಾತ್ರದಲ್ಲಿ ದಾನಮಾಡಬೇಕು. ವಿಧಿಗನುಸಾರವಾಗಿ ಆ ಧನದಿಂದಲೇ ಯಜ್ಞಾದಿಗಳನ್ನು ಮಾಡಬೇಕು. ಆ ಹಣವನ್ನು ಸಂಪಾದಿಸುವುದೂ ಸಂಪಾದಿಸಿದ ಹಣವನ್ನು ರಕ್ಷಿಸುವುದೂ ಅದನ್ನು ಸದ್ವಿನಿಯೋಗ ಮಾಡುವುದೂ ಒಂದಕ್ಕಿಂತ ಒಂದು ಬಹು ಕಷ್ಟವಾದುದು. ಹೀಗೆ ದ್ವಿಜರು ಬಹು ಕಷ್ಟದಿಂದ ಬ್ರಹ್ಮಲೋಕವೇ ಮುಂತಾದ ಸದ್ಗತಿಯನ್ನು ಪಡೆವರು,

ಯೋಷಿಚ್ಛುಶ್ರೂಷಣಾದ್ಭರ್ತುಃ ಕರ್ಮಣಾ ಮನಸಾ ಗಿರಾ ।
ತದ್ಧಿತಾ ಶುಭಮಾಪ್ನೋತಿ ತತ್ಸಾಲೋಕ್ಯಂ ಯತೋ ದ್ವಿಜಾಃ ॥ ೨೮ ॥

ನಾತಿ ಕ್ಲೇಶೇನ ಮಹತಾ ತಾನೇವ ಪುರುಷೋ ಯಥಾ ।
ತೃತೀಯಂ ವ್ಯಾಹೃತಂ ತೇನ ಮಯಾ ಸಾಧ್ವಿತಿ ಯೋಷಿತಃ ॥ ೨೯ ॥

ಏತದ್ವಃ ಕಥಿತಂ ವಿಪ್ರಾಯನ್ನಿಮಿತ್ತಮಿಹಾಗತಾಃ ।
ತತ್ಪೃಚ್ಛತ ಯಥಾ ಕಾಮಂ ಸರ್ವಂ ವಕ್ಷ್ಯಾಮಿ ವಸ್ತ್ವಟಂ ॥ ೩೦ ॥

ಋಷಯಸ್ತೇ ತತಃ ಪ್ರೋಚುಃ ಯತ್ಪ್ರಶ್ನವ್ಯಂ ಮಹಾಮುನೇ ।
ಅಸ್ಮಿನ್ನೇವ ತತ್ಪ್ರಶ್ನೇ ಯಥಾವತ್ಕಥಿತಂ ತ್ವಯಾ ॥ ೩೧ ॥

॥ ಶ್ರೀ ಪರಾಶರಃ ॥

ತತಃ ಪ್ರಹಸ್ಯ ತಾನಾಹ ಕೃಷ್ಣದ್ವೈಪಾಯನೋ ಮುನಿಃ ।
ವಿಸ್ಮಯೋತ್ಫುಲ್ಲನಯನಾಂ ಸ್ತಾಪಸಾಂಸ್ತಾನುಪಾಗತಾನ್ ॥ ೩೨ ॥

೨೮–೩೦. ಸ್ತ್ರೀಯರಾದರೋ ಮನೋವಾಕ್ಕಾಯಗಳಿಂದ ಪತಿಯ ಸೇವೆ ಮಾಡುವುದೊಂದರಿಂದಲೇ ಪತಿಸಾಲೋಕ್ಯವನ್ನು ಪಡೆವರು. ಪುರುಷರಂತೆ ಇವರು ವಿಶೇಷ ಕ್ಲೇಶಪಡಬೇಕಾದುದಿಲ್ಲ. ಆದುದರಿಂದ ಸ್ತ್ರೀಯತೇ ಶ್ರೇಷ್ಠರೆಂಬ ಕೇಳಿದೆನು ನನ್ನ ಅಭಿಪ್ರಾಯವನ್ನು ಹೇಳಿರುವೆನು. ಬ್ರಾಹ್ಮಣರೇ ! ನೀವು ಯಾವ ಕಾರಣದಿಂದ ಬಂದಿರಿ ? ಇಷ್ಟವಾದ ಪ್ರಶ್ನೆಯನ್ನು ಕೇಳಿರಿ. ನಿಮಗೆ ಸ್ಪಷ್ಟವಾದ ಉತ್ತರವನ್ನು ಹೇಳುವೆನು " ಎಂದನು.

೩೧-೩೨. ಬಳಿಕ ಋಷಿಗಳು " ಮಹಾಮುನಿಯೇ ! ನೀನು ಹೇಳಿದ ಮಾತಿನಿಂದಲೇ ನಮ್ಮ ಪ್ರಶ್ನೆಗೆ ಉತ್ತರವು ಬಂದ ಹಾಗಾಯಿತು. ಇನ್ನು ನಾವು ಪ್ರಶ್ನೆ ಮಾಡುವುದೇನು ?" ಎಂದರು. ಆಗ ಕೃಷ್ಣದ್ವೈಪಾಯನನು ನಗುತ್ತ ಆಶ್ಚರ್ಯದಿಂದ

ಮಯೈಷ ಭವತಾಂ ಪ್ರಶ್ನೋ ಜ್ಞಾತೋ ದಿವ್ಯೇನ ಚಕ್ಷುಷಾ ।
ತತೋ ಹಿ ವಃ ಸ್ಪಸಂಗೇನ ಸಾಧು ಸಾಧ್ವಿತಿ ಭಾಷಿತಂ ॥ ೩೩ ॥

ಸ್ವಲ್ಪೇನ ಹಿ ಪ್ರಯತ್ನೇನ ಧರ್ಮಃಸಿಧ್ಯತಿ ವೈ ಕಲೌ ।
ನರೈರಾತ್ಮಗುಣಾಂಭೋಭಿಃ ಕ್ಷಾಳಿತಾಖಿಲಕಿಲ್ಬಿಷೈಃ ॥ ೩೪ ॥

ಶೂದ್ರೈಶ್ಚ ದ್ವಿಜಶುಶ್ರೂಷಾ ತತ್ಪರೈರ್ದ್ವಿಜಸತ್ತಮಾಃ ।
ತಥಾ ಸ್ತ್ರೀಭಿರನಾಯಾಸಾತ್ಪತಿಶುಶ್ರೂಷಯೈವ ಹಿ ॥ ೩೫ ॥

ತತಸ್ತ್ರಿತಯಮಪ್ಯೇತತ್ ಮಮ ಧನ್ಯತರಂ ಮತಂ ।
ಧರ್ಮಸಂಪಾದನೇ ಕ್ಲೇಶೋ ದ್ವಿಜಾದೀನಾಂ ಕೃತಾದಿಷು ॥ ೩೬ ॥

ಭವದ್ಭಿರ್ಯದಭಿಪ್ರೇತಂ ತದೇತತ್ಕಥಿತಂ ಮಯಾ ।
ಅಪೃಷ್ಟೇನಾಪಿ ಧರ್ಮಜ್ಞಾಃ ಕಿಮನ್ಯತ್ಪ್ರೀಯತಾಂ ದ್ವಿಜಾಃ ॥ ೩೭ ॥

ನೋಡುತ್ತಿರುವ ಆ ಮುನಿಗಳನ್ನು ಕುರಿತು " ನಾನು ನಿಮ್ಮ ಪ್ರಶ್ನೆಯನ್ನು ದಿವ್ಯ ಜ್ಞಾನದಿಂದ ತಿಳಿದೆನು. ಆದುದರಿಂದಲೇ ಆ ಕ್ಷಣದಲ್ಲಿಯೇ ಸಂಗ್ರಹವಾದ ಉತ್ತರವನ್ನು ಸಾಧು ಶಬ್ದದಿಂದ ಹೇಳಿದೆನು. ಕಲಿಯುಗದಲ್ಲಿ ಸ್ವಲ್ಪ ಪ್ರಯತ್ನದಿಂದಲೇ ಧರ್ಮಲಾಭವಾಗುವುದು. ಮನುಜರು ಪರಮಾತ್ಮನ ಗುಣಶ್ಲಾಘನೆಯೆಂಬ ನೀರಿನಿಂದ ತಮ್ಮ ಸಮಸ್ತ ಪಾಪಗಳನ್ನೂ ಕಳೆದುಕೊಳ್ಳಬೇಕು. ಶೂದ್ರರು ದ್ವಿಜರ ಸೇವಾಸಕ್ತರಾಗಿದ್ದರೆ ಸಾಕು ಸ್ತ್ರೀಯರು ಪತಿಸೇವಾಸಕ್ತರಾಗಿದ್ದರೆ ಸಾಕು. ಈ ಕಾರಣದಿಂದ ಕಲಿಯುಗ, ಶೂದ್ರರು, ಸ್ತ್ರೀಯರು ಈ ಮೂರನ್ನೂ ಕೃತಾರ್ಥರೆಂದು ತಿಳಿದು ನನ್ನ ಅಭಿಪ್ರಾಯವನ್ನು ಹೇಳಿದೆನು. ದ್ವಿಜರಿಗೆ ಕೃತಾದಿ ಯುಗಗಳಲ್ಲಿ ಧರ್ಮಸಂಪಾದನೆಯ ವಿಷಯದಲ್ಲಿ ಬಹಳ ಕಷ್ಟವಿರುವುದು. ನೀವು ಕೇಳದಿದ್ದರೂ ನಿಮ್ಮ ಮನಸ್ಸಿನಲ್ಲಿದ್ದ ಪ್ರಶ್ನೆಗೆ ಈ ಉತ್ತರವನ್ನು ಹೇಳಿದೆನು " ಎಂದನು.

॥ ಶ್ರೀ ಪರಾಶರಃ ॥

ತತಸ್ತಂಪೂಜ್ಯ ತೇ ವ್ಯಾಸಂ ಪ್ರಶಶಂಸುಃ ಪುನಃ ಪುನಃ ।
ಯಥಾಗತಂ ದ್ವಿಜಾ ಜಗ್ಮುರ್ವ್ಯಾಸೋಕ್ತಿಕೃತನಿಶ್ಚಯಾಃ ॥ ೩೮ ॥

ಭವತೋಽಪಿ ಮಹಾಭಾಗ ರಹಸ್ಯಂ ಕಥಿತಂ ಮಯಾ ।
ಅತ್ಯಂತದುಷ್ಪ್ರಸ್ಯ ಕಲೇರಯಮೇಕೋ ಮಹಾನ್ ಗುಣಃ ॥ ೩೯ ॥

ಯಚ್ಚಾಯಂ ಭವತಾ ಪೃಷ್ಟೋ ಜಗತಾಮುಪಸಂಹೃತಿಂ ।
ಪ್ರಾಕೃತಾಮಂತರಾಳಾಂ ತಾಮಸ್ಯೇಷ ವದಾಮಿ ತೇ ॥ ೪೦ ॥

ಇತಿ ಶ್ರೀ ವಿಷ್ಣುಪುರಾಣೇ ಷಷ್ಠಾಂಶೇ ದ್ವಿತೀಯೋಽಧ್ಯಾಯಃ

೩೮-೩೯. ಆಮೇಲೆ ಆ ಮುನಿಗಳು ವ್ಯಾಸನನ್ನು ಪೂಜಿಸಿ ಅವನನ್ನು ಹೊಗಳಿ ಅವನ ಮಾತಿನಿಂದ ನಿಶ್ಚಯ ಜ್ಞಾನವನ್ನು ಪಡೆದು ತಮ್ಮ ಸ್ಥಾನಕ್ಕೆ ಹೋದರು. ಮೈತ್ರೇಯನೇ ! ನಿನಗೂ ಗುಟ್ಟಾದ ಈ ವಿಷಯವನ್ನು ಹೇಳಿರುವೆನು. ಅತ್ಯಂತ ದುಷ್ಪವಾದ ಕಲಿಯುಗಕ್ಕೆ ಇದೊಂದು ದೊಡ್ಡ ಗುಣವಿರುವುದು.

೪೦. ನೀನು ಜಗತ್ತಿನ ಉಪಸಂಹಾರ ರೂಪವಾದ ಬ್ರಹ್ಮನ ಒಂದು ದಿನಕ್ಕೂ ಮತ್ತೊಂದು ದಿನಕ್ಕೂ ನಡುವೆ ಉಂಟಾಗುವ ಪ್ರಾಕೃತ ಪ್ರಳಯ ವಿಚಾರವನ್ನು ಕೇಳಿದೆಯಷ್ಟೆ. ಅದನ್ನು ಮುಂದಿನ ಅಧ್ಯಾಯದಲ್ಲಿ ಹೇಳುವೆನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಆರನೆಯ ಅಂಶದಲ್ಲಿ

ಎರಡನೆಯ ಅಧ್ಯಾಯವು

ಮುಗಿದುದು

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಷಷ್ಠಾಂಶೇ

ತೃತೀಯೋಽಧ್ಯಾಯಃ

॥ ಶ್ರೀ ಪರಾಶರಃ ॥

ಸರ್ವೇಷಾಮೇವ ಭೂತಾನಾಂ ತ್ರಿವಿಧಃ ಪ್ರತಿಸಂಚರಃ ।
ನೈಮಿತ್ತಿಕಃ ಪ್ರಾಕೃತಿಕಃ ತಥೈವಾತ್ಯಂತಿಕೋ ಲಯಃ ॥ ೧ ॥

ಬ್ರಾಹ್ಮೋ ನೈಮಿತ್ತಿಕಸ್ತೇಷಾಂ ಕಲ್ಪಾಂತೇ ಪ್ರತಿಸಂಚರಃ ।
ಆತ್ಯಂತಿಕಸ್ತು ಮೋಕ್ಷಾಖ್ಯಃ ಪ್ರಾಕೃತೋ ದ್ವಿಪರಾರ್ಧಕಃ ॥ ೨ ॥

॥ ಮೈತ್ರೇಯಃ ॥

ಪರಾರ್ಧಸಂಖ್ಯಾಂ ಭಗವನ್ ಮಮಾಚಕ್ಷ್ವ ಯಯಾ ತು ಸಃ ।
ದ್ವಿಗುಣೀಕೃತಯಾ ಜ್ಞೇಯಃ ಪ್ರಾಕೃತಃ ಪ್ರತಿಸಂಚರಃ ॥ ೩ ॥

ಮೂರನೆಯ ಅಧ್ಯಾಯವು

೧-೨. ಸಮಸ್ತ ಭೂತಗಳಿಗೂ ನೈಮಿತ್ತಿಕ, ಪ್ರಾಕೃತಿಕ, ಆತ್ಯಂತಿಕ ಎಂಬ ದಾಗಿ ಮೂರು ಬಗೆಯ ಪ್ರಳಯಗಳಿರುವುವು. ಬ್ರಹ್ಮನ ಒಂದು ಹಗಲಿನ ಕೊನೆಯಲ್ಲಿ (ಕಲ್ಪದಲ್ಲಿ) ಆಗುವ ನಾಶವನ್ನು ನೈಮಿತ್ತಿಕ ಪ್ರಳಯವೆಂದೂ, ದ್ವಿಪರಾರ್ಧ ಪರ್ಯಂತವಾದ ಬ್ರಹ್ಮನ ಅಯುಸ್ಸಿನ ಕೊನೆಯಲ್ಲಿ ಆಗುವ ನಾಶವನ್ನು ಪ್ರಾಕೃತ ಪ್ರಳಯವೆಂದೂ, ಮೋಕ್ಷವನ್ನು ಆತ್ಯಂತಿಕಪ್ರಳಯವೆಂದೂ, ಹೇಳುವರು.

೩. ಮೈತ್ರೇಯನು, ಮಹಾಮಹಿಮರಾದ ಪರಾಶರರೇ ! ಪರಾರ್ಧ ಸಂಖ್ಯೆಯ ವಿಷಯವನ್ನು ನನಗೆ ತಿಳಿಸಬೇಕು. ಎರಡು ಪರಾರ್ಧ ವರ್ಷಗಳಿಗೆ ಪ್ರಾಕೃತ ಪ್ರಳಯ ವಾಗುವುದಷ್ಟೆ. ಅದು ಮನುಷ್ಯರ ಕಾಲದ ಅಳತೆಯಲ್ಲಿ ಎಷ್ಟು ವರ್ಷಗಳಾಗುವುವು ಎಂದು ಪ್ರಶ್ನೆ ಮಾಡಿದನು.

॥ ಶ್ರೀ ಪರಾಶರಃ ॥

ಸ್ಥಾನಾತ್ ಸ್ಥಾನಂ ದಶಗುಣಮೇಕಸ್ಮಾದ್ಗಣ್ಯತೇ ದ್ವಿಜ ।
ತತೋಽಷ್ಟಾದಶಮೇ ಭಾಗೇ ಪರಾರ್ಧಮಭಿಧೀಯತೇ ॥ ೪ ॥

ಪರಾರ್ಧದ್ವಿಗುಣಂ ಯತ್ತು ಪ್ರಾಕೃತಸ್ಸ ಲಯೋ ದ್ವಿಜ ।
ತದಾವ್ಯಕ್ತೇಽಖಿಲಂ ವ್ಯಕ್ತಂ ಸ್ವಹೇತೌ ಲಯಮೇತಿ ವೈ ॥ ೫ ॥

ನಿಮೇಷೋ ಮಾನುಷೋ ಯೋಽಸೌ ಮಾತ್ರಾಮಾತ್ರಾ ಪ್ರಮಾಣತಃ ।
ತೈಃ ಪಂಚದಶಭಿಃ ಕಾಷ್ಠಾ ತ್ರಿಂಶತ್ಕಾಷ್ಠಾಃ ಕಲಾ ಸ್ಮೃತಾಃ ॥ ೬ ॥

ನಾಡಿಕಾ ತು ಪ್ರಮಾಣೇನ ಸಾ ಕಲಾ ದಶಪಂಚ ಚ ॥ ೭ ॥

೪-೫. ಪರಾಶರರು ಹೇಳುವರು :— ಸಂಖ್ಯೆಯನ್ನು ಬಲದಿಂದ ಎಡಕ್ಕೆ ಲೆಕ್ಕಮಾಡುವಾಗ ಆ ಸಂಖ್ಯೆಯ ಸ್ಥಾನದ ಅಳತೆಯು ಕ್ರಮವಾಗಿ ಒಂದಕ್ಕಿಂತ ಒಂದು ಹತ್ತರಷ್ಟು ಹೆಚ್ಚುತ್ತ ಹೋಗುವುದು. ಈ ಕ್ರಮದಲ್ಲಿ ಹದಿನೆಂಟನೆಯ ಸ್ಥಾನವು ಪರಾರ್ಧವೆನಿಸುವುದು. ಎರಡು ಪರಾರ್ಧ ಮಾನುಷ ವರ್ಷಗಳಿಗೆ ಬ್ರಹ್ಮನ ನೂರು ವರ್ಷದ ಆಯುಸ್ಸು ಮುಗಿಯುವುದು. ಆಗ ಪ್ರಾಕೃತ ಪ್ರಳಯವಾಗುವುದು. ಆ ಸಮಯದಲ್ಲಿ ಬ್ರಹ್ಮನಿಂದ ಸೃಷ್ಟಿಯಾಗಿದ್ದ ಸಮಸ್ತ ವ್ಯಕ್ತ ಪ್ರಪಂಚವೂ ಕಾರಣ ರೂಪವಾದ ಅವ್ಯಕ್ತವೆಂಬ ಪ್ರಕೃತಿಯಲ್ಲಿ ಲಯಹೊಂದುವುದು. (ಏಕ, ದಶ, ಶತ, ಸಹಸ್ರ, ಅಯುತ, ಲಕ್ಷ, ಪ್ರಯುತ, ಕೋಟಿ, ಅರ್ಬುದ, ಅಬ್ಜ, ಖರ್ವ, ನಿಖರ್ವ, ಮಹಾಪದ್ಮ, ಶಂಕು, ಸಮುದ್ರ, ಮಧ್ಯ, ಅಂತ, ಪರಾರ್ಧ ಇವೇ ಸಂಖ್ಯಾಸ್ಥಾನಗಳು.)

೬-೭. ಮನುಷ್ಯರ ಕಾಲಪ್ರಮಾಣದಲ್ಲಿ ಒಂದು ಲಘುವಾದ ಅಕ್ಷರವನ್ನು ಚ್ಚರಿಸುವಷ್ಟು ಕಾಲಕ್ಕೆ ಮಾತ್ರೆಯೆಂದೂ, ಹದಿನೈದು ಮಾತ್ರಾಕಾಲಕ್ಕೆ ಕಾಷ್ಠಾ ವೆಂದೂ, ಮೂವತ್ತು ಕಾಷ್ಠಗಳಿಗೆ ಕಲೆಯೆಂದೂ, ಹದಿನೈದು ಕಲೆಗೆ ಒಂದು ಗಳಿಗೆಯೆಂದೂ ಹೆಸರು.

ಉನ್ಮಾನೇನಾಂಭಸಸ್ಸಾ ತು ಪಲಾನ್ಯರ್ಧತ್ರಯೋದಶ ।
ಮಾಗಧೇನ ತು ಮಾನೇನ ಜಲಪ್ರಸ್ಥಸ್ತು ಸ ಸ್ಮೃತಃ ॥
ಹೇಮಮಾಷೈಃ ಕೃತಚ್ಛಿದ್ರಶ್ಚತುರ್ಭಿಶ್ಚತುರಂಗುಲೈಃ ॥ ೪ ॥

ನಾಡೀಕಾಭ್ಯಾಮಥ ದ್ವಾಭ್ಯಾಂ ಮುಹೂರ್ತೋ ದ್ವಿಜಸತ್ತಮ ।
ಅಹೋರಾತ್ರಂ ಮುಹೂರ್ತಾಸ್ತು ತ್ರಿಂಶನ್ಮಾಸೋ ದಿನೈಸ್ತಥಾ ॥ ೯ ॥

ಮಾಸೈರ್ದ್ವಾದಶಭಿರ್ವರ್ಷಮಹೋರಾತ್ರಂ ತು ತದ್ದಿವಿ ।
ತ್ರಿಭಿರ್ವರ್ಷಶತೈರ್ವರ್ಷಂ ಷಷ್ಟ್ಯಾ ಚೈವಾಸುರದ್ವಿಷಾಂ ॥ ೧೦ ॥

ತೈಸ್ತು ದ್ವಾದಶಸಾಹಸ್ರೈಶ್ಚತುರ್ಯುಗಮುದಾಹೃತಂ ।
ಚತುರ್ಯುಗಸಹಸ್ರಂ ತು ಕಥ್ಯತೇ ಬ್ರಹ್ಮಣೋ ದಿನಂ ॥ ೧೧ ॥

---

೪. ಮಗಧದೇಶದ ಅಳತೆಯ ಪಾವಿನಲ್ಲಿ ಹನ್ನೆರಡೂವರೆ ಪಲನೀರು ತುಂಬ ಬಹುದು. ಹನ್ನೆರಡೂವರೆ ಪಲತೂಕ ತಾಮ್ರದಲ್ಲಿ ಹನ್ನೆರಡೂವರೆ ಪಲನೀರು ಹಿಡಿಯುವಷ್ಟು ಅಳತೆಯ ಗುಂಡಾದ ಬಟ್ಟಲನ್ನು ಮೇಲುಭಾಗವು ವಿಸ್ತಾರವಾಗಿರು ವಂತೆ ಮಾಡಿ ನಾಲ್ಕು ಮಾಷ ತೂಕ ಚಿನ್ನದಲ್ಲಿ ನಾಲ್ಕಂಗುಲ ಉದ್ದವಾದ ಸಲಾಕೆ ಯನ್ನು ಮಾಡಿ ಆ ಸಲಾಕೆಯ ಗಾತ್ರದಷ್ಟು ರಂದ್ರವನ್ನು ಆ ತಾಮ್ರದ ಬಟ್ಟಲಿಗೆ ಮಾಡಿ ನೀರಿನಲ್ಲಿ ತೇಲುವಂತೆ ಬಿಟ್ಟರೆ ಆ ರಂದ್ರದಿಂದ ಆ ಬಟ್ಟಲಿನೊಳಗೆ ಎಷ್ಟು ಕಾಲದಲ್ಲಿ ನೀರು ತುಂಬುವುದೋ ಆ ಕಾಲಕ್ಕೆ ಒಂದು ಗಳಿಗೆಯಾಗುವುದು. ಇದು ಪೂರ್ವೀಕರ ಘಟಿಕಾಯಂತ್ರ.

೯-೧೩. ಎರಡು ಗಳಿಗೆಗೆ ಒಂದು ಮುಹೂರ್ತವಾಗುವುದು. ಮೂವತ್ತು ಮುಹೂರ್ತಗಳಿಗೆ ಹಗಲು ರಾತ್ರಿಯಿಂದ ಕೂಡಿದ ಒಂದು ದಿನ. ಮೂವತ್ತು

ಸಕಲ್ಪಸ್ತತ್ರ ಮನವಸ್ಚತುರ್ಯುಗಮುದಾಹೃತಂ ।
ತದಂತೇ ಚೈವ ಮೈತ್ರೇಯ ಬ್ರಾಹ್ಮೋ ನೈಮಿತ್ತಿಕೋ ಲಯಃ ॥ ೧೨ ॥

ತಸ್ಯ ಸ್ವರೂಪಮತ್ಯುಗ್ರಂ ಮೈತ್ರೇಯ ಗದತೋ ಮಮ ।
ಶೃಣುಷ್ವ ಪ್ರಾಕೃತಂ ಭೂಯಸ್ತವ ವಕ್ಷ್ಯಾಮ್ಯಹಂ ಲಯಂ ॥ ೧೩ ॥

ಚತುರ್ಯುಗ ಸಹಸ್ರಾಂತೇ ಕ್ಷೀಣಪ್ರಾಯೇ ಮಹೀತಲೇ ।
ಅನಾವೃಷ್ಟಿರತೀವೋಗ್ರಾ ಜಾಯತೇ ಶತವಾರ್ಷಿಕೀ ॥ ೧೪ ॥

ತತೋ ಯಾನ್ತ್ಯಲ್ಪಸಾರಾಣಿ ತಾನಿ ಸತ್ವಾನ್ಯಶೇಷತಃ ।
ಕ್ಷಯಂ ಯಾಂತಿ ಮುನಿಶ್ರೇಷ್ಠ ಪಾರ್ಥಿವಾನ್ಯನುಪೀಡನಾತ್ ॥ ೧೫ ॥

ದಿನಗಳಿಗೆ ಒಂದು ತಿಂಗಳು. ಹನ್ನೆರಡು ತಿಂಗಳಿಗೆ ಒಂದು ವರ್ಷ. ಇದು ಮನುಷ್ಯರ ಕಾಲದ ಅಳತೆಯು. ಮನುಷ್ಯರ ಒಂದು ವರ್ಷಕ್ಕೆ ದೇವತೆಗಳಿಗೆ ಒಂದು ದಿನ. ಇಂತಹ ಮುನ್ನೂರರವತ್ತು ದಿನವಾದರೆ ದೇವತೆಗಳಿಗೆ ಒಂದು ವರ್ಷವಾಗುವುದು. ದೇವತೆಗಳ ಹನ್ನೆರಡು ಸಾವಿರ ವರ್ಷಗಳಿಗೆ ಒಂದು ಚತುರ್ಯುಗವಾಗಿರುವುದು. ಸಾವಿರ ಚತುರ್ಯುಗಕ್ಕೆ ಬ್ರಹ್ಮನಿಗೆ ಒಂದು ಹಗಲಾಗುವುದು. ಈ ಬ್ರಹ್ಮನ ಒಂದು ಹಗಲಿನಲ್ಲಿ ಹದಿನಾಲ್ಕು ಮನುಗಳ ಅಧಿಕಾರವು ಕಳೆದುಹೋಗುವುದು ಆ ಬ್ರಹ್ಮನ ಹಗಲಿನ ಕೊನೆಯಲ್ಲಿ ನೈಮಿತ್ತಿಕ ಪ್ರಳಯವಾಗುವುದು. ಮೈತ್ರೇಯನೇ! ಕ್ರೂರವಾದ ನೈಮಿತ್ತಿಕ ಪ್ರಳಯದ ಸ್ವರೂಪವನ್ನು ಮೊದಲು ಹೇಳುವೆನು ಕೇಳು. ಆಮೇಲೆ ಪ್ರಾಕೃತ ಪ್ರಳಯದ ಸ್ವರೂಪವನ್ನು ವಿಸ್ತರಿಸಿ ಹೇಳುವೆನು.

೧೪–೧೫. ಚತುರ್ಯುಗಗಳ ಸಾವಿರದ ಕೊನೆಯಲ್ಲಿ ಭೂಮಂಡಲವು ನಾಶವಾಗುವುದಕ್ಕೆ ಪ್ರಾರಂಭಿಸಿದಾಗ ಒಂದು ನೂರು ವರ್ಷದ ಕ್ರೂರವಾದ ಅನಾವೃಷ್ಟಿಕಾಲವು ಉಂಟಾಗುವುದು. ಇದರಿಂದ ಪ್ರಾಣಿಗಳೆಲ್ಲವೂ ಬಲಹೀನವಾಗುವುವು. ಭೂಮಿಯಲ್ಲಿದ್ದ ಪ್ರಾಣಿಗಳೆಲ್ಲ ಪ್ರಾಣಸಂಕಟದಿಂದ ನಾಶವಾಗುವುವು.

ತತಸ್ಸ ಭಗವಾನ್ವಿಷ್ಣೂ ರುದ್ರರೂಪಧರೋಽವ್ಯಯಃ ।
ಕ್ಷಯಾಯ ಯತತೇ ಕರ್ತುಮಾತ್ಮಸ್ಥಾಸ್ಸಕಲಾಃ ಪ್ರಜಾಃ ॥ ೧೬ ॥

ತತಸ್ಸ ಭಗವಾನ್ವಿಷ್ಣುರ್ಭಾನೋಸ್ಸಪ್ತಸು ರಶ್ಮಿಷು ।
ಸ್ಥಿತಃ ಪಿಬತ್ಯಶೇಷಾಣಿ ಜಲಾನಿ ಮುನಿಸತ್ತಮ ॥ ೧೭ ॥

ಪೀತ್ವಾಂಭಾಂಸಿ ಸಮಸ್ತಾನಿ ಪ್ರಾಣಭೂಮಿಗತಾನ್ಯಪಿ ।
ಶೋಷಂ ನಯತಿ ವೈತ್ರೇಯ ಸಮಸ್ತಂ ಪೃಥಿವೀತಲಂ ॥ ೧೮ ॥

ಸಮುದ್ರಾನ್ ಸರಿತಶ್ಶೈಲ ನದೀಪ್ರಸ್ರವಣಾನಿ ಚ ।
ಪಾತಾಳೇಷು ಚ ಯತ್ತೋಯಂ ತತ್ಸರ್ವಂ ನಯತಿ ಕ್ಷಯಂ ॥ ೧೯ ॥

ತತಸ್ತಸ್ಯಾನುಭಾವೇನ ತೋಯಾಹಾರೋಪಬೃಂಹಿತಾಃ ।
ತ ಏವ ರಶ್ಮಯಸ್ಸಪ್ತ ಜಾಯಂತೇ ಸಪ್ತಧಾಸ್ಯರಾಃ ॥ ೨೦ ॥

೧೬-೧೯. ಆಮೇಲೆ ಮಹಾವಿಷ್ಣುವು ರುದ್ರರೂಪನಾಗಿ ತನ್ನಲ್ಲಿರುವ ಸಕಲ ಪ್ರಜೆಗಳನ್ನೂ ತನ್ನಲ್ಲಿಯೇ ಲೀನಮಾಡಿಕೊಳ್ಳಲು ಪ್ರಯತ್ನಿಸುವನು. ಅದಕ್ಕಾಗಿ ಆ ಮಹಾವಿಷ್ಣುವು ಸೂರ್ಯನ ಏಳು ಬಗೆಯ ಕಿರಣಗಳಲ್ಲಿದ್ದು ಸಮಸ್ತ ನೀರಿನ ಅಂಶವನ್ನೂ ಹೀರಿಬಿಡುವನು. (ಸುಷುಮ, ಹರಿಕೇಶ, ವಿಶ್ವಕರ್ಮ, ವಿಶ್ವವ್ಯಚ, ಸ್ವಧಾ, ಸಂಯದ್ವಸು, ಅರ್ವಾಗ್ವಸು, ಎಂಬಿವೇ ಸೂರ್ಯನ ಏಳು ಬಗೆಯ ಕಿರಣಗಳು.) ಪ್ರಾಣಿಗಳಲ್ಲಿಯೂ ಭೂಮಿಯಲ್ಲಿಯೂ ಇರುವ ನೀರನ್ನು ಹೀರಿ ಅವುಗಳನ್ನು ಒಣಗಿಸಿಬಿಡುವನು. ಸಮುದ್ರ, ಸರೋವರ, ನದಿ, ಪರ್ವತ, ಪಾತಾಳ, ಇವುಗಳ ನೀರೆಲ್ಲ ಒಣಗಿ ನಾಶವಾಗಿ ಹೋಗುವುದು.

೨೦-೨೩. ಬಳಿಕ ಆ ಮಹಾವಿಷ್ಣುವಿನ ಮಹಿಮೆಯಿಂದಲೇ ಆ ನೀರನ್ನೆಲ್ಲ ಕುಡಿದುದರಿಂದ ಹೆಚ್ಚಿದ ಆ ಸೂರ್ಯನ ಏಳು ಬಗೆಯ ಕಿರಣಗಳು ಆರೋಗ,

ಅಧಶ್ಚೋರ್ಧ್ವಂ ಚ ತೇ ದೀಪ್ತಾಸ್ತತಸ್ಸಪ್ತ ದಿವಾಕರಾಃ ।
ದಹಂತ್ಯಶೇಷಂ ತ್ರೈಲೋಕ್ಯಂ ಸಪಾತಾಳತಲಂ ದ್ವಿಜ ॥ ೨೧ ॥

ದಹ್ಯಮಾನಂ ತು ತೈರ್ದೀಪ್ತೈಸ್ತ್ರೈಲೋಕ್ಯಂ ದ್ವಿಜ ಭಾಸ್ಕರೈಃ ।
ಸಾದ್ರಿ ನದ್ಯರ್ಣವಾಭೋಗಂ ನಿಸ್ನೇಹಮಭಿಜಾಯತೇ ॥ ೨೨ ॥

ತತೋ ನಿರ್ದಗ್ಧವೃಕ್ಷಾಂಬು ತ್ರೈಲೋಕ್ಯಮಖಿಲಂ ದ್ವಿಜ ।
ಭವತ್ಯೇಷಾ ಚ ವಸುಧಾ ಕೂರ್ಮಪೃಷ್ಠೋಪಮಾಕೃತಿಃ ॥ ೨೩ ॥

ತತಃ ಕಾಲಾಗ್ನಿರುದ್ರೋಽಸೌ ಭೂತ್ವಾ ಸರ್ವಹರೋಽನಲಃ ।
ಶೇಷಾ ಹಿ ಶ್ವಾಸಸಂಭೂತಃ ಪಾತಾಳಾನಿ ದಹತ್ಯಧಃ ॥ ೨೪ ॥

ಪಾತಾಳಾನಿ ಸಮಸ್ತಾನಿ ಸ ದಗ್ಧ್ವಾ ಜ್ವಲನೋ ಮಹಾನ್ ।
ಭೂಮಿಮಭ್ಯೇತ್ಯ ಸಕಲಂ ಹಿನಸ್ತಿ ವಸುಧಾತಲಂ ॥ ೨೫ ॥

ಭ್ರಾಜ, ಪಟರ, ಪತಂಗ, ಸ್ವರ್ಣರೋಚಿ, ಅತಿಷೀರ್ಮಾ, ವಿಭಾಸ ಎಂಬ ವೇದ ಪ್ರಸಿದ್ಧರಾದ ಏಳು ಸೂರ್ಯರಾಗುವರು. ಆ ಏಳು ಜನ ಸೂರ್ಯರೂ ಮೂರು ಲೋಕವನ್ನೂ ಪಾತಾಳಲೋಕದೊಡನೆ ಕೆಳಗೂ ಮೇಲೆಯೂ ಸುಟ್ಟುಬಿಡುವರು ಆ ಸೂರ್ಯರ ಪ್ರಕಾಶದಿಂದ ಸುಡುತ್ತಿರುವ ಭೂರ್ಭುವಸ್ವರ್ಲೋಕಗಳು ಪರ್ವತ ಸಮುದ್ರಗಳೊಡನೆ ಕಠಿನವಾಗುವುವು. ಆಗ ಮೂರು ಲೋಕವೂ ಆಮೆಯ ಚಿಪ್ಪಿನಂತೆ ಒರಟಾಗಿ ಹೋಗುವುದು.

೨೪-೨೫. ಆದಿಶೇಷನ ನಿಶ್ವಾಸದಿಂದ ಕಾಲಾಗ್ನಿರುದ್ರನೆಂಬ ಅಗ್ನಿಯು ಹುಟ್ಟಿ ಪಾತಾಳ ಲೋಕವನ್ನೆಲ್ಲ ಸುಟ್ಟು ಭೂಮಿಗೆ ಬಂದು ಭೂಮಂಡಲವನ್ನೆಲ್ಲ ಬೂದಿ ಮಾಡುವುದು. ಅದರ ಜ್ವಾಲೆಯು ಭುವರ್ಲೋಕ ಸ್ವರ್ಗಲೋಕಗಳಿಗೂ, ವ್ಯಾಪಿಸಿ

ಭುವರ್ಲೋಕಂ ತತಸ್ಸರ್ವಂ ಸ್ವರ್ಲೋಕಂ ಚ ಸುದಾರುಣಃ ।
ಜ್ವಾಲಾಮಾಲಾ ಮಹಾವರ್ತಸ್ತ್ರೈವ ಪರಿವರ್ತತೇ ॥ ೨೬ ॥

ಅಂಬರೀಷಮಿವಾಭಾತಿ ತ್ರೈಲೋಕ್ಯಮಖಿಲಂ ತದಾ ।
ಜ್ವಾಲಾವರ್ತಪರೀವಾರಮುಪಕ್ಷೀಣ ಚರಾಚರಂ ॥ ೨೭ ॥

ತತಸ್ತಾಪಪರೀತಾಸ್ತು ಲೋಕದ್ವಯನಿವಾಸಿನಃ ।
ಕೃತಾಧಿಕಾರಾ ಗಚ್ಛಂತಿ ಮಹರ್ಲೋಕಂ ಮಹಾಮುನೇ ॥ ೨೮ ॥

ತಸ್ಮಾದಪಿ ಮಹಾತಾಪತಪ್ತಾ ಲೋಕಾಸ್ತತಃ ಪರಂ ।
ಗಚ್ಛಂತಿ ಜನಲೋಕಂ ತೇ ದಶಾವೃತ್ತ್ಯಾ ಪರೈಷಿಣಃ ॥ ೨೯ ॥

ತತೋ ದಗ್ಧ್ವಾ ಜಗತ್ಸರ್ವಂ ರುದ್ರರೂಪೀ ಜನಾರ್ದನಃ ।
ಮುಖನಿಶ್ವಾಸಜಾನ್ಮೇಘಾನ್ ಕರೋತಿ ಮುನಿಸತ್ತಮ ॥ ೩೦ ॥

ಅವುಗಳಲ್ಲಿದ್ದ ಚರಾಚರ ಪ್ರಾಣಿಗಳೆಲ್ಲ ನಾಶವಾದ ಮೇಲೆ ಆ ಲೋಕಗಳೆಲ್ಲವೂ ಹುರಿಯುವ ಓಡಿನಂತೆ ಕಾಣುತ್ತಿರುವುವು.

೨೮-೨೯. ಆ ಮೇಲೆ ಭುವರ್ಲೋಕ ಸ್ವರ್ಗಲೋಕಗಳಲ್ಲಿ ವಾಸಮಾಡುತ್ತಿದ್ದ ಅಧಿಕಾರಿಕಪುರುಷರಾದ ಮನ್ವಾದಿಗಳು ಸೂರ್ಯನ ತಾಪವನ್ನು ತಡೆಯಲಾರದೆ ಮಹರ್ಲೋಕಕ್ಕೆ ಹೋಗುವರು. ಅಲ್ಲಿಯೂ ಅವರು ತಮ್ಮ ಕರ್ಮಸಂಬಂಧವಾದ ಫಲಾನುಭವಾವಸ್ಥೆಯಿಂದ ಆ ಸೂರ್ಯ ಕಿರಣಗಳ ಮಹಾತಾಪಕ್ಕೆ ಸಿಕ್ಕಿ ಅದಕ್ಕಿಂತ ಊರ್ಧ್ವಲೋಕವಾದ ಜನಲೋಕಕ್ಕೆ ಹೋಗುವರು. ಅಲ್ಲಿದ್ದುಕೊಂಡು ಅವರು ಪರಬ್ರಹ್ಮಪ್ರಾಪ್ತಿಯನ್ನು ಅಪೇಕ್ಷಿಸುತ್ತ ಕರ್ಮ ಫಲವನ್ನನುಭವಿಸುತ್ತಿದ್ದು ಅದು ಮುಗಿದ ಮೇಲೆ ಪರಬ್ರಹ್ಮ ತತ್ವದಲ್ಲಿ ಐಕ್ಯರಾಗುವರು.

೩೦-೩೭. ಮಹಾವಿಷ್ಣುವು ರುದ್ರರೂಪನಾಗಿ ಪ್ರಪಂಚವನ್ನೆಲ್ಲ ಸುಟ್ಟ ಮೇಲೆ ತನ್ನ ಬಾಯಿಂದ ಹುಟ್ಟಿದ ಗಾಳಿಯಿಂದ ಮೇಘಗಳನ್ನುಂಟುಮಾಡುವನು.

ತತೋ ಗಜಕುಲಪ್ರಖ್ಯಾಸ್ತಟಿತ್ವಂತೋಽತಿನಾದಿನಃ ।
ಉತ್ತಿಷ್ಠಂತಿ ತಥಾ ವ್ಯೋಮ್ನಿ ಘೋರಾಸ್ಸಂವರ್ತಕಾ ಘನಾಃ ॥ ೩೧ ॥

ಕೇಚಿನ್ನೀಲೋತ್ಪಲಶ್ಯಾಮಾಃ ಕೇಚಿತ್ಕುಮುದಸನ್ನಿಭಾಃ ।
ಧೂಮ್ರವರ್ಣಾ ಘನಾಃ ಕೇಚಿತ್ಕೇಚಿತ್ಪೀತಾಃ ಪಯೋಧರಾಃ ॥ ೩೨ ॥

ಕೇಚಿದ್ರಾಸಭವರ್ಣಾಭಾ ಲಾಕ್ಷಾರಸನಿಭಾಸ್ತಥಾ ।
ಕೇಚಿದ್ವೈಡೂರ್ಯಸಂಕಾಶಾ ಇಂದ್ರನೀಲನಿಭಾಸ್ತಥಾ ॥ ೩೩ ॥

ಶಂಖಕುಂದನಿಭಾಶ್ಚಾನ್ಯೇ ಜಾತ್ಯಂಜನನಿಭಾಃ ಪರೇ ।
ಇಂದ್ರಗೋಪನಿಭಾಃ ಕೇಚಿತ್ತತಃ ಶಿಖಿನಿಭಾಸ್ತಥಾ ॥ ೩೪ ॥

ಮನಶ್ಶಿಲಾಭಾ ಕೇಚಿದ್ವೈ ಹರಿತಾಳನಿಭಾಃ ಪರೇ ।
ಜಾಪಪತ್ರನಿಭಾಃ ಕೇಚಿದುತ್ತಿಷ್ಠಂತೇ ಮಹಾಘನಾಃ ॥ ೩೫ ॥

ಕೇಚಿತ್ಪುರವರಾಕಾರಾಃ ಕೇಚಿತ್ಪರ್ವತಸನ್ನಿಭಾಃ ।
ಕೂಟಾಗಾರನಿಭಾಶ್ಚಾನ್ಯೇ ಕೇಚಿತ್ಸ್ಥಲನಿಭಾ ಘನಾಃ ॥ ೩೬ ॥

ಹಾಹಾರಾವಾ ಮಹಾಕಾಯಾಃ ಪೂರಯಂತಿ ನಭಸ್ತಲಂ ।
ಶಮಯಂತ್ಯಖಿಲಂ ವಿಪ್ರ ತ್ರೈಲೋಕ್ಯಾಂತರಧಿಷ್ಠಿತಂ ॥ ೩೭ ॥

ಸಂವರ್ತಕವೆಂಬ ಆ ಮೇಘಗಳು ದೊಡ್ಡ ಆನೆಗಳ ಶರೀರದಂತೆ ಮಿಂಚಿನೊಡನೆ ಕೂಡಿ ದೊಡ್ಡ ಧ್ವನಿಯನ್ನು ಮಾಡುತ್ತ ಆಕಾಶದಲ್ಲಿ ಕೆಲವು ನೀಲಿಬಣ್ಣವಾಗಿಯೂ, ಕೆಲವು ಹೊಗೆಯ ಬಣ್ಣವಾಗಿಯೂ, ಹಳದಿಬಣ್ಣ, ಬೂದಿಯ ಬಣ್ಣ, ಅರಗಿನ ಬಣ್ಣ, ಶಂಖ, ಇಂದ್ರನೀಲ, ಕೆಂಪು, ಅರದಳ, ಮಣಿಶಿಲೆ, ಜಾಪವೆಂಬ ಹಕ್ಕೆಯ ಬಣ್ಣ ಇವುಗಳಿಂದ ಕೂಡಿ ಕೆಲವು ಪಟ್ಟಣದಂತೆಯೂ, ಕೆಲವು ಪರ್ವತದಂತೆಯೂ, ಮನೆಯಂತೆಯೂ, ನೆಲದಂತೆಯೂ, ಕಾಣುತ್ತ ದೊಡ್ಡಧ್ವನಿ ಮತ್ತು ಶರೀರಗಳಿಂದ ಕೂಡಿ ಆಕಾಶದಲ್ಲಿ ತುಂಬಿಕೊಂಡು ದೊಡ್ಡ ಮಳೆಯನ್ನು ಸುರಿಸುತ್ತ ಆ ಭಯಂಕರವಾದ ಅಗ್ನಿಯನ್ನು ಶಾಂತ ಮಾಡುವುವು.

ನಷ್ಟೇ ಚಾಗ್ನೌ ಚ ಸತತಂ ವರ್ಷಮಾಣಾಹ್ಯಹರ್ನಿಶಂ ।
ಪ್ಲಾವಯಂತಿ ಜಗತ್ಸರ್ವಮಂಭೋಭಿರ್ಮುನಿಸತ್ತಮ ॥ ೩೮ ॥

ಧಾರಾಭಿರತಿಮಾತ್ರಾಭಿಃ ಪ್ಲಾವಯಿತ್ವಾಖಿಲಾಂ ಭುವಂ ।
ಭುವರ್ಲೋಕಂ ತಥೈವೋರ್ಧ್ವಂ ಪ್ಲಾವಯಂತಿ ಹಿ ತೇ ದ್ವಿಜ ॥ ೩೯ ॥

ಅಂಧಕಾರೀಕೃತೇ ಲೋಕೇ ನಷ್ಟೇ ಸ್ಥಾವರಜಂಗಮೇ ।
ವರ್ಷಂತಿ ತೇ ಮಹಾಮೇಘಾ ವರ್ಷಾಣಾಮಧಿಕಂ ಶತಂ ॥ ೪೦ ॥

ಏವಂ ಭವತಿ ಕಲ್ಪಾಂತೇ ಸಮಸ್ತಂ ಮುನಿಸತ್ತಮ ।
ವಾಸುದೇವಸ್ಯ ಮಾಹಾತ್ಮ್ಯಾನ್ನಿತ್ಯಸ್ಯ ಪರಮಾತ್ಮನಃ ॥ ೪೧ ॥

ಇತಿ ಶ್ರೀ ವಿಷ್ಣುಪುರಾಣೇ ಷಷ್ಠಾಂಶೇ ತೃತೀಯೋಽಧ್ಯಾಯಃ

೩೮-೪೦. ಸತತವಾಗಿ ಬೀಳುತ್ತಿರುವ ಆ ಮಳೆಯಿಂದ ಬೆಂಕಿಯು ಶಾಂತವಾಗಿ ಭೂರ್ಭುವಸ್ವರ್ಲೋಕಗಳು ನೀರಿನಲ್ಲಿ ತೇಲುತ್ತಿರುವುವು. ಲೋಕವೆಲ್ಲ ಕತ್ತಲೆಯಿಂದ ಮುಚ್ಚಿ ಚರಾಚರ ಪ್ರಾಣಿಗಳೆಲ್ಲವೂ ನಾಶವಾದ ಮೇಲೆ ಆ ಮೇಘಗಳು ಒಂದು ನೂರು ವರ್ಷಕ್ಕಿಂತ ಸ್ವಲ್ಪ ಹೆಚ್ಚು ಕಾಲ ಮಳೆಯನ್ನು ಸುರಿಸುತ್ತಿರುವುವು.

೪೧. ಮುನಿಶ್ರೇಷ್ಠನೇ ! ಕೇಳು ನಿತ್ಯನೂ, ಪರಮಾತ್ಮನೂ, ಆದ ವಾಸುದೇವನ ಮಹಿಮೆಯಿಂದ ಕಲ್ಪಾಂತದಲ್ಲಿ ಸಮಸ್ತ ಪ್ರಪಂಚವೂ ಈ ರೀತಿಯಲ್ಲಿರುವುದು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಆರನೆಯ ಅಂಶದಲ್ಲಿ

ಮೂರನೆಯ ಅಧ್ಯಾಯವು

ಮುಗಿದುದು.

ಶ್ರೀ ವಿಷ್ಣು ಪುರಾಣೇ ಷಷ್ಠಾಂಶೇ

ಚತುರ್ಥೋಽಧ್ಯಾಯಃ

॥ ಶ್ರೀ ಪರಾಶರಃ ॥

ಸಪ್ತರ್ಷಿಸ್ಥಾನಮಾಕ್ರಮ್ಯ ಸ್ಥಿತೇಂಭಸಿ ಮಹಾಮುನೇ ।
ಏಕಾರ್ಣವಂ ಭವತ್ಯೇತತ್ತ್ರೈಲೋಕ್ಯಮಖಿಲಂ ತತಃ ॥ ೧ ॥

ಮುಖನಿಶ್ವಾಸಜೋ ವಿಷ್ಣೋರ್ವಾಯುಸ್ತಾನ್ ಜಲದಾಂಸ್ತತಃ ।
ನಾಶಯನ್ ವಾತಿ ಮೈತ್ರೇಯ ವರ್ಷಾಣಾಮಪರಂ ಶತಂ ॥ ೨ ॥

ಸರ್ವಭೂತಮಯೋಽಚಿಂತ್ಯೋ ಭಗವಾನ್ಪೃಥಿವೀಪತಿಃ ।
ಅನಾದಿರಾದಿರ್ವಿಶ್ವಸ್ಯ ಪೀತ್ವಾ ವಾಯುಮಶೇಷತಃ ॥ ೩ ॥

ನಾಲ್ಕನೆಯ ಅಧ್ಯಾಯವು.

೧–೪. ಮೈತ್ರೇಯನೇ! ನೈಮಿತ್ತಿಕ ಪ್ರಳಯದಲ್ಲಿ ನೂರುವರ್ಷದವರೆಗೆ ಬಿಡದೆ ಸುರಿದ ಮಳೆಯಿಂದುಂಟಾದ ನೀರು ಸಪ್ತರ್ಷಿ ಮಂಡಲದವರೆಗೂ ವ್ಯಾಪಿಸಿ ಮೂರು ಲೋಕಗಳೂ ಒಂದೇ ಸಮುದ್ರವಾಗುವುದು. ಆಗ ವಿಷ್ಣುವಿನ ಬಾಯಿಂದ ಹೊರಟ ನಿಶ್ವಾಸದ ಗಾಳಿಯು ಆ ಮೇಘಗಳನ್ನೆಲ್ಲ ನಾಶಮಾಡುತ್ತ ಮತ್ತೆ ನೂರು ವರ್ಷದ ವರೆಗೆ ಬೀಸುತ್ತಿರುವುದು. ಆ ಸಮಯದಲ್ಲಿ ಅನಾದಿಯಾದವನೂ ಸಮಸ್ತ ಪ್ರಪಂಚಕ್ಕೂ ಕಾರಣನೂ ಸರ್ವಭೂತಸ್ವರೂಪನೂ ಮನಸ್ಸಿನಿಂದ ಊಹಿಸಲ

ಏಕಾರ್ಣವೇ ತತಸ್ತಸ್ಮಿನ್ ಶೇಷಶಯ್ಯಾಗತಃ ಪ್ರಭುಃ ।
ಬ್ರಹ್ಮರೂಪಧರಶ್ಶೇತೇ ಭಗವಾನಾದಿಕೃದ್ಧರಿಃ ॥ ೪ ॥

ಜನಲೋಕಗತೈಸ್ಸಿದ್ಧೈಸ್ಸನಕಾದ್ಯೈರಭಿಷ್ಟುತಃ ।
ಬ್ರಹ್ಮಲೋಕಗತೈಶ್ಚೈವ ಚಿಂತ್ಯಮಾನೋ ಮುಮುಕ್ಷುಭಿಃ ॥ ೫ ॥

ಆತ್ಮಮಾಯಾಮಯೀಂ ದಿವ್ಯಾಂ ಯೋಗನಿದ್ರಾಂ ಸಮಾಸ್ಥಿತಃ ।
ಆತ್ಮಾನಂ ವಾಸುದೇವಾಖ್ಯಂ ಚಿಂತಯನ್ಮಧುಸೂದನಃ ॥ ೬ ॥

ಏಷ ನೈಮಿತ್ತಿಕೋ ನಾಮ ಮೈತ್ರೇಯ ಪ್ರತಿಸಂಚರಃ ।
ನಿಮಿತ್ತಂ ತತ್ರ ಯಚ್ಛೇತೇ ಬ್ರಹ್ಮರೂಪಧರೋ ಹರಿಃ ॥ ೭ ॥

ಯದಾ ಜಾಗರ್ತಿ ಸರ್ವಾತ್ಮಾ ಸ ತದಾ ಚೇಷ್ಟತೇ ಜಗತ್ ।
ನಿಮೀಲತ್ಯೇತದಖಿಲಂ ಮಾಯಾಶಯ್ಯಾಂ ಗತೇಽಚ್ಯುತೇ ॥ ೮ ॥

ಸಾಧ್ಯನೂ ಆದ ಮಹಾವಿಷ್ಣುವು ಆ ವಾಯುವನ್ನೆಲ್ಲ ಹೀರಿ ಆ ಏಕಾರ್ಣವದಲ್ಲಿ ಆದಿಶೇಷನ ಹಾಸಿಗೆಯ ಮೇಲೆ ಪರಬ್ರಹ್ಮಸ್ವರೂಪನಾಗಿ ಮಲಗಿರುವನು.

೫-೭. ಜನೋಲೋಕದಲ್ಲಿರುವ ಸಿದ್ಧರೂ ಸನಕಾದಿಯೋಗಿಗಳೂ ಅವನನ್ನು ಸ್ತೋತ್ರಮಾಡುತ್ತಿರುವರು. ಬ್ರಹ್ಮಲೋಕದಲ್ಲಿರುವ ಮುಮುಕ್ಷುಗಳು ಅವನನ್ನು ಧ್ಯಾನಮಾಡುತ್ತಿರುವರು. ಆ ವಿಷ್ಣುವು ತನ್ನ ಮಾಯಾಶಕ್ತಿ ಸ್ವರೂಪವಾದ ಯೋಗನಿದ್ರೆಯನ್ನಾಶ್ರಯಿಸಿ ವಾಸುದೇವನೆಂಬ ಹೆಸರುಳ್ಳ ಸ್ವರೂಪವನ್ನು ಧ್ಯಾನಿಸುತ್ತಿರುವನು. ಮೈತ್ರೇಯನೇ ! ಬ್ರಹ್ಮರೂಪನಾದ ವಿಷ್ಣುವು ನಿದ್ರೆಮಾಡುವ ನಿಮಿತ್ತ (ಕಾರಣ) ದಿಂದ ಇದನ್ನು ನೈಮಿತ್ತಿಕ ಪ್ರಳಯವೆಂದು ಹೇಳುವರು.

೮-೧೧. ಸರ್ವಾತ್ಮಸ್ವರೂಪನಾದ ವಿಷ್ಣುವು ಎಚ್ಚರವಾಗಿದ್ದಾಗ ಈ ಪ್ರಪಂಚವೆಲ್ಲವೂ ಕೆಲಸಮಾಡುತ್ತಿರುವುದು. ಅವನು ಯೋಗನಿದ್ರೆಯನ್ನು ಮಾಡುತ್ತಿರು

ಪದ್ಮಯೋನೇರ್ದಿನಂ ಯತ್ತು ಚತುರ್ಯುಗ ಸಹಸ್ರವತ್ ।
ವಿಕಾರ್ಣವೀಕೃತೇ ಲೋಕೇ ತಾವತೀ ರಾತ್ರಿರಿಷ್ಯತೇ ॥ ೯ ॥

ತತಃ ಪ್ರಬುದ್ಧೋ ರಾತ್ರ್ಯಂತೇ ಪುನಸ್ಸೃಷ್ಟಿಂ ಕರೋತ್ಯಜಃ ।
ಬ್ರಹ್ಮಸ್ವರೂಪಧೃದ್ವಿಷ್ಣುರ್ಯಥಾ ತೇ ಕಥಿತಂ ಪುರಾ ॥ ೧೦ ॥

ಇತ್ಯೇಷ ಕಲ್ಪಸಂಹಾರೋ ವಾಂತರೇ ಪ್ರಳಯೋದ್ವಿಜ ।
ನೈಮಿತಿಕಸ್ತೇ ಕಥಿತಃ ಪ್ರಾಕೃತಂ ಶೃಣ್ವತಃ ಪರಃ ॥ ೧೧ ॥

ಅನಾವೃಷ್ಟ್ಯಾದಿಸಂಪರ್ಕಾತ್ಕೃತೇ ಸಂಕ್ಷಾಳನೇ ಮುನೇ ।
ಸಮಸ್ತೇಷ್ವೇವಲೋಕೇಷು ಪಾತಾಳೇಷ್ವಪಿಲೇಷು ಚ ॥ ೧೨ ॥

ವಾಗ ಜಗತ್ತೆಲ್ಲವೂ ಲೀನವಾಗಿರುವುದು. ಸಾವಿರ ಚತುರ್ಯುಗಗಳ ಕಾಲವು ಬ್ರಹ್ಮನ ಹಗಲಾಗಿರುವುದು. ಕೊನೆಯಲ್ಲಿ ಲೋಕವೆಲ್ಲ ಸಮುದ್ರರೂಪವಾಗಿದ್ದಾಗ ಸಾವಿರ ಚತುರ್ಯುಗಗಳ ಕಾಲದವರೆಗೆ ಅವನಿಗೆ ರಾತ್ರಿಯಾಗಿರುವುದು. ರಾತ್ರಿಯು ಕಳೆದ ಮೇಲೆ ಬ್ರಹ್ಮನು ಎಚ್ಚರಗೊಂಡು ಸೃಷ್ಟಿಯನ್ನು ಮಾಡುವನು. ಈ ಬ್ರಹ್ಮ ಸ್ವರೂಪನಾದ ವಿಷ್ಣುವಿನ ಒಂದು ದಿನಕ್ಕೆ ಕಲ್ಪವೆಂದು ಹೆಸರು. ಕಲ್ಪಸಂಬಂಧವಾದ ಪ್ರಳಯವು ನೈಮಿತ್ತಿಕವೆಂಬ ಸಣ್ಣಪ್ರಳಯವು ಮುಂದೆ ಪ್ರಾಕೃತ ಪ್ರಳಯದ ವಿಚಾರವನ್ನು ವಿವರಿಸುವೆನು.

೧೨–೧೬. ವಿಷ್ಣುವಿನ ಇಚ್ಛೆಯಿಂದುಂಟಾದ ಪ್ರಾಕೃತ ಪ್ರಳಯದಲ್ಲಿ ಮೊದಲು ಅನಾವೃಷ್ಟ್ಯಾದಿಗಳಿಂದ ಸಮಸ್ತ ಲೋಕಗಳೂ ನಾಶವಾದಮೇಲೆ ಮಹತ್ತತ್ತ್ವವೇ

ಮಹದಾದೇರ್ವಿಕಾರಸ್ಯ ವಿನೇಷಾಂತಸ್ಯ ಸಂಕ್ಷಯೇ ।
ಕೃಸ್ನೇಬ್ಜಾಕಾರಿತೇ ತಸ್ಮಿನ್ ಸ್ರವೃತ್ತೇ ಪ್ರತಿಸಂಚರೇ ॥ ೧೩ ॥

ಆಪೋ ಗ್ರಸಂತಿ ವೈ ಪೂರ್ವಂ ಭೂಮೇರ್ಗಂಧಾದಿಕಂ ಗುಣಂ ।
ಆತ್ತಗಂಧಾ ತತೋ ಭೂಮಿಃ ಪ್ರಳಯತ್ವಾಯ ಕಲ್ಪತೇ ॥ ೧೪ ॥

ಪ್ರಣಷ್ಟೇ ಗಂಧತನ್ಮಾತ್ರೇ ಭವತ್ಯುರ್ವೀ ಜಲಾತ್ಮಿಕಾ ।
ಆಪಸ್ತದಾ ಪ್ರವೃದ್ಧಾಸ್ತು ವೇಗವತ್ಯೋ ಮಹಾಸ್ವನಾಃ ॥ ೧೫ ॥

ಸರ್ವಮಾಪೂರಯಂತೀದಂ ತಿಷ್ಠಂತಿ ವಿಚರಂತಿ ಚ ।
ಸಲಿಲೇನೋರ್ವಿಮಾಲೇವ ಆಲೋಕಾಂತಾತ್ಸಮಂತತಃ ॥ ೧೬ ॥

ಅಪಾಮಪಿ ಗುಣೋ ಯಸ್ತು ಜ್ಯೋತಿಷಾ ಪೀಯತೇ ತು ಸಃ ।
ನಶ್ಯಂತ್ಯಾಪಸ್ತತಸ್ತಾಶ್ಚ ರಸತನ್ಮಾತ್ರಸಂಕ್ಷಯಾತ್ ॥ ೧೭ ॥

ಮೊದಲಾದ ಸಮಸ್ತ ಪ್ರಕೃತಿ ವಿಕಾರಗಳೂ ನಾಶವಾಗುವುದಕ್ಕಾಗಿ ಮೊದಲು ಭೂಮಿಯ ಗಂಧಗುಣವನ್ನು ನೀರು ತೆಗೆದುಕೊಳ್ಳುವುದು. ಗಂಧಗುಣವನ್ನು ಕೊಟ್ಟುದರಿಂದ ಭೂಮಿಯು ನಾಶವಾಗುವುದು ಆ ಭೂತತ್ವವೆಲ್ಲ ಜಲತತ್ವವಾಗಿ ಬಿಡುವುದು. ಗಂಧ ತನ್ಮಾತ್ರನಾಶದಿಂದ ಹೆಚ್ಚಿದ ನೀರು ವೇಗದಿಂದಲೂ ಧ್ವನಿಯಿಂದಲೂ ಪ್ರಪಂಚವನ್ನೆಲ್ಲ ಆವರಿಸಿ ತೇಜಸ್ಸಿನ ಪರ್ಯಂತವಾಗಿ ತನ್ನ ಅಲೆಯನ್ನು ಎರಚುತ್ತ ಚಲಿಸುತ್ತಿರುವುದು.

೧೭-೨೦. ಬಳಿಕ ನೀರಿನ ರಸಗುಣವನ್ನು ಅಗ್ನಿಯು ತೆಗೆದುಕೊಳ್ಳುವುದರಿಂದ ನೀರು ರಸತನ್ಮಾತ್ರವಾದ ತನ್ನ ಗುಣವನ್ನು ಕಳೆದುಕೊಂಡು ನಾಶವಾಗುವುದು

ತತಶ್ಚಾಪೋ ಹೃತರಸೋ ಜ್ಯೋತಿಷ್ಟ್ವಂ ಪ್ರಾಪ್ನುವಂತಿ ವೈ ।
ಅಗ್ನ್ಯವಸ್ಥೇ ತು ಸಲಿಲೇ ತೇಜಸಾ ಸರ್ವತೋ ವೃತೇ ॥ ೧೮ ॥

ಸ ಚಾಗ್ನಿಸ್ಸರ್ವತೋ ವ್ಯಾಪ್ಯ ಚಾದತ್ತೇ ತಜ್ಜಲಂ ತಥಾ ।
ಸರ್ವಮಾಪೂರ್ಯತೇರ್ಚಿರ್ಭಿಸ್ತದಾ ಜಗದಿದಂ ಶನೈಃ ॥ ೧೯ ॥

ಅರ್ಚಿರ್ಭಿಸ್ಸಂವೃತೇ ತಸ್ಮಿನ್ ತಿರ್ಯಗೂರ್ಧ್ವಮಧಸ್ತಥಾ ।
ಜ್ಯೋತಿಷೋಪಿ ಪರಂ ರೂಪಂ ವಾಯುರತ್ತಿ ಪ್ರಭಾಕರಂ ॥ ೨೦ ॥

ಪ್ರಲೀನೇ ಚ ತತಸ್ತಸ್ಮಿನ್ ವಾಯುಭೂತೇಽಖಿಲಾತ್ಮನಿ ।
ಪಣಷ್ಟೇ ರೂಪತನ್ಮಾತ್ರೇ ಹೃತರೂಪೋ ವಿಭಾವಸುಃ ॥ ೨೧ ॥

ಪ್ರಕಾಮ್ಯತಿ ತದಾ ಜ್ಯೋತಿರ್ವಾಯುರ್ದೋಧೂಯತೇ ಮಹಾನ್ ।
ನಿರಾಲೋಕೇ ತಥಾಲೋಕೇ ವಾಯ್ವವಸ್ಥೇ ಚ ತೇಜಸಿ ॥ ೨೨ ॥

ತತಸ್ತ್ವಮುಲಮಾಸಾದ್ಯ ವಾಯುಸ್ಸಂಭವಮಾತ್ಮನಃ ।
ಊರ್ಧ್ವಂ ಚಾಧಶ್ಚ ತಿರ್ಯಕ್ಚ ದೋಧವೀತಿ ದಿಶೋ ದಶ ॥ ೨೩ ॥

ವಾಯೋರಪಿ ಗುಣಂ ಸ್ಪರ್ಶಮಾಕಾಶೋ ಗ್ರಸತೇ ತತಃ ।
ಪ್ರಕಾಮ್ಯತಿ ತತೋ ವಾಯುಃ ಖಂ ತು ತಿಷ್ಠತ್ಯನಾವೃತಂ ॥ ೨೪ ॥

ಅಂದರೆ ನೀರೆಲ್ಲ ಅಗ್ನಿ ರೂಪವಾಗುವುದು. ನೀರಿನ ತತ್ವವು ಅಗ್ನಿ ತತ್ವವಾದ ಮೇಲೆ ಎಲ್ಲವೂ ಉರಿಯಿಂದ ವ್ಯಾಪ್ತವಾಗುವುದು. ಉರಿಯು ಹೆಚ್ಚಿದಮೇಲೆ ಪ್ರಕಾಶ ರೂಪವಾದ ರೂಪತನ್ಮಾತ್ರವಾದ ಅಗ್ನಿ ಯನ್ನು ವಾಯುವು ಹೀರಿಬಿಡುವುದು.

೨೧-೨೫. ವಾಯುರೂಪನಾದ ಪರಮಾತ್ಮನಲ್ಲಿ ರೂಪತನ್ಮಾತ್ರವು ಲೀನವಾದ ಮೇಲೆ ಸೂರ್ಯನೂ ಇರುವುದಿಲ್ಲ. ಸಮಸ್ತ ಪ್ರಕಾಶಗಳೂ ವಾಯುವಿನಲ್ಲಿ ಅಡಗಿ ಹೋಗುವುವು. ಆಗ ಬೆಳಕೇ ಯಿಲ್ಲದೆ ಗಾಳಿಯೊಂದೇ ವಿಶೇಷವಾಗಿ ಬೀಸುತ್ತಿರುವುದು. ಅದು ತನ್ನ ವೇಗದಿಂದ ಎಲ್ಲೆಲ್ಲಿಯೂ ಚಲಿಸುತ್ತಿರುವುದು. ಆ ಮೇಲೆ

ಅರೂಪರಸಮ ಸ್ಪರ್ಶಮಗಂಧಂ ನ ಚ ಮೂರ್ತಿಮತ್ ।
ಸರ್ವಮಾಪೂರಯಚ್ಚೈವ ಸುಮಹತ್ತತ್ಪ್ರಕಾಶತೇ ॥ ೨೫ ॥

ಪರಿಮಂಡಲಂ ಚ ಸುಷಿರಮಾಕಾಶಂ ಶಬ್ದಲಕ್ಷಣಂ ।
ಶಬ್ದಮಾತ್ರಂ ತದಾಕಾಶಂ ಸರ್ವಮಾವೃತ್ಯ ತಿಷ್ಠತಿ ॥ ೨೬ ॥

ತತಶ್ಶಬ್ದಗುಣಂ ತಸ್ಯ ಭೂತಾದಿರ್ಗ್ರಸತೇ ಪುನಃ ।
ಭೂತೇಂದ್ರಿಯೇಷು ಯುಗಪದ್ಭೂತಾದೌ ಸಂಸ್ಥಿತೇಷು ವೈ ॥
ಅಭಿಮಾನಾತ್ಮಕೋ ಹ್ಯೇಷ ಭೂತಾದಿಸ್ತಾಮಸಸ್ಸ್ಮೃತಃ ॥ ೨೭ ॥

ಭೂತಾದಿಂ ಗ್ರಸತೇ ಚಾಪಿ ಮಹಾನ್ ವೈ ಬುದ್ಧಿಲಕ್ಷಣಃ ॥ ೨೮ ॥

ಉರ್ವೀ ಮಹಾಂಶ್ಚ ಜಗತಃ ಪ್ರಾಂತೇಂತರ್ಬಾಹ್ಯತಸ್ತಥಾ । ॥ ೨೯ ॥

ಏವಂ ಸಪ್ತಮಹಾಬುದ್ಧೇ ಕ್ರಮಾತ್ಪ್ರಕೃತಯಸ್ಸ್ಮೃತಾಃ ।
ಪ್ರತ್ಯಾಹಾರೇ ತು ತಾಸ್ಸರ್ವಾಃ ಪ್ರವಿಶಂತಿ ಪರಸ್ಪರಂ ॥ ೩೦ ॥

ವಾಯುವಿನ ಸ್ಪರ್ಶತನ್ಮಾತ್ರಗುಣವನ್ನು ಆಕಾಶವು ಗ್ರಹಿಸುವುದು. ಆಗ ವಾಯುವು ಶಾಂತವಾಗಿ ರೂಪರಸ ಗಂಧ ಸ್ಪರ್ಶಗುಣಗಳಲ್ಲೊಂದೂ ಇಲ್ಲದೆ ಆಕಾಶ ತತ್ವವೊಂದೇ ದೊಡ್ಡದಾಗಿ ಎಲ್ಲೆಡೆಯಲ್ಲಿಯೂ ಆವರಿಸಿಕೊಂಡಿರುವುದು.

೨೬–೩೦. ಎಲ್ಲೆಡೆಯಲ್ಲಿಯೂ ಸಮಸ್ತ ವಸ್ತುಗಳಿಗೂ ಅವಕಾಶವನ್ನು ಕೊಡತಕ್ಕ ಶಬ್ದತನ್ಮಾತ್ರವಾದ ಆಕಾಶವು ಆವರಿಸಿರಲು ಆದರ ಶಬ್ದಗುಣವನ್ನು ಭೂತಾದಿಯಾದ ತಾಮಸಗುಣ ಪ್ರಧಾನವಾದ ಅಹಂಕಾರತತ್ವವು ಗ್ರಹಿಸುವುದು. ಆ ಅಭಿಮಾನಾತ್ಮಕವಾದ ಅಹಂಕಾರ ತತ್ವವನ್ನು ಸತ್ವಗುಣ ಪ್ರಧಾನವಾದ ಮಹತ್ತತ್ವವು ಗ್ರಹಿಸುವುದು ಮಹತ್ವವು. ಜಗತ್ತಿನ ಹೊರಗೂ ಒಳಗೂ ವ್ಯಾಪಿಸಿ ಬಹು ದೊಡ್ಡದಾಗಿರುವುದು. ಈ ತತ್ವವು ಬಹ್ಮಾಂಡದ ಹೊರಗೂ ವ್ಯಾಪಿಸಿರುವುದು ಮಹಾ ಬುದ್ಧಿಶಾಲಿಯಾದ ಮೈತ್ರೇಯನೇ! ಕೊನೆಯಲ್ಲಿ ಸೃಷ್ಟಿಯಾದ ಭೂಮಿಯೇ ಮುಂತಾದ ಏಳು ತತ್ವಗಳು ಕ್ರಮವಾಗಿ ತಮಗೆ ಕಾರಣವಾದ ತತ್ವಗಳಲ್ಲಿ ಸೇರಿ ಕೊಳ್ಳುತ್ತ ಬರುವುವು.

ಯೋಽಸೌ ದಮಾವೃತಂ ಸರ್ವಮಂಡಮಪ್ಸು ಪ್ರಲೀಯತೇ ।
ಸಪ್ತದ್ವೀಪಸಮುದ್ರಾಂತಂ ಸಪ್ತಲೋಕಂ ಸಪರ್ವತಂ ॥ ೩೧ ॥

ಉದಕಾವರಣಂ ಯತ್ತು ಜ್ಯೋತಿಷಾ ಪೀಯತೇ ತು ತತ್ ।
ಜ್ಯೋತಿರ್ವಾಯೌ ಲಯಂ ಯಾತಿ ಯಾತ್ಯಾಕಾಶೇ ಸವೀರಣಃ ॥ ೩೨ ॥

ಆಕಾಶಂ ಚೈವ ಭೂತಾದಿರ್ಗ್ರಸತೇ ತಂ ತಥಾ ಮಹಾನ್ ।
ಮಹಾಂತಮೇಭಿಸ್ಸಹಿತಂ ಪ್ರಕೃತಿರ್ಗ್ರಸತೇ ದ್ವಿಜ ॥ ೩೩ ॥

ಗುಣಸಾಮ್ಯಮನುದ್ರಿಕ್ತಮನ್ಯೂನಂ ಚ ಮಹಾಮುನೇ ।
ಪ್ರೋಚ್ಯತೇ ಪ್ರಕೃತಿರ್ಹೇತುಃ ಪ್ರಧಾನಂ ಕಾರಣಂ ಪರಂ ॥ ೩೪ ॥

ಇತ್ಯೇಷಾ ಪ್ರಕೃತಿಸ್ಸರ್ವಾ ವ್ಯಕ್ತಾವ್ಯಕ್ತಸ್ವರೂಪಿಣೀ ।
ವ್ಯಕ್ತಸ್ವರೂಪಮವ್ಯಕ್ತೇ ತಸ್ಯಾನ್ಮೈತ್ರೇಯ ಲೀಯತೇ ॥ ೩೫ ॥

೩೧–೩೩. ಸಪ್ತ ದ್ವೀಪಗಳು, ಸಪ್ತ ಸಮುದ್ರಗಳು, ಸಪ್ತ ಲೋಕಗಳು ಪರ್ವತಗಳು ಇವುಗಳಿಂದ ಕೂಡಿದ ಬ್ರಹ್ಮಾಂಡವು ತನ್ನನ್ನು ಆವರಿಸಿದ ನೀರಿನಲ್ಲಿ ಲೀನವಾಗುವುದು. ಆ ಉದಕಾವರಣವು ತೇಜಸ್ಸಿನ ಆವರಣದಲ್ಲಿಯೂ ತೇಜಸ್ಸು ವಾಯುವಿನಲ್ಲಿಯೂ ವಾಯುವು ಆಕಾಶದಲ್ಲಿಯೂ ಆಕಾಶವು ತಾಮಸಾಹಂಕಾರದಲ್ಲಿಯೂ ಅಹಂಕಾರವು ಮಹತ್ತತ್ವದಲ್ಲಿಯೂ ಮಹತ್ತತ್ವವು ಪ್ರಕೃತಿಯಲ್ಲಿಯೂ ಲೀನವಾಗುವುದು.

೩೪–೩೫. ಮಹಾಮುನಿಯಾದ ಮೈತ್ರೇಯನೇ! ಹೆಚ್ಚು ಕಡಿಮೆಯಾಗದ ಸತ್ವರಜಸ್ತಮೋಗುಣಗಳ ಸಾಮ್ಯಾವಸ್ಥೆಯನ್ನೇ ಪ್ರಕೃತಿಯೆಂದೂ ಪ್ರಧಾನವೆಂದೂ ಹೇತುವೆಂದೂ ಕಾರಣವೆಂದೂ ಹೇಳುವರು. ಈಪ್ರಕೃತಿಯು ವ್ಯಕ್ತವೆಂದೂ (ಸ್ಥೂಲ) ಅವ್ಯಕ್ತವೆಂದೂ (ಸೂಕ್ಷ್ಮ) ಎರಡು ವಿಧವು. ಸ್ಥೂಲವಾದ ವ್ಯಕ್ತಪ್ರಕೃತಿಯು ಸೂಕ್ಷ್ಮವಾದ ಅವ್ಯಕ್ತ ಪ್ರಕೃತಿಯಲ್ಲಿ ಲೀನವಾಗುವುದು.

ಏಕಶ್ಶುದ್ಧೋಽಕ್ಷರೋ ನಿತ್ಯಸ್ಸರ್ವವ್ಯಾಪೀ ತಥಾ ಪುಮಾನ್ ।
ಸೋಽಯಂಶಸ್ಸರ್ವಭೂತಸ್ಯ ಮೈತ್ರೇಯ ಪರಮಾತ್ಮನಃ ॥ ೩೬ ॥

ನ ಸಂತಿ ಯತ್ರ ಸರ್ವೇಶೇ ನಾಮಜಾತ್ಯಾದಿಕಲ್ಪನಾಃ ।
ಸತ್ತಾಮಾತ್ರಾತ್ಮಕೇ ಜ್ಞೇಯೇ ಜ್ಞಾನಾತ್ಮನ್ಯಾತ್ಮನಃ ಪರೇ ॥ ೩೭ ॥

ತದ್ಬ್ರಹ್ಮ ಪರಮಂ ಧಾಮ ಪರಮಾತ್ಮಾ ಸ ಚೇಶ್ವರಃ ।
ಸ ವಿಷ್ಣುಸ್ಸರ್ವಮೇವೇದಂ ಯತೋ ನಾವರ್ತತೇ ಯತಿಃ ॥ ೩೮ ॥

ಪ್ರಕೃತಿರ್ಯಾ ಮಯಾ ಖ್ಯಾತಾ ವ್ಯಕ್ತಾವ್ಯಕ್ತಸ್ವರೂಪಿಣೀ ।
ಪುರುಷಶ್ಚಾಪ್ಯುಭಾವೇತೌ ಲೀಯೇತೇ ಪರಮಾತ್ಮನಿ ॥ ೩೯ ॥

ಪರಮಾತ್ಮಾ ಚ ಸರ್ವೇಷಾಮಾಧಾರಃ ಪರಮೇಶ್ವರಃ ।
ವಿಷ್ಣ್ವಾಖ್ಯೋ ಸ ವೇದೇಷು ವೇದಾಂತೇಷು ಚ ಗೀಯತೇ ॥ ೪೦ ॥

೩೬–೩೮. ಪುರುಷನು ಶುದ್ಧನಾಗಿಯೂ ನಿತ್ಯನಾಗಿ ನಾಶರಹಿತನಾಗಿಯೂ ಸರ್ವವ್ಯಾಪಿಯಾಗಿ ಅದ್ವಿತೀಯನಾಗಿಯೂ ಇರುವನು. ಪುರುಷನು ಸರ್ವಭೂತ ಸ್ವರೂಪನಾದ ಪರಮಾತ್ಮನ ಅಂಶವು. ಸತ್ತಾಮಾತ್ರಸ್ವರೂಪನೂ ಜ್ಞಾನಸ್ವರೂಪನೂ ಜ್ಞಾನವಿಷಯನೂ ಸರ್ವೇಶ್ವರನೂ ಆದ ಪರಮಾತ್ಮನಲ್ಲಿ ನಾಮರೂಪ ಜಾತ್ಯಾದಿಗಳ ಕಲ್ಪನೆಯಿಲ್ಲ. ಆ ತತ್ವವೇ ಮಹಾ ಪ್ರಕಾಶವಾದ ಪರಬ್ರಹ್ಮತತ್ವವು. ಅವನೇ ಪರಮೇಶ್ವರನು. ವಿಷ್ಣುವು ಪರಮಾತ್ಮನು. ಈ ಸಮಸ್ತ ಪ್ರಪಂಚವೂ ಅವನೇ ಇದನ್ನು ತಿಳಿದ ಜ್ಞಾನಿಯಾದ ಸನ್ಯಾಸಿಯು ಪರಮಾತ್ಮ ಸ್ವರೂಪನಾಗಿ ಪುನರ್ಜನ್ಮವನ್ನು ಪಡೆವುದಿಲ್ಲ.

೩೯-೪೦. ನಾನು ಹೇಳಿದ ವ್ಯಕ್ತಾವ್ಯಕ್ತ ಸ್ವರೂಪವಾದ ಪ್ರಕೃತಿಯೂ ಪುರುಷನೂ ಈ ಇಬ್ಬರೂ ಪರಮಾತ್ಮನಲ್ಲಿ ಲೀನರಾಗುವರು. ಸಮಸ್ತಕ್ಕೂ ಆಶ್ರಯನಾದ ಪರಮೇಶ್ವರನನ್ನು ವಿಷ್ಣುವೆಂದು ವೇದವೇದಾಂತಗಳಲ್ಲಿ ಹೇಳಿರುವುದು. (ಅವನಿಗೆ ನಾಶವಿಲ್ಲವೆಂದು ಅಭಿಪ್ರಾಯವು.)

ಪ್ರವೃತ್ತಂ ಚ ನಿವೃತ್ತಂ ಚ ದ್ವಿವಿಧಂ ಕರ್ಮ ವೈದಿಕಂ ।
ತಾಭ್ಯಾಮುಭಾಭ್ಯಾಂ ಪುರುಷೈಸ್ಸರ್ವಮೂರ್ತಿಸ್ಸ ಇಜ್ಯತೇ ॥ ೪೧ ॥

ಋಗ್ಯಜುಸ್ಸಾಮಭಿರ್ಮಾರ್ಗೈಃ ಪ್ರವೃತ್ತೈರಿಜ್ಯತೇ ಹ್ಯಸೌ ।
ಯಜ್ಞೇಶ್ವರೋ ಯಜ್ಞಪುಮಾನ್ ಪುರುಷೈಃ ಪುರುಷೋತ್ತಮಃ ॥ ೪೨ ॥

ಜ್ಞಾನಾತ್ಮಾ ಜ್ಞಾನಯೋಗೇನ ಜ್ಞಾನಮೂರ್ತಿಸ್ಸ ಚೇಜ್ಯತೇ ।
ನಿವೃತ್ತೈ ಯೋಗಿಭಿರ್ಮಾರ್ಗೈ ವಿಷ್ಣುರ್ಮುಕ್ತಿಫಲಪ್ರದಃ ॥ ೪೩ ॥

ಹ್ರಸ್ವದೀರ್ಘಪ್ಲುತೈರ್ಯತ್ತು ಕಿಂಚಿದ್ವಸ್ತ್ವಭಿಧೀಯತೇ ।
ಯಚ್ಚ ವಾಚಾನುವಿಷಯಂ ತತ್ಸರ್ವಂ ವಿಷ್ಣುರವ್ಯಯಃ ॥ ೪೪ ॥

ವ್ಯಕ್ತಸ್ಯ ಏವ ಚಾವ್ಯಕ್ತಸ್ಯ ಏವ ಪುರುಷೋತ್ತಮಃ ।
ಪರಮಾತ್ಮಾ ಚ ವಿಶ್ವಾತ್ಮಾ ವಿಶ್ವರೂಪಧರೋ ಹರಿಃ ॥ ೪೫ ॥

೪೧-೪೩. ವೇದದಲ್ಲಿ ಪ್ರವೃತ್ತಿಕರ್ಮಗಳೆಂದೂ ನಿವೃತ್ತಿಕರ್ಮಗಳೆಂದೂ ಎರಡು ಬಗೆಯ ಕರ್ಮಗಳನ್ನು ಹೇಳಿರುವುದು. ಈ ಎರಡು ಕರ್ಮಗಳಿಂದಲೂ ಪುರುಷರು ಸರ್ವಸ್ವರೂಪನಾದ ಪರಮಾತ್ಮನನ್ನು ಪೂಜಿಸುವರು. ಋಗ್ವೇದ, ಯಜುರ್ವೇದ, ಸಾಮವೇದ ಮಾರ್ಗಗಳಾದ ಪ್ರವೃತ್ತಿಕರ್ಮಗಳಿಂದ ಯಜ್ಞೇಶ್ವರನೂ ಯಜ್ಞಪುರುಷನೂ ಆದ ಪುರುಷೋತ್ತಮನನ್ನು ಪುರುಷರು ಪೂಜಿಸುವರು. ಜ್ಞಾನ ಸ್ವರೂಪನೂ ಜ್ಞಾನವಿಗ್ರಹನೂ ಮೋಕ್ಷವನ್ನು ಕೊಡತಕ್ಕವನೂ ಆದ ವಿಷ್ಣುವನ್ನು ನಿವೃತ್ತಿಮಾರ್ಗವನ್ನಾಶ್ರಯಿಸಿದ ಯೋಗಿಗಳು ಜ್ಞಾನಯೋಗದಿಂದ ಪೂಜಿಸುವರು.

೪೪-೪೫. ಹ್ರಸ್ವ, ದೀರ್ಘ, ಪ್ಲುತಸ್ವರಗಳಿಂದ ಯಾವ ವಸ್ತುವನ್ನು ಹೇಳುವರೋ ಯಾವ ವಸ್ತುವನ್ನು ಮಾತಿನಿಂದ ತಿಳಿಸಲಾಗುವುದಿಲ್ಲವೋ ಅದೆಲ್ಲವೂ ನಾಶರಹಿತವಾದ ವಿಷ್ಣುಸ್ವರೂಪವೇ ಆಗಿರುವುದು. ಆ ವಿಷ್ಣುವೇ ವ್ಯಕ್ತಾವ್ಯಕ್ತ ಸ್ವರೂಪನು. ಅವನೇ ಪುರುಷೋತ್ತಮನು. ಮತ್ತು ಪರಮಾತ್ಮನು. ಆ ಹರಿಯೇ ಪ್ರಪಂಚ ರೂಪವನ್ನು ಧರಿಸಿರುವನು.

ವ್ಯಕ್ತಾವ್ಯಕ್ತಾತ್ಮಿಕಾ ತಸ್ಮಿನ್ ಪ್ರಕೃತಿಸ್ಸಂಪ್ರಲೀಯತೇ ।
ಪುರುಷಶ್ಚಾಪಿ ಮೈತ್ರೇಯ ವ್ಯಾಪಿನ್ಯವ್ಯಾಹತಾತ್ಮನಿ ॥ ೪೬ ॥

ದ್ವಿಪರಾರ್ಧಾತ್ಮಕಃ ಕಾಲಃ ಕಥಿತೋ ಯೋ ಮಯಾ ತವ ।
ತದಹಸ್ತಸ್ಯ ಮೈತ್ರೇಯ ವಿಷ್ಣೋರೀಶಸ್ಯ ಕಥ್ಯತೇ ॥ ೪೭ ॥

ವ್ಯಕ್ತೇ ಚ ಪ್ರಕೃತೌ ಲೀನೇ ಪ್ರಕೃತ್ಯಾಂ ಪುರುಷೇ ತಥಾ ।
ತತ್ರ ಸ್ಥಿತೇ ನಿಶಾ ಜಾಸ್ಯ ತತ್ಪ್ರಮಾಣಾ ಮುಹಾಮುನೇ ॥ ೪೮ ॥

ನೈವಾಹಸ್ತಸ್ಯ ನ ನಿಶಾ ನಿತ್ಯಸ್ಯ ಪರಮಾತ್ಮನಃ ।
ಉಪಚಾರಸ್ತಥಾಪ್ಯೇಷ ತಸ್ಯೇಶಸ್ಯ ದ್ವಿಜೋಚ್ಯತೇ ॥ ೪೯ ॥

೪೬–೪೮. ಮೈತ್ರೇಯನೇ ಅವಿಕಾರ ಸ್ವರೂಪನಾದ ಆ ಪರಮಾತ್ಮನಲ್ಲಿ ಸ್ಥೂಲ ಸೂಕ್ಷ್ಮರೂಪವಾದ ಪ್ರಕೃತಿಯೂ ಪುರುಷನೂ ಲಯವನ್ನು ಹೊಂದುವರು. ನಾನು ಹಿಂದೆ ಹೇಳಿದ ಎರಡು ಪರಾರ್ಧರೂಪವಾದ ಕಾಲವು ಸರ್ವೇಶ್ವರನಾದ ವಿಷ್ಣುವಿಗೆ ಒಂದು ಹಗಲಾಗುವುದು. ವ್ಯಕ್ತವಾದ ಪ್ರಪಂಚವು ಪ್ರಕೃತಿಯಲ್ಲಿಯೂ ಅವ್ಯಕ್ತವಾದ ಪ್ರಕೃತಿಯು ಪುರುಷನಲ್ಲಿಯೂ ಪುರುಷನು ಪರಮಾತ್ಮನಲ್ಲಿಯೂ ಲೀನವಾಗಿರಲು ಆ ಮಹಾ ವಿಷ್ಣುವಿಗೆ ಎರಡು ಪರಾರ್ಧಕಾಲವೇ ರಾತ್ರಿಯಾಗಿರುವುದು.

೪೯-೫೦. ನಿತ್ಯನಾದ ಆ ಪರಮಾತ್ಮನಿಗೆ ಹಗಲು ರಾತ್ರಿಗಳೆಂಬ ವ್ಯವಹಾರವು ನಿಜವಾದುದಲ್ಲ. ಮಹಾವಿಷ್ಣುವು ಸರ್ವೋತ್ಕೃಷ್ಟನಾದವನೆಂದು ಹೇಳುವುದಕ್ಕಾಗಿ

ಇತ್ಯೇಷ ತವ ಮೈತ್ರೇಯ ಕಥಿತಃ ಪ್ರಾಕೃತೋ ಲಯಃ ।
ಆತ್ಯಂತಿಕಮಥೋ ಬ್ರಹ್ಮನ್ ನಿಬೋಧ ಪ್ರತಿಸಂಚರಂ ॥ ೫೦ ॥

ಇತಿ ಶ್ರೀ ವಿಷ್ಣು ಪುರಾಣೇ ಷಷ್ಠಾಂಶೇ ಚತುರ್ಥೋಽಧ್ಯಾಯಃ

ಔಪಚಾರಿಕವಾಗಿ ಇದನ್ನು ಹೇಳಿರುವುದು. ಮೈತ್ರೇಯನೇ ಪ್ರಾಕೃತ ಪ್ರಳಯವನ್ನು ಈ ರೀತಿಯಲ್ಲಿ ನಿನಗೆ ಹೇಳಿದುವೆನು, ಇನ್ನು ಮುಂದೆ ಆತ್ಯಂತಿಕ ಪ್ರಳಯ ವಿಷಯವನ್ನು ಹೇಳುವೆನು.

ಎಂಬಲ್ಲಿಗೆ ಶ್ರೀ ವಿಷ್ಣು ಪುರಾಣದ ಆರನೆಯ ಅಂಶದಲ್ಲಿ
ನಾಲ್ಕನೆಯ ಅಧ್ಯಾಯವು ಮುಗಿದುದು.

ಶ್ರೀ ವಿಷ್ಣು ಪುರಾಣೇ ಷಷ್ಠಾಂಶೇ

ಪಂಚಮೋಽಧ್ಯಾಯಃ

॥ ಶ್ರೀ ಪರಾಶರಃ ॥

ಆಧ್ಯಾತ್ಮಿಕಾದಿ ಮೈತ್ರೇಯ ಜ್ಞಾತ್ವಾ ತಾಪತ್ರಯಂ ಬುಧಃ ।
ಉತ್ಪನ್ನಜ್ಞಾನವೈರಾಗ್ಯಃ ಪ್ರಾಪ್ನೋತ್ಯಾತ್ಯಂತಿಕಂ ಲಯಂ ॥ ೧ ॥

ಆಧ್ಯಾತ್ಮಿಕೋಽಪಿ ದ್ವಿವಿಧಶ್ಶಾರೀರೋ ಮಾನಸಸ್ತಥಾ ।
ಶಾರೀರೋ ಬಹುಭಿರ್ಭೇದೈರ್ಭಿದ್ಯತೇ ಶ್ರೂಯತಾಂ ಚ ಸಃ ॥ ೨ ॥

ಶಿರೋ ರೋಗಪ್ರತಿಶ್ಯಾಯಜ್ವರಶೂಲಭಗಂಧರೈಃ ।
ಗುಲ್ಮಾರ್ಶಶ್ಶಯಥುಶ್ವಾಸಸ್ಫರ್ದ್ಯಾದಿಭಿರನೇಕಧಾ ॥ ೩ ॥

ತಥಾಕ್ಷಿರೋಗಾತಿಸಾರ ಕುಷ್ಠಾಂಗಾಮಯಸಂಜ್ಞಿತೈಃ ।
ಭಿದ್ಯತೇ ದೇಹಜಸ್ತಾಪೋ ಮಾನಸಂ ಶ್ರೋತುಮರ್ಹಸಿ ॥ ೪ ॥

ಐದನೆಯ ಅಧ್ಯಾಯವು.

೧-೪. ಮೈತ್ರೇಯನೇ ವಿದ್ವಾಂಸನಾದವನು ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕವೆಂಬ ತಾಪತ್ರಯಗಳ ಸ್ವರೂಪವನ್ನು ತಿಳಿದು ಜ್ಞಾನ ವೈರಾಗ್ಯಗಳನ್ನು ಪಡೆದು ಅತ್ಯಂತಿಕಲಯವೆಂಬ ಮೋಕ್ಷವನ್ನು ಪಡೆಯುವನು. ಆಧ್ಯಾತ್ಮಿಕತಾಪ ವೆಂಬುದು ಶಾರೀರ ಮಾನಸಿಕ ಎಂದು ಎರಡು ಬಗೆಯಾಗಿರುವುದು ಶರೀರ ಸಂಬಂಧ ವಾದ ತಾಪವು ಅನೇಕ ಬಗೆಯಾಗಿರುವುದು ತಲೆನೋವು, ಪೀನಸೆ, ಜ್ವರ, ಶೂಲೆ, ಭಗಂಧರ, ಗೆಡ್ಡೆ, ಮೂಲವ್ಯಾಧಿ, ಶೋಭೆ, ಉಬ್ಬಸ, ವಾಂತಿ, ಕಣ್ಣುನೋವು, ಅತಿಸಾರ, ಕುಷ್ಠ, ವಾಯುರೋಗ ಮುಂತಾದ ಅನೇಕ ಬಗೆಯು ಶರೀರದ ತಾಪಗಳಿರು ವುವು.

ಕಾಮಕ್ರೋಧಭಯದ್ವೇಷಲೋಭಮೋಹವಿಷಾದಜಃ ।
ಶೋಕಾಸೂಯಾವಮಾನೇರ್ಷ್ಯಾ ಮಾತ್ಸರ್ಯಾದಿಮಯಸ್ತಥಾ ॥ ೫ ॥

ಮಾನಸೋಽಪಿ ದ್ವಿಜಶ್ರೇಷ್ಠ ತಾಪೋ ಭವತಿನೈಕಧಾ ।
ಇತ್ಯೇವಮಾದಿಭಿರ್ಭೇದೈಃ ತಾಪೋ ಹ್ಯಾಧ್ಯಾತ್ಮಿಕಸ್ಸ್ಮೃತಃ ॥ ೬ ॥

ಮೃಗಪಕ್ಷಿಮನುಷ್ಯಾಶ್ಚೈಃ ಪಿಶಾಚೋರಗರಾಕ್ಷಸೈಃ
ಸರೀಸೃಪಾದ್ಯೈಶ್ಚ ನೃಣಾಂ ಜಾಯತೇ ಚಾಧಿಭೌತಿಕಃ ॥ ೭ ॥

ಶೀತವಾತೋಷ್ಣವರ್ಷಾಂಬು ವೈದ್ಯುತಾದಿಸಮುದ್ಭವಃ ।
ತಾಪೋ ದ್ವಿಜವರ ಶ್ರೇಷ್ಠೈಃ ಕಥ್ಯತೇ ಚಾಧಿದೈವಿಕಃ ॥ ೮ ॥

ಗರ್ಭಜನ್ಮಜರಾಜ್ಞಾನಮೃತ್ಯುನಾರಕಜಂ ತಥಾ ।
ದುಃಖಂ ಸಹಸ್ರಶೋ ಭೇದೈರ್ಭಿದ್ಯತೇ ಮುನಿಸತ್ತಮ ॥ ೯ ॥

೫-೬. ಕಾಮ, ಕ್ರೋಧ, ಭಯ, ದ್ವೇಷ, ಲೋಭ, ಮೋಹ, ವಿಷಾದ, ದುಃಖ, ಅಸೂಯೆ, ಅಪಮಾನ, ಹೊಟ್ಟೆಕಿಚ್ಚು, ಮತ್ಸರ ಎಂಬಿವೇ ಮೊದಲಾದ ಮನಸ್ಸಿನ ತಾಪಗಳೂ ಅನೇಕ ಬಗೆಯಾಗಿರುವುವು. ಇವೆಲ್ಲ ಆಧ್ಯಾತ್ಮಿಕ ತಾಪಗಳು.

೭-೮. ಮೃಗಗಳು, ಪಕ್ಷಿಗಳು, ಮನುಷ್ಯರು, ಪಿಶಾಚಿಗಳು, ಉರಗಗಳು, ರಾಕ್ಷಸರು, ಹುಳುಗಳು ಮುಂತಾದುವುಗಳಿಂದ ಮನುಷ್ಯರಿಗೆ ಉಂಟಾಗುವ ತೊಂದರೆಗಳನ್ನು ಆಧಿಭೌತಿಕವೆಂದೂ ಶೀತ, ಉಷ್ಣ, ಗಾಳಿ, ಮಳೆ, ನೀರು, ಮಿಂಚು ಮುಂತಾದುವುಗಳಿಂದ ಉಂಟಾಗುವ ತಾಪಗಳನ್ನು ಆಧಿದೈವಿಕವೆಂದೂ ಹೇಳುವರು.

೯-೧೧. ಇವುಗಳಲ್ಲದೆ ಮನುಷ್ಯನಿಗೆ ಗರ್ಭ, ಪ್ರಸವ, ಮುಪ್ಪು, ಅಜ್ಞಾನ, ಮರಣ, ನರಕ ರೂಪವಾದ ಸಾವಿರಾರು ದುಃಖಗಳಿರುವುವು. ಗರ್ಭದಲ್ಲಿರುವಾಗ ಪ್ರಾಣಿಯ ಶರೀರವು ಬಹು ಮೃದುವಾದುದಾಗಿ ಕೂತ್ತಿಗೆ ಮತ್ತು ಸೊಂಟದ ಮೂಳೆಗಳು ಚಕ್ರಾಕಾರವಾಗಿ ಸೇರಿಕೊಂಡು ಸುತ್ತಲೂ ಮಲದಿಂದ ತುಂಬಿದ ಮಾಂಸದ

ಸುಕುಮಾರತನುರ್ಗರ್ಭೀ ಜಂತುರ್ಬಹುಮಲಾವೃತೇ ।
ಉಲ್ಬಸಂವೇಷ್ಟಿತೋ ಭುಗ್ನಪೃಷ್ಠಗ್ರೀವಾಸ್ಥಿಸಂಹತಿಃ ॥ ೧೦ ॥

ಅತ್ಯಮ್ಲಕಟುತೀಕ್ಷ್ಣೋಷ್ಣಲವಣೈರ್ಮಾತೃಭೋಜನೈಃ ।
ಅತ್ಯಂತಕಾಸೈರತ್ಯರ್ಥಂ ವರ್ಧಮಾನಾತಿವೇದನಃ ॥ ೧೧ ॥

ಸ್ವಸಾರಣಾಕುಂಚನಾಡೌ ನಾಂಗಾನಾಂ ಪ್ರಭುರಾತ್ಮನಃ ।
ಶಕೃನ್ಮೂತ್ರಮಹಾಪಂಕಶಾಯೀ ಸರ್ವತ್ರ ಪೀಡಿತಃ ॥ ೧೨ ॥

ನಿರುಚ್ಛ್ವಾಸಸ್ಯ ಚೈತನ್ಯಸ್ಮರನ್ ಜನ್ಮಶತಾನ್ಯಧಃ ।
ಆಸ್ತೇ ಗರ್ಭೀತಿದುಃಖೇನ ನಿಜಕರ್ಮನಿಬಂಧನಃ ॥ ೧೩ ॥

ಜಾಯಮಾನಃ ಪುರೀಷಾಸೃಙ್ಮೂತ್ರಶುಕ್ಲಾವಿಲಾನನಃ ।
ಪ್ರಾಜಾಪತ್ಯೇನ ವಾತೇನ ಪಿಡ್ಯಮಾನಾಸ್ಥಿಬಂಧನಃ ॥ ೧೪ ॥

ಚೀಲದೊಳಗೆ ಸೇರಿಕೊಂಡಿರುವುದು. ತಾಯಿಯು ಭೋಜನ ಮಾಡಿದ ಹೆಚ್ಚಾದ ಹುಳಿ, ಬಿಸಿ, ಕಾರ, ಉಪ್ಪು, ಕಹಿ ಮುಂತಾದ ಆಹಾರಗಳಿಂದ ವಿಶೇಷ ತಾಪವನ್ನೂ ನೋವನ್ನೂ ಅನುಭವಿಸುತ್ತ ಬೆಳೆಯುತ್ತಿರುವುದು.

೧೨-೧೩. ತನ್ನ ಅವಯವಗಳನ್ನು ವಿಸ್ತರಿಸುವುದಕ್ಕೂ ಸಂಕೋಚಮಾಡಿ ಕೊಳ್ಳುವುದಕ್ಕೂ ಶಕ್ತಿಯಿಲ್ಲದೆ ಮಲಮೂತ್ರಗಳ ಕೆಸರಿನಲ್ಲಿ ಮಲಗಿಕೊಂಡು ನೋವಿನಿಂದ ದುಃಖಪಡುತ್ತ ಉಸಿರುಬಿಡುವುದಕ್ಕಾಗದೆ ಪ್ರಾಣಶಕ್ತಿಯಿಂದ ಕೂಡಿ ತನ್ನ ಹಿಂದಿನ ನೂರಾರು ಜನ್ಮಗಳಲ್ಲಿ ಮಾಡಿದುದನ್ನು ಸ್ಮರಿಸುತ್ತ ತನ್ನ ಕರ್ಮಾನುಸಾರವಾಗಿ ಫಲರೂಪವಾದ ಗರ್ಭದುಃಖವನ್ನನುಭವಿಸುತ್ತ ಪ್ರಸವ ಸಮಯದಲ್ಲಿ ಮುಖವನ್ನು ಕೆಳಗೆ ಮಾಡಿಕೊಂಡು ಮಲ ಮೂತ್ರ ರಕ್ತ ಶ್ಲೇಷ್ಮಗಳು ಮುಖಕ್ಕೆಲ್ಲ ಬಳಿದು

ಅಧೋಮುಖೋ ವೈ ಕ್ರಿಯತೇ ಪ್ರಬಲೈಸ್ಸೂತಿಮಾರುತೈಃ
ಕ್ಲೇಶಾನ್ನಿಷ್ಕ್ರಾಂತಿಮಾಪ್ನೋತಿ ಜಠರಾನ್ಮಾತುರಾತುರಃ ॥ ೧೫ ॥

ಮೂರ್ಧಾನಮವಾಪ್ಯಮಹತೀಂ ಸಂಸ್ಪೃಷ್ಟೋ ಬಾಹ್ಯವಾಯುನಾ ।
ವಿಜ್ಞಾನಭ್ರಂಶಮಾಪ್ನೋತಿ ಜಾತಶ್ಚ ಮುನಿಸತ್ತಮ ॥ ೧೬ ॥

ಕಂಟಕೈರಿವ ತುನ್ನಾಂಗಃ ಕ್ರಕಚೈರಿವ ದಾರಿತಃ ।
ಪೂತಿವ್ರಣಾನ್ನಿಪತಿತೋ ಧರಣ್ಯಾಂ ಕ್ರಿಮಿಕೋ ಯಥಾ ॥ ೧೭ ॥

ಕಂಡೂಯನೇಽಪಿ ಚಾಶಕ್ತಃ ಪರಿವರ್ತೇಽಪ್ಯನೀಶ್ವರಃ ।
ಸ್ನಾನಪಾನಾದಿಕಾಹಾರಮಪ್ಯಾಪ್ನೋತಿ ಪರೇಚ್ಛಯಾ ॥ ೧೮ ॥

ಅಶುಚಿಪ್ರಸ್ತರೇ ಸುಪ್ತಃ ಕೀಟದಂಶಾದಿಭಿಸ್ತಥಾ ।
ಭಕ್ಷ್ಯಮಾಣೋಽಪಿ ನೈವೈಷಾಂ ಶಮಥೋ ವಿನಿವಾರಣೇ ॥ ೧೯ ॥

ಕೊಂಡಿರಲು ಪ್ರಾಜಾಪತ್ಯವೆಂಬ ಗರ್ಭವಾಯುವಿನಿಂದ ತನ್ನ ಮೂಳೆಗಳಲ್ಲಿ ನೋವ ನ್ನನುಭವಿಸುತ್ತ ಪ್ರಬಲವಾದ ಪ್ರಸವ ವಾಯುವು ಮುಖವನ್ನು ಕೆಳಗೆ ಮಾಡಿ ತಳ್ಳುತ್ತಿರಲು ಬಹು ಕಷ್ಟದಿಂದ ತಾಯಿಯ ಗರ್ಭದಿಂದ ಹೊರಕ್ಕೆ ಬರುವುದು.

೧೬-೨೦. ಶರೀರವು ಗರ್ಭದಿಂದ ಹೊರಕ್ಕೆ ಬಂದಮೇಲೆ ಹೊರಗಿನ ಗಾಳಿಗೆ ತಗುಲಿದುದರಿಂದ ಪ್ರಾಣಿಗೆ ಮೂರ್ಛೆಯುಂಟಾಗಿ ಜ್ಞಾನವು ತೊಲಗಿಹೋಗುವುದು. ಮುಳ್ಳುಗಳಿಂದ ಚುಚ್ಚಿದಂತೆಯೂ ಗರಗಸದಿಂದ ಸೀಳಿದಂತೆಯೂ ಶರೀರದಲ್ಲಿ ನೋವನ್ನನುಭವಿಸುತ್ತ ದುರ್ಗಂಧವಾದ ಹುಣ್ಣಿನಿಂದ ಹೊರಗೆ ಬಿದ್ದ ಹುಳುವಿನಂತೆ ಪ್ರಾಣಿಯು ಅವಯವಗಳನ್ನು ಕೆರೆದುಕೊಳ್ಳುವುದಕ್ಕೂ ಅತ್ತಿತ್ತ ಚಲಿಸುವುದಕೂ, ಶಕ್ತಿಯಿಲ್ಲದೆ ಇತರರ ಇಚ್ಛೆಯಂತೆ ಸ್ನಾನ ಪಾನ ಆಹಾರಾದಿಗಳನ್ನು ಪಡೆಯುತ್ತ

ಜನ್ಮದುಃಖಾನ್ಯನೇಕಾನಿ ಜನ್ಮನೋನಂತರಾಣಿ ಚ
ಬಾಲಭಾವೇ ಯದಾಪ್ನೋತಿ ಹ್ಯಾಧಿಭೌತಾದಿಕಾನಿ ಚ ॥ ೨೦ ॥

ಅಜ್ಞಾನತಮಸಾಚ್ಛನ್ನೋ ಮೂಢಾಂತಃ ಕರಣೋ ನರಃ ।
ನ ಜಾನಾತಿ ಕುತಃ ಕೋಹಂ ಕ್ವಾಹಂ ಗಂತಾ ಕಿಮಾತ್ಮನಃ ॥ ೨೧ ॥

ಕೇನ ಬಂಧೇನ ಬದ್ಧೋಽಹಂ ಕಾರಣಂ ಕಿಮಕಾರಣಂ ।
ಕಿಂ ಕಾರ್ಯಂ ಕಿಮಕಾರ್ಯಂ ವಾ ಕಿಂ ವಾಚ್ಯಂ ಕಿ[illegible]ನೋಚ್ಯತೇ ॥೨೨॥

ಕೋಧರ್ಮಃ ಕಶ್ಚ ವಾಧರ್ಮಃ ಕಸ್ಮಿನ್ ವರ್ತೇತ ವಾ ಕಥಂ ।
ಕಿಂ ಕರ್ತವ್ಯಮಕರ್ತವ್ಯಂ ಕಿಂ ವಾ ಕಿಂ ಗುಣದೋಷವತ್ ॥ ೨೩ ॥

ಏವಂ ಪಶುಸಮೈರ್ಮೂಢೈರಜ್ಞಾನಪ್ರಭವಂ ಮಹತ್ ।
ಅವಾಪ್ಯತೇ ನರೈರ್ದುಃಖಂ ಶಿಶ್ನೋದರಪರಾಯಣೈಃ ॥ ೨೪ ॥

ಅಶುಚಿಯಾದ ನೆಲದಲ್ಲಿ ಮಲಗಿ ನೊಣ, ಸೊಳ್ಳೆ ಮುಂತಾದುವು ಕಡಿದರೂ ಅವುಗಳನ್ನು ನಿವಾರಿಸಲು ಶಕ್ತಿಯಿಲ್ಲದೆ ಹುಟ್ಟುವಾಗಲೂ ಹುಟ್ಟಿದಮೇಲೆಯೂ ಬಾಲಕನಾಗಿರುವಾಗಲೂ ಅನೇಕ ದುಃಖಗಳನ್ನನುಭವಿಸುವನು.

೨೧–೨೪. ಯೌವನದಲ್ಲಿ ಮನುಷ್ಯನು ಅಜ್ಞಾನವೆಂಬ ಕತ್ತಲೆಯಲ್ಲಿ ಮನಸ್ಸಿಗೆ ಮಾರ್ಗವು ತಿಳಿಯದೆ ನಾನು ಯಾರು ? ಎಲ್ಲಿಂದ ಬಂದೆನು ? ಎಲ್ಲಿಗೆ ಹೋಗುವೆನು ? ನನ್ನ ಸ್ವರೂಪವೇನು ? ಎಂಬುದನ್ನು ತಿಳಿದುಕೊಳ್ಳುವುದಿಲ್ಲ. ನಾನು ಯಾವ ಕಟ್ಟಿಗೆ ಸಿಕ್ಕಿರುವೆನು ಇದಕ್ಕೆ ಕಾರಣವಿದೆಯೇ ಇಲ್ಲವೇ ಯಾವ ಕೆಲಸವನ್ನು ಮಾಡಬೇಕು. ಯಾವುದನ್ನು ಬಿಡಬೇಕು. ಯಾವ ಮಾತನ್ನಾಡಬೇಕು. ಯಾವ ಮಾತನ್ನಾಡಬಾರದು. ಧರ್ಮವಾವುದು, ಅಧರ್ಮವಾವುದು, ಯಾವ ಧರ್ಮದಲ್ಲಿ ಹೇಗೆ ನಡೆಯಬೇಕು. ಮಾಡಬೇಕಾದುದಾವುದು, ಮಾಡಬಾರದು ದಾವುದು, ಗುಣವಾವುದು. ದೋಷವಾವುದು ಎಂಬುದನ್ನು ತಿಳಿಯದೆ ಮೂಢರು ಪಶುಸಮಾನರಾಗಿ ಶಿಶ್ನೋದರ ಪರಾಯಣರಾಗಿ ಅಜ್ಞಾನದಿಂದುಂಟಾದ ಮಹಾ ದುಃಖವನ್ನನುಭವಿಸುವರು.

ಅಜ್ಞಾನಂ ತಾಮಸೋ ಭಾವಃ ಕಾರ್ಯಾರಂಭಪ್ರವೃತ್ತಯಃ ।
ಅಜ್ಞಾನಿನಾಂ ಪ್ರವರ್ತಂತೇ ಕರ್ಮಲೋಪಾಸ್ತತೋ ದ್ವಿಜ ॥ ೨೫ ॥

ನರಕೇ ಕರ್ಮಣಾಂ ಲೋಪಾತ್ಫಲಮಾಹುರ್ಮನೀಷಿಣಃ ।
ತಸ್ಮಾದಜ್ಞಾನಿನಾಂ ದುಃಖಮಿಹ ಚಾಮುತ್ರ ಚೋತ್ತಮಂ ॥ ೨೬ ॥

ಜರಾಜರ್ಜುರದೇಹಶ್ಚ ಶಿಥಿಲಾವಯವಃ ಪುಮಾನ್ ।
ವಿಚಲಚ್ಛೀರ್ಣದಶನೋ ವಲಿಸ್ನಾಯುಸಿರಾವೃತಃ ॥ ೨೭ ॥

ದೂರಪ್ರಣಷ್ಟನಯನೋ ವ್ಯೋಮಾಂತರ್ಗತತಾರಕಃ ।
ನಾಸಾ ವಿವರನಿರ್ಯಾತಲೋಮಪುಂಜಶ್ಚಲದ್ವಪುಃ ॥ ೨೮ ॥

ಪ್ರಕಟೀಭೂತಸರ್ವಾಸ್ಥಿನ್ನತಪೃಷ್ಠಾಸ್ಥಿಸಂಹತಿಃ ।
ಉತ್ಸನ್ನಜಠರಾಗ್ನಿತ್ವಾದಲ್ಪಾಹಾರೋಲ್ಪಚೇಷ್ಟಿತಃ ॥ ೨೯ ॥

೨೫-೨೬. ಅಜ್ಞಾನವೆಂಬುದು ತಮೋಗುಣದ ವಿಕಾರವು. ಅಜ್ಞಾನಿಗಳು ಅದಕ್ಕನುಸಾರವಾಗಿ ಆಲಸ್ಯದಿಂದ ಕಾರ್ಯಗಳನ್ನು ಮಾಡುವರು. ಇದರಿಂದ ಕಾಲ ಕಾಲಕ್ಕೆ ಮಾಡಬೇಕಾದ ವೈದಿಕ ಕರ್ಮಗಳು ಲೋಪವಾಗುವುವು. ಕರ್ಮ ಲೋಪವನ್ನು ಮಾಡಿದವರಿಗೆ ನರಕವು ಪ್ರಾಪ್ತವಾಗುವುದು. ಆದುದರಿಂದ ಅಜ್ಞಾನಿ ಗಳಿಗೆ ಇಹಪರಗಳಲ್ಲಿ ದುಃಖವೇ ಹೆಚ್ಚಾಗಿರುವುದು.

೨೭-೩೧. ಮುಪ್ಪಿನಲ್ಲಿ ಮನುಷ್ಯನ ದೇಹದ ಅವಯವಗಳು ಶಿಥಿಲವಾಗುವುವು. ಹಲ್ಲುಗಳು ಅಲುಗುತ್ತ ಬಿದ್ದುಹೋಗುವುವು. ಚರ್ಮವು ಸುಕ್ಕಾಗಿ ನರಗಳೂ ನಾಡಿಗಳೂ ಕಾಣಿಸಿಕೊಳ್ಳುವುವು. ದೂರದೃಷ್ಟಿಯಿರುವುದಿಲ್ಲ. ಕಣ್ಣುಗುಡ್ಡೆಗಳು ಆಕಾಶವನ್ನೇ ನೋಡುತ್ತಿರುವುವು. ಮೂಗಿನ ರಂಧ್ರದಿಂದ ಕೂದಲುಗಳು ಹೊರಕ್ಕೆ ಬಂದಿರುವುವು. ಶರೀರವು ನಡುಗುತ್ತಿರುವುದು. ಮೂಳೆಗಳೆಲ್ಲ ಕಾಣಿಸಿಕೊಳ್ಳುವುವು. ಬೆನ್ನುಮೂಳೆಯು ಬಗ್ಗಿಹೋಗುವುದು. ಜಠರಾಗ್ನಿಯು ನಾಶವಾದುದರಿಂದ

ಕೃಚ್ಛ್ರಾಚ್ಛ್ರಮಕ್ರಮೋತ್ಥಾನ ಶಯನಾಸನಚೇಷ್ಟಿತಃ ।
ಮಂದೀಭವಚ್ಛ್ರೋತ್ರನೇತ್ರಸ್ಸ್ರವಲ್ಲಾಲಾವಿಲಾನನಃ ॥ ೩೦ ॥

ಅನಾಯಸ್ತ್ರಸ್ತಮಸ್ತ್ರಸ್ತಶ್ಚ ಕರಣೈರ್ಮರಣೋನ್ಮುಖಃ ।
ತಷ್ಣೀಮೇಷ್ಯನುಭೂತಾನಾಮಸ್ಮರ್ತಾಖಿಲವಸ್ತುನಾಂ ॥ ೩೧ ॥

ಸಕೃದುಚ್ಚಾರಿತೇ ವಾಕ್ಯೇ ಸಮುದ್ಭೂತಮಹಾಶ್ರಮಃ ।
ಶ್ವಾಸಕಾಸಸಮುದ್ಭೂತಮಹಾಯಾಸಪ್ರಜಾಗರಃ ॥ ೩೨ ॥

ಅನ್ಯೇನೋತ್ಥಾಪ್ಯತೇಽನ್ಯೇನ ತಥಾ ಸಂವೇಶ್ಯತೇ ಜರೀ ।
ಭೃತ್ಯಾತ್ಮಪುತ್ರದಾರಾಣಾಮವಮಾನಾಸ್ಪದೀ ಕೃತಃ ॥ ೩೩ ॥

ಪ್ರಕ್ಷೀಣಾಖಿಲಶೌಚಶ್ಚ ವಿಹಾರಾಹಾರಸಂಸ್ಪೃಹಃ ।
ಹಾಸ್ಯಃ ಪರಿಜನಸ್ಯಾಪಿ ನಿರ್ವಿಣ್ಣಾಶೇಷಬಾಂಧವಃ ॥ ೩೪ ॥

ಆಹಾರವು ಜೀರ್ಣವಾಗದೆ ಕೆಲಸಮಾಡಲು ಶಕ್ತಿಯಿರುವುದಿಲ್ಲ. ಬಹು ಕಷ್ಟದಿಂದ ಏಳುವುದು, ಕುಳಿತುಕೊಳ್ಳುವುದು, ಮಲಗುವುದು, ಸಂಚರಿಸುವುದು ಈ ಕೆಲಸಗಳನ್ನು ಮಾಡಬೇಕಾಗುವುದು. ಕಿವಿ ಮತ್ತು ಕಣ್ಣುಗಳ ಕೆಲಸಗಳು ಮಂದವಾಗುವುವು. ಬಾಯಲ್ಲಿ ಜೊಲ್ಲು ಸುರಿಯುತ್ತಿರುವುದು. ಸಮಸ್ತ ಇಂದ್ರಿಯಗಳೂ ತಮ್ಮ ಕೆಲಸವನ್ನು ಮಾಡದಿರುವುದರಿಂದ ಮನುಷ್ಯನು ಮರಣವನ್ನು ನಿರೀಕ್ಷಿಸುತ್ತಿರುವನು. ಆಗತಾನೆ ಅನುಭವಿಸಿದ ಸಮಸ್ತ ವಿಷಯಗಳನ್ನೂ ಮರೆತು ಜ್ಞಾಪಕಶಕ್ತಿಯಿಲ್ಲದವನಾಗುವನು.

೩೨-೩೬. ಮುದುಕನಾದವನಿಗೆ ಒಂದು ಬಾರಿ ಮಾತನಾಡಿದರೆ ಮಹಾಶ್ರಮವಾಗುವುದು. ಉಬ್ಬಸ ಕೆಮ್ಮುಗಳಿಂದ ನಿದ್ರೆಯೇ ಬರುವುದಿಲ್ಲ. ಮಲಗಿದ್ದವನನ್ನು ಏಳಿಸುವುದಕ್ಕೂ ಕೂಡಿಸುವುದಕ್ಕೂ ಒಬ್ಬರ ಸಹಾಯ ಬೇಕಾಗುವುದು. ಸೇವಕರೂ ಮಕ್ಕಳೂ ಹೆಂಡಿರೂ ಅವನನ್ನು ಅಪಮಾನಪಡಿಸುವರು. ಶುಚಿಯಾಗಿರುವುದಕ್ಕಾಗುವುದಿಲ್ಲ. ಆಹಾರ ವಿಹಾರಗಳಲ್ಲಿ ಆಸೆಯು ಹೆಚ್ಚುವುದು. ಪರಿಜನ

ಅನುಭೂತಮಿವಾನ್ಯಸ್ಮಿನ್ ಜನ್ಮನ್ಯಾತ್ಮವಿಚೇಷ್ಟಿತಂ ।
ಸಂಸ್ಮರನ್ ಯೌವನೇ ದೀರ್ಘಂ ನಿಶ್ವಸತ್ಯತಿತಾಪಿತಃ ॥ ೩೫ ॥

ಏವಮಾದೀನಿ ದುಃಖಾನಿ ಜರಾಯಾಮನುಭೂಯ ವೈ ।
ಮರಣೇ ಯಾನಿ ದುಃಖಾನಿ ಪ್ರಾಪ್ನೋತಿ ಶೃಣು ತಾನ್ಯಪಿ ॥ ೩೬ ॥

ಶ್ಲಥದ್ಗ್ರೀವಾಂಘ್ರಿಹಸ್ತೋಽಥ ವ್ಯಾಪ್ತೋ ವೇಪಥುನಾ ಭೃಶಂ ।
ಮುಹುರ್ಗ್ಲಾನಿಃ ಪರವಶೋ ಮುಹುರ್ಜ್ವಾನಲವಾನ್ವಿತಃ ॥ ೩೭ ॥

ಹಿರಣ್ಯಧಾನ್ಯತನಯಭಾರ್ಯಾಭೃತ್ಯಗೃಹಾದಿಷು ।
ಏತೇ ಕಥಂ ಭವಿಷ್ಯಂತೀತ್ಯತೀವ ಮಮತಾಕುಲಃ ॥ ೩೮ ॥

ಮರ್ಮಭಿದ್ಭಿರ್ಮಹಾರೋಗೈಃ ಕೃಕಚೈರಿವ ದಾರುಣೈಃ ।
ಶರೈರಿವಾಂತಕಸ್ಯೋಗ್ರೈಶ್ಛಿದ್ಯಮಾನಾ ಸುಬಂಧನಃ ॥ ೩೯ ॥

ಪರಿವರ್ತಿತತಾರಾಕ್ಷೋ ಹಸ್ತಪಾದಂ ಮುಹುಃ ಕ್ಷಿಪನ್ ।
ಸಂಶುಷ್ಯಮಾಣತಾಲ್ವೋಷ್ಠಪುಟೋ ಘುರಘುರಾಯತೇ ॥ ೪೦ ॥

ರೆಲ್ಲರೂ ಅವರನ್ನು ಹಾಸ್ಯಮಾಡುವರು. ಸಮಸ್ತ ಬಂಧುಗಳೂ ಅವನನ್ನು ಕಂಡರೆ ಬೇಸರಪಟ್ಟುಕೊಳ್ಳುವರು. ಅವನು ತನ್ನ ಪ್ರಾಯದಲ್ಲಿ ಅನುಭವಿಸಿದುವುಗಳನ್ನು ಜ್ಞಾಪಿಸಿಕೊಂಡು ಅದೇ ಬೇರೊಂದು ಜನ್ಮವೆಂದು ತಿಳಿದುಕೊಳ್ಳುವನು. ಮತ್ತು ಆ ಸಂತಾಪದಿಂದ ನಿಟ್ಟುಸಿರು ಬಿಡುವನು. ಮನುಷ್ಯನು ಮುಪ್ಪಿನಲ್ಲಿ ಇವೇ ಮೊದಲಾದ ಅನೇಕ ದುಃಖಗಳನ್ನನುಭವಿಸುವನು. ಇನ್ನು ಮರಣಕಾಲದಲ್ಲಿ ಯಾವ ದುಃಖಗಳನ್ನನುಭವಿಸುವನೆಂಬುದನ್ನು ಹೇಳುವೆನು ಕೇಳು.

೩೭-೪೩. ಮರಣಕಾಲದಲ್ಲಿ ಮನುಷ್ಯನಿಗೆ ಕುತ್ತಿಗೆ ಕಾಲು ಕೈಗಳು ಸಡಿಲವಾಗಿ ಜೋಲಾಡುತ್ತಿರುವುವು. ಶರೀರವೆಲ್ಲ ವಿಶೇಷವಾಗಿ ನಡುಗುತ್ತಿರುವುದು. ಪುನಃ ಪುನಃ ಮೂರ್ಛೆಯೂ ಆಯಾಸವೂ ಆಗುತ್ತ ಜ್ಞಾನವು ಅಲ್ಪವಾಗಿರುವುದು. ನನ್ನ ಹಣ, ಧಾನ್ಯ, ಮಕ್ಕಳು, ಹೆಂಡತಿ, ಸೇವಕರು ಮನೆ ಮುಂತಾದುವು ಮುಂದೆ ಹೇಗಿರುವುವು

ನಿರುದ್ಧಕಂಠೋ ದೋಷೌಘೈರುದಾನಶ್ವಾಸಪೀಡಿತಃ ।
ಗಾಪೇನ ಮಹತಾ ವ್ಯಾಪ್ತಸ್ತೃಷಾ ಚಾರ್ತಸ್ತಥಾ ಕ್ಷುಧಾ ॥ ೪೧ ॥

ಕ್ಲೇಶಾದುತ್ಕ್ರಾಂತಿಮಾಪ್ನೋತಿ ಯಮಕಿಂಕರಪೀಡಿತಃ ।
ತತಶ್ಚ ಯಾತನಾ ದೇಹಂ ಕ್ಲೇಶೇನ ಪ್ರತಿಪದ್ಯತೇ ॥ ೪೨ ॥

ಏತಾನ್ಯನ್ಯಾನಿ ಚೋಗ್ರಾಣಿ ದುಃಖಾನಿ ಮರಣೇ ನೃಣಾಂ ।
ಶೃಣುಷ್ವ ನರಕೇ ಯಾನಿ ಪ್ರಾಪ್ಯಂತೇ ಪುರುಷೈ ರ್ಮೃತೈಃ ॥ ೪೩ ॥

ಯಾಮ್ಯಕಿಂಕರಪಾಶಾದಿಗ್ರಹಣಂ ದಂಡತಾಡನಂ ।
ಯಮಸ್ಯ ದರ್ಶನಂ ಚೋಗ್ರಮುಗ್ರಮಾರ್ಗವಿಲೋಕನಂ ॥ ೪೪ ॥

ಕರಂಭವಾಲುಕಾವಹ್ನಿ ಯಂತ್ರಶಸ್ತ್ರಾಸಿಭೀಷಣೇ ।
ಪ್ರತ್ಯೇಕಂ ನರಕೇ ಯಾಶ್ಚ ಯಾತನಾ ದ್ವಿಜ ದುಸ್ಸಹಾಃ ॥ ೪೫ ॥

ಎಂದು ಅತ್ಯಂತ ಅಭಿಮಾನದಿಂದ ಅಸೆಯುಂಟಾಗುವುದು. ಅಪಾಯವನ್ನುಂಟುಮಾಡುವ ಮಹಾರೋಗಗಳು ಗರಗಸದಿಂದಲೂ, ಯಮನ ಬಾಣಗಳಿಂದಲೂ ಶೀಳಿದಂತೆ ನೋವನ್ನುಂಟುಮಾಡುತ್ತಿರುವುವು. ಕಣ್ಣುಗುಡ್ಡೆಗಳು ವಿಕಾರವಾಗುವುವು ಕೈಕಾಲುಗಳನ್ನು ಬಡಿಯುತ್ತ ತುಟಿಗಳು ಒಣಗಿ ಹೋಗಿ ಗಂಟಲಲ್ಲಿ ಗುರು ಗುರು ಶಬ್ದವಾಗುತ್ತಿರುವುದು. ಶ್ಲೇಷ್ಮವೇ ಮುಂತಾದ ದೋಷಗಳಿಂದ ಗಂಟಲು ಕಟ್ಟಿಕೊಂಡು ಉದಾನವಾಯುವಿನ ಬಾಧೆಯಿಂದ ಮಹಾ ಸಂತಾಪದಿಂದಲೂ ಹಸಿವು ಬಾಯಾರಿಕೆಯಿಂದಲೂ ಕೂಡಿ ಬಹು ಕಷ್ಟದಿಂದ ಯಮದೂತರ ಬಾಧೆಯಿಂದ ಪ್ರಾಣವನ್ನು ಬಿಡುವನು. ಆ ಮೇಲೆ ಜೀವನು ಬಹು ಕಷ್ಟದಿಂದ ಯಾತನಾ ದೇಹವನ್ನು ಪಡೆಯುವನು.

೪೪-೪೯. ಮೈತ್ರೇಯನೇ! ಜೀವನನ್ನು ನರಕದಲ್ಲಿ ಯಮಕಿಂಕರರು ಹಗ್ಗದಿಂದ ಕಟ್ಟುವುದು, ದೊಣ್ಣೆಯಿಂದ ಹೊಡೆಯುವುದು, ಕ್ರೂರವಾದ ದಾರಿಯನ್ನು ತೋರಿಸುವುದು, ಯಮನ ಕ್ರೂರರೂಪವನ್ನು ತೋರಿಸುವುದು, ಬಿಸಿಯಾದ ಮರಳು,

ಕ್ರಕಚೈಃ ಪಾಟ್ಯಮಾನಾನಾಂ ಮೂಷಾಯಾಂ ಚಾಪಿ ದಹ್ಯತಾಂ ।
ಕರ್ತಕಾರ್ಯೈಃ ಕೃತ್ಯಮಾನಾನಾಂ ಭೂಮೌ ಚಾಪಿ ನಿಖನ್ಯತಾಂ ॥ ೪೬ ॥

ತೂಲೋತ್ಕಾರೋಪ್ಯಮಾಣಾನಾಂ ವ್ಯಾಘ್ರವಕ್ತ್ರೇ ಪ್ರವೇಶ್ಯತಾಂ ।
ಗೃಧ್ರೈಃ ಸ್ಪಂಭಕ್ಷ್ಯಮಾಣಾನಾಂ ದ್ವೀಪಿಭಿಶ್ಚೋಪಭುಜ್ಯತಾಂ ॥ ೪೭ ॥

ಕ್ವಾಥ್ಯತಾಂ ತೈಲಮಧ್ಯೇ ಚ ಕ್ಲಿದ್ಯತಾಂ ಕ್ವಾರಕರ್ದಮೇ ।
ಉಚ್ಚಾನ್ನಿಪತ್ಯಮಾನಾನಾಂ ಕ್ಷಿಪ್ಯತಾಂ ಕ್ಷೇಪಯಂತ್ರಕೈಃ ॥ ೪೮ ॥

ನರಕೇ ಯಾನಿ ದುಃಖಾನಿ ಪಾಪಹೇತೂದ್ಭವಾನಿ ವೈ ।
ಪ್ರಾಪ್ನುವಂತೀ ನಾರಕೈರ್ವಿಪ್ರ ತೇಷಾಂ ಸಂಖ್ಯಾ ನ ವಿದ್ಯತೇ ॥ ೪೯ ॥

ಅಗ್ನಿಯಂತ್ರ, ಕತ್ತಿ ಮುಂತಾದ ಶಸ್ತ್ರಗಳು ಇವುಗಳಿಂದ ಭಯಪಡಿಸುವುದು, ಬೇರೆ ಬೇರೆ ನರಕಗಳಲ್ಲಿಟ್ಟು ಬಾಧೆಪಡಿಸುವುದು, ಇವುಗಳು ಆ ಜೀವರಿಗೆ ಸಹಿಸಲಸಾಧ್ಯವಾಗಿರುವುವು. ಆ ನರಕಗಳಲ್ಲಿ ಗರಗಸದಿಂದ ಕುಯ್ಯುತ್ತಿರುವೆ, ಮೂಸೆಯಲ್ಲಿಟ್ಟು ಕಾಯಿಸುತ್ತಿರುವೆ, ಕೊಡಲಿಯಿಂದ ಕಡಿಯುತ್ತಿರುವೆ, ಭೂಮಿಯಲ್ಲಿ ಹೂಳುತ್ತಿರುವ, ತೂಲಕ್ಕೇರಿಸುತ್ತಿರುವೆ, ಹುಲಿಯ ಬಾಯಿಗೆ ತಳ್ಳುತ್ತಿರುವ, ಹದ್ದುಗಳು ತಿನ್ನುತ್ತಿರುವ, ಹುಲಿಗಳು ತಿನ್ನುತ್ತಿರುವ, ಎಣ್ಣೆಯಕೊಪ್ಪರಿಗೆಯಲ್ಲಿ ಕುದಿಯುತ್ತಿರುವ, ಉಪ್ಪಿನ ಕೆಸರಿನಲ್ಲಿ ಮುಳುಗಿರುವ, ಎತ್ತರವಾದ ಪ್ರದೇಶದಿಂದ ಬೀಳುತ್ತಿರುವ, ಗಾಳಿಯಂತ್ರಗಳಿಂದ ತೂರಿಕೊಂಡು ಹೊಗುತ್ತಿರುವ ಜೀವರುಗಳನ್ನು ನೋಡಬಹುದು. ನರಕದಲ್ಲಿ ಅವರು ಅನುಭವಿಸುವ ದುಃಖಗಳು ಅವರು ಮಾಡಿದ ಪಾಪ ಕರ್ಮಗಳಿಂದಲೇ ಉಂಟಾದುವು. ಇವುಗಳಿಗೆ ಲೆಕ್ಕವೇ ಇರುವುದಿಲ್ಲ.

ನ ಕೇವಲಂ ದ್ವಿಜಶ್ರೇಷ್ಠ ನರಕೇ ದುಃಖಪದ್ಧತಿಃ ।
ಸ್ವರ್ಗೇಽಪಿ ಪಾತಭೀತಸ್ಯ ಕ್ಷಯಿಷ್ಣೋರ್ನಾಸ್ತಿ ನಿರ್ವೃತಿಃ ॥ ೫೦ ॥

ಪುನಶ್ಚ ಗರ್ಭೇ ಭವತಿ ಜಾಯತೇ ಚ ಪುನಃ ಪುನಃ ।
ಗರ್ಭೇ ವಿಲೀಯತೇ ಭೂಯೋ ಜಾಯಮಾನೋಽಸ್ತಮೇತಿ ವೈ ॥ ೫೧ ॥

ಜಾತಮಾತ್ರಶ್ಚ ಮ್ರಿಯತೇ ಬಾಲಭಾವೇಽಥ ಯೌವನೇ ।
ಮಧ್ಯಮಂ ವಾ ವಯಃ ಪ್ರಾಪ್ಯ ವಾರ್ಧಕೇ ವಾಥವಾ ಮೃತಿಃ ॥ ೫೨ ॥

ಯಾವಜ್ಜೀವತಿ ತಾವಚ್ಚ ದುಃಖೈರ್ನಾನಾವಿಧೈಃ ಪ್ಲುತಃ ।
ತಂ ತು ಕಾರಣ ಪಕ್ಷ್ಮಾಪಹ್ನೈರಾಸ್ತೇ ಕಾರ್ಪಾಸಬೀಜವತ್ ॥ ೫೩ ॥

ದ್ರವ್ಯನಾಶೇ ತಥೋತ್ಪತ್ತೌ ಪಾಲನೇ ಚ ಸದಾ ನೃಣಾಂ ।
ಭವಂತ್ಯನೇಕದುಃಖಾನಿ ತಥೈವೇಷ್ಟವಿಪತ್ತಿಷು ॥ ೫೪ ॥

೫೦-೫೩. ಬ್ರಾಹ್ಮಣಶ್ರೇಷ್ಠನಾದ ಮೈತ್ರೇಯನೇ! ನರಕದಲ್ಲಿ ಮಾತ್ರ ದುಃಖ ವೆಂಬುದಲ್ಲ. ಸ್ವರ್ಗದಲ್ಲಿಯೂ ಪುಣ್ಯಕ್ಷಯವಾದರೆ ಇಲ್ಲಿಂದ ಬಿಟ್ಟು ಹೋಗಬೇಕಾ ಗುವುದೆಂಬ ಭಯದಿಂದ ಸುಖವಿರುವುದಿಲ್ಲ. ಸ್ವರ್ಗ ನರಕಗಳಲ್ಲಿ ಜೀವನು ಸುಖ ದುಃಖಗಳನ್ನನ್ನು ಭವಿಸಿದ ಮೇಲೆ ಪುನಃ ಪುನಃ ಗರ್ಭವಾಸವನ್ನನುಭವಿಸಿ ಹುಟ್ಟುತ್ತಿ ರುವನು. ಕೆಲವು ಸಂದರ್ಭಗಳಲ್ಲಿ ಗರ್ಭದಲ್ಲೇ ನಾಶವಾಗುವನು. ಅಥವಾ ಹುಟ್ಟು ತ್ತಿದ್ದ ಹಾಗೆಯೇ ಸಾಯುವನು. ಬಾಲಕನಾಗಿರುವಾಗಲೋ ಪ್ರಾಯದಲ್ಲಿಯೋ ಮುಪ್ಪಿನಲ್ಲಿಯೋ ಸಾಯುವನು. ಜೀವನು ಬದುಕಿರುವವರೆಗೂ ಹತ್ತಿಯಿಂದ ಆವರಿಸಿದ ಹತ್ತಿಯ ಬೀಜದಂತೆ ಬಗೆ ಬಗೆಯ ದುಃಖಗಳಿಂದ ಕೂಡಿಕೊಂಡಿರುವನು.

೫೪–೫೬. ದ್ರವ್ಯವನ್ನು ಸಂಪಾದಿಸುವಾಗಲೂ ಅದು ನಾಶವಾಗುವಾಗಲೂ ಅದನ್ನು ರಕ್ಷಿಸುವಾಗಲೂ ತನಗಿಷ್ಟವಾದ ವಸ್ತುಗಳು ನಾಶವಾದಾಗಲೂ ಮನುಷ್ಯ ನಿಗೆ ಅನೇಕ ದುಃಖಗಳುಂಟಾಗುವುವು. ಮೈತ್ರೇಯನೇ! ಯಾವ ಯಾವ ವಸ್ತು

ಯದ್ಯಪ್ಯೇತೇ ಪ್ರೀತಿಕರಂ ಪುಂಸಾಂ ವಸ್ತು ಮೈತ್ರೇಯ ಜಾಯತೇ ।
ತದೇವ ದುಃಖವೃಕ್ಷಸ್ಯ ಬೀಜತ್ವಮುಪಗಚ್ಛತಿ ॥ ೫೫ ॥

ಕಳತ್ರಪುತ್ರಮಿತ್ರಾರ್ಥ ಗೃಹಕ್ಷೇತ್ರಧನಾದಿಕೈಃ ।
ಕ್ರಿಯತೇ ಸ ತಥಾ ಭೂರಿ ಸುಖಂ ಪುಂಸಾಂ ಯಥಾಸುಖಂ ॥ ೫೬ ॥

ಇತಿ ಸಂಸಾರದುಃಖಾರ್ಕತಾಪ ತಾಪಿತ ಚೇತಸಾಂ ।
ವಿಮುಕ್ತಿಪಾದಪಚ್ಛಾಯಾಮೃತೇ ಕುತ್ರ ಸುಖಂ ನೃಣಾಂ ॥ ೫೭ ॥

ತದಸ್ಯ ತ್ರಿವಿಧಸ್ಯಾಪಿ ದುಃಖ ಜಾತಸ್ಯ ವೈ ಮುನೇ ।
ಗರ್ಭಜನ್ಮಜರಾದ್ಯೇಷು ಸ್ಥಾನೇಷು ಪ್ರಭವಿಷ್ಯತಃ ॥ ೫೮ ॥

ನಿರಸ್ತಾತಿಶಯಾಹ್ಲಾದ ಸುಖಭಾವೈಕಲಕ್ಷಣಾ ।
ಭೇಷಜಂ ಭಗವತ್ಪ್ರಾಪ್ತಿರೇ ಕಾಂತಾತ್ಯಂತಿಕೀ ಮತಾ ॥ ೫೯ ॥

ಗಳು ಮನುಷ್ಯನಿಗೆ ಪ್ರೀತಿಪಾತ್ರವಾದುವುಗಳೋ ಅವೇ ದುಃಖವೆಂಬ ವೃಕ್ಷಕ್ಕೆ ಬೀಜ ರೂಪವಾಗಿರುವುವು. ಹೆಂಡತಿ, ಮಕ್ಕಳು, ಮಿತ್ರರು, ಹಣ, ಮನೆ, ಭೂಮಿ, ಇವುಗಳು ಮನುಷ್ಯನನ್ನು ವಿಶೇಷ ಸುಖವುಳ್ಳವನನ್ನಾಗಿ ಮಾಡಲಾರವು.

೫೭-೫೯. ಹೀಗೆ ಸಂಸಾರ ದುಃಖವೆಂಬ ಸೂರ್ಯನ ತಾಪದಿಂದ ಬಳಲಿದ ಮನಸ್ಸುಳ್ಳ ಜೀವರಿಗೆ ಮೋಕ್ಷವೆಂಬ ಮರದ ನೆರಳನ್ನು ಬಿಟ್ಟು ಮತ್ತೆಲ್ಲಿ ಸುಖವಿರುವುದು ? ಆದುದರಿಂದ ಗರ್ಭ, ಜನ್ಮ, ಮುಪ್ಪು ಮುಂತಾದ ಅವಸ್ಥೆಗಳಲ್ಲಿ ಜೀವನಿಗೆ ಉಂಟಾಗುವ ಮೂರು ಬಗೆಯ ದುಃಖಗಳಿಗೂ ಯಾವ ವಿಶೇಷವೂ ಇಲ್ಲದ ಆನಂದ ಸ್ವರೂಪವಾದ ಪರಬ್ರಹ್ಮ ಪ್ರಾಪ್ತಿಯೊಂದೇ ಕೊನೆಯ ಔಷಧವಾಗಿರುವುದು. ಎಂದು ನಮ್ಮ ಅಭಿಪ್ರಾಯವಿರುವುದು.

ತಸ್ಮಾತ್ತತ್ಪ್ರಾಪ್ತಯೇ ಯತ್ನಃ ಕರ್ತವ್ಯಃ ಪಂಡಿತೈರ್ನರೈಃ ।
ತತ್ಪ್ರಾಪ್ತಿಹೇತುರ್ಜ್ಞಾನಂ ಚ ಕರ್ಮ ಚೋಕ್ತಂ ಮಹಾಮುನೇ ॥ ೬೦ ॥

ಅಗಮೋಽಥಂ ವಿವೇಕಾಚ್ಚ ದ್ವಿಧಾ ಜ್ಞಾನಂ ತದುಚ್ಯತೇ ।
ಶಬ್ದಬ್ರಹ್ಮಾಗಮಮಯಂ ಪರಂ ಬ್ರಹ್ಮ ವಿವೇಕಜಂ ॥ ೬೧ ॥

ಅಂಧಂ ತಮ ಇವಾಜ್ಞಾನಂ ದೀಪವಚ್ಚೇಂದ್ರಿಯೋದ್ಭವಂ ।
ಯಥಾ ಸೂರ್ಯಸ್ತಥಾ ಜ್ಞಾನಂ ಯದ್ವಿಪ್ರರ್ಷೇ ವಿವೇಕಜಂ ॥ ೬೨ ॥

---

೬೦. ಆದುದರಿಂದ ಆ ಪರಮಪದ ಪ್ರಾಪ್ತಿಗೆ ಬುದ್ಧಿವಂತರಾದ ಮನುಜರು ಪ್ರಯತ್ನ ಮಾಡಬೇಕು. ಆ ಮೋಕ್ಷಪ್ರಾಪ್ತಿಗೆ ಜ್ಞಾನವೂ ಕರ್ಮವೂ ಕಾರಣವಾಗಿರುವುದು. (ಕರ್ಮವು ಜ್ಞಾನಾಂಗವಾಗಿ ಚಿತ್ತಶುದ್ಧಿಯನ್ನು ಮಾಡುವುದರಿಂದಲೂ ಜ್ಞಾನವು ಸಾಕ್ಷಾತ್ತಾಗಿಯೂ ಕಾರಣವಾಗಿರುವುದೆಂದು ಅಭಿಪ್ರಾಯವು.)

೬೧. ಜ್ಞಾನದಲ್ಲಿ ಶಾಸ್ತ್ರಜನ್ಯಜ್ಞಾನ, ವಿವೇಕದಿಂದುಂಟಾದ ಜ್ಞಾನ ಎಂದು ಎರಡು ವಿಧವಿರುವುದು. " ಸತ್ಯಂ ಜ್ಞಾನಮನಂತಂ ಬ್ರಹ್ಮ " ಇತ್ಯಾದಿಯಾದ ವೇದ ವಾಕ್ಯಗಳ ಶ್ರವಣದಿಂದುಂಟಾದ ಜ್ಞಾನಕ್ಕೆ ಶಬ್ದಬ್ರಹ್ಮವೆಂದೂ ಆತ್ಮಾನಾತ್ಮ ವಿವೇಕದಿಂದುಂಟಾದ ನಿರ್ವಿಕಾರವಾದ ಚಿತ್ತವೃತ್ತಿಯಿಂದ ಪ್ರಕಾಶವಾದ ಜ್ಞಾನಕ್ಕೆ ಪರಬ್ರಹ್ಮ ಜ್ಞಾನವೆಂದೂ ಹೆಸರಿರುವುದು.

೬೨. ಅಜ್ಞಾನವು ದೊಡ್ಡ ಕತ್ತಲೆಯಂತೆ ಜ್ಞಾನವನ್ನಾವರಿಸಿರುವುದು. ಇಂದ್ರಿಯ ಜನ್ಯಜ್ಞಾನವು ದೀಪದಂತೆ ಇರುವುದು. ದೀಪದಿಂದ ಎಲ್ಲ ಕತ್ತಲೆಯೂ ನಿವಾರಣೆಯಾಗುವುದಿಲ್ಲ. ಆದರಂತೆ ಶಬ್ದ ಶ್ರವಣದಿಂದುಂಟಾದ ಜ್ಞಾದಿಂದ ಸಂಪೂರ್ಣವಾಗಿ ಅಜಾ ನವು ನಾಶವಾಗುವುದಿಲ್ಲ. ಸಂದೇಹಾದಿಗಳು ಇದ್ದೇ ಇರುವುವು. ಆತ್ಮಾನಾತ್ಮ ವಿವೇಕದಿಂದುಂಟಾದ ನಿರ್ವಿಕಾರವಾದ ವೃತ್ತಿರೂಪಜ್ಞಾನವು ಸೂರ್ಯನು ಸಮಸ್ತ ಕತ್ತಲೆಯನ್ನೂ ನಾಶಮಾಡುವಂತೆ ಸಮಸ್ತ ಅಜ್ಞಾನವನ್ನೂ ನಾಶಮಾಡುವುದು.

ಮನುರಸ್ಯಾಹ ವೇದಾರ್ಥಂ ಸ್ಮೃತ್ವಾ ಯನ್ಮುನಿಸತ್ತಮ ।
ತದೇತಚ್ಛ್ರೂಯತಾಮತ್ರ ಸಂಬಂಧೋ ಗದತೋ ಮಮ ॥ ೬೩ ॥

ದ್ವೇ ಬ್ರಹ್ಮಣೀ ವೇದಿ ತವ್ಯೇ ಶಬ್ದಬ್ರಹ್ಮಪರಂ ಚ ಯತ್ ।
ಶಬ್ದಬ್ರಹ್ಮಣಿ ನಿಷ್ಣಾತಃ ಪರಂ ಬ್ರಹ್ಮಾಧಿಗಚ್ಛತಿ ॥ ೬೪ ॥

ದ್ವೇ ವೈ ವಿದ್ಯೇ ವೇದಿತವ್ಯೇ ಇತಿ ಚಾಥರ್ವಣೇ ಶ್ರುತಿಃ ।
ಪರಯಾ ತ್ವಕ್ಷರಪ್ರಾಪ್ತಿಃ ಋಗ್ವೇದಾದಿಮಯಾಽಪರಾ ॥ ೬೫ ॥

ಯತ್ತದವ್ಯಕ್ತಮಜರಮಚಿಂತ್ಯಮಜಮವ್ಯಯಂ ।
ಅನಿರ್ದೇಶ್ಯಮರೂಪಂ ಚ ಪಾಣಿಪಾದಾದ್ಯಸಂಯುತಂ ॥ ೬೬ ॥

ವಿಭುಸರ್ವಗತಂ ನಿತ್ಯಂ ಭೂತಯೋನಿರಕಾರಣಂ ।
ವ್ಯಾಪ್ಯವ್ಯಾಪ್ತಂ ಯತಸ್ಸರ್ವಂ ಯದ್ವೈ ಪಶ್ಯಂತಿ ಸೂರಯಃ ॥ ೬೭ ॥

೬೩-೬೪. ಈ ವಿಷಯದಲ್ಲಿ ವೇದದ ಅಭಿಪ್ರಾಯವನ್ನು ಸಂಗ್ರಹಿಸಿ ಮನುವು ಹೇಳಿದುದನ್ನು ಹೇಳುವೆನು ಕೇಳು. ಶಬ್ದಬ್ರಹ್ಮ, ಪರಬ್ರಹ್ಮ ಈ ಎರಡನ್ನೂ ತಿಳಿಯಬೇಕು. ಶಬ್ದಬ್ರಹ್ಮವಾದ ವೇದದ ಅಭಿಪ್ರಾಯವನ್ನು ಸಂಪೂರ್ಣವಾಗಿ ತಿಳಿದವನು ಆತ್ಮಾನಾತ್ಮ ವಿವೇಕದಿಂದ ಪರಬ್ರಹ್ಮಸ್ವರೂಪನಾಗುವನು.

೬೫. ಅಥರ್ವಶಿರೋಪನಿಷತ್ತಿನಲ್ಲಿ 'ದ್ವೇವಿದ್ಯೇವೇದಿತವ್ಯೇ ಪರಾಚೈವಾ ಪರಾಚ' ಎಂದು ಹೇಳಿ ಋಗ್ವೇದಾದಿ ಶಬ್ದಬ್ರಹ್ಮ ರೂಪವಾದ ಅಪರಾವಿದ್ಯೆಯಲ್ಲಿ ಜ್ಞಾನಸಾಧನವಾದ ಕರ್ಮಭಾಗಗಳನ್ನೂ ಉಪನಿಷದ್ರೂಪವಾದ ಪರಾವಿದ್ಯೆಯಲ್ಲಿ ನಿರ್ವಿಕಾರವಾದ ಪರಬ್ರಹ್ಮ ಸ್ವರೂಪವಾದ ಜ್ಞಾನವನ್ನೂ ಪ್ರತಿಪಾದಿಸಿರುವುದು. ಪರಾವಿದ್ಯೆಯಿಂದ ನಾಶರಹಿತವಾದ ಪರಬ್ರಹ್ಮತ್ವ ಪ್ರಾಪ್ತಿಯಾಗುವುದು.

೬೬-೬೭. ವೇದಜ್ಞರಲ್ಲದವರಿಗೆ ತಿಳಿಯಲಸಾಧ್ಯವಾದ ಷಡ್ಭಾವ ವಿಕಾರಗಳಿಲ್ಲದ ವಾಕ್ಕಿಗೂ ಮನಸ್ಸಿಗೂ ಗೋಚರವಲ್ಲದ ದೇವ ಮನುಷ್ಯಾದಿ ರೂಪಗಳಿಲ್ಲದ ಕೈಕಾಲು ಮುಂತಾದ ಅವಯವಗಳಿಲ್ಲದ ಸರ್ವ ವ್ಯಾಪಿಯೂ ಸರ್ವ ಗತವೂ ಸಮಸ್ತ

ತದ್ಬ್ರಹ್ಮ ತತ್ಪರಂ ಧಾಮ ತದ್ಧ್ಯೇಯಂ ಮೋಕ್ಷಕಾಂಕ್ಷಿಭಿಃ ।
ಶ್ರುತಿವಾಕ್ಯೋದಿತಂ ಸೂಕ್ಷ್ಮಂ ತದ್ವಿಷ್ಣೋಃ ಪರಮಂ ಪದಂ ॥ ೬೪ ॥

ತದೇವ ಭಗವದ್ವಾಚ್ಯಂ ಸ್ವರೂಪಂ ಪರಮಾತ್ಮನಃ ।
ವಾಚಕೋ ಭಗವಚ್ಛಬ್ದಸ್ತಸ್ಯಾದ್ಯಸ್ಯಾಕ್ಷಯಾತ್ಮನಃ ॥ ೬೯ ॥

ಏವಂ ನಿಗದಿತಾರ್ಥಸ್ಯ ಸತ್ತತ್ತ್ವಂ ತಸ್ಯ ತತ್ವತಃ ।
ಜ್ಞಾಯತೇ ಯೇನ ತತ್ ಜ್ಞಾನಂ ಪರಮನ್ಯತ್ರ್ತಯೀಮಯಂ ॥ ೭೦ ॥

ಅಶಬ್ದಗೋಚರಸ್ಯಾಪಿ ತಸ್ಯ ವೈ ಬ್ರಹ್ಮಣೋ ದ್ವಿಜ ।
ಪೂಜಾಯಾಂ ಭಗವಚ್ಛಬ್ದಃ ಕ್ರಿಯತೇ ಹ್ಯುಪಚಾರತಃ ॥ ೭೧ ॥

ಶುದ್ಧೇ ಮಹಾವಿಭೂತ್ಯಾಖ್ಯೇ ಪರೇ ಬ್ರಹ್ಮಣಿ ಶಬ್ದ್ಯತೇ ।
ಮೈತ್ರೇಯ ಭಗವಚ್ಛಬ್ದಸ್ಸರ್ವಕಾರಣಕಾರಣೇ ॥ ೭೨ ॥

ಭೂತಕಾರಣವೂ ಆದ, ತನಗೆ ಯಾವ ಕಾರಣವೂ ಇಲ್ಲದ ವ್ಯಾಪ್ಯ ವ್ಯಾಪಕರೂಪದಿಂದ ಸಕಲ ಜಗತ್ಸ್ವರೂಪವಾದ ಯಾವ ತತ್ವವನ್ನು ವಿದ್ವಾಂಸರು ತಿಳಿಯುವರೋ ಆ ತತ್ವವೇ ಪರಬ್ರಹ್ಮ ವಸ್ತುವು. ಅದು ಮಹಾ ಪ್ರಕಾಶವಾದುದು. ಅದನ್ನೇ ಮೋಕ್ಷಾಪೇಕ್ಷೆಯುಳ್ಳವರು ಧ್ಯಾನಮಾಡಬೇಕು. ಶ್ರುತಿವಾಕ್ಯಗಳಲ್ಲಿ ಹೇಳಿರುವ ಸೂಕ್ಷ್ಮ ತತ್ವವೇ ವಿಷ್ಣುವಿನ ಪರಮಪದವು. ಅದೇ ಭಗವಂತನೆಂದು ಹೇಳುವ ಶಬ್ದದ ಅರ್ಥವು. ಭಗವಂತನೆಂಬ ಶಬ್ದವು ಅದ್ಯಂತಗಳಿಲ್ಲದ ಪರಬ್ರಹ್ಮನನ್ನೇ ಹೇಳುವುದು. ಹೀಗೆ ಭಗವಂತನೆಂಬ ಶಬ್ದದಿಂದ ಹೇಳಿದ ಸದ್ರೂಪವಾದ ಪರಬ್ರಹ್ಮ ತತ್ವವನ್ನು ಯಾರು ಯಥಾರ್ಥವಾಗಿ ತಿಳಿಯುವರೋ ಅದನ್ನೇ ಜ್ಞಾನವೆನ್ನುವರು. ಮಿಕ್ಕುದೆಲ್ಲ ಅಪರ ವಿದ್ಯೆಯಾದ ಕರ್ಮಸಂಬಂಧವಾದುವು.

೭೧-೭೨. ಯಾವ ಶಬ್ದಗಳಿಗೂ ಗೋಚರನಲ್ಲದ ಪರಬ್ರಹ್ಮನ ಪೂಜಾ ನಿಮಿತ್ತವಾಗಿ ಆರು ಗುಣಗಳಿಂದ ಕೂಡಿದ ಭಗವಂತನೆಂಬುವ ಶಬ್ದವನ್ನು ಔಪಚಾರಿಕವಾಗಿ ಹೇಳಿರುವುದು. ಸಂಗರಹಿತನೂ ಊಹಿಸಲಿಕ್ಕಾಗದ ಐಶ್ವರ್ಯವುಳ್ಳವನೂ ಸರ್ವ ಕಾರಣ ವಸ್ತುಗಳಿಗೂ ಕಾರಣನೂ ಆದ ಪರಬ್ರಹ್ಮನನ್ನು ಭಗವಂತನೆಂದು ಹೇಳುವರು.

ಸಂಭರ್ತೇತಿ ತಥಾ ಭರ್ತಾ ಭಕಾರೋಽರ್ಥದ್ವಯಾನ್ವಿತಃ ।
ನೇತಾ ಗಮಯಿತಾ ಸ್ರಷ್ಟಾ ಗಕಾರಾರ್ಥಸ್ತಥಾ ಮುನೇ ॥ ೭೩ ॥

ಐಶ್ವರ್ಯಸ್ಯ ಸಮಗ್ರಸ್ಯ ವೀರ್ಯಸ್ಯ ಯಶಸಶ್ಶ್ರಿಯಃ ।
ಜ್ಞಾನವೈರಾಗ್ಯಯೋಶ್ಚೈವ ಷಣ್ಣಾಂ ಭಗ ಇತೀರಣಾ ॥ ೭೪ ॥

ವಸಂತಿ ತತ್ರ ಭೂತಾನಿ ಭೂತಾತ್ಮನ್ಯಖಿಲಾತ್ಮನಿ ।
ಸ ಚ ಭೂತೇಷ್ವಶೇಷೇಷು ವಕಾರಾರ್ಥಸ್ತತೋಽವ್ಯಯಃ ॥ ೭೫ ॥

ಏವಮೇಷ ಮಹಾನ್ ಶಬ್ದೋ ಮೈತ್ರೇಯ ಭಗವಾನಿತಿ ।
ಪರಮಬ್ರಹ್ಮಭೂತಸ್ಯ ವಾಸುದೇವಸ್ಯ ನಾನ್ಯಗಃ ॥ ೭೬ ॥

ತತ್ರ ಪೂಜ್ಯಪದಾರ್ಥೋಕ್ತಿ ಪರಿಭಾಷಾಸಮನ್ವಿತಃ ।
ಶಬ್ದೋಯಂ ನೋಪಚಾರೇಣ ತ್ವನ್ಯತ್ರಹ್ಯುಪಚಾರತಃ ॥ ೭೭ ॥

೭೩-೭೬. ಭಗವಂತನೆಂಬ ಶಬ್ದದಲ್ಲಿರುವ ಭಕಾರಕ್ಕೆ ಪೋಷಕನೆಂದೂ ಆಧಾರನೆಂದೂ ಅರ್ಥವಾಗುವುದು. ಗಕಾರಕ್ಕೆ ಕರ್ಮಜ್ಞಾನಗಳ ಫಲವನ್ನು ಕೊಡ ತಕ್ಕವನೆಂದೂ ಸೃಷ್ಟಿಕರ್ತನೆಂದೂ ಪ್ರಳಯ ಕಾಲದಲ್ಲಿ ಸಮಸ್ತ ಕಾರ್ಯಗಳನ್ನೂ ಉಪಸಂಹರಿಸುವನೆಂದೂ ಅರ್ಥವಾಗುವುದು. ಭಗ ಎಂಬ ಶಬ್ದಕ್ಕೆ ಸಕಲೈಶ್ವರ್ಯ, ವೀರ್ಯ, ಯಶಸ್ಸು, ಸಂಪತ್ತು, ಜ್ಞಾನ, ವೈರಾಗ್ಯ ಎಂಬ ಆರು ಅರ್ಥಗಳೂ ಇರುವುವು. ವಕಾರಕ್ಕೆ ಸರ್ವಾತ್ಮನಾದ ಅವನಲ್ಲಿ ಸಮಸ್ತ ಭೂತಗಳೂ ವಾಸ ಮಾಡುವುವೆಂದೂ ಸಮಸ್ತ ಭೂತಗಳಲ್ಲಿಯೂ ಆ ಪರಮಾತ್ಮನು ವಾಸಮಾಡುವ ನೆಂದೂ ಅರ್ಥವಾಗುವುದು. ಮೈತ್ರೇಯನೇ ! ಹೀಗೆ ಭಗವಂತನೆಂಬ ಮಹಾ ಶಬ್ದವು ಪರಬ್ರಹ್ಮನಾದ ವಾಸುದೇವನಿಗಲ್ಲದೆ ಮತ್ತೊಬ್ಬರಿಗಿಲ್ಲ.

೭೭-೮೦. ಭಗವಂತನೆಂಬ ಶಬ್ದವು ಪೂಜ್ಯನಾದ ಪರಬ್ರಹ್ಮನಿಗೆ ರೂಢಿಯಿಂದ ಬಂದಿರುವದು. ಇತರರಿಗೆ ಆ ಶಬ್ದವನ್ನು ಉಪಚಾರಕ್ಕಾಗಿ ಪ್ರಯೋಗಿಸುವರು. ಪ್ರಪಂಚದ ಉತ್ಪತ್ತಿ, ಪ್ರಳಯ, ಭೂತಗಳ ಜನ್ಮಗ್ರಹಣ, ಅವುಗಳಿಗಾಗುವ ಸ್ವರ್ಗಾದಿ

ಉತ್ಪತ್ತಿಂ ಪ್ರಳಯಂ ಚೈವ ಭೂತಾನಾಮಾಗತಿಂ ಗತಿಂ ।
ವೇತ್ತಿ ವಿದ್ಯಾಮವಿದ್ಯಾಂ ಚ ಸ ವಾಚ್ಯೋ ಭಗವಾನಿತಿ ॥ ೭೮ ॥

ಜ್ಞಾನಶಕ್ತಿಬಲೈಶ್ವರ್ಯವೀರ್ಯತೇಜಾಂಸ್ಯಶೇಷತಃ ।
ಭಗವಚ್ಛಬ್ದವಾಚ್ಯಾನಿ ವಿನಾ ಹೇಯೈರ್ಗುಣಾದಿಭಿಃ ॥ ೭೯ ॥

ಸರ್ವಾಣಿ ತತ್ರ ಭೂತಾನಿ ವಸಂತಿ ಪರಮಾತ್ಮನಿ ।
ಭೂತೇಷು ಚ ಸ ಸರ್ವಾತ್ಮಾ ವಾಸುದೇವಸ್ತತಸ್ಸ್ಮೃತಃ ॥ ೮೦ ॥

ಖಾಂಡಿಕ್ಯ ಜನಕಾಯಾಹ ಪೃಷ್ಟಃ ಕೇಶಿಧ್ವಜಃ ಪುರಾ ।
ನಾಮವ್ಯಾಖ್ಯಾಮನಂತಸ್ಯ ವಾಸುದೇವಸ್ಯ ತತ್ವತಃ ॥ ೮೧ ॥

ಭೂತೇಷು ವಸತೇ ಸೋಂತರ್ವಸಂತ್ಯತ್ರ ಚ ತಾನಿ ಯತ್ ।
ಧಾತಾ ವಿಧಾತಾ ಜಗತಾಂ ವಾಸುದೇವಸ್ತತಃ ಪ್ರಭುಃ ॥ ೮೨ ॥

ಗತಿಗಳು, ವಿದ್ಯೆ, ಅವಿದ್ಯೆ ಈ ಆರರ ಸ್ವರೂಪವನ್ನು ತಿಳಿದವನನ್ನು ಭಗವಂತನೆಂದು ಕರೆಯುವರು. ಇದು ಗೌಣಪ್ರಯೋಗವು. ಜ್ಞಾನ, ಶಕ್ತಿ, ಬಲ, ಐಶ್ವರ್ಯ ವೀರ್ಯ, ತೇಜಸ್ಸು ಈ ಆರು ಗುಣಗಳೂ ಭಗವಂತನೆಂಬ ಶಬ್ದದ ಅರ್ಥಗಳು. ಆದರೆ ಇವುಗಳಲ್ಲಿ ಪ್ರಕೃತಿ ಸಂಬಂಧವಾದ ಗುಣಾದಿಗಳು ಇರಬಾರದು. ಸಮಸ್ತ ಭೂತಗಳೂ ಪರಮಾತ್ಮನಲ್ಲಿ ವಾಸಮಾಡುವುದರಿಂದಲೂ ವಾಸುದೇವನೆಂಬ ಹೆಸರು ಅವನಿಗೆ ಬಂದಿರುವುದು.

೮೧-೮೨. ಹಿಂದೆ ಖಾಂಡಿಕ್ಯಜನಕನೆಂಬವನು ಕೇಶಿಧ್ವಜನನ್ನು ಕೇಳಲು ಅವನು ವಾಸುದೇವನೆಂಬ ಅನಂತನ ನಾಮದ ತತ್ವಾರ್ಥವನ್ನು ವ್ಯಾಖ್ಯಾನರೂಪವಾಗಿ ವಿವರಿಸಿದನು. ಇದನ್ನು ತಿಳಿದು ಆ ರಾಜನು ಬ್ರಹ್ಮಜ್ಞಾನವನ್ನು ಪಡೆದನು. ಸರ್ವೇಶ್ವರನಾದ ಪರಮಾತ್ಮನು ಸಮಸ್ತ ಭೂತಗಳಲ್ಲಿಯೂ ಅಂತರ್ಯಾಮಿಯಾಗಿ ವಾಸವಾಗಿರುವನು. ಆ ಪರಮಾತ್ಮನಲ್ಲಿ ಆ ಭೂತಗಳೆಲ್ಲವೂ ವಾಸವಾಗಿರುವುವು. ಆದುದರಿಂದ ವಾಸುವೆಂದೂ ಜಗತ್ತನ್ನು ಸೃಷ್ಟಿಸಿ ನಿಯಮನ ಮಾಡತಕ್ಕವನಾದುದರಿಂದ ದೇವನೆಂದೂ ಒಟ್ಟಿನಲ್ಲಿ ಸರ್ವೇಶ್ವರನಾಗಿ ವಾಸುದೇವನೆನಿಸಿರುವನು.

ಸ ಸರ್ವಭೂತಪ್ರಕೃತಿಂ ವಿಕಾರಾನ್
ಗುಣಾದಿದೋಷಾಂಶ್ಚ ಮುನೇ ವ್ಯತೀತಃ ।
ಅತೀತ ಸರ್ವಾವರಣೋಽಖಿಲಾತ್ಮಾ
ತೇನಾಸ್ತೃತಂ ಯದ್ಭುವನಾಂತರಾಳೇ ॥ ೮೩ ॥

ಸಮಸ್ತಕಲ್ಯಾಣಗುಣಾತ್ಮಕೋಽಸೌ
ಸ್ವಶಕ್ತಿಲೇಶಾವೃತಭೂತವರ್ಗಃ
ಇಚ್ಛಾಗೃಹೀತಾಭಿಮತೋರುದೇಹ
ಸ್ಸಂಸಾಧಿತಾಶೇಷಜಗದ್ಧಿತೋ ಯಃ ॥ ೮೪ ॥

ತೇಜೋಬಲೈಶ್ವರ್ಯಮಹಾವಬೋಧ
ಸುವೀರ್ಯಶಕ್ತ್ಯಾದಿಗುಣೈಕರಾಶಿಃ ।
ಪರಃ ಪರಾಣಾಂ ಸಕಲಾ ನ ಯತ್ರ
ಕ್ಲೇಶಾದಯಸ್ಸಂತಿ ಪರಾಪರೇಶೇ ॥ ೮೫ ॥

೮೩-೮೬ ಮೈತ್ರೇಯ ಮುನಿಯೇ ! ವಾಸುದೇವನು ಸಮಸ್ತ ಭೂತಗಳ ಪ್ರಕೃತಿ ಸಂಬಂಧವಾದ ಗುಣಾದಿಗಳ ವಿಕಾರವೂ ದೋಷಗಳೂ ಇಲ್ಲದವನು. ಅಜ್ಞಾನಾವರಣವಿಲ್ಲದವನು. ಅವನು ಸರ್ವಾತ್ಮನಾಗಿ ಲೋಕದಲ್ಲೆಲ್ಲ ವ್ಯಾಪಿಸಿರುವನು. ಆ ದೇವನು ಸಮಸ್ತ ಕಲ್ಯಾಣಗುಣ ಸ್ವರೂಪನಾಗಿ ತನ್ನ ಶಕ್ತಿಲೇಶದಿಂದ ಸಮಸ್ತ ಭೂತಗಳನ್ನೂ ಆವರಿಸಿರುವನು. ತನ್ನ ಇಚ್ಛೆಯಿಂದ ತನಗಿಷ್ಟವಾದ ದೇಹವನ್ನು ಧರಿಸಿ ಜಗತ್ತಿಗೆ ಹಿತವನ್ನುಂಟುಮಾಡುವನು. ತೇಜಸ್ಸು, ಬಲ, ಐಶ್ವರ್ಯ, ಜ್ಞಾನ, ವೀರ್ಯ, ಶಕ್ತಿ ಮುಂತಾದ ಗುಣಗಳ ರಾಶಿಯಾಗಿರುವನು. ಅತ್ಯಂತ ಶ್ರೇಷ್ಠನೂ ಸರ್ವೇಶ್ವರನೂ ಆದ ಅವನಲ್ಲಿ ಅವಿದ್ಯಾದಿ ಕ್ಲೇಶಗಳು ಇರುವುದಿಲ್ಲ. ಸರ್ವೇಶ್ವರನಾದ ಅವನು ಸಮಷ್ಟಿಯಾದ ವಾಸುದೇವರೂಪನಾಗಿಯೂ ವ್ಯಷ್ಟಿಯಾದ ಸಂಕರ್ಷಣಾದಿ

ಸ ಈಶ್ವರೋ ವ್ಯಷ್ಟಿಸಮಷ್ಟಿರೂಪೋಽ
ವ್ಯಕ್ತರೂಪಃ ಪ್ರಕಟಸ್ವರೂಪಃ ।
ಸರ್ವೇಶ್ವರಸ್ಸರ್ವದೃಕ್ಸರ್ವವಿಚ್ಚ
ಸಮಸ್ತಶಕ್ತಿಃ ಪರಮೇಶ್ವರಾಖ್ಯಃ ॥ ೮೬ ॥

ಸಂಜ್ಞಾಯ ತೇ ಯೇನ ತದಸ್ತದೋಷಂ
ಶುದ್ಧಂ ಪರಂ ನಿರ್ಮಲಮೇಕರೂಪಂ ।
ಸಂದೃಶ್ಯತೇ ವಾಪ್ಯವಗಮ್ಯತೇ ವಾ
ತತ್ ಜ್ಞಾನಮಜ್ಞಾನಮತೋನ್ಯದುಕ್ತಂ ॥ ೮೭ ॥

ಇತಿ ಶ್ರೀ ವಿಷ್ಣುಪುರಾಣೇ ಷಷ್ಠಾಂಶೇ ಪಂಚಮೋಽಧ್ಯಾಯಃ

ರೂಪನಾಗಿಯೂ ಸೂಕ್ಷ್ಮರೂಪದಿಂದ ಅವ್ಯಕ್ತನಾಗಿಯೂ ಸ್ಥೂಲಪ್ರಪಂಚರೂಪದಿಂದ ಪ್ರಕಟಸ್ವರೂಪನಾಗಿಯೂ ಸರ್ವೇಶ್ವರನೂ ಸರ್ವಜ್ಞನೂ ಸಮಸ್ತ ಶಕ್ತಿಯುಕ್ತನೂ ಆಗಿ ಪರಮೇಶ್ವರನೆನಿಸಿಕೊಂಡಿರುವನು.

೮೭. ಯಾವ ಮನುಷ್ಯನು ಆ ದೇವನನ್ನು ಶಾಸ್ತ್ರ ಜ್ಞಾನದಿಂದ ಬುದ್ಧಿಯಲ್ಲಿ ಪರೋಕ್ಷವಾಗಿ ತಿಳಿಯುತ್ತಾನೆಯೋ ನಿರ್ದೋಷನೂ ಪರಿಶುದ್ಧನೂ ನಿರ್ಮಲನೂ ಏಕರೂಪನೂ ಆದ ಅವನನ್ನು ಚಿತ್ತವೃತ್ತಿಯಿಂದ ಸಾಕ್ಷಾತ್ಕಾರಮಾಡಿಕೊಳ್ಳುವನೋ ಅದನ್ನೇ ಜ್ಞಾನವೆಂದು ಹೇಳುವರು. ಇದನ್ನು ಬಿಟ್ಟು ಮಿಕ್ಕುದೆಲ್ಲ ಅವಿದ್ಯಾರೂಪವಾದ ಅಜ್ಞಾನವೆನಿಸುವುದು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಆರನೆಯ ಅಂಶದಲ್ಲಿ
ಐದನೆಯ ಅಧ್ಯಾಯವು
ಮುಗಿದುದು

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಷಷ್ಠಾಂಶೇ

ಷಷ್ಠೋಽಧ್ಯಾಯಃ

॥ ಶ್ರೀ ಪರಾಶರಃ ॥

ಸ್ವಾಧ್ಯಾಯಸಂಯಮಾಭ್ಯಾಂ ಸ ದೃಶ್ಯತೇ ಪುರುಷೋತ್ತಮಃ ।
ತತ್ಪ್ರಾಪ್ತಿಕಾರಣಂ ಬ್ರಹ್ಮ ತದೇತದಿತಿ ಪಠ್ಯತೇ ॥ ೧ ॥

ಸ್ವಾಧ್ಯಾಯಾದ್ಯೋಗ ಮಾಸೀತ ಯೋಗಾತ್ಸ್ವಾಧ್ಯಾಮಾವಸೇತ್ ।
ಸ್ವಾಧ್ಯಾಯಯೋಗಸಂಪತ್ತ್ಯಾ ಪರಮಾತ್ಮಾ ಪ್ರಕಾಶತೇ ॥ ೨ ॥

ತದೀಕ್ಷಣಾಯ ಸ್ವಾಧ್ಯಾಯಶ್ಚಕ್ಷುರ್ಯೋಗಸ್ತಥಾ ಪರಂ ।
ನ ಮಾಂಸಚಕ್ಷುಷಾ ದ್ರಷ್ಟುಂ ಬ್ರಹ್ಮಭೂತಸ್ಯ ಶಕ್ಯತೇ ॥ ೩ ॥

ಆರನೆಯ ಅಧ್ಯಾಯವು

೧-೩. ಪರಾಶರರು ಹೇಳುವರು :–ಮೈತ್ರೇಯ ಮುನಿಯೇ ! ಆ ಪರಮಾತ್ಮನನ್ನು ಸ್ವಾಧ್ಯಾಯವೆಂಬ ಪ್ರಣವಾದಿ ಮಂತ್ರಗಳ ಜಪದಿಂದಲೂ ಯೋಗದಿಂದಲೂ ದರ್ಶನಮಾಡಬಹುದು. ಇವೆರಡೂ ಪರಬ್ರಹ್ಮ ಪ್ರಾಪ್ತಿಕಾರಣವಾದುದರಿಂದ ಈ ಜ್ಞಾನವನ್ನು ಬ್ರಹ್ಮಜ್ಞಾನವೆಂದು ಹೇಳುವರು. ಜಪವಾದಮೇಲೆ ಯೋಗಾಭ್ಯಾಸವನ್ನೂ ಯೋಗಾಭ್ಯಾಸವಾದಮೇಲೆ ಜಪವನ್ನೂ ಮಾಡಬೇಕು. ಇವರೆಡರ ಪ್ರಾಬಲ್ಯದಿಂದ ಪರಮಾತ್ಮ ಪ್ರಕಾಶವುಂಟಾಗುವುದು. (ಯೋಗ ಶಾಸ್ತ್ರದಲ್ಲಿ ಜಪಮಾಡಿ ಆಯಾಸವಾದರೆ ಧ್ಯಾನವನ್ನೂ, ಧ್ಯಾನಮಾಡಿ ಆಯಾಸವಾದರೆ ಜಪವನ್ನೂ ಮಾಡಿ ಇತರೆಡರಿಂದಲೂ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂದು ಹೇಳಿರುವುದು.) ಆ ಪರಬ್ರಹ್ಮನನ್ನು ದರ್ಶನಮಾಡಲು ಸ್ವಾಧ್ಯಾಯವೂ ಯೋಗವೂ ಎರಡು ಕಣ್ಣುಗಳಾಗಿರುವುವು. ಮಾಂಸದ ಕಣ್ಣಿನಿಂದ ಪರಬ್ರಹ್ಮನನ್ನು ನೋಡಲಾಗುವುದಿಲ್ಲ.

॥ ಮೈತ್ರೇಯಃ ॥

ಭಗವಂಸ್ತ್ವಮಹಂ ಯೋಗಂ ಜ್ಞಾತುಮಿಚ್ಛಾಮಿ ತಂ ವದ ।
ಜ್ಞಾತೇ ಯಸ್ತ್ರಾಖಿಲಾಧಾರಂ ಪಶ್ಯೇಯಂ ಪರಮೇಶ್ವರಂ ॥ ೪ ॥

॥ ಶ್ರೀ ಪರಾಶರಃ ॥

ಯಥಾ ಕೇಶಿಧ್ವಜಃ ಪ್ರಾಹ ಖಾಂಡಿಕ್ಯಾಯ ಮಹಾತ್ಮನೇ ।
ಜನಕಾಯ ಪುರಾ ಯೋಗಂ ತಮಹಂ ಕಥಯಾಮಿ ತೇ ॥ ೫ ॥

॥ ಮೈತ್ರೇಯಃ ॥

ಖಾಂಡಿಕ್ಯಃ ಕೋ ಭವದ್ಬ್ರಹ್ಮನ್ ಕೋ ವಾ ಕೇಶಿಧ್ವಜಃ ಕೃತೀ ।
ಕಥಂ ತಯೋಶ್ಚ ಸಂವಾದೋ ಯೋಗಸಂಬಂಧಕಾರಣಾತ್ ॥ ೬ ॥

---

೪. ಮೈತ್ರೇಯನು ' ಮಹಾಮಹಿಮರಾದ ಪರಾಶರರೇ ಆ ಯೋಗವನ್ನು ನಾನು ತಿಳಿಯಬೇಕೆಂದು ಅಪೇಕ್ಷಿಸುವೆನು. ಅದನ್ನು ಹೇಳಬೇಕು. ಅದನ್ನು ತಿಳಿದರೆ ಸರ್ವಾಶ್ರಯನಾದ ಪರಮೇಶ್ವರನನ್ನು ನೋಡುವೆನು.' ಎಂದನು.

೫. ಪರಾಶರರು ಹಿಂದೆ ಕೇಶಿಧ್ವಜನು ಖಾಂಡಿಕ್ಯನೆಂಬ ಜನಕನಿಗೆ ಯೋಗವನ್ನು ಹೇಳಿದನು. ಅದನ್ನೇ ನಿನಗೆ ಹೇಳುವೆನು ಎಂದರು.

೬. ಮೈತ್ರೇಯನು, ಗುರುಗಳೇ! ಖಾಂಡಿಕ್ಯನೆಂಬವನಾರು ? ಪುಣ್ಯಾತ್ಮನಾದ ಕೇಶಿಧ್ವಜನೆಂಬವನಾರು ? ಯೋಗಶಾಸ್ತ್ರದ ಸಂಬಂಧವಾಗಿ ಇವರಿಬ್ಬರಿಗೂ ಸಂವಾದವು ಹೇಗೆ ನಡೆಯಿತು ? ಎಂದು ಪ್ರಶ್ನೆ ಮಾಡಿದನು.

॥ ಶ್ರೀ ಪರಾಶರಃ ॥

ಧರ್ಮಧ್ವಜೋ ವೈ ಜನಕಸ್ತಸ್ಯ ಪುತ್ರೋ ಮಿತಧ್ವಜಃ ।
ಕೃತಧ್ವಜಶ್ಚ ನಾಮ್ನಾಸೀತ್ಸದಾಧ್ಯಾತ್ಮರತಿರ್ನೃಪಃ ॥ ೭ ॥

ಕೃತಧ್ವಜಸ್ಯ ಪುತ್ರೋಽಭೂತ್ಖ್ಯಾತಃ ಕೇಶಿಧ್ವಜೋ ನೃಪಃ ।
ಪುತ್ರೋಽಮಿತಧ್ವಜಸ್ಯಾಪಿ ಖಾಂಡಿಕ್ಯಜನಕೋಽಭವತ್ ॥ ೮ ॥

ಕರ್ಮಮಾರ್ಗೇಣ ಖಾಂಡಿಕ್ಯಃ ಪೃಥಿವ್ಯಾಮಭವತ್ಪತಿಃ ।
ಕೇಶಿಧ್ವಜೋಽಪ್ಯತೀವಾಸೀದಾತ್ಮವಿದ್ಯಾವಿಶಾರದಃ ॥ ೯ ॥

ತಾವುಭಾವಪಿ ಚೈವಾಸ್ತಾಂ ವಿಜಿಗೀಷೂ ಪರಸ್ಪರಂ ।
ಕೇಶಿಧ್ವಜೇನ ಖಾಂಡಿಕ್ಯಸ್ಸ್ವರಾಜ್ಯಾದವರೋಪಿತಃ ॥ ೧೦ ॥

ಪುರೋಧಸಾ ಮಂತ್ರಿಭಿಶ್ಚ ಸಮವೇತೋಲ್ಪಸಾಧನಃ ।
ರಾಜ್ಯಾನ್ನಿರಾಕೃತಸ್ಸೋಽಥ ದುರ್ಗಾರಣ್ಯಚರೋಽಭವತ್ ॥ ೧೧ ॥

೭-೯. ಪರಾಶರರು ಹೇಳುವರು :—ಜನಕನ ವಂಶದಲ್ಲಿ ಧರ್ಮಧ್ವಜನೆಂಬ ರಾಜನಿದ್ದನು. ಅವನಿಗೆ ಮಿತಧ್ವಜನೆಂಬ ಮಗನಿದ್ದನು. ಕೃತಧ್ವಜನೆಂಬ ಮತ್ತೊಬ್ಬ ರಾಜನಿದ್ದನು. ಇವನು ಯಾವಾಗಲೂ ಅಧ್ಯಾತ್ಮಜ್ಞಾನನಿಷ್ಠನಾಗಿದ್ದನು. ಕೃತಧ್ವಜನಿಗೆ ಪ್ರಸಿದ್ಧನಾದ ಕೇಶಿಧ್ವಜನೆಂಬ ರಾಜನು ಮಗನಾಗಿದ್ದನು. ಮಿತಧ್ವಜನಿಗೆ ಖಾಂಡಿಕ್ಯ ಜನಕನೆಂಬ ಮಗನಿದ್ದನು. ಇವನು ಕರ್ಮ ಮಾರ್ಗಾಸಕ್ತನಾಗಿ ಭೂಮಿಗೆ ರಾಜನಾಗಿದ್ದನು. ಕೇಶಿಧ್ವಜನು ಆತ್ಮವಿದ್ಯೆಯಲ್ಲಿ ಸಂಪೂರ್ಣ ಪಾಂಡಿತ್ಯವನ್ನು ಪಡೆದಿದ್ದನು.

೧೦–೧೧. ಇವರಿಬ್ಬರೂ ಪರಸ್ಪರ ಶತ್ರುಗಳಾಗಿ ಒಬ್ಬರನ್ನೊಬ್ಬರು ಜಯಿಸಬೇಕೆಂಬ ಇಚ್ಛೆಯಿಂದ ಕೂಡಿದ್ದರು. ಕೇಶಿಧ್ವಜನು ಖಾಂಡಿಕ್ಯನನ್ನು ರಾಜ್ಯಭ್ರಷ್ಟನನ್ನಾಗಿ ಮಾಡಿದನು. ಅವನು ಪುರೋಹಿತ ಮತ್ತು ಮಂತ್ರಿಗಳೊಡನೆ ಸ್ವಲ್ಪ ಪರಿವಾರವನ್ನು ತೆಗೆದುಕೊಂಡು ಅರಣ್ಯಗಳಲ್ಲಿಯೂ ದುರ್ಗಗಳಲ್ಲಿಯೂ ಸಂಚರಿಸುತ್ತಿದ್ದನು

ಇಯಾಜ ಸೋಽಪಿ ಸುಬಹೂನ್ ಯಜ್ಞಾನ್ ಜ್ಞಾನವ್ಯಪಾಶ್ರಯಃ ।
ಬ್ರಹ್ಮವಿದ್ಯಾಮಧಿಷ್ಠಾಯ ತರ್ಪಂ ಮೃತ್ಯುಮವಿದ್ಯಯಾ ॥ ೧೨ ॥

ಏಕದಾ ವರ್ತಮಾನಸ್ಯ ಯಾಗೇ ಯೋಗವಿದಾಂ ವರೆ ।
ಘರ್ಮಧೇನುಂ ಜಘಾನೋಗ್ರಶ್ಯಾರ್ದೂಲೋ ವಿಜನೇ ವನೇ ॥ ೧೩ ॥

ತತೋ ರಾಜಾ ಹತಾಂ ಶ್ರುತ್ವಾ ಧೇನುಂ ವ್ಯಾಘ್ರೇಣ ಚರ್ತ್ವಿಜಃ ।
ಪ್ರಾಯಶ್ಚಿತ್ತಂ ಸ ಪಪ್ರಚ್ಛ ಕಿಮತ್ರೇತಿ ವಿಧೀಯತಾಂ ॥ ೧೪ ॥

ತೇಽಪ್ಯೂಚುರ್ನ ವಯಂ ವಿದ್ಮಃ ಕಶೇರುಃ ಪೃಚ್ಛ್ಯತಾಮಿತಿ ।
ಕಶೇರುರಪಿ ತೇನೋಕ್ತಸ್ತಥೈವ ಪ್ರಾಹ ಭಾರ್ಗವಂ ॥ ೧೫ ॥

ಶುನಕಂ ಪೃಚ್ಛ ರಾಜೇಂದ್ರ ನಾಹಂ ವೇದ್ಮಿ ಸ ವೇತ್ಸ್ಯತಿ ।
ಸ ಗತ್ವಾ ತಮಪೃಚ್ಛಚ್ಚ ಸೋಽಪ್ಯಾಹ ಶೃಣು ಯನ್ಮನೇ ॥ ೧೬ ॥

೧೨-೧೪. ಕೇಶಿಧ್ವಜನು ಜ್ಞಾನನಿಷ್ಠನಾದರೂ ಬ್ರಹ್ಮಾರ್ಪಣ ಬುದ್ಧಿಯಿಂದ ಕರ್ಮರೂಪವಾದ ಅವಿದ್ಯೆಯಿಂದ ಸಂಸಾರ ಕಾರಣವಾದ ಕಾಮಾದಿ ಮೃತ್ಯುಗಳನ್ನು ಜಯಿಸುವುದಕ್ಕಾಗಿ ಅನೇಕ ಯಜ್ಞಗಳನ್ನು ಮಾಡಿದನು. ಒಂದಾನೊಂದು ಕಾಲದಲ್ಲಿ ಅವನು ಯಾಗಮಾಡುತ್ತಿದ್ದಾಗ ಪ್ರವರ್ಗ್ಯದಲ್ಲಿ ಘರ್ಮವೆಂಬ ಹವಿಸ್ಸಿಗಾಗಿ ಹಾಲನ್ನು ಕೊಡುವ ಹಸುವನ್ನು ಒಂದು ಹುಲಿಯು ಕಾಡಿನಲ್ಲಿ ಕೊಂದುಹಾಕಿತು. ರಾಜನು ಆ ಹಸುವನ್ನು ಹುಲಿಯು ಕೊಂದುಹಾಕಿತೆಂದು ಕೇಳಿ ಹವಿಸ್ಸಿಗೆ ಹಾಲಿಲ್ಲದೆ ಯಜ್ಞಕ್ಕೆ ವಿಘ್ನ ವುಂಟಾದುದರಿಂದ ಇದಕ್ಕೆ ಪ್ರಾಯಶ್ಚಿತ್ತವೇನೆಂದು ಋತ್ವಿಕ್ಕುಗಳನ್ನು ಕೇಳಿದನು.

೧೫-೧೬. ಆ ಋತ್ವಿಕ್ಕುಗಳು ಇದು ನಮಗೆ ತಿಳಿಯದು. ಕಶೇರುವನ್ನು ಕೇಳಬೇಕೆಂದರು. ಕಶೇರುವನ್ನು ಕೇಳಲು ಅವನು ರಾಜೇಂದ್ರನೇ ನನಗೆ ತಿಳಿಯದು ಶುನಕನನ್ನು ಕೇಳು. ಅವನಿಗೆ ತಿಳಿಯುವುದು ಎಂದನು. ಅವನು ಹೋಗಿ

ನ ಕೇಶೇರುರ್ನ ಚೈವಾಹಂ ನ ಚೈಕಸ್ಸಾಂಪ್ರತಂ ಭುವಿ ।
ವೇತ್ತ್ಯೇಕೆ ಏವ ತ್ವಚ್ಛತ್ರುಃ ಖಾಂಡಿಕ್ಯೋ ಯೋಜಿತಸ್ತ್ವಯಾ ॥ ೧೬ ॥

ಸ ಚಾಹ ತಂ ವ್ರಜಾಮ್ಯೇಷ ಪ್ರಷ್ಟುಮಾತ್ಮರಿಪುಂ ಮುನೇ ।
ಪ್ರಾಪ್ತ ಏವ ಮಹಾಯಜ್ಞೋ ಯದಿ ಮಾಂ ಸ ಹನಿಷ್ಯತಿ ॥ ೧೭ ॥

ಪ್ರಾಯಶ್ಚಿತ್ತಮಶೇಷೇಣ ಸ ಚೇತ್ಪ್ರಶ್ನೋ ವದಿಷ್ಯತಿ ।
ತತಶ್ಚಾವಿಕಲೋ ಯಾಗೋ ಮುನಿಶ್ರೇಷ್ಠ ಭವಿಷ್ಯತಿ ॥ ೧೮ ॥

॥ ಶ್ರೀಪರಾಶರಃ ॥

ಇತ್ಯುಕ್ತ್ವಾ ರಥಮಾರುಹ್ಯ ಕೃಷ್ಣಾಜಿನಧರೋ ನೃಪಃ ।
ವನಂ ಜಗಾಮ ಯತ್ರಾಸ್ತೇ ಸ ಖಾಂಡಿಕ್ಯೋ ಮಹಾಮತಿಃ ॥ ೨೦ ॥

ಶುನಕನನ್ನು ಕೇಳಿದನು. ಶುನಕನು ರಾಜನೇ ಇದು ಕಶೇರುಗೂ ತಿಳಿಯದು, ನನಗೂ ತಿಳಿಯದು. ಈಗ ಭೂಮಿಯಲ್ಲಿರುವ ಒಬ್ಬರಿಗೂ ತಿಳಿಯದು. ನೀನು ಜಯಿಸಿದ ಖಾಂಡಿಕ್ಯನೆಂಬ ನಿನ್ನ ಶತ್ರುವಿಗೆಬ್ಬನಿಗೆ ಮಾತ್ರ ಇದು ತಿಳಿಯುವುದು ಎಂದನು.

೧೫-೧೯. ಆಗ ರಾಜನು ' ಋಷಿಶ್ರೇಷ್ಠನೇ ನನ್ನ ಶತ್ರುವಾದ ಖಾಂಡಿಕ್ಯನನ್ನೇ ಪ್ರಶ್ನೆ ಮಾಡಲು ಇಗೋ ಹೊರಟಿನು. ಅವನು ನನ್ನನ್ನು ಕೂಂದರೆ ಮಹಾ ಯಜ್ಞದ ಫಲವು ಬಂದೇಬರುವುದು. ನನ್ನ ಪ್ರಶ್ನೆಗೆ ಅವನು ಪ್ರಾಯಶ್ಚಿತ್ತವನ್ನು ಹೇಳಿದರೂ ಅದರಿಂದಲೂ ಯಾಗವು ನಿರ್ವಿಘ್ನವಾಗಿ ಮುಗಿವುದು. ಎರಡು ವಿಧದಲ್ಲಿಯೂ ಮಹಾಯಜ್ಞದ ಫಲವು ಪ್ರಾಪ್ತವಾಗುವುದು " ಎಂದು ಹೇಳಿದನು.

೨೦-೨೧. ಹೀಗೆಂದು ಹೇಳಿ ರಾಜನು ರಥವನ್ನೇರಿ ಕೃಷ್ಣಾಜಿನವನ್ನು ಧರಿಸಿ ಬುದ್ಧಿವಂತನಾದ ಖಾಂಡಿಕ್ಯನಿರುವ ಕಾಡಿಗೆ ಹೋದನು. ಬರುತ್ತಿದ್ದ ತನ್ನ ಶತ್ರು

ತವಾಪತಂತವಾಲೋಕ್ಯ ಖಾಂಡಿಕ್ಯೋ ರಿಪುಮಾತ್ಮನಃ ।
ಪ್ರೋವಾಚ ಕ್ರೋಧತಾಮ್ರಾಕ್ಷಸ್ಸಮಾರೋಪಿತಕಾರ್ಮುಕಃ ॥ ೨೧ ॥

॥ ಖಾಂಡಿಕ್ಯಃ ॥

ಕೃಷ್ಣಾಜಿನಂ ತ್ವಂ ಕವಚಮಾಬಧ್ಯಾಸ್ಮಾನ್ ಹನಿಷ್ಯಸಿ ।
ಕೃಷ್ಣಾಜಿನಧರೇ ವೇತ್ಸಿ ನ ಮಯಿ ಪ್ರಹರಿಷ್ಯತಿ ॥ ೨೨ ॥

ಮೃಗಾಣಾಂ ವದ ಪೃಷ್ಠೇಷು ಮೂಢ ಕೃಷ್ಣಾಜಿನಂ ನ ಕಿಂ ।
ಯೇಷಾಂ ನುಯಾ ತ್ವಯಾ ಚೋಗ್ರಾಃ ಪ್ರಹಿತಾಶ್ಶಿತಸಾಯಕಾಃ ॥ ೨೩ ॥

ಸ ತ್ವಾಮಹಂ ಹನಿಷ್ಯಾಮಿ ನ ಮೇ ಜೀವನ್ ವಿಮೋಕ್ಷ್ಯಸೇ ।
ಆತತಾಯ್ಯಸಿ ದುರ್ಬುದ್ಧೇ ಮಮ ರಾಜ್ಯಹರೋ ರಿಪುಃ ॥ ೨೪ ॥

ವನ್ನು ನೋಡಿ ಖಾಂಡಿಕ್ಯನು ಬಿಲ್ಲಿಗೆ ಹೆದೆಯನ್ನೇರಿಸಿ ಕೋಪದಿಂದ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಮಾತನಾಡಿದನು.

೨೨-೨೪. "ಎಲೈ ಮೂಢನೇ! ಕೃಷ್ಣಾಜಿನವನ್ನು ಕವಚವಾಗಿ ಧರಿಸಿ ನನ್ನನ್ನು ಕೊಲ್ಲುವುದಕ್ಕೆ ಬಂದೆಯಾ? ಕೃಷ್ಣಾಜಿನವನ್ನು ಧರಿಸಿದ ನಿನ್ನನ್ನು ನಾನು ಕೊಲ್ಲುವುದಿಲ್ಲವೆಂದು ತಿಳಿದಿರುವೆ. ಮೃಗಗಳ ಬೆನ್ನಿನಮೇಲೆ ಕೃಷ್ಣಾಜಿನವಿರುವುದಿಲ್ಲವೇ? ಆವುಗಳನ್ನು ನಾನೂ ನೀನೂ ಕೊಲ್ಲುವುದಿಲ್ಲವೇ? ಈ ವೇಷದಿಂದ ಬಂದಿರುವ ನಿನ್ನನ್ನು ನಾನು ಕೊಲ್ಲುವೆನು. ನೀನು ಜೀವಿಸಿ ನನ್ನಿಂದ ಬಿಡಿಸಿಕೊಂಡು ಹೋಗಲಾರೆ. ನನ್ನ ರಾಜ್ಯವನ್ನಪಹರಿಸಿದ ನೀನು ಹಿಂಸಕನಾಗಿರುವೆ. ಹಿಂಸಕನನ್ನು ಕೊಂದರೆ ದೋಷವಿಲ್ಲ" ಎಂದನು.

॥ ಕೇಶಿಧ್ವಜಃ ॥

ಖಾಂಡಿಕ್ಯೆಸಂಶಯಂ ಪ್ರಷ್ಟುಂ ಭವಂತಮಹಮಾಗತಃ ।
ನ ತ್ವಾಂ ಹಂತುಂ ವಿಜಾನೀಹ್ಯತತ್ಕೋಪಂ ಬಾಣಂ ವಿಮುಂಚ ವಾ ॥ ೨೫ ॥

॥ ಶ್ರೀ ಪರಾಶರಃ ॥

ತತಸ್ಸಮಂತ್ರಿಭಿಸ್ಸಾರ್ಧಮೇಕಾಂತೇ ಸಪುರೋಹಿತಃ ।
ಮಂತ್ರಯಾಮಾಸ ಖಾಂಡಿಕ್ಯಸ್ಸರ್ವೈರೇವ ಮಹಾಮತಿಃ ॥ ೨೬ ॥

ತಮೂಚುರ್ಮಂತ್ರಿಣೋ ವಧ್ಯೋ ರಿಪುರೇಷ ವಶಂಗತಃ ।
ಹತೇಽಸ್ಮಿನ್ ಪೃಥಿವೀ ಸರ್ವಾ ತವ ವಶ್ಯಾ ಭವಿಷ್ಯತಿ ॥ ೨೭ ॥

ಖಾಂಡಿಕ್ಯಶ್ಚಾಹ ತಾನ್ಸರ್ವಾನ್ ಏವಮೇತನ್ನ ಸಂಶಯಃ ।
ಹತೇಽಸ್ಮಿನ್ ಪೃಥಿವೀ ಸರ್ವಾ ಮಮ ವಶ್ಯಾ ಭವಿಷ್ಯತಿ ॥ ೨೮ ॥

ಪರಲೋಕಜಯಸ್ತಸ್ಯ ಪೃಥಿವೀ ಸಕಲಾ ಮಮ ।
ನ ಹನ್ಮಿ ಚೇಲ್ಲೋಕಜಯೋ ಮಮ ತಸ್ಯ ವಸುಂಧರಾ ॥ ೨೯ ॥

---

೨೫. ಕೇಶಿಧ್ವಜನು "ಖಾಂಡಿಕ್ಯನೇ! ನಾನು ನಿನ್ನನ್ನು ಕೊಲ್ಲುವುದಕ್ಕೆ ಬರಲಿಲ್ಲ. ನನಗಿರುವ ಸಂದೇಹವನ್ನು ನಿನ್ನಿಂದ ಪರಿಹರಿಸಿಕೊಳ್ಳಲು ಬಂದಿರುವೆನು. ಇದನ್ನು ವಿಚಾರಮಾಡಿ ಕೋಪವನ್ನಾಗಲಿ, ಬಾಣವನ್ನಾಗಲಿ ಬಿಡು." ಎಂದನು.

೨೬-೩೧. ಬಳಿಕ ಆ ಖಾಂಡಿಕ್ಯನು ಗುಟ್ಟಾಗಿ ಮಂತ್ರಿಗಳೊಡನೆಯೂ, ಪುರೋಹಿತನೊಡನೆಯೂ ಕೂಡಿ ಮಂತ್ರಾಲೋಚನೆಯನ್ನು ಮಾಡಿದನು. ಮಂತ್ರಿಗಳು "ಶತ್ರುವು ಕೈಗೆ ಸಿಕ್ಕಿರುವಾಗ ಅವನನ್ನು ಕೊಲ್ಲಬೇಕು. ಇವನನ್ನು ಕೊಂದರೆ ಭೂಮಿಯೆಲ್ಲ ನಿನ್ನ ವಶವಾಗುವುದು." ಎಂದರು. ಖಾಂಡಿಕ್ಯನು ಅವರನ್ನು ಕುರಿತು "ನೀವು ಹೇಳಿದುದು ಸರಿ. ಇದರಲ್ಲಿ ಸಂದೇಹವಿಲ್ಲ. ಅವನನ್ನು ಕೊಂದರೆ ಭೂಮಿಯೆಲ್ಲ ನಷ್ಟ ವಶವಾಗುವುದು. ಅವನಿಗೆ ಪರಲೋಕ ಫಲ ಸಿದ್ಧಿಯಾಗುವುದು.

ನಾಹಂ ಮನ್ಯೇ ಲೋಕಜಯಾದಧಿಕಾ ಸ್ಯಾದ್ವಸುಂಧರಾ ।
ಪರಲೋಕಜಯೋಽನಂತಃ ಸ್ವಲ್ಪಕಾಲೋ ಮಹೀಜಯಃ ॥ ೩೦ ॥

ತಸ್ಮಾನ್ನೈನಂ ಹನಿಷ್ಯಾಮಿ ಯತ್ಪೃಚ್ಛತಿ ವದಾಮಿ ತತ್ ॥ ೩೧ ॥

॥ ಶ್ರೀ ಪರಾಶರಃ ॥

ತತಸ್ತಮಭ್ಯುಪೇತ್ಯಾಹ ಖಾಂಡಿಕ್ಯಜನಕೋ ರಿಪುಂ ।
ಪ್ರಷ್ಟವ್ಯಂ ಯತ್ತ್ವಯಾ ಸರ್ವಂ ತತ್ಪೃಚ್ಛಸ್ವ ವದಾಮ್ಯಹಂ ॥ ೩೨ ॥

॥ ಶ್ರೀ ಪರಾಶರಃ ॥

ತತಸ್ಸರ್ವಂ ಯಥಾವೃತ್ತಂ ಘರ್ಮಧೇನುವಧಂ ದ್ವಿಜ ।
ಕಥಯಿತ್ವಾ ಸ ಪಪ್ರಚ್ಛ ಪ್ರಾಯಶ್ಚಿತ್ತಂ ಹಿ ತದ್ಗತಂ ॥ ೩೩ ॥

ಕೊಲ್ಲದಿದ್ದರೆ ಪರಲೋಕಫಲ ಸಿದ್ಧಿಯು ನನಗೆ ಭೂಮಿಯೆಲ್ಲ ಅವನದು ಪರಲೋಕ ಫಲಪ್ರಾಪ್ತಿಗಿಂತ ಭೂಮಿಯಲಾಭವು ಅಧಿಕವಾದುದೆಂದು ನಾನು ತಿಳಿದಿಲ್ಲ ಪರ ಲೋಕ ಜಯದಿಂದಾದ ಫಲವು ಬಹುಕಾಲ ಅನುಭವಿಸತಕ್ಕದು ಭೂಮಿಯನ್ನು ಜಯಿಸಿದ ಫಲವು ಸ್ವಲ್ಪಕಾಲ ಅನುಭವಿಸತಕ್ಕದು. ಆದುದರಿಂದ ಇವನನ್ನು ಕೊಲ್ಲು ವುದಿಲ್ಲ. ಅವನು ಕೇಳಿದ ಪ್ರಶ್ನೆಗೆ ಉತ್ತರವನ್ನು ಹೇಳುವೆನು" ಎಂದನು.

೩೨-೩೫. ಆ ಮೇಲೆ ಖಾಂಡಿಕ್ಯ ಜನಕನು ಶತ್ರುವಿನ ಸಮೀಪಕ್ಕೆ ಹೋಗಿ ಅವನನ್ನು ಕುರಿತು ಕೇಳಬೇಕಾದುದೆಲ್ಲವನ್ನೂ ಕೇಳು. ಉತ್ತರವನ್ನು ಹೇಳುವೆನು" ಎಂದನು. ಕೇಶಿಧ್ವಜನು ತನ್ನ ಘರ್ಮಧೇನುವು ಸತ್ತ ರೀತಿಯನ್ನು ಹೇಳಿ ಅದ ರಿಂದುಂಟಾದ ಯಜ್ಞವಿಘ್ನಕ್ಕೆ ಪ್ರಾಯಶ್ಚಿತ್ತವೇನೆಂದು ಕೇಳಿದನು. ಖಾಂಡಿಕ್ಯ ಜನಕನು ಅದಕ್ಕೆ ಮಾಡಬೇಕಾದ ಪ್ರಾಯಶ್ಚಿತ್ತವನ್ನು ಕೇಶಿಧ್ವಜನಿಗೆ ವಿಸ್ತಾರ ವಾಗಿ ಹೇಳಿದನು. ಅವನು ಅದನ್ನು ತಿಳಿದು ಜನಕನ ಅಪ್ಪಣೆಯನ್ನು ಪಡೆದು ಯಾಗಶಾಲೆಗೆ ಬಂದು ಎಲ್ಲ ಕರ್ಮಗಳನ್ನೂ ಕ್ರಮವಾಗಿ ನೆರವೇರಿಸಿದನು. (ಘರ್ಮ ಧೇನುವನ್ನು ಹುಲಿಯು ಕೊಂದುಹಾಕಿದರೆ ಮಾಡಬೇಕಾದ ಸ್ಪೃಣೋಮಿ ಹೋಮ

ಸ ಚಾಜಸ್ಯ ಯಥಾನ್ಯಾಯ್ಯಂ ದ್ವಿಜಕೇಶಿಧ್ವಜಾಯ ತತ್ ।
ಪ್ರಾಯಶ್ಚಿತ್ತಮಶೇಷೇಣ ಯದ್ವೈ ತತ್ರ ವಿಧೀಯತೇ ॥ ೩೪ ॥

ವಿದಿತಾರ್ಥಸ್ಯ ತೇನೈವ ಹ್ಯನುಜ್ಞಾತೋ ಮಹಾತ್ಮನಾ ।
ಯಾಗಭೂಮಿಮುಪಾಗಮ್ಯ ಚಕ್ರೇ ಸರ್ವಾಃ ಕ್ರಿಯಾಃ ಕ್ರಮಾತ್ ॥ ೩೫ ॥

ಕ್ರಮೇಣ ವಿಧಿವದ್ಯಾಗಂ ನೀತ್ವಾ ಸೋಽವಭೃಥಾಪ್ಲುತಃ ।
ಕೃತಕೃತ್ಯಸ್ತತೋ ಭೂತ್ವಾ ಚಿಂತಯಾಮಾಸ ಪಾರ್ಥಿವಃ ॥ ೩೬ ॥

ಪೂಜಿತಾಶ್ಚ ದ್ವಿಜಾಸ್ಸರ್ವೇ ಸದಸ್ಯಾ ಮಾನಿತಾ ಮಯಾ ।
ತಥೈವಾರ್ಥಿಜನೋಽಪ್ಯೇಷ್ಯೋ ಯೋಜಿತೋಽಭಿಮತೈರ್ಮಯಾ ॥ ೩೭ ॥

ಯಥಾರ್ಹಮಸ್ಯ ಲೋಕಸ್ಯ ಮಯಾ ಸರ್ವಂ ವಿಚೇಷ್ಟಿತಂ ।
ಅವಿಷ್ಣನ್ನಕ್ರಿಯಂ ಚೇತಸ್ತಥಾಪಿ ಮಮ ಕಂ ಯಥಾ ॥ ೩೮ ॥

ವೆಂಬ ಪ್ರಾಯಶ್ಚಿತ್ತವನ್ನು ವಾಜಸನೇಯ ಶಾಖೆಯಲ್ಲಿ ಹೇಳಿರುವುದು. ಚಂದ್ರಾತ್ತೇ ಮನ ಸ್ಪೃಣೋಮಿ ಸ್ವಾಹಾ, ಸೂರ್ಯಾತ್ತೇಚಕ್ಷುಸ್ಸ್ಪೃಣೋಮಿ ಸ್ವಾಹಾ, ವಾತಾತ್ತೇ ಪ್ರಾಣಂಸ್ಪೃಣೋಮಿ ಸ್ವಾಹಾ ಇತ್ಯಾದಿಯಾಗಿ ಮಂತ್ರವನ್ನೂ ಹೇಳಿರುವುದು. ಆಪಸ್ತಂಭಸೂತ್ರದಲ್ಲಿ ಧರ್ಮಧೇನುವನ್ನೂ, ಎತ್ತನ್ನೂ ಹುಲಿಯು ಕೊಂದರೆ ಎಕ್ಕದ ಹಾಲನ್ನೋ ಆಡಿನ ಹಾಲನ್ನೋ ಬೇರೆ ಹಸುವಿನ ಹಾಲನ್ನೋ ಉಪಯೋಗಿಸಬೇಕೆಂದು ಹೇಳಿರುವುದು. ಹೀಗೆ ಪ್ರಾಯಶ್ಚಿತ್ತವನ್ನು ಹೇಳಿದ್ದರೂ ದೇಶಕಾಲಾವಸ್ಥೆಯನ್ನನುಸರಿಸಿ ಮಾಡಬೇಕಾದ ವಿಶೇಷ ಪ್ರಾಯಶ್ಚಿತ್ತ ಕ್ರಮವು ಖಾಂಡಿಕ್ಯನು ಹೊರತಾಗಿ ಮತ್ತೊಬ್ಬರಿಗೆ ತಿಳಿಯದೆಂದು ಅಭಿಪ್ರಾಯವು)

೩೬-೩೯. ಕೇಶೀಧ್ವಜನು ವಿಧಿಯನ್ನನುಸರಿಸಿ ಕ್ರಮವಾಗಿ ಯಜ್ಞವನ್ನು ನೆರವೇರಿಸಿ ಅವಭೃಥಸ್ನಾನವನ್ನು ಮಾಡಿ ಕೃತ ಕೃತ್ಯನಾಗಿ ತನ್ನ ಮನದಲ್ಲಿ ಆಲೋಚಿಸಿದನು. ಏನೆಂದರೆ ನಾನು ಬ್ರಾಹ್ಮಣರನ್ನೆಲ್ಲ ಪೂಜಿಸಿದೆನು. ಸಭ್ಯರಿಗೆಲ್ಲ ಮರ್ಯಾದೆಯನ್ನು ಮಾಡಿದೆನು. ಯಾಚರಿಗೆ ಅವರು ಕೇಳಿದುದನ್ನು ಕೊಟ್ಟೆನು.

ಇತ್ಥಂ ಸ ಚಿಂತಯನ್ನೇವ ಸಸ್ಮಾರ ಸ ಮಹೀಪತಿಃ ।
ಖಾಂಡಿಕ್ಯಾಯನದಕ್ಷೀತಿ ಮಯಾ ವೈ ಗುರುದಕ್ಷಿಣಾ ॥ ೬೯ ॥

ಸ ಜಗಾಮ ತದಾ ಭೂಯೋ ರಥಮಾರುಹ್ಯ ಪಾರ್ಥಿವಃ ।
ಮೈತ್ರೇಯ ದುರ್ಗಗಹನಂ ಖಾಂಡಿಕ್ಯೋ ಯತ್ರ ಸಂಸ್ಥಿತಃ ॥ ೪೦ ॥

ಖಾಂಡಿಕ್ಯೋಽಪಿ ಪುನರ್ದೃಷ್ಟ್ವಾ ತಮಾಯಾಂತಂ ಧೃತಾಯುಧಃ ।
ತಸ್ಥೌ ಹಂತುಂ ಕೃತಮತಿಸ್ತಮಾಹ ಸ ಪುನರ್ನೃಪಃ ॥ ೪೧ ॥

ಭೋ ನಾಹಂ ತೇಽಪರಾಧಾಯ ಪ್ರಾಪ್ತಃ ಖಾಂಡಿಕ್ಯ ಮಾಕ್ರುಧಾಃ ।
ಗುರೋರ್ನಿಷ್ಕ್ರಯದಾನಾಯ ಮಾಮವೇಹಿ ತ್ವಮಾಗತಂ ॥ ೪೨ ॥

ನಿಷ್ಪಾದಿತೋ ಮಯಾ ಯಾಗಸ್ತನ್ಮುಕ್ತ್ವೋದಪದೇಶತಃ ।
ಸೋಹಂ ತೇ ದಾತುಮಿಚ್ಛಾಮಿ ವೃಣೀಷ್ವ ಗುರುದಕ್ಷಿಣಾಂ ॥ ೪೩ ॥

ನನ್ನ ಶಕ್ತಿಗೆ ತಕ್ಕಂತೆ ಮಾಡಬೇಕಾದುದನ್ನೆಲ್ಲ ಮಾಡಿರುವೆನು. ಹಾಗಾದರೂ ನನ್ನ ಮನಸ್ಸಿಗೆ ತೃಪ್ತಿಯು ಯಾವ ಕಾರಣದಿಂದ ಉಂಟಾಗಲಿಲ್ಲ?' ಹೀಗೆಂದು ಯೋಚಿಸಿ ಖಾಂಡಿಕ್ಯನನ್ನು ಸ್ಮರಿಸಿಕೊಂಡು ನಾನು ಅವನಿಗೆ ಗುರುದಕ್ಷಿಣೆಯನ್ನು ಕೊಡಲಿಲ್ಲ. ಎಂದು ನಿಶ್ಚಯಿಸಿದನು.

೪೦-೪೩. ಆಕ್ಷಣವೇ ಅವನು ರಥವನ್ನೇರಿ ಮತ್ತೆ ಖಾಂಡಿಕ್ಯನಿರುವ ದುರ್ಗವೆಂಬಾದ ದುರ್ಗಕ್ಕೆ ಹೋದನು. ಖಾಂಡಿಕ್ಯನು ಪುನಃ ಬಂದ ಅವನನ್ನು ನೋಡಿ ಆಯುಧವನ್ನು ಹಿಡಿದು ಅವನನ್ನು ಕೊಲ್ಲಬೇಕೆಂದು ನಿಶ್ಚಯಿಸಿ ನಿಂತನು. ಅದನ್ನು ಕಂಡು ರಾಜನು ಅವನನ್ನು ಕುರಿತು 'ಮಹಾತ್ಮನಾದ ಖಾಂಡಿಕ್ಯನೇ ನಾನು ನಿನಗೆ ಕೆಡುಕು ಮಾಡಬೇಕೆಂದು ಬಂದಿಲ್ಲ ಕೋಪಮಾಡಬೇಡ. ಗುರುವಾದ ನಿನಗೆ ದಕ್ಷಿಣೆಯನ್ನು ಸಮರ್ಪಿಸಲು ಬಂದಿರುವೆನು. ನೀನು ಹೇಳಿದಂತೆ ನಾನು ಯಾಗವನ್ನು ಪೂರೈಸಿದೆನು. ನಿನಗೇನು ಗುರುದಕ್ಷಿಣೆಯನ್ನು ಕೊಡಬೇಕೆಂಬುದನ್ನು ಹೇಳು' ಎಂದನು.

॥ ಶ್ರೀ ಪರಾಶರಃ ॥

ಭೂಯಸ್ಸ ಮಂತ್ರಿಭಿಸ್ಸಾರ್ಧಂ ಮಂತ್ರಯಾಮಾಸ ಪಾರ್ಥಿವಃ ।
ಗುರುನಿಷ್ಕ್ರಯಕಾಮೋಯಂ ಕಿಂಮಯಾ ಪ್ರಾರ್ಥ್ಯಕಾಮಿತಿ ॥ ೪೪ ॥

ತಮೂಚುರ್ಮಂತ್ರಿಣೋ ರಾಜ್ಯಮಶೇಷಂ ಪ್ರಾರ್ಥ್ಯತಾಮಯಂ ।
ಶತ್ರುಭಿಃ ಪ್ರಾರ್ಥ್ಯತೇ ರಾಜ್ಯಮನಾಯಾಸಿತಸೈನಿಕೈಃ ॥ ೪೫ ॥

ಪ್ರಹಸ್ಯ ತಾನಾಹ ನೃಪಸ್ಸ ಖಾಂಡಿಕ್ಯೋ ಮಹಾಮತಿಃ ।
ಸ್ವಲ್ಪಕಾಲಂ ಮಹೀಪಾಲ್ಯಂ ಮಾದೃಶೈಃ ಪ್ರಾರ್ಥ್ಯತೇ ಕಥಂ ॥ ೪೬ ॥

ಏವಮೇತದ್ಭವಂತೋತ್ರ ಹ್ಯರ್ಥಸಾಧನಮಂತ್ರಿಣಃ ।
ಪರಮಾರ್ಥಃ ಕಥಂ ಕೋತ್ರ ಯೂಯಂ ನಾತ್ರ ವಿಶಕ್ಷಣಾಃ ॥ ೪೭ ॥

॥ ಶ್ರೀ ಪರಾಶರಃ ॥

ಇತ್ಯುಕ್ತ್ವಾ ಸಮುಪೇತ್ಯೈನಂ ಸ ತು ಕೇಶಿಧ್ವಜಂ ನೃಪಃ ।
ಉವಾಚ ಕಿಮವಶ್ಯಂ ತ್ವಂ ದದಾಸಿ ಗುರುದಕ್ಷಿಣಾಂ ॥ ೪೮ ॥

೪೪-೪೬. ಖಾಂಡಿಕ್ಯನು ಪುನಃ ಮಂತ್ರಿಗಳೊಡನೆ ಮಂತ್ರಾಲೋಚನೆಯನ್ನು ಮಾಡಿ ' ಇವನು ಗುರು ದಕ್ಷಿಣೆಯನ್ನು ಕೊಡುವನು ನಾನೇನು ದಕ್ಷಿಣೆಯನ್ನು ಯಾಚಿಸಬೇಕು ? ' ಎಂದು ಪ್ರಶ್ನೆ ಮಾಡಿದನು. ಮಂತ್ರಿಗಳು ರಾಜನನ್ನು ಕುರಿತು " ಎಲ್ಲ ರಾಜ್ಯವನ್ನೂ ಗುರುದಕ್ಷಿಣೆಗಾಗಿ ಕೇಳು. ಸೈನಿಕರಿಗೆ ಯುದ್ಧಾದಿ ಕ್ಲೇಶಗಳಿಲ್ಲದೆ ಅನಾಯಾಸವಾಗಿ ಶತ್ರುವಿನಿಂದ ರಾಜ್ಯಲಾಭವಾಗುವುದು " ಎಂದರು.

೪೬-೫೦. ಮಹಾಬುದ್ಧಿವಂತನಾದ ಖಾಂಡಿಕ್ಯನು ನಕ್ಕು ಅವರನ್ನು ಕುರಿತು " ಅಲ್ಪಕಾಲದ ರಾಜತ್ವವನ್ನು ನನ್ನಂಥವರು ಹೇಗೆ ಬಯಸುವರು ? ನೀವಾದರೋ ಈ ಲೋಕದಲ್ಲಿ ಹಣವನ್ನು ಸಂಪಾದಿಸುವ ಮಂತ್ರಿಗಳಾಗಿರುವಿರಿ. ಪರಮಾರ್ಥ

॥ ಶ್ರೀ ಪರಾಶರಃ ॥

ಬಾಢಮಿತ್ಯೇವ ತೇನೋಕ್ತಃ ಖಾಂಡಿಕ್ಯಸ್ತಮಥಾಬ್ರವೀತ್ ।
ಭವಾನಧ್ಯಾತ್ಮವಿಜ್ಞಾನಪರಮಾರ್ಥವಿಚಕ್ಷಣಃ ॥ ೪೯ ॥

ಯದಿ ಚೇದ್ದೀಯತೇ ಮಹ್ಯಂ ಭವತಾ ಗುರುನಿಷ್ಕ್ರಯಃ ।
ತತ್ಕ್ಲೇಶಪ್ರಶಮಾಯಾಲಂ ಯತ್ಕರ್ಮ ತದುದೀರಯ ॥ ೫೦ ॥

ಇತಿ ಶ್ರೀ ವಿಷ್ಣುಪುರಾಣೇ ಷಷ್ಠಾಂಶೇ ಷಷ್ಠೋಽಧ್ಯಾಯಃ

ವಾವುದು ? ಅದರ ಸ್ವರೂಪವೇನು ? ಎಂಬುದನ್ನು ನೀವು ತಿಳಿದಿಲ್ಲ.' ಎಂದು ಹೇಳಿ ಕೇಶಿಧ್ವಜನ ಸಮೀಪಕ್ಕೆ ಹೋಗಿ ' ನೀನು ಆವಶ್ಯಕವಾಗಿ ಗುರುದಕ್ಷಿಣೆಯನ್ನು ಕೊಡುತ್ತೀಯೋ ' ಎಂದು ಕೇಳಿದನು. ಕೊಡುವೆನೆಂದು ಅವನು ಹೇಳುತ್ತಲು ಖಾಂಡಿಕ್ಯನು ' ನೀನು ಅಧ್ಯಾತ್ಮವಿದ್ಯೆಯ ಪರಮಾರ್ಥವನ್ನು ತಿಳಿದವನು. ನನಗೆ ಗುರುದಕ್ಷಿಣೆಯನ್ನು ಕೊಡುವುದಾದರೆ ಕ್ಲೇಶ ನಿವೃತ್ತಿಗೆ ಏನು ಮಾಡಬೇಕೋ ಅದನ್ನು ಹೇಳು ' ಎಂದನು.

ಎಂಬಲ್ಲಿಗೆ ಶ್ರೀ ವಿಷ್ಣುಪುರಾಣದ ಆರನೆಯ ಅಂಶದಲ್ಲಿ

ಆರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಷಷ್ಠಾಂಶೇ
ಸಪ್ತಮೋಽಧ್ಯಾಯಃ

॥ ಕೇಶಿಧ್ವಜ ಉವಾಚ ॥

ನ ಪ್ರಾರ್ಥಿತಂ ತ್ವಯಾ ಕಸ್ಮಾದಸ್ಮದ್ರಾಜ್ಯಮಕಂಟಕಂ ।
ರಾಜ್ಯಲಾಭಾದ್ವಿನಾನ್ಯತ್ ಕ್ಷತ್ರಿಯಾಣಾಮತಿಪ್ರಿಯಂ ॥ ೧ ॥

॥ ಖಾಂಡಿಕ್ಯ ಉವಾಚ ॥

ಕೇಶಿಧ್ವಜ ನಿಬೋಧ ತ್ವಂ ಮಯಾ ನ ಪ್ರಾರ್ಥಿತಂ ಯತಃ ।
ರಾಜ್ಯಮೇತದಶೇಷಂ ತೇ ಯತ್ರ ಗೃಧ್ನಂತ್ಯಪಂಡಿತಾಃ ॥ ೨ ॥

ಕ್ಷತ್ರಿಯಾಣಾಮಯಂ ಧರ್ಮೋ ಯತ್ಪ್ರಜಾಪರಿಪಾಲನಂ ।
ವಧಶ್ಚ ಧರ್ಮಯುದ್ಧೇನ ಸ್ವರಾಜ್ಯಪರಿಪಂಥಿನಾಂ ॥ ೩ ॥

ಏಳನೆಯ ಅಧ್ಯಾಯವು

೧. ಕೇಶಿಧ್ವಜನು ‘ಖಾಂಡಿಕ್ಯನೇ! ಶತ್ರುಗಳಿಲ್ಲದ ರಾಜ್ಯವನ್ನು ನೀನು ಗುರುದಕ್ಷಿಣೆಗಾಗಿ ಯಾವ ಕಾರಣದಿಂದ ಕೇಳಲಿಲ್ಲ. ಕ್ಷತ್ರಿಯರಿಗೆ ಅವಶ್ಯಕವಾದ ಪ್ರಜಾಪಾಲನ ರೂಪವಾದ ಧರ್ಮ ಸಾಧನೆಗೆ ರಾಜ್ಯಲಾಭಕ್ಕಿಂತ ಉತ್ತಮವಾದುದು ಮತ್ತೊಂದು ಇಲ್ಲವಲ್ಲನೇ?’ ಎಂದನು.

೨-೪. ಖಾಂಡಿಕ್ಯನು ‘ಕೇಶಿಧ್ವಜನೇ! ಕೇಳು, ನಾನು ರಾಜ್ಯವನ್ನು ಯಾವ ಕಾರಣದಿಂದ ಕೇಳಲಿಲ್ಲವೆಂದರೆ ರಾಜ್ಯವನ್ನು ಅವಿವೇಕಿಗಳು ಸುಖಾಪೇಕ್ಷೆಯಿಂದ ಬಯಸುವರು. ಕ್ಷತ್ರಿಯರಿಗೆ ಪ್ರಜೆಗಳನ್ನು ಕಾಪಾಡುವುದೂ ಧರ್ಮ ಯುದ್ಧದಲ್ಲಿ ರಾಜ್ಯಕ್ಕೆ ಶತ್ರುಗಳಾದವರನ್ನು ಕೊಲ್ಲುವುದೂ ಧರ್ಮವಾಗಿರುವುದು. ನನ್ನ ರಾಜ್ಯ

ತಶ್ರಾಶಕ್ತಸ್ಯ ಮೇ ದೋಷೋ ನೈವಾಸ್ತ್ಯಪಹೃತೇ ತ್ವಯಾ ।
ಬಂಧಾಯೈವ ಭವತ್ಯೇಷಾ ಹ್ಯವಿದ್ಯಾಪ್ಯಕ್ರಮೋಜ್ಝಿತಾ ॥ ೪ ॥

ಜನ್ಮೋಪಭೋಗಲಿಪ್ಸಾರ್ಥಮಿಯಂ ರಾಜ್ಯಸ್ಪೃಹಾ ಮನು ।
ಅನ್ಯೇಷಾಂ ದೋಷಜಾ ನೈವ ಧರ್ಮಂ ವೈ ನಾನುರುಧ್ಯತೇ ॥ ೫ ॥

ನ ಯಾಚ್ಞಾ ಕ್ಷತ್ರಬಂಧೂನಾಂ ಧರ್ಮಾಯೈತತ್ಸತಾಂ ಮತಂ ।
ಅತೋ ನ ಯಾಚಿತಂ ರಾಜ್ಯಮವಿದ್ಯಾಂತರ್ಗತಂ ತವ ॥ ೬ ॥

ವನ್ನು ನೀನು ಅಪಹರಿಸಿದಮೇಲೆ ಅದನ್ನು ಸ್ವಾಧೀನಮಾಡಿಕೊಳ್ಳಲು ಶಕ್ತಿಯಿಲ್ಲದ ನನಗೆ ರಾಜ್ಯಾಧಿಕಾರವಿಲ್ಲದುದರಿಂದ ಪ್ರಜಾಪಾಲನೆಯನ್ನು ಬಿಟ್ಟು ದೋಷವಿಲ್ಲ. ರಾಜ್ಯಾಧಿಕಾರವಿದ್ದು ಅವಿದ್ಯಾ (ಕರ್ತವ್ಯಕರ್ಮ) ರೂಪವಾದ ಪ್ರಜಾಪಾಲನೆಯನ್ನು ಬಿಟ್ಟರೆ ಅದುಪಾಪಕ್ಕೆ ಕಾರಣವಾಗುವುದು.

೫-೬. ನಿನ್ನ ರಾಜ್ಯದ ಆಸೆಯು ನನಗಾಗಲಿ ಮಂತ್ರಿಗಳಿಗಾಗಲಿ ಧರ್ಮವಾದುದಲ್ಲ. ರಾಜ್ಯವನ್ನಪೇಕ್ಷಿಸುವುದೇ ಧರ್ಮವೆಂದರೆ ಅದು ಛತ್ರ ಚಾಮರಾದಿ ರಾಜ ಚಿಹ್ನೆಗಳಿಂದ ಸುಖಾನುಭವ ಮಾಡಬೇಕೆಂಬ ಜನ್ಮಾಂತರದ ಕರ್ಮಫಲದ ಅಶಾಸ್ವರೂಪವಾದುದಾಗುವುದು. ಪ್ರಜಾಪಾಲನರೂಪವಾದ ಧರ್ಮಾರ್ಥವಾದುದಲ್ಲ. ಇತರರಾದ ಮಂತ್ರಿಯೇ ಮೊದಲಾದವನಿಗೆ ನಿನ್ನ ರಾಜದಲ್ಲಾಸಕ್ತಿಯು, ಪ್ರೀತಿ, ಅತ್ಯಾಸೆ ಮುಂತಾದ ದೋಷಗಳಿಂದ ಹುಟ್ಟಿ ಧರ್ಮವನ್ನನುಸರಿಸದೆ ಧರ್ಮವ್ಯಾಜದಿಂದ ಅರ್ಥಶಾಸ್ತ್ರವೊಂದನ್ನೇ ಅನುಸರಿಸಿರುವುದು. ಧರ್ಮಾರ್ಥವಾದರೂ ಕ್ಷತ್ರಿಯರು ಯಾಚಿಸಬಾರದು ಎಂದು ಸಜ್ಜನರು ಹೇಳುವರು ಆದುದರಿಂದ ಅಧರ್ಮವೂ, ಅವಿದ್ಯೆಯೊಳಗೆ ಸೇರಿದುದೂ ಆದ ರಾಜ್ಯವನ್ನು ನಾನು ಯಾಚಿಸಲಿಲ್ಲ.

ರಾಜ್ಯೇ ಗೃಧ್ನಂತ್ಯವಿದ್ವಾಂಸೋ ಮಮತ್ವಾಹೃತಚೇತಸಃ ।
ಅಹಂ ಮಾನಮಹಾಪಾನಮದಮತ್ತಾ ನಮಾದೃಶಾಃ ॥ ೬ ॥

॥ ಶ್ರೀ ಪರಾಶರಃ ॥

ಪ್ರಹೃಷ್ಟಸ್ತಾಧ್ವಿತಿ ತತಃ ಪ್ರಾಹ ಕೇಶಿಧ್ವಜೋ ನೃಪಃ ।
ಖಾಂಡಿಕ್ಯಜನಕಂ ಪ್ರೀತ್ಯಾ ಶ್ರೂಯತಾಂ ವಚನಂ ಮಮ ॥ ೮ ॥

॥ ಕೇಶಿಧ್ವಜಃ ॥

ಅಹಂ ಹ್ಯವಿದ್ಯಯಾ ಮೃತ್ಯುಂ ತರ್ತುಕಾಮಃ ಕರೋಮಿ ವೈ ।
ರಾಜ್ಯಂ ಯೋಗಾಂಶ್ಚ ವಿವಿಧಾನ್ ಭೋಗೈಃ ಪುಣ್ಯಕ್ಷಯಂ ತಥಾ ॥ ೯ ॥

೭-೮. ನಾನು ನನ್ನದು ಎಂಬ ಅಭಿಮಾನ ರೂಪವಾದ ಮದ್ಯಪಾನದಿಂದ ಮೆದಿಸಿದ ಅಜ್ಞಾನಿಗಳು ಅಭಿಮಾನಕ್ಕೆ ಅಧೀನರಾಗಿ ರಾಜ್ಯವನ್ನಪೇಕ್ಷಿಸುವರ್ಲ್ಲ. ನನ್ನಂಥವರು ರಾಜ್ಯವನ್ನು ಬಯಸರು" ಎಂದನು. ಈ ಮಾತನ್ನು ಕೇಳಿ ಕೇಶಿಧ್ವಜನು "ನಿನ್ನ ಬುದ್ಧಿಯು ಯುಕ್ತವಾದುದನ್ನು ನಿಶ್ಚಯಿಸಿರುವುದು. ನಾನು ಹೇಳುವ ಮಾತನ್ನು ಕೇಳು" ಎಂದು ಪ್ರೀತಿಯಿಂದ ಖಾಂಡಿಕ್ಯನನ್ನು ಕುರಿತು ಹೇಳಲು ಪ್ರಾರಂಭಿಸಿದನು.

೯-೧೦. "ಅವಿದ್ಯಯಾಮೃತ್ಯುಂತೀರ್ತ್ವಾ ವಿದ್ಯಯಾಮೃತಮಶ್ನುತೇ" ಎಂಬ ವೇದವಚನಾನುಸಾರವಾಗಿ ನಾನು ಪ್ರಜಾಪಾಲನೆಯೇ ಮುಂತಾದ ಕರ್ಮರೂಪವಾದ ಅವಿದ್ಯೆಯಿಂದ ಸಂಸಾರ ಕಾರಣವಾದ ಕಾಮಕ್ರೋಧಾದಿರೂಪವಾದ ಮೃತ್ಯುವನ್ನು ಜಯಿಸುವುದಕ್ಕಾಗಿ ರಾಜ್ಯಪಾಲನೆಯನ್ನೂ ಬಗೆ ಬಗೆಯ ಯಾಗಗಳನ್ನೂ ಮಾಡುತ್ತ ಸುಖಾನುಭವದಿಂದ ಪ್ರಾರಬ್ಧ ಪುಣ್ಯಕ್ಷಯವನ್ನೂ ಮಾಡಿಕೊಳ್ಳು

ತದಿದಂ ತೇ ಮನೋ ದಿಷ್ಯಾ ವಿವೇಕೈಶ್ವರ್ಯತಾಂ ಗತಂ ।
ತಚ್ಛ್ರೂಯತಾಮವಿದ್ಯಾಯಾಃ ಸ್ವರೂಪಂ ಕುಲನಂದನ ॥ ೧೦ ॥

ಅನಾತ್ಮನ್ಯಾತ್ಮಬುದ್ಧಿರ್ಯಾ ಜಾಸ್ಯೇ ಸ್ವಮಿತಿ ಯಾ ಮತಿಃ ।
ಸಂಸಾರತರುಸಂಭೂತಿ ಬೀಜಮೇತದ್ದ್ವಿಧಾ ಸ್ಥಿತಂ ॥ ೧೧ ॥

ಪಂಚಭೂತಾತ್ಮಕೇ ದೇಹೇ ದೇಹೀ ಮೋಹತಮೋ ವೃತಃ ।
ಅಹಮ್ಮಮೈತದಿತ್ಯುಚ್ಚೈಃ ಕುರುತೇ ಕುಮತಿರ್ಮತಿಂ ॥ ೧೨ ॥

ಸ್ತಿರುವೆನು. ನಿನ್ನ ಮನಸ್ಸಾದರೋ ಯಾವ ಉಪದೇಶವೂ ಇಲ್ಲದೆ ತಾನೇ ವಿವೇಕ ಶಕ್ತಿಯನ್ನು ಪಡೆದಿರುವುದು. ಇದು ಮಂಗಳಕರವಾದುದು. ಆದುದರಿಂದ ರಾಜ ಶ್ರೇಷ್ಠನೇ ಮೊದಲು ಅವಿದ್ಯೆಯ ಸ್ವರೂಪವನ್ನು ಹೇಳುವೆನು ಕೇಳು.

೧೧-೧೨. ಆತ್ಮಸ್ವರೂಪವಲ್ಲದ ದೇಹಾದಿಗಳಲ್ಲಿ ಆತ್ಮನೆಂಬ ಬುದ್ಧಿಯೂ ತನ್ನದಲ್ಲದ ಭೂಮಿ ಮುಂತಾದುವುಗಳಲ್ಲಿ ತನ್ನ ದೆಂಬ ಅಭಿಮಾನವೂ ಅವಿದ್ಯೆಯೆನಿಸುವುದು. ಇದನ್ನೇ ಯೋಗಶಾಸ್ತ್ರದಲ್ಲಿ ಅನಿತ್ಯವೂ, ಅಶುಚಿಯೂ, ದುಃಖರೂಪವೂ ಆದ ಅನಾತ್ಮವಸ್ತುಗಳಲ್ಲಿ ನಿತ್ಯವೂ ಶುಚಿಯೂ ಸುಖಸ್ವರೂಪವೂ ಆದ ಆತ್ಮನೆಂಬ ತಿಳಿವಳಿಕೆಯೇ ಅವಿದ್ಯೆಯೆಂದು ಹೇಳಿರುವುದು. ಇದು ಎರಡು ಬಗೆಯಾಗಿ ಜನ್ಮ ಮರಣವೆಂಬ ಸಂಸಾರ ವೃಕ್ಷಕ್ಕೆ ಬೀಜರೂಪವಾದುದಾಗಿರುವುದು. ಜೀವನು ಸ್ವಸ್ವರೂಪವನ್ನು ತಿಳಿಯದಿರುವ ಅಜ್ಞಾನದಿಂದ ವಿರುದ್ಧಬುದ್ಧಿಯುಳ್ಳವನಾಗಿ ಪಂಚ ಭೂತಗಳಿಂದಾದ ಶರೀರದಲ್ಲಿ ನಾನು ನನ್ನದು ಎಂಬ ದೃಢವಾದ ಭಾವನೆಯನ್ನು ಮಾಡಿಕೊಳ್ಳುವನು.

ಆಕಾಶವಾಯ್ವಗ್ನಿಜಲಪೃಥಿವೀಭ್ಯಃ ಪೃಥಕ್ಕೃತೇ ।
ಆತ್ಮನ್ಯಾತ್ಮಮಯಂ ಭಾವಂ ಕಃ ಕರೋತಿ ಕಳೇಬರೇ ॥ ೧೩ ॥

ಕಳೇಬರೋಪಭೋಗ್ಯಂ ಹಿ ಗೃಹಕ್ಷೇತ್ರಾದಿಕಂ ಚ ಕಃ ।
ಅದೇಹೇ ಚಾತ್ಮನಿ ಪ್ರಾಜ್ಞೋ ಮಮೇದಮಿತಿ ಮನ್ಯತೇ ॥ ೧೪ ॥

ಇತ್ಥಂ ಚ ಪುತ್ರಪೌತ್ರೇಷು ತದ್ದೇಹೋತ್ಪಾದಿತೇಷು ಕಃ ।
ಕರೋತಿ ಪಂಡಿತಸ್ತ್ವಮ್ಯಮನಾತ್ಮನಿ ಕಳೇಬರೇ ॥ ೧೫ ॥

ಸರ್ವಂ ದೇಹೋಪಭೋಗಾಯ ಕುರುತೇ ಕರ್ಮ ಮಾನವಃ ।
ದೇಹಶ್ಚಾನ್ಯೋ ಯದಾ ಪುಂಸಸ್ತದಾ ಬಂಧಾಯ ತತ್ಪರಂ ॥ ೧೬ ॥

೧೩-೧೬. ಆಕಾಶ, ವಾಯು, ಅಗ್ನಿ, ನೀರು, ಭೂಮಿ ಎಂಬ ಪಂಚಭೂತಗಳಿಂದ ಬೇರೆಯಾಗಿರುವ ಆತ್ಮನು ಸಾಕ್ಷಿಸ್ವರೂಪನಾಗಿರುವಲ್ಲಿ ಪಂಚಭೂತಗಳಿಂದಾದ ಶರೀರವನ್ನು ಆತ್ಮನೆಂದು ಯಾರು ತಿಳಿವರು? ಆತ್ಮನು ಶರೀರವಿಲ್ಲದವನಾಗಿರುವಾಗ ಶರೀರದ ಸುಖಾನುಭವಕ್ಕಾಗಿರುವ ಮನೆ, ಭೂಮಿ, ಮೊದಲಾದುವುಗಳನ್ನು ಯಾವ ಬುದ್ಧಿವಂತನು ಇವು ನನ್ನವೆಂದು ತಿಳಿವನು? ಹೀಗೆಯೇ ಶರೀರದಿಂದಲೇ ಹುಟ್ಟಿಸಿದ ಪುತ್ರ ಪೌತ್ರಾದಿಗಳ ಅನಾತ್ಮರೂಪವಾದ ಶರೀರಗಳಲ್ಲಿ ನನ್ನದೆಂಬ ಬುದ್ಧಿಯನ್ನು ಯಾವ ಪಂಡಿತನು ಇಟ್ಟುಕೊಳ್ಳುವನು? ಮನುಷ್ಯನು ಶರೀರ ಸುಖಕ್ಕಾಗಿ ಸಮಸ್ತ ಕಾರ್ಯಗಳನ್ನೂ ಮಾಡುವನು. ಪುರುಷನಿಗಿಂತ ಶರೀರವು ಬೇರೆಯಾದುದೆಂದು ತಿಳಿದಮೇಲೆ ಪುರುಷನಿಗೆ ಸುಖಾನುಭವ ಸಂಬಂಧವೇ ಇರುವುದಿಲ್ಲ. ಹೀಗಿದ್ದರೂ ಅಭಿಮಾನವಿಟ್ಟುಕೊಂಡು ಕರ್ಮವನ್ನು ಮಾಡುವುದು. (ಆಹಾರಾದಿಗಳನ್ನು ತೆಗೆದು ಕೊಳ್ಳುವುದು.) ಪುರುಷನಿಗೆ ಜನ್ಮಮರಣರೂಪವಾದ ಸಂಸಾರ ಬಂಧಕ್ಕೆ ಕಾರಣ ವಾಗುವುದು.

ಮೃಣ್ಮಯಂ ಹಿ ಯಥಾ ಗೇಹಂ ಲಿಪ್ಯತೇ ವೈ ಮೃದಂಭಸಾ ।
ಪಾರ್ಥಿವೋಽಯಂ ತಥಾ ದೇಹೋ ಮೃದಂಬ್ವಾಲೇಪನಸ್ಥಿತಿಃ ॥ ೧೬ ॥

ಪಂಚಭೂತಾತ್ಮಕೈರ್ಭೋಗ್ಯೈಃ ಪಂಚಭೂತಾತ್ಮಕಂ ವಪುಃ ।
ಅಪ್ಯಾಯತೇ ಯದಿ ತತಃ ಪುಂಸೋ ಭೋಗೋಽತ್ರ ಕಂ ಕೃತಃ ॥ ೧೭ ॥

ಅನೇಕಜನ್ಮಸಾಹಸ್ರೀಂ ಸಂಸಾರಪದವೀಂ ವ್ರಜನ್ ।
ಮೋಹಶ್ರಮಂ ಪ್ರಯಾತೋಽಸೌ ನಾಶನಾರೇಣುಕುಂಠಿತಃ ॥ ೧೮ ॥

ಪ್ರಕ್ಷಾಳ್ಯತೇ ಯದಾ ಸೋಽಸ್ಯ ರೇಣುಜ್ಞಾನೋಷ್ಣವಾರಿಣಾ ।
ತದಾ ಸಂಸಾರ ಪಾಂಥಸ್ಯ ಯಾತಿ ಮೋಹಶ್ರಮಶ್ಯಮಂ ॥ ೧೦ ॥

ಮೋಹಶ್ರಮೇ ಶಮಂ ಯಾತೇ ಸ್ವಸ್ಥಾಂತಃಕರಣಃ ಪುಮಾನ್ ।
ಅನನ್ಯಾತಿಶಯಾಬಾಧಂ ಪರಂ ನಿರ್ವಾಣಮೃಚ್ಛತಿ ॥ ೧೧ ॥

೧೬-೧೮. ಮಣ್ಣಿನಿಂದ ಕಟ್ಟಿದ ಮನೆಯನ್ನು ಅಲಂಕಾರವಾಗಿಟ್ಟುಕೊಂಡಿರಲು ಮಣ್ಣನ್ನು ನೀರಿನಲ್ಲಿ ಕಲಸಿ ಅದರಿಂದ ಮೆತ್ತುತ್ತಿರುವರು. ಅದರಂತೆ ಪೃಥಿವೀ ತತ್ವದಿಂದಾದ ದೇಹವನ್ನು ಅನ್ನ ನೀರಿನಿಂದ ಪೋಷಿಸುತ್ತಿರುವರು. ಪಂಚ ಭೂತಗಳ ಸಂಬಂಧವಾದ ಸುಖಸಾಧನ ವಸ್ತುಗಳಿಂದ ಪಂಚಭೂತಗಳಿಂದಾದ ಶರೀರವನ್ನು ಪೋಷಿಸುತ್ತಿರುವಾಗ ಪುರುಷನಿಗೆ ಸುಖಾನುಭವವು ಹೇಗೆ ಉಂಟಾಗುವುದು ?

೧೯-೨೦. ಜೀವನು ಅನೇಕ ಸಾವಿರ ಜನ್ಮಗಳಲ್ಲಿ ಸಂಸಾರ ಮಾರ್ಗದಲ್ಲಿ ನಡೆಯುತ್ತ ಕರ್ತೃತ್ವವೇ ಮುಂತಾದ ಅಭಿಮಾನ ರೂಪವಾದ ಅಜ್ಞಾನದಿಂದ ಆಯಾಸವನ್ನು ಹೊಂದಿ ನಾನು ನನ್ನದು ಎಂಬ ಮಿಥ್ಯಾಜ್ಞಾನರೂಪವಾದ ಸಂಸ್ಕಾರವೆಂಬ ದೂಳಿಗಳಿಂದ ಆವರಿಸಿರುವನು. ಜ್ಞಾನವೆಂಬ ಬಿಸಿನೀರಿನಿಂದ ಆ ದೂಳಿಗಳನ್ನು ತೊಳೆದುಕೊಂಡಾಗ ಸಂಸಾರ ಮಾರ್ಗದಲ್ಲಿ ನಡೆಯುತ್ತಿರುವ ಆ ಜೀವನಿಗೆ ಅಜ್ಞಾನವೆಂಬ ಆಯಾಸವು ಶಾಂತವಾಗುವುದು.

೨೧-೨೨. ಅಜ್ಞಾನವೆಂಬ ಆಯಾಸವು ಶಾಂತವಾಗುತ್ತಲು ಪುರುಷನು ಶಾಂತ ಚಿತ್ತನಾಗಿ ಯಾವ ಬಾಧೆಯೂ ಯಾವ ವಿಶೇಷವೂ ಇಲ್ಲದ ಮೋಕ್ಷ ಸುಖವನ್ನು

ನಿರ್ವಾಣಮಯ ಏವಾಯಮಾತ್ಮಾಜ್ಞಾನಮಯೋ ಮಲಃ ।
ದುಃಖಾಜ್ಞಾನಮಯಾಧರ್ಮಾಃ ಪ್ರಕೃತೇಸ್ತೇ ತು ನಾತ್ಮನಃ ॥ ೨೨ ॥

ಜಲಸ್ಯ ನಾಗ್ನಿಸಂಸರ್ಗಸ್ತಾಪೀಸಂಗಾತ್ತಥಾಪಿ ಹಿ ।
ಶಮ್ಯೋದ್ರೇಕಾದಿಕಾನ್ ಧರ್ಮಾನ್ ತತ್ಕರೋತಿ ಯಥಾ ನೃಪ ॥ ೨೩ ॥

ತಥಾತ್ಮಾ ಪ್ರಕೃತೇಸ್ಸಂಗಾತ್ ಅಹಂಮಾನಾದಿದೂಷಿತಃ ।
ಭಜತೇ ಪ್ರಾಕೃತಾನ್ ಧರ್ಮಾನ್ ಅನ್ಯಸ್ತೇಭ್ಯೋ ಹಿ ಸೋಽವ್ಯಯಃ

ತದೇತತ್ಕಥಿತಂ ಬೀಜಮವಿದ್ಯಾಯಾ ಮಯಾ ತವ ।
ಕ್ಲೇಶಾನಾಂ ಚ ಕ್ಷಯಕರಂ ಯೋಗಾದನ್ಯನ್ನ ವಿದ್ಯತೇ ॥ ೨೫ ॥

॥ ಖಾಂಡಿಕ್ಯಃ ॥

ತಂ ಬ್ರವೀಹಿ ಮಹಾಭಾಗ ಯೋಗಂ ಯೋಗವಿದುತ್ತಮ ।
ವಿಜ್ಞಾತಯೋಗಶಾಸ್ತ್ರಾರ್ಥಸ್ತ್ವಮಸ್ಮಾಂ ನಿಮಿಸಂತತೌ ॥ ೨೬ ॥

ಪಡೆವನು. ಆತ್ಮನು ಯಾವಾಗಲೂ ಸುಖ ಸ್ವರೂಪನು. ನಿರ್ಮಲವಾದ ಜ್ಞಾನ ಸ್ವರೂಪನು. ದುಃಖವೂ ಅಜ್ಞಾನ ಧರ್ಮಗಳೂ ಪ್ರಕೃತಿಗೆ ಸಂಬಂಧಪಟ್ಟವು ಆತ್ಮನಿಗಿಲ್ಲ.

೨೩–೨೫. ರಾಜನೇ "ನೀರಿಗೆ ಸಾಕ್ಷಾತ್ತಾಗಿ ಬೆಂಕಿಯ ಸಂಬಂಧವಿಲ್ಲ. ಪಾತ್ರೆಯ ಸಂಬಂಧದಿಂದ ನೀರು ಬಿಸಿಯಾಗಿ ಕುದಿಯುತ್ತ ಶಬ್ದವಿಗಳನ್ನು ಮಾಡಿ ಶೋಷಿಸುವಂತೆ ಆತ್ಮನು ಪ್ರಕೃತಿಯ (ದೇಹ) ಸಂಬಂಧದಿಂದ ನಾನು, ನನ್ನದು, ಎಂಬ ಅಭಿಮಾನದಿಂದ ಕೂಡಿ ಪ್ರಕೃತಿ ಧರ್ಮಗಳಾದ ಸುಖ ದುಃಖಗಳನ್ನನು ಭವಿಸುವನು. ಆದರೂ ನಾಶರಹಿತನಾದ ಅವನು ಪ್ರಕೃತಿಗಿಂತ ಬೇರೆಯಾದವನು. ಅಜ್ಞಾನಕ್ಕೆ ಕಾರಣವನ್ನು ನಾನು ಹೇಳಿದೆನು. ಈ ಕ್ಲೇಶಗಳನ್ನು ನಾಶಮಾಡಲು ಯೋಗಕ್ಕಿಂತ ಬೇರೆಯಾದ ಸಾಧನವಿರುವುದಿಲ್ಲ" ಎಂದು ಹೇಳಿದನು.

೨೬. ಖಾಂಡಿಕ್ಯನು "ಯೋಗಿಗಳಲ್ಲಿ ಶ್ರೇಷ್ಠನಾದ ಕೇಶಿಧ್ವಜನೇ ನೀನು ಈ ನಿಮಿ ವಂಶದಲ್ಲಿ ಯೋಗಶಾಸ್ತ್ರದ ತತ್ವವನ್ನು ತಿಳಿದವನಾಗಿರುವೆ. ಮಹಾಮಹಿಮನಾದ ನೀನು ಆ ಯೋಗದ ಸ್ವರೂಪವನ್ನು ನನಗೆ ವಿವರಿಸಿ ಹೇಳು" ಎಂದನು.

॥ ಕೇಶಿಧ್ವಜಃ ॥

ಯೋಗಸ್ವರೂಪಂ ಖಾಂಡಿಕ್ಯ ಶ್ರೂಯತಾಂ ಗದತೋ ಮಮ ।
ಯತ್ರ ಸ್ಥಿತೋ ನ ಚ್ಯವತೇ ಪ್ರಾಪ್ಯ ಬ್ರಹ್ಮಲಯಂ ಮುನಿಃ ॥ ೨೭ ॥

ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ ।
ಬಂಧಾಯ ವಿಷಯಾಸಂಗಿಮುಕ್ತ್ಯೈ ನಿರ್ವಿಷಯಂ ಮನಃ ॥ ೨೮ ॥

ವಿಷಯೇಭ್ಯಸ್ಸಮಾಹೃತ್ಯ ವಿಜ್ಞಾನಾತ್ಮಾ ಮನೋ ಮುನಿಃ ।
ಚಿಂತಯೇನ್ಮುಕ್ತಯೇ ತೇನ ಬ್ರಹ್ಮಭೂತಂ ಪರೇಶ್ವರಂ ॥ ೨೯ ॥

ಆತ್ಮಭಾವಂ ನಯತ್ಯೇನಂ ತದ್ಬ್ರಹ್ಮಾಧ್ಯಾಯಿನಂ ಮುನಿಂ ।
ವಿಕಾರ್ಯಮಾತ್ಮನಶ್ಶಕ್ತ್ಯಾ ಲೋಹಮಾಕರ್ಷಕೋ ಯಥಾ ॥ ೩೦ ॥

ಆತ್ಮಪ್ರಯತ್ನಸಾಪೇಕ್ಷಾ ವಿಶಿಷ್ಟಾ ಯಾ ಮನೋಗತಿಃ ।
ತಸ್ಯಾ ಬ್ರಹ್ಮಣಿ ಸಂಯೋಗೋ ಯೋಗ ಇತ್ಯಭಿಧೀಯತೇ ॥ ೩೧ ॥

೨೭–೩೦. ಕೇಶಿಧ್ವಜನು "ಖಾಂಡಿಕ್ಯನೇ! ಯೋಗದ ಸ್ವರೂಪವನ್ನು ಹೇಳುವೆನು ಕೇಳು. ಯೋಗಾರೂಢನಾದ ಮುನಿಯು ಪರಬ್ರಹ್ಮನಲ್ಲಿ ಲೀನನಾಗಿ ಮುಕ್ತಿಯನ್ನು ಪಡೆದು ಪುನರ್ಜನ್ಮವನ್ನು ಪಡೆವುದಿಲ್ಲ. ಮನಸ್ಸೇ ಮನುಷ್ಯನ ಬಂಧ ಮೋಕ್ಷಗಳಿಗೆ ಕಾರಣವಾದುದು. ವಿಷಯಾಸಕ್ತವಾದ ಮನಸ್ಸು ಬಂಧಕ್ಕೂ ವಿಷಯ ವೈರಾಗ್ಯವನ್ನು ಹೊಂದಿದ ಮನಸ್ಸು ಮೋಕ್ಷಕ್ಕೂ ಕಾರಣವಾಗುವುದು. ಜ್ಞಾನಸ್ವರೂಪನಾದ ಯೋಗಿಯು ಮನಸ್ಸನ್ನು ವಿಷಯಗಳಿಂದ ಹಿಂದಿರುಗಿಸಿ ಮೋಕ್ಷಕ್ಕಾಗಿ ಪರಬ್ರಹ್ಮಸ್ವರೂಪವಾದ ಪರಮೇಶ್ವರನನ್ನು ಧ್ಯಾನಮಾಡಬೇಕು. ಹೀಗೆ ಮಾಡಿದರೆ ಆ ಪರಬ್ರಹ್ಮ ವಸ್ತುವು ಧ್ಯಾನಮಾಡುತ್ತಿರುವ ಯೋಗಿಯ ಮನಸ್ಸನ್ನು, ಅಯಸ್ಕಾಂತವು ತನ್ನ ಶಕ್ತಿಯಿಂದ ಕಬ್ಬಿಣವನ್ನಾಕರ್ಷಿಸುವಂತೆ ಆಕರ್ಷಿಸುವುದು.

೩೧-೩೩. ಯಮನಿಯಮಾದಿ ಪ್ರಯತ್ನಗಳಿಂದ ಕೂಡಿದ ಸಾತ್ವಿಕವಾದ ಮನೋವೃತ್ತಿಯನ್ನು ಪರಬ್ರಹ್ಮನಲ್ಲಿಯೇ ಸೇರಿಸುವುದನ್ನು ಯೋಗವೆಂದು ಹೇಳುವರು. ಈ ರೀತಿಯಲ್ಲಿ ವಿಶೇಷ ಧರ್ಮದಿಂದ ಕೂಡಿದ ಯೋಗಾಭ್ಯಾಸವು

ಏವಮುತ್ಕಂತವೈಶಿಷ್ಟ್ಯಯುಕ್ತೇಧಮೋಪಲಕ್ಷಣಃ ।
ಯಸ್ಯ ಯೋಗಸ್ಸ ನೈ ಯೋಗೀ ಮುಮುಕ್ಷುರಭಿಧೀಯತೇ ॥ ೩೨ ॥

ಯೋಗಯುಕ್ಪ್ರಥಮಂ ಯೋಗೀ ಯುಂಜಾನೋ ಹ್ಯಭಿಧೀಯತೇ ।
ವಿನಿಷ್ಪನ್ನಸಮಾಧಿಸ್ತು ಪರಂ ಬ್ರಹ್ಮೋಪಲಬ್ಧಿಮಾನ್ ॥ ೩೩ ॥

ಯದ್ಯಂತರಾಯದೋಷೇಣ ದೂಷ್ಯತೇ ಚಾಸ್ಯ ಮಾನಸಂ ।
ಜನ್ಮಾಂತರೈರಭ್ಯಸತೋ ಮುಕ್ತಿಃ ಪೂರ್ವಸ್ಯ ಜಾಯತೇ ॥ ೩೪ ॥

ವಿನಿಷ್ಪನ್ನಸಮಾಧಿಸ್ತು ಮುಕ್ತಿಂ ತತ್ರೈವ ಜನ್ಮನಿ ।
ಪ್ರಾಪ್ನೋತಿ ಯೋಗೀ ಯೋಗಾಗ್ನಿದಗ್ಧಕರ್ಮಚಯೋಚಿರಾತ್ ॥ ೩೫ ॥

ಯಾರಿಗಿರುವುದೋ ಆ ಮುಮುಕ್ಷುವನ್ನು ಯೋಗಿಯೆಂದು ಹೇಳುವರು. ಯೋಗ ಸಿದ್ಧಿಯಾಗುವುದಕ್ಕಿಂತ ಮುಂಚಿತವಾಗಿ ಯೋಗಾಭ್ಯಾಸವನ್ನು ಮಾಡುತ್ತಿರುವನನ್ನು ಯೋಗಯುಕ್ತನೆಂದೂ ಪರಬ್ರಹ್ಮ ವಸ್ತುವನ್ನು ತಿಳಿದವನನ್ನು ಸಮಾಧಿ ಸಿದ್ಧನೆಂದೂ ಹೇಳುವರು.

೩೪-೩೫. ಯೋಗಾಭ್ಯಾಸ ಮಾಡತಕ್ಕವನಿಗೆ ಆಲಸ್ಯಾದಿ ಹತ್ತು ಬಗೆಯ ವಿಘ್ನಗಳಿಂದ ಮನಸ್ಸು ದುಷ್ಟವಾದರೆ ಮತ್ತೊಂದು ಜನ್ಮದಲ್ಲಿ ಮುಕ್ತಿಯುಂಟಾಗುವುದು. (ಆಲಸ್ಯ, ರೋಗಗಳು. ತಪ್ಪು ಮಾಡುವುದು, ಅಪಾಯವಾದ ಸ್ಥಳದಲ್ಲಿ ವಾಸಮಾಡುವುದು, ಸ್ಥಿರಮಿತ ಚಿತ್ತವಿಲ್ಲದಿರುವುದು, ನಂಬಿಕೆಯಿಲ್ಲದಿರುವುದು, ಭ್ರಾಂತಿ, ದುಃಖಗಳು, ಕೆಟ್ಟಮನಸ್ಸು, ವಿಷಯಾಸಕ್ತಿ ಈ ಹತ್ತೂ ಯೋಗಕ್ಕೆ ವಿಘ್ನಗಳು) ಯೋಗಸಿದ್ಧಿಯಾದವನು ಯೋಗಾಗ್ನಿಯಿಂದ ತನ್ನ ಕರ್ಮಗಳನ್ನೆಲ್ಲ ಬೇಗ ನಾಶಮಾಡಿಕೊಂಡು ಅವೇ ಜನ್ಮದಲ್ಲಿ ಮೋಕ್ಷವನ್ನು ಪಡೆವನು.

ಬ್ರಹ್ಮಚರ್ಯಮಹಿಂಸಾಂ ಚ ಸತ್ಯಾಸ್ತೇಯಾಪರಿಗ್ರಹಾನ್ ।
ಸೇವೇತ ಯೋಗೀ ನಿಷ್ಕಾಮೋ ಯೋಗ್ಯತಾಂ ಸ್ವಮನೋ ನಯನ್ ॥೬೬॥

ಸ್ವಾಧ್ಯಾಯಶೌಚಸಂತೋಷತಪಾಂಸಿ ನಿಯತಾತ್ಮವಾನ್ ।
ಕುರ್ವೀತ ಬ್ರಹ್ಮಣಿ ತಥಾ ಪರಸ್ಮಿನ್ ಪ್ರವಣಂ ಮನಃ ॥ ೬೭ ॥

ಏತೇ ಯಮಾಸ್ತನಿಯಮಾಃ ಪಂಚ ಪಂಚ ಚ ಕೀರ್ತಿತಾಃ ।
ವಿಶಿಷ್ಟಫಲದಾಃ ಕಾಮ್ಯಾ ನಿಷ್ಕಾಮಾನಾಂ ವಿಮುಕ್ತಿದಾ ॥ ೬೮ ॥

ಏಕಂ ಭದ್ರಾಸನಾದೀನಾಂ ಸಮಾಸ್ಥಾಯ ಗುಣೈರ್ಯುತಃ ।
ಯಮಾಭ್ಯೈರ್ನಿಯಮಾಭ್ಯೈಶ್ಚ ಯುಂಜೀತ ನಿಯತೋ ಯತಿಃ ॥ ೬೯ ॥

೬೬-೬೮. ಯೋಗಿಯಾದವನು ತನ್ನ ಮನಸ್ಸಿಗೆ ಬ್ರಹ್ಮಜ್ಞಾನವು ಪ್ರವೇಶಿಸುವ ಯೋಗ್ಯತೆಯನ್ನುಂಟುಮಾಡುವುದಕ್ಕಾಗಿ ಬ್ರಹ್ಮಚರ್ಯ, ಅಹಿಂಸೆ, ಸತ್ಯ, ಅಸ್ತೇಯ, ಅಪರಿಗ್ರಹ ಎಂಬ ಐದು ಇಂದ್ರಿಯ ನಿಗ್ರಹ ರೂಪವಾದ ಯಮವೆಂಬ ಯೋಗಾಂಗವನ್ನು ಅಭ್ಯಾಸಮಾಡಬೇಕು. ಮನಸ್ಸು ಪರಬ್ರಹ್ಮನಲ್ಲಿ ವಿಶೇಷವಾಗಿ ಆಸಕ್ತವಾಗುವುದಕ್ಕಾಗಿ ಸ್ವಾಧ್ಯಾಯವೆಂಬ ವೇದ ಮಂತ್ರ ಜಪ, ಶುಚಿತ್ವ, ತೃಪ್ತಿ, ತಪಸ್ಸು, ಈಶ್ವರಪ್ರಣಿಧಾನವೆಂಬ ಚಿತ್ತವನ್ನು ಪರಬ್ರಹ್ಮನಲ್ಲಿ ಏಕಾಗ್ರವಾಗಿ ನಿಲ್ಲಿಸುವಿಕೆ ಎಂಬ ಐದು ನಿಯಮಗಳನ್ನು ಅಭ್ಯಾಸ ಮಾಡಬೇಕು. ಏನು ಐದಾವ ಈ ಯಮನಿಯಮಗಳು ಫಲಾಪೇಕ್ಷೆಯವರಿಗೆ ವಿಶೇಷ ಫಲವನ್ನು ಕೊಡತಕ್ಕುದಾಗಿಯೂ ನಿಷ್ಕಾಮಿಗಳಿಗೆ ಮುಕ್ತಿಯನ್ನು ಕೊಡತಕ್ಕುದಾಗಿಯೂ ಇರುವುದು.

೬೯-೭೦. ಯೋಗಿಯಾದವನು ಯಮನಿಯಮ ರೂಪವಾದ ಗುಣಗಳಿಂದ ಕೂಡಿ ಹೆಚ್ಚುಕಾಲ ಸುಖವಾಗಿ ಕುಳಿತುಕೊಳ್ಳಲು ಅನುಕೂಲವಾದ ಯೋಗಶಾಸ್ತ್ರದಲ್ಲಿ ಹೇಳುವ ಭದ್ರಾಸನಾದಿಗಳಲ್ಲಿ ಒಂದನ್ನಾಶ್ರಯಿಸಿ ಯೋಗಾಭ್ಯಾಸವನ್ನು ಮಾಡಬೇಕು. ಅಭ್ಯಾಸ ಬಲದಿಂದ ಪ್ರಾಣವಾಯುವನ್ನು ತನ್ನಧೀನ ಮಾಡಿಕೊಳ್ಳುವುದೇ ಪ್ರಾಣಾಯಾಮವೆನಿಸುವುದು. ಇದರಲ್ಲಿ ಸಬೀಜ, ನಿರ್ಬೀಜವೆಂದು

ಪ್ರಾಣಾಖ್ಯಮನಿಲಂ ವಶ್ಯಮಭ್ಯಾಸಾತ್ಕುರುತೇ ತು ಯತ್ ।
ಪ್ರಾಣಾಯಾಮಸ್ಸ ವಿಜ್ಞೇಯಸ್ಸ ಬೀಜೋಽಬೀಜ ಏವ ಚ ॥ ೪೦ ॥

ಪರಸ್ಪರೇಣಾಭಿಭವಂ ಪ್ರಾಣಾಪಾನೌ ಯಥಾನಿಲೌ ।
ಕುರುತಸ್ಸದ್ವಿಧಾಽನೇನ ತೃತೀಯಸ್ಸಂಯಮಾತ್ತಯೋಃ ॥ ೪೧ ॥

ತಸ್ಯ ಚಾಲಂಬನವತಸ್ಸ್ಥೂಲರೂಪಂ ದ್ವಿಜೋತ್ತಮ ।
ಆಲಂಬನಮನಂತಸ್ಯ ಯೋಗಿನೋಽಭ್ಯಸತಃ ಸ್ಮೃತಂ ॥ ೪೨ ॥

ಎರಡು ವಿಧವಿರುವುದು. ಮೂರ್ತಿ ಧ್ಯಾನ, ಮಂತ್ರಜಪ ಮುಂತಾದುವುಗಳಿಂದ ಕೂಡಿದುದು ಸಬೀಜ, ಸಗರ್ಭ ಅಥವಾ ಸಾಲಂಬನವೆನಿಸುವುದು. ಇವುಗಳಿಲ್ಲದುದು ನಿರ್ಬೀಜ ಅಥವಾ ನಿರಾಲಂಬನವೆನಿಸುವುದು.

೪೧-೪೨. ಉಚ್ಛ್ವಾಸ ಕಾರ್ಯದಿಂದ ಬಾಯಿ ಮೂಗುಗಳಿಂದ ಹೊರಗೆ ಬರುವುದು ಪ್ರಾಣವಾಯುವು. ನಿಶ್ವಾಸಕಾರ್ಯದಿಂದ ಶರೀರದೊಳಗೆ ಪ್ರವೇಶಿಸುವುದು ಅಪಾನವಾಯುವು. ಪ್ರಾಣ ವೃತ್ತಿಯಿಂದ ಅಪಾನವೃತ್ತಿಗೆ ತಡೆಯುಂಟಾದರೆ ಅಂದರೆ ಶರೀರದೊಳಗಿನಿಂದ ಹೊರಕ್ಕೆ ವಾಯುವು ಹೋಗುತ್ತಿದ್ದು ಒಳಗೆ ಪ್ರವೇಶಿಸುವ ವಾಯುವಿಗೆ ತಡೆಯುಂಟಾದರೆ ರೇಚಕವೆಂತಲೂ ಅಪಾನವೃತ್ತಿಯಿಂದ ಪ್ರಾಣವೃತ್ತಿಗೆ ತಡೆಯುಂಟಾದರೆ ಅಂದರೆ ಹೊರಗಿನಿಂದ ಶರೀರದೊಳಕ್ಕೆ ವಾಯುವು ಪ್ರವೇಶಿಸುತ್ತಿದ್ದು ಹೊರಕ್ಕೆ ಹೋಗುವ ವಾಯುವಿಗೆ ತಡೆಯುಂಟಾದರೆ ಪೂರಕವೆಂದೂ ಹೆಸರಾಗುವುದು. ಇವೆರಡೂ ಇಲ್ಲದಿರುವ ಸ್ಥಿತಿಯೇ ಕುಂಭಕವೆನಿಸುವುದು. ಸದ್ಗುರೂಪದೇಶವನ್ನನುಸರಿಸಿ ಈ ಮೂರನ್ನೂ ಮಾಡಿದರೆ ಒಂದು ಪ್ರಾಣಾಯಾಮವೆನಿಸುವುದು. ಈ ಪ್ರಾಣಾಯಾಮವನ್ನು ಮಾಡುವಾಗ ಸ್ಥೂಲವಾದ ಭಗವಂತನ ಮೂರ್ತಿಯಲ್ಲಿ ಮನಸ್ಸನ್ನು ನೆಲೆಗೊಳಿಸಿದರೂ ಮಂತ್ರಾರ್ಥ ಭಾವನೆಯಿಂದ ಮಂತ್ರ ಜಪ ಮಾಡುತ್ತಿದ್ದರೂ ಸಗರ್ಭ ಅಥವಾ ಸಬೀಜವೆನಿಸುವುದು. ಇವುಗಳಿಲ್ಲದುದು ನಿರ್ಬೀಜವು. ಅಗರ್ಭ ಪ್ರಾಣಾಯಾಮಕ್ಕಿಂತ ಸಗರ್ಭ ಪ್ರಾಣಾಯಾಮವು ನೂರು ಪಾಲು ಹೆಚ್ಚಿನದಾಗಿರುವುದು. ಆದುದರಿಂದ ಪ್ರಾಣಾಯಾಮ ಕಾಲದಲ್ಲಿ ಯೋಗಿಯ ಮನಸ್ಸು ಭಗವಂತನ ಸ್ಥೂಲರೂಪವನ್ನು ಆಶ್ರಯಿಸಿರಬೇಕೆಂದು ಅಭಿಪ್ರಾಯವಾಯ್ತು. ಅಥವಾ ಮಂತ್ರಾರ್ಥ ಭಾವನೆಯಿಂದ ಮಂತ್ರ ಜಪಾಸಕ್ತವಾಗಿರಬೇಕು.

ಶಬ್ದಾದಿಷ್ವನುರಕ್ತಾನಿ ನಿಗೃಹ್ಯಾಕ್ಷಾಣಿ ಯೋಗವಿತ್ ।
ಕುರ್ಯಾಚ್ಚಿತ್ತಾನುಸಾರೀಣಿ ಪ್ರತ್ಯಾಹಾರಪರಾಯಣಃ ॥ ೪೩ ॥

ವಶ್ಯತಾ ಪರಮಾ ತೇನ ಜಾಯತೇತಿ ಚಲಾತ್ಮನಾಂ ।
ಇಂದ್ರಿಯಾಣಾಮವಶ್ಯೈಸ್ತೈರ್ನ ಯೋಗೀ ಯೋಗಸಾಧಕಃ ॥ ೪೪ ॥

ಪ್ರಾಣಾಯಾಮೇನ ಪವನೇ ಪ್ರತ್ಯಾಹಾರೇಣ ಚೇಂದ್ರಿಯೇ ।
ವಶೀಕೃತೇ ತತಃ ಕುರ್ಯಾತ್ ಸ್ಥಿತಂ ಚೇತಶ್ಶುಭಾಶ್ರಯೇ ॥ ೪೫ ॥

॥ ಖಾಂಡಿಕ್ಯಃ ॥

ಕೇಶಧ್ವಜಾಂ ಮೇ ಮಹಾಭಾಗ ಚೇತಸೋ ಯಶ್ಶುಭಾಶ್ರಯಃ ।
ಯದಾಧಾರಮಶೇಷಂ ತದ್ಧಂತಿ ದೋಷಮುಲೋದ್ಭವಂ ॥ ೪೬ ॥

೪೩-೪೫. ಶಬ್ದಾದಿ ವಿಷಯಗಳಲ್ಲಿ ಆಸಕ್ತವಾದ ಇಂದ್ರಿಯಗಳನ್ನು ನಿಗ್ರಹಿಸಿ ಮನಸ್ಸನ್ನನುಸರಿಸುವಂತೆ ಮಾಡುವುದು ಪ್ರತ್ಯಾಹಾರವೆನಿಸುವುದು. ಇದರಿಂದ ಇಂದ್ರಿಯಗಳು ಮನಸ್ಸಿಗೆ ಅಧೀನವಾಗುವುವು. ಇಂದ್ರಿಯಗಳು ಅಧೀನವಾಗದಿದ್ದರೆ ಯೋಗಿಯು ಯೋಗಸಾಧನೆಯನ್ನು ಮಾಡಲಾಗುವುದಿಲ್ಲ. ಪ್ರಾಣಾಯಾಮದಿಂದ ವಾಯುವೂ ಪ್ರತ್ಯಾಹಾರದಿಂದ ಇಂದ್ರಿಯಗಳೂ ವಶವಾದಮೇಲೆ ಮನಸ್ಸನ್ನು ಶುಭವಾದ ಒಂದು ಆಶ್ರಯ ಸ್ಥಾನದಲ್ಲಿ ನೆಲೆಗೊಳಿಸಬೇಕು. ಇದೇ ಧಾರಣೆಯೆನಿಸುವುದು.

೪೬. ಖಾಂಡಿಕ್ಯನು 'ಮಹಾಮಹಿಮನಾದ ಕೇಶಿಧ್ವಜನೇ! ಮನಸ್ಸಿಗೆ ಯೋಗಾಭ್ಯಾಸಕ್ಕೆ ಉಂಟಾಗುವ ದೋಷ ಮೂಲಗಳೆಂಬ ವಿಘ್ನಗಳನ್ನು ನಾಶ ಮಾಡುವ ಶುಭಾಶ್ರಯವು ಯಾವುದು?' ಎಂದು ಪ್ರಶ್ನೆ ಮಾಡಿದನು.

॥ ಕೇತಿಧ್ವಜಃ ॥

ಆಶ್ರಯಶ್ಚೇತಸೋ ಬ್ರಹ್ಮ ದ್ವಿಧಾ ತಚ್ಚ ಸ್ವಭಾವತಃ ।
ಭೂಪ ಮೂರ್ತಮಮೂರ್ತಂ ಚ ಪರಂ ಚಾಪರಮೇವ ಚ ॥ ೪೭ ॥

ತ್ರಿವಿಧಾ ಭಾವನಾ ಭೂಪ ವಿಶ್ವಮೇತನ್ನಿಬೋಧತಾಂ ।
ಬ್ರಹ್ಮಾಖ್ಯಾ ಕರ್ಮಸಂಜ್ಞಾ ಚ ತಥಾ ಚೈವೋಭಯಾತ್ಮಿಕಾ ॥ ೪೮ ॥

ಕರ್ಮಭಾವಾತ್ಮಿಕಾ ಹ್ಯೇಕಾ ಬ್ರಹ್ಮಭಾವಾತ್ಮಿಕಾ ಪರಾ ।
ಉಭಯಾತ್ಮಿಕಾ ತಥೈವಾನ್ಯಾ ತ್ರಿವಿಧಾ ಭಾವಭಾವನಾ ॥ ೪೯ ॥

ಸನಂದನಾದಯೋ ಯೇ ತು ಬ್ರಹ್ಮಭಾವನಯಾ ಯುತಾಃ ।
ಕರ್ಮಭಾವನಯಾ ಚಾನ್ಯೇ ದೇವಾದ್ಯಾಃ ಸ್ಥಾವರಾ ವರಾಃ ॥ ೫೦ ॥

ಹಿರಣ್ಯಗರ್ಭಾದಿಷು ತು ಬ್ರಹ್ಮಕರ್ಮಾತ್ಮಿಕಾ ದ್ವಿಧಾ ।
ಬೋಧಾಧಿಕಾರಯುಕ್ತೇಷು ವಿದ್ಯತೇ ಭಾವಭಾವನಾ ॥ ೫೧ ॥

---

೪೭. ಕೇತಿಧ್ವಜನು ಹೇಳುವನು : —' ಎಲೈ ರಾಜನೇ ! ಮನಸ್ಸಿಗೆ ಆಶ್ರಯವಾದುದು. ಪರಬ್ರಹ್ಮ ತತ್ವನೇ ಆಗಿರುವುದು. ಆ ತತ್ವವು ಅಧಿಕಾರಿ ಭೇದದಿಂದ ಸ್ವಾಭಾವಿಕವಾಗಿ ಮೂರ್ತ ಅಮೂರ್ತ ಪರ ಅಪರ ಎಂದು ನಾಲ್ಕು ಭೇದವಾಗಿರುವುದು. ಅವುಗಳಲ್ಲಿ ಅಮೂರ್ತವೂ ಪರವೂ ಆದುದು ನಿರ್ಗುಣ ಬ್ರಹ್ಮ ತತ್ವವು. ಅಮೂರ್ತವೂ ಅಪರವೂ ಆದುದು. ಷಡ್ಗುಣೈಶ್ವರ್ಯ ರೂಪವಾದ ಬ್ರಹ್ಮತತ್ವವು ಮೂರ್ತವೂ, ಪರವೂ ಆದುದು ಪದ್ಮನಾಭನೇ ಮೊದಲಾದ ಲೀಲಾವಿಗ್ರಹರೂಪವು. ಮೂರ್ತವೂ ಅಪರವೂ ಆದುದು ಹಿರಣ್ಯಗರ್ಭನೇ ಮೊದಲಾದ ಪ್ರಪಂಚಸ್ವರೂಪವು. ಒಟ್ಟಿನಲ್ಲಿ ಪರಬ್ರಹ್ಮ ಈಶ್ವರ ಲೀಲಾಮೂರ್ತ ವಿಶ್ವರೂಪ ಎಂದು ನಾಲ್ಕು ಭೇದಗಳು.

೪೮-೫೧. ರಾಜನೇ ! ನಾಲ್ಕನೆಯದಾದ ವಿಶ್ವರೂಪವು ಭಾವನಾಶ್ರಯವಾದ ಜೀವಸ್ವರೂಪದಿಂದ ಬ್ರಹ್ಮ ಭಾವನಾ, ಕರ್ಮ ಭಾವನಾ, ಉಭಯ ಭಾವನಾ ಎಂದು ಮೂರುಬಗೆಯಾಗಿರುವುದು. ಸನಂದನಾದಿಗಳು ಬ್ರಹ್ಮಭಾವನೆಯುಳ್ಳವರು. ದೇವಾದಿಗಳೂ ಕರ್ಮಭಾವನೆಯುಳ್ಳವರು. ಸ್ಥಾವರಾಭಿಮಾನಿಗಳಾದ ಹಿಮವದಾದಿಗಳೂ ಹಿರಣ್ಯಗರ್ಭಾದಿಗಳು ಉಭಯಭಾವನೆಯುಳ್ಳವರು. ಜ್ಞಾನ ಮತ್ತು ಅಧಿಕಾರಗಳಿಂದ ಕೂಡಿದ ಜೀವರುಗಳಲ್ಲಿ ಈ ಭಾವನೆಗಳು ಇರುವುವು.

ಅಕ್ಷೀಣೇಷು ಸಮಸ್ತೇಷು ವಿಶೇಷಜ್ಞಾನಕರ್ಮಸು ।
ವಿಶ್ವಮೇತತ್ಪರಂ ಚಾನ್ಯತ್ ಭೇದಭಿನ್ನದೃಶಾಂ ನೃಣಾಂ ॥ ೫೨ ॥

ಪ್ರತ್ಯಸ್ತಮಿತಭೇದಂ ಯತ್ಸತ್ತಾಮಾತ್ರಮಗೋಚರಂ ।
ವಚಸಾಮಾತ್ಮಸಂವೇದ್ಯಂ ತದ್ಜ್ಞಾನಂ ಬ್ರಹ್ಮಸಂಜ್ಞಿತಂ ॥ ೫೩ ॥

ತಚ್ಚ ವಿಷ್ಣೋಃ ಪರಂ ರೂಪಮರೂಪಾಖ್ಯಮನುತ್ತಮಂ ।
ವಿಶ್ವಸ್ವರೂಪವೈರೂಪ್ಯಲಕ್ಷಣಂ ಪರಮಾತ್ಮನಃ ॥ ೫೪ ॥

ನ ತದ್ಯೋಗಯುಜಾ ಶಕ್ಯಂ ನೃಪಚಿಂತಯಿತುಂ ಯತಃ ।
ತತಃ ಸ್ಥೂಲಂ ಹರೇ ರೂಪಂ ಚಿಂತಯೇದ್ವಿಶ್ವಗೋಚರಂ ॥ ೫೫ ॥

ಹಿರಣ್ಯಗರ್ಭೋ ಭಗವಾನ್ ವಾಸುದೇವಃ ಪ್ರಜಾಪತಿಃ ।
ಮರುತೋ ವಸವೋ ರುದ್ರಾ ಭಾಸ್ಕರಾಸ್ತಾರಕಾ ಗ್ರಹಾಃ ॥ ೫೬ ॥

೫೨-೫೫. ವಿಶೇಷಜ್ಞಾನಕಾರಣವಾದ ಕರ್ಮಗಳು ನಿಶ್ಶೇಷವಾಗಿ ಕ್ಷೀಣವಾದ ಜೀವರಿಗೆ ಈ ಪ್ರಪಂಚವು ಪರಬ್ರಹ್ಮ ಸ್ವರೂಪವಾಗಿ ಕಾಣುವುದು. ಭೇದದೃಷ್ಟಿಯುಳ್ಳವರಿಗೆ ಬೇರೆ ವಿಧವಾಗಿ ಕಾಣುವುದು. ಅದುದರಿಂದ ಬ್ರಹ್ಮಭಾವನೆಯುಳ್ಳ ಸನಂದನಾದಿಗಳಿಗೆ ದೇಹಾನು ಸಂಧಾನವು ನಿವೃತ್ತಿಯಾಗದಿರುವುದರಿಂದ ಅವರೂ ಜೀವರೆಂದೇ ತಿಳಿಯಬೇಕು. ಭೇದಭಾವವು ಸಂಪೂರ್ಣವಾಗಿ ನಾಶವಾದರೆ ಸತ್ತಾಸ್ವರೂಪವೂ, ಮನಸ್ಸಿಗೂ, ಮಾತಿಗೂ ಅಗೋಚರವೂ, ಸ್ವಾನುಭವ ಸ್ವರೂಪವೂ ಆಗಿರುವ ಜ್ಞಾನವೇ ಪರಬ್ರಹ್ಮತತ್ವವೆನಿಸುವುದು. ಅದೇ ವಿಷ್ಣುವಿನ ಶ್ರೇಷ್ಠವಾದ ನಿರ್ಗುಣಸ್ವರೂಪವು. ಪ್ರಪಂಚ ಸ್ವರೂಪನಾದ ಪರಮಾತ್ಮನ ರೂಪಕ್ಕಿಂತ ಭಿನ್ನವಾದುದು. ಯೋಗಾಭ್ಯಾಸಮಾಡತಕ್ಕವನು ನಿರ್ಗುಣಸ್ವರೂಪವನ್ನು ಧ್ಯಾನ ಮಾಡಲು ಸಾಧ್ಯವಿಲ್ಲದುದರಿಂದ ಪ್ರಪಂಚದಲ್ಲಿ ರೂಢಿಯಲ್ಲಿರುವ ಹರಿಯ ಸ್ಥೂಲ ರೂಪವನ್ನು ಧ್ಯಾನಮಾಡಬೇಕು.

೫೬–೬೦. ಹಿರಣ್ಯಗರ್ಭನೆಂಬ ವಿರಾಟ್ಪುರುಷನೂ, ಚತುರ್ಮುಖಬ್ರಹ್ಮನೂ ದೇವತೆಗಳೂ, ವಸುಗಳೂ, ರುದ್ರರೂ, ಸೂರ್ಯರೂ, ನಕ್ಷತ್ರಗಳು, ಗ್ರಹಗಳು,

ಗಂಧರ್ವಯಕ್ಷದೈತ್ಯಾದ್ಯಾಸ್ಸಕೆಲಾ ದೇವಯೋನ ಯಃ ।
ಮನುಷ್ಯಾಃ ಪಶವಶ್ಶೈಲಾಸ್ಸಮುದ್ರಾಸ್ಸರಿತೋ ದ್ರುಮಾಃ ॥ ೫೭ ॥

ಭೂಪ ಭೂತಾನ್ಯಶೇಷಾಣಿ ಭೂತಾನಾಂ ಯೇ ಚ ಹೇತವಃ ।
ಪ್ರಧಾನಾದಿವಿಶೇಷಾಂತಂ ಚೇತನಾ ಚೇತನಾತ್ಮಕಂ ॥ ೫೮ ॥

ಏಕಪಾದಂ ದ್ವಿಪಾದಂ ಚ ಬಹುಪಾದಮಪಾದಕಂ ।
ಮೂರ್ತಮೇತದ್ಧರೇ ರೂಪಂ ಭಾವನಾ ತ್ರಿತಯಾತ್ಮಕಂ ॥ ೫೯ ॥

ಏತತ್ಸರ್ವಮಿದಂ ವಿಶ್ವಂ ಜಗದೇತಚ್ಚರಾಚರಂ ।
ಪರಬ್ರಹ್ಮಸ್ವರೂಪಸ್ಯ ವಿಷ್ಣೋಃಶಕ್ತಿಸಮನ್ವಿತಂ ॥ ೬೦ ॥

ವಿಷ್ಣುಶಕ್ತಿಃ ಪರಾ ಪ್ರೋಕ್ತಾ ಕ್ಷೇತ್ರಜ್ಞಾಖ್ಯಾ ತಥಾ ಪರಾ ।
ಅವಿದ್ಯಾಕರ್ಮಸಂಜ್ಞಾನ್ಯಾ ತೃತೀಯಾ ಶಕ್ತಿರಿಷ್ಯತೇ ॥ ೬೧ ॥

ಯಯಾ ಕ್ಷೇತ್ರಜ್ಞ ಶಕ್ತಿಸ್ಸಾ ವೇಷ್ಟಿತಾ ನೃಪ ಸರ್ವಗಾ ।
ಸಂಸಾರತಾಪಾನಖಿಲಾನ್ ಅವಾಪ್ನೋತ್ಯತಿ ಸಂತತಾನ್ ॥ ೬೨ ॥

ಗಂಧರ್ವರು, ಯಕ್ಷರು, ದೈತ್ಯರು, ಮನುಷ್ಯರು, ಪಶುಗಳು, ಪರ್ವತ, ಸಮುದ್ರ, ನದಿ, ಮರ ಮುಂತಾದುವುಗಳು ಪಂಚಭೂತಗಳು. ಪ್ರಕೃತಿ ಮೊದಲಾಗಿ ಭೂಮಿಯೇ ಕೊನೆಯಾದ ಸಮಸ್ತ ಚರಾಚರಗಳೂ ಒಂದು ಪಾದ ಎರಡು ಮೂರು ಅನೇಕ ಪಾದಗಳುಳ್ಳವು ಪಾದಗಳೇ ಇಲ್ಲದುವು ಇವುಗಳಿಂದ ಕೂಡಿದ ಸಮಸ್ತ ಪ್ರಪಂಚವೂ ಭಾವನಾತ್ರಯಗಳಿಂದ ಕೂಡಿ ಪರಬ್ರಹ್ಮಸ್ವರೂಪನಾದ ವಿಷ್ಣುವಿನ ಶಕ್ತಿಯಿಂದ ಕೂಡಿದುದಾಗಿರುವುದು.

೬೧. ವಿಷ್ಣುಶಕ್ತಿಯಲ್ಲಿ ಪರಾಶಕ್ತಿಯೆಂದೂ ಕ್ಷೇತ್ರಜ್ಞವೆಂಬ ಅಪರಾಶಕ್ತಿಯೆಂದೂ, ಅವಿದ್ಯಾಶಕ್ತಿಯೆಂದೂ ಮೂರು ಶಕ್ತಿಗಳಿರುವುವು.

೬೨-೬೩. ಕ್ಷೇತ್ರಜ್ಞಶಕ್ತಿಯು ಸರ್ವಗತವಾದುದಾದರೂ ಅವಿದ್ಯಾವೃತವಾದುದರಿಂದ ಭೇದವನ್ನು ಹೊಂದಿ ಕರ್ಮಗಳಿಂದ ಸಂತತವಾಗಿ ಸಂಸಾರ ತಾಪ

ತಯಾ ತಿರೋಹಿತತ್ವಾಚ್ಚ ಶಕ್ತಿಃ ಕ್ಷೇತ್ರಜ್ಞಸಂಜ್ಞಿತಾ ।
ಸರ್ವಭೂತೇಷು ಭೂಪಾಲ ತಾರತಮ್ಯೇ ನ ಲಕ್ಷ್ಯತೇ ॥ ೬೩ ॥

ಅಸ್ಪಾಣವತ್ಸು ಸ್ವಲ್ಪಾ ಸಾ ಸ್ಥಾವರೇಷು ತತೋಽಧಿಕಾ ।
ಸರೀಸೃಪೇಷು ತೇಭ್ಯೋಽಪಿ ಹ್ಯತಿಶಕ್ತ್ಯಾ ಪತತ್ರಿಷು ॥ ೬೪ ॥

ಪತತ್ರಿಭ್ಯೋ ಮೃಗಾಸ್ತೇಭ್ಯಸ್ತಚ್ಛಕ್ತ್ಯಾ ಪಶವೋಧಿಕಾಃ ।
ಪಶುಭ್ಯೋ ಮನುಜಾಶ್ಚಾತಿ ಶಕ್ತ್ಯಾ ಪುಂಸಃ ಪ್ರಭಾವಿತಾಃ ॥ ೬೫ ॥

ತೇಭ್ಯೋಽಪಿ ನಾಗಗಂಧರ್ವಯಕ್ಷಾದ್ಯಾ ದೇವತಾ ನೃಪ ॥ ೬೬ ॥

ಶಕ್ರಸ್ತಮಸ್ತದೇವೇಭ್ಯಸ್ತತಶ್ಚಾತಿ ಪ್ರಜಾಪತಿಃ ।
ಹಿರಣ್ಯಗರ್ಭೋಽಪಿ ತತಃ ಪುಂಸಶ್ಯಕ್ತ್ಯಾಪಲಕ್ಷಿತಃ ॥ ೬೭ ॥

ಗಳನ್ನು ಪಡೆಯುತ್ತಿರುವುದು ಕ್ಷೇತ್ರಜ್ಞಶಕ್ತಿಯು ಅವಿದ್ಯೆಯಿಂದ ಆವೃತವಾಗಿರುವುದರಿಂದಲೇ ಜೀವರುಗಳು ಹೆಚ್ಚು ಕಡಿಮೆಯಾದ ಸುಖ ದುಃಖಗಳನ್ನು ಕರ್ಮಾಧೀನರಾಗಿ ಅನುಭವಿಸುತ್ತಿರುವರು.

೬೪-೬೮. ಕ್ಷೇತ್ರಜ್ಞಶಕ್ತಿಯು ಜ್ಞಾನಾನಂದಾದಿ ರೂಪದಿಂದ ಪ್ರಾಣವಿಲ್ಲದ ಕಟ್ಟೆಗೆ, ಕಲ್ಲು, ಮುಂತಾದುವುಗಳಲ್ಲಿ ಅತ್ಯಲ್ಪವಾಗಿರುವುದು. ಪ್ರಾಣವಿರುವ ಸಸ್ಯಾದಿಗಳಲ್ಲಿ ಅವಕ್ಕಿಂತ ಹೆಚ್ಚು ಹುಳುಗಳೇ ಮುಂತಾದ ಕ್ಷುದ್ರಜಂತುಗಳಲ್ಲಿ ಅದಕ್ಕಿಂತ ಹೆಚ್ಚಾಗಿರುವುದು. ಪಕ್ಷಿಗಳಲ್ಲಿ ಮತ್ತೂ ಹೆಚ್ಚಾಗಿರುವುದು. ಇದೇ ಕ್ರಮದಲ್ಲಿ ಮೃಗಗಳು, ಪಶುಗಳು, ಮನುಷ್ಯರು, ನಾಗರು, ಗಂಧರ್ವರು, ಯಕ್ಷರು ದೇವತೆಗಳು ಇವರಲ್ಲಿ ಜ್ಞಾನ ಶಕ್ತಿಯು ಹೆಚ್ಚುತ್ತ ಬರುವುದು. ಎಲ್ಲ ದೇವತೆಗಳಿಗಿಂತ ದೇವೇಂದ್ರನಲ್ಲಿ ಹೆಚ್ಚು ಜ್ಞಾನ ಶಕ್ತಿಯಿರುವುದು. ಅವನಿಗಿಂತ ಚತುರ್ಮುಖ ಬ್ರಹ್ಮನೂ, ಅವನಿಗಿಂತ ಹಿರಣ್ಯಗರ್ಭನೂ, ಹೆಚ್ಚು ಶಕ್ತಿಯುಳ್ಳವರು,

ಏತಾನ್ಯಶೇಷರೂಪಾಣಿ ತಸ್ಯ ರೂಪಾಣಿ ಪಾರ್ಥಿವ ।
ಯತಸ್ತಚ್ಛಕ್ತಿಯೋಗೇನ ಯುಕ್ತಾನಿ ನಭಸಾ ಯಥಾ ॥ ೬೪ ॥

ದ್ವಿತೀಯಂ ವಿಷ್ಣುಸಂಜ್ಞಸ್ಯ ಯೋಗಿಧ್ಯೇಯಂ ಮಹಾಮತೇ ।
ಅಮೂರ್ತಂ ಬ್ರಹ್ಮಣೋ ರೂಪಂ ಯತ್ಸದಿತ್ಯುಚ್ಯತೇ ಬುಧೈಃ ॥ ೬೯ ॥

ಸಮುಸ್ತಾಶ್ಶಕ್ತಯಶ್ಚೈತಾ ನೃಪ ಯತ್ರ ಪ್ರತಿಷ್ಠಿತಾಃ ।
ತದ್ವಿಶ್ವರೂಪ ವೈರೂಪ್ಯಂ ರೂಪಮನ್ಯದ್ಧರೇರ್ಮಹತ್ ॥ ೭೦ ॥

ಸಮುಸ್ತಶಕ್ತಿರೂಪಾಣಿ ತಸ್ಯರೋತಿ ಜನೇಶ್ವರ ।
ದೇವತಿರ್ಯಙ್ಮನುಷ್ಯಾದಿಚೇಷ್ಟಾವಂತಿ ಸ್ವಲೀಲಯಾ ॥ ೭೧ ॥

ರಾಜನೇ ಈ ಸಮಸ್ತ ರೂಪಗಳೂ ಆ ಮಹಾವಿಷ್ಣುವಿನ ರೂಪಗಳೇ ಆದರೂ ಆಕಾಶವು ಯಾವುದಕ್ಕೂ ಸಂಬಂಧಿಸದೆ ಸರ್ವವ್ಯಾಪಿಯಾಗಿರುವಂತೆ ಮಹಾವಿಷ್ಣುವು ಅಸಂಗನಾಗಿ ಶಕ್ತಿಸಂಬಂಧದಿಂದ ಸರ್ವವ್ಯಾಪಿಯಾಗಿರುವನು.

೬೯-೭೨. ಮಹಾವಿಷ್ಣುವಿನ ಅಮೂರ್ತರೂಪಗಳಲ್ಲಿ ಮೊದಲನೆಯದು ಪರ ಬ್ರಹ್ಮರೂಪವು. ಎರಡನೆಯ ಅಮೂರ್ತರೂಪವು ಸತ್ ಎಂಬ ಶಬ್ದಕ್ಕೆ ಅರ್ಥವಾದ ಈಶ್ವರ ರೂಪವು ಅದನ್ನು ಸಿದ್ಧರಾದ ಯೋಗಿಗಳು ಧ್ಯಾನಿಸುವರು. ರಾಜನೇ ಕಾರ್ಯ ರೂಪವಾದ ಸಮಸ್ತ ಶಕ್ತಿಗಳೂ ಸರ್ವಕಾರಣನಾದ ಈಶ್ವರನಲ್ಲಿರುವುವು. ಆದುದರಿಂದ ಈಶ್ವರ ಸ್ವರೂಪವು ಪ್ರಪಂಚ ರೂಪಕ್ಕಿಂತ ವಿಲಕ್ಷಣವಾಗಿ ಸರ್ವೋತ್ಕೃಷ್ಟವಾದು ದಾಗಿರುವುದು. ಆ ಈಶ್ವರ ಸ್ವರೂಪವೇ ಸಮಸ್ತ ಶಕ್ತಿ ಯುತವಾದ ಉಪೇಂದ್ರನೇ ಮೊದಲಾದ ದೇವರೂಪಗಳನ್ನೂ ಮತ್ಸ್ಯಾದಿತಿರ್ಯಗ್ರೂಪಗಳನ್ನೂ ರಾಮಾದಿ ಮನುಷ್ಯ ರೂಪಗಳನ್ನೂ ತನ್ನ ಲೀಲೆಯಿಂದ ಪ್ರಕಟ ಪಡಿಸುವುದು ಆ ಲೀಲಾ

ಜಗತ್ಸಾಮುಪಕಾರಾಯೆ ನ ಸಾ ಕರ್ಮನಿಮಿತ್ತಜಾ ।
ಚೇಷ್ಟಾ ತಸ್ಯಾ ಪ್ರಮೇಯಸ್ಯ ವ್ಯಾಪಿನ್ಯವ್ಯಾಹತಾತ್ಮಿಕಾ ॥ ೭೨ ॥

ತದ್ರೂಪಂ ವಿಶ್ವರೂಪಸ್ಯ ತಸ್ಯ ಯೋಗಯುಜಾ ನೃಪ ।
ಚಿಂತ್ಯಮಾತ್ಮವಿಶುದ್ಧ್ಯರ್ಥಂ ಸರ್ವಕಿಲ್ಬಿಷನಾಶನಂ ॥ ೭೩ ॥

ಯಥಾಗ್ನಿರುದ್ಧತಶಿಖಃ ಕಕ್ಷಂ ದಹತಿ ಸಾನಿಲಃ ।
ತಥಾ ಚಿತ್ತಸ್ಥಿತೋ ವಿಷ್ಣುರ್ಯೋಗಿನಾಂ ಸರ್ವಕಿಲ್ಬಿಷಂ ॥ ೭೪ ॥

ತಸ್ಮಾತ್ಸರ್ವಸ್ಯ ಶಕ್ತೀನಾಮಾಧಾರೇ ತತ್ರ ಚೇತಸಃ ।
ಕುರ್ವೀತ ಸಂಸ್ಥಿತಿಂ ಸಾ ತು ವಿಜ್ಞೇಯಾ ಶುದ್ಧಧಾರಣಾ ॥ ೭೫ ॥

ವತಾರಗಳು ಕರ್ಮಕಾರಣವಾದುವಲ್ಲ. ಲೋಕೋಪಕಾರ ಕಾರಣವಾದುವು. ಅಳತೆಗೆ ಸಿಕ್ಕದ ಮಹಿಮೆಯುಳ್ಳ ಆ ಈಶ್ವರನ ಸ್ವತಂತ್ರವಾದ ಲೀಲೆಯು ಸರ್ವವ್ಯಾಪಿಯಾಗಿ ತಡೆಯಿಲ್ಲದುದಾಗಿರುವುದು.

೭೩-೭೬. ರಾಜನೇ! ವಿಶ್ವರೂಪನಾದ ವಿಷ್ಣುವಿನ ಲೀಲಾವತಾರ ರೂಪಗಳನ್ನು ಯೋಗಾಭ್ಯಾಸಮಾಡುವವನು ಮನಸ್ಸಿನ ಶುದ್ಧಿಗಾಗಿ ಧ್ಯಾನ ಮಾಡಬೇಕು. ಆ ಧ್ಯಾನದಿಂದ ಅವನ ಸಮಸ್ತ ಪಾಪಗಳೂ ನಾಶವಾಗುವುವು. ಉರಿಯುತ್ತಿರುವ ಬೆಂಕಿಯು ಗಾಳಿಯೊಡನೆ ಸೇರಿ ಒಣಗಿದ ಹುಲ್ಲುಮೆದೆಯನ್ನು ಸುಡುವಂತೆ ಯೋಗಿಗಳ ಮನಸ್ಸಿನಲ್ಲಿರುವ ವಿಷ್ಣುವು ಅವರ ಸಮಸ್ತ ಪಾಪಗಳನ್ನೂ ನಾಶಮಾಡುವನು. ಆದುದರಿಂದ ಸಮಸ್ತ ಶಕ್ತಿಗಳಿಗೂ ಆಶ್ರಯವಾದ ವಿಷ್ಣುವಿನ ಅವತಾರ ರೂಪಗಳಲ್ಲಿ ಮನಸ್ಸನ್ನು ನೆಲೆಗೊಳಿಸಬೇಕು. ಇದನ್ನೇ ಶುದ್ಧವಾದ ಧಾರಣೆಯೆಂದು ಹೇಳುವರು. ಸರ್ವವ್ಯಾಪಿಯೂ, ಚಲನೆಯಿಲ್ಲದವನೂ, ಆದ ಪರಬ್ರಹ್ಮನ ಲೀಲಾವಿಗ್ರಹವೇ

ಶುಭಾಶ್ರಯಸ್ಯ ಚಿತ್ತಸ್ಯ ಸರ್ವಗಸ್ಯಾಚಲಾತ್ಮನಃ ।
ತ್ರಿಭಾವಭಾವನಾತೀತೋ ಮುಕ್ತಯೇ ಯೋಗಿನೋ ನೃಪ ॥ ೭೬ ॥

ಅನ್ಯೇ ತು ಪುರುಷವ್ಯಾಘ್ರ ಚೇತಸೋ ಯೇ ವ್ಯಪಾಶ್ರಯಾಃ ।
ಅಶುದ್ಧಾಸ್ತೇ ಸಮಸ್ತಾಸ್ತು ದೇವಾದ್ಯಾಃ ಕರ್ಮಯೋನಯಃ ॥ ೭೭ ॥

ಮೂರ್ತಂ ಭಗವತೋ ರೂಪಂ ಸರ್ವಾಪಾಶ್ರಯನಿಸ್ಪೃಹಂ ।
ಏಷಾ ವೈ ಧಾರಣಾ ಪ್ರೋಕ್ತಾ ಯಚ್ಚಿತ್ತಂ ತತ್ರ ಧಾರ್ಯತೇ ॥ ೭೮ ॥

ಯಚ್ಚ ಮೂರ್ತಂ ಹರೇ ರೂಪಂ ಯಾದೃಕ್ಚಿಂತ್ಯಂ ನರಾಧಿಪ ।
ತಚ್ಚಾಶ್ರಯತಾಮನಾಧಾರಾ ಧಾರಣಾ ನೋಪಪದ್ಯತೇ ॥ ೭೯ ॥

ಪ್ರಸನ್ನವದನಂ ಚಾರು ಪದ್ಮಪತ್ರೋಪಮೇಕ್ಷಣಂ ।
ಸುಕಪೋಲಂ ಸುವಿಸ್ತೀರ್ಣಲಲಾಟಫಲಕೋಜ್ಜ್ವಲಂ ॥ ೮೦ ॥

ಮನಸ್ಸಿಗೆ ಶುಭವಾದ ಆಶ್ರಯ ಸ್ಥಾನವಾಗಿರುವುದು. ಇದರಿಂದ ಯೋಗಿಯು ಬ್ರಹ್ಮ, ಕರ್ಮ, ಉಭಯ ರೂಪವಾದ ಮೂರು ಭಾವನೆಗಳನ್ನೂ ಮೀರಿ ಮುಕ್ತಿಯನ್ನು ಪಡೆಯುವನು.

೭೭-೭೯. ಬ್ರಹ್ಮನೇ ಮೊದಲಾದ ಇತರ ದೇವತೆಗಳು ಕರ್ಮದಿಂದಲೇ ಉತ್ಪನ್ನರಾದುದರಿಂದ ಅವರು ಅಶುದ್ಧರಾದವರು. ಅವರನ್ನು ಧ್ಯಾನಮಾಡಬಾರದು. ಭಗವಂತನ ಅವತಾರ ರೂಪವೇ ಮನಸ್ಸನ್ನು ನೆಲೆಗೊಳಿಸುವುದಕ್ಕೆ ನಿರ್ದುಷ್ಟವಾದ ಆಶ್ರಯ ಸ್ಥಾನವಾಗಿರುವುದು. ಮನಸ್ಸು ಅಲ್ಲಿನೆಲೆಸುವುದನ್ನೇ ಧಾರಣೆಯೆಂದು ಹೇಳುವರು. ರಾಜನೇ! ಧಾರಣೆಯೆಂಬುದು ಯಾವ ಆಶ್ರಯವೂ ಇಲ್ಲದೆ ಉಂಟಾಗುವುದಿಲ್ಲವಾದುದರಿಂದ ಸ್ಥೂಲವಾಗಿ ಹರಿಯ ರೂಪವನ್ನು ಹೇಗೆ ಮನಸ್ಸಿನಲ್ಲಿ ಯೋಚಿಸಬೇಕೆಂಬುದನ್ನು ಹೇಳುವೆನು ಕೇಳು.

೮೦-೮೬. ಸಂತೋಷದ ಚಿಹ್ನೆಯುಳ್ಳ ಮುಖವೂ ಸುಂದರವಾದ ಕಮಲದಳದಂತಿರುವ ಕಣ್ಣುಗಳೂ ನಯವಾದ ಕೆನ್ನೆಗಳೂ ವಿಶಾಲವೂ, ಕಾಂತಿಯುಕ್ತವೂ ಆದ ಹಣೆಯೂ ಕುಂಡಲಗಳನ್ನು ಧರಿಸಿದ ಕಿವಿಗಳೂ ಶಂಖದಂತಿರುವ ಕುತ್ತಿಗೆಯೂ

ಸಮಕರ್ಣಾಂತವಿನ್ಯಸ್ತ ಚಾರುಕುಂಡಲ ಭೂಷಣಂ ।
ಕಂಬುಗ್ರೀವಂ ಸುವಿಸ್ತೀರ್ಣಶ್ರೀವತ್ಸಾಂಕಿತವಕ್ಷಸಂ ॥ ೮೧ ॥

ವಲಿತ್ರಿಭಂಗಿನಾ ಮಗ್ನನಾಭಿನಾ ಹ್ಯುದರೇಣ ಚ ।
ಪ್ರಲಂಬಾಷ್ಟಭುಜಂ ವಿಷ್ಣುಮಥವಾಪಿ ಚತುರ್ಭುಜಂ ॥ ೮೨ ॥

ಸಮಸ್ಥಿತೋರುಜಂಘಂ ಚ ಸುಸ್ಥಿತಾಂಘ್ರಿವರಾಂಬುಜಂ ।
ಚಿಂತಯೇದ್ಬ್ರಹ್ಮಭೂತಂ ತಂ ಪೀತನಿರ್ಮಲವಾಸಸಂ ॥ ೮೩ ॥

ಕಿರೀಟಿಹಾರಕೇಯೂರ ಕಟಿಕಾದಿವಿಭೂಷಿತಂ ॥ ೮೪ ॥

ಶಾರ್ಙ್ಗಕಂಖಗದಾಖಡ್ಗ ಚಕ್ರಾಕ್ಷವಲಯಾನ್ವಿತಂ ।
ವರದಾಭಯಹಸ್ತಂ ಚ ಮುದ್ರಿಕಾರತ್ನ ಭೂಷಿತಂ ॥ ೮೫ ॥

ಚಿಂತಯೇತ್ತನ್ಮಯೋ ಯೋಗೀ ಸಮಾಧಾಯಾತ್ಮಮಾನಸಂ ।
ತಾವದ್ಯಾವದ್ದೃಢೀಭೂತಾ ತತ್ರೈವ ನೃಪ ಧಾರಣಾ ॥ ೮೬ ॥

ಶ್ರೀ ವತ್ಸವೆಂಬ ಚಿಹ್ನೆಯುಳ್ಳ ವಿಸ್ತಾರವಾದ ಎದೆಯೂ ಅಲೆಗಳಂತೆ ಮೂರು ಬಳ್ಳಿಗಳುಳ್ಳ, ಹೊಟ್ಟೆಯಲ್ಲಿ ಆಳವಾಗಿರುವ ಹೊಕ್ಕುಳೂ, ಉದ್ದವಾದ ಎಂಟು ಅಥವಾ ನಾಲ್ಕು ತೋಳುಗಳೂ ಸಮವಾಗಿರುವ ತೊಡೆಗಳೂ, ಪೊಳಕಾಲುಗಳೂ, ಪಾದಪದ್ಮಗಳೂ ಉಳ್ಳ ಪರಬ್ರಹ್ಮ ಸ್ವರೂಪನಾದ ವಿಷ್ಣುವನ್ನು ನಿರ್ಮಲವಾದ ಪೀತಾಂಬರ ಧಾರಿಯಾಗಿರುವಂತೆ ಧ್ಯಾನಿಸಬೇಕು. ಇದಲ್ಲದೆ ಕಿರೀಟಹಾರ, ಬಾಹುಪುರಿ, ಕಂಕಣ, ಮುಂತಾದ ಆಭರಣಗಳನ್ನು ಧರಿಸಿದವನಾಗಿಯೂ, ಶಾರ್ಙ್ಗ, ಶಂಖ, ಗದೆ, ಕತ್ತಿ, ಚಕ್ರ, ಜಪಸರ, ವರದ ಅಭಯ ಹಸ್ತಗಳಿಂದ ಕೂಡಿದವನಾಗಿಯೂ, ಇರುವ ರೂಪವನ್ನು ಯೋಗಿಯು ತನ್ನ ಮನಸ್ಸಿನಲ್ಲಿ ಈ ರೂಪವು ದೃಢವಾಗಿ ನಿಲ್ಲುವವರೆಗೆ ಚಿಂತಿಸುತ್ತಿರಬೇಕು.

ವ್ರಜತಶ್ತಿಷ್ಠತೋಽನ್ಯದ್ವಾ ಸ್ವೇಚ್ಛಯಾ ಕರ್ಮ ಕುರ್ವತಃ ।
ನಾಪಯಾತಿ ಯದಾ ಚಿತ್ತಾತ್ಸಿದ್ಧಾಂ ಮನ್ಯೇತ ತಾಂ ತದಾ ॥ ೮೬ ॥

ತತಶ್ಚಂಖಗದಾಚಕ್ರೈ ಶಾರ್ಙ್ಗಾದಿರಹಿತಂ ಬುಧಃ ।
ಚಿಂತಯೇದ್ಭಗವದ್ರೂಪಂ ಪ್ರಶಾಂತಂ ಸಾಕ್ಷಸೂತ್ರಕಂ ॥ ೮೭ ॥

ಸಾ ಯದಾ ಧಾರಣಾ ತದ್ವದವಸ್ಥಾನವತೀ ತತಃ ।
ಕಿರೀಟೇಕೇಯೂರಮುಖೈರ್ಭೂಷಣೈರಹಿತಂ ಸ್ಮರೇತ್ ॥ ೮೮ ॥

ತದೇಕಾವಯವಂ ದೇವಂ ಚೇತಸಾ ಹಿ ಪುನರ್ಬುಧಃ ।
ಕುರ್ಯಾತ್ತತೋವಯವಿನಿ ಪ್ರಣಿಧಾನಪರೋ ಭವೇತ್ ॥ ೮೯ ॥

ತದ್ರೂಪಪ್ರತ್ಯಯಾ ಚೈಕಾ ಸಂತತಿರ್ಚಾನ್ಯನಿಸ್ಪೃಹಾ ।
ತದ್ಧ್ಯಾನಂ ಪ್ರಥಮೈ ರಂಗೈಃ ಷಡ್ಭಿರ್ನಿಷ್ಪಾದ್ಯತೇ ನೃಪ ॥ ೯೦ ॥

೮೭-೯೦ ನಡೆಯುತ್ತಿದ್ದರೂ, ನಿಂತಿದ್ದರೂ,ಕೆಲಸಗಳನ್ನು ಮಾಡುತ್ತಿದ್ದರೂ ಯೋಗಿಯ ಮನಸ್ಸಿನಿಂದ ಈ ರೂಪವು ಬಿಟ್ಟು ಹೋಗದಿದ್ದರೆ ಆಗ ಧಾರಣೆಯು ಸಿದ್ಧಿಯಾಯಿತೆಂದು ತಿಳಿಯಬೇಕು. ಬಳಿಕ ಆಯುಧಗಳಿಲ್ಲದ ಜಪ ಸರವನ್ನು ಮಾತ್ರ ಧರಿಸಿದ ಶಾಂತವಾದ ಭಗವಂತನ ರೂಪವನ್ನು ಚಿಂತಿಸಬೇಕು. ಆ ಧಾರಣೆಯು ಸಿದ್ಧಿಯಾದ ಮೇಲೆ ಕಿರೀಟಾದಿ ಆಭರಣಗಳಿಲ್ಲದ ರೂಪವನ್ನು ಸ್ಮರಿಸ ಬೇಕು. ತರುವಾಯ ಒಂದೇ ಅವಯವವಾದ ಮುಖದಲ್ಲಿ ಮನಸ್ಸನ್ನು ನೆಲೆಗೊಳಿಸಿ ಅದು ದೃಢವಾದಮೇಲೆ ಅವಯವಿಯಾದ ಆತ್ಮನಲ್ಲಿ ಚಿತ್ತವನ್ನು ಸ್ಥಿರವಾಗಿ ನೆಲೆ ಗೊಳಿಸಬೇಕು.

೮೧-೯೨. ರಾಜನೇ! ಧಾರಣಾಸಿದ್ಧಿಯು ಯಾವ ರೂಪದಿಂದುಂಟಾಯಿತೋ ಆ ರೂಪ ಹೊರತಾಗಿ ಮನಸ್ಸಿಗೆ ಮತ್ತೊಂದು ರೂಪವು ಬರದಿದ್ದರೆ ಅದೇ ಧ್ಯಾನ ವೆನಿಸುವುದು. ಯಮಾದಿ ಆರು ಯೋಗಾಂಗಗಳಿಂದ ಇದು ಉಂಟಾಗುವುದ.

ತಸ್ಯೈವ ಕೇವಲಾತ್ಮೀನಂ ಸ್ವರೂಪಗ್ರಹಣಂ ಹಿ ಯತ್ ।
ಮನಸಾ ಧ್ಯಾನನಿಷ್ಪಾದ್ಯಂ ಸಮಾಧಿಸ್ಸೋಽಭಿಧೀಯತೇ ॥ ೯೨ ॥

ವಿಜ್ಞಾನಂ ಪ್ರಾಪಕಂ ಪ್ರಾಪ್ಯೇ ಪರೇ ಬ್ರಹ್ಮಣಿ ಪಾರ್ಥಿವ ।
ಪ್ರಾಪಣೀಯಸ್ತಥೈವಾತ್ಮಾ ಪ್ರಕ್ಷೀಣಾಶೇಷಭಾವನಃ ॥ ೯೩ ॥

ಕ್ಷೇತ್ರಜ್ಞಃ ಕರಣೇಜ್ಞಾನಂ ಕರಣಂ ತಸ್ಯ ತೇನ ತತ್ ।
ನಿಷ್ಪಾದ್ಯಮುಕ್ತಿಕಾರ್ಯಂ ವೈ ಕೃತಕೃತ್ಯಂ ನಿವರ್ತತೇ ॥ ೯೪ ॥

ತದ್ಭಾವಭಾವಮಾಪನ್ನಸ್ತತೋಽಸೌ ಪರಮಾತ್ಮನಾ ।
ಭವತ್ಯಭೇದೀ ಭೇದಶ್ಚ ತಸ್ಯಾ ಜ್ಞಾನಕೃತೋ ಭವೇತ್ ॥ ೯೫ ॥

ವಿಭೇದಜನಕೇ ಜ್ಞಾನೇ ನಾಶಮಾತ್ಯಂತಿಕಂ ಗತೇ ।
ಆತ್ಮನೋ ಬ್ರಹ್ಮಣೋಽಭೇದಮಸಂತಂ ಕಃ ಕರಿಷ್ಯತಿ ॥ ೯೬ ॥

ಆ ಧ್ಯಾನವೇ ಧ್ಯಾತೃ, ಧ್ಯಾನ, ಧ್ಯೇಯ ಎಂಬ ಭೇಧಗಳಿಲ್ಲದೆ ಜ್ಞಾನಾಕಾರವಾದ ಒಂದೇ ಮನಸ್ಸು ಸ್ಥಿರವಾಗಿ ನಿಂತಂತೆ ಅದೇ ಸಮಾಧಿಯೆನಿಸುವುದು. ಇದನ್ನೇ ಪತಂಜಲಿಯ ಯೋಗಸೂತ್ರದಲ್ಲಿ ' ಏಕದೇಶಬಂಧಶ್ಚಿತ್ತಸ್ಯ ಧಾರಣಾ ತತ್ಪ್ರತ್ಯಯೈ ಕತಾಧ್ಯಾನಂ ತದೇಕಾಕಾರತಯಾವಸ್ಥಿತಿಃ ಸಮಾಧಿಃ " ಎಂದು ಹೇಳಿರುವುದು.

೯೩-೯೬. ರಾಜನೇ ! ಸಮಾಧಿಯಿಂದ ಹುಟ್ಟಿದ ಸ್ವಸ್ವರೂಪ ಸಾಕ್ಷಾತ್ಕಾರವೇ ವಿಜ್ಞಾನವೆನಿಸುವುದು. ಈ ವಿಜ್ಞಾನವು ತ್ರಿವಿಧ ಭಾವನೆಯೂ ತೊಲಗಿ ಹೋದ ಮನಸ್ಸನ್ನು ಪ್ರಾಪ್ಯವಾದ ಪರಬ್ರಹ್ಮಸ್ವರೂಪವಾಗಿ ಮಾಡಿಬಿಡುವುದು. ಅನಾದಿ ಕಾಲದಿಂದ ಕ್ಷೇತ್ರರೂಪವಾದ ಮಾಯೆಯಿಂದ ಮುಸುಕಿದ ಇಂದ್ರಿಯಗಳುಳ್ಳ ಜೀವನು ಸಮಾಧಿರೂಪವಾದ ಜ್ಞಾನಸಾಧನವುಳ್ಳವನಾಗುವನು. ಆ ಸಾಧನವಾದ ಜ್ಞಾನವು ಜೀವನಿಗೆ ಮುಕ್ತಿಕಾರ್ಯವನ್ನುಂಟುಮಾಡಿ ಕೃತಾರ್ಥವಾಗುವುದು. ಇದರಿಂದ ಜೀವನು ಪರಮಾತ್ಮ ಸ್ವರೂಪನಾಗುವುದರಿಂದ ಅಭೇದ ಸ್ವರೂಪನಾಗುವನು. ಜೀವ ಪರಮಾತ್ಮರ ಭೇದವು ಅಜ್ಞಾನಕೃತವಾದುದು. ಭೇದವನ್ನುಂಟುಮಾಡುವ ಅಜ್ಞಾನವು ನಾಶವಾದ ಮೇಲೆ ಜೀವಾತ್ಮನಿಗೂ ಪರಮಾತ್ಮನಿಗೂ ಇಲ್ಲದಿರುವ ಭೇದವನ್ನು ಯಾರು ಇರುವಂತೆ ಮಾಡುವರು ?

ಇತ್ಯುಕ್ತಸ್ತೇ ಮಯಾ ಯೋಗಃ ಜಾಂಡಿಕ್ಯ ಪರಿಪೃಚ್ಛತಃ ।
ಸಂಕ್ಷೇಪವಿಸ್ತರಾಭ್ಯಾಂ ತು ಕಿಮನ್ಯತ್ಶ್ರೋತುಮಿಚ್ಛಸಿ ತವ ॥ ೯೮ ॥

॥ ಜಾಂಡಿಕ್ಯಃ ॥

ಕಥಿತೋ ಯೋಗ ಸದ್ಭಾವೋ ಸರ್ವಮೇವ ಕೃತಂ ಮಮ ।
ತವೋಪದೇಶೇನಾಶೇಷೋ ನಷ್ಟಶ್ಚಿತ್ತಮಲೋ ಯತಃ ॥ ೯೯ ॥

ಮಮೇತಿ ಯನ್ಮಯಾ ಚೋಕ್ತಮಸದೇತನ್ನ ಚಾನ್ಯಥಾ ।
ನರೇಂದ್ರ ಗದಿತುಂ ಶಕ್ಯಮಪಿ ವಿಜ್ಞೇಯವೇದಿಭಿಃ ॥ ೯೯ ॥

ಅಹಂ ಮಮೇತ್ಯವಿದ್ಯೇಯಂ ವ್ಯವಹಾರಸ್ತಥಾನಯಾ ।
ಯದ್ವಿಮುಕ್ತಿಪ್ರದೋ ಯೋಗಃ ಪ್ರೋಕ್ತಃ ಕೇಶಿಧ್ವಜಾವ್ಯಯಃ ॥ ೧೦೦ ॥

---

೯೭. 'ಜಾಂಡಿಕ್ಯನೇ! ಪ್ರಶ್ನೆ ಮಾಡಿದ ನಿನಗೆ ಯೋಗಸ್ವರೂಪವನ್ನು ಸಂಗ್ರಹವಾಗಿಯೂ, ವಿಸ್ತಾರವಾಗಿಯೂ ತಿಳಿಸಿರುವೆನು. ನಿನಗೆ ಇನ್ನೇನು ಉಪಕಾರವನ್ನು ಮಾಡಬೇಕು' ಎಂದು ಕೇಶಿಧ್ವಜನು ಪ್ರಶ್ನೆಮಾಡಿದನು.

೯೮-೯೯. ಜಾಂಡಿಕ್ಯನು 'ಕೇಶಿಧ್ವಜನೇ! ನಿನ್ನ ಉಪದೇಶದಿಂದ ನನ್ನ ಮನಸ್ಸಿನ ದೋಷವು ಸಂಪೂರ್ಣವಾಗಿ ನಾಶವಾಯಿತು. ಯೋಗದ ಸ್ವರೂಪವನ್ನು ನೀನು ಹೇಳಿದುದರಿಂದ ಎಲ್ಲ ಉಪಕಾರವನ್ನೂ ಮಾಡಿದಂತಾಯಿತು ನನ್ನ ಮನಸ್ಸೆಂದು ನಾನು ಹೇಳಿದುದೂ ಬಾಧಿತವಾದುದಾಗಿರುವುದು. ಜ್ಞಾನಿಗಳಾದರೂ ನಾನು ನನ್ನದು ಎಂಬ ಮಾತಿನ ಸಂಬಂಧವಿಲ್ಲದೆ ಮಾತನಾಡುವುದಕ್ಕಾಗುವುದಿಲ್ಲ. ಪ್ರಾರಬ್ಧ ಕರ್ಮಫಲಾನುಭವವು ಇರುವಲ್ಲಿ ಅದನ್ನೇ ಅನುಸರಿಸಬೇಕಾಗಿರುವುದು.

೧೦೦-೧೦೧. ನಾನು ನನ್ನದು ಎಂಬ ವ್ಯವಹಾರವು ಅವಿದ್ಯಾರೂಪವಾದುದು. ಪರಮಾರ್ಥ ವಸ್ತುವು ಮಾತಿನಿಂದ ತಿಳಿಯತಕ್ಕುದಲ್ಲ. ಕೇಶಿಧ್ವಜನೇ!

ತದ್ಗಚ್ಛ ಶ್ರೇಯಸೇ ಸರ್ವಂ ಮಮೈತದ್ಭವತಾ ಕೃತಂ ।
ಯದ್ವಿಮುಕ್ತಿಪ್ರದೋ ಯೋಗಃ ಪ್ರೋಕ್ತಃ ಕೇಶಿಧ್ವಜಾವ್ಯಯಃ ॥ ೧೦೧ ॥

॥ ಶ್ರೀ ಪರಾಶರಃ ॥

ಯಥಾರ್ಹಂ ಪೂಜಯಾ ತೇನ ಖಾಂಡಿಕ್ಯೇನ ಸ ಪೂಜಿತಃ ।
ಆಜಗಾಮ ಪುರಂ ಬ್ರಹ್ಮಂಸ್ತತಃ ಕೇಶಿಧ್ವಜೋ ನೃಪಃ ॥ ೧೦೨ ॥

ಖಾಂಡಿಕ್ಯೋಽಪಿ ಸುತಂ ಕೃತ್ವಾ ರಾಜಾನಂ ಯೋಗ ಸಿದ್ಧಯೇ ।
ವನಂ ಜಗಾಮ ಗೋವಿಂದೇ ವಿನಿವೇಶಿತಮಾನಸಃ ॥ ೧೦೩ ॥

ತತ್ರೈಕಾಂತಮತಿರ್ಭೂತ್ವಾ ಯಮಾದಿಗುಣ ಸಂಯುತಃ ।
ವಿಷ್ಣ್ವಾಖ್ಯೇ ನಿರ್ಮಲೇ ಬ್ರಹ್ಮಣ್ಯವಾಪ ನೃಪತಿರ್ಲಯಂ ॥ ೧೦೪ ॥

ಕೇಶಿಧ್ವಜೋ ವಿಮುಕ್ತ್ಯರ್ಥಂ ಸ್ವಕರ್ಮಕ್ಷಪಣೋನ್ಮುಖಃ ।
ಬುಭುಜೇ ವಿಷಯಾನ್ಕರ್ಮ ಜಕ್ಷ್ಯೇ ಜ್ಞಾನಭಿಸಂಹಿತಂ ॥ ೧೦೫ ॥

ನಾಶರಹಿತವೂ ಮೋಕ್ಷವನ್ನು ಕೊಡತಕ್ಕುದೂ ಆದ ಯೋಗವನ್ನು ಹೇಳಿ ನನ್ನ ಶ್ರೇಯಸ್ಸಿಗಾಗಿ ಇಷ್ಟು ಕಾರ್ಯಗಳನ್ನು ಮಾಡಿದೆ ಇನ್ನು ನೀನು ಪ್ರಯಾಣ ಮಾಡಬಹುದು ಎಂದು ಹೇಳಿದನು.

೧೦೨-೧೦೩. ಆಮೇಲೆ ಕೇಶಿಧ್ವಜನು ಖಾಂಡಿಕ್ಯನ ಪೂಜೆಯನ್ನು ಸ್ವೀಕರಿಸಿ ತನ್ನ ಪಟ್ಟಣಕ್ಕೆ ಬಂದನು. ಖಾಂಡಿಕ್ಯನೂ ತನ್ನ ಮಗನನ್ನು ರಾಜನನ್ನಾಗಿ ಮಾಡಿ ಯೋಗಸಿದ್ಧಿಗಾಗಿ ಗೋವಿಂದನಲ್ಲಿ ಮನಸ್ಸನ್ನು ನೆಲೆಗೊಳಿಸಿ ಕಾಡಿಗೆ ತಪಸ್ಸಿಗಾಗಿ ಹೊರಟುಹೋದನು.

೧೦೪-೧೦೫. ಆ ಕಾಡಿನಲ್ಲಿ ಅವನು ಏಕಾಗ್ರಚಿತ್ತನಾಗಿ ಯಮಾದಿ ಯೋಗಾಂಗಗಳನ್ನು ಅಭ್ಯಾಸಮಾಡಿ ವಿಷ್ಣುವೆಂಬ ಪರಿಶುದ್ಧನಾದ ಬ್ರಹ್ಮನಲ್ಲಿ ಲೀನನಾದನು. ಕೇಶಿಧ್ವಜನೂ ಮೋಕ್ಷಾರ್ಥವಾಗಿ ತನ್ನ ಕರ್ಮ ಕ್ಷಯವನ್ನು ಮಾಡಿಕೊಳ್ಳಲೋಸುಗ ವಿಷಯ ಸುಖಗಳನ್ನನುಭವಿಸುತ್ತ ನಿಷ್ಕಾಮ ಕರ್ಮಗಳನ್ನು ಮಾಡುತ್ತಿದ್ದನು.

ಅಕಲ್ಮಾಷೋಪಭೋಗೈಶ್ಚ ಕ್ಷೀಣಪಾಪೋ ಮಲಸ್ತಥಾ ।
ಅವಾಪ ಸಿದ್ಧಿಮತ್ಯಂತಾಂ ತಾಪಕ್ಷಯಫಲಾಂ ದ್ವಿಜ ॥ ೧೦೬ ॥

ಇತಿ ಶ್ರೀ ವಿಷ್ಣುಪುರಾಣೇ ಷಷ್ಠಾಂಶೇ ಸಪ್ತಮೋಽಧ್ಯಾಯಃ

---

೧೦೬. ಅವನು ಪ್ರಾರಬ್ಧ ಕರ್ಮದ ದುಃಖಾನುಭವಗಳನ್ನು ಮಾಡಿ ಪಾಪಗಳನ್ನೆಲ್ಲ ಕಳೆದುಕೊಂಡು ಪರಿಶುದ್ಧನಾಗಿ ಸಂತಾಪನಾಶಕ್ಕೆ ಫಲವಾದ ಸಿದ್ಧಿಯನ್ನು ಪಡೆದನು.

ಎಂಬಲ್ಲಿಗೆ ಶ್ರೀ ವಿಷ್ಣು ಪುರಾಣದ ಆರನೆಯ ಅಂಶದಲ್ಲಿ
ಏಳನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀ ವಿಷ್ಣು ಪುರಾಣೇ ಷಷ್ಠಾಂಶೇ

ಅಷ್ಟಮೋಽಧ್ಯಾಯಃ

॥ ಶ್ರೀ ಪರಾಶರಃ ॥

ಇತ್ಯೇಷ ಕಥಿತಸ್ಸಮ್ಯಕ್ತ್ರೈತೀಯಃ ಪ್ರತಿಸಂಚರಃ ।
ಅತ್ಯಂತಿಕೋ ವಿಮುಕ್ತಿರ್ಯಾ ಲಯೋ ಬ್ರಹ್ಮಣಿ ಶಾಶ್ವತೇ ॥ ೧ ॥

ಸರ್ಗಶ್ಚ ಪ್ರತಿಸರ್ಗಶ್ಚ ವಂಶೋಮನ್ವಂತರಾಣಿ ಚ ।
ವಂಶಾನುಚರಿತಂ ಚೈವ ಭವತೋ ಗದಿತಂ ಮಯಾ ॥ ೨ ॥

ಪುರಾಣಂ ವೈಷ್ಣವಂ ಚೈತತ್ಸರ್ವಕಿಲ್ಬಿಷನಾಶನಂ ।
ವಿಶಿಷ್ಟಂ ಸರ್ವಶಾಸ್ತ್ರೇಭ್ಯಃ ಪುರುಷಾರ್ಥೋಪಪಾದಕಂ ॥ ೩ ॥

ತುಭ್ಯಂ ಯಥಾವನ್ಮೈತ್ರೇಯ ಪ್ರೋಕ್ತಂ ಶುಶ್ರೂಷವೇಽನ್ಯಯಂ ।
ಯದನ್ಯದಪಿ ವಕ್ತವ್ಯಂ ತತ್ಪೃಚ್ಛಾದ್ಯ ವದಾಮಿ ತೇ ॥ ೪ ॥

ಎಂಟನೆಯ ಅಧ್ಯಾಯವು.

೧–೪. ಪರಾಶರರು 'ಮೈತ್ರೇಯ ಮುನಿಯೇ! ಮೂರನೆಯದಾದ ಶಾಶ್ವತನಾದ ಪರಬ್ರಹ್ಮನಲ್ಲಿ ಐಕ್ಯವಾಗುವ ಮೋಕ್ಷವೆಂಬ ಅತ್ಯಂತಿಕ ಪ್ರಳಯದ ವಿಷಯವನ್ನು ವಿಸ್ತಾರವಾಗಿ ಹೇಳಿದೆನು. ಇದಲ್ಲದೆ ಈ ಪುರಾಣದಲ್ಲಿ ಸೃಷ್ಟಿ, ಪ್ರಳಯ, ವಂಶ, ಮನ್ವಂತರ, ವಂಶಾನುಚರಿತ್ರೆ ಇವುಗಳನ್ನೂ ವಿವರಿಸಿದೆನು. ಈ ವಿಷ್ಣು ಪುರಾಣವು ಸಮಸ್ತ ಪಾಪಗಳನ್ನೂ ನಾಶಮಾಡತಕ್ಕುದು. ಸಮಸ್ತ ಶಾಸ್ತ್ರಗಳಿಗಿಂತಲೂ ಶ್ರೇಷ್ಠವಾದುದಾಗಿ ಪುರುಷಾರ್ಥಗಳ ಸ್ವರೂಪವನ್ನು ವಿವರಿಸತಕ್ಕುದಾಗಿರುವುದು. ಪ್ರೀತಿಯಿಂದ ಕೇಳಲಿಚ್ಛೆಯುಳ್ಳ ನಿನಗೆ ಎಲ್ಲವನ್ನೂ ಹೇಳಿರುವೆನು. ಇನ್ನೇನಾದರೂ ಹೇಳಬೇಕಾದುದಿದ್ದರೆ ಪ್ರಶ್ನೆಮಾಡು ಅದನ್ನು ಹೇಳುವೆನು' ಎಂದು ಕೇಳಿದರು.

॥ ಮೈತ್ರೇಯಃ ॥

ಭಗವನ್ಮಥಿತಂ ಸರ್ವಂ ಯತ್ಪೃಷ್ಟೋಽಸಿ ಮಯಾ ಮುನೇ ।
ಶ್ರುತಂ ಚೈತನ್ಮಯಾ ಭಕ್ತ್ಯಾ ನಾನ್ಯತ್ಪ್ರಷ್ಟವ್ಯಮಸ್ತಿ ಮೇ ॥ ೫ ॥

ವಿಚ್ಛಿನ್ನಾಃ ಸರ್ವಸಂದೇಹಾ ವೈಮಲ್ಯಂ ಮನಸಃ ಕೃತಂ ।
ತ್ವತ್ಪ್ರಸಾದಾನ್ಮಯಾ ಜ್ಞಾತಾ ಉತ್ಪತ್ತಿಸ್ಥಿತಿಸಂಕ್ಷಯಾಃ ॥ ೬ ॥

ಜ್ಞಾತಶ್ಚ ತುರ್ವಿಧೋ ರಾಶಿಶ್ಚಕ್ತಿಶ್ಚ ತ್ರಿವಿಧಾ ಗುರೋ ।
ವಿಜ್ಞಾತಾ ಸಾ ಚ ಕಾರ್ತ್ಸ್ನ್ಯೇನ ತ್ರಿವಿಧಾ ಭಾವಭಾವನಾ ॥ ೭ ॥

ತ್ವತ್ಪ್ರಸಾದಾನ್ಮಯಾ ಜ್ಞಾತಂ ಜ್ಞೇಯಮನ್ಯೈರಲಂ ದ್ವಿಜ ।
ಯದೇತದಖಿಲಂ ವಿಷ್ಣೋರ್ಜಗನ್ನ್ಯಕ್ತಿರಿಚ್ಯತೇ ॥ ೮ ॥

೫–೧೧. ಮೈತ್ರೇಯನು ಮಹಾಮಹಿಮರಾದ ಗುರುಗಳೇ ! ನಾನು ಕೇಳಿದುದಕ್ಕೆಲ್ಲ ಉತ್ತರವನ್ನು ಹೇಳಿದಿರಿ. ನಾನೂ ಭಕ್ತಿಯಿಂದ ಕೇಳಿದೆನು. ಮತ್ತೇನೂ ಕೇಳಬೇಕಾದುದಿಲ್ಲ. ನನ್ನ ಸಂದೇಹವೆಲ್ಲವೂ ನಿವೃತ್ತಿಯಾಯಿತು. ತಮ್ಮ ಅನುಗ್ರಹದಿಂದ ನನ್ನ ಮನಸ್ಸು ನಿರ್ಮಲವಾಯಿತು. ಪ್ರಪಂಚದ ಉತ್ಪತ್ತಿ, ಸ್ಥಿತಿ, ನಾಶಗಳೂ ಇವುಗಳ ನಾಲ್ಕು ಬೇದಗಳೂ (ವಿ.ಪು. ೧-೨೨ ಚತುರ್ವಿಧಾಗಸ್ಸಂಸೃಷ್ಟೌ ಚತುರ್ಧಾಸಂಸ್ಥಿತಸ್ಥಿತೌ । ಪ್ರಳಯಂ ಚ ಕರೋತ್ಯಂತೇ ಚತುರ್ಭೇದೋ ಜನಾರ್ದನಃ ॥ ಏಕೇನಾಂಶೇನ ಬ್ರಹ್ಮಾಸೌ ಭವತ್ಯವ್ಯಕ್ತಮೂರ್ತಿಮಾ । ಮರೀಚಿಮಿಶ್ರಾಃ ಪೆತಯಃ ಪ್ರಜಾನಾಮಾನ್ಯಭಾಗವಶಃ ॥ ಕಾಲಸ್ತೃತೀಯಸ್ತಸ್ಯಾಂಶಸ್ಸರ್ವಭೂತಾನಿ ಚಾಪರಃ । ಇತ್ಥಂ ಚತುರ್ಧಾ ಸಂಸೃಷ್ಟೌ ವರ್ತತೇಽಸೌ ರಜೋಗುಣಃ ॥ ಏಕಾಂಶೇನ ಸ್ಥಿತೋ ವಿಷ್ಣುಃ ಕರೋತಿ ಪರಿಪಾಲನಂ । ಮನ್ವಾದಿರೂಪೀ ಚಾನ್ಯೇನ ಕಾಲರೂಪೋ ಪರೇಣ ಚ ॥ ಸರ್ವಭೂತೇಷು ಚಾನ್ಯೇನ ಸಂಸ್ಥಿತಃ ಕುರುತೇ ಸ್ಥಿತಿಂ । ಸಸತ್ವಗುಣಮಾಶ್ರಿತ್ಯ ಜಗತಃ ಪುರುಷೋತ್ತಮಃ । ಆಶ್ರಿತ್ಯತಮಸೋವೃತ್ತಿಮಂತ ಕಾಲೇ ತಥಾ ಪ್ರಭುಃ । ರುದ್ರಸ್ವರೂಪೋ ಭಗವಾನೇಕಾಂ ಶೇನಭವತ್ಯಜಃ ॥

ಕೃತಾರ್ಥೋಽಪಮಸಂದೇಹಸ್ತ್ವತ್ಪ್ರಸಾದಾನ್ಮಯಾ ಮುನೇ ।
ವರ್ಣಧರ್ಮಾಶ್ರಮೋಽ ಧರ್ಮಾ ವಿದಿತಾ ಯದಶೇಷತಃ ॥ ೯ ॥

ಪ್ರವೃತ್ತಂ ಚ ನಿವೃತ್ತಂ ಚ ಜ್ಞಾತಂ ಕರ್ಮ ಮಯಾಖಿಲಂ ।
ಪ್ರಸೀದ ವಿಪ್ರಪ್ರವರ ನಾನ್ಯತ್ಪ್ರಷ್ಟವ್ಯಮಸ್ತಿ ಮೇ ॥ ೧೦ ॥

ಯದಸ್ಯ ಕಥನಾಯಾಸ್ಯೈರ್ಗೋಽಜಿತೋಽಸಿ ಮಯಾ ಗುರೋ ।
ತತ್ಕ್ಷಮ್ಯತಾಂ ವಿಶೇಷೋಽಸ್ತಿ ನ ಸತಾಂ ಪುತ್ರಶಿಷ್ಯಯೋಃ ॥ ೧೧ ॥

ಅಗ್ರ್ಯಂತಕಾದಿ ರೂಪೇಣ ಭಾಗೇನಾನ್ಯೇನ ವರ್ತತೇ । ಕಾಲಸ್ವರೂಪೋ ಭಾಗೋನ್ಯ ಸ್ಸರ್ವಭೂತಾನಿ ಚಾಪರಃ ॥ ವಿನಾಶಂ ಕುರ್ವತಸ್ತಸ್ಯ ಚತುರ್ಥೈವ ಮಹಾತ್ಮನಃ । ಎಂದರೆ ಸೃಷ್ಟಿಕಾಲದಲ್ಲಿ ರಜೋಗುಣವನ್ನಾಶ್ರಯಿಸಿ ಒಂದಂಶದಿಂದ ಬ್ರಹ್ಮನಾಗಿಯೂ ಮತ್ತೊಂದಂಶದಿಂದ ಮರೀಚಿಯೇ ಮುಂತಾದ ಪ್ರಜಾಪತಿಗಳಾಗಿಯೂ ಮೂರನೆಯ ಅಂಶದಿಂದ ಕಾಲರೂಪನಾಗಿಯೂ ನಾಲ್ಕನೆಯ ಅಂಶದಿಂದ ಸರ್ವಭೂತಸ್ವರೂಪನಾಗಿಯೂ ಸೃಷ್ಟಿಸುವನು. ಸ್ಥಿತಿಕಾಲದಲ್ಲಿ ಸತ್ವಗುಣವನ್ನಾಶ್ರಯಿಸಿ ಒಂದಂಶದಿಂದ ವಿಷ್ಣುವಾಗಿಯೂ ಎರಡನೆಯ ಅಂಶದಿಂದ ಮನ್ವಾದಿಗಳ ರೂಪನಾಗಿಯೂ ಮೂರನೆಯ ಅಂಶದಿಂದ ಕಾಲಸ್ವರೂಪನಾಗಿಯೂ ನಾಲ್ಕನೆಯ ಅಂಶದಿಂದ ಸರ್ವಭೂತ ಸ್ವರೂಪನಾಗಿಯೂ ಪಾಲನೆಯ ಕಾರ್ಯವನ್ನು ಮಾಡುವನು. ಪ್ರಳಯ ಕಾಲದಲ್ಲಿ ತಮೋಗುಣವೃತ್ತಿಯುಳ್ಳವನಾಗಿ ಒಂದಂಶದಿಂದ ರುದ್ರಸ್ವರೂಪನಾಗಿಯೂ ಎರಡ ನೆಯ ಅಂಶದಿಂದ ಅಗ್ನಿಯ ಮೊದಿಗಳ ಸ್ವರೂಪನಾಗಿಯೂ ಮೂರನೆಯ ಅಂಶದಿಂದ ಕಾಲಸ್ವರೂಪನಾಗಿಯೂ ನಾಲ್ಕನೆಯ ಅಂಶದಿಂದ ಸರ್ವಭೂತಸ್ವರೂಪನಾಗಿಯೂ ನಾಶವನ್ನು ಮಾಡುವನು. ಎಂದು ನಾಲ್ಕು ಭೇದಗಳನ್ನು ಹಿಂದೆ ವಿವರಿಸಿರುವುದು.) ಪರಾ, ಕ್ಷೇತ್ರಜ್ಞಾ, ಅವಿದ್ಯಾ ಎಂಬ ಮೂರು ಶಕ್ತಿಗಳೂ ಬ್ರಹ್ಮ, ಕರ್ಮ, ಕರ್ಮ ಬ್ರಹ್ಮೋಭಯ ಎಂಬ ಮೂರು ಭಾವನೆಗಳೂ ಸಂಪೂರ್ಣವಾಗಿ ತಿಳಿದವು. ತಮ್ಮ ಅನುಗ್ರಹದಿಂದ ಇತರರಿಂದ ತಿಳಿಯಲಸಾಧ್ಯವಾವ ಈ ಜಗತ್ತೆಲ್ಲವೂ ವಿಷ್ಣುವಿಗಿಂತ

॥ ಶ್ರೀ ಪರಾಶರಃ ॥

ಏತತ್ತೇ ಯನ್ಮಯಾಖ್ಯಾತಂ ಪುರಾಣಂ ವೇದಸಮ್ಮಿತಂ ।
ಶ್ರುತೇಽಸ್ಮಿನ್ ಸರ್ವದೋಷೋತ್ಥಃ ಪಾಪರಾಶಿಃ ಪ್ರಣಶ್ಯತಿ　　॥ ೧೨ ॥

ಸರ್ಗಶ್ಚ ಪ್ರತಿಸರ್ಗಶ್ಚ ವಂಶಮನ್ವಂತರಾಣಿ ಚ ।
ವಂಶಾನುಚರಿತಂ ಕೃತ್ಸ್ನಂ ಮಯಾ ತತ್ರ ಪ್ರಕೀರ್ತಿತಂ　　॥ ೧೩ ॥

ಅತ್ರ ದೇವಾಸ್ತಥಾ ದೈತ್ಯಾ ಗಂಧರ್ವೋರಗರಾಕ್ಷಸಾಃ ।
ಯಕ್ಷವಿದ್ಯಾಧರಾಸ್ಸಿದ್ಧಾಃ ಕಥ್ಯಂತೇಪ್ಸರಸಸ್ತಥಾ　　॥ ೧೪ ॥

ಮುನಯೋ ಭಾವಿತಾತ್ಮಾನಃ ಕಥ್ಯಂತೇ ತಪಸಾನ್ವಿತಾಃ ।
ಜಾತುರ್ವರ್ಣ್ಯಂ ತಥಾ ಪುಂಸಾಂ ವಿಶಿಷ್ಟಚರಿತಾನಿ ಚ　　॥ ೧೫ ॥

ಬೇರೆಯಾದುದಲ್ಲವೆಂಬ ಅಂಶವು ಅನುಭವಕ್ಕೆ ಬಂದಿರುವುದು. ವರ್ಣಧರ್ಮಾದಿ ಸಮಸ್ತ ಧರ್ಮಗಳೂ ಪ್ರವೃತ್ತಿ ನಿವೃತ್ತಿರೂಪವಾದ ಸಮಸ್ತ ಕರ್ಮಗಳೂ ತಿಳಿದುವು. ನಾನು ಪ್ರಶ್ನೆಮಾಡಿ ತಿಳಿಯಬೇಕಾದುದಾವುದೂ ಉಳಿದಿಲ್ಲ ಇವುಗಳನ್ನೆಲ್ಲ ಹೇಳುವ ಆಯಾಸವನ್ನು ನಾನು ತಮಗೆ ಕೊಟ್ಟುದಕ್ಕಾಗಿ ಕ್ಷಮಿಸಬೇಕು. ಮಕ್ಕಳಿಗೂ ಶಿಷ್ಯರಿಗೂ ಭೇದವಿಲ್ಲವೆಂಬ ಅಂಶವು ತಮಗೆ ತಿಳಿದೇ ಇರುವುದು ' ಎಂದುಹೇಳಿದನು.

೧೨–೧೫. ಪರಾಶರರು ಮೈತ್ರೇಯಮುನಿಯೇ ! ವೇದಕ್ಕೆ ಸಮಾನವಾದ ಸಕಲ ವೇದ ಮಂತ್ರಾರ್ಥ ಸಾರವಾದ ಈ ವಿಷ್ಣುಪುರಾಣವನ್ನು ಕೇಳಿದರೆ ಸಕಲ ದೋಷಗಳಿಂದುಂಟಾದ ಪಾಪರಾಶಿಯು ನಾಶವಾಗುವುದು. ಈ ಪುರಾಣದಲ್ಲಿ ಸೃಷ್ಟಿ, ಪ್ರಳಯಗಳನ್ನೂ, ವಂಶ, ಮನ್ವಂತರ, ವಂಶಾನುಚರಿತ್ರ, ಇವುಗಳನ್ನೂ ಸಂಪೂರ್ಣವಾಗಿ ಹೇಳಿರುವೆನು. ದೇವತೆಗಳು, ದೈತ್ಯರು, ಗಂಧರ್ವರು, ಉರಗರು, ರಾಕ್ಷಸರು, ಯಕ್ಷರು, ವಿದ್ಯಾಧರರು ಸಿದ್ಧರು, ಅಪ್ಸರಸರು, ತಪಸ್ವಿಗಳೂ ಆತ್ಮಜ್ಞಾನಿಗಳೂ ಆದ

ಪುಣ್ಯಾಃ ಪ್ರದೇಶಾಃ ಮೇದಿನ್ಯಾಃ ಪುಣ್ಯಾ ನದ್ಯೋಽಖಿಲಾ ಸಾಗರಾಃ ।
ಪರ್ವತಾಶ್ಚ ಸರಿದ್ಭಾಪುಣ್ಯಾಶ್ಚರಿತಾನಿ ಚ ಧೀಮತಾಂ ॥ ೧೬ ॥

ವರ್ಣಧರ್ಮಾದಯೋ ಧರ್ಮಾ ವೇದಶಾಸ್ತ್ರಾಣಿ ಕೃತ್ಸ್ನಶಃ ।
ಯೇಷಾಂ ಸಂಸ್ಮರಣಾತ್ಸದ್ಯಸ್ಸರ್ವಪಾಪೈಃ ಪ್ರಮುಚ್ಯತೇ ॥ ೧೭ ॥

ಉತ್ಪತ್ತಿಸ್ಥಿತಿನಾಶಾನಾಂ ಹೇತುರ್ಯೋ ಜಗತೋಽವ್ಯಯಃ ।
ಸ ಸರ್ವಭೂತಸ್ಸರ್ವಾತ್ಮಾ ಕಥ್ಯತೇ ಭಗವಾನ್ ಹರಿಃ ॥ ೧೮ ॥

ಅವಶೇನಾಪಿ ಯೆನ್ನಾಮ್ನಿ ಕೀರ್ತಿತೇ ಸರ್ವಪಾತಕೈಃ ।
ಪುಮಾನ್ವಿಮುಚ್ಯತೇ ಸದ್ಯಸ್ಸಿಂಹತ್ರಸ್ತೈರ್ಮೃಗೈರಿವ ॥ ೧೯ ॥

ಯನ್ನಾಮಕೀರ್ತನಂ ಭಕ್ತ್ಯಾ ವಿಲಾಯನಮನುತ್ತಮಂ ।
ಮೈತ್ರೇಯಾಶೇಷಪಾಪಾನಾಂ ಧಾತೂನಾಮಿವ ಪಾವಕಃ ॥ ೨೦ ॥

ಮುನಿಗಳು ಇವರ ವಿಷಯಗಳನ್ನೂ ಬ್ರಾಹ್ಮಣಾದಿ ನಾಲ್ಕು ವರ್ಣ ಧರ್ಮಗಳನ್ನೂ, ಭೂಮಿಯಲ್ಲಿರುವ ಪುಣ್ಯಕರವಾದ ಕ್ಷೇತ್ರಗಳು, ನದಿಗಳು, ಸಾಗರಗಳು, ಪರ್ವತಗಳು ಬುದ್ಧಿವಂತರಾದ ಮನುಷ್ಯರ ಚರಿತ್ರೆಗಳು ವೇದಶಾಸ್ತ್ರಗಳಲ್ಲಿ ಹೇಳಿರುವ ಸಮಸ್ತ ಧರ್ಮಗಳು ಇವುಗಳನ್ನೆಲ್ಲ ಹೇಳಿರುವೆನು. ಇವುಗಳನ್ನು ಸ್ಮರಣೆ ಮಾಡಿದ ಮಾತ್ರಕ್ಕೆ ಪಾಪಗಳೆಲ್ಲ ಬಿಡುಗಡೆಯಾಗುವುವು. ಇದರಲ್ಲಿ ನಾಶರಹಿತನೂ ಸರ್ವ ಭೂತಸ್ವರೂಪನೂ, ಸರ್ವಾತ್ಮನೂ ಆದ ವಿಷ್ಣುವೇ ಜಗತ್ತಿನ ಉತ್ಪತ್ತಿ ಸ್ಥಿತಿ, ನಾಶಗಳಿಗೆ ಕಾರಣನೆಂದು ಹೇಳಿರುವುದು. ಅಕಸ್ಮಾತ್ತಾಗಿ ಆ ಹರಿಯ ನಾಮೋಚ್ಚಾರಣೆಯನ್ನು ಮಾಡಿದರೂ ಸಿಂಹಕ್ಕೆ ಹೆದರಿ ಓಡಿಹೋಗುವ ಮೃಗಗಳಂತೆ ಸಮಸ್ತ ಪಾಪಗಳೂ ಆ ಮನುಷ್ಯನನ್ನು ಬಿಟ್ಟುಹೋಗುವುವು.

೨೦–೨೧. ಮೈತ್ರೇಯನೇ! ಹನ್ನೆರಡು ವರ್ಷಗಳ ಪರ್ಯಂತವಾಗಿ ಪ್ರಾಯಶ್ಚಿತ್ತ ಮಾಡಿಕೊಂಡರೂ ಪಾಪಗಳು ಮಾತ್ರ ನಾಶವಾಗಿ ಅದರ ಸಂಸ್ಕಾರವು ಉಳಿದೇ ಇರುವುದು. ಭಕ್ತಿಯಿಂದ ವಿಷ್ಣುವಿನ ನಾಮಸಂಕೀರ್ತನೆಯನ್ನು ಮಾಡಿದರೆ

ಕಲಿಕಲ್ಮಷಮತ್ಯುಗ್ರಂ ನರಕಾರ್ತಿಪ್ರದಂ ನೃಣಾಂ ।
ಪ್ರಯಾತಿ ವಿಲಯಂ ಸದ್ಯಸ್ಸ್ಮೈದ್ಯತ್ರ ಚ ಸಂಸ್ಮೃತೇ ॥ ೨೧ ॥

ಹಿರಣ್ಮಗರ್ಭದೇವೇಂದ್ರರುದ್ರಾದಿತ್ಯಾಶ್ವಿವಾಯುಭಿಃ ।
ಪಾವಕೈರ್ವಸುಭಿಸ್ಸಾಧ್ಯೈರ್ವಿಶ್ವೇದೇವಾದಿಭಿಸ್ಸುರೈಃ ॥ ೨೨ ॥

ಯಕ್ಷರಕ್ಷೋರಗೈಸ್ಸಿದ್ಧೈರ್ದೈತ್ಯಗಂಧರ್ವದಾನವೈಃ ।
ಅಪ್ಸರೋಭಿಸ್ತಥಾ ತಾರಾ ನಕ್ಷತ್ರೈಸ್ಸಕಲೈರ್ಗ್ರಹೈಃ ॥ ೨೩ ॥

ಸಪ್ತರ್ಷಿಭಿಸ್ತಥಾ ಧಿಷ್ಣ್ಯೈರ್ಧಿಷ್ಣ್ಯಾಧಿಪತಿಭಿಸ್ತಥಾ ।
ಬ್ರಾಹ್ಮಣಾದ್ಯೈರ್ಮನುಷ್ಯೈಶ್ಚ ತಥೈವ ಪಶುಭಿರ್ಮೃಗೈಃ ॥ ೨೪ ॥

ಸರೀಸೃಪೈರ್ವಿಹಂಗೈಶ್ಚ ಪಲಾಶಾದ್ಯೈರ್ಮಹೀರುಹೈಃ ।
ವನಾಗ್ನಿಸಾಗರೈಸರಿತ್ಪಾತಾಳೈಸ್ಸುರಾಗ್ನಿಭಿಃ ॥ ೨೫ ॥

ಸುವರ್ಣಾದಿ ಲೋಹಗಳು ಬೆಂಕಿಯಲ್ಲಿ ಕಾಯಿಸುವುದರಿಂದ ತನ್ನ ದೋಷಗಳನ್ನು ಕಳೆದುಕೊಳ್ಳುವಂತೆ ಸಂಸ್ಕಾರ ಸಹಿತವಾಗಿ ಸಮಸ್ತ ಪಾಪಗಳನ್ನೂ ನಾಶಮಾಡುವುದು. ಒಂದಾವೃತ್ತಿ ವಿಷ್ಣುವನ್ನು ಸ್ಮರಿಸಿದರೆ ಮನುಷ್ಯರಿಗೆ ಕ್ರೂರವಾದ ನರಕದುಃಖವನ್ನು ಕೊಡುವ ಕಲಿದೋಷವು ನಾಶವಾಗುವುದು.

೨೨–೨೭. ಹಿರಣ್ಯಗರ್ಭ, ದೇವೇಂದ್ರ, ಏಕಾದಶರುದ್ರರು, ಅಷ್ಟವಸುಗಳು, ತ್ರೇತಾಗ್ನಿಗಳು, ಸಾಧ್ಯರು, ವಿಶ್ವೇದೇವತೆಗಳು, ಯಕ್ಷರು, ರಾಕ್ಷಸರು, ಉರಗರು, ಸಿದ್ಧರು, ದೈತ್ಯರು, ಗಂಧರ್ವರು, ದಾನವರು, ಅಪ್ಸರಸ್ಸುಗಳು, ನಕ್ಷತ್ರಗಳು ಅಶ್ವಿನ್ಯಾದಿ ತಾರೆಗಳು, ಸೂರ್ಯಾದಿ ಗ್ರಹಗಳು, ಸಪ್ತರ್ಷಿಗಳು ಸ್ವರ್ಗಾದಿ ಲೋಕಗಳು, ಲೋಕಾಧಿಪತಿಗಳು, ಬ್ರಾಹ್ಮಣಾದಿ ವರ್ಣಗಳು, ಮನುಷ್ಯರು, ಪಶುಗಳು, ಸಾಗರಗಳು, ನದಿಗಳು, ಪಾತಾಳಾದಿ ಲೋಕಗಳು ಇವುಗಳಿಂದ ಕೂಡಿದ ಸಮಸ್ತ ಬ್ರಹ್ಮಾಂಡವೂ ಯಾವ ವಿಷ್ಣುವಿನಲ್ಲಿ ಮೇರುಪರ್ವತದಲ್ಲಿ ಪರಮಾಣುವಿರು

ಶಬ್ದಾದಿಭಿಶ್ಚ ಸಹಿತಂ ಬ್ರಹ್ಮಾಂಡಮಖಿಲಂ ದ್ವಿಜ ।
ಮೀದೃೋರಿವಾಜ್ಞಾಯರ್ಯಸ್ಯೈತದ್ಯನ್ಮಯಂ ಚ ದ್ವಿಜೋತ್ತಮ ॥ ೨೬ ॥

ಸ ಸರ್ವಜ್ಞಸ್ಸರ್ವವಿತ್ಸರ್ವಸ್ವರೂಪೋ ರೂಪವರ್ಜಿತಃ ।
ಭಗವಾನ್ಕೀರ್ತಿತೋ ವಿಷ್ಣುರತ್ರ ಪಾಪಪ್ರಣಾಶನಃ ॥ ೨೭ ॥

ಯದಶ್ವಮೇಧಾವಭೃಥೇ ಸ್ನಾತಃ ಪ್ರಾಪ್ನೋತಿ ವೈ ಫಲಂ ।
ಮಾನವಸ್ತದವಾಪ್ನೋತಿ ಶ್ರುತ್ವೈತನ್ಮುನಿಸತ್ತಮ ॥ ೨೮ ॥

ಪ್ರಯಾಗೇ ಪುಷ್ಕರೇ ಚೈವ ಕುರುಕ್ಷೇತ್ರೇ ತಥಾರ್ಣವೇ ।
ಕೃತೋಪವಾಸಃ ಸ್ಯಾಪ್ನೋತಿ ತದಸ್ಯ ಶ್ರವಣಾನ್ನರಃ ॥ ೨೯ ॥

ಯದಗ್ನಿಹೋತ್ರೇ ಸುಹುತೇ ವರ್ಷೇಣಾಪ್ನೋತಿ ಮಾನವಃ ।
ಮಹಾಪುಣ್ಯಫಲಂ ವಿಪ್ರ ತದಸ್ಯ ಶ್ರವಣಾತ್ಸಕೃತ್ ॥ ೩೦ ॥

ಯಜ್ಜ್ಯೇಷ್ಠಶುಕ್ಲದ್ವಾದಶ್ಯಾಂ ಸ್ನಾತ್ವಾ ವೈ ಯಮುನಾಜಲೇ ।
ಮಧುರಾಯಾಂ ಹರಿಂ ದೃಷ್ಟ್ವಾ ಪ್ರಾಪ್ನೋತಿ ಪುರುಷಃ ಫಲಂ ॥ ೩೧ ॥

ವಂತೆ ಇರುವುದೋ ಆ ಬ್ರಹ್ಮಾಂಡವು ಯಾವನ ಸ್ವರೂಪವಾದುದಾಗಿರುವುದೋ ಅಂತಹ ಸರ್ವಜ್ಞನೂ ಸರ್ವಸ್ವರೂಪನೂ ರೂಪವಿಲ್ಲದವನೂ ಆದ ವಿಷ್ಣುವಿನ ನಾಮಸ್ಮರಣೆ ಮಾಡಿದರೆ ಸಮಸ್ತ ಪಾಪಗಳೂ ನಾಶವಾಗುವುವು.

೨೮–೩೧. ಈ ವಿಷ್ಣುಪುರಾಣವನ್ನು ಕೇಳಿದವರಿಗೆ ಅಶ್ವಮೇಧ ಯಜ್ಞವನ್ನು ಮಾಡಿ ಅವಭೃಥ ಸ್ನಾನಮಾಡಿದವರಿಗೆ ಯಾವ ಫಲವು ಬರುವುದೋ ಒಂದು ವರ್ಷದವರೆಗೆ ಅಗ್ನಿಹೋತ್ರ ಮಾಡಿದವರಿಗೆ ಯಾವ ಫಲವು ಬರುವುದೋ, ಪ್ರಯಾಗ, ಪುಷ್ಕರಕ್ಷೇತ್ರ, ಕುರುಕ್ಷೇತ್ರ, ಸಮುದ್ರ ಇವುಗಳ ಸಮೀಪದಲ್ಲಿ ಉಪವಾಸ ನಿಯಮವನ್ನು ಮಾಡಿದರೆ ಯಾವ ಫಲವು ಬರುವುದೋ ಜ್ಯೇಷ್ಠ ಶುಕ್ಲ ದ್ವಾದಶಿಯ ದಿನ ಯಮುನಾ ಜಲದಲ್ಲಿ ಸ್ನಾನಮಾಡಿ ಮಧುರೆಯಲ್ಲಿ ಕೃಷ್ಣನ ದರ್ಶನವನ್ನು ಮಾಡಿದರೆ ಯಾವ ಫಲವು ಬರುವುದೋ ಆ ಫಲವು ಬರುವುದು.

ತದಾಪ್ನೋತ್ಯಖಿಲಂ ಸಮ್ಯಗಧ್ಯಾಯಂ ಯಶ್ಶ್ರಾವೋತಿ ವೈ ।
ಪುರಾಣಸ್ಯಾಸ್ಯ ವಿಪ್ರರ್ಷೇ ಕೇಶವಾರ್ಪಿತಮಾನಸಃ ॥ ೩೨ ॥

ಯಮುನಾಸಲಿಲೇ ಸ್ನಾತಃ ಪುರುಷೋ ಮುನಿಸತ್ತಮ ।
ಜ್ಯೇಷ್ಠಾಮೂಲೇ ಸಿತೇ ಪಕ್ಷೇ ದ್ವಾದಶ್ಯಾಂ ಸಮುಪೋಷಿತಃ ॥ ೩೩ ॥

ಸಮಭ್ಯರ್ಚ್ಯಾಚ್ಯುತಂ ಸಮ್ಯಕ್ ಮಧುರಾಯಾಂ ಸಮಾಹಿತಃ ।
ಅಶ್ವಮೇಧಸ್ಯ ಯಜ್ಞಸ್ಯ ಸ್ರಾಪ್ನೋತ್ಯವಿಕಲಂ ಫಲಂ ॥ ೩೪ ॥

ಆಲೋಕ್ಯರ್ದ್ಧಿಮುತ್ಥಾನ್ಯೇಷಾಮುನ್ನೀತಾನಾಂ ಸ್ವವಂಶಜೈಃ ।
ಏತಸ್ಮಿಲೋಚುರನ್ಯೇಷಾಂ ಪಿತರಸ್ಸಪಿತಾಮಹಃ ॥ ೩೫ ॥

ಕಚ್ಚಿದಸ್ಮತ್ಕುಲೇ ಜಾತಃ ಕಾಳಿಂದೀಸಲಿಲಾಪ್ಲುತಃ ।
ಅರ್ಚಯಿಷ್ಯತಿ ಗೋವಿಂದಂ ಮಧುರಾಯಾಮುಪೋಷಿತಃ ॥ ೩೬ ॥

ಜ್ಯೇಷ್ಠಾಮೂಲೇ ಸಿತೇ ಪಕ್ಷೇ ಕೇನೈವಂ ವಯಮಪ್ಯುತ ।
ಪರಾಮೃದ್ಧಿಮವಾಪ್ಸ್ಯಾಮಸ್ತಾರಿತಾಃ ಸ್ವಕುಲೋದ್ಭವೈಃ ॥ ೩೭ ॥

---

೩೨ ೩೪ ಮೈತ್ರೇಯನೇ ! ಮನುಷ್ಯನು ವಿಷ್ಣುವಿನಲ್ಲಿಯೇ ಮನಸ್ಸನ್ನಿಟ್ಟು ಈ ಪುರಾಣದ ಒಂದು ಅಧ್ಯಾಯವನ್ನು ಕೇಳಿದರೆ ಜ್ಯೇಷ್ಠ ಅಥವಾ ಮೂಲಾ ನಕ್ಷತ್ರದಿಂದ ಕೂಡಿದ ಪೌರ್ಣಮೆಯ ದಿನ ಯಮುನಾನದಿಯಲ್ಲಿ ಸ್ನಾನಮಾಡಿ ದ್ವಾದಶಿಯ ದಿನ ಉಪವಾಸವನ್ನು ಮಾಡಿ ಮಧುರೆಯಲ್ಲಿ ಕೃಷ್ಣನನ್ನು ಪೂಜಿಸಿದರೆ ಬರುವ ಅಶ್ವಮೇಧ ಯಜ್ಞಕ್ಕೆ ಸಮಾನವಾದ ಫಲವನ್ನು ಪಡೆವನು.

೩೫–೪೦. ಪಿತೃಲೋಕದಲ್ಲಿ ಕೆಲವರು ಮತ್ತೆ ಕೆಲವರಿಗೆ ಉಂಟಾದ ಶ್ರೇಯೋಭಿವೃದ್ಧಿಯನ್ನು ಕಂಡು ' ನಮ್ಮ ವಂಶದಲ್ಲಿಯೂ ಯಾವನಾದರೂ ಜ್ಯೇಷ್ಠ ಅಥವಾ ಮೂಲ ನಕ್ಷತ್ರದ ಪೂರ್ಣಿಮೆಯ ದಿನ ಯಮುನಾನದಿಯಲ್ಲಿ ಸ್ನಾನವನ್ನು ಮಾಡಿ ಉಪವಾಸದಿಂದ ಮಧುರೆಯಲ್ಲಿ ಕೃಷ್ಣನ ಪೂಜೆಯನ್ನು ಮಾಡಿ ಪಿತೃಗಳಿಗೆ ಪಿಂಡ ಪ್ರದಾನನನ್ನು ಮಾಡಿದರೆ ನಾವೂ ವಿಶೇಷವಾದ ಶ್ರೇಯಸ್ಸನ್ನು ಪಡೆಯುವೆವು

ಜ್ಯೇಷ್ಠಾಮೂಲೇ ಸಿತೇ ಪಕ್ಷೇ ಸಮಭ್ಯರ್ಚ್ಯ ಜನಾರ್ದನಂ ।
ಧನ್ಯಾನಾಂ ಕುಲಜಃ ಪಿಂಡಾನ್ ಯಮುನಾಯಾಂ ಪ್ರದಾಸ್ಯತಿ ॥ ೩೮ ॥

ತಚ್ಛ್ರಾದ್ಧಾಲೇ ಸಮಭ್ಯರ್ಚ್ಯ ತತ್ರ ಕೃಷ್ಣಂ ಸಮಾಹಿತಃ ।
ದತ್ತ್ವಾ ಪಿಂಡಂ ಪಿತೃಭ್ಯಶ್ಚ ಯಮುನಾಸಲಿಲಾಪ್ಲುತಃ ॥ ೩೯ ॥

ಯದಾಪ್ನೋತಿ ನರಃ ಪುಣ್ಯಂ ತಾರಯನ್ ಸ್ವಪಿತಾಮಹಾನ್ ।
ಶ್ರುತ್ವಾ ಧ್ಯಾಯಂತದಾಪ್ನೋತಿ ಪುರಾಣಸ್ಯಾಸ್ಯ ಶಕ್ತಿತಃ ॥ ೪೦ ॥

ಏತತ್ಸಂಸಾರಭೀರೂಣಾಂ ಪರಿತ್ರಾಣಮನುತ್ತಮಂ ।
ಶ್ರಾವ್ಯಾಣಾಂ ಪರಮಂ ಶ್ರಾವ್ಯಂ ಪವಿತ್ರಾಣಾಮನುತ್ತಮಂ ॥ ೪೧ ॥

ದುಃಸ್ವಪ್ನನಾಶನಂ ನೃಣಾಂ ಸರ್ವದುಷ್ಟನಿಬರ್ಹಣಂ ।
ಮಂಗಳಂ ಮಂಗಳಾನಾಂ ಚ ಪುತ್ರಸಂಪತ್ಪ್ರದಾಯಕಂ ॥ ೪೨ ॥

ಇದಮಾರ್ಷಂ ಪುರಾ ಪ್ರಾಹ ಋಭವೇ ಕಮಲೋದ್ಭವಃ ।
ಋಭುಃ ಪ್ರಿಯವ್ರತಾಯಾಹ ಸ ಚ ಭಾಗುರಯೇಬ್ರವೀತ್ ॥ ೪೩ ॥

ಎಂದು ಹೇಳುತ್ತಿರುವರು. ಹೀಗೆ ಮಾಡಿ ಯಾವ ಮನುಷ್ಯನು ತನ್ನ ಪಿತೃಗಳನ್ನು ಉದ್ಧಾರ ಮಾಡಿದುದರಿಂದ ಯಾವ ಪುಣ್ಯವನ್ನು ಪಡೆವನೋ ಆ ಪುಣ್ಯವನ್ನು ಈ ಪುರಾಣದ ಒಂದು ಅಧ್ಯಾಯವನ್ನು ಕೇಳುವದರಿಂದ ಪಡೆಯುವನು.

೪೧-೪೩. ಈ ಪುರಾಣವು ಸಂಸಾರ ಭಯಗ್ರಸ್ತರಾದವರನ್ನು ಭಯವಿಲ್ಲದಂತೆ ರಕ್ಷಿಸುವುದು ಅತ್ಯಂತ ಪವಿತ್ರವಾದುದು. ಕೇಳುವುದಕ್ಕೆ ಇಂಪಾದುದು. ಮನುಷ್ಯರ ದೋಷಗಳನ್ನು ದುಸ್ಸ್ವಪ್ನಗಳನ್ನೂ ನಾಶಮಾಡುವುದು. ಅತ್ಯಂತ ಮಂಗಳಕರವಾದುದು. ಪುತ್ರಸಂಪತ್ತುಗಳನ್ನು ಕೊಡುವುದು.

೪೩-೫೧. ಈ ಪುರಾಣವನ್ನು ನಾರಾಯಣ ಋಷಿಯು ಮೊದಲು ಹೇಳಿದುದರಿಂದ ಆರ್ಷ ಪುರಾಣವೆನಿಸಿರುವುದು. ಇದನ್ನು ಬ್ರಹ್ಮನು ಋಭುವಿಗೂ, ಋಭುವು ಪ್ರಿಯವ್ರತನಿಗೂ, ಅವನು ಭಾಗುರಿಗೂ, ಭಾಗುರಿಯು ಸ್ತಂಬಮಿತ್ರನಿಗೂ,

ಭಾಗುರಿಸ್ತಂಬಮಿತ್ರಾಯ ದಧೀಚಾಯ ಸ ಚೋಕ್ತವಾನ್ ।
ಸಾರಸ್ವತಾಯ ತೇನೋಕ್ತಂ ಭೃಗುಸ್ಸಾರಸ್ವತೇನ ಚ ॥ ೪೪ ॥

ಭೃಗುಣಾ ಪುರುಕುತ್ಸಾಯ ನರ್ಮದಾಯೈ ಸ ಚೋಕ್ತವಾನ್ ।
ನರ್ಮದಾ ಧೃತರಾಷ್ಟ್ರಾಯ ನಾಗಾಯಾಪೂರಣಾಯ ಚ ॥ ೪೫ ॥

ತಾಭ್ಯಾಂ ಚ ನಾಗರಾಜಾಯ ಪ್ರೋಕ್ತಂ ವಾಸುಕಯೇ ದ್ವಿಜ ।
ವಾಸುಕಿಃ ಪ್ರಾಹ ವತ್ಸಾಯ ವತ್ಸಶ್ಚಾಶ್ವತರಾಯ ವೈ ॥ ೪೬ ॥

ಕಂಬಲಾಯ ಚ ತೇನೋಕ್ತಮೈಲಾಪುತ್ರಾಯ ತೇನ ವೈ ॥ ೪೭ ॥

ಪಾತಾಳಂ ಸಮನುಪ್ರಾಪ್ತಃ ತತೋ ವೇದಶಿರಾ ಮುನಿಃ ।
ಪ್ರಾಪ್ತವಾನೇತದಖಿಲಂ ಸ ಚ ಪ್ರಮತಯೇ ದದೌ ॥ ೪೮ ॥

ದತ್ತಂ ಪ್ರಮತಿನಾ ಚೈತಜ್ಜಾತುಕರ್ಣಾಯ ಧೀಮತೇ ।
ಜಾತುಕರ್ಣೇನ ಚೈವೋಕ್ತಮನ್ಯೇಷಾಂ ಪುಣ್ಯಕರ್ಮಣಾಂ ॥ ೪೯ ॥

ಪುಲಸ್ತ್ಯವರದಾನೇನ ಮಮಾಪ್ಯೇತತ್ ಸ್ಮೃತಿಂ ಗತಂ ।
ಮಯಾಪಿ ತುಭ್ಯಂ ಮೈತ್ರೇಯ ಯಥಾವತ್ಕಥಿತಂ ತ್ವಿದಂ ॥ ೫೦ ॥

ಅವನು ದಧೀಚನಿಗೂ, ದಧೀಚನು ಸಾರಸ್ವತನಿಗೂ, ಸಾರಸ್ವತನು ಭೃಗುವಿಗೂ, ಭೃಗುವು ಪುರುಕುತ್ಸನಿಗೂ, ಪುರುಕುತ್ಸನು ನರ್ಮದೆಗೂ, ನರ್ಮದೆಯು ಧೃತರಾಷ್ಟ್ರನಿಗೂ ಅಪೂರಣನೆಂಬ ನಾಗನಿಗೂ ಹೇಳಿದರು. ಇವರಿಬ್ಬರೂ ನಾಗರಾಜನಾದ ವಾಸುಕಿಗೆ ಹೇಳಿದರು. ವಾಸುಕಿಯು ವತ್ಸನಿಗೂ ವತ್ಸನು ಅಶ್ವತರಕಂಬಳನೆಂಬವರಿಗೂ ಕಂಬಳನು ಏಲಾಪುತ್ರನಿಗೂ ಹೇಳಿದರು. ವೇದಶಿರನೆಂಬ ಮುನಿಯು ಪಾತಾಳಲೋಕಕ್ಕೆ ಹೋಗಿ ಈ ಪುರಾಣವನ್ನು ಕೇಳಿ ಪ್ರಮತಿಯೆಂಬವನಿಗೆ ಹೇಳಿದನು. ಪ್ರಮತಿಯು ಜಾತುಕರ್ಣನಿಗೂ, ಜಾತುಕರ್ಣನು ಇತರ ಪುಣ್ಯಶಾಲಿಗಳಾದ ಜನರಿಗೂ ಹೇಳಿದರು. ಪುಲಸ್ತ್ಯನು ಕೊಟ್ಟ ವರದಿಂದ ನನಗೂ ಇದು

ತ್ವಮಪ್ಯೇತಚ್ಛಿನೀಕಾಯ ಕಲೇರಂತೇ ವದಿಷ್ಯಸಿ ॥ ೫೦ ॥

ಇತ್ಯೇತತ್ಪರಮಂ ಗುಹ್ಯಂ ಕಲಿಕಲ್ಮಷನಾಶನಂ ।

ಯಶ್ಶೃಣೋತಿ ನರೋ ಭಕ್ತ್ಯಾ ಸರ್ವಪಾಪೈಃ ಪ್ರಮುಚ್ಯತೇ ॥ ೫೨ ॥

ಸಮಸ್ತತೀರ್ಥಸ್ನಾನಾನಿ ಸಮಸ್ತಾಮರಸಂಸ್ತುತಿಃ ।

ಕೃತಾ ತೇನ ಭವೇದೇತದ್ಯಃ ಶೃಣೋತಿ ದಿನೇ ದಿನೇ ॥ ೫೩ ॥

ಕಪಿಲಾದಾನಜನಿತಂ ಪುಣ್ಯಮಷ್ಟಂತದುರ್ಜಭಂ ।

ಶ್ರುತ್ವೈತಸ್ಯದಶಾಧ್ಯಾಯಾನವಾಪ್ನೋತಿ ನ ಸಂಶಯಃ ॥ ೫೪ ॥

ಜ್ಞಾಪಕಕ್ಕೆ ಬಂದಿತು. ವೈತ್ರೇಯನೇ! ನಾನೂ ಈ ಪುರಾಣವನ್ನು ನಿನಗೆ ವಿಸ್ತಾರವಾಗಿ ಹೇಳಿದೆನು. ನೀನೂ ಇದನ್ನು ಕಲಿಯುಗದ ಕೊನೆಯಲ್ಲಿ ಶಿನೀಕನೆಂಬವನಿಗೆ ಹೇಳುವೆ.

೫೨–೫೪. ಈ ಪುರಾಣವು ಅತ್ಯಂತ ಗೋಪ್ಯವಾದುದು. ಕಲಿದೋಷವನ್ನು ನಾಶಮಾಡತಕ್ಕುದು. ಭಕ್ತಿಯಿಂದ ಇದನ್ನು ಕೇಳಿದ ಮನುಷ್ಯನ ಸಮಸ್ತ ಪಾಪಗಳೂ ನಾಶವಾಗುವುವು. ಪ್ರತಿ ದಿನವೂ ಈ ಪುರಾಣವನ್ನು ಕೇಳಿದರೆ ಸಮಸ್ತ ತೀರ್ಥಗಳಲ್ಲಿ ಸ್ನಾನಮಾಡಿ ಸಮಸ್ತ ದೇವತೆಗಳನ್ನು ಸ್ತೋತ್ರಮಾಡಿದಂತೆ ಆಗುವುದು. ಕಪಿಲವರ್ಣದ ಗೋವನ್ನು ದಾನಮಾಡಿದರೆ ಮಹಾಪುಣ್ಯವು ಪ್ರಾಪ್ತವಾಗುವುದು. ಈ ಪುರಾಣದ ಹತ್ತು ಅಧ್ಯಾಯಗಳನ್ನು ಕೇಳಿದವರಿಗೆ ಆ ಪುಣ್ಯ ಬರುವುದು. ಇದರಲ್ಲಿ ಸಂದೇಹವಿಲ್ಲ.

ಯಸ್ತ್ವೇತತ್ಸಕಲಂ ಶೃಣೋತಿ ಪುರುಷಃ ಕೃತ್ವಾ ಮನಸ್ಯಚ್ಯುತಂ
ಸರ್ವಂ ಸರ್ವಮಯಂ ಸಮಸ್ತಜಗತಾಮಾಧಾರಮಾತ್ಮಾಶ್ರಯಂ ।
ಜ್ಞಾನಜ್ಞೇಯಮನಾದಿಮಂತರಹಿತಂ ಸರ್ವಾಮರಾಣಾಂ ಹಿತಂ
ಸ ಪ್ರಾಪ್ನೋತಿ ನ ಸಂಶಯೋಸ್ತ್ಯವಿಕಲಂ ಯದ್ವಾಜಿಮೇಧೇ ಫಲಂ ॥೫೫॥

ಯತ್ರಾದೌ ಭಗವಾನ್ ಚರಾಚರಗುರುರ್ಮಧ್ಯೇ ತಥಾಂ ತೇ ಚ ಸ
ಬ್ರಹ್ಮಜ್ಞಾನಮಯೋಚ್ಯುತೋಖಿಲಜಗನ್ಮಧ್ಯಾಂತಸರ್ಗ ಪ್ರಭುಃ ।
ತತ್ಸರ್ವಂ ಪುರುಷಃ ಪವಿತ್ರಮಮಲಂ ಶೃಣ್ವನ್ ಪಠನ್ ವಾಚಯನ್
ಪ್ರಾಪ್ನೋತ್ಯಸ್ತಿ ನ ತತ್ಫಲಂ ತ್ರಿಭುವನೇಪ್ಯೇಕಾಂತಸಿದ್ಧಿರ್ಹರಿಃ ॥ ೫೬ ॥

---

೫೫. ಯಾವ ಮನುಷ್ಯನು ಸರ್ವಸ್ವರೂಪನೂ, ಸರ್ವವ್ಯಾಪಿಯೂ, ಸಮಸ್ತ ಜಗತ್ತಿಗೂ ಆಶ್ರಯನೂ ಜ್ಞಾನದಿಂದ ತಿಳಿಯತಕ್ಕವನೂ, ಆದ್ಯಂತಗಳಿಲ್ಲದವನೂ ಸಮಸ್ತ ದೇವತೆಗಳಿಗೂ ಹಿತವನ್ನುಂಟುಮಾಡುವವನೂ, ಆದ ವಿಷ್ಣುವನ್ನು ಮನಸ್ಸಿನಲ್ಲಿ ಧ್ಯಾನಿಸುತ್ತ ಈ ವಿಷ್ಣುಪುರಾಣವನ್ನು ಸಂಪೂರ್ಣವಾಗಿ ಕೇಳುವನೋ ಅವನು ಅಶ್ವಮೇಧ ಯಜ್ಞಕ್ಕೆ ಬರುವ ಸಂಪೂರ್ಣ ಫಲವನ್ನು ಪಡೆವುದರಲ್ಲಿ ಸಂದೇಹವಿಲ್ಲ.

೫೬. ಜ್ಞಾನಸ್ವರೂಪನೂ ಸೃಷ್ಟಿ ಸ್ಥಿತಿ, ಪ್ರಳಯಗಳಿಗೆ ಸ್ವಾಮಿಯೂ ಆದ ಪರಬ್ರಹ್ಮಸ್ವರೂಪನಾದ ವಿಷ್ಣುವನ್ನು ಈ ಪುರಾಣದ ಆದಿ ಮಧ್ಯಾಂತಗಳಲ್ಲಿ ವರ್ಣಿಸಿರುವುದರಿಂದ ಮನುಷ್ಯನು ಇದನ್ನು ಕೇಳಿದರೂ, ಪಾರಾಯಣ ಮಾಡಿದರೂ ಇತರರಿಂದ ಹೇಳಿಸಿದರೂ ಬರುವ ಫಲವು ಮೂರು ಲೋಕದಲ್ಲಿಯೂ ಇರುವುದಿಲ್ಲ. ಇದಕ್ಕೆ ಪರಮಾತ್ಮನಲ್ಲಿ ಐಕ್ಯವಾಗಿ ಮೋಕ್ಷನೆಂಬ ಸಿದ್ಧಿಯನ್ನು ಪಡೆವುದೇ ಫಲವಾಗಿರುವುದು.

ಯಸ್ಮಿನ್ನಸ್ತಮುತೇರ್ಣ ಯೋತಿ ನರಕಂ ಸ್ವರ್ಗೋಽಪಿ ಯಚ್ಚಿಂತನೇ
ವಿಘ್ನೋ ಯತ್ರ ನಿವೇಶಿತಾತ್ಮಮನಸೋ ಬ್ರಾಹ್ಮೋಽಪಿ ಲೋಕೋಲ್ಪಕಃ
ಮುಕ್ತಿಂ ಚೇತಸಿ ಯಃ ಸ್ಥಿತೋಽಮಲಧಿಯಾಂ ಪುಂಸಾಂ ದದಾತ್ಯವ್ಯಯಃ
ಕಿಂ ಚಿತ್ರಂ ಯದಘಂ ಪ್ರಯಾತಿ ವಿಲಯಂ ತಸ್ಯಾಚ್ಯುತೇ ಕೀರ್ತಿತೇ ।೫೭॥

ಯಜ್ಞೈರ್ಯಜ್ಞವಿದೋ ಯಜಂತಿ ಸತತಂ ಯಜ್ಞೇಶ್ವರಂ ಕರ್ಮಿಣೋ
ಯಂ ವೈ ಬ್ರಹ್ಮಮಯಂ ಪರಾಪರಮಯಂ ಧ್ಯಾಯಂತಿ ಚ ಜ್ಞಾನಿನಃ ।
ಯಂ ಸಂಚಿತ್ಯ ನ ಜಾಯತೇ ನ ಮ್ರಿಯತೇ ನೋ ವರ್ಧತೇ ಹೀಯತೇ
ನೈವಾಸನ್ನ ಚ ಸದ್ಭವಿಷ್ಯತಿ ತತಃ ಕಿಂ ವಾ ಹರೇಃಕ್ಯಾಯತಾಂ ॥೫೮॥

ಕವ್ಯಂ ಯಃ ಪಿತೃರೂಪಧೃದ್ವಿಧಿಹುತಂ ಹವ್ಯಂ ಚ ಭುಂಕ್ತೇ ವಿಭುಃ
ದೇವತ್ವೇ ಭಗವಾನನಾದಿನಿಧನಸ್ಸ್ವಾಹಾಸ್ವಧಾ ಸಂಜ್ಞಿತೇ ।

---

೫೭. ವಿಷ್ಣುವಿನಲ್ಲಿಯೇ ಮನಸ್ಸನ್ನಿಟ್ಟವನು ನರಕಕ್ಕೆ ಹೋಗುವುದಿಲ್ಲ. ಅವನ ಧ್ಯಾನಮಾಡಕ್ಕವನಿಗೆ ಸ್ವರ್ಗಸುಖವು ವಿಘ್ನಕಾರಿಯಾಗಿರುವುದು. ಬ್ರಹ್ಮ ಲೋಕ ಪ್ರಾಪ್ತಿಯು ಅತ್ಯಲ್ಪವಾದುದು. ನಿರ್ಮಲವಾದ ಮನಸ್ಸುಳ್ಳವರ ಮನದಲ್ಲಿ ನೆಲಸಿದ ಹರಿಯು ಮುಕ್ತಿಯನ್ನೇ ಕೊಡುವನು. ಅವನ ನಾಮ ಸಂಕೀರ್ತನೆಯಿಂದ ಪಾಪಗಳು ನಾಶವಾಗುವುವೆಂಬ ವಿಷಯದಲ್ಲಿ ಆಶ್ಚರ್ಯವೇನಿರುವುದು ?

೫೮. ಯಜ್ಞೇಶ್ವರನಾದ ವಿಷ್ಣುವನ್ನು ಯಜ್ಞವಿಧಿಯನ್ನು ತಿಳಿದ ಕರ್ಮ ಮಾರ್ಗಾಸಕ್ತರು ಅನೇಕ ಬಗೆಯ ಯಜ್ಞಗಳಿಂದ ಪೂಜಿಸುವರು. ಜ್ಞಾನಾಭ್ಯಾಸ ಮಾಡುವ ಯೋಗಿಗಳು ಪರಾಪರ ಬ್ರಹ್ಮ ಸ್ವರೂಪದಿಂದ ಧ್ಯಾನಮಾಡುವರು. ಷಡ್ಭಾವವಿಕಾರವನ್ನತಿಕ್ರಮಿಸಿದ ಹರಿಯ ವಿಷಯವನ್ನು ಕೇಳತಕ್ಕುದೇನಿರುವುದು ?

೫೯. ವಿಷ್ಣುವು ಪಿತೃರೂಪನಾಗಿ ವಿಧಿಯನ್ನನುಸರಿಸಿ ಬ್ರಾಹ್ಮಣರಿಗೆ ಭೋಜನ ಮಾಡಿಸಿದ ಕವ್ಯವನ್ನೂ ದೇವತೆಗಳ ರೂಪನಾಗಿ ಅಗ್ನಿಯಲ್ಲಿ ಹೋಮ ಮಾಡಿದ ಹವಿಸ್ಸನ್ನೂ ಸರ್ವ ವ್ಯಾಪಿಯೂ ಆದ್ಯಂತವೂ ಇಲ್ಲದ ಆ ದೇವನೇ ಸ್ವಧಾ ಸ್ವಾಹಾ

ಯಸ್ಮಿನ್ಪ್ರಹ್ಮಣಿ ಸರ್ವಶಕ್ತಿನಿಲಯೇ ಮಾನಾನಿನೋ ಮಾನಿನಾಂ
ನಿಷ್ಠಾಯೈ ಪ್ರಭವಂತಿ ಹಂತಿ ಕಲುಷಂ ಶ್ರೋತೃಣ್ ಸಯಾತೋ ಹರಿಃ ॥೫೯॥

ನಾಂತೋಽಸ್ತಿ ಯಸ್ಯ ನ ಚ ಯಸ್ಯ ಸಮುದ್ಭವೋಽಸ್ತಿ
ವೃದ್ಧಿರ್ನ ಯಸ್ಯ ಪರಿಣಾಮವಿವರ್ಜಿತಸ್ಯ ।
ನಾಪಕ್ಷಯಂ ಚ ಸಮುಪೈತ್ಯ ವಿಕಾರಿ ವಸ್ತು
ಯಸ್ತಂ ನತೋಽಸ್ಮಿ ಪುರುಷೋತ್ತಮಮೀಶಮೀಡ್ಯಂ ॥ ೬೦ ॥

ತಸ್ಯೈವ ಯೋನುಗುಣಭುಗ್ಭವಹುದ್ಧೈಕ ಏವ
ಶುದ್ಧೋಽಶುದ್ಧ ಇವ ಭಾತಿ ಹಿ ಮೂರ್ತಿಭೇದೈಃ ।
ಜ್ಞಾನಾನ್ವಿತಸ್ಸಕಲಸತ್ವವಿಭೂತಿಕರ್ತಾ
ತಸ್ಮೈ ನಮೋಸ್ತು ಪುರುಷಾಯ ಸದಾವ್ಯಯಾಯ ॥ ೬೧ ॥

ರೂಪದಿಂದ ಭೋಜನ ಮಾಡುವನು. ಸಮಸ್ತ ಶಕ್ತಿಗೂ ಆಶ್ರಯನಾದ ಪರಬ್ರಹ್ಮ ನನ್ನು ತಿಳಿಸಲು ಯಾವ ಪ್ರಮಾಣಗಳೂ ಶಕ್ತವಾಗಲಾರವು. ಅಂತಹ ಹರಿಯ ಚರಿತ್ರೆಯನ್ನು ಕೇಳಿದರೆ ಸಮಸ್ತ ದೋಷಗಳೂ ನಾಶವಾಗುವುವು.

೬೦. ಉತ್ಪತ್ತಿ ನಾಶಗಳಿಲ್ಲದ ಪರಿಣಾಮವಿಲ್ಲದುದರಿಂದ ವೃದ್ಧಿ, ಕ್ಷೀಣಗಳೂ ಇಲ್ಲದ ಅವಿಕಾರ ಸ್ವರೂಪನೂ ಪುರುಷಶ್ರೇಷ್ಠನೂ ಆದ ಸ್ತೋತ್ರಕ್ಕೆ ಅರ್ಹನಾದ ಪರಮೇಶ್ವರನಿಗೆ ನಮಸ್ಕಾರವನ್ನು ಮಾಡುವೆನು.

೬೧. ಪರಮೇಶ್ವರನಾದಮೇಲೆ ಒಬ್ಬನೇ ಆಗಿದ್ದರೂ ಅನೇಕ ರೂಪನಾಗಿ ಪ್ರಕೃತಿಯ ಗುಣಗಳನ್ನನುಭವಿಸುವ ಶುದ್ಧ ಸ್ವರೂಪನಾದರೂ ದಕ್ಷ, ಮನು ಮುಂತಾದ ಮೂರ್ತಿ ಭೇದದಿಂದ ಅಶುದ್ಧನಂತೆ ಕಾಣುತ್ತಿರುವ ಜ್ಞಾನದಿಂದ ಕೂಡಿ ದವನಾಗಿ ಸಕಲ ಪ್ರಾಣಿಗಳಿಗೂ ಮಹಿಮೆಯನ್ನುಂಟುಮಾಡಿರುವ ನಾಶರಹಿತನಾದ ಪುರುಷನಿಗೆ ನಮಸ್ಕಾರ ಮಾಡುವೆನು.

ಜ್ಞಾನಪ್ರವೃತ್ತಿನಿಯಮೈಕ್ಯಮಯಾಯ ಪುಂಸೋ
ಭೋಗಪ್ರದಾನ ಪಟವೇ ತ್ರಿಗುಣಾತ್ಮಕಾಯ ।
ಅವ್ಯಾಕೃತಾಯ ಭವಭಾವನಕಾರಣಾಯ
ವಂದೇ ಸ್ವರೂಪಭವನಾಯ ಸದಾ ಜರಾಯ ॥ ೬೨ ॥

ವ್ಯೋಮಾನಿಲಾಗ್ನಿ ಜಲಭೂರಚನಾಮಯಾಯ
ಶಬ್ದಾದಿಭೋಗ್ಯವಿಷಯೋಪನಯೈಕ್ಷಮಾಯ ।
ಪುಂಸಸ್ಸಮಸ್ತಕರಣೈರುಪಕಾರಕಾಯ
ವ್ಯಕ್ತಾಯ ಸೂಕ್ಷ್ಮವಿಮಲಾಯ ನತೋಽಸ್ಮಿ ನಿತ್ಯಂ ॥ ೬೩ ॥

---

೬೨. ಜ್ಞಾನ, ಕಾರ್ಯ, ಪ್ರವೃತ್ತಿ ಇವುಗಳ ನಿಯಮದಿಂದ ತನ್ನೊಡನೆ ಸೇರಿರುವ ಪುರುಷನು ಸುಖಾದಿಗಳನ್ನನುಭವಿಸುವಂತೆ ಮಾಡುವ ಸತ್ವರಜಸ್ತಮೋ ಗುಣಸ್ವರೂಪವಾದ ಜನ್ಮಾದಿಗಳ ಭಾವನೆಗೆ ಕಾರಣವಾದ ಯಾವಾಗಲೂ ಮುಪ್ಪನ್ನು ಪಡೆಯದ ಪರಮಾತ್ಮನ ಶಕ್ತಿಯಾದ ಅವ್ಯಾಕೃತವೆಂಬ ಪ್ರಕೃತಿಗೆ ನಮಸ್ಕಾರ ಮಾಡುವೆನು.

೬೩. ಆಕಾಶ, ವಾಯು, ಅಗ್ನಿ, ನೀರು, ಭೂಮಿ ಎಂಬ ಸ್ಥೂಲರೂಪದಿಂದ ಶಬ್ದಾದಿ ವಿಷಯಗಳ ಅನುಭವವನ್ನುಂಟುಮಾಡಲು ಶಕ್ತವಾದ ಸಮಸ್ತ ಇಂದ್ರಿಯ ಗಳಿಂದಲೂ ಪುರುಷನಿಗೆ ಉಪಕಾರವನ್ನು ಮಾಡುವ ಪ್ರಪಂಚ ಸ್ವರೂಪನೂ, ಸೂಕ್ಷ್ಮರೂಪದಿಂದ ನಿರ್ಮಲನಾದ ಪರಬ್ರಹ್ಮಸ್ವರೂಪನೂ ಆದ ಪರಮಾತ್ಮನಿಗೆ ಯಾವಾಗಲೂ ನಮಸ್ಕಾರ ಮಾಡುವೆನು.

ಇತಿ ವಿವಿಧಮಜಸ್ಯ ಯಸ್ಯ ರೂಪಂ
ಪ್ರಕೃತಿಪರಾತ್ಮಮಯಂ ಸನಾತನಸ್ಯ ।
ಪ್ರದಿಶತು ಭಗವಾನಶೇಷಪುಂಸಾಂ
ಹರಿರಪಜನ್ಮಜರಾದಿಕಾಂಸಸಿದ್ಧಿಂ ॥ ೬೪ ॥

ಇತಿ ಶ್ರೀ ವಿಷ್ಣು ಪುರಾಣೇ ಷಷ್ಠಾಂಶೇ ಅಷ್ಟಮೋಽಧ್ಯಾಯಃ

॥ ವಿಷ್ಣು ಪುರಾಣಂ ಸಮಾಪ್ತಂ ॥

---

೬೪. ಈ ರೀತಿಯಲ್ಲಿ ಅನಾದಿಯಾದ ಪರಮಾತ್ಮನ ವ್ಯಕ್ತಾವ್ಯಕ್ತ ಪ್ರಕೃತಿ, ಈಶ್ವರ, ಪರಮಾತ್ಮ ಎಂಬ ಬಗೆಬಗೆಯ ರೂಪಗಳುಳ್ಳ ಮಹಾಮಹಿಮನಾದ ವಿಷ್ಣುವು ಸಮಸ್ತ ಜನರಿಗೂ ಜನ್ಮ ಮುಪ್ಪು ಮುಂತಾದುವುಗಳಿಲ್ಲದ ಸಿದ್ಧಿಯನ್ನುಂಟು ಮಾಡಿಲಿ.

ಎಂಬಲ್ಲಿಗೆ ಶ್ರೀ ವಿಷ್ಣು ಪುರಾಣದ ಆರನೆಯ ಅಂಶದಲ್ಲಿ
ಎಂಟನೆಯ ಅಧ್ಯಾಯವು ಮುಗಿದುದು.

ಆರನೆಯ ಅಂಶವು ಸಂಪೂರ್ಣವಾಯಿತು.

ಇಲ್ಲಿಗೆ ವಿಷ್ಣು ಪುರಾಣವು ಸಂಪೂರ್ಣವಾಯಿತು.
